ಮಾಲ ಸಮುದಾಯದ ಸಾಮಾಜಿಕ ಅಧ್ಯಯನ

SOCIAL STUDY OF MALA COMMUNITY

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್ ಡಿ (ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಶ್ರೀಮತಿ ಪ್ರೇಮವ್ವ ಮುದುಟಗಿ ಯಲ್ಲಪ್ಪ

ನೋ: ೧೪೦೧೧೨೦೨೦೦೫

ಮಾರ್ಗದರ್ಶಕರು

ಪ್ರೊ ಕೆ ಎಂ ಮೇತ್ರಿ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಮಾರ್ಚ್ ೨೦೨೦



ಮಾಲ ಸಮುದಾಯದ ಸಾಮಾಜಿಕ ಅಧ್ಯಯನ

SOCIAL STUDY OF MALA COMMUNITY

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್ ಡಿ (ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕರು
ಶ್ರೀಮತಿ ಪ್ರೇಮವ್ವ ಮುದುಟಿಗಿ ಯಲ್ಲಪ್ಪ
ನೋ: ೧೪೦೧೧೨೦೨೦೦೫

ಮಾರ್ಗದರ್ಶಕರು
ಪ್ರೊ ಕೆ ಎಂ ಮೇತ್ರಿ

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
ಮಾರ್ಚ್ ೨೦೨೦

ಸಂಶೋಧಕರ ಪ್ರಮಾಣ ಪತ್ರ

ಶ್ರೀಮತಿ ಪ್ರೇಮವ್ವ ಮುದುಟಗಿ ಯಲ್ಲಪ್ಪ ಆದ ನಾನು ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದ **ಪ್ರೊ ಕೆ ಎಂ ಮೇತ್ರಿ** ಅವರ ಮಾರ್ಗದರ್ಶನದಲ್ಲಿ **"ಮಾಲ ಸಮುದಾಯದ ಸಾಮಾಜಿಕ ಅಧ್ಯಯನ"** ಎಂಬ ಮಹಾಪ್ರಬಂಧವನ್ನು ಪಿಎಚ್ ಡಿ (ಸಮಾಜಶಾಸ್ತ್ರ) ಪದವಿಗಾಗಿ ಸಿದ್ಧಪಡಿಸಿದ್ದೇನೆ. ಈ ಮಹಾಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲಿ ಅಥವಾ ಉದ್ದೇಶಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

ದಿನಾಂಕ: 21-3-2020

ಸ್ಥಳ : ವಿದ್ಯಾರಣ್ಯ

Rym

ಶ್ರೀಮತಿ ಪ್ರೇಮವ್ವ ಮುದುಟಗಿ ಯಲ್ಲಪ್ಪ

ಸಂಶೋಧನಾರ್ಥಿ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀಮತಿ ಪ್ರೇಮವ್ವ ಮುದುಟಗಿ ಯಲ್ಲಪ್ಪ ಅವರು "ಮಾಲ ಸಮುದಾಯದ ಸಾಮಾಜಿಕ ಅಧ್ಯಯನ" ಎಂಬ ವಿಷಯ ಕುರಿತಾದ ಪಿಎಚ್ ಡಿ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್ ಡಿ (ಸಮಾಜಶಾಸ್ತ್ರ) ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಮಹಾಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲಿ ಅಥವಾ ಉದ್ದೇಶಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ: 21.3.2010

ಸ್ಥಳ : ವಿದ್ಯಾರಣ್ಯ

ಪ್ರೊ ಕೆ ಎಂ ಮೇತ್ರಿ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

Certificate of Plagiarism Check Report

Mala Samudayada Samajika Adhyayana

(Social study of Mala community)

By

Premavva Mudutagi Yallappa

Reg.No. 140112020059 dated: 13.10.2014

Research Guide

Prof.K M Metry

Department of Tribal Studies

Kannada University, Hampi

Urkund Analysis Result

Analysed Document: KUH-PhD-Premavva-DTS.docx (D65071843)

Submitted: 3/9/2020 7:00:00 AM

Submitted By: shankargoudas.mailbox@gmail.com

Significance: 0 %

21.3.20

ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ-583 276

Seal and authorised sign

Urkund Analysis Result

Analysed Document: **KUH-PhD-Premavva-DTS.docx (D65071843)**

Submitted: 3/9/2020 7:00:00 AM

Submitted By: shankargoudas.mailbox@gmail.com

Significance: **0 %**

Sources included in the report:

https://archive.org/stream/Kannada_Kaipidi001/
Kannada_Kaipidi001_djvu.txt

https://kn.wikipedia.org/wiki/
%E0%B2%90%E0%B2%B0%E0%B3%8D%E0%B2%B2%E0%B3%86%
E0%B2%82%E0%B2%A1%E0%B3%8D%E2%80%8C_%E0%B2%97%E0%B2%A3%E0%B2%B0%E0%
B2%BE%E0%B2%9C%E0%B3%8D%E0%B2%AF

https://en-gb.facebook.com/jyautisham/posts/?ref=page_internal

https://www.facebook.com/permalink.php?
id=2410552682523047&story_fbid=2445066662404982

https://www.instazu.com/tag/BloodConnectsUsAll

https://glosbe.com/sv/kn/katt

Instances where selected sources appear:

30

ಪರಿವಿಡಿ

ಸಂಶೋಧಕರ ಪ್ರಮಾಣ ಪತ್ರ

ಮಾರ್ಗದರ್ಶಕರ ದೃಢೀಕರಣ ಪತ್ರ

Certificate of Plagiarism Check Report

ಅಧ್ಯಾಯ ಒಂದು

ಪ್ರವೇಶ ೧

ಅಧ್ಯಾಯ ಎರಡು

ಮಾಲ ಸಮುದಾಯದಚಾರಿತ್ರಿಕ ಹಿನ್ನೆಲೆ ೨೯

ಅಧ್ಯಾಯ ಮೂರು

ಮಾಲ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ ೧೦೪

ಅಧ್ಯಾಯ ನಾಲ್ಕು

ಆರ್ಥಿಕಜೀವನ ಮತ್ತು ಅವರ ಸಂಘಗಳು ೧೬೩

ಅಧ್ಯಾಯ ಐದು

ಶೈಕ್ಷಣಿಕ ಸ್ಥಾನಮಾನ ಮತ್ತು ರಾಜಕೀಯ ಸ್ಥಾನಮಾನ ೨೨೧

ಅಧ್ಯಾಯ ಆರು

ಆಹಾರ ಮತ್ತು ಆರೋಗ್ಯ ೨೫೫

ಅಧ್ಯಾಯ ಏಳು

ಸಮಾರೋಪ ೨೯೧

ಪರಾಮರ್ಶನ ಗ್ರಂಥಗಳು ೩೦೩

ಪ್ರಶ್ನಾವಳಿ ೩೧೫

ತಿಳುವಳಿಕೆದಾರರ ವಿವರಗಳು ೩೧೬

ಅನುಬಂಧಗಳು

ಅನುಬಂಧ : ೧ ಕರ್ನಾಟಕದ ಪರಿಶಿಷ್ಟ ಜಾತಿಗಳ ಪಟ್ಟಿ ೩೩೭

ಅನುಬಂಧ : ೨ ಹೊಲೆಯ(ಮಾಲ) ಜಾತಿಯ ಉಪಜಾತಿಗಳ ಪಟ್ಟಿ ೩೪೦

ಅನುಬಂಧ : ೩ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಲೆಮಾರಿ/ ಅರೆ ಅಲೆಮಾರಿ/ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳ ಪಟ್ಟಿ ೩೪೧

ಅನುಬಂಧ : ೪ ನಾಕಾಶೆಗಳು ೩೪೪

ಅನುಬಂಧ : ೫ ಪತ್ರಿಕಾ ವರದಿಗಳು ೩೪೬

ಅನುಬಂಧ : ೬ ಛಾಯಾಚಿತ್ರಗಳು ೩೪೮

ಸಂಶೋಧನಾ ಲೇಖನಗಳು ಮಂಡಿಸಿದ ಪ್ರಮಾಣ ಪತ್ರಗಳು ೩೫೫

ಪ್ರಕಟಗೊಂಡ ಲೇಖನಗಳ ಮುಖಪುಟಗಳು ೩೫೬

ಪರಿಶಿಷ್ಟಗಳು

೧. ಕೋಷ್ಟಕಗಳು

೨. ಲಂಬ ಚಿತ್ರಗಳು

೩. ವೃತ್ತ ಚಿತ್ರಗಳು

೪. ಸಂಕೇತ ಸೂಚಿ

೧. ಕೋಷ್ಟಕಗಳು

ಕ್ರಸ	ಕೋಷ್ಟಕಗಳ ಹೆಸರು	ಪು.ಸಂ
೨.೧	ವಿವಿಧ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾಲ ಸಮುದಾಯದ ಜನಸಂಖ್ಯೆ	೬೬
೨.೨	ಕರ್ನಾಟಕ ರಾಜ್ಯದಲ್ಲಿಯ ಪರಿಶಿಷ್ಟ ಜಾತಿ ಹಾಗೂ ಮಾಲ ಸಮುದಾಯದ ಜನಸಂಖ್ಯಾ ವಿವರ	೬೮
೨.೩	ಮಾಲ ಸಮುದಾಯದ ನಗರ ಹಾಗೂ ಗ್ರಾಮೀಣ ಪ್ರದೇಶದ ಜನಸಂಖ್ಯೆ	೭೦
೨.೪	ಕೊಪ್ಪಳ ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ	೭೭
೨.೫	ಗದಗ ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ	೮೧
೨.೬	ಧಾರವಾಡ ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ	೮೫
೨.೭	ಮೈಸೂರು ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ	೮೭
೨.೮	ರಾಯಚೂರು ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ	೮೯
೨.೯	ಶಿವಮೊಗ್ಗ ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ	೯೧
೨.೧೦	ಹಾವೇರಿ ಜಿಲ್ಲೆಯ ಕುಟುಂಬವಾರು ಜನಸಂಖ್ಯೆ	೯೪
೨.೧೧	ಸಮೀಕ್ಷೆಗೊಳಗಾದ ಅಲೆಮಾರಿ ಮಾಲ ಸಮುದಾಯದ ಒಟ್ಟು ಜನಸಂಖ್ಯೆ ವಿವರ	೯೮
೪.೧	ಮಾಲ ಸಮುದಾಯದ ಕಾಯಕ ಮಾಡಲು ಅನರ್ಹರು, ಕಾಯಕಾರ್ಹರ ವಿವರ	೧೭೧
೪.೨	೨೦೧೧ರ ಜನಗಣತಿ ಪ್ರಕಾರ ಕರ್ನಾಟಕ ರಾಜ್ಯದ ಕಾಯಕ ಮಾಡಲು ಅನರ್ಹರು ಹಾಗೂ ಕಾಯಕಾರ್ಹರ ವಿವರ	೧೭೩
೪.೩	ಮಾಲ ಸಮುದಾಯದ ಕಾಯಕಾರ್ಹರು ಹಾಗೂ ಕಾಯಕದಲ್ಲಿ ನಿರತರಾದವರ ವಿವರ	೧೭೪
೪.೪	೨೦೧೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ವಿವಿಧ ವೃತ್ತಿಯಲ್ಲಿ ತೊಡಗಿದವರ ಜನಸಂಖ್ಯೆ	೧೭೭
೪.೫	ವಿವಿಧ ವೃತ್ತಿಗಳಲ್ಲಿ ತೊಡಗಿರುವ ಮಾಲ ಸಮುದಾಯದ ಜನರ ಜಿಲ್ಲಾವಾರು ವಿವರ	೧೭೯

೪.೬	ಮಾಲ ಸಮುದಾಯದ ವಿವಿಧ ವೃತ್ತಿಗಳಲ್ಲಿ ತೊಡಗಿದ ಜನರ ಶೇಕಡವಾರು ವಿವರ	೨೮೫
೪.೭	ಕೃಷಿ ಭೂಮಿ ಹೊಂದಿದ ಮಾಲ ಸಮುದಾಯದ ಕುಟುಂಬಗಳ ಸಂಖ್ಯೆ	೧೮೭
೪.೭.೧	ದೊಡ್ಡ ಹಿಡುವಳಿದಾರರು ಸಣ್ಣ ಹಿಡುವಳಿದಾರರು ಅತೀ ಸಣ್ಣ ಹಿಡುವಳಿದಾರರು	೧೮೮
೪.೮	ಕೊಪ್ಪಳ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ	೧೯೦
೪.೯	ಗದಗ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ	೧೯೩
೪.೧೦	ಧಾರವಾಡ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ	೧೯೪
೪.೧೧	ಮೈಸೂರು ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ	೧೯೪
೪.೧೨	ರಾಯಚೂರು ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ	೧೯೫
೪.೧೩	ಶಿವಮೊಗ್ಗ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ	೧೯೫
೪.೧೪	ಹಾವೇರಿ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ	೧೯೬
೪.೧೫	ರಾಜ್ಯದ ಮಾಲ(ಪರ್ವತ ಮಲ್ಲಯ್ಯ) ಸಮುದಾಯದ ಕುಟುಂಬವಾರು ಮನೆಗಳ ವಿವರ	೧೯೮
೪.೧೬	ಕೊಪ್ಪಳ ಜಿಲ್ಲೆಯ ಮಾಲ ಸಮುದಾಯದ ಗ್ರಾಮವಾರು ಪಶುಸಂಪತ್ತಿನ ವಿವರ	೨೦೦
೪.೧೭	ಗದಗ ಜಿಲ್ಲೆಯ ಮಾಲ ಸಮುದಾಯದ ಪಶುಸಂಪತ್ತಿನ ವಿವರ	೨೦೨
೪.೧೮	ಧಾರವಾಡ ಜಿಲ್ಲೆಯ ಮಾಲ ಸಮುದಾಯದ ಪಶುಸಂಪತ್ತಿನ ವಿವರ	೨೦೩
೪.೧೯	ಮೈಸೂರು ಜಿಲ್ಲೆಯ ಮಾಲ ಸಮುದಾಯದ ಪಶುಸಂಪತ್ತಿನ ವಿವರ	೨೦೩
೪.೨೦	ರಾಯಚೂರು ಜಿಲ್ಲೆಯ ಮಾಲ ಸಮುದಾಯದ ಪಶುಸಂಪತ್ತಿನ ವಿವರ	೨೦೪
೪.೨೧	ಶಿವಮೊಗ್ಗ ಜಿಲ್ಲೆಯ ಮಾಲ ಸಮುದಾಯದ ಪಶುಸಂಪತ್ತಿನ ವಿವರ	೨೦೪
೪.೨೨	ಹಾವೇರಿ ಜಿಲ್ಲೆಯ ಮಾಲ ಸಮುದಾಯದ ಪಶುಸಂಪತ್ತಿನ ವಿವರ	೨೦೪
೪.೨೩	ಮಾಲ ಸಮುದಾಯದ ಒಟ್ಟು ಪಶುಸಂಪತ್ತಿನ ವಿವರ	೨೦೫
೫.೧	ಕರ್ನಾಟಕದ ಸಾಕ್ಷರತೆ–ಚಾರಿತ್ರಿಕ ನೋಟ: ೧೯೫೧–೨೦೧೧	೨೨೨

೫.೨	೨೦೧೧ರ ಜನಗಣತಿ ಪ್ರಕಾರ ಕರ್ನಾಟಕದ ಪರಿಶಿಷ್ಟ ಜಾತಿ, ಪಂಗಡ ಹಾಗೂ ಇತರರ ಸಾಕ್ಷರರ ಹಾಗೂ ಶೇಕಡವಾರು ಪ್ರಮಾಣ	೨೨೪
೫.೩	ಕರ್ನಾಟಕದ ವಿಭಾಗವಾರು ಸಾಕ್ಷರತಾ ಪ್ರಮಾಣ ೨೦೦೧-೨೦೧೧ (ಶೇಕಡವಾರುಗಳಲ್ಲಿ)	೨೨೬
೫.೪	೨೦೦೧ ಸಾಕ್ಷರತೆಯ ಮಾಹಿತಿ (ಶೇಕಡವಾರುಗಳಲ್ಲಿ)	೨೨೭
೫.೫	ಕರ್ನಾಟಕದ ಮಾಲ ಸಮುದಾಯಕ್ಕೆ ಸೇರಿದವರ ಜನಸಂಖ್ಯೆಯ ವಿವರ	೨೩೧
೫.೬	ಸಮೀಕ್ಷೆಗೆ ಒಳಪಡಿಸಿದ ಮಾಲ ಸಮುದಾಯದ ಒಟ್ಟು ಜನಸಂಖ್ಯೆ	೨೩೨
೫.೭	ಸಮೀಕ್ಷೆಗೊಳಪಡಿಸಿದ ಮಾಲ ಸಮುದಾಯದ ಸಾಕ್ಷರತೆ ಹೊಂದಲು ಅನರ್ಹವಾದವರು ಹಾಗೂ ಅರ್ಹವಾದವರ ವಿವರ	೨೩೪
೫.೮	ಮಾಲ ಸಮುದಾಯದ ಸಾಕ್ಷರರು ಹಾಗೂ ಅನಕ್ಷರಸ್ಥರ ವಿವರ	೨೩೫
೫.೯	ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗೆ ಹೋಗುತ್ತಿರುವ ಮಕ್ಕಳು	೨೩೯
೫.೧೦	೬-೧೮ ವಯೋಮಾನದೊಳಗಿನ ಶಾಲೆಗೆ ಹೋಗುತ್ತಿರುವ ಮಕ್ಕಳ ಪ್ರಮಾಣ	೨೪೧
೫.೧೧	ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ತರಗತಿಗೆ ಹೋಗುತ್ತಿರುವವರ ಸಂಖ್ಯೆ	೨೪೩
೬.೧	ಆಹಾರ ಪಡಿತರ ಚೀಟಿಯನ್ನು ಹೊಂದಿದ ಮಾಲ ಸಮುದಾಯದ ಕುಟುಂಬಗಳು	೨೫೬
೬.೧.೧	ಕೊಪ್ಪಳ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ	೨೫೮
೬.೧.೨	ಗದಗ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ	೨೬೦
೬.೧.೩	ಧಾರವಾಡ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ	೨೬೨
೬.೧.೪	ಮೈಸೂರು ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ	೨೬೨
೬.೧.೫	ರಾಯಚೂರು ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ	೨೬೩
೬.೧.೬	ಶಿವಮೊಗ್ಗ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ	೨೬೩
೬.೧.೭	ಹಾವೇರಿ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ	೨೬೪

೨. ಲಂಬ ಚಿತ್ರಗಳು

ಕ್ರಸ	ಲಂಬ ಚಿತ್ರಗಳ ಹೆಸರು	ಪು.ಸಂ
೨.೧	ಕೊಪ್ಪಳ ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯಾ ಪ್ರಮಾಣ.	೭೭
೨.೨	ಧಾರವಾಡಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯಾ ಪ್ರಮಾಣ.	೮೫
೨.೩	ಶಿವಮೊಗ್ಗ ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯಾ ಪ್ರಮಾಣ.	೯೨
೨.೪	ಹಾವೇರಿ ಜಿಲ್ಲೆಯ ಕುಟುಂಬವಾರು ಜನಸಂಖ್ಯಾ ಪ್ರಮಾಣ.	೯೫
೨.೫	ಸಮೀಕ್ಷೆಗೊಳಗಾದ ಅಲೆಮಾರಿ ಮಾಲ ಸಮುದಾಯದ ಒಟ್ಟು ಜನಸಂಖ್ಯಾ ವಿವರ.	೯೯
೪.೧	೨೦೧೧ರ ಜನಗಣತಿ ಪ್ರಕಾರ ರಾಜ್ಯದ ಕಾಯಕ ಮಾಡಲು ಅನರ್ಹರು ಹಾಗೂ ಕಾಯಕರ್ಹರ ವಿವರ.	೧೭೪
೪.೨	ಮಾಲ ಸಮುದಾಯದ ಕಾಯಕಾರ್ಹರು ಹಾಗೂ ಕಾಯಕದಲ್ಲಿ ನಿರತರಾದವರು (ಶೇಕಡಾವಾರುಗಳಲ್ಲಿ)	೧೭೭
೪.೩	೨೦೧೧ರ ಜಣಗಣತಿ ಪ್ರಕಾರ ಕರ್ನಾಟಕದಲ್ಲಿ ವಿವಿಧ ವೃತ್ತಿಯಲ್ಲಿ ತೊಡಗಿದವರ ಜನಸಂಖ್ಯೆ	೧೭೮
೪.೪	ವಿವಿಧ ವೃತ್ತಿಗಳಲ್ಲಿ ತೊಡಗಿರುವ ಮಾಲ ಸಮುದಾಯದ ಜನರ ಜಿಲ್ಲಾವಾರು ವಿವರ	೧೮೦
೪.೫	ಮಾಲ ಸಮುದಾಯದ ವಿವಿಧ ವೃತ್ತಿಗಳಲ್ಲಿ ತೊಡಗಿದ ಜನರ ಶೇಕಡಾವಾರು ವಿವರ	೧೮೬
೪.೬	ಕೃಷಿ ಭೂಮಿ ಹೊಂದಿದ ಮಾಲ ಸಮುದಾಯದ ಕುಟುಂಬಗಳ ಸಂಖ್ಯೆ	೧೮೭
೪.೭	ದೊಡ್ಡ ಹೀಡುವಳಿದಾರರು, ಸಣ್ಣ ಹೀಡುವಳಿದಾರರು, ಅತೀ ಸಣ್ಣ ಹಿಡುವಳಿದಾರರು.	೧೮೮
೪.೮	ಕೊಪ್ಪಳ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ.	೧೯೧
೪.೯	ಶಿವಮೊಗ್ಗ ಜಿಲ್ಲೆಯಲ್ಲಿ ವಸತಿಹೀನರು ಹಾಗೂ ವಸತಿ ಹೊಂದಿದ ಕುಟುಂಬಗಳ ಪ್ರಮಾಣ.	೧೯೬

೪.೧೦	ಕೊಪ್ಪಳ ಜಿಲ್ಲೆಯ ಮಾಲ ಸಮುದಾಯದ ಗ್ರಾಮವಾರು ಪಶುಸಂಪತ್ತಿನ ವಿವರ.	೨೦೧
೫.೧	ಕರ್ನಾಟಕದ ಸಾಕ್ಷರತೆ–ಚಾರಿತ್ರಿಕ ನೋಟ ೧೯೫೧–೨೦೧೧ರ ಪ್ರಮಾಣ.	೨೨೩
೫.೨	ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗೆ ಹೊಗುತ್ತಿರುವ ಮಕ್ಕಳು.	೨೩೯
೫.೩	೬–೧೮ ವಯೋಮಾನದೊಳಗಿನ ಶಾಲೆಗೆ ಹೊಗುತ್ತಿರುವ ಮಕ್ಕಳ ಪ್ರಮಾಣ.	೨೪೧
೫.೪	ಶಾಲೆಗೆ ಹೊಗುತ್ತಿರುವ ಮಕ್ಕಳಲ್ಲಿ ಪ್ರಾಥಮೀಕ, ಮಾಧ್ಯಮಿಕ, ಪ್ರೌಢತರಗತಿಗೆ ಹೊಗುತ್ತಿರುವವರ ಸಂಖ್ಯೆ.	೨೪೪
೬.೧	ಕೊಪ್ಪಳ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ.	೨೫೯
೬.೨	ಗದಗ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ.	೨೬೧

೩. ವೃತ್ತ ಚಿತ್ರಗಳು

ಕ್ರ.ಸ	ವೃತ್ತ ಚಿತ್ರಗಳ ಹೆಸರು	ಪು.ಸಂ
೨.೧	ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ನೆಲೆನಿಂತ ಮಾಲ ಸಮುದಾಯದವರ ಶೇಕಡಾವಾರು ಜನಸಂಖ್ಯೆ (೨೦೧೧)	೭೨
೨.೨	ಕೊಪ್ಪಳ ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶದ ಮಾಲ ಸಮುದಾಯದ ಜನಸಂಖ್ಯೆ.	೮೦
೨.೩	ಗದಗ ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶದ ಮಾಲ ಸಮುದಾಯದ ಶೇಕಡಾವಾರು ಜನಸಂಖ್ಯೆ.	೮೨
೨.೪	ಮೈಸೂರು ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶದ ಮಾಲ ಸಮುದಾಯದ ಶೇಕಡಾವಾರು ಜನಸಂಖ್ಯೆ.	೮೭
೨.೫	ರಾಯಚೂರು ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ	೮೯
೨.೬	ಹಾವೇರಿ ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶದ ಮಾಲ ಸಮುದಾಯದ ಜನಸಂಖ್ಯೆ.	೯೭
೪.೧	ಮಾಲ ಸಮುದಾಯದ ಕಾಯಕ ಮಾಡಲು ಅನರ್ಹರುಕಾಯಕಾರ್ಹರ ಶೇಕಡಾವಾರು ವಿವರಗಳನ್ನು ಸೂಚಿಸುವ ವೃತ್ತಚಿತ್ರ.	೧೭೨
೪.೨	ಕೊಪ್ಪಳ ಜಿಲ್ಲೆಯ ಮಾಲ ಸಮುದಾಯದ ವಸತಿ ಸ್ವರೂಪ (ಶೇಕಡಾವಾರುಗಳಲ್ಲಿ)	೧೯೨
೪.೩	ಗದಗ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ಶೇಕಡಾವಾರು ವಿವರ.	೧೯೩
೪.೪	ಹಾವೇರಿ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ಶೇಕಡಾವಾರು ವಸತಿ ಸ್ವರೂಪದ ವಿವರ	೧೯೮
೪.೫	ರಾಜ್ಯದ ಮಾಲ ಸಮುದಾಯದವರ ಮನೆಗಳನ್ನು ಹೊಂದಿದವರ ಪ್ರಮಾಣ	೧೯೯
೫.೧	ಕರ್ನಾಟಕದ ಪರಿಶಿಷ್ಟ ಜಾತಿ, ವರ್ಗ, ಇತರರ ಸಾಕ್ಷರತಾ ಪ್ರಮಾಣ	೨೨೫

೫.೨	ಕರ್ನಾಟಕದ ಮಾಲ ಸಮುದಾಯಕ್ಕೆ ಸೇರಿದವರ ಜನಸಂಖೆಯ ವಿವರ.	೨೩೨
೫.೩	ಸಮೀಕ್ಷೆಗೆ ಒಳಪಡಿಸಿದ ಮಾಲ ಸಮುದಾಯದಒಟ್ಟು ಶೇಕಡಾವಾರು ಜನಸಂಖ್ಯೆ ಪ್ರಮಾಣ.	೨೩೩
೫.೪	ಮಾಲ ಸಮುದಾಯದ ಸಾಕ್ಷರರು ಹಾಗೂ ಅನಕ್ಷರಸ್ಥರ ಪ್ರಮಾಣ.	೨೩೭

೪. ಸಂಕೇತ ಸೂಚಿ

ಅ=ಅನುಬಂಧ

ಛಾ=ಛಾಯಾಚಿತ್ರ

ಪವ=ಪತ್ರಿಕಾ ವರದಿ

ಲೇ= ಲೇಖನ

ಅಧ್ಯಾಯ ಒಂದು
ಪ್ರವೇಶ

೧.೧ ಪೀಠಿಕೆ

೧.೨ ಇಲ್ಲಿಯವರೆಗೂ ನಡೆದ ಅಧ್ಯಯನಗಳು

೧.೩ ಅಧ್ಯಯನದಉದ್ದೇಶ

೧.೪ ಅಧ್ಯಯನದ ವ್ಯಾಪ್ತಿ

೧.೫ ಅಧ್ಯಯನದ ಮಹತ್ವ

೧.೬ ಅಧ್ಯಯನ ವಿಧಾನ

೧.೭ ಅಧ್ಯಯನದ ವಿನ್ಯಾಸ

ಅಧ್ಯಾಯ ಒಂದು
ಪ್ರವೇಶ

೧.೧ ಪೀಠಿಕೆ

ಸಮಾಜಶಾಸ್ತ್ರ ಅಧ್ಯಯನದ ಬೆಳವಣಿಗೆ

ಸಮಾಜಶಾಸ್ತ್ರಗಳ ಅಧ್ಯಯನ ಭಾರತದಲ್ಲಿ ಯಾವ ರೀತಿ ಬೆಳೆದು ಬಂದಿತು ಎಂಬುದನ್ನು ತಿಳಿಯಬೇಕಾಗಿದೆ. ಸಮಾಜ ವಿಜ್ಞಾನಗಳ ಪರಂಪರೆ ಆರಂಭವಾದದು ೧೮–೧೯ನೇ ಶತಮಾನಗಳ ಇಚೆಗೆ ಪ್ರಾನ್ಸಿನ ರಾಜಕೀಯ ಕ್ರಾಂತಿ ಹಾಗೂ ಇಂಗ್ಲೇಂಡಿನ ಕೈಗಾರಿಕಾ ಕ್ರಾಂತಿಗಳು ತಂದಂತಹ ಐತಿಹಾಸಿಕ ಪರಿವರ್ತನೆಗಳು ಸಮಾಜಶಾಸ್ತ್ರಗಳ ಬೆಳವಣಿಗೆಗೆ ವಿಶೇಷ ಚಾಲನೆ ನೀಡಿದವು.

"೧೮–೧೯ನೇ ಶತಮಾನಕ್ಕಿಂತ ಪೂರ್ವದಲ್ಲಿ ಸಮಾಜಶಾಸ್ತ್ರಕ್ಕೆ ನಿರ್ಧಿಷ್ಟವಾದ ಹೆಸರು ಎಂಬುದು ಇದ್ದಿರಲಿಲ್ಲ. ೧೮ ಹಾಗೂ ೧೯ನೇ ಶತಮಾನದಲ್ಲಿ ಯುರೋಪಿನಲ್ಲಾದ ಹಲವಾರು ಬೆಳವಣಿಗೆಗಳು ಸಮಾಜಶಾಸ್ತ್ರದ ಉಗಮಕ್ಕೆ ಕಾರಣವಾದವು. ಯುರೋಪಿನಲ್ಲಾದ ಹಲವಾರು ರಾಜಕೀಯ, ಆರ್ಥಿಕ, ವೈಜ್ಞಾನಿಕ, ಬೌದ್ಧಿಕ, ಮತ್ತಿತರ ಬೆಳವಣಿಗೆಗಳು ಸಮಾಜಶಾಸ್ತ್ರದ ಉಗಮಕ್ಕೆ ಪ್ರೇರಣೆ ನೀಡಿದವು. ಇಡೀ ಮಾನವಿಕ ಅಧ್ಯಯನವೇ ಯುರೋಪಿನ ಕೊಡುಗೆ ಎನ್ನಲಾಗಿದೆ. ಇವುಗಳಲ್ಲಿ ಮಾನವ ಚಿಂತನೆಯ ಬದುಕನ್ನೆ ಬದಲಿಸಿದ ಬೌದ್ಧಿಕ ಶಕ್ತಿಗಳು ಮತ್ತು ಸಾಮಾಜಿಕ ಜೀವನದ ವೈಖರಿಯನ್ನು ಪರಿವರ್ತಿಸಿದ ಕೈಗಾರಿಕಾ ಕ್ರಾಂತಿ ಮತ್ತು ಅದರೊಂದಿಗೆ ಸಕ್ರಿಯಗೊಂಡ ಸಾಮಾಜಿಕ ಶಕ್ತಿಗಳು ಬಹಳ ಪ್ರಮುಖವಾದವು. ಬದಲಾದ ಪರಿಸ್ಥಿತಿಯಲ್ಲಿ ಮಾನವನ ಸಾಮಾಜಿಕ ಬದುಕು ದಿನೇ ದಿನೇ ಸಂಕೀರ್ಣಗೊಳ್ಳುತ್ತಿರುವದನ್ನು ಮತ್ತು ಸಮಸ್ಯಾತ್ಮಕವಾಗಿರುವದನ್ನು ಕಂಡ ಅಗಸ್ಟ ಕೊಮ್ಟರಂತಹ ಸಮಾಜ ಚಿಂತಕರು ಅದನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿದರು ಮತ್ತು ಹರ್ಬರ್ಟ ಸ್ಪೆನ್ಸರ್, ಕಾರ್ಲಮಾರ್ಕ್ಸ್, ಎಮಿಲಿ ಡರ್ಖಿಂ ಮತ್ತು ಮ್ಯಾಕ್ಸ್ ವೇಬರ್ ಇನ್ನೂ ಮುಂತಾದವರ ಪರಿಶ್ರಮದಿಂದಾಗಿ ಸಮಾಜಶಾಸ್ತ್ರ ಬೆಳವಣಿಗೆ ಹೊಂದಲಿಕ್ಕೆ ಮತ್ತು ಶ್ರೀಮಂತಗೊಳಿಸುವದರ ಜೊತೆಗೆ ತಮ್ಮ ಕೊಡುಗೆಗಳನ್ನು ನೀಡಿದ್ದಾರೆ.

ಸಾಮಾಜಿಕ ಅಧ್ಯಯನದ ಕೇಂದ್ರವಸ್ತು ಮನುಷ್ಯನೆ ಹೊರತು ಜಡವಸ್ತುವಲ್ಲ ಎಂದು ಆರ್ ಇಂದಿರಾರವರು ಹೇಳಿದ್ದಾರೆ. ಮಾನವನು ಸಾಮಾಜದ ಬೆಳವಣಿಗೆಗೆ ಪ್ರಮುಖನಾಗಿದ್ದಾನೆ.

ಮಾನವನನ್ನು ಬಿಟ್ಟು ಸಮಾಜವಿಲ್ಲ, ಸಮಾಜವನ್ನು ಬಿಟ್ಟು ಮಾನವನಿಲ್ಲ ಇವೆರಡು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಒಂದಕ್ಕೊಂಡು ಪೂರಕವಾಗಿವೆ, ಸಮಾಜದ ಆಗು ಹೋಗುಗಳೆಲ್ಲವು ಮಾನವ ಕ್ರಿಯೆಯ ಸುತ್ತಮುತ್ತ ಜರುಗುತ್ತವೆ ಎಂದು ತಿಳಿಯಲಾಗಿದೆ. ಆದ್ದರಿಂದ ಮಾನವನಿಂದಲೇ ಸಮಾಜ, ಸಮಾಜದ ಕೇಂದ್ರ ಬಿಂದು ಮಾನವನಾಗಿದ್ದಾನೆ. ವಿವಾಹ, ಕುಟುಂಬ, ವಂಶಾಭಿವೃದ್ಧಿ, ಜಾತಿ, ಧರ್ಮ, ಸಾಂಸ್ಕೃತಿಕ, ಹೊಂದಾಣಿಕೆ, ಜ್ಞಾನ, ತಿಳುವಳಿಕೆ, ಸ್ಪರ್ಧೆ, ಸಹಕಾರ, ಸಂಘರ್ಷ ಇವುಗಳೆಲ್ಲ ಸಮಾಜದಲ್ಲಿ ಮಾನವನ ಕ್ರಿಯೆಯಿಂದ ನಡೆಯುತ್ತವೆ. ಆದ್ದರಿಂದ ಸಾಮಾಜಿಕ ಜಗತ್ತು ಎಂಬುದು ಜಡವಾದುದಲ್ಲ ಗತಿಶೀಲವಾದುದು ಗತಿಶೀಲತೆಯ ಗುಣವುಳ್ಳ ಮಾನವನು ಪ್ರಚೋದನೆ ಪ್ರಕ್ರಿಯೆಗಳನ್ನೊಳಗೊಂಡ ಅಂತಕ್ರಿಯೆಯ ಚೌಕಟ್ಟಿನಲ್ಲಿಯೇ ಜೀವಿಸುತ್ತಾನೆ. ಏಕಾಂಗಿತನವು ಮಾನವ ಸ್ವಭಾವಕ್ಕೆ ವಿರುದ್ಧವಾದುದು, ಅದು ಸಮೂಹ ಜೀವನಕ್ಕೆ ಪೋಷಕವಾದುದಲ್ಲ ಮಾರಕವಾದುದು. ಮಾನವನ ಸಾಂಘಿಕ ಜೀವನದ ಮೂಲಭೂತ ಸೂತ್ರವೇ "ಸಹಕಾರ" ಜೀವನದಲ್ಲಿ ಇಣುಕು ಹಾಕುವ ನೀರಸತೆ ಮತ್ತು ನಿಷ್ಕ್ರಿಯತೆಗಳನ್ನು ನಿವಾರಿಸಿ ಅದನ್ನು ವರ್ಣಮಯವಾಗಿಸಲು ಸ್ಪರ್ಧೆಯ ಅಗತ್ಯವಿದೆ. ಸ್ಪರ್ಧೆ ಅಪಾಯದ ಅಂಚನ್ನು ತಲುಪಿದಾಗ ಸಂಘರ್ಷವು ಉದಯವಾಗುವುದು. ಸಹಕಾರ–ಸಂಘರ್ಷಗಳ ವೈರುದ್ಯತೆಯ ನಡುವೆ ಹೊಂದಾಣಿಕೆ ಮತ್ತು ಸ್ವಾಂಗಿಕರಣಗಳು ಮೇಲೆದ್ದು ಅಸಂತುಷ್ಟಿ ಮತ್ತು ಅನಿಶ್ಚಿತತೆಯ ತಾಣವಾಗಲಿದ್ದ ಜೀವನದಲ್ಲಿ ಶಾಂತಿ–ಸಮಾಧಾನ ನಿಶ್ಚಿತ ಸ್ಥಿರತೆಯನ್ನುಂಟು ಮಾಡುತ್ತದೆ. ಮಾನವನು ಸಂಘಜೀವಿಯಾಗಿದ್ದರೂ ಹುಟ್ಟಿನಿಂದಲೇ ಆತ ಹಾಗಿಲ್ಲ ಮುಂದೆ ಸಮೂಹ ಜೀವಿಯಾಗಬಲ್ಲ. ಕೆಲವು ಶತಮಾನಗಳ ಹಿಂದೆ ಆಂಗ್ಲ ಕವಿ 'ಜಾನ್ ಡನ್' ರವರು "ಯಾವೊಬ್ಬ ಮಾನವನು ದ್ವೀಪವಲ್ಲ" ಎಂದು ಹೇಳಿದ ಮಾತಿಗೆ ಅದಕ್ಕೆ ಪೂರಕವಾಗಿ 'ಅರಿಸ್ಟಾಟಲ್' ರವರು "ಮಾನವ ಮೂಲತಃ ಸಮಾಜ ಜೀವಿ" ಎಂಬ ಮಾತನ್ನು ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆಯೇ ಗ್ರೀಕ್ ತತ್ವಜ್ಞಾನಿಯಾದ "ಅರಿಸ್ಟಾಟಲ್" ಹೇಳಿದ್ದಾನೆ. ಜೈವಿಕ ಸಾಮರ್ಥ್ಯ ಮಾತ್ರ ಆತನಿಗೆ ಹುಟ್ಟಿನಲ್ಲಿಯೇ ಲಭ್ಯವಾಗಿರುತ್ತದೆ ಈ ಸಾಮರ್ಥ್ಯದಿಂದಲು ಆತ ತಾನಾಗಿಯೇ ಒಬ್ಬ ಸಾಮಾಜಿಕ ಜೀವಿಯಾಗಲಾರ ಮತ್ತು ತನ್ನದೆಯಾದ ವ್ಯಕ್ತಿತ್ವವನ್ನು ಬೆಳಸಿಕೊಳ್ಳಲಾರ ಆತನಿಗೆ ಇತರರ ಮತ್ತು ಸಮಾಜದ ಸಹಾಯ ಅಗತ್ಯ ಮತ್ತು ಅನಿವಾರ್ಯವಾಗಿದೆ. ಪ್ರತಿಯೊಂದು ಸಮಾಜದಲ್ಲಿ ಪ್ರತಿಯೊಂದು ಸಾಂಸ್ಕೃತಿಯಲ್ಲೂ ತನ್ನ ಸದಸ್ಯರುಗಳ ಪಾಲನೆ – ಪೋಷಣೆ ಮತ್ತು ತನ್ನದೆಯಾದ ವಿಧಾನವೊಂದನ್ನು ಹೊಂದಿರುವ ನವಜಾತ ವ್ಯಕ್ತಿಗಳಿಗೆ ನೀಡುವ ಸಾಮಾಜಿಕ ನಿಯಮ ಅಥವಾ ಶಿಕ್ಷಣವನ್ನು "ಸಮಾಜಿಕರಣ" ಎನ್ನುತ್ತಾರೆ. ಇದು ಕೂಡ ಅಲ್ಪಕಾಲಿಕವಾದುದ್ದಲ್ಲ ಇದು ಕೂಡ ಪ್ರತಿಯೊಬ್ಬ ವ್ಯಕ್ತಿ ಮತ್ತು ಸಮುದಾಯಗಳಲ್ಲಿ ನಿರಂತರವಾಗಿ ಸಾಗುವಂತಹದ್ದಾಗಿದೆ. ಸಮಾಜಿಕರಣದ ಪ್ರಕ್ರಿಯೇಯ ಮೂಲಕವೇ ಪ್ರತಿಯೊಬ್ಬ ವ್ಯಕ್ತಿಯೂ ತನ್ನದೆಯಾದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾನೆ."[7] ಸಮಾಜಿಕರಣದ ಮೂಲಕ ತನ್ನದೇಯಾದ ಸಂಸ್ಕೃತಿ ರೀತಿ – ನೀತಿ ನಿಯಮಗಳನ್ನು ಕಲಿತುಕೊಳ್ಳುತ್ತಾನೆ. ಪ್ರತಿಯೊಬ್ಬ ಮಾನವ ಜೀವಿ ತನ್ನ ಕುಟುಂಬ, ಸಮುದಾಯ, ಸಮಾಜದ ಮೂಲಕ ಪ್ರತಿಯೊಬ್ಬರು ನಾಗಕರಿತೆಯಲ್ಲಿರಲಿ ಅನಾಗಕರಿಕತೆಯ ಜೀವನದಲ್ಲಿರಲಿ ಸಮಾಜಿಕರಣದ ಮೂಲಕ ತನ್ನ ವ್ಯಕ್ತಿತ್ವವನ್ನು ತನ್ನದೆಯಾದ ಸಂಸ್ಕೃತಿಯನ್ನು ಅಧುನಿಕತೆಯ

ಪ್ರಭಾವದಿಂದಾಗಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾನೆ. ಪ್ರಾಚೀನ ಕಾಲದಿಂದ ಹಿಡಿದು ಆಧುನಿಕರಣದ ಪ್ರಭಾವದಿಂದಾಗಿ ಹಲವಾರು ರೀತಿಯ ಬದಲಾವಣೆಗೆ ಒಳಪಡುತ್ತಿದ್ದಾನೆ ಎನ್ನಲಾಗಿದೆ.

ಬುಡಕಟ್ಟು ಅಧ್ಯಯನದ ಬೆಳವಣಿಗೆ

"ರಾಜ್ಯದಲ್ಲಿ ೫೦ ಬುಟಕಟ್ಟುಗಳು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿವೆ. ೨೦೧೧ರ ಜನಗಣತಿಯ ಪ್ರಕಾರ ಬುಡಕಟ್ಟುಗಳ ಒಟ್ಟು ಜನಸಂಖ್ಯೆ ೪೨,೪೮,೯೮೭. ಇದರಲ್ಲಿ ಮೂಲ ಆದಿವಾಸಿಗಳ ಜನಸಂಖ್ಯೆ ೯,೫೨,೬೩೩ ಎಂದು ತಿಳಿಯಲಾಗಿದೆ. ಭಾರತ ದೇಶವು ಸ್ವಾತಂತ್ರ್ಯ ಬರುವುದಕ್ಕಿಂತ ಮೊದಲು ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಅಪಘಾನಿಸ್ತಾನವನ್ನೊಳಗೊಂಡ ಒಂದು ದೊಡ್ಡ ವಿಶಾಲವಾದ ಭೂಖಂಡವಾಗಿತ್ತು, ಇಂತಹ ವಿಶಾಲ ಭೂಖಂಡಕ್ಕೆ ವ್ಯಾಪಾರ ಮಾಡುವ ಉದ್ದೇಶವನ್ನಿಟ್ಟುಕೊಂಡು ಯುರೋಪಿಯನ್ನರು ಪ್ರವೇಶಿಸಿದರು ಯುರೊಪಿಯನ್ನರಿಗಿಂತ ಪೂರ್ವದಲ್ಲಿ ದ್ರಾವಿಡರು ಭಾರತದ ನಿವಾಸಿಗಳೆಂದು ಹೇಳಲಾಗಿದೆ. ಇವರಿಗಿಂತ ಪೂರ್ವದಲ್ಲಿ ನಿಗ್ರೋಯಿಡ್ ಜನರು ಭಾರತದ ನಿವಾಸಿಗಳೆಂದು ಗುರುತಿಸಲಾಗಿದ್ದು, ಇಂತಹ ಅನೇಕ ರೀತಿಯ ಅಲೆಮಾರಿಗಳು ಆಹಾರ ಮತ್ತು ವಸತಿಗಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುತ್ತಿದ್ದರು ತಮ್ಮ ಹಸಿವು ನಿವಾರಿಸಿಕೊಳ್ಳಲು ಆಹಾರ ಸೇವಿಸುತ್ತಾ ಬೇಟೆಯಾಡುತ್ತಾ ಒಂದು ಕಾಲಕ್ಕೆ ಹಸಿಯಾದ ಆಹಾರ ಪದಾರ್ಥಗಳನ್ನು ಸೇವಿಸುತ್ತಿದ್ದರು. ಬೆಂಕಿಯ ಆವಿಸ್ಕಾರದವಾದ ಮೇಲೆ ಬಗೆ– ಬಗೆಯ ಅಡುಗೆ ಮಾಡಿಕೊಳ್ಳುತ್ತಾ ಹಲವಾರು ರೀತಿಯ ಅಡುಗೆ ಪದಾರ್ಥಗಳನ್ನು ಕಂಡುಹಿಡಿದು ಬೇಯಿಸಿಕೊಂಡು ತಿನ್ನುವದನ್ನು ಕಲಿತರು ಹೀಗೆ ಅಡುಗೆಯ ಅಭಿರುಚಿ ವ್ಯಕ್ತಿಯಿಂದ ವ್ಯಕ್ತಿಗೆ ಪ್ರದೇಶದಿಂದ ಪ್ರದೇಶಕ್ಕೆ ಬಿನ್ನವಾಗುತ್ತಾ ಅರಣ್ಯದಲ್ಲಿ ನೈಸರ್ಗಿಕವಾಗಿ ದೊರೆಯುವ ಗೆಡ್ಡೆ ಗೆಣಸುಗಳನ್ನು ತಮ್ಮ ಆಹಾರವನ್ನಾಗಿ ಅವಲಂಬಿಸಿ ತರುವಾಯ ಪಶುಪಾಲನೆ ಇದರೊಂದಿಗೆ ಬೇಸಾಯ ಮಾಡುವದನ್ನು ಕೈಗೊಂಡು ಒಂದು ಕಡೆ ನಲೆ ನಿಂತರು ಕೂಡಾ ಆದಿವಾಸಿಗಳು ಮೊದಮೊದಲಿಗೆ ಅನೇಕ ರೀತಿಯ ಸಮಸ್ಯೆ ಹಾಗೂ ಸಂಘರ್ಷಗಳನ್ನು ಎದುರಿಸಿ ಬದುಕುತ್ತಿದ್ದರು. ಕೆಲವು ಸಾರಿ ಸಾವು ನೋವುಗಳನ್ನು ಎದುರಿಸಲಾಗದೆ ತಮ್ಮ ನೆಲೆಗಳನ್ನು ತೊರೆದು ಅರಣ್ಯ ಅಥವಾ ಕಾಡುಗಳನ್ನು ಸೇರುತ್ತಿದ್ದರು. ಇಂಥವರಿಗೆ ಆದಿವಾಸಿಗಳು, ಸಂಚಾರಿ ಜನಾಂಗ, ಗಿರಿಜನರು, ಅರಣ್ಯವಾಸಿಗಳು, ಅಲೆಮಾರಿಗಳು, ಅರೆ ಅಲೆಮಾರಿಗಳು ಎಂಬ ಇತ್ಯಾದಿ ಹೆಸರುಗಳಿಂದ ಕರೆಯುತ್ತಿದ್ದರು ಇವರುಗಳನ್ನು ಹಲವಾರು ವಿದ್ವಾಂಸರು ತಮ್ಮ ತಮ್ಮ ಅಭಿಪ್ರಾಯಗಳಲ್ಲಿ ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಭಾರತದ ಪ್ರಸಿದ್ಧ ಮಾನವ ವಿಜ್ಞಾನಿ ಹಾಗೂ ಸಮಾಜಶಾಸ್ತ್ರಜ್ಞರಾದ ಜಿ ಎಸ್ ಘುರ್ಯೆಯವರು ಹಿಂದುಳಿದ ಹಿಂದೂಗಳು ಎಂದು ಕರೆದರೆ, ವೆರಿಯರ್ ಎಲ್ವಿನ್ರವರು ಬುಡಕಟ್ಟುಗಳು ಆದಿವಾಸಿಗಳು ಅಥವಾ ಮೂಲನಿವಾಸಿಗಳೆಂದು ಕರೆದಿದ್ದಾರೆ. ಎ ಎಲ್ ಕ್ರೋಬರ್‌ರವರು ಬುಡಕಟ್ಟು ಜನಾಂಗವು ಚಿಕ್ಕದಾಗಿ ಒಂಟಿಯಾಗಿ ಹಾಗೂ ಸಾಂಸ್ಕೃತಿಕವಾಗಿ ಸಂಬಂಧಗಳನ್ನು ಅಳವಡಿಸಿಕೊಂಡು ಸುವ್ಯವಸ್ಥಿತವಾಗಿ ರಚಿಸಿಕೊಂಡಿರುವ ಒಂದು ಸಮಾಜ ಎಂದಿದ್ದಾರೆ. ಡಿ ಎಮ್ ಮುಜುಮದಾರರವರು ಹಲವಾರು ನಿರ್ಧಿಷ್ಟ ಭೂ ಪ್ರದೇಶಗಳಲ್ಲಿ ನೆಲೆಸಿರುವ ವಿಶಿಷ್ಟ ಭಾಷೆಯನ್ನಾಡುವ ಪರಸ್ಪರ ಸಹಕಾರ ಹಾಗೂ

ತಿಳಿವಳಿಕೆಯ ಮೇಲೆ ನೆಲೆಸಿರುವ ಜನಸಮುದಾಯಗಳೇ ಆದಿವಾಸಿಗಳೆಂದು ಕರೆದಿದ್ದಾರೆ. ಇಂತಹ ಬುಡಕಟ್ಟುಗಳ ಅಧ್ಯಯನ ಹಾಗೂ ಆದಿವಾಸಿಗಳ ವಿಶಿಷ್ಟತೆಯನ್ನು ಅರಿಯಲು ಮೊಟ್ಟ ಮೊದಲು ಪ್ರಯತ್ನಿಸಿದವರು ಬ್ರಿಟಿಷರೆಂದು ಹೇಳಲಾಗಿದೆ. ಇದು "ಏಷಿಯಾಟಿಕೆ ಸೋಸೈಟಿ ಆಫ್ ಬೆಂಗಾಲ್" ಎಂಬ ಸಂಸ್ಥೆಯ ಸ್ಥಾಪನೆಯ ಜೊತೆಗೆ ಪ್ರಾರಂಭಗೊಂಡಿತು ಎನ್ನಲಾಗಿದೆ. ೧೯೧೯ ರಲ್ಲಿ ಮುಂಬಯಿಯಲ್ಲಿ ಮೊಟ್ಟ ಮೊದಲ ಬಾರಿಗೆ ಸಮಾಜಶಾಸ್ತ್ರ ಪ್ರಾರಂಭವಾದ ನಂತರ ಮತ್ತು ೧೯೨೧ ರಲ್ಲಿ ಕಲ್ಕತ್ತದಲ್ಲಿ ಮಾನವಶಾಸ್ತ್ರ ಪ್ರಾರಂಭವಾಯಿತು. ಈ ವಿಶ್ವವಿದ್ಯಾಲಯಗಳಲ್ಲಿ ಸಾಮಾಜಿಕ ಮತ್ತು ಮಾನವಶಾಸ್ತ್ರ ವಿಷಯಗಳನ್ನು ಸೇರಿಸಿದಾಗಿನಿಂದಾಗಲು ಬುಡಕಟ್ಟು ಅಧ್ಯಯನ ರಚನಾತ್ಮಕವಾಗಿ ಆರಂಭಗೊಂಡಿತು. ದಕ್ಷಿಣ ಭಾರತದಲ್ಲಿ ಜಿ ಎಸ್ ಘುರ್ಯ, ಇರಾವತಿ ಕರ್ವೆ, ಎಲ್ ಕೆ ಅನಂತಕೃಷ್ಣ ಅಯ್ಯರ್, ಕೆ ಜಿ ಗುರುಮೂರ್ತಿ, ಎಮ್ ಎನ್ ಶ್ರೀನಿವಾಸ ಮುಂತಾದ ಮಾನವಶಾಸ್ತ್ರಜ್ಞರು ಕ್ಷೇತ್ರಕಾರ್ಯ ಕೈಗೊಂಡು ಅನೇಕ ರೀತಿಯ ಲೇಖನಗಳನ್ನು ಕೃತಿಗಳನ್ನು ಬರೆಯುವದರ ಮೂಲಕ ಬುಡಕಟ್ಟು ಸಂಸ್ಕೃತಿಯ ವಿವಿಧ ಅಂಶಗಳ ಬಗ್ಗೆ ಮಾನವಶಾಸ್ತ್ರೀಯ ಸಂಶೋಧನೆ ನಡೆಸಲು ಸಂಶೋಧಕರಿಗೆ ತರಬೇತಿ ನೀಡುವದರ ಮೂಲಕ ವೈಜ್ಞಾನಿಕ ಮಾನವಶಾಸ್ತ್ರೀಯ ಸಂಶೋಧನೆಗಳಿಗೆ ಚಾಲನೆ ಶಕ್ತಿಯಾದರು. ಈ ಅಧ್ಯಯನದಿಂದ ಬುಡಕಟ್ಟು ಜನರ ಪ್ರದೇಶ ನಿರ್ಧಿಷ್ಟತೆ ಜನಾಂಗ ಅಥವಾ ಆದಿವಾಸಿಗಳ ಸಂಸ್ಕೃತಿಯನ್ನು ತಿಳಿಯಲು ಸಹಾಯಕವಾಗಿದೆ."[೨] ಈ ಹಿನ್ನೆಲೆಯಲ್ಲಿ ಭಾರತದಲ್ಲಿನ ಬಹುತೇಕ ಆದಿವಾಸಿ ಸಮುದಾಯಗಳ ಅಧ್ಯಯನಕ್ಕೆ ಮಹತ್ವ ನೀಡಿರಬಹುದು. ಈ ಹಿನ್ನಲೆಯಲ್ಲಿ ತಮಗೆ ನಿರ್ಧಿಷ್ಟ ನೆಲೆ ಇಲ್ಲದೆ ಒಂದು ಊರಿನಿಂದ ಇನ್ನೊಂದು ಊರಿಗೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ತಮ್ಮ ಆರ್ಥಿಕ ಜೀವನ ನಿರ್ವಹಣೆಗಾಗಿ ತಮ್ಮ ಮೂಲ ವೃತ್ತಿಯನ್ನು ಭಿಕ್ಷೆಯಾಗಿಸಿಕೊಂಡ ಮಾಲ (ಪರ್ವತ ಮಲ್ಲಯ್ಯ) ಅಲೆಮಾರಿ ಬುಡಕಟ್ಟು ಸಮುದಾಯವು ಈ ಅಧ್ಯಯನ ವಿಧಾನದಲ್ಲಿ ಸೇರಲ್ಪಟ್ಟಿದೆ. ಪ್ರಾಚೀನ ಸಮಾಜವು ಸಂಚಾರಿ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಸಂಚಾರ ಚಪಲತೆಯಿಂದಾಗಿ ಅದು ಸಂಚಾರಿಯಾಗಿರಲಿಲ್ಲ ಅಥವಾ ಅದು ಅದಕ್ಕೆ ನಿರ್ದಿಷ್ಟವಾದ ಮನೋಭಾವದ ಪ್ರತೀಕವೂ ಅಲ್ಲ, ಕಾರಣವೆಂದರೆ ಅತ್ಯಂತ ಪ್ರಾಚೀನ ಸಂಪತ್ತು ಕಾಲನಡೆಗಳು (ಹಸು ಇತ್ಯಾದಿ) ಆಗಿದ್ದುದರಿಂದ ಅದರ ಸಂಪತ್ತೆನಿಸಿದ ಹಸುಗಳು ಸಂಚಾರಿಯಾದುದರಿಂದಲೆ ಪ್ರಾಚೀನ ಸಮಾಜವು ಸಂಚಾರಿಯಾಗಿತ್ತು. ಆದುದರಿಂದ ಪ್ರಾಚೀನ ಸಮಾಜವು ಹಸುಗಳನ್ನು ಪ್ರೀತಿಸುತ್ತಿದ್ದರಿಂದ ಹಸುಗಳು ಹೊದಡೆಗೆ ಅದು ಸಾಗುತ್ತಿತ್ತು. ಪ್ರಾಚೀನ ಸಮಾಜವು ನೂತನ ವರ್ಗದ ಸಂಪತ್ತನ್ನು ತಿಳಿದುಕೊಂಡೊಡನೆಯೇ ತನ್ನ ವಾಸವನ್ನು ಸ್ಥಿತಗೊಳಿಸಿಗೊಂಡಿತ್ತು. ಈ ಹೊಸ ವರ್ಗದ ಸಂಪತ್ತೆ ಭೂಮಿ. ಪ್ರಾಚೀನ ಸಮಾಜವು ಕೃಷಿ ಆರಂಭವನ್ನು ಕಲಿತೊಡನೆ ಸ್ಥಿರವಾದ ನೆಲೆಯನ್ನು ಕಂಡಿತು. ಹಸಿವಿನಿಂದ ಭೂಮಿಗೆ ಸಂಪತ್ತು ವ್ಯತ್ಯಾಸ ಹೊಂದಿದೊಡನೆ ಅದು ಒಂದಡೆ ನೆಲೆಸುವಂತಾಯಿತು. ಅದರೊಂದಿಗೆ ಪ್ರಾಚೀನ ಸಮಾಜವು ಒಂದೇ ಸ್ಥಳದಲ್ಲಿ ನೆಲೆ ನಿಲ್ಲುವಂತಾಯಿತು. ಅದರೊಂದಿಗೆ ಪ್ರಾಚೀನ ಸಮಾಜವು ಒಂದೇ ಸ್ಥಳದಲ್ಲಿ ನೆಲೆ ನಿಂತಿತೆಂದು ಹೆಳಬಹುದು. ಜಗತ್ತಿನಲ್ಲಡೆ ಆಯಾ ದೇಶದ ಮೂಲ ನಿವಾಸಿಗಳಾಗಿಯೂ ಬುಡಕಟ್ಟು ಜನಾಂಗದವರು ಬಹಳ ಶೋಷಣೆ, ದೌರ್ಜನ್ಯಗಳಿಗೆ ಒಳಗಾಗಿದ್ದಾರೆ ಮತ್ತು ಅವರು

ನಿರ್ಲಕ್ಷಿತರಾಗಿದ್ದಾರೆ. ಪರದೇಶಗಳಿಂದ ಬಂದ ಇತರ ಸುಧಾರಿತ ಜನಾಂಗದವರು ಇವರನ್ನು ಹತ್ತಿಕ್ಕಿ ಅವರ ಮೂಲಭೂತ ಹಕ್ಕುಗಳಿಂದ ವಂಚಿತರನ್ನಾಗಿಸಿದ್ದು ಇತಿಹಾಸದ ಒಂದು ವಿಪರ್ಯಾಸವಾಗಿದೆ.

ಬ್ರಿಟೀಷರಿಂದ ಭಾರತ ದೇಶವು ಸ್ವಾತಂತ್ರ ಪಡೆದ ಬಳಿಕ, ದೇಶದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಕ್ಷೇತ್ರಗಳಲ್ಲಿ ಅಗಾಧವಾದ ಪರಿವರ್ತನೆಗಳು ಉಂಟಾದವು ಈ ದೇಶದಲ್ಲಿ ಶತ– ಶತಮಾನಗಳಿಂದ ಶೋಷಣೆಗೆ ಒಳಗಾಗಿದ್ದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನರ ಸರ್ವತೋಮುಖ ಅಭಿವೃದ್ಧಿಗಾಗಿ, ಕಲ್ಯಾಣ ರಾಜ್ಯದ ಸ್ಥಾಪನೆಗಾಗಿ ಭಾರತ ಸರಕಾರವು ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದಿತು.

೧೯೫೦ರಲ್ಲಿ ಭಾರತದ ಸಂವಿಧಾನವು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರನ್ನು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಹಾಗೂ ರಾಜಕೀಯ ದೃಷ್ಟಿಯಿಂದ ಹಿಂದುಳಿದವರೆಂದು, ಘೋಷಿಸಿ ಅವರಿಗೆ ಹಲವಾರು ಕ್ಷೇತ್ರಗಳಲ್ಲಿ ಅನೇಕ ಸೌಲಭ್ಯಗಳನ್ನು ಒದಗಿಸುವದರ ಮೂಲಕ ಅವರಲ್ಲಿ ಸಾಕಷ್ಟು ಬದಲಾವಣೆಗಳನ್ನು ತರಲಾಯಿತು. ಪರಿಶಿಷ್ಟ ಜಾತಿಯವರಲ್ಲಿ ಆದಂತಹ ಬದಲಾವಣೆಗಳು ಅನೇಕ ಸಮಾಜಶಾಸ್ತ್ರಜ್ಞರ ಗಮನ ಸೆಳೆಯುವದರೊಂದಿಗೆ ಹಲವಾರು ಸಂಶೋಧನೆಗಳು ನಡೆಯುದಕ್ಕೆ ಕಾರಣವಾದವು. ತದನಂತರ ಸಾಕಷ್ಟು ಇದರಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ, ಸಮುದಾಯ, ಸಂಘಟನೆ, ಸಮಸ್ಯಗಳು ಅಧ್ಯಯನಶೀಲತೆ ಅವರ ಪ್ರಗತಿಗೆ ಅಡೆತಡೆಗಳನ್ನು ಮತ್ತು ಅವರು ಎದುರಿಸುತ್ತಿರುವ ಸಮಸ್ಯಗಳನ್ನು ವಿಶ್ಲೇಷಿಸಲಾಗುವದು.

ಒಂದು ಕಾಲದ ಸಾಮಾಜಿಕ ವ್ಯವಸ್ಥೆ ಮತ್ತು ಸಂಸ್ಕೃತಿಯ ಸ್ವರೂಪವನ್ನು ಗ್ರಹಿಸಿ ಅದರ ವಿಭಿನ್ನ ಸಂಬಂಧಗಳನ್ನು ವಿಶ್ಲೇಷಿಸಲು ಅಧ್ಯಯನಗಳ ಅವಶ್ಯಕತೆ ಬೆಕಾಗುತ್ತದೆ. ಭಾರತದಲ್ಲಿ ಸಮುದಾಯಗಳ ಅಧ್ಯಯನ ಈ ಹಿಂದೆ ನಮ್ಮನ್ನು ಆಳಿದ ಪಾಶ್ಚಾತ್ಯರಿಂದಲೇ ಬಂದದ್ದು ಅಂದರೆ ತಪ್ಪಾಗಲಾರದು. ವಸಹತುಶಾಹಿ ಯುಗದೊಂದಿಗೆ ಸಂಶೋಧನಾ ಕಾರ್ಯಗಳು ಪ್ರಾರಂಭವಾದವು. ಪಾಶ್ಚಾತ್ಯರಿಗೆ ಇಲ್ಲಿನ ಜನಜೀವನದ ಬಗ್ಗೆ ಅಭ್ಯಾಸ ಮಾಡಬೇಕೆಂದು ಅದನ್ನು ತ್ವರಿತಗತಿಯಲ್ಲೆ ಪ್ರಾರಂಭಿಸಿದರು. ಇದು ಮೊದಲು ಪ್ರಾರಂಭವಾದದ್ದು ಕ್ರೈಸ್ತ ಮಿಶನರಿಗಳಿಂದಲೆ. ಯಾಕೆಂದರೆ ಕ್ರೈಸ್ತ ಮಿಶನರಿಗಳು ತಮ್ಮ ಧರ್ಮ ಪ್ರತಿಷ್ಠಾಪನೆಗೋಸ್ಕರ ಜನರ ಮನಸನ್ನು ಸೆಳೆಯಲು ಪ್ರಾರಂಭಿಸಿದ್ದು, ಅದಕ್ಕೆ ಅವರು ಮೊದಲು ಅಲ್ಲಲ್ಲಿ ಚದುರಿ ಹೋಗಿದ್ದ ಬುಡಕಟ್ಟು ಜನಸಮುದಾಯಗಳನ್ನು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಶೋಷಣೆಗೆ ಒಳಗಾದ ಜನಸಮುದಾಯಗಳನ್ನು ಅವರು ಮೊದಲು ಆಯ್ಕ ಮಾಡಿಕೊಂಡರು. ಅಲ್ಲಿಂದ ಒಂದೊಂದೇ ಸಮುದಾಯದ ಜನರ ಜೀವನವನ್ನು ಆಲಿಸಿ ಶೋಧಿಸಿ ತಮ್ಮೆಡೆಗೆ ಸೆಳೆದುಕೊಂಡರು. ಅದೇ ರೀತಿಯ ಅಧ್ಯಯನ ಭಾರತೀಯರಿಗೆ ನಂತರ ಬಂತು. ಭಾರತಕ್ಕೆ ವಲಸೆ ಬಂದ ಪ್ರವಾಸಿಗರು, ಸಂಶೋಧಕರು, ವಿದ್ವಾಂಸರು, ಅಧಿಕಾರಿಗಳು ತಮ್ಮ ತಮ್ಮ ಚಿಂತನೆಗಳಲ್ಲಿ ಇಲ್ಲಿನ ಜೀವನ ಕ್ರಮಗಳನ್ನು ಅಭ್ಯಾಸ ಮಾಡಿ ಅದನ್ನು ದಾಖಲಿಸುತ್ತಾ ಹೊದರು. ಇದೇ ಮಾರ್ಗವನ್ನು

ತುಳಿದ ಭಾರತೀಯರು ಮುಂದೆ ಸಂಶೋಧನೆಗೆ ಒಂದು ಮುಖ್ಯ ವೇದಿಕೆ ನಿರ್ಮಾಣ ಮಾಡಿ ಸಂಶೋಧನಾ ಅಡಿಯಲ್ಲಿ ಹಲವಾರು ವಿಷಯಗಳ ಬಗೆಗೆ ಅಧ್ಯಯನ ನಡೆಸಿದರು.

ಐತಿಹಾಸಿಕವಾಗಿ ನೋಡಿದಾಗ ಅಲ್ಲಿ ನಮಗೆ ಗೋಚರಿಸುವ ಅಂಶವೆನೆಂದರೆ, ರಾಜ ಯಾವ ಧರ್ಮವನ್ನು, ಸಂಪ್ರದಾಯವನ್ನು ಅನುಸರಿಸುತ್ತಾನೆಯೋ ಪ್ರಜೆಗಳು ಸಹ ಅದೇ ಧರ್ಮವನ್ನು ಅನುಸರಿಸಬೇಕಾದದ್ದು ರಾಜನೀತಿಯಾಗಿತ್ತು. ರಾಜರ ರೀತಿ-ನೀತಿಗಳಿಗೆ ಜನರು ಒಳಪಟ್ಟು ತಮ್ಮನ್ನು ರಾಜರ ನಿಷ್ಠೆಗೆ ಒಳಪಟ್ಟ ಎಷ್ಟೋ ಪ್ರಸಂಗಗಳಿವೆ. ಊರಿನ ಪ್ರತಿಯೊಬ್ಬರು ಅವರ ಮೂಲ ಕಸುಬನ್ನು ಮಾಡಬೇಕಾಗಿತ್ತು. ಮೆಲ್ವರ್ಗದವರು ರಾಜರಿಗೆ ಹತ್ತಿರವಾಗಿ ಆಸ್ಥಾನದ ಕೆಲಸಗಳಲ್ಲಿ ಬಾಗಿಯಾದರೆ ಕೆಳವರ್ಗದವರು ರಾಜರ ಆಸ್ಥಾನದ ಹೊರಗೆ ರಾಜರನ್ನು ಮತ್ತು ಮೇಲ್ವರ್ಗದವರನ್ನು ರಕ್ಷಿಸುವ ಕಾರ್ಯ ಮಾಡಬೇಕಾಗಿತ್ತು. ಈ ನಿಟ್ಟಿನಲ್ಲಿ ಅನಾದಿಕಾಲದಿಂದಲು ಕೆಳವರ್ಗದವರ ಮೇಲೆ ಒಂದಿಲ್ಲೊಂದು ಶೋಷಣೆ ನಡೆಯುತ್ತಲೆ ಬಂದಿದೆ. ಇವಾಗಲು ಸಹ ಕೆಲವು ಆದಿವಾಸಿಗಳು ಕೆಳವರ್ಗದವರು ಹಲವಾರು ಶೋಷಣೆಗೆ ಒಳಪಟ್ಟಿದ್ದಾರೆ. ಈ ರೀತಿಯ ಅಧಿಕಾರದ ಮದದಿಂದ, ರಾಜಕೀಯ ತಂತ್ರಗಳಿಂದ, ಅಧಿಕಾರದಿಂದ, ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಜನಸಾಮಾನ್ಯರು ಜರ್ಜರಿತಗೊಂಡು ಹೇಳಹೆಸರಿಲ್ಲದಂತೆ ಮರೆಯಾಗಿ ಹೋಗಿದ್ದಾರೆ. ಅವುಗಳಲ್ಲಿ ಕೆಲವು ಸಮುದಾಯಗಳನ್ನು ಹುಡುಕಲು ಪ್ರಯತ್ನಿಸಿದರೆ ಹುಡುಕಲು ಅಸಾಧ್ಯವಾಗದಂತಹ ಸ್ಥಿತಿ ಇಂದು ಇದ್ದಂತಿದೆ. ಇಂತಹ ಎಷ್ಟೋ ಜನಸಮುದಾಯಗಳು ಕಾಲ ಪರಿಸ್ಥಿತಿಗನುಗುನವಾಗಿ ಇಡೀ ಸಮಾಜದಿಂದಲೇ ದೂರ ಇರುವ ಪ್ರಯತ್ನ ನಡೆಸಿವೆ. ಇಂದು ಇತಿಹಾಸವನ್ನು ನೋಡಿದಾಗ ಇತಿಹಾಸದ ಪುಟಗಳಲ್ಲಿ ಮಿಂಚಿ ಮರೆಯಾಗಿ ಹೋಗಿದ್ದ ಜನರು ಇಂದು ಕೆಟ್ಟ ಪರಿಸ್ಥಿತಿಗಳಿಂದ ಕೂಡಿದ ಜೀವನ ನಡೆಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಮಾಲ(ಪರ್ವತ ಮಲ್ಲಯ್ಯ) ಸಮುದಾಯವನ್ನು ಅವಲೋಕಿಸಿದಾಗ ಈ ಸಮುದಾಯದ ಜನರು ಅಥವಾ ಈ ಸಮುದಾಯವು ರಾಜ ಮಾಹಾರಾಜರ ಕಾಲಗಳಿಂದಲೂ ರಾಜರಿಗೆ ಆಪ್ತರಾಗಿ ಇಡೀ ರಾಜ್ಯಕ್ಕೆ ಸೇವಕರಾಗಿ ಬದುಕಿದ್ದು ಕಂಡು ಬರುತ್ತದೆ. ಶತ್ರುಗಳಿಂದ ರಾಜ್ಯವನ್ನು ರಕ್ಷಿಸಲು ಸೈನಿಕರಿಗೆ ಮುನ್ನಚ್ಚರಿಕೆ ನೀಡುವ ಕೆಲಸ ಮತ್ತು ಸೈನಿಕರನ್ನು ಸೆದೆಬಡಿಯುವ ಕೆಲಸ ಈ ಸಮುದಾಯದವರದಾಗಿತ್ತು. ಮಾಲ ಸಮುದಾಯದವರು ಬೇರೆ ಸಮುದಾಯದ ಸಂಸ್ಕೃತಿಗಿಂತ ಭಿನ್ನವಾಗಿದ್ದು ಕೆಲವು ವಿಭಿನ್ನ ಆಚಾರ-ವಿಚಾರಗಳನ್ನು ರೂಢಿಸಿಕೊಂಡು ಬೆಳೆದು ಬಂದಿರುತ್ತಾರೆ. ತೆಲುಗಿನಲ್ಲಿ ಮಾಲ ಕನ್ನಡಲ್ಲಿ ಹೊಲೆಯ ಸ್ಥಳಿಯವಾಗಿ ಪರ್ವತಮಲ್ಲಯ್ಯ ಎಂದು ಕರೆಯಿಸಿಕೊಳ್ಳುವ ಈ ಸಮುದಾಯ ಒಂದು ಕಾಲದಲ್ಲಿ ರಾಜ್ಯವನ್ನಾಳುತಿದ್ದ ರಾಜಪ್ರಭುಗಳಿಗೆ ನಿಷ್ಠೆಯಿಂದ ಸೇವೆ ಸಲ್ಲಿಸಿರುವದನ್ನು ಇತಿಹಾಸದ ಮೂಲಕ ಅವಲೋಕನ ಮಾಡಿದಾಗ ನಮಗೆ ಹಲವಾರು ವಿಷಯಗಳು ತಿಳಿದು ಬರುತ್ತದೆ.

ಕರ್ನಾಟಕದ ಕೆಲವೇ ಹಳ್ಳಿ ಪಟ್ಟಣಗಳಲ್ಲಿ ನೆಲೆಸಿರುವ ಮಾಲ ಸಮುದಾಯದವರು ಕೆಲವು ಕಡೆ ಕಡಿಮೆ ಜನಸಂಖ್ಯಾ ಪ್ರಮಾಣದಲ್ಲಿ ಜೀವನ ನಡೆಸುತ್ತಿರುವದನ್ನು ನೋಡುತ್ತೆವೆ. "ಆಧುನಿಕ ವ್ಯಾಖ್ಯಾನದಲ್ಲಿ

ಇವರನ್ನು ಬಲಗೈ ಪಂಥದವರೆಂದು ಕೆಲವು ಸಮಾಜಶಾಸ್ತ್ರಜ್ಞರು ಕರೆಯುತ್ತಾರೆ. ಏಕೆಂದರೆ ಡಾ ಅಂಬೇಡ್ಕರ್ ಅವರ ಅನುಯಾಯಿಗಳು ಎಡಗೈ ಪಂಥದವರಾದರೆ ಅವರ ಆದರ್ಶಗಳನ್ನು ಈ ಬಲಗೈ ಪಂಥದವರು ಅನುಸರಿಸುತ್ತಲೆ ಬಂದಿದ್ದಾರೆ. ಇದು ಈ ರೀತಿಯ ಜನಾಂಗದವರು ಭಾರಿಸುತ್ತಿರುವ ವಾದ್ಯಗಳ ಆಧಾರದ ಮೇಲೆ ಈ ರೀತಿಯಾಗಿ ವಿಭಾಗಿಸಿರುವದನ್ನು ಕಾಣುತ್ತೇವೆ. ಹಲವಾರು ದಲಿತ ಚಳುವಳಿಯ ನೇತಾರರು ಇಡೀ ಪರಿಶಿಷ್ಟ ಜಾತಿಯ ಜನರಲ್ಲಿ ಈ ವಿಷದ ಬೀಜ ಬಿತ್ತಿ ಜನರನ್ನು ಇಬ್ಬಾಗ ಮಾಡಿರುವುದು ಎಲ್ಲರಿಗೂ ತಿಳಿದ ಸಂಗತಿ. ಯಾವುದೇ ಸಮುದಾಯವಾಗಲಿ ಇಡೀ ಮಾನವ ಸಾಮಾಜಕ್ಕೆ ತನ್ನದೇಯಾದ ಸಾಂಸ್ಕೃತಿಕ ಕೊಡುಗೆ ನೀಡಿರುತ್ತದೆ. ಅದರಂತೆ ಮಾಲ ಸಮುದಾಯ ಈ ನಮ್ಮ ಸಮಾಜಕ್ಕೆ ವಿಶಿಷ್ಟ ಕೊಡುಗೆ ನೀಡಿದೆ. ಸಮುದಾಯಗಳು ನಿಂತ ನೀರಿನಂತಿರದೆ ಸದಾ ಹರಿಯುವಂತೆ ತನ್ನೆಲ್ಲ ಬದಲಾವಣೆಗಳನ್ನು ಮುಖ್ಯವಾಹಿನಿಗೆ ತೊರಿಸುತ್ತಲೆ, ತಿಳಿಸುತ್ತಲೆ ಬಂದಿರುತ್ತವೆ. ಆದರೆ ಆಧುನಿಕ ಕಾಲಕ್ಕೆ ಹೋಲಿಸಿ ನೋಡಿದಾಗ ಆಧುನಿಕ ಪ್ರಭಾವ ದಟ್ಟವಾಗಿದ್ದರು ಸಹ ವಸಹತುಶಾಹಿಕರಣಕ್ಕೆ ಒಳಗಾಗದೆ ಇಂದು ಈ ಸಮುದಾಯ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಸದೃಢಗೊಳ್ಳದೆ ಒಂದು ನೆಲೆಯನ್ನು ಕಂಡುಕೋಳ್ಳುವಲ್ಲಿ ಯಶಸ್ವಿಯಾಗಿಲ್ಲ ಎಂದರೆ ತಪ್ಪಾಗಲಾರದು. ಭಿನ್ನಫಣ ಸಮುದಾಯಗಳ ನಡುವೆ ಬದುಕಿನ ಹಲವಾರು ವಿಧಿ-ವಿಧಾನಗಳ ನೂರೆಂಟು ಧಾರ್ಮಿಕ ಆಚರಣೆಗಳ ಕಾರಣಗಳಿಂದ ಜಗಳವಾಗುತ್ತಿದ್ದು ಹೀಗೆ ಬದುಕಿನ ನೂರೆಂಟು ಸಾಂಸ್ಕೃತಿಕ, ಧಾರ್ಮಿಕ ಆಚರಣೆಗಳ ಹಕ್ಕಿನ ವಿಚಾರಗಳಲ್ಲಿ ಮಾಡುವ ಮನಸ್ತಾಪಗಳೇ ತಿವ್ರ ವಾಗ್ವಾದಕ್ಕೆ ಎಡೆಮಾಡಿ ಹಲವಾರು ರೀತಿಯಾದಂತಹ ಸಮಸ್ಯೆಗಳು ಆಗುವದಕ್ಕೆ ಕಾರಣವಾಗಿವೆ. ಫಣಕಟ್ಟಿನ ನಿಜಮೂಲ ಹುಡುಕುವವರೆಗೆ ಈ ಫಣ ವ್ಯಾಜ್ಯಗಳ ವಿಚಾರಗಳು ಅದರ ಮೂಲದ್ದಲ್ಲವೆಂದು ಅದನ್ನು ದುರ್ಬಲಗೊಳಿಸಲೆಂದೇ ವೈಧಿಕ ಶಕ್ತಿಗಳು ಸನ್ನದುಗಳ ಮೂಲಕ ಹಾಕಿದ್ದವೆಂಬುದು ಅರಿವಾಗಬಲ್ಲ ಅಂಶ.

ಈ ಸದ್ಯದ ಹೆಚ್ಚು ಸಮರ್ಪಕ ಹಾಗೂ ಪರಿಸ್ಕೃತ ಎಡಗೈ-ಬಲಗೈಗಳ ಪಟ್ಟಿ ಹೀಗಿದೆ

೧೭ ಬಣದ ಬಲಗೈ ಪಟ್ಟಿ

೧) ಬಣಜಿಗ, ೨) ಒಕ್ಕಲಿಗ, ೩) ಗಾಣಿಗ, ೪) ರಂಗಾರೆ (ಬಣ್ಣ ಹಾಕುವವರು) ೫) ಲಾಡ (ಮಾರಾಠಿ ವ್ಯಾಪಾರಸ್ಥರು) ೬) ಗುಜರಾತಿ (ಗುಜರಾತಿ ವ್ಯಾಪಾರಸ್ಥರು) ೭) ಕಾಮಾಟಿ (ಕೂಲಿಗಾರರು) ೮) ಜೈನ ಅಥವಾ ಕೋಮಟಿ, ೯) ಕುರುಬ, ೧೦) ಕುಂಬಾರ, ೧೧) ಅಗಸ, ೧೨) ಪದ್ಮಸಾಲಿ, ೧೩) ನಾಯಿಂದ (ಕ್ಷೌರಿಕ ಜನಾಂಗ) ೧೪) ಉಪ್ಪಾರ, ೧೫) ಚಿತ್ರಗಾರ, ೧೬) ಗೊಲ್ಲ, ೧೭) ಹೊಲೆಯ.

೯ ಬಣದ ಎಡಗೈ ಪಟ್ಟಿ:

೧) ಪಂಚಾಳರು, ಅ) ಅಕ್ಕಸಾಲಿಗ (ವಿಶ್ವಕರ್ಮ ಆಚಾರಿಗಳು) ಬ) ಬಡಗಿ, ಕ) ಕಂಚುಗಾರ, ಡ) ಕಮ್ಮಾರ (ಮುಸ್ಲಿಮೇತರ ಬಯಲು ಕಂಬಾರರು ಸೇರುತ್ತಾರೆ) ಉ) ಕಲ್ಲುಟಿಗ (ಶಿಲ್ಪಿಗಳು).

೨) ನಗರ್ತಕರು (ಭೇರಿ) ೩) ಹೆಗ್ಗಣಿಗ (ಜ್ಯೋತಿನಗರ ಶೆಟ್ಟಿ) ೪) ದೇವಾಂಗ ೫) ಬೇಡ/ವಾಲ್ಮಿಕಿ ಕುಲಸ್ಥರು ೬) ಯಾಕುಲ/ಏಕಲಿಯವರು ೭) ಪಳ್ಳಿ/ತಿಂಗಳ/ಚಂದ್ರ ವಂಶದ ವಹ್ನಿ ಕುಲದವರು ೮) ಕೋಮಟಿ ೯) ಮಾದಿಗ (ಪಂಚ ಜಾಂಬುಕುಲಗಳು)

ಫಣ ಸಮಾಜವೇ ಬಲವಾಗಿರುವದರಿಂದ ನಿಖರವಾದ ಫಣ ಪಟ್ಟಿಯು ಅಲಭ್ಯವೇ ಆಗಿಬಿಟ್ಟಿದೆ. ಹೀಗಾಗಿ ಇದು ಫಣಕಟ್ಟ ವಿಂಗಡಣೆಯ ಒಂದು ಪ್ರದೇಶಕ್ಕೆ ಮಾತ್ರ ಅನ್ವಯಿಸಬಲ್ಲಂತಹ ಪಟ್ಟಿಯಾಗಿದ್ದು, ಈ ಪಟ್ಟಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸಗೊಳ್ಳುತ್ತದೆ. ಬಲಗೈ ಗುಂಪಿನಲ್ಲಿ ಜೈನ, ಕಾಮಾಟಿ, ಕೋಮಾಟಿ ರಂಗಾರೆ, ಲಾಡ, ಗುಜರಾತಿಗಳು ಬಂದಿರುವುದು ಕೊಂಚ ಅಸಮರ್ಪಕವೆನಿಸುವಂತಿದೆ. ಈ ಫಣಪಟ್ಟಿ ಧರ್ಮಾತೀತವಾಗಿದ್ದಾದರೆ ಬೌದ್ಧರು ಹಾಗೂ ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಆಜೀವಿತರು ತದನಂತರದಲ್ಲಿ ಬಂದು ಸೇರಿದ ಮುಸ್ಲೀಮರು, ಹೀಗೆ ಇನ್ನಿತರ ಧರ್ಮದವರು ಇರಬೇಕಿತ್ತಲ್ಲದೆ, ಯಾರಿಲ್ಲವೆಂದರು ತಮಿಳುನಾಡಿನಲ್ಲಿ ಜೈನರಷ್ಟೇ ಪ್ರಾಚೀನರಾಗಿದ್ದ ಬೌದ್ಧರಾದರೂ ಇರಲೇ ಬೇಕಿತ್ತು. ಈ ಪಟ್ಟಿಗಳಲ್ಲಿ ಬೌದ್ಧರಿಲ್ಲವಾದ್ದರಿಂದ ಜೈನರ ಸೇರ್ಪಡೆ ಕೂಡ ಅಸಹಜವಾಗಿಯೇ ಕಾಣಿಸುತ್ತದೆ. ನಂತರ ಕಾಮಾಟಿಗಳಿದ್ದು, ಕಾಮಾಟಿ ಎಂಬ ಜಾತಿಯೆಂದು ಇದ್ದಂತಿಲ್ಲ. ಅದು ವಿವಿಧ ಕೆಳಜಾತಿಯ ಕೂಲಿಗಳ ವರ್ಗವಾದ್ದರಿಂದ ಅದು ಜಾತಿ ವಿಂಗಡಣೆಗಳ ಪಟ್ಟಿಗಳಲ್ಲಿ ಸೇರಿರುವುದು ಪಕ್ಷಿಪ್ತವಾಗಿರಬೇಕು. ಇಲ್ಲವೆ ವೃತ್ತಿಗಳನ್ನಾಧರಿಸಿಯೇ ಈ ಫಣಪಟ್ಟಿ ರೂಪಿತಗೊಂಡಿದೆ ಒಂದು ಇದು ಜಾತಿ ಪದ್ಧತಿಗಿಂತಲು ಪೂರ್ವದ್ದು ಆಗಿರಬೇಕು. ಇಲ್ಲವೇ ಯಾವ ಜಾತಿಯ ಹೆಸರು ಇರಬಾರದಿತ್ತು. ಕೇವಲ ವೃತ್ತಿಗಳ ಪಟ್ಟಿಯೇ ಆಗಬೇಕಿತ್ತು. ಕೋಮಟಿಗಳಂತು ಮಾದಿಗರ ಅಥವಾ ಪಂಚಜಾಂಬು ಕುಲಗಳಾದ ಮಾದಿಗ, ಆದಿಜಾಂಬವ , ಮಾಸ್ತಿಕ, ದಕ್ಕಲ ಹಾಗೂ ಸಿಂದ್ ಮಾದಿಗರ ನೆಂಟರು, ರಕ್ತಸಂಬಂಧಿಗಳೋ ಅಥವಾ ಕುಲದ ಒಂದು ಒಳಪಂಗಡವೋ ಅವರದು ಎಂಬಂತೆಯೇ ಜಾಂಬು ಪುರಾಣಗಳಲ್ಲಿ ಚಿತ್ರಿತವಾಗಿರುವದರಿಂದ ಅವರು ಈ ಎರಡು ಫಣಕಟ್ಟಿನ ಎಡಗೈ ಪಟ್ಟಿಯಲ್ಲಿಯೇ ಬರಬೇಕು. ಉಳಿದಂತೆ ರಂಗಾರೆ, ಲಾಡ, ಗುಜರಾತಿಗಳಿಗೆ ಈ ಫಣಕಟ್ಟಿನ ಪದ್ಧತಿಯೇ ಅನ್ವಯಿಸುವದಿಲ್ಲವಾಗಿ ಅವರದು ಸೇರ್ಪಡೆ ಇರಬೇಕು ಅಥವಾ ಹಯವದನರಾವ್‌ಗೆ ಈ ಪಟ್ಟಿ ದೊರೆತ ಪ್ರದೇಶದಲ್ಲಿ ಅವರು ಇದ್ದಿರಲುಬಹುದಾಗಿ ಅವರ ಹೆಸರು ಒಂದೆರಡೆ ಶತಮಾನಗಳ ಹಿಂದೆಂದೋ ಆ ಪ್ರದೇಶದಲ್ಲಿಲ್ಲದ ಜಾತಿಗಳ ಬದಲಿಗೆ ಬಂದಿರಬೇಕು.

ದೇಶಭಕ್ತಿ ಎಂದು ಬಿರುದಾಂಕಿತವಾದ ಬಣಜಿಗರು (ತೆಲುಗು ಹಾಗೂ ಲಿಂಗಾಯತ ಬಣಜಿಗರಿಬ್ಬರೂ) ಹದಿನೆಂಟು ಜಾತಿಗಳ ಬಲಗೈನ ನಾಯಕರು ಪಂಚಾಳರು ಮತ್ತು ಕೆಲವಡೆ ಭೇರಿ, ನಗತರು ಒಂಬತ್ತು ಜಾತಿಗಳ ಎಡಗೈನ ನಾಯಕರು, ಬಲಗೈ ಪಂಗಡಗಳಲ್ಲಿ ಒಂದಾದ ಹೊಲೆಯ/ಮಾಲ (ಕರ್ನಾಟಕದಲ್ಲಿರುವ ಪರ್ವತ ಮಲ್ಲಯ್ಯ) ರು ಬಲಗೈ ಗುಂಪಿನ ಕುಲಚಿಹ್ನೆಗಳಾದ ಕತ್ತಿ, ಚಕ್ರ, ಕೋಲು ಇನ್ನಿತರ ವಸ್ತುಗಳನ್ನು ಹಿಡಿದುಕೊಂಡು ಮುಂತಾದ ಆಯಾ ಜಾತ್ರೆ , ಸಮಾರಂಭ, ಮದುವೆ ಮೆರವಣಿಗೆ ಮುಂತಾದಡೆಗಳಲ್ಲಿ ಮುಂಚೂಣಿಯಲ್ಲಿ ನಿಂತು ಆಟ ಆಡುತ್ತಾರೆ. ಎಡಗೈ ಗುಂಪಿನ ಕುಲಚಿಹ್ನೆಗಳನ್ನು ಹೋರುವವರು ಮಾದಿಗರ ಒಳಪಂಗಡದವರಾದ ಸಿಂದ್ ಮಾದಿಗರು.

ಈ ಎಡಗೈ ಬಲಗೈ ಎಂಬ ಜೋಡಿ ಪದದ ಪ್ರಸ್ತಾಪವಿಲ್ಲದೆ ಮಧ್ಯಕಾಲೀನ ದಕ್ಷಿಣ ಭಾರತದ ಚರಿತ್ರೆಯ ಅಪೂರ್ಣ ಎನ್ನುವಷ್ಟರ ಮಟ್ಟಿಗೆ ಇವುಗಳ ಪ್ರಾಮುಖ್ಯತೆ ಇದೆ.

ಎಡಗೈ-ಬಲಗೈ ಫಣಸಮರ ಚೋಳ ಚಕ್ರಾದಿಪತ್ಯದ ಕಾಲಕ್ಕೆ ಉತ್ಕರ್ಷವಸ್ಥೆ ತಲುಪಿತ್ತೆಂಬುದಕ್ಕೆ ಸಾಕಷ್ಟು ಚಾರಿತ್ರಿಕ ದಾಖಲೆಗಳಿದ್ದರೂ ಇದರ ಬೇರುಗಳು ಇನ್ನು ಆಳ ಎಂಬುದರಲ್ಲಿ ಅನುಮಾನವಿಲ್ಲ ಕ್ರಿ.ಶ ೪೯೫ ರ ಗಂಗರಾಜನಾದ ಕೊಂಗಣಿ ರಾಜನಿಗೆ ಸೇರಿದೆ ಎನ್ನುವ ತಾಮ್ರದ ಪದಕವೊಂದರಲ್ಲಿ ೧೮ ಜಾತಿಗಳ ಪ್ರಸ್ತಾಪವಿದೆ. ಅನೇಕ ಪ್ರಾಚೀನ ಸಾಹಿತ್ಯ ನಿರ್ವಿವಾದವಾಗಿ ಸಾಬಿತಾದಂತಾಯಿತು. ಆಗ ಇದಕ್ಕೂ ಹಿಂದೆ ಸರಿಯಲು ಸಾಧ್ಯವೇ ಎಂಬುದನ್ನು ಪರಿಶೀಲಿಸುವ ಈ ಗುಂಪುಗಳು (ಫಣ ಗುಂಪುಗಳು) ಜಾತಿ ಪದ್ಧತಿಗಿಂತಲೂ ಪ್ರಾಚೀನ ವ್ಯವಸ್ಥೆಯೇ ಆಗಿರಬೇಕು ಎಂದು ಸರ್ ಅಡ್ವರ್ಡ್‌ಗೈಟ್ ಸೂಚಿಸುತ್ತಾರೆ."[೩] ಗೈಟ್ ಮಾಹಾಶಯನ ಮಾತನ್ನು ನಾವು ಒಪ್ಪಬವುದಾದರೆ ಜಾತಿ ಪದ್ಧತಿಗಳು ಪೂರ್ವದ್ದಿರಬವುದಾದ ಫಣ ಸಮಾಜದ ವಿಂಗಡಣೆಯ ಮೂಲವನ್ನು ನಾವು ತಂತ್ರಪಂಥದಲ್ಲೆ ಹುಡುಕಬೇಕಾಗುತ್ತದೆ. ತಂತ್ರ ಪಂಥದಲ್ಲಿ ಎಡಗೈ-ಬಲಗೈ ಎಂಬ ಗುಂಪು ವಿಂಗಡಣೆಗಳುಂಟು. ಎಡಗೈನವರದ್ದು ಮಾಟ, ಮಂತ್ರ, ಬಲಿ, ರಕ್ತ, ನೈವೇಧ್ಯ, ಮಿಥುನದಂತಹ ತಿವ್ರ ಸ್ವರೂಪದ ಆಚರಣೆಗಳು ಇರುತ್ತವೆ. ಆದರೆ ಬಲಗೈನವರದ್ದು ಸೌಮ್ಯ ಸ್ವರೂಪದ ಆಚರಣೆ, ಸೌಮ್ಯ ಸ್ವರೂಪದ ಆರಾಧನೆ, ಪೂಜೆಗಳು, ಅದರಲ್ಲಿ ಆರಾಧನೆ, ಆರುತಿ, ಯಕ್ಷಿಣಿ, ಮೋಡಿಯಂತಹ ತಂತ್ರಗಾರಿಕೆಗಳುಂಟು. ಎಡ ಮತ್ತು ಬಲಗಳ ಶ್ರೇಷ್ಠತೆ ಕನಿಷ್ಠತೆಯ ವಿಂಗಡಣೆ ಇಲ್ಲಿಂದಲೆ ಹುಟ್ಟಿರಬಹುದು. ಯಾಕೆಂದರೆ ಜನರ ನಡುವೆ ಬಳಕೆಯಲ್ಲಿರುವ ಕಾಳಿ ಜಾತಿಗಳನ್ನು ಎಡಗೈ-ಬಲಗೈಗಳಲ್ಲಿ ತೂಗಿ ನೋಡಿದಳೆಂಬ ಕಲ್ಪನೆಯ ಹಿನ್ನಲೆಯನ್ನು ಕೂಡ ನಾವು ಈ ವಿಶ್ಲೇಷಣೆಯ ಆಧಾರದ ಮೇಲೆ ನೋಡಿದಾಗ ಬಹುಶಃ ಕಂಚಿಯ ಕಾಳಿಯನ್ನು ಅತಿ ವಾಮಾಚಾರದ ಮಾರ್ಗಗಳಿಂದ ಆರಾಧಿಸುತ್ತಿದ್ದ ತಂತ್ರ ಸಾಧಕರೆಲ್ಲರೂ ಎಡಗೈನವರೆಂದು ನಿರ್ಧರಿಸಿರಬೇಕು. ಅವರವರ ಆಚರಣೆಗಳ ಸ್ವರೂಪದಿಂದಾಗಿಯೇ ಎಡಗೈ ಎಂಬುದು ನಿಷ್ಕೃಷ್ಟವೆಂತಲೂ ಬಲಗೈ ಎಂಬುದು ಶ್ರೇಷ್ಟವೆಂತಲೂ ತರ್ಕಿಸಲು ಯಾರಿಗಾದರು ಸಾಧ್ಯವಾಗಿದ್ದಿರಬವುದು. ಎಡ-ಬಲಗಳ ಮೂಲ ಹೀಗೆ ತಂತ್ರ ಪಂಥದ ಮೂಲಕ ಕಂಚಿಯ ಕಾಳಿಯ ಬಳಿ ಕೊನೆಗೊಳ್ಳುವದರೊಂದಿಗೆ ಫಣ ಸಾಮಾಜದ ಕೇಂದ್ರ ಮೂಲವು ಕೂಡ ಕಂಚಿ ಎಂಬುದು ಸ್ಥಿರಪಟ್ಟಂತ್ತಾಗುತ್ತದೆ.

"ವೈಧಿಕ ಪ್ರಾರಂಭದಲ್ಲಿ ಬೌದ್ಧ, ಜೈನ, ಹಾಗೂ ಶೈವತಾಂತ್ರಿಕ ಪಂಥಗಳ ಜನಪ್ರೀಯತೆಯ ನಡುವೆ ಪುನರ್ ಪ್ರತಿಷ್ಠಾಪಿಸಲು ಅಂತಿಮ ಪ್ರಯತ್ನ ನಡೆಸಿ ಯಶಸ್ವಿಯಾದವರು ಶಂಕರಾಚಾರ್ಯರು ದ್ರಾವಿಡ ಸಂಸ್ಕೃತಿಯ ಹೃದಯ ಭಾಗದಂತಿದ್ದ ಕಂಚಿಗೆ ಲಗ್ಗೆ ಹಾಕದ ಹೊರತು ದಕ್ಷಿಣ ಭಾರತಗಳಲ್ಲಿ ಆರ್ಯಕರಣ ಅಸಾಧ್ಯವೆಂದು ಮನಗಂಡ ಶಂಕರಾಚಾರ್ಯರು ಕಂಚಿ ಕಾಳಿಯ ಉಗ್ರ ಶಾಕ್ತೇಯ ರೂಪವನ್ನು ಸೌಮ್ಯರೂಪದ ಕಾಮಾಕ್ಷಿಯಾಗಿಸಿ ತಂತ್ರ ಶೈಲಿಯ ವಾಮಾಚಾರಗಳಿಂದ ಮುಕ್ತವಾಗಿಸಿ ವೈಧಿಕ ಶೈಲಿಯನ್ನು ಪ್ರತಿಷ್ಠಾಪಿಸುವುದರ ಮೂಲಕ ದ್ರಾವಿಡ ಸಂಸ್ಕೃತಿಯ ಅವನತಿ ಶುರುವಾಗಿ ಬ್ರಾಹ್ಮಣ ಅಧಿಪತ್ಯಕ್ಕೆ ಅಡಿಗಲ್ಲು ಹಾಕಲಾಯಿತು. ಎರಡು ಫಣ ಗುಂಪುಗಳ ನಡುವೆ ದ್ವೇಷದ

ಅತಿಸುಲಭ ಬೀಜಗಳನ್ನು ಬಿತ್ತಿದ ಬ್ರಾಹ್ಮಣರು ಅವರ ಫಣ ಸಮರದ ಲಾಭವನ್ನು ಪಡೆದು ತಮ್ಮ ಮೇಲರಿಮೆಯನ್ನು ಎಲ್ಲ ಫಣಸ್ಥರ ಮೇಲೆಯೂ ಸ್ಥಾಪಿಸಿಕೊಂಡರು ಏಳನೆಯ ಶತಮಾನದಿಂದ ಹಿಡಿದು ಹತ್ತೊಂಬತ್ತನೆಯ ಶತಮಾನದವರೆಗೂ ಮುಂದುವರೆಯಿತು. ಒಂದು ಸಾವಿರ ವರ್ಷಗಳಿಗೂ ಹೆಚ್ಚು ಕಾಲದ ಬಡಿದಾಟಗಳಿಂದ ಹೈರಾಣಾಗಿ ಹೊದ ಎರಡು ಕಡೆಯ ಫಣಸ್ಥ ಗುಂಪುಗಳು ನೆಲ ಕಚ್ಚುವದರೊಂದಿಗೆ ಬ್ರಾಹ್ಮಣರದ ಅಧಿಪತ್ಯ ಸ್ಥಿರವಾಯಿತು. ಅದರ ನಡುವೆ ಬ್ರಾಹ್ಮಣೀಕರಣದ ಬಿಸಿಗೆ ಎಚ್ಚೆತ್ತುಕೊಂಡ ವಿಶ್ವಕರ್ಮ ಪಂಚಾಳರು ಹಾಗೂ ಇನ್ನಿತರ ಕೃಷಿ ವನಿಕವರ್ಗಗಳು ತಮ್ಮ ಕಸುಬುಗಳಿಂದಲೇ ಸಾರ್ವಜನಿಕವಾಗಿ ಮಧ್ಯಮ ಸ್ತರದ ಸ್ಥಾನವನ್ನು ಸುಭದ್ರಗೊಳಿಸಿಕೊಂಡರು. ಆರ್ಥಿಕವಾಗಿ ತಮ್ಮನ್ನು ಸಾಮಾಜಿಕ ಎನ್ನಗಲೇರಿಸಲಾಗದಂತಹ ವೃತ್ತಿಗಳನ್ನೆ ಆಶ್ರಯಿಸಿದ್ದ ಸಾಂಸ್ಕೃತಿಕವಾಗಿ ನಿಯಂತ್ರಣದ ಹೊಸ ಜಾತಿ ಪ್ರಧಾನ ವ್ಯವಸ್ಥೆಯಲ್ಲಿ ಫಣ ಲಾಂಛನಗಳನ್ನು ಹೊರುತ್ತಿದ್ದ ಹಿಂದುಳಿದ ಕುಲಗಳಡಿ ಕಾಲ ಹೊದಿಸಿದ ಅಪಮಾನದ ಮುಸುಗಳಲ್ಲಿ ಅತ್ಯಂತ ನಿರ್ಲಕ್ಷಿತ ಬಣಗಳಾಗಿ ಹೋದವು.

ಹೀಗೆ ಶತಮಾನಗಳ ಕಾಲ ದ್ರಾವಿದ ಸಮಾಜವನ್ನು ಹಿಂಡಿ ಹಿಪ್ಪೆ ಮಾಡಿದ ಫಣ ಸಮರ ಇಡೀ ದಕ್ಷಿಣ ಭಾರತದ ಜಾತಿ ಸಂಬಂಧಿಗಳಿಗೆ ಪುನರ್ ವ್ಯಾಖ್ಯಾನ ನೀಡಿತು. ಈ ಮರು ವ್ಯಾಖ್ಯಾನದಲ್ಲಿ ಆದ ಪಲ್ಲಟಗಳಿಂದ ಸಾಂಸ್ಕೃತಿಕ ಜವಾಬ್ದಾರಿಯನ್ನು ಹೊರುವ ಗೌರವ ಸ್ಥಾನಗಳೊಂದಿಗೆ ಮೂಲೆಗೆ ಒತ್ತರಿಸಲ್ಪಟ್ಟರು. ಫಣಕಟ್ಟಿನ ಪರಿಕಲ್ಪನೆಯಿಂದಲೇ ಪೂರ್ಣ ಹೊರಬಂದಿರುವ ಫಣಸ್ಥ ಇತರ ಕುಲಗಳು ತಮ್ಮ ನೆರೆಯ ಭಿನ್ನ ಫಣಗಳವರೊಂದಿಗು ಸೌಹಾರ್ದದಿಂದ ಇರುವಾಗ, ದಲಿತ ಕುಲಗಳು ಮಾತ್ರ ಇನ್ನು ಫಣಸ್ಮೃತಿಗಳನ್ನು ಉಳಿಸಿಕೊಂಡು ಭಿನ್ನ ಫಣಗಳಲ್ಲಿ ನಿಲ್ಲುವ ತನ್ನ ಎಲ್ಲಾ ಒಳಪಂಡಗಳೊಂದಿಗೆ ಹೋರಾಟ ಅನಿವಾರ್ಯ ಮತ್ತು ಪಂಥದಲ್ಲಿ ಫಣ ಭಿನ್ನತೆಯನ್ನು ನೆನಪಿಸಿಕೊಳ್ಳುತ್ತಾ ಐಕ್ಯತೆಯನ್ನು ಸಾಧಿಸುವಲ್ಲಿ ತೊಳಲಾಡುತ್ತಿದೆ, ಆದರೆ ಎದ್ದು ನಿಲ್ಲಲಾರದೆ ಕುಸಿದು ಬಿಳುತ್ತಲೆ ಇದ್ದಾರೆ ಇಂತಹ ಸಾಮಾಜಿಕ ಹಿನ್ನಲೆಯಲ್ಲಿ ಕರ್ನಾಟಕದ ಎಲ್ಲಾ ಮಾಲ (ಪರ್ವತ ಮಲ್ಲಯ್ಯ) ಸಮುದಾಯಗಳಿಗೆ ತಮಗೆ ಒದಗಿದ ದುರ್ಬಲ ಸ್ಥಿತಿಯೇ ನಿಂತ ನೀರಿನಂತೆ ಕೊಳೆಯತೊಡಗಿದೆ. ಹಾಗೊಂದು ವೇಳೆ ಫಣ ಸಮಾಜ ವೈಧಿಕ ಕುತಂತ್ರಗಳಿಗೆ ಬಲಿಯಾಗಿ ಕ್ಷುಲ್ಲಕ ಕೆಲಸಗಳಲ್ಲಿ ನಿರತರಾಗದೆ ಪಣಕಟ್ಟಿನ ಪ್ರಾಚೀನ ಪರಿಕಲ್ಪನೆಯನ್ನು ಉಳಿಸಿಕೊಂಡು ಫಣ ಐಕ್ಯತೆಯನ್ನು ಸಾಧಿಸಿಕೊಂಡಿದ್ದರೆ ಅಸ್ಪೃಶ್ಯ ಕುಲಗಳಿಗೆ ಇವತ್ತಿನಷ್ಟರ ದುರ್ಬಲ ಸ್ಥಿತಿ ಒದಗಿ ಬರುತ್ತಿರುತ್ತಿರಲಿಲ್ಲ ಎನಿಸುತ್ತದೆ. ದಕ್ಷಿಣ ಭಾರತದಲ್ಲಿ ಫಣ ವೈಷಮ್ಯಗಳ ಮೂಲಕ ದುಡಿಮೆಯ ದ್ರಾವಿಡ ವರ್ಗದ ಸಂಸ್ಕೃತಿಯನ್ನು ಧೂಳಿಪಟ ಮಾಡಿ, ಆ ಇಡೀ ಜನವರ್ಗದ ಮೇಲೆ ವೈಧಿಕ ಶಕ್ತಿಗಳು ಪ್ರಾಬಲ್ಯ ಸಂಪಾದಿಸಿದಂತೆ ಉತ್ತರದಲ್ಲಿ ಯಾವ ಪರಿಕಲ್ಪನೆ ಅಥವಾ ಅಂತ ಕೆಳಜಾತಿಗಳ ನಿರ್ಣಾಮದ ಅಸ್ತ್ರವಾಗಿ ವೈಧಿಕರಿಂದ ಪ್ರಯೋಗಿಸಲ್ಪಟ್ಟಿತ್ತು ಎಂಬುದು ಪ್ರತ್ಯೇಕವಾದ ಗಂಭೀರ ಅಧ್ಯಯನದ ವಸ್ತುವಾದ್ದರಿಂದ ಅದನ್ನಿಲ್ಲಿ ಚರ್ಚೆಗೆ ಎತ್ತಿಕೊಳ್ಳುತ್ತಿಲ್ಲ. ಆದರೆ ಒಂದಂತೂ ಸ್ಪಷ್ಟ ದಕ್ಷಿಣದಲ್ಲಿ ಫಣ ಕಲಹಗಳನ್ನು ಹಚ್ಚಿಯೇ ವೈಧಿಕಶಾಹಿಗಳು ಕೆಳ ಜಾತಿಗಳ ಸರ್ವನಾಶವನ್ನು ಪರಸ್ಪರದಿಂದಲೇ ಮಾಡಿಸಿ ಅದರ ಸಾಮಾಜಿಕ ಲಾಭಗಳನ್ನು ತಾವು ದಕ್ಕಿಸಿಕೊಂಡರು ಜೊತೆಗೆ ಫಣ ಸಮಾಜದಲ್ಲಿದ್ದ ಉಳಿದ ಸದಸ್ಯ ಜಾತಿ ಸಮುದಾಯಗಳು ಅದರಿಂದ ದೂರ

ಸರಿದರು ಅಸ್ಪೃಶ್ಯ ಕುಲಗಳು ಮಾತ್ರ ಅದರ ಲಾಭಗಳಿಗೆ ಹೊರತಾಗಿ ನಷ್ಟಗಳ ವಿಚಾರ ವ್ಯವಹಾರಗಳಿಗೆ ಅಂಟಿಕೊಂಡಿರುವುದು ಅವರ ದುರಂತವನ್ನು ದುಪ್ಪಟ್ಟುಗೊಳಿಸಿತು. ಇಂದಿಗೂ ಹಿಂದುಳಿದ ಸಮುದಾಯಗಳೆಲ್ಲದರ ಸ್ಥಿತಿಗತಿಗಳಿಗೆ ಪ್ರತ್ಯಕ್ಷವೋ ಪರೋಕ್ಷವೋ ಫಣಕಟ್ಟು ವ್ಯವಸ್ಥೆಯ ಕೊಡುಗೆಗಳೇ ಬಹುತೇಕ ಕಾರಣವಾಗಿವೆ. ಇಂದಿನ ಮಾಲ (ಪರ್ವತ ಮಲ್ಲಯ್ಯ)ಸಮುದಾಯದ ಸಾಮಾಜಿಕತೆಯ ಸ್ವರೂಪವನ್ನು ನಿರ್ಧರಿಸುವಲ್ಲಿ ಅದೇ ಫಣಕಟ್ಟಿನ ಸಾಮಾಜಿಕ ರಚನೆಯ ದೋಷಗಳೋ, ದೌರ್ಬಲ್ಯಗಳೋ, ಸೋಲು-ವೈಫಲ್ಯಗಳೂ ಖಂಡಿತ ಕಾರಣೀಭೂತವಾಗಿವೆ.

ಒಟ್ಟಾರೆ ಮಾಲ ಸಮುದಾಯದ ಇತಿಹಾಸವನ್ನು ಗಮನಿಸಿದಾಗ ಭಾರತೀಯ ಸಂಸ್ಕೃತಿ ಸಮಾಜದಲ್ಲಿ / ಕರ್ನಾಟಕದ ಸಂಸ್ಕೃತಿಯ ಪರಿಯಲ್ಲಿ ಹೇಗೆ ತನ್ನ ವಿಕಸನವನ್ನು ಹೊಂದುತ್ತಾ ಬಂದಿದೆ ಎಂಬುದು ತಿಳಿದು ಬರುತ್ತದೆ. ಅಷ್ಟೇ ಅಲ್ಲ ಮಾಲ ಸಮುದಾಯದವರು ಶ್ರೇಣಿಕೃತ ಸಮಾಜದಲ್ಲಿ ತಮ್ಮ ಮೌಲ್ಯವನ್ನು, ಸಂಸ್ಕೃತಿಯನ್ನು ಇಂದಿಗೂ ಕಾಪಾಡಿಕೊಂಡು ಉಳಿಸಿಕೊಂಡು ಬರುತ್ತಿದ್ದಾರೆ.

ನಮ್ಮ ಸಮಾಜವು ವಿವಿಧ ಭಾಷೆ, ಸಂಸ್ಕೃತಿಗಳಿಂದ ಕೂಡಿರುವಂತೆ ಸಾವಿರಾರು ಜಾತಿಗಳನ್ನೂ ತನ್ನ ಒಡಲೊಳಗೆ ಅಡಗಿಸಿ ಇರಿಸಿಕೊಂಡಿದೆ. ಇಲ್ಲಿ ಜಾತಿ ಜಾತಿಗಳ ಮಧ್ಯದಲ್ಲಿ ಪರಸ್ಪರ ಸಂಬಂಧವಿದೆ ಎಂದು ಮೇಲ್ನೋಟಕ್ಕೆ ಎನಿಸುವುದಾದರೂ ಅದು ಹುಸಿ ಎಂಬುದು ಆ ಸಮಾಜದ ಒಳಹೊಕ್ಕು ನೋಡಿದಾಗಲೇ ಈ ಸಮಾಜವು ಏಣಿಶ್ರೇಣಿಗಳಿಂದ ಕೂಡಿದೆ ಎಂದು ತಿಳಿಯುವುದು. ಪ್ರಜಾಪ್ರಭುತ್ವವಾದಿ ಜಾತ್ಯಾತೀತ ಭಾರತ ಎಂದು ಹೇಳುವುದು ತುಂಬಾ ಹುಸಿ ಎನಿಸುವುದು. ಪ್ರಜಾಪ್ರಭುತ್ವದಲ್ಲಿ ಸಮಾನತೆ ಎಂಬ ಪದಕ್ಕೆ ಅರ್ಥ ಬರಬೇಕಾದರೆ ಮನುಷ್ಯ ಮನುಷ್ಯನೊಳಗಿರುವ ತಾರತಮ್ಯಗಳು ತೊಲಗಬೇಕು. ಉದಾಹರಣೆಗೆ ಜಾತಿ ಅಸಮತೋಲನವೆಂಬುದು ನಿರ್ಮೂಲನವಾಗಬೇಕಾದ ಅಗತ್ಯವಿದೆ. ಕೆಲವು ಪಂಗಡಗಳಾಗಿ ಬದುಕುತ್ತಿದ್ದ ಆದಿಮಾನವನು ತನ್ನ ಅವಿಷ್ಕಾರದಿಂದ ಬೆಂಕಿಯನ್ನು ಕಂಡುಕೊಂಡ, ಬೆಂಕಿಯನಂತರ ಆಹಾರವನ್ನು ಬೇಯಿಸಿಕೊಂಡು ತಿನ್ನುವ ಪರಿಪಾಠ ರೂಢಿಗೆ ಬಂದಿತು. ತರುವಾಯ ಪಶುಪಾಲನೆ, ಕೃಷಿ, ಕೃಷಿ ಉಪಕರಣಗಳ ಅವಿಷ್ಕಾರ ಉಂಟಾಯಿತು. ಕೃಷಿಯನ್ನು ಮಾಡುವ ಪಂಗಡ ಒಂದು ಕಡೆಯಾದರೆ ಕೃಷಿಗೆ ಅವಶ್ಯವಾದ ಪರಿಕರಗಳನ್ನು ತಯಾರಿಸಿಕೊಡುವ ಪಂಗಡ ಮತ್ತೊಂದು ಕಡೆಗಾಯಿತು. ಕೃಷಿ ಪರಂಪರೆಯನ್ನು ಅನುಸರಿಸಿದ ಪಂಗಡ ಬಲಗೈ ಫಣವಾದರೆ ಕೃಷಿಗೆ ಅವಶ್ಯವಾದ ಪರಿಕರಗಳನ್ನು ತಯಾರಿಸಿಕೊಡುವ ಪಂಗಡವು ಎಡಗೈ ಫಣಕ್ಕೆ ಸೇರಿತು. ಎಡಗೈ ಫಣವು ಕೃಷಿಯನ್ನು ಅವಲಂಭಿಸದೆ ತನ್ನ ಕೈಕಸುಬನ್ನು ಅವಲಂಭಿಸಿದರೆ ಬಲಗೈ ಫಣದ ಪಂಗಡವು ಕೃಷಿಯನ್ನು ಆಧರಿಸಿಯೇ ಜೀವಿಸಿದವು. ಮೊದಲಿಗೆ ಎಡಗೈ ಬಲಗೈ ಪಂಗಡಗಳೆಂದು ಗುರುತಿಸಿಕೊಂಡ ಪಂಗಡಗಳೇ ತರುವಾಯ ತಮ್ಮ ವೃತ್ತಿಗಳಿಗನುಗುಣವಾಗಿ ಜಾತಿಗಳಾಗಿ ವಿಂಗಡಿಸಲ್ಪಟ್ಟವು. ಎಡಗೈ ಫಣಕ್ಕೆ ಮಾದಿಗ ಮೂಲ ಸಮುದಾಯವೆಂದೂ, ಬಲಗೈ ಫಣಕ್ಕೆ ಹೊಲೆಯ ಮೂಲ ಸಮುದಾಯವೆಂದು ವಿದ್ವಾಂಸರು ಗುರುತಿಸಿರುವರು. ಈ ಎಡಗೈ ಬಲಗೈ ಸಮುದಾಯಗಳು ಪೂರ್ವದಲ್ಲಿ ಮೇಲ್ತುದಿಯಲ್ಲಿದ್ದು ತರುವಾಯ ಜಾತಿಗಳ ಹುಟ್ಟುವಿಕೆಯ ಮೂಲಕ ಕೆಳ ಜಾರಿ ಪ್ರಸ್ತುತ ತಳಸಮುದಾಯಗಳಾಗಿ ರೂಪಾಂತರಗೊಂಡವು. ಈ ರೀತಿ ರೂಪಾಂತರಗೊಂಡ ತಳ ಸಮುದಾಯಗಳಲ್ಲಿಯೂ ನೂರಾರು ವಿಂಗಡನೆಗಳಾಗಿ ಹಲವು ಟಿಸಿಲುಗಳಾಗಿ ಒಡೆದುಹೋಗಿ

ನೂರಾರು ಜಾತಿಗಳು ರೂಪುಗೊಂಡವು. ಹೀಗೆ ಸಾಮಾಜಿಕ ವ್ಯವಸ್ಥೆಯು ನಿರಂತರವಾಗಿ ಪರಿವರ್ತನೆಯನ್ನು ಹೊಂದುತ್ತ ಹೊಂದುತ್ತಾ ಇವತ್ತಿನ ಈ ಸ್ಥಿತಿಗೆ ಕಾರಣೀಭೂತವಾಗಿ ನಿಂತಿದೆ. ನಿರಂತರವಾಗಿ ಬದಲಾಗುತ್ತಾ ಸಾಗುವ ಜನರ ಮನೋಭಿಲಾಷೆಗಳಿಗೆ ತಕ್ಕಂತೆ ಆ ಸಾಮಾಜಿಕ ಕಟ್ಟುಪಾಡುಗಳು, ವಿಧಿ-ವಿಧಾನಗಳು ಸಹ ಹೊಸ ರೂಪವನ್ನು ಪಡೆಯುತ್ತಾ ಸಾಗಿದವು. ಈ ರೀತಿ ರೂಪುಗೊಂಡ ತಳಸಮುದಾಯಗಳನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ. ಇದರಲ್ಲಿ ಒಂದು ಪರಿಶಿಷ್ಟ ಜಾತಿಗಳೆಂದೂ, ಎರಡು ಪರಿಶಿಷ್ಟ ಪಂಗಡಗಳೆಂದು ಗುರುತಿಸಲಾಗಿದೆ. ಈ ಎರಡರ ಹೊರತಾಗಿ ಇನ್ನುಳಿದ ಸಮುದಾಯಗಳಲ್ಲಿ ಹಿಂದುಳಿದ ಜಾತಿ, ವರ್ಗಗಳೆಂದೂ, ಧಾರ್ಮಿಕ ಅಲ್ಪಸಂಖ್ಯಾತರೆಂದೂ, ಸಾಮಾನ್ಯ ಜಾತಿಗಳೆಂದು ಗುರುತಿಸಲಾಗಿದೆ. ಪ್ರಸ್ತುತ ಇಲ್ಲಿ ಪರಿಶಿಷ್ಟ ಜಾತಿಯನ್ನೇ ನೋಡುವುದಾದರೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅನುಸೂಚಿತ (ಆದೇಶ; ೧೯೭೬ರ (ತಿದ್ದುಪಡಿ) ಕಾಯ್ದೆಯ ಪ್ರಕಾರ ಕರ್ನಾಟಕದಲ್ಲಿ ಅನುಸೂಚಿತ ಪರಿಶಿಷ್ಟ ಜಾತಿಗಳಲ್ಲಿ ೧೦೧ ಸಮುದಾಯಗಳಿವೆ. ಕರ್ನಾಟಕದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಇಲ್ಲಿರುವ ಪರಿಶಿಷ್ಟ ಜಾತಿಗಳ ಒಟ್ಟು ಪ್ರಮಾಣ ಶೇಕಡ ೧೭.೨೯ರಷ್ಟಿದೆ. ಈ ಸಮುದಾಯಗಳಲ್ಲಿ ಕರ್ನಾಟಕ ಮೂಲದ ಕೆಲವು ಸಮುದಾಯಗಳು ಇವೆ. ಅದೇ ರೀತಿಯಲ್ಲಿ ಅನ್ಯ ರಾಜ್ಯಗಳಿಂದ ವಲಸೆ ಬಂದು ಇಲ್ಲಿಯೇ ನೆಲೆಕಂಡ ಕೆಲವು ಪರಿಶಿಷ್ಟ ಜಾತಿ, ಸಮುದಾಯಗಳೂ ಇವೆ. ಅಂತಹ ಸಮುದಾಯಗಳಲ್ಲಿ ಮಾಲ ಸಮುದಾಯವೂ ಒಂದು. ಮಾಲ ಸಮುದಾಯವು ಮೂಲತಃ ಆಂಧ್ರಪ್ರದೇಶದಲ್ಲಿ ಕಂಡುಬರುವ ಅಸ್ಪೃಶ್ಯ ಸಮುದಾಯಗಳಲ್ಲೊಂದು. ಬಲಗೈ ಫಣ ಸಂಸ್ಕೃತಿಗೆ ಸೇರಿದ ಈ ಸಮುದಾಯವು ಪರಿಯಾ ಸಮುದಾಯಕ್ಕೆ ಹತ್ತಿರವಾದ ಸಮುದಾಯವೆಂದು ವಿದ್ವಾಂಸರು ಗುರುತಿಸಿರುವರು. ಕರ್ನಾಟಕದ ಹೊಲಯ ಅಥವಾ ಚಲವಾದಿ ಸಮುದಾಯಕ್ಕೆ ತೀರ ಹತ್ತಿರದ ಸಮುದಾಯವಿದು. ಮಾಲ ಎಂದರೆ ಭೂಮಿಯ ಮಕ್ಕಳು ಎಂದರ್ಥ ಎಂದು ಕೆಲವರು ಹೇಳಿದರೆ ಇನ್ನೂ ಕೆಲವರು ಪರ್ವತ ಪ್ರದೇಶದಲ್ಲಿ ವಾಸಿಸುವವರು ಎಂದು ಹೇಳಲಾಗುತ್ತದೆ. ಪರಿಶಿಷ್ಟ ಜಾತಿಗಳ ಅನುಸೂಚಿತ ಪಟ್ಟಿಯಲ್ಲಿ ಕ್ರಮಸಂಖ್ಯೆ ೦೬೫ ರಲ್ಲಿ ಮಾಲ (Mala) ಸಮುದಾಯವಿದೆ. ಆಂಧ್ರದಲ್ಲಿ ಮುಂಚೂಣಿಯಲ್ಲಿರುವ ಸಮುದಾಯವಾಗಿ ಮಾಲ ಸಮುದಾಯವು ಗುರುತಿಸಲ್ಪಟ್ಟರೂ ಕರ್ನಾಟಕದಲ್ಲಿ ಅಲ್ಪಜನಸಂಖ್ಯಾ ಸಮುದಾಯವಾಗಿ ಗುರುತಿಸಲ್ಪಟ್ಟಿದೆ. ಕರ್ನಾಟಕದ ೨೦೧೧ರ ಜನಗಣತಿಯ ಪ್ರಕಾರ ಮಾಲ ಹೆಸರಿನಲ್ಲಿ ಗುರುತಿಸಲ್ಪಟ್ಟ ಜನಸಮೂಹದ ಒಟ್ಟು ಜನಸಂಖ್ಯೆಯು ೨೦,೦೧೬ ಇದೆ. ಆದರೆ ಇಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡವರ ಜನಸಂಖ್ಯೆಯು ತುಂಬಾ ಕಡಿಮೆ (೧,೬೪೧) ಇದೆ. ಇದಕ್ಕೆ ಕಾರಣವಿಷ್ಟೆ. ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ನೂರಾರು ಜಾತಿಗಳು ಹೇಗಿವೆಯೋ ಅದೇ ರೀತಿಯಾಗಿ ಮಾಲ ಸಮುದಾಯದ ಒಳಗೂ ಹಲವು ಒಳಪಂಗಡಗಳಿವೆ. ನೇಕಾರಿಕೆ, ಕೃಷಿ ಕೂಲಿ, ಸೈನ್ಯದೊಳಗಿನ ಸೇವಕರು ಹೀಗೆ ಅವರ ವೃತ್ತಿಗಳ ಆಧಾರದ ಮೇಲೆ ಆ ಒಳಪಂಗಡಗಳು ವಿಭಾಗಿಸಲ್ಪಟ್ಟಿವೆ. ಈ ಒಳಪಂಗಡಗಳು ಮಾಲ ಎಂಬ ಹೆಸರಿನಿಂದ ತಮ್ಮನ್ನು ಗುರುತಿಸಿಕೊಂಡರೂ ಪರಸ್ಪರ ರಕ್ತಸಂಬಂಧವನ್ನು ಬೆಸೆದುಕೊಳ್ಳುತ್ತಿಲ್ಲ. ಉದಾಹರಣೆಗೆ ಕರ್ನಾಟಕದಲ್ಲಿ ವಿಶ್ವಕರ್ಮ ಎಂದು ಹೇಳಿಕೊಳ್ಳುವ ಸಮುದಾಯವಿದೆ. ತಮ್ಮ ತಮ್ಮ ಜಾತಿ ಕಾಲಂಮಿನಲ್ಲಿ ವಿಶ್ವಕರ್ಮ ಎಂದೂ ಬರೆದುಕೊಳ್ಳುವರು. ಆದರೆ ಕುಶಲಗಾರಿಕೆಯಿಂದ

ಕಮ್ಮಾರಿಕೆ, ಬಡಿಗೆತನ, ಅಕ್ಕಸಾಲಿಕೆ, ಶಿಲ್ಪಿ, ಕಂಚುಗಾರಿಕೆ ವೃತ್ತಿಗಳನ್ನು ಅವಲಂಭಿಸಿದ ಐದು ಪಂಗಡಗಳು ವಿಶ್ವಕರ್ಮ ಸಮುದಾಯದೊಳಗಿವೆ. ಮೇಲ್ನೋಟಕ್ಕೆ ವಿಶ್ವಕರ್ಮ ಎಂದು ಬರೆದುಕೊಂಡರೂ ಈ ಐದು ಪಂಗಡಗಳು ಪರಸ್ಪರ ರಕ್ತಸಂಬಂಧವನ್ನು ಬೆಸೆದುಕೊಳ್ಳುವುದಿಲ್ಲ. ಇದೇ ಮಾದರಿಯ ಸಂರಚನೆಯನ್ನು ಮಾಲ ಸಮುದಾಯವೂ ಹೊಂದಿದೆ. ಪ್ರಸ್ತುತ ಇಲ್ಲಿ ಅಲೆಮಾರಿಗಳಾಗಿ ರೂಪಾಂತರಗೊಂಡ, ಸ್ಥಳೀಯರಿಂದ ಪರ್ವತಮಲ್ಲಯ್ಯ ಎಂದು ಕರೆಯಲ್ಪಡುವ ಮಾಲ ಸಮುದಾಯದವರನ್ನು ಮಾತ್ರ ಕೇಂದ್ರಿಕರಿಸಿಕೊಂಡು ಅಧ್ಯಯನವನ್ನು ಮಾಡಲಾಗಿದೆ.

೧.೨ ಇಲ್ಲಿಯವರೆಗೂ ನಡೆದ ಅಧ್ಯಯನಗಳು

ಈ ಹಿಂದೆ ಭಾರತಕ್ಕೆ ನಾನಾ ಉದ್ದೇಶಗಳಿಗಾಗಿ ಬಂದ ವಿದೇಶಿಯರು ಇಲ್ಲಿಯ ಜನಜೀವನ, ಬದುಕಿನ ವೈವಿಧ್ಯತೆಯ ಕುರಿತು ಕುತೂಹಲಿಗಳಾಗಿದ್ದರು. ಅದರಲ್ಲೂ ಬುಡಕಟ್ಟು ಸಮುದಾಯಗಳ ಕುರಿತು ಮಾಹಿತಿ ಕ್ರೋಢೀಕರಿಸಿ ಕೃತಿಯ ರೂಪದಲ್ಲಿ ದಾಖಲೀಕರಿಸುವ ಪ್ರಯತ್ನಗಳು ನಡೆದವು.

"ಹಯವದನರಾವ್ ಅವರು, *'ದ ಮೈಸೂರು ಟ್ರೈಬ್ಸ ಮತ್ತು ಕ್ಯಾಸ್ಟ್'* (೧೯೦೧)[೪] ಕೃತಿಯಲ್ಲಿ ಹೊಲೆಯ ಹಾಗೂ ಮಾದಿಗ ಸಮುದಾಯಗಳ ಕುರಿತು ವಿವರಣೆ ಸಿಗುತ್ತದೆ. ಹೊಲೆ ಮಾದಿಗರ ಹುಟ್ಟಿನ ಬಗೆಗಿನ ಕತೆಯನ್ನು ಹೇಳಲಾಗಿದೆ.

"ಅಂತಹ ಪ್ರಯತ್ನಗಳಲ್ಲಿ ದಕ್ಷಿಣ ಭಾರತದ ಜಾತಿ ಬುಡಕಟ್ಟುಗಳ ಕುರಿತು ವಿಸ್ತೃತ ಮಾಹಿತಿಯನ್ನು ಸ್ಥಳೀಯರ ಸಹಾಯದಿಂದ ಕ್ರೋಢೀಕರಿಸಿದ ಮಹನೀಯರಲ್ಲಿ ಎಡ್ಗರ್ ಥರ್ಸ್ಟನ್ ಮೊದಲಿಗರೆಂದರೆ ತಪ್ಪಾಗಲಾರದು. ಅವರ ಕಾಸ್ಟ್ ಅಂಡ್ ಟ್ರೈಬ್ಸ್ ಇನ್ ಸದರ್ನ್ ಇಂಡಿಯಾ (೧೯೦೯)[೫] ಜಾತಿ, ಬುಡಕಟ್ಟುಗಳ ಕುರಿತು ಮಾಹಿತಿ ನೀಡುವ ಪ್ರಮುಖ ಕೃತಿಯಾಗಿದೆ. ಸುಮಾರು ೮ ಸಂಪುಟಗಳಲ್ಲಿ ಈ ಕೃತಿಯು ಬೆಳಕು ಕಂಡಿತು. ಇಂದಿಗೂ ಕುಲಶಾಸ್ತ್ರೀಯ ಅಧ್ಯಯನಕಾರರು ಥರ್ಸ್ಟನ್ ಅವರ ಕೃತಿಯನ್ನು ನೋಡಿಯೇ ಮುಂದಿನ ಅಧ್ಯಯನಕ್ಕೆ ಹೆಜ್ಜೆ ಇಡುವ ಸ್ಥಿತಿ ಇದೆ. ಈ ಕೃತಿಯಲ್ಲಿ ಮಾಲ ಸಮುದಾಯದ ಕುರಿತು ಮಾಹಿತಿ ಇದೆ. ಆಂಧ್ರಪ್ರದೇಶದೊಳಗಿನ ಮಾಲ ಸಮುದಾಯ, ಅದರ ಒಳಪಂಗಡಗಳು, ಬೆಡಗು, ಆಚರಣೆಗಳ ಕುರಿತು ವಿವರಿಸಲಾಗಿದೆ. ಮಾಲ ಸಮುದಾಯವು ಅಸ್ಪೃಶ್ಯ ಬಲಗೈ ಜಾತಿಗಳಲ್ಲಿ ಒಂದಾಗಿದ್ದು, ಅದು ತಮಿಳ್ನಾಡಿನ ಪರಿಯಾ ಸಮುದಾಯಕ್ಕೆ ಹತ್ತಿರದ ಸಮುದಾಯವೆಂದು ತಿಳಿಸಿರುವರು. ಮತ್ತು ಹೊಲ –ಭೂಮಿ ಮಣ್ಣು ಎಂಬುವದರ ದ್ಯೂತಕವಾಗಿ ಇವರೆ ಈ ನೆಲದ ಒಡೆಯರಾಗಿದ್ದರಲ್ಲದೇ ಹೊಲೆಯರೆ ಹಳ್ಳಿಗಳನ್ನು ಸ್ಥಾಪಿಸಿದವರಾಗಿದ್ದರು ಎಂಬ ವಿಚಾರವನ್ನು ಹೆಳಿದ್ದಾರೆ. ಹಾಗೆಯೇ ಊರಿನ ಸುಂಕಲಮ್ಮ, ಮಾರಮ್ಮ ಇತ್ಯಾದಿ ಸ್ತ್ರೀದೈವಗಳ ಆಚರಣೆಗಳಲ್ಲಿ ಮಾಲ ಸಮುದಾಯದ ಪಾತ್ರವೇನು ಎಂಬುದನ್ನೂ ಸ್ಥೂಲವಾಗಿ ತಿಳಿಸಿರುವರು." ಈ ಒಂದು ಕೃತಿಯಲ್ಲಿ ಮಾಲ ಸಮುದಾಯದವರ ಕುಲ, ಬಳಿ, ಅವರ ಬೆಡಗುಗಳ ಬಗ್ಗೆ, ಅವರ ದೈವಗಳ ಬಗ್ಗೆ, ಮೂಲತಃ ಇವರು ಕೃಷಿಕರೂ ಅಥವಾ ಪಶುಪಾಲಕರೂ ಅಥವಾ ಅಲೆಮಾರಿಗಳೂ ಎಂದು ತಿಳಿಯುವಲ್ಲಿ ಈ ಕೃತಿ ಪ್ರಸ್ತುತ ಈ ಅಧ್ಯಯನಕ್ಕೆ ಉಪಯುಕ್ತ ಆಕರವಾಗಿದೆ.

"SIRAJ UL HASSN (1920)[6] *CASTES AND TRIBES OF H E H THE NIZAM'S DOMINATIONS* ಮಾಲ ಸಮುದಾಯದ ವ್ಯತ್ಪತ್ತಿ ಕುರಿತು, ಅವರ ವೃತ್ತಿ ಕುರಿತು

ವಿವರಿಸಿದ್ದಾರೆ. ಮಾಲ ಸಮುದಾಯದ ಮೂವತ್ತೆಳು ಬೆಡಗುಗಳನ್ನು ವಿವರಿಸಿದ್ದಾರೆ. ಮತ್ತು ಮಾಲ ಸಮುದಾಯದ ವಿವಾಹ ಪದ್ಧತಿಯ ವಿಧಿ-ವಿಧಾನ ಮತ್ತು ವಿವಾಹದ ಕಾರ್ಯಕ್ರಮಗಳನ್ನು ಕುರಿತು ವಿವರವಾಗಿ ವಿವರಿಸಿದ್ದಾರೆ. ಇವರ ಸಾಮಾಜೀಕ ಸ್ಥಾನಮಾನದ ಬಗ್ಗೆ ವಿವರಿಸಿದ್ದಾರೆ ಅಂದರೆ, ಹಿಂದು ಸಮಾಜದಲ್ಲಿ ಇವರಿಗೆ ಅತ್ಯಂತ ಕೆಳಮಟ್ಟದ ಸ್ಥಾನಮಾನವನ್ನು ನೀಡಿದ್ದು ಹಳ್ಳಿಗಳಲ್ಲಿ ಇವರನ್ನು ಯಾರು ತಾಗಿಸಿಕೊಳ್ಳುವದಿಲ್ಲ, ಇವರ ಬಟ್ಟೆಗಳನ್ನು ಯಾರು ಮುಟ್ಟುವದಿಲ್ಲ ಮತ್ತು ಯಾರ ಬಟ್ಟೆಗಳನ್ನು ಇವರು ಮುಟ್ಟುವಂತಿಲ್ಲ, ಇವರಿಗಾಗಿ ಪ್ರತ್ಯೇಕ ಕುಡಿಯುವ ನೀರಿನ ಹೊಂಡಗಳನ್ನು ನೀಡಿರುತ್ತಾರೆ, ಕೆರೆ ಭಾವಿಗಳಲ್ಲಿ ಇವರು ನೀರನ್ನು ತಗೆದುಕೊಳ್ಳುವಂತಿಲ್ಲ ಇವರು ಎಲ್ಲಾ ರೀತಿಯ ಮಾಂಸವನ್ನು ಸೆವಿಸುತ್ತಾರೆಂದು ವಿವರಿಸಿದ್ದಾರೆ. ಮತ್ತು ಇವರ ವೃತ್ತಿಯ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಿದ್ದಾರೆ, ಮಾಲ ಸಮುದಾಯದವರನ್ನು ಮೇಲ್ ಜಾತಿಯವರು ಬೇರೆ ಬೇರೆ ರೀತಿಯ ಕೆಲಸಗಳನ್ನು ಹಂಚಿ ಕೊಡುತ್ತಿದ್ದರು ಅವುಗಳೆಂದರೆ, ಮಾಲ ಜನಾಂಗದವರಿಗೆ ಮನೆತನದ ಸೇವಕರು, ಕಸ ಗುಡಿಸುವವರು, ಊರ ಕಾವಲುಗಾರರು ಎಂದು ನೇಮಿಸುತ್ತಿದ್ದರು ಇವರು ಮಳೆ, ಚಳಿ, ಗಾಳಿ ಎನ್ನದೆ ಉಚಿತವಾಗಿ ಸೇವೆ ಮಾಡಬೇಕಾಗಿತ್ತು ನಂತರ ಇವರ ಸೇವೆಯ ಪ್ರತಿಫಲವಾಗಿ ಊರಿನ ಜನರು ಕಾಳುಗಳನ್ನು ಕೊಡುತ್ತಿದ್ದರು. ಇವರಲ್ಲಿ ಕೆಲವರು ಸಾಗುವಳಿದಾರರು ಆಗಿರುತ್ತಾರೆ ಆದರೆ ಶಾಶ್ವತ ಸಾಗುವಳಿದಾರರು ಆಗಿರುವುದಿಲ್ಲ ಎಂದು ಮಾಲ ಸಮುದಾಯ ಕುರಿತು ವಿವರಿಸಿದ್ದಾರೆ." ಈ ಕೃತಿಯಿಂದ ಆಗಿನ ಕಾಲದಲ್ಲಿ ಸಮಾಜದಲ್ಲಿ ಮಾಲ ಸಮುದಾಯದವರ ಸಾಮಾಜಿಕ ಸ್ಥಾನಮಾನ ಯಾವ ರೀತಿಯಾಗಿತ್ತು ಪ್ರಸ್ತುತ ಅವರ ಸ್ಥಾನಮಾನ ಯಾವ ಸಮಾಜದಲ್ಲಿ ಯಾವ ರೀತಿ ಇದೆ ಎಂಬುದನ್ನು ಹೋಲಿಕೆ ಮಾಡಿ ನೋಡಲು ಈ ಅಧ್ಯಯನಕ್ಕೆ ಸಾಹಾಯಕವಾಗಿದೆ.

"ನಂಜುಂಡಯ್ಯ ಹಾಗೂ ಅನಂತಕೃಷ್ಣ ಅಯ್ಯರ್ (೧೯೪೫)[೭] **ಅವರ** ***'ಕಾಸ್ಟ್ ಅಂಡ್ ಟ್ರೈಬ್ಸ್ ಇನ್ ಮೈಸೂರು ಸ್ಟೇಟ್'*** ಎಂಬ ಕೃತಿಯಲ್ಲಿ ಅಂದಿನ ಮೈಸೂರು ರಾಜ್ಯದೊಳಗಿರುವ ಜಾತಿ, ಬುಡಕಟ್ಟು ಸಮುದಾಯಗಳ ಕುರಿತು ಎಡ್ಗರ್ ಥರ್ಸ್ಟನ್ ಮಾದರಿಯಲ್ಲಿಯೇ ಕೃತಿಯನ್ನು ರಚಿಸಿರುವರು. ಈ ಕೃತಿಯಲ್ಲಿ ಮಾಲ ಸಮುದಾಯದ ಕುರಿತ ಉಲ್ಲೇಖವಿದೆಯಾದರೂ ಅದರ ಕುರಿತ ವಿಸ್ತೃತವಾದ ವಿವರಗಳು ಹೆಚ್ಚಾಗಿ ಕಂಡುಬರುವುದಿಲ್ಲ. ಆದರೆ ಮಾಲ ಸಮುದಾಯಕ್ಕೆ ಹತ್ತಿರವಿರುವ ಹೊಲಯ ಸಮುದಾಯದ ಕುರಿತ ವಿವರಗಳಿವೆ." ಹೊಲೆಯ ಮತ್ತು ಮಾಲ ಎಂಬ ಜಾತಿ ಸಮುದಾಯ ಸಮಾಜದಲ್ಲಿ ಇದೆ ಎಂಬುದನ್ನು ಇವರು ತಿಳಿಯಪಡಿಸಿದ್ದಾರೆ.

"ಕೇಂದ್ರ ಸರ್ಕಾರದ, 'ಅಂತ್ರೋಪಾಲಜಿಕಲ್ ಸರ್ವೆ ಆಫ್ ಇಂಡಿಯ'(೧೯೬೧)ಲ ರಲ್ಲಿ ಸಂಪಾದಿಸಿ ಹೊರ ತಂದಿರುವ ***ಎಂಥೋಗ್ರಾಫಿಕ್ ನೋಟ್ಸ್ ಆನ್ ಎಸ್‌ಸಿ*** ಎಂಬ ಪುಸ್ತಕದಲ್ಲಿ ದಕ್ಕಲಗಾರ್ ಇವರನ್ನು ವಜಂತ್ರಿ ಮಾಂಗ್ ಜಾತಿಯ ಉಪಜಾತಿ ಎಂದು ಹೇಳಲಾಗಿದೆ. ಎಂಥೋವಿನ್ ಆರ್. ಇ. ರವರು ಅಸಾದರು, ಚನ್ನ ಹೊಲೆಯ, ಮಾಲ ಅಥವಾ ಮಾದಿಗ ಮೊದಲುಗೊಂಡು ದೊಕ್ಕಲೇರು, ದಬಕೆ, ಮಾದಿಗ, ದಲ್ಯ, ಡೋರರು, ಮಾಂಗ್ಸ್‌ಗಡ್ಡೀರು, ಮಾಂಗ್ಸ್‌ಗಾರುಡಿಗೆರ್, ಮಿಣೆ ಮಾದಿಗರು, ಮೋಚಿಗಾರ್ ಅಥವಾ ಮೋಚಿ, ಪೆದ್ದ ಮಾಂಗ್‌ರಾಹುತ್, ವಜಂತ್ರಿ ಅಥವಾ ಸನಾದಿ ಎಂದು ಒಟ್ಟು ೧೩ ಉಪಜಾತಿಗಳಿರುವುದನ್ನು ಹೇಳಿ ಅದರಲ್ಲಿ ಮಾದಿಗರು ಕೂಡ ಒಂದು ಎಂದಿದ್ದಾರೆ."

"**ಕಮಲಾಕ್ಷ ಪಿ ಅವರ, 'ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ'** (೧೯೬೮)[೯] ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನ ಸಾಮಾಜಿಕ ಇತಿಹಾಸವನ್ನು ಸಂಕ್ಷಿಪ್ತವಾಗಿ ನೀಡಿದೆ. ಹೊಲೆಯ ಹಾಗೂ ಮಾದಿಗ ಸಮುದಾಯದವರು ಮೂಲತಃ ತೆಲುಗು ದೇಶದವರೆಂದು ಹೇಳಲಾಗಿದೆ. ತಮಿಳು ನಾಡಿನಲ್ಲಿ ಇವರನ್ನು ಪರಿಯಾನ್ ಎಂಬ ಹೆಸರಿನಿಂದ ಕರೆಯುವರು. ಹೊಲೆಯರ ಮೂಲ ಕಸುಬು ಕೃಷಿ ಸಂಸ್ಕೃತಿಗೆ ಸೇರಿದವರೆಂದು ತಿಳಿಸುತ್ತಾರೆ ಮತ್ತು ತೆಲುಗು ದೇಶದಲ್ಲಿ ಇವರು ಅಧಿಕ ಜನ ಸಂಖ್ಯೆಯಲ್ಲಿರುವರು ಆದರೆ ಕರ್ನಾಟಕದಲ್ಲಿ ಕಡಿಮೆ ಜನಸಂಖ್ಯೆ ಕಂಡುಬರುತ್ತಾರೆ. ಕೆಲವು ಪ್ರಾಂತ್ಯಕ್ಕೆ ಅಣುಗುಣವಾಗಿ ಇವರನ್ನು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ ಎಂದು ತಿಳಿಸಿದ್ದಾರೆ." ಈ ಕೃತಿಯ ಮೂಲಕ ಮಾಲ ಸಮುದಾಯದ ಜನಸಂಖ್ಯೆಯನ್ನು ಆಂಧ್ರದಲ್ಲಿ ಮತ್ತು ಕರ್ನಾಟಕದಲ್ಲಿ ಎಷ್ಟು ಇದ್ದಾರೆ ಎಂಬುದನ್ನು ತಿಳಿಯಲು ಸಾಹಾಯಕವಾಗಿದೆ. ಈ ಅಧ್ಯಯನದ ಹಿನ್ನಲೆಯಲ್ಲಿ ಮಾಲ(ಪರ್ವತ ಮಲ್ಲಯ್ಯ) ಸಮುದಾಯದ ಜನಸಂಖ್ಯೆಯನ್ನು ಕುರಿತು ಎರಡನೆಯ ಅಧ್ಯಾಯನದಲ್ಲಿ ಬಳಸಿಕೂಳ್ಳಲು ಸಾಹಾಯಕವಾಗಿದೆ ಮತ್ತು ಮಾಲ ಸಮುದಾಯದವರು ಮೂಲತಃ ತೆಲುಗು ದೇಶದಿಂದ ಬಂದವರಾ ಅಥವಾ ಇಲ್ಲವಾ ಎಂಬುದನ್ನು ತಿಳಿದುಕೊಂಡು ಈ ಅಧ್ಯಯನಕ್ಕೆ ಪೂರಕವಾದ ಮಾಹಿತಿ ತಿಳಿಯಲು ಮತ್ತು ಮಾಹಿತಿ ಪಡೆಯಲು ಸಾಹಾಯಕವಾಗಿದೆ. ಮಾಲ ಸಮುದಾಯದ ವೃತ್ತಿಯ ಕುರಿತು ಐದನೆಯ ಅಧ್ಯಾಯದಲ್ಲಿ ಬಳಸಿಕೊಳ್ಳಲು ಈ ಅಧ್ಯಯನದ ಹಿನ್ನಲೆಯಲ್ಲಿ ಉಪಯುಕ್ತವಾಗಿದೆ.

"**ಎಂಥೋವನ್ ಆರ್ ಇ** ***'ದ ಟ್ರೈಬ್ಸ್ ಅಂಡ್ ಕಾಸ್ಟ್ಸ್ ಆಫ್ ಬೋಂಬೆ***(೧೯೯೦)[೧೦] ಕೃತಿಯಲ್ಲಿ ಮುಂಬೈ ಪ್ರಾಂತ್ಯದಲ್ಲಿ ಮಾಲ ಸಮುದಾಯದವರು ಅಸ್ಪೃಶ್ಯರಾಗಿ ಹೇಗೆ ಗುರುತಿಸಿಕೊಂಡಿರುವರು, ಅವರ ಭಾಷೆ, ಹುಟ್ಟು, ಸಾವು ಇತ್ಯಾದಿ ಆಚರಣೆ, ಧಾರ್ಮಿಕ ಆಚರಣೆಗಳ ಸ್ವರೂಪವನ್ನು ಗುರುತಿಸಿರುವರು." ಈ ಕೃತಿಯ ಮೂಲಕ ಮಾಲ ಸಮುದಾಯದ ಜಿವನಾವರ್ತಕ ವಿಚಾರಗಳನ್ನು ತಿಳಿಯಲು ಸಹಾಯಕವಾಗಿದೆ. ಆದ್ದರಿಂದ ಮಾಲ (ಪರ್ವತ ಮಲ್ಲಯ್ಯ) ಸಮುದಾಯದ ಜಿವನಾವರ್ತಕ ಆಚರಣೆಗಳನ್ನು ಕುರಿತು ಈ ಅಧ್ಯಯನದ ಹಿನ್ನಲೆಯಲ್ಲಿ ಮೂರನೆಯ ಅಧ್ಯಾಯದಲ್ಲಿ ಬಳಸಿಕೊಳ್ಳಲು ಈ ಕೃತಿಯು ಉಪಯುಕ್ತವಾಗಿದೆ.

"**ಕೊಟಿಗಾನಹಳ್ಳಿ ರಾಮಯ್ಯ ಅವರು,** ***'ಸಿಂದ್ ಮಾದಿಗರರ ಸಂಸ್ಕೃತಿ***(೧೯೯೩)[೧೧] ಪುಸ್ತಕದಲ್ಲಿ ಮಾದಿಗರ ಒಂದು ಪಂಗಡವಾದ ಸಿಂದ್ ಮಾದಿಗರನ್ನು ವಿಶೇಷವಾಗಿ ಅಧ್ಯಯನಕ್ಕಾಗಿ ಒಳಪಡಿಸಿಕೊಂಡಿದ್ದಾರೆ. ಈ ಕೃತಿಯಲ್ಲಿ ಫಣ ಸಂಸ್ಕೃತಿಯ ಕುರಿತು ತಿಳಿಸುತ್ತಾ ಮಾದಿಗರ ಕುಶಲಕರ್ಮಿ ಸಮುದಾಯದ ಮೂಲಿಗರಾಗಿದ್ದರೆ, ಹೊಲೆಯರು ಕೃಷಿ ಸಂಸ್ಕೃತಿಗೆ ಮೂಲಿಗರಾಗಿರುವರು. ಮಾದಿಗ ಎಡಗೈ ಫಣಕ್ಕೆ ಸೇರಿದವರು ಹಾಗೂ ಹೊಲೆಯರು ಬಲಗೈ ಫಣಕ್ಕೆ ಸೇರಿದವರು ಎಂದು ತಿಳಿಸುವರು. ಮಾಲ ಸಮುದಾಯದ ಉಲ್ಲೇಖ ಈ ಕೃತಿಯಲ್ಲಿ ಇಲ್ಲವಾದರೂ ಮಾಲ ಸಮುದಾಯಕ್ಕೆ ಕಳ್ಳುಬಳ್ಳಿಗರಾದ ಹೊಲೆಯರ ಉಲ್ಲೇಖ ಕಂಡುಬರುವುದು. ಹಾಗೆಯೇ ಮಾದಿಗ ಮತ್ತು ಹೊಲೆಯರ ನಡುವೆ ಇರುವ ಎಡ, ಬಲ ಭಿನ್ನತೆಯಲ್ಲಿ ನಡೆದ ಸಾಂಸ್ಕೃತಿಕ ಸಂಘರ್ಷದ ಬಗ್ಗೆ ವಿಪುಲವಾದ ಲೇಖಕರು

ಮಾಹಿತಿಯನ್ನು ಒದಗಿಸಿದ್ದಾರೆ. ಮತ್ತು ಹೊಲೆಯ ಮಾದಿಗರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಹಾಗೂ ಸಾಂಸ್ಕೃತಿಕ ಅಂಶಗಳ ಬಗ್ಗೆ ಸಾಕಷ್ಟು ಚರ್ಚೆಯನ್ನು ನಡೆಸಲಾಗಿದೆ ಮಾದಿಗ ಮತ್ತು ಹೊಲೆಯರ ನಡುವೆ ಎಡ, ಬಲ ಬಿನ್ನತೆಯಲ್ಲಿ ನಡೆದ ಸಾಂಸ್ಕೃತಿಕ ಸಂಘರ್ಷದ ಬಗ್ಗೆ ವಿಪುಲವಾದ ಮಾಹಿತಿಯನ್ನ ನೀಡಿದ್ದಾರೆ" ಈ ಕೃತಿಯ ಮೂಲಕ ಎಡಗೈ ಫಣ ಮತ್ತು ಬಲಗೈ ಫಣಗಳಲ್ಲಿ ಇರುವಂತಹ ಹಲವು ರೀತಿಯ ವ್ಯತ್ಯಾಸಗಳನ್ನು ತಿಳಿದುಕೊಳ್ಳಲು ಈ ಅಧ್ಯಯನಕ್ಕೆ ಹೋಲಿಕೆ ಮಾಡಲು ಸಾಹಾಯಕವಾಯಿತು. ಈ ಎರಡು ಫಣ ಸಂಸ್ಕೃತಿಯನ್ನು ಮತ್ತು ಸಂಸ್ಕೃತಿಯಲ್ಲಿರುವಂತಹ ವ್ಯತ್ಯಾಸಗಳನ್ನು ಮತ್ತು ಭಿನ್ನತೆಗಳನ್ನು ತಿಳಿಯಲು ಈ ಹಿನ್ನಲೆಯಲ್ಲಿ ಸಾಹಾಯಕಾರಿಯಾಗಿದೆ. ಈ ಎರಡು ಫಣಗಳಲ್ಲಿನ ಸಾಂಸ್ಕೃತಿಕ ಸಂಘರ್ಷಗಳನ್ನು ಈ ಅಧ್ಯಯನಕ್ಕೆ ಹೋಲಿಕೆ ಮಾಡಲು ಉಪಯುಕ್ತವಾಗಿದೆ.

"ಲಕ್ಷ್ಮೀಪತಿ ಕೋಲಾರ ಅವರು, *'ಮಾಸ್ತಿಕರ ಸಂಸ್ಕೃತಿ'* (೧೯೯೩)[೧೨] ಎಂಬ ಉಪಸಂಸ್ಕೃತಿ ಮಾಲೆ ಪುಸ್ತಕದಲ್ಲಿ ವಿವರಿಸಿರುವವಂತೆ ಮಾದಿಗ ಸಂಬಂಧಿತ ಜಾತಿಗಳಲ್ಲಿ ಮಾಸ್ಟಿಕರು ಒಬ್ಬರು. ಈ ಪಂಗಡದಲ್ಲಿ ಎರಡು ಬಗೆಯ ಮಾಸ್ಟಿಕರು ಕಂಡು ಬರುತ್ತಾರೆ. ೧. ಮಾದಿಗ ಮಾಸ್ಟಿಕರು ೨. ಹೊಲೆಯ ಮಾಸ್ಟಿಕರು. ಈ ಮಾಸ್ಟಿಕರು ಆಯಾ ಜಾತಿಯ ಮಾದಿಗರನ್ನು ಮತ್ತು ಹೊಲೆಯರನ್ನು ಆಶ್ರಯಿಸಿದ್ದಾರೆ. ಹೊಲೆಯರು ಮಾದಿಗ ಜಾತಿಗೆ ಹತ್ತಿರವಿದ್ದರೂ ಈ ಪಂಗಡಗಳು ಪ್ರತ್ಯೇಕವಾದ ಜಾತಿಯಾಗಿ ಗುರುತಿಸಿಕೊಂಡಿವೆ ಎಂದು ತಿಳಿಸುವರು. ಆದರೆ ಮಾಲ ಸಮುದಾಯದ ಕುರಿತ ಉಲ್ಲೇಖ ಈ ಕೃತಿಯಲ್ಲಿಯೂ ದೊರೆಯುವುದಿಲ್ಲ.

ಕಟ್ಟೆಮನೆ, ಗುಡಿಕಟ್ಟೆ, ನ್ಯಾಯಪದ್ಧತಿ ಆಂತರಿಕ ಒಳಜಗಳವಾದಾಗ ನ್ಯಾಯತಿರ್ಮಾನ ಮಾಡಿಕೊಳ್ಳಲು ಒಂದೇ ಸಮೂಹದವರು ಸೇರಿ ರಚಿಸಿಕೊಂಡು ಒಂದು ವ್ಯಾಪ್ತಿಗೆ ಮೂವತ್ತುಮೂರು ಹಳ್ಳಿಗಳು ಬರುತ್ತವೆ. ಹತ್ತತ್ತು ಹಳ್ಳಿಗೆ ಒಂದು ಕಸಬಿ ರಚನೆಯನ್ನು ಮಾಡಿಕೊಂಡಿರುವರು. ಈ ರೀತಿಯ ಒಳಾಡಳಿತ ವ್ಯವಸ್ಥೆ ಅವರ ಒಗ್ಗಟ್ಟಿನ ಕುರುಹು ಆಗಿದೆ. ಒಗ್ಗಟ್ಟು ಬರುವುದು ಸೌಹಾರ್ದತೆಯಿಂದ ಮಾತ್ರ ಇವರಲ್ಲಿ ಚಿಕ್ಕ ಚಿಕ್ಕ ಒಳಜಗಳಗಳಾದರೆ ಹಟ್ಟಿಯ ಯಜಮಾನನೇ ಪರಿಹರಿಸುವನು ದೊಡ್ಡ ವ್ಯಾಜ್ಯವಾದರೆ ಅದು 'ಕಟ್ಟೆಮನೆ'ಗೆ ಹೋಗುವ ಅನಿವಾರ್ಯತೆ ಬರುವುದು. ನ್ಯಾಯತಿರ್ಮಾನಕ್ಕಾಗಿಯೇ ಕಟ್ಟೆಮನೆಯಲ್ಲಿ ಹಟ್ಟಿಯ ಸದಸ್ಯರಿಂದ ನಿಯಮಿಸಲ್ಪಟ್ಟ ಯಜಮಾನರು ಇರುತ್ತಾರೆ. ಸಾಮಾನ್ಯವಾಗಿ ಕಟ್ಟೆಮನೆ ದೇವರು ನೆಲೆಸಿದ ಗುಡಿಯ ಮಂಭಾಗದಲ್ಲಿರುವುದು, ಈ ಕೃತಿಯಿಂದ ಮಾದಿಗರ ಒಳಾಡಳಿತದ ರಚನೆಯನ್ನು ಕುರಿತು ತಿಳಿಸಲಾಗಿದೆ. ಈ ಒಂದು ಕೃತಿಯು ಮೂಲಕ ಮಾಲ ಸಮುದಾಯದವರ ಒಳಾಡಳಿತ ವ್ಯವಸ್ಥೆಯಾದ ಜಾತಿ ಪಂಚಾಯತಿಯ ಬಗ್ಗೆ ಮಾಹಿತಿ ಪಡೆಯಲು ಮತ್ತು ಇತರ ಸಮುದಾಯಕ್ಕಿಂತ ಮಾಲ ಸಮುದಾಯದವರ ಜಾತಿ ಪಂಚಾಯತಿಯ ಬಗೆಗಿನ ವ್ಯತ್ಯಾಸವನ್ನು ತಿಳಿದು, ಬೇರೆ ಸಮುದಾಯಕ್ಕಿಂತ ಈ ಸಮುದಾಯದ ಜಾತಿ ಪಂಚಾಯತಿ ಪದ್ದತಿ ಬಿನ್ನವಾಗಿದೆಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲು ಈ ಕೃತಿ ಈ ಅಧ್ಯಯನಕ್ಕೆ ಸಾಹಾಯಕವಾಗಿದೆ.

"ಕೆ ಎಸ್ ಸಿಂಗ್ ಅವರ *'ಆಂಥ್ರೋಪೋಲೋಜಿಕಲ್ ಸರ್ವೆ ಆಫ್ ಇಂಡಿಯಾ'* (೧೯೯೪)[೧೩] ಕೃತಿಯ ಸೆಡ್ಯೂಲ್ಡ್ ಕಾಸ್ಟ್‌ಗೆ ಸಂಬಂಧಿಸಿದಂತೆ ವಿವರಿಸುವಾಗ ಮಾಲ ಸಮುದಾಯದ ಕುರಿತ

ವಿವರಣೆಗಳಿದ್ದು ಅವು ಬಹುತೇಕ ಎಡ್ಗರ್ ಥರ್ಸ್ಟನ್ ಹಾಗೂ ಎಂಥೋವಿನ್ನರ ಕೃತಿಗಳಿಂದ ಪಡೆದ ಮಾಹಿತಿಗಳನ್ನೇ ವಿವರಿಸಿರುವರು ಹಾಗೂ ಆಂಧ್ರಪ್ರದೇಶದೊಳಗಿನ ಮಾಲ ಸಮುದಾಯದ ಜನಸಂಖ್ಯೆ ಇತ್ಯಾದಿ ವಿವರಗಳಿವೆ." ಈ ಕೃತಿಯಲ್ಲಿ ಆಂಧ್ರಪ್ರದೇಶದೊಳಗಿನ ಮಾಲ ಸಮುದಾಯದ ಜನಸಂಖ್ಯೆ ಕುರಿತು ಹೇಳಿದ್ದಾರೆ. ಆದರೆ ಕರ್ನಾಟಕದ ಮಾಲ ಸಮುದಾಯದ ಜನಸಂಖ್ಯೆ ಕುರಿತು ಹೆಚ್ಚಿನ ಮಾಹಿತಿ ಇರುವದಿಲ್ಲ ಆ ಕಾರಣದಿಂದಾಗಿ ಈ ಕೃತಿಯ ಮೂಲಕ ಈ ಅಧ್ಯಯನದ ಹಿನ್ನಲೆಯಲ್ಲಿ ಕರ್ನಾಟಕದ ಪರ್ವತ ಮಲ್ಲಯ್ಯನವರು ಯಾವ ಯಾವ ಪ್ರದೇಶದಲ್ಲಿ ಎಷ್ಟು ಜನಸಂಖ್ಯೆ ವಾಸವಾಗಿದ್ದಾರೆ ಎಂಬ ಮಾಹಿತಿಯನ್ನು ಪಡೆದು ಈ ಅಧ್ಯಯನಕ್ಕೆ ಬಳಸಿಕೊಳ್ಳಲು ಉಪಯುಕ್ತವಾಗಿದೆ.

"ದಾಸನೂರು ಕೂಸಣ್ಣ ಅವರ *'ಶೋಷಿತ ಜಂಗಮರ ಮೀಸಲಾತಿ'* (೧೯೯೫)[೧೪] ಕೃತಿಯಲ್ಲಿ ಹೊಲೆಮಾದಿಗರ ಕುರಿತು ವಿವರ ನೀಡುವುದರೊಂದಿಗೆ ಬುಡ್ಗ ಜಂಗಮ, ಮಾಲ ಜಂಗಮ ಇತ್ಯಾದಿ ಅಸ್ಪೃಶ್ಯ ಸಮುದಾಯದ ವಿವರಗಳನ್ನು ನೀಡಿದ್ದು ಪ್ರಾಸಂಗಿಕವಾಗಿ ಮಾಲ ಸಮುದಾಯದ ಪಂಗಡಗಳ ಕುರಿತು ವಿವರ ನೀಡಿರುವರು ಮತ್ತು ಮಾಲ ಎಂಬ ಶಬ್ದದ ವುತ್ಪತ್ತಿ ಕುರಿತು, ಮಾಲ ಸಮುದಾಯದ ಮೂಲ ಕುರಿತು, ಮಾಲ ಪದದ ಅರ್ಥ ಕುರಿತು ಮಾಹಿತಿಯನ್ನು ನೀಡುವದರೊಂದಿಗೆ ಮಾಲ ಜಾತಿಯ ಮೂವತ್ತೇಳು ಉಪಜಾತಿಗಳನ್ನು ಗುರುತಿಸಿದ್ದಾರೆ. ಮಾಲ ಜಂಗಮರ ವಿವಾಹ ಗೊತ್ರಗನ್ನು ಗುರುತಿಸಿದ್ದಾರೆ. ಇವರ ಸಂಸ್ಕಾರಿಕ ಸಂಸ್ಕಾರದ ಬಗ್ಗೆ ಕುರಿತು, ಮಾಲ ಸಮುದಾಯದ ವಿವಾಹ ವಿಚ್ಚೇದನದ ಬಗ್ಗೆ ಕುರಿತು, ಅವರ ಧಾರ್ಮಿಕ ನಂಬಿಕೆ ಕುರಿತು, ಇವರ ಶವ ಸಂಸ್ಕಾರದ ಬಗ್ಗೆ ಕುರಿತು, ಅವರ ವೃತ್ತಿಜೀವನ ಮತ್ತು ಜೀವನ ಶೈಲಿಯನ್ನು ಕುರಿತು ವಿವರಿಸಿದ್ದಾರೆ."ಈ ಒಂದು ಕೃತಿಯ ಮೂಲಕ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಹುಡುಕಲು ಸಾಹಾಯಕವಾಯಿತು. ಮತ್ತು ಮಾಲ ಎಂಬ ಶಬ್ದ ಹೇಗೆ ವ್ಯುತ್ಪತ್ತಿ ಆಗಿದೆ ಎಂದು ತಿಳಿದು ಈ ಅಧ್ಯಾಯದಲ್ಲಿ ಬಳಸಿಕೊಳ್ಳಲು ಸಹಾಯಕವಾಗಿದೆ. ಮತ್ತು ಮಾಲ ಸಮುದಾಯದ ವಿವಾಹ ಗೊತ್ರಗಳ ಬಗ್ಗೆ ತಿಳಿದು ಪರ್ವತ ಮಲ್ಲಯ್ಯನವರ ವಿವಾಹ ಗೋತ್ರಗಳ ವಿಶೇಷತೆಯನ್ನು ಈ ಅಧ್ಯಯನದಲ್ಲಿ ಬಳಸಿಕೊಳ್ಳಲು ಉಪಯುಕ್ತವಾಯಿತು. ಮತ್ತು ಆಂಧ್ರಪ್ರದೇಶದಲ್ಲಿನ ಮಾಲ ಸಮುದಾಯದವರ ಪಂಗಡಗಳ ಕುರಿತು ತಿಳಿದುಕೊಂಡು ಕಾರ್ನಾಟಕ ಮಾಲ ಸಮುದಾಯದವರ ಪಂಗಡಕ್ಕಿರುವ ಸಂಬಂಧದ ಬಗ್ಗೆ ಮಾಹಿತಿ ಪಡೆಯಲು ಈ ಅಧ್ಯಯನದ ಹಿನ್ನಲೆಯಲ್ಲಿ ಅನುಕೂಲವಾಗಿದೆ.

"ಸೂರ್ಯನಾಥ ಯು ಕಾಮತ್ *'ಧಾರವಾಡ ಜಿಲ್ಲೆ ಗಾಸೆಟಿಯರ್'* (೧೯೯೫)[೧೫] ಕರ್ನಾಟಕ ಗ್ಯಾಸೆಟಿಯರ್ ೮ ನೆಯ ಮಹಡಿ ಬೆಂಗಳೂರ ಎಂಬುದರಲ್ಲಿ ಹೊಲೆಯ ಸಮುದಾಯದ ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದ್ದಾರೆ. ಅವರು ಸಾಂಪ್ರದಾಯಿಕವಾಗಿ ಗ್ರಾಮದ ಊಳಿಗದವರಾಗಿ ಹಾಗೂ ಕಾವಲುಗಾರರಾಗಿ ಗ್ರಾಮೀಣ ಸಮಾಜ ವ್ಯವಸ್ಥೆಯಲ್ಲಿ ಹೊಂದಿಕೊಂಡಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ಇವರು ಒಕ್ಕಲುತನ ಮಾಡುವುದು ಹಾಗೂ ಹೊಲಗದ್ದೆಗಳಲ್ಲಿ ಕೂಲಿ ಕೆಲಸ ಮಾಡುವುದು ಅಲ್ಲದೆ ಇತರೆ ಉಧ್ಯೋಗಗಳಲ್ಲಿ ತೊಡಗಿಕೊಂಡಿರುತ್ತಾರೆ. ಇವರಲ್ಲಿ ಬಹುಪಾಲು ಜನರು ಗ್ರಾಮೀಣ ಭಾಗದಲ್ಲಿ ವಾಸವಾಗಿರುತ್ತಾರೆ. ಇವರು ಕರ್ನಾಟಕದಲ್ಲಿ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ, ಮಾರಾಠಿ

ಮಾತನಾಡುವವರಿಗೆ ಮಹರ್ ಎಂದು ಕರೆಯುತ್ತಾರೆ. ಇವರಲ್ಲಿ ಜಾತಿ ಪಂಚಾಯತಿ, ವಿಧವಾ ವಿವಾಹ ಹಾಗೂ ವಿವಾಹ ವಿಚ್ಚೇಧನಗಳು ಪ್ರಚಲಿತವಾಗಿವೆ. ಇವರು ದುರ್ಗವ್ವ, ದ್ಯಾಮವ್ವ, ಯಲ್ಲಮ್ಮ, ಆಂಜನೇಯ ಮುಂತಾದ ದೇವರುಗಳನ್ನು ಆರಾಧಿಸುತ್ತಾರೆ. ಇವರು ಮಾಂಸಹಾರಿಗಳು, ಇವರು ಯುಗಾದಿ, ನಾಗರಪಂಚಮಿ, ದಸರಾ, ಇವರು ಆಚರಿಸುವ ಪ್ರಮುಖ ಹಬ್ಬಗಳಾಗಿವೆ. ಇವರು ಸಾಮಾನ್ಯವಾಗಿ ಮೃತರನ್ನು ಹೂಳುತ್ತಾರೆ ಎಂಬ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ್ದಾರೆ."ಈ ಕೃತಿಯ ಮೂಲಕ ಮಾಲ ಸಮುದಾಯದವರ ಆಗಿನ ಕಾಲದ ಪರಿಸ್ಥಿತಿ ಅವರ ಜೀವನ ಶೈಲಿ, ಅವರು ಸೇವಿಸುವ ಆಗಿನ ಕಾಲದ ಆಹಾರ ಮತ್ತು ಈಗಿನ ಕಾಲದ ಆಹಾರದ ಕುರಿತು ಈ ಅಧ್ಯಯನದ ಹಿನ್ನಲೆಯಲ್ಲಿ ಮಾಹಿತಿ ಸಂಗ್ರಹಿಸಲು ಸಾಹಾಯಕಾರಿಯಾಗಿದೆ. ಮತ್ತು ಮಾಲ ಸಮುದಾಯದವರ ಆಹಾರ, ಹಾಗೂ ವಿವಾಹ, ವಿಧವಾ ವಿವಾಹ, ಕುರಿತು ಮಾಹಿತಿ ಪಡೆದು ಮೂರನೆಯ ಅಧ್ಯಾಯದಲ್ಲಿ ಬಳಸಿಕೊಳ್ಳಲು ಸಹಾಯಕವಾಗಿದೆ. ಕೆಲವು ನೆಲೆನಿಂತ ಮಾಲ ಸಮುದಾಯದವರು ಈ ಮೇಲೆ ಗುರುತಿಸಿರುವ ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ.

"ಸುಭಾಸ್ ಭರಣಿ *'ಧರೆಗೆ ದೊಡ್ಡವರು'* (೧೯೯೬)[೧೬] ಎಂಬ ಗ್ರಂಥದಲ್ಲಿ ಆದಿ ಕರ್ನಾಟಕ ಸಮುದಾಯದ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಿನ್ನಲೆ, ಜೀವನ ವಿಧಾನ, ಸಾಮಾಜೀಕ ವ್ಯವಸ್ಥೆ, ಆದಿಕರ್ನಾಟಕ ಜನವರ್ಗ, ಸಾಹಿತ್ಯ ಮತ್ತು ಸಂಸ್ಕೃತಿ ಇತ್ಯಾದಿ ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ ಮತ್ತು ಅವರ ರಾಜಪ್ರಭುತ್ವದ ಕುರಿತು ವಿವರಿಸಿದ್ದಾರೆ." ಈ ಕೃತಿಯಲ್ಲಿ ಅಸ್ಪೃಶ್ಯ ಸಮುದಾಯವಾದ ಆದಿಕರ್ನಾಟಕ ಜನವರ್ಗ ಮತ್ತು ರಾಜಪ್ರಭುತ್ವದ ಕುರಿತು ತಿಳಿಸಿದ್ದಾರೆ ಅದೇ ರೀತಿಯ ತಳ ಸಮುದಾಯವಾದ ಮಾಲ ಸಮುದಾಯದ ಕುರಿತು ಈ ಕೃತಿಯಲ್ಲಿ ಮಾಹಿತಿಗಳಿರುವದಿಲ್ಲ.

"ವೆಂಕಟಸ್ವಾಮಿ ಎಂ *'ಅಸ್ಪೃಶ್ಯರು: ಒಂದು ಪರಿಶೀಲನೆ'* (೧೯೯೭)[೧೭] ಎಂಬ ಗ್ರಂಥದಲ್ಲಿ ಪ್ರಾಚೀನ ಕಾಲದಲ್ಲಿ ಬೇಸಾಯ ವೃತ್ತಿಯನ್ನು ತಮ್ಮ ಕಸುಬುವನ್ನು ಮಾಡಿಕೊಂಡು ಹಗಲು ರಾತ್ರಿ ದುಡಿಯುತ್ತಿದ್ದ ಈ ಹೊಲದ ಕೆಲಸಗಾರರನ್ನು ಹೊಲದ ಆಳುಗಳು ಹಾಗೂ ಮುಂದೆ ಹೊಲೆಯರು ಎಂಬುದಾಗಿ ಕರೆಯಲಾಯಿತೆಂದು ವಿವರಿಸಿದ್ದಾರೆ. ಹೊಲೆಯ ರಾಜರ ಬಗ್ಗೆ ವಿವರಣೆಯನ್ನು ನಿಡಿದ್ದಾರೆ." ಈ ಕೃತಿಯ ಮೂಲಕ ತಿಳಿಯುವದೇನೆಂದರೆ ಇವತ್ತಿಗೂ ಸಹ ಈ ಸಮುದಾಯದವರು ಹೊಲದ ಆಳುಗಳಾಗಿ ಬೇರೆಯವರ ಹೊಲದಲ್ಲಿ ದುಡಿದು ತಿನ್ನುತ್ತಿರುವುದು ಮತ್ತು ತಮ್ಮ ಜೀವನ ಸಾಗಿಸುತ್ತಿರುವುದು ಗೋಚರಿಸುತ್ತದೆ. ಮತ್ತು ಕೃಷಿಯ ಕೆಲಸವನ್ನು ಬಲ್ಲವರಾಗಿರುವದನ್ನು ನೋಡಿದರೆ ಇವರು ಹೊಲದ ಆಳುಗಳಾಗಿ ಜೀತ ಇದ್ದಿರಬಹುದು.

"ಎಂ ಬಿ ಪಾಟೀಲ *'ಗುಲ್ಬರ್ಗಾ ಜಿಲ್ಲೆ ಗ್ಯಾಸೆಟಿಯರ್'* (೧೯೯೭)[೧೮] ದಲ್ಲಿ ಹೊಲೆಯ ಜಾತಿಯ ಬಗ್ಗೆ ವಿವರಿಸಿದ್ದಾರೆ. ಇವರು ಸಾಂಪ್ರದಾಯಿಕ ಪದ್ಧತಿಯ ಊಳಿಗದವರಾಗಿ ಗ್ರಾಮೀಣ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಹೊಂದಿಕೊಂಡವರಾಗಿದ್ದರು. ಇವರು ಮಾಡುವ ಇತ್ತೀಚಿನ ಕೆಲಸ ಕಾರ್ಯಗಳ ಕುರಿತು, ಇವರ ಬೆಡಗುಗಳ ಕುರಿತು, ಇವರು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ ಮತ್ತು ಇವರಲ್ಲಿ ಪುರೋಹಿತ ವರ್ಗವಿಲ್ಲ, ವಿಧವಾ ವಿವಾಹ ಹಾಗೂ ವಿವಾಹ ವಿಚ್ಚೇಧನಗಳು ಇವರಲ್ಲಿ

ಪ್ರಚಲಿತವಾಗಿವೆ. ಇವರು ದುರ್ಗಮ್ಮ, ಯಲ್ಲಮ್ಮ, ಮರಗಮ್ಮ, ಮೋದಲಾದ ದೇವಾನು ದೇವತೆಗಳನ್ನು ಪೂಜಿಸುತ್ತಾರೆ. ಮಾಂಸಹಾರ ಸೇವಿಸುವುದು ಇವರಲ್ಲಿ ರೂಢಿಯಲ್ಲಿದೆ. ದಸರಾ ಹಾಗೂ ದೀಪಾವಳಿ ಇವರು ಆಚರಿಸುವ ಹಬ್ಬಗಳಾಗಿವೆ. ಸಾಮಾನ್ಯವಾಗಿ ಇವರು ಮೃತರನ್ನು ಹೂಳುತ್ತಾರೆ ಎಂದು ತಿಳಿಸಿದ್ದಾರೆ." ಈ ಕೃತಿಯ ಮೂಲಕ ನೋಡಿದಾಗ ಹೊಲೆಯ ಸಮುದಾಯದವರು ಮತ್ತು ಮಾಲ ಸಮುದಾಯದವರ ಬಗ್ಗೆ ಕುರಿತು ಹೋಲಿಸಿ ನೋಡಲು ಸಾಹಾಯಕವಾಗುತ್ತದೆ. ಪ್ರಸ್ತುತ ಈ ಸಮುದಾಯದವರು ಆರಾಧಿಸುವ ದೈವಗಳು ಮತ್ತು ಆಗಿನ ಕಾಲದಲ್ಲಿ ಆರಾಧಿಸುವ ದೈವಗಳು ಇವತ್ತಿನವರೆಗೂ ಅದೇ ದೇವರುಗಳನ್ನು ಪೂಜಿಸುತ್ತಿರುವುದು ತಿಳಿದು ಬರುತ್ತದೆ. ಮತ್ತು ಇವರಲ್ಲಿ ಪುರೋಹಿತ ವರ್ಗವಿದೇಯೋ ಇಲ್ಲವೊ ಎಂಬುದನ್ನು ತಿಳಿಯಲು ಈ ಅಧ್ಯಯನದ ಹಿನ್ನಲೆಯಲ್ಲಿ ಅನುಕೂಲವಾಗಿದೆ.

"ಡಾ ಆರ್ ಮುನಿಸ್ವಾಮಿ *'ಬಿಜಾಪೂರ ಜಿಲ್ಲೆ ಗ್ಯಾಜೆಟಿಯರ್*'(೧೯೯೯)[೧೯] ಇದರಲ್ಲಿ ಹೊಲೆಯ ಜಾತಿಯ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಿದ್ದಾರೆ. ಸಾಂಪ್ರದಾಯಿಕವಾಗಿ ಇವರು ಗ್ರಾಮದ ಊಳಿಗದವರಾಗಿಯೂ ಮತ್ತು ಊರ ಕಾವಲುಗಾರರಾಗಿಯೂ ಹಾಗೂ ಗ್ರಾಮೀಣ ಸಮಾಜದ ವ್ಯವಸ್ಥೆಯಲ್ಲಿ ಹೊಂದಿಕೊಂಡಿದ್ದು ಗ್ರಾಮದ ಬೇರೆ ಬೇರೆ ಕೆಲಸಗಳಲ್ಲಿ ತೊಡಗಿಕೊಂಡಿರುತ್ತಾರೆ. ಜಾತಿ ಪಂಚಾಯತಿ ಇವರಲ್ಲಿದ್ದು ಪಂಚರ ಸಮ್ಮುಖದಲ್ಲಿ ನ್ಯಾಯ ತಿರ್ಮಾನ ಮಾಡಲಾಗುವದು. ಕನ್ನಡ ಭಾಷೆಯನ್ನು ಮಾತನಾಡುವ ಇವರಲ್ಲಿ ಅವಿಭಕ್ತ ಕುಟುಂಬ ಕಂಡುಬರುತ್ತದೆ. ದೊಡ್ಡಾಟ, ಬಯಲಾಟ, ದಪ್ಪಿನಪದ ಹೇಳುವುದು, ಭಜನೆ ಮಾಡುವುದು ಇವೇ ಇವರ ಮನರಂಜನೆಗಳಾಗಿರುತ್ತವೆ. ಉಡುಕಿ ಪದ್ದತಿ ಹಾಗೂ ವಿವಾಹ ವಿಚ್ಚೇಧನಗಳು ಇವರಲ್ಲಿ ಪ್ರಚಲಿತವಿದೆ. ಮಾಂಸಹಾರ ಸೇವಿಸುವುದು ಇವರಲ್ಲಿ ರೂಢಿಯಲ್ಲಿದೆ. ಎಲ್ಲಾ ದೇವಾನುದೇವತೆಗಳನ್ನು ಇವರು ಪೂಜಿಸುತ್ತಾರೆ. ಮೃತರನ್ನು ಹೂಳುವ ಪದ್ಧತಿ ಇವರಲ್ಲಿ ಪ್ರಚಲಿತವಿದೆ ಎಂದು ಮಾಹಿತಿ ನೀಡಿದ್ದಾರೆ."ಈ ಕೃತಿಯು ಹೊಲೆಯರ ಭಾಷೆ ಮತ್ತು ಸಾಂಸ್ಕೃತಿಕ ಆಟಗಳನ್ನು ತಿಳಿಸುತ್ತದೆ. ಈ ಅಧ್ಯಯನದ ಹಿನ್ನಲೆಯಲ್ಲಿ ಮಾಲ ಸಮುದಾಯದ ಜಾತಿ ಪಂಚಾಯತಿ ಬಗ್ಗೆ ತಿಳಿದುಕೊಳ್ಳಲು, ಮತ್ತು ಮಾಲ ಸಮುದಾಯದ ಮನರಂಜನಾತ್ಮಕ ಆಟಗಳನ್ನು ಕುರಿತು ಮಾಹಿತಿ ಪಡೆದು ಈ ಅಧ್ಯಯನಕ್ಕೆ ಅಳವಡಿಸಿಕೊಳ್ಳಲು ಉಪಯುಕ್ತವಾಗಿರುತ್ತದೆ. ಅದೇ ರೀತಿ ಮಾಲ ಸಮುದಾಯದ ಕುಟುಂಬ ವ್ಯವಸ್ಥೆಯನ್ನು ತಿಳಿಯಲು ಸಾಹಾಯಕವಾಗಿದೆ.

"ಎಚ್ ಡಿ ಪ್ರಶಾಂತ ಅವರ ಸಂಪಾದಿತ *'ಜನಸಮುದಾಯ ಸಂಪುಟ'* (೨೦೦೦)[೨೦] ದಲ್ಲಿ ಮಾಲ ಸಮುದಾಯದ ಕುರಿತು ಸಂಕ್ಷಿಪ್ತ ವಿವರವಿದೆ. ಮಾಲ ಸಮುದಾಯದವರು ರಾಯಚೂರು, ಬೀದರ್, ಬಳ್ಳಾರಿ, ಗುಲ್ಬರ್ಗಾದೊಳಗೆ ಹೆಚ್ಚಾಗಿ ವಾಸವಾಗಿರುವುದಾಗಿ ತಿಳಿಸಿರುವರು. ಇವರು ತಮ್ಮ ಜಾತಿಯವರೊಂದಿಗೆ ತೆಲುಗಿನಲ್ಲಿ, ಉಳಿದವರ ಜೊತೆ ಕನ್ನಡ ಮತ್ತು ಉರ್ದುವಿನಲ್ಲಿ ಮಾತನಾಡಿ ಕನ್ನಡ ಲಿಪಿಯನ್ನು ಬಳಸುತ್ತಾರೆ. ಹಾಗೆಯೇ ರೆಡ್ಡಿ, ಬಂದರ, ದೊರಸ, ಸುಂಕದ, ಕುಪ್ಪೆಯ, ಮದಸಲ, ದಾದಸಲ, ಬಂಡಾರಿ, ಕೆಸರಲು, ಓಲೆಯ, ಮಿನುಗ, ಕುಂಕುಮವಲ್ಲು, ಬಂಡೆಗಮ್ಮುಲು ಇತ್ಯಾದಿ ಒಳಪಂಗಡವನ್ನು ಹೊಂದಿರುವ ಕುರಿತ ವಿವರಗಳು ದೊರೆಯುವವು. ಈ ಸಮುದಾಯದವರ

ಮದುವೆಗಳು ತಮ್ಮ ಜಾತಿಯ ಒಳಗೆ ಹಾಗೂ ಬಳ್ಳಿಗಳ ಹೊರಗೆ ಮದುವೆಯ ಸಂಬಂಧಗಳು ನಡೆಯುತ್ತವೆ. ಏಕಪತ್ನಿತ್ವ/ಬವುಪತ್ನಿತ್ವ ವಿವಾಹಗಳು ಮಾತುಕತೆಯಿಂದ ನಡೆಯುತ್ತವೆ. ಸೋದರ ಸಂಬಂಧಿ ವಿವಾಹಗಳು ಇವರಲ್ಲಿ ಹೆಚ್ಚಾಗಿ ನಡೆಯುತ್ತವೆ ಎಂದು ತಿಳಿಸಿದ್ದಾರೆ ಮತ್ತು ಇವರ ವೃತ್ತಿಯ ಬಗ್ಗೆ ಇವರ ವೈದ್ಯಪದ್ಧತಿಯ ಬಗ್ಗೆ ತಿಳಿಸಿದ್ದಾರೆ."ಈ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಕ್ಷೇತ್ರಕಾರ್ಯ ಮಾಡಿದಂತಹ ಸಂದರ್ಭದಲ್ಲಿ ಮಾಲ ಅದರಲ್ಲೂ ಪರ್ವತ ಮಲ್ಲಯ್ಯ ಎಂಬ ಸಮುದಾಯದವರು ರಾಯಚೂರ ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಆದರೆ ಪರ್ವತ ಮಲ್ಲಯ್ಯನವರು ಬಳ್ಳಾರಿ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಕಂಡುಬರುವದಿಲ್ಲ. ಇವರು ಗುರುತಿಸಿದ ಒಳಪಂಗಡಗಳು ಕರ್ನಾಟಕದ ಹೊಲೆಯ ಸಮುದಾಯದವುಗಳಾಗಿದ್ದು ಪರ್ವತ ಮಲ್ಲಯ್ಯನವರ ಬೆಡಗುಗಳನ್ನು ಇವರು ಗುರುತಿಸಿರುವದಿಲ್ಲ. ಆದ್ದರಿಂದ ಈ ಅಧ್ಯಯನದ ಹಿನ್ನಲೆಯಲ್ಲಿ ಈ ಕೃತಿಯು ಬಹಳ ಉಪಯುಕ್ತ ಮಾಹಿತಿ ತಿಳಿಯಲು ಸಹಾಯಕವಾಯಿತು. ಮಾಲ ಸಮುದಾಯದವರಲ್ಲಿ ಸೋದರ ಸಂಬಂಧಿ ವಿವಾಹಗಳು ನಡೆಯುತ್ತವಾ ಅಥವಾ ಇಲ್ಲವಾ ಎಂಬುದನ್ನು ತಿಳಿಯಲು ಈ ಅಧ್ಯಯನದ ಹಿನ್ನಲೆಯಲ್ಲಿ ಉಪಯುಕ್ತವಾಯಿತು.

"ಎಸ್ ಎಸ್ ಹೀರೆಮಠ *'ಜನಪದ ಸಮಾಜ ಸಂಸ್ಕೃತಿ'* (೨೦೦೫)[21] ಎಂಬ ಪುಸ್ತಕದಲ್ಲಿ ಹೊಲೆಯರು ಗ್ರಾಮದ ನೈರ್ಮಲ್ಯದ ಕೆಲಸಗಳನ್ನು ಮಾಡುತ್ತಿದ್ದರು ಮತ್ತು ಸತ್ತ ಪ್ರಾಣಿಗಳನ್ನು ಹೊತ್ತು ಹಾಕುವ ಕೆಲಸವನ್ನು ಮಾಡುತ್ತಿದ್ದರು ಇವು ಹೊಲೆಯರ ಕೆಲಸವಾಗಿದ್ದವು ಎಂದು ತಿಳಿಸಿದ್ದಾರೆ ಮತ್ತು ಕಪ್ಪೆ ಹೊಲೆಯರ ಮೂಲ, ಚಾರಿತ್ರಿಕತೆ ಬಗ್ಗೆ ವಿವರಿಸಿದ್ದಾರೆ. ಒಮ್ಮೆ ಭೂಲೋಕದಲ್ಲಿ ಯಜ್ಞಗಳು ನಡೆಯುತ್ತಿರುವಾಗ ಕಪ್ಪೆಗಳ ಕಿರುಚಾಟದಿಂದ ತೊಂದರೆಯಾಗಿ ದೇವಲೋಕದ ತ್ರಿಮೂರ್ತಿಗಳು ಯಜ್ಞಕ್ಕೆ ತೊಂದರೆ ಮಾಡಿದ ಕಪ್ಪೆಗಳನ್ನು ತಿನ್ನಲು ಕಳುಹಿಸಿದ ಸೇವಕನಿಂದ ಈ ಸಮುದಾಯ ಬೆಳೆಯಿತೆಂದು ನಂಬಿಕೆ ಇದೆ. ಅವರೆ ಇಂದಿನ ಕಪ್ಪೆ ಹೊಲೆಯರು ಎಂದು ತಿಳಿಸಿದ್ದಾರೆ." ಲೇಖಕರು ಈ ಒಂದು ಕೃತಿಯಲ್ಲಿ ಕಪ್ಪೆ ಹೊಲೆಯ ಎಂಬ ಪದ ಹೇಗೆ ಬಂದಿತೆಂದು ತಿಳಿಸಿದ್ದಾರೆ. ಅದೆ ರೀತಿ ಈ ಅಧ್ಯಯನದ ಹಿನ್ನಲೆಯಲ್ಲಿ ಮಾಲ(ಪರ್ವತ ಮಲ್ಲಯ್ಯ) ಸಮುದಾಯದವರಿಗೆ ಪರ್ವತ ಮಲ್ಲಯ್ಯನವರು ಎಂಬ ಪದಬಳಕೆ ಬರಲಿಕ್ಕೆ ಕಾರಣವೇನು ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಪಡೆದು ಈ ಅಧ್ಯಯನದ ಹಿನ್ನಲೆಯಲ್ಲಿ ಎರಡನೆಯ ಅಧ್ಯಾಯದಲ್ಲಿ ಬಳಸಿಕೊಳ್ಳಲು ಈ ಕೃತಿಯು ಉಪಯುಕ್ತವಾಗಿದೆ.

"Nandu ram *'Encyclopaedia SCHEDULED CASTES IN INDIA'* in 5 volumes (2007)[22] Gyan publishing hous New Dehli. ಎಂಬ ಕೃತಿಯಲ್ಲಿ ಮಾಲ ಸಮುದಾಯದವರು ಭಾರತದ ಶಾಸನಬದ್ಧ ಸ್ಥಾನಗಳಾದ ಆಂಧ್ರಪ್ರದೇಶ, ಆಂಧ್ರಪ್ರದೇಶದಲ್ಲಿ ಕಂಡುಬರುವ ಪ್ರದೇಶಗಳು ಮತ್ತು ಅಲ್ಲಿರುವ ಜನಸಂಖ್ಯಾ ಪ್ರಮಾಣ, ಅವರು ಮಾತನಾಡುವ ಭಾಷೆ ಮತ್ತು ಕರ್ನಾಟಕದಲ್ಲಿ ವಾಸಮಾಡುವ ಸ್ಥಳಗಳು ಇವರ ಜನಸಂಖ್ಯಾ ಪ್ರಮಾಣವನ್ನು ಗುರುತಿಸಿ ವಿವರಿಸಿದ್ದಾರೆ. ಮಾಲ ಸಮುದಾಯದವರು ಬೇರೆ– ಬೇರೆ ರಾಜ್ಯಗಳಲ್ಲಿ ಮತ್ತು ಆಯಾ

ರಾಜ್ಯದಲ್ಲಿ ಕರೆಯುವ ಹೆಸರುಗಳು ಆಯಾ ರಾಜ್ಯದಲ್ಲಿ ಮಾತನಾಡುವ ಭಾಷೆಗಳ ಬಗ್ಗೆ ಕುರಿತು ವಿವರಿಸಿದ್ದಾರೆ. ಮಾಲ ಸಮುದಾಯದವರ ಕುಟುಂಬ, ಗೋತ್ರ, ಭಾಷೆ ಮತ್ತು ಸಾಹಿತ್ಯ, ಇವರ ಜೀವನ ಚಕ್ರ ಮತ್ತು ಆ ಸಮುದಾಯಕ್ಕೆ ಸಂಬಂಧಿತ ಕ್ರೀಯಾವಿಧಿಗಳನ್ನು ಕುರಿತು ವಿವರಿಸಿದ್ದಾರೆ, ಮಾಲ ಸಮುದಾಯದವರ ಉಡುಗೆ, ತೋಡುಗೆ, ಆಹಾರ, ಅವರು ಬಳಸುವ ಆಭರಣಗಳು, ಅವರ ಸಾಂಪ್ರದಾಯಿಕ ವೃತ್ತಿ, ಅವರು ಆಚರಿಸುವ ಅತಿ ಮುಖ್ಯವಾದ ಹಬ್ಬಗಳು, ಸಾಂಪ್ರದಾಯಿಕ ಜಾತಿ, ಏಣಿ ಶ್ರೇಣಿ ವ್ಯವಸ್ಥೆ, ಸಾಮಾಜಿಕ ನಿಯಂತ್ರಣದ ರಚನೆ ಕುರಿತು ವಿವರವಾಗಿ ಹೇಳಿದ್ದಾರೆ.

"ಕುಪ್ಪೆ ನಾಗರಾಜ ಅವರ *'ದೊಂಬಿದಾಸ'* (೨೦೦೮)[೨೩] ಕೃತಿಯಲ್ಲಿ ಮಾಲ ದಾಸರಿಗಳು ಹಾಗೂ ಹೊಲೆಯ ದಾಸರಿಗಳ ಉಲ್ಲೇಖ ದೊರೆಯುವುದು."

"ವೈ ಬಿ ಹಿಮ್ಮಡಿಯವರ *'ಚೆನ್ನ ದಾಸರ'* (೨೦೦೮)[೨೪] ಕೃತಿಯಲ್ಲಿಯೂ ಮಾಲದಾಸರಿ ಹಾಗೂ ಹೊಲೆಯ ದಾಸರ ಕುರಿತು ಉಲ್ಲೇಖಗಳು ದೊರೆಯುವವಾದರೂ ಮಾಲ ಸಮುದಾಯದ ಕುರಿತ ನೇರವಾದ ಉಲ್ಲೇಖಗಳಿಲ್ಲ."

"ದೇವರಾಜ ಓ ಅವರು, *'ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು'* (೨೦೧೩)[೨೫] ಎಂಬ ಪುಸ್ತಕದಲ್ಲಿ 'ಹೊಲೆಯ ಮತ್ತು ಮಾದಿಗ' ಎಂಬ ಶಬ್ದದ ನಿಷ್ಪತ್ತಿ ಭಿನ್ನಾಭಿಪ್ರಾಯದಿಂದ ಕೂಡಿದೆ. ಹೊಲೆ ಮಾದಿಗರು ಈ ನಾಡಿನ ಮೂಲನಿವಾಸಿಗಳೆಂದು, ಮಾತಂಗ ಶಬ್ದದಿಂದ ಹುಟ್ಟಿರುವಂತೆ ಕಾಣುತ್ತದೆ. ಮಾತಂಗರು ಚರ್ಮದ ಕೆಲಸ ಮಾಡುವವರು ಹಾಗೂ ಹೊಲೆಯರ ನಂತರದ ಸ್ಥಾನವನ್ನು ಪಡೆದುಕೊಂಡಿರುವವರು. ಮಾತಂಗಿಯ ಸಂಸ್ಕೃತ ರೂಪಾಂತರ ಕಾಳಿ, ಚಕ್ಕಲಿಯನ್ ಎಂದು ತಮಿಳು ಪ್ರಾಂತ್ಯದಲ್ಲಿ ಕರೆಸಿಕೊಂಡರೆ, ಎಡಗೈ ಗುಂಪಿನವರೆಂದು ಗುರುತಿಸಿಕೊಂಡಿದ್ದಾರೆ. ಇವರು ಕನ್ನಡ ಮತ್ತು ತೆಲುಗು ಭಾಷೆಯನ್ನು ಮಾತನಾಡುತ್ತಾರೆ ಇವರು ಆಂಧ್ರಪ್ರದೇಶದಲ್ಲಿ ಹೆಚ್ಚಾಗಿ ವಾಸವಾಗಿದ್ದು ಇವರಿಗೆ ಹಲವು ಉಪಪಂಗಡಗಳಿವೆ. ಅವುಗಳು ತಮ್ಮ ಸಂಸ್ಕೃತಿಯ ಜೊತೆಗೆ ಗುರುತಿಸಿಕೊಳ್ಳುತ್ತವೆ ಮತ್ತು ಉಳುಮೆ ಪದದಿಂದ ಹೊಲೆಯ ಪದ ಹುಟ್ಟಿದೆ ಎಂದು ತಿಳಿಸುವರು." ಈ ಕೃತಿಯ ಮೂಲಕ ಮಾಲ ಸಮುದಾಯದ ಪಂಗಡಗಳು, ಉಪಪಂಗಡಗಳ ಬಗ್ಗೆ ಕುರಿತು ಮಾಹಿತಿ ಸಂಗ್ರಹಿಸಿ ಈ ಅಧ್ಯಯನಕ್ಕೆ ಅಳವಡಿಸಿಕೊಳ್ಳಲು ಉಪಯುಕ್ತವಾಗಿದೆ.

ರಹಮತ್ ತರೀಕೆರೆ ಅವರು, *'ಕರ್ನಾಟಕ ಶಾಕ್ತಪಂಥ'* (೨೦೧೭)[೨೬] ಎಂಬ ಕೃತಿಯಲ್ಲಿ ಕೋಣಬಲಿ ಬೇಡುವ ದುರುಗಮ್ಮನ ಗುಡಿಗಳು ಸಾಮಾನ್ಯವಾಗಿ ಹೊಲೆ ಮಾದಿಗರ ಕೇರಿಗಳಲ್ಲಿರುತ್ತವೆ. ಹೊಲೆ ಮಾದಿಗರ ದೈವವಾದ ದುರುಗಿಯ ಹೆಸರಲ್ಲಿವ 'ದುರ್ಗ' ಶಬ್ದಕ್ಕೂ ಆಕೆ ದುರ್ಗರಕ್ಷಕ ದೇವತೆಯಾಗಿರುವುದಕ್ಕೂ, ಮಾದಿಗರು ಕೋಟೆ ರಕ್ಷಕರಾಗಿರುವುದಕ್ಕೂ ಸಂಬಂಧವಿದೆ. ಅಲ್ಲೂರು ದೇವದುರ್ಗ ದೇವಗಿರಿಗಳಲ್ಲಿ ಕೋಟೆಗಳ ಮುಂದೆ ದುರ್ಗಮ್ಮನ ಗುಡಿಗಳಿವೆ. ಶಾಕ್ತಕ್ಷೇತ್ರಗಳಾದ ಬಾದಾಮಿ(ಚಾಲುಕ್ಯರು), ಚಂದ್ರಗುತ್ತಿ(ಗುತ್ತರು), ಸವದತ್ತಿ(ರಟ್ಟರು), ಕೊಲ್ಹಾಪುರ(ಶಾಹು ಮಹಾರಾಜ), ಮೈಸೂರು(ಒಡೆಯರು), ಉಚ್ಚಂಗಿದುರ್ಗ ಹಾಗೂ ಬಳ್ಳಾರಿಗಳು ಕೋಟೆಯ ಊರುಗಳು. ಮಾದಿಗರು ಬಹುಸಂಖ್ಯಾತರಾಗಿರುವ ಊರುಗಳು ಸಾಮಾನ್ಯವಾಗಿ ಕೋಟೆ ಮತ್ತು ಪ್ರಭುತ್ವಗಳಿದ್ದ ಪ್ರದೇಶಗಳಿಲ್ಲಿವೆ.

ಸಮುದಾಯವೊಂದರ ಪಂಥೀಯ ಹಿನ್ನೆಲೆಯು ಪ್ರಭುತ್ವಕ್ಕೆ ಬಳಕೆಯಾದ ಈ ಕ್ರಮದಲ್ಲಿ ಶೋಷಣೆಯ ಅಂಶವಿದೆ. ಆದರೆ ಅಲ್ಲಿ ಸಮುದಾಯವು ತನ್ನ ಕುಶಲತೆ ಬಳಸಿಕೊಂಡು ಸಾಮಾಜಿಕವಾಗಿ, ಆರ್ಥಿಕವಾಗಿ ಮುಂಚಲನೆ ಸಾಧಿಸಿದ ಮುಖವೂ ಅಡಗಿದೆ." ಈ ಕೃತಿಯ ಮೂಲಕ ಮಾಲ ಸಮುದಾಯದವರು ಆಗಿನ ಕಾಲದಲ್ಲಿ ಸೈನಿಕ ವೃತ್ತಿಯಲ್ಲಿ ಕಾರ್ಯನಿರ್ವಹಿಸಿರುವುದರ ಮಾಹಿತಿ ತಿಳಿದು ಈ ಅಧ್ಯಯನದ ಹಿನ್ನಲೆಯಲ್ಲಿ ಅವರ ಸೈನಿಕ ವೃತ್ತಿಯ ಕುರಿತು ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಿ ಈ ಅಧ್ಯಯನಕ್ಕೆ ಬಳಸಿಕೊಳ್ಳಲು ಉಪಯುಕ್ತವಾಗಿದೆ.

"ಎಸ್.ಎಸ್ ಹೀರೆಮಠ *'ದಲಿತ ಸಂಸ್ಕೃತಿ ಅಧ್ಯಯನ ಮಾಲೆ ೩ ದಲಿತ ಸಂಸ್ಕೃತಿ*(೨೦೧೮)[೨೭] ಎಂಬ ಕೃತಿಯಲ್ಲಿ ಕರ್ನಾಟಕದ ದಲಿತರೆಂದರೆ ಹೊಲೆಯರು ಒಂದು ಎಂದು ತಿಳಿಸಿದ್ದಾರೆ. ಕರ್ನಾಟಕದ ದಲಿತರಲ್ಲಿರುವ ಇನ್ನಿತರ ಜಾತಿಗಳನ್ನು ಹೆಸರಿಸಿ ಅದರಲ್ಲಿ ಹೊಲೆಯರು, ಮಾದಿಗರು ಕರ್ನಾಟಕದಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದಾರೆ ಇವರ ಸಂಸ್ಕೃತಿಯನ್ನೆ ಹೋಲುವ ಅಸ್ಪೃಶ್ಯರು ಆಂಧ್ರ, ತಮಿಳುನಾಡು ಮತ್ತು ಕೇರಳಗಳಲ್ಲಿದ್ದಾರೆ ಎಂದು ತಿಳಿಸಿದ್ದಾರೆ. ಮತ್ತು ಹೊಲೆಯ ಪದಗಳಿರುವ ಕರ್ನಾಟಕದ ಗ್ರಾಮಗಳಾದ ಹುಲಗೇರಿ, ಹುಲಸಗೇರಿ, ಹುಲಸನಹಟ್ಟಿ ಎಂಬ ಗ್ರಾಮಗಳನ್ನು ಗುರುತಿಸಿದ್ದಾರೆ. ನಂತರ ಹೊಲೆಯ ಪದದ ನಿಷ್ಪತ್ತಿಯನ್ನು ತಿಳಿಸಿದ್ದಾರೆ. ಉತ್ತರ ಕರ್ನಾಟಕದಲ್ಲಿ ಸೆಪ್ಟೆಂಬರ್ ಅಕ್ಟೋಬರಲ್ಲಿ ಬರುವ ಜೋಕುಮಾರನ ಹುಣ್ಣಿಮೆಗೆ ಹೊಲೆಯರ ಹುಣ್ಣಿಮೆ ಎಂದು ಹೇಳುತ್ತಾರೆ. ತೆಲುಗಿನಲ್ಲಿ ಮಾಲ ಹುಣ್ಣಿಮೆ ಎಂದು ಕರೆಯುತ್ತಾರೆ ಇವೆಲ್ಲ ಕೃಷಿ ಸಂಸ್ಕೃತಿಯ ಮಧ್ಯ ಹುಟ್ಟಿದುವೆ ಎಂದು ತಿಳಿಸಿದ್ದಾರೆ" ಈ ಕೃತಿಯಲ್ಲಿ ಹೊಲೆಯ ಪದಕ್ಕೆ ಹೊಂದಿಕೆಯಾಗುವ ಕೆಲವು ಊರುಗಳಾದ ಹುಲಗೇರಿ ಹುಲಸಗೇರಿ ಹುನಸನಟ್ಟಿ ಇವುಗಳನ್ನು ಗುರುತಿಸಿದ್ದಾರೆ. ಆದರೆ ಈ ಎಲ್ಲಾ ಉರುಗಳಲ್ಲಿ ಹೊಲೆಯರು ಕಂಡುಬರುವದಿಲ್ಲ ಅಲ್ಲಿ ಹೊಲೆಯರಿಗ ಹತ್ತಿರವಿರುವ ಇನ್ನೊಂದು ಪರಿಶಿಷ್ಟ ಜಾತಿಯ ಇನ್ನೊಂದು ಎಡಗೈ ಫಣ ಸಮುದಾಯವಾದ ಮಾದಿಗ ಸಮುದಾಯದವರು ಕಂಡುಬರುತ್ತಾರೆ.

ಈ ಮೇಲಿನ ಅಧ್ಯಯನಗಳನ್ನು ಅವಲೋಕಿಸಿದಾಗ ಮೇಲಿನ ಅಧ್ಯಯನಕಾರರು ಹೇಳಿದ ಹಾಗೆ ಈ ಅಧ್ಯಯನಕ್ಕಾಗಿ ಹಾಕಿಕೊಂಡಿರುವಂತಹ ಉದ್ದೇಶಗಳು ಈ ಮೇಲಿನ ಪುಸ್ತಕಗಳಲ್ಲಿ ಬಂದಿರುವದಿಲ್ಲ. ಆದ್ದರಿಂದ ಅವುಗಳ ಕೊರತೆಗಳನ್ನು ನೀಗಿಸುವ ಪ್ರಯತ್ನವನ್ನು ಮಾಡುವುದರ ಮೂಲಕ ಈ ಕೆಳಗಿನ ಉದ್ದೇಶವನ್ನಿಟ್ಟುಕೊಂಡು ಈ ಹಿನ್ನಲೆಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೧.೨ ಅಧ್ಯಯನದ ಉದ್ದೇಶ

ಕರ್ನಾಟಕದಲ್ಲಿ ನೆಲೆಸಿರುವ ಅಲೆಮಾರಿತನವನ್ನು ಮೈಗೂಡಿಸಿಕೊಂಡಿರುವ ಮಾಲ ಸಮುದಾಯದ ಸಾಮಾಜಿಕ ಅಧ್ಯಯನವನ್ನು ಇಲ್ಲಿಯವರೆಗೆ ಕನ್ನಡದಲ್ಲಿ, ಅದರಲ್ಲೂ ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ನಡೆದ ಉದಾಹರಣೆಗಳಿಲ್ಲ. ಮಾಲ ಸಮುದಾಯವು ಬರೀ ಪರಿಶಿಷ್ಟ ಸಮುದಾಯಕ್ಕೆ ಸೇರಿದ ಸಮುದಾಯ ಮಾತ್ರವಲ್ಲ. ಅದು ಎಲ್ಲಾ ಕ್ಷೇತ್ರಗಳಲ್ಲಿಯೂ ಅತ್ಯಂತ ಹಿಂದುಳಿದ ತುಳಿತಕ್ಕೊಳಪಟ್ಟ ಸಮುದಾಯವಾಗಿದೆ. ಈ ಹಿನ್ನೆಲೆಯಲ್ಲಿ ಮಾಲ ಸಮುದಾಯದ ಮೂಲ, ಅದರ ಸಾಮಾಜಿಕ ಹಿನ್ನೆಲೆಯನ್ನು ಅರಿಯುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. ಜೊತೆಗೆ ಅವರ

ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನಗಳ ಕುರಿತು ಚರ್ಚಿಸುವ ಉದ್ದೇಶವನ್ನು ಈ ಅಧ್ಯಯನವು ಒಳಗೊಂಡಿದೆ. ಮುಖ್ಯವಾಗಿ ಸಾಮಾಜಿಕವಾಗಿ ಈ ಸಮುದಾಯವು ಎದುರಿಸುತ್ತಿರುವ ಸಮಸ್ಯೆ ಹಾಗೂ ಸವಾಲುಗಳು ಯಾವ ರೀತಿಯಲ್ಲಿವೆ, ಅವರು ಮುಖ್ಯವಾಹಿನಿಗೆ ತಲುಪಲು ಯಾವ ರೀತಿಯ ಪರಿಹಾರೋಪಾಯಗಳನ್ನು ಕಂಡುಕೊಳ್ಳಬಹುದು ಎಂಬುದನ್ನು ಅಧ್ಯಯನಕ್ಕೊಳಪಡಿಸುವ ಉದ್ದೇಶದಿಂದ ಈ ಅಧ್ಯಯನ ಕೈಗೊಳ್ಳಲಾಗಿದೆ. ಪ್ರಸ್ತುತ ಈ ಅಧ್ಯಯನವು ಈ ಕೆಳಗಿನ ಉದ್ದೇಶಗಳನ್ನು ಹೊಂದಿದೆ.

೧. ಮಾಲ ಸಮುದಾಯದ ಹಿನ್ನೆಲೆಯನ್ನು ಅರಿಯುವದು.

೨. ಮಾಲ ಸಮುದಾಯದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಜೀವನಗಳನ್ನು ವಿಶ್ಲೇಷಣೆಗೆ ಒಳಪಡಿಸುವದು.

೩. ಮಾಲ ಸಮುದಾಯದ ಸ್ಥಿತ್ಯಂತರದ ಅಂಶಗಳನ್ನು ಅಧ್ಯಯನಿಸುವುದು.

೪. ವರ್ತಮಾನದಲ್ಲಿ ಮಾಲ ಸಮುದಾಯ ಎದುರುಸಿತ್ತಿರುವ ಸಮಸ್ಯೆಗಳನ್ನು ಅರಿಯುವದು ಮತ್ತು ಸೂಕ್ತ ಪರಿಹಾರೋಪಾಯಗಳನ್ನು ನೀಡುವುದು.

೧.೩ ಅಧ್ಯಯನದ ವ್ಯಾಪ್ತಿ

ಅಧ್ಯಯನಕಾರನು ಯಾವುದೇ ನಿರ್ಧಿಷ್ಟ ವಿಷಯದ ಮೇಲೆ ಅಧ್ಯಯನ ಕೈಗೊಳ್ಳಬೇಕೆಂದರೆ ಆ ಅಧ್ಯಯನಕ್ಕೆ ಒಂದು ನಿರ್ಧಿಷ್ಟ ಗುರಿ ಹಾಗೂ ವ್ಯಾಪ್ತಿ ಇರಬೇಕಾಗುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಕರ್ನಾಟಕದಲ್ಲಿ ನೆಲೆಸಿರುವ ಅಲೆಮಾರಿ ಜೀವನವನ್ನು ಮೈಗೂಡಿಸಿಕೊಂಡಿರುವ ಮಾಲ (ಪರ್ವತ ಮಲ್ಲಯ್ಯ) ಸಮುದಾಯವನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಹೀಗಾಗಿ ಕರ್ನಾಟಕದಲ್ಲಿ ಅಲೆಮಾರಿ ಮಾಲ ಸಮುದಾಯ ನೆಲೆಸಿರುವ ಜಿಲ್ಲೆಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಕರ್ನಾಟಕದಲ್ಲಿ ಅಲೆಮಾರಿ ಮಾಲ ಸಮುದಾಯವು ಕೊಪ್ಪಳ, ಗದಗ, ಹುಬ್ಬಳ್ಳಿ, ಹಾವೇರಿ, ಮೈಸೂರು, ಶಿವಮೊಗ್ಗ, ರಾಯಚೂರು ಜಿಲ್ಲೆಯ ಕೆಲವೇ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿದೆ. ಹೀಗಾಗಿ ಅಧ್ಯಯನಕ್ಕೆ ಈ ಏಳು ಜಿಲ್ಲೆಗಳಲ್ಲಿ ಮಾಲ ಸಮುದಾಯ ಎಲ್ಲಿ ನೆಲೆಸಿದೆಯೋ ಅಂತಹ ಊರುಗಳನ್ನು ಮಾತ್ರ ಅಧ್ಯಯನ ವ್ಯಾಪ್ತಿಗೆ ಒಳಪಡಿಸಲಾಗಿದೆ.

೧.೪ ಅಧ್ಯಯನದ ಮಹತ್ವ

ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಮುಂಚೂಣಿಯಲ್ಲಿರುವ ಬಹುಸಂಖ್ಯಾತವಾದ ಹಲವು ಸಮುದಾಯಗಳ ಕುರಿತು ಹಲವಾರು ಅಧ್ಯಯನಗಳು ನಡೆದಿವೆ. ಅದರೆ ಇಲ್ಲಿಯವರೆಗೆ ಕನ್ನಡದಲ್ಲಿ ಮಾಲ(ಪರ್ವತ ಮಲ್ಲಯ್ಯ) ಸಮುದಾಯದ ಸಾಮಾಜಿಕ ಅಧ್ಯಯನದ ಹಿನ್ನೆಲೆಯಲ್ಲಿ ಯಾರೂ ಅಧ್ಯಯನವನ್ನು ಕೈಗೊಂಡಿರುವ ಉದಾಹರಣೆಗಳಿಲ್ಲ. ಹೀಗಾಗಿ ಮಾಲ ಸಮುದಾಯದ ಸಾಮಾಜಿಕ ಅಧ್ಯಯನವನ್ನು ನಡೆಸಿದ ಅಧ್ಯಯನಗಳಲ್ಲಿ ಈ ಅಧ್ಯಯನವು ಮೊದಲ ಪ್ರಯತ್ನವಾಗಿದೆ. ಈ ಅಧ್ಯಯನದಿಂದ ಈ ಸಮುದಾಯದ ವಾಸ್ತವ ಸ್ಥಿತಿ ಸಮಾಜಕ್ಕೆ ತಿಳಿಯಲು ಸಾಧ್ಯವಾಗುವುದು.

ಪರಿಶಿಷ್ಟ ಜಾತಿಗಳಲ್ಲಿಯೇ ತೀರ ಅಲ್ಪ ಸಂಖ್ಯಾತವಾದ ಹಾಗೂ ಅಲಕ್ಷಿತವಾದ ಸಮುದಾಯವು ಇದಾಗಿದೆ. ಪ್ರಸ್ತುತ ಸಮಾಜದಲ್ಲಿ ಮಾಲ ಸಮುದಾಯವು ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಅಂತಹ ಸಮಸ್ಯೆಗಳಲ್ಲಿ ಮುಖ್ಯವಾಗಿ ಅಸ್ಪೃಶ್ಯತೆ, ಬಾಲ್ಯವಿವಾಹ, ಅಲೆಮಾರಿತನ, ಬಡತನ, ವಸತಿ ಸಮಸ್ಯೆ, ಆರ್ಥಿಕವಾಗಿ ಶೋಷಣೆಗೆ ಒಳಗಾಗಿರುವುದು, ಶೈಕ್ಷಣಿಕವಾಗಿ ಎಷ್ಟು ಪ್ರಗತಿ ಕಾಣಬಹುದಾಗಿತ್ತೋ ಅಷ್ಟು ಪ್ರಗತಿ ಕಾಣದೆ ಬಳಲುತ್ತಿರುವುದು, ರಾಜಕೀಯವಾಗಿ ಹಿಂದುಳಿದಿರುವುದು, ಆಹಾರ ಮತ್ತು ಆರೋಗ್ಯ ಸಮಸ್ಯೆ ಇಂತಹ ಹತ್ತು ಹಲವು ಸಮಸ್ಯೆಗಳನ್ನು ಮಾಲ ಸಮುದಾಯವು ಎದುರಿಸುತ್ತಿದೆ. ಇಂತಹ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು ಹೇಗೆ, ಅವನ್ನು ಹೇಗೆ ಅನುಷ್ಠಾನಗೊಳಿಸಿದರೆ ಸಮುದಾಯದ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂಬುದು ಈ ಅಧ್ಯಯನದ ಮೂಲಕ ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಬಹುಮುಖ್ಯವಾಗಿ ಈ ಸಮುದಾಯವು ನಾಗರೀಕ ಸಮಾಜದಿಂದ ಬಲುದೂರ ಉಳಿದಿದೆ. ಈ ಕಾರಣಕ್ಕಾಗಿ ಇಂತಹ ನಿರ್ಲಕ್ಷಿತ ಸಮುದಾಯವನ್ನು ಅಧ್ಯಯನ ಮಾಡುವುದು ತುಂಬಾ ಮಹತ್ವವಾದುದು ಎಂದು ಭಾವಿಸಲಾಗಿದೆ.

೧.೫ ಅಧ್ಯಯನ ವಿಧಾನ

ಅಲೆಮಾರಿ ಮಾಲ ಸಮುದಾಯವು ತುಂಬಾ ಕಡಿಮೆ ಜನಸಂಖ್ಯೆಯನ್ನು ಹೊಂದಿದೆ. ಹೀಗಾಗಿ ಪ್ರಸ್ತುತ ಅಧ್ಯಯನಕ್ಕೆ ಹೋಲಿಸ್ಟಿಕ್ ವಿಧಾನವನ್ನು ಬಳಸಲಾಗಿದೆ. ಮುಖ್ಯವಾಗಿ ಈ ಅಧ್ಯಯನ ನಡೆಸಲು ಚಾರಿತ್ರಿಕ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ, ಸಂದರ್ಶನ ವಿಧಾನ, ಸಹಭಾಗಿತ್ವ ವಿಧಾನ ಹಾಗೂ ಪ್ರಶ್ನಾವಳಿಯ ವಿಧಾನಗಳನ್ನು ಅನುಸರಿಸಲಾಗಿದೆ. ಹಾಗೆ ನಕ್ಷೆಗಳು, ಕೋಷ್ಟಕಗಳು ಮುಂತಾದವುಗಳನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಐತಿಹಾಸಿಕ ವಿಧಾನ: ಯಾವುದೇ ಒಂದು ಜಾತಿ, ಸಮುದಾಯಕ್ಕೆ ಅದರದೇ ಆದ ಇತಿಹಾಸವಿರುತ್ತದೆ. ಆ ಸಮುದಾಯದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಹಿನ್ನೆಲೆಗಳನ್ನು ಅರಿಯಲು ಚಾರಿತ್ರಿಕ ವಿಧಾನದಿಂದ ನೋಡಿದಾಗ ಮಾತ್ರ ಆ ಸಮುದಾಯದ ಹಿನ್ನೆಲೆಯನ್ನು ಅರಿಯಲು ಸಾಧ್ಯವಾಗುತ್ತದೆಂಬುದರಿಂದ ಚಾರಿತ್ರಿಕ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಪ್ರಸ್ತುತ ಈ ಅಧ್ಯಯನವು ಕರ್ನಾಟಕದಲ್ಲಿ ವಾಸವಾಗಿರುವ ಪರ್ವತ ಮಲ್ಲಯ್ಯ ಸಮುದಾಯದ ಅಂಕಿ ಅಂಶಗಳ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ.

ಸಂದರ್ಶನ ವಿಧಾನ: ಮಾಲ (ಪರ್ವತ ಮಲ್ಲಯ್ಯ) ಸಮುದಾಯದ ಹಿರಿಯ ವ್ಯಕ್ತಿಗಳನ್ನು ಮಾಹಿತಿದಾರರನ್ನು ನೇರವಾಗಿ ಸಂದರ್ಶಿಸುವ ಮೂಲಕ ಈ ಸಮುದಾಯದ ನಡೆ-ನುಡಿ, ಸಂಸ್ಕಾರ, ಸಂಸ್ಕೃತಿ, ನಂಬಿಕೆ, ಆಚಾರ ವಿಚಾರಗಳಲ್ಲದೆ ಅವರಲ್ಲಿ ಪುರುಷ ಹಾಗೂ ಮಹಿಳೆಯರ ಸ್ಥಾನಮಾನದ ಸ್ವರೂಪಗಳೂ ತಿಳಿಯುವವು. ಮೊದಲಾದ ವಿಷಯಗಳನ್ನು ಅರಿಯಲು ಈ ವಿಧಾನವನ್ನು ಅನುಸರಿಸಲಾಗಿದೆ ಈ ಕಾರಣಕ್ಕಾಗಿ ಸಂದರ್ಶನದ ಮೂಲಕ ಕಲೆಹಾಕಿದ ಮಾಹಿತಿಯನ್ನು ಕ್ರೂಢಿಕರಿಸಿ ಅಧ್ಯಯನದಲ್ಲಿ ಆ ಮಾಹಿತಿಯನ್ನು ಉಪಯೋಗಿಸಿಕೊಳ್ಳಲಾಗಿದೆ.

ಸಹಭಾಗಿತ್ವ ವಿಧಾನ: ಈ ವಿಧಾನದಲ್ಲಿ ಮಾಲ (ಪರ್ವತ ಮಲ್ಲಯ್ಯ) ಸಮುದಾಯದಲ್ಲಿ ನಡೆಯುವಂತಹ ಹಬ್ಬಗಳು, ಹರಿದಿನಗಳು, ಹಿರಿಯರ ಹಬ್ಬ, ಜಾತ್ರೆ, ಉತ್ಸವ, ಸಭೆ-ಸಮಾರಂಭಗಳು, ಜನನದಿಂದ ಮರಣದವರೆಗಿನ ಸಂಸ್ಕಾರಗಳು, ಸಂಪ್ರದಾಯಗಳು, ವಿಚಾರಗಳು, ಮೂದಲಾದ ಆಚರಣೆಗಳಲ್ಲದೆ ಅವರ ಜೀವನ ಶೈಲಿಯನ್ನು ಅರಿತುಕೊಳ್ಳಲು ಸಹಭಾಗಿತ್ವ ವಿಧಾನವು ಅವಶ್ಯವಾಗಿದೆ. ಹೀಗಾಗಿ ಅವರ ಕುಲಪಂಚಾಯತಿ, ಹಬ್ಬ ಹರಿದಿನಗಳಲ್ಲಿ ನಡೆಸುವ ಆಚರಣೆಗಳನ್ನು ಅರಿಯಲು ಅವರೊಂದಿಗೆ ಸಹಭಾಗಿಯಾಗಿ ಮಾಹಿತಿಯನ್ನು ಕ್ರೂಢಿಕರಿಸಿ ಅಧ್ಯಯನದಲ್ಲಿ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಪ್ರಪ್ರಥಮ ಬಾರಿಗೆ ಮಾಲ ಸಮುದಾಯದ ಜನರನ್ನು ಬೇಟಿ ಮಾಡಿದಾಗ ತಮ್ಮ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ, ಮೂದಲಾದ ವಿಷಯಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಲಿಲ್ಲ, ಪುನಃ ಪುನಃ ಬೇಟಿ ಮಾಡಿ ಅಧ್ಯಯನದ ವಿಷಯದ ಬಗ್ಗೆ ಮನವರಿಕೆ ಮಾಡಿಕೊಟ್ಟಾಗ ಮತ್ತು ಸಮುದಾಯದ ಬಗ್ಗೆ ಅಧ್ಯಯನ ಮಾಡಲಾಗುತ್ತದೆ ಇದರಿಂದ ನಿಮಗೆ ಏನು ತೊಂದರೆಯಾಗುವದಿಲ್ಲವೆಂದು ಹೇಳಿಕೊಟ್ಟಾಗ ನಾನು ಕೇಳಿದ ವಿಷಯಗಳನ್ನು ಕುರಿತು ಪೂರ್ಣ ವಿವರಗಳನ್ನು ನೀಡಲು ಸಹಕರಿಸಿದರು. ಈ ಸಮುದಾಯದ ಕೆಲವು ವಿಶೇಷ ಸಂದರ್ಭದಲ್ಲಿ ಅಂದರೆ ಹಬ್ಬ-ಹರಿದಿನಗಳ, ಜಾತ್ರೆ, ಉತ್ಸವಗಳ ಮೊದಲಾದ ಕಾರ್ಯಕ್ರಮಗಳಲ್ಲಿ ಬಾಗಿಯಾಗಿ ಛಾಯಾಚಿತ್ರಗಳನ್ನು ತೆಗೆಯಲಾಗಿತ್ತು.

ಪ್ರಶ್ನಾವಳಿಯ ವಿಧಾನ: ಪರಿಶಿಷ್ಟ ಜಾತಿಯ ಅಲೆಮಾರಿ ಮಾಲ ಸಮುದಾಯದ ಕುಟುಂಬಗಳ ಮಾಹಿತಿಯನ್ನರಿಯಲು ಅಧ್ಯಯನಕ್ಕೆ ಒಳಪಡಿಸಿದ ಪ್ರತಿಯೊಂದು ಕುಟುಂಬದ ಮಾಹಿತಿಯನ್ನು ಪಡೆಯಲು ಪ್ರಶ್ನಾವಳಿಯ ಮಾದರಿಗಳನ್ನು ಬಳಸಲಾಗಿದೆ. ಒಂದು ಪ್ರಶ್ನಾವಳಿಯು ಸಾಮಾನ್ಯವಾದ ಮಾಹಿತಿ ಪಡೆಯಲು ಬಳಸಿದರೆ ಮತ್ತೊಂದು ಪ್ರಶ್ನಾವಳಿಯು ವಿಶೇಷವಾಗಿದ್ದು ಮಾದರಿ ಪ್ರಶ್ನಾವಳಿಯಾಗಿದೆ. ಮಾಹಿತಿದಾರರಿಂದ ವಿಸ್ತೃತವಾದ ಮಾಹಿತಿಯನ್ನು ಪಡೆಯಲು ಈ ಪ್ರಶ್ನಾವಳಿಯನ್ನು ಬಳಸಲಾಗಿದೆ. ಪ್ರಶ್ನಾವಳಿಗಳ ಮಾಹಿತಿಯನ್ನು ಕ್ರೂಢಿಕರಿಸಿ ಅಧ್ಯಯನದಲ್ಲಿ ಅವಶ್ಯಕವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲಾಗಿದೆ. ಹಾಗೆಯೇ ಈ ಅಧ್ಯಯನದಲ್ಲಿ ಸಬಲೀಕರಣದ ಕುರಿತು ಇಲ್ಲಿಯವರೆಗೆ ಬಂದಿರುವ ಕೃತಿಗಳು, ಗೆಜೆಟಿಯರಗಳು, ಪತ್ರಿಕೆಗಳು, ಬಿಡಿ ಲೇಖನಗಳು, ಜನಗಣತಿ ವರದಿಗಳು, ಮಾನವಾಭಿವೃದ್ಧಿ ವರದಿ, ಪರಿಶಿಷ್ಟ ಜಾತಿಗಳ ಕುರಿತಾಗಿ ಬಂದಿರುವ ವರದಿಗಳು, ಆಯೋಗಗಳ ವರದಿಗಳು ಹಾಗೂ ಇತರ ಮೂಲಗಳಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಹಾಗೆ ಕರ್ನಾಟಕದಲ್ಲಿ ನೆಲೆಸಿರುವ ಅಲೆಮಾರಿ ಮಾಲ ಸಮುದಾಯದ ಸದಸ್ಯರನ್ನು ನೇರವಾಗಿ ಸಮೀಕ್ಷಿಸಿ ಸಂದರ್ಶನ ನಡೆಸಲಾಗಿದೆ. ಈ ರೀತಿ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯ ಚಾರಿತ್ರಿಕ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ, ಸಹಭಾಗಿತ್ವ ವಿಧಾನಗಳಿಂದ ಕ್ರೂಢಿಕರಿಸಿದ ಅಂಶಗಳನ್ನು ತುಲನಾತ್ಮಕವಾಗಿ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

೧.೬ ಅಧ್ಯಯನದ ವಿನ್ಯಾಸ

ಈ ಅಧ್ಯಯನವನ್ನು ಮೊದಲ ಏಳು ಅಧ್ಯಾಯಗಳಲ್ಲಿ ವಿಸ್ತಾರವಾಗಿ ನೋಡಲಾಗಿದೆ. **ಮೊದಲ ಅಧ್ಯಾಯವು ಅಧ್ಯಯನದ ಉದ್ದೇಶ ಹಾಗೂ ವ್ಯಾಪ್ತಿಯಾಗಿದ್ದು** ಇದರಲ್ಲಿ ಅಧ್ಯಯನದ ಉದ್ದೇಶ,

ವ್ಯಾಪ್ತಿ, ಮಹತ್ವ, ಅಧ್ಯಯನ ವಿಧಾನ, ಅಧ್ಯಾಯಗಳ ವಿನ್ಯಾಸ ಹಾಗೂ ಇಲ್ಲಿಯವರೆಗೂ ನಡೆದ ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗಿದೆ.

ಎರಡನೇ ಅಧ್ಯಾಯವು ಮಾಲ ಸಮುದಾಯದ ಚಾರಿತ್ರಿಕ ಹಿನ್ನಲೆ, ಎಂದಿದ್ದು ಅದರಲ್ಲಿ ಮಾಲ ಪದದ ಪದ ನಿಷ್ಪತ್ತಿ, ಮಾಲ ಸಮುದಾಯದ ಮೂಲ, ಮಾಲ(ಪರ್ವತ ಮಲ್ಲಯ್ಯ) ಸಮುದಾಯಕ್ಕಿರುವ ಪರ್ಯಾಯ ಪದಗಳು, ಮಾಲ ಸಮುದಾಯದ ಒಳಗಿರುವ ಪಂಗಡಗಳು, ಬೆಡಗುಗಳು, ಮಾಲ ಹುಟ್ಟಿನ ಕುರಿತಾಗಿರುವ ಪೌರಾಣಿಕ ಕಥೆಗಳು, ಭೌಗೋಳಿಕ ಪರಿಸರ, ಜನಸಂಖ್ಯೆ, ಇತರ ವೃತ್ತಿಯವರು ಮತ್ತು ಸಮಾಜಗಳೊಂದಿಗೆ ಸಂಬಂಧಗಳು, ಇತ್ಯಾದಿ ವಿವರಗಳನ್ನು ನೋಡಲಾಗಿದೆ.

ಅಧ್ಯಾಯ ಮೂರರಲ್ಲಿ ಮಾಲ ಸಮುದಾಯದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದ ಕುರಿತು ಗಮನಿಸಲಾಗಿದೆ. ಇದರಲ್ಲಿ ಮಾಲ ಸಮುದಾಯದ ಸಾಮಾಜಿಕ ಸ್ಥಾನಮಾನ, ಹುಟ್ಟು, ಸಾವು, ವಿವಾಹ, ವಿಧಿನಿಷೇಧ ಇತ್ಯಾದಿ ಜೀವನಾವರ್ತನ ಆಚರಣೆ ಹಾಗೂ ವಾರ್ಷಿಕವಾಗಿ ಅವರೊಳಗೆ ನಡೆಯುವ ಹಬ್ಬ, ಜಾತ್ರೆ ಇತ್ಯಾದಿ ಆಚರಣೆಗಳನ್ನೂ ನೋಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಮಾಲ ಸಮುದಾಯದ ಆರ್ಥಿಕ ಜೀವನ ಮತ್ತು ಅವರ ಸಂಘಗಳು ಕುರಿತು ನೋಡಲಾಗಿದ್ದು ಇದರಲ್ಲಿ ಮಾಲ ಸಮುದಾಯದ ಮೂಲ ವೃತ್ತಿ, ಅವಲಂಭಿತ ವೃತ್ತಿಗಳು, ಕಾಯಕಾರ್ಹರು, ಕಾಯಕ ನಿರತರ ವಿವರಗಳೊಂದಿಗೆ ಬೇಟೆಯ ಕುರಿತೂ ವಿವರಗಳಿವೆ ಹಾಗೂ ಅವರ ಸಮುದಾಯದ ಅಭಿವೃದ್ದಿಗಾಗಿ ರೂಪಿಸಿಕೊಂಡಿರುವ ಸಂಘಗಳು ಹಾಗೂ ಕಲಾ ಪ್ರದರ್ಶನಕ್ಕಾಗಿ ರೂಪಿಸಿಕೊಂಡಿರುವ ಸಂಘ ಸಂಸ್ಥೆಗಳ ವಿವರಗಳಿವೆ.

ಅಧ್ಯಾಯ ಐದು ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನ ಎಂದಿದ್ದು ಇದರಲ್ಲಿ ಪ್ರಮುಖವಾಗಿ ಮಾಲ ಸಮುದಾಯದಲ್ಲಿ ಆಧುನಿಕ ಶಿಕ್ಷಣ ಪಡೆಯಲು ಎಷ್ಟು ಜನ ಅರ್ಹರಿದ್ದಾರೆ, ಎಷ್ಟು ಜನ ಅರ್ಹರಲ್ಲ, ಅರ್ಹರಿರುವಲ್ಲಿ ಎಷ್ಟು ಜನ ಅಕ್ಷರಸ್ಥರಾಗಿರುವರು, ಅಕ್ಷರಸ್ಥರಲ್ಲಿಯೇ ಎಷ್ಟು ಜನ ಯಾವ ಹಂತದವರೆಗೆ ಶಿಕ್ಷಣ ಪಡೆಯಲು ಸಾಧ್ಯವಾಗಿದೆ, ಇವರಲ್ಲಿ ಉನ್ನತ ಶಿಕ್ಷಣದ ಮಟ್ಟ ಎಷ್ಟಿದೆ ಇತ್ಯಾದಿ ವಿವರಗಳನ್ನು ಗಮನಿಸಲಾಗಿದೆ ಮತ್ತು ಮಾಲ ಸಮುದಾಯದ ರಾಜಕೀಯ ಪಾಲ್ಗೊಳ್ಳುವಿಕೆಯ ಸ್ಥಿತಿ ಹೇಗಿದೆ ಎಂಬುದನ್ನು ನೋಡಲಾಗಿದೆ.

ಅಧ್ಯಾಯ ಆರು ಆಹಾರ ಹಾಗೂ ಆರೋಗ್ಯ ಎಂದಿದ್ದು ಇದರಲ್ಲಿ ಮಾಲ ಸಮುದಾಯದ ಆಹಾರದ ಸ್ಥಿತಿ ಹೇಗಿದೆ, ಅವರು ದಿನನಿತ್ಯ ಬಳಕೆ ಮಾಡುವ ಆಹಾರ ಎಂತಹದ್ದು, ಇಂದು ಬಡತನರೇಖೆಯ ಕೆಳಗಿರುವವರಿಗೆ ನೀಡುತ್ತಿರುವ ನ್ಯಾಯಬೆಲೆ ಅಂಗಡಿಯಿಂದ ಪಡಿತರ ಧಾನ್ಯಗಳನ್ನು ಪಡೆಯಲು ಎಷ್ಟು ಕುಟುಂಬಗಳು ಸಾಮರ್ಥ್ಯ ಹೊಂದಿವೆ, ಆರೋಗ್ಯ ಸ್ಥಿತಿಗತಿ ಹೇಗಿದೆ, ಇವರ ನಾಟಿ ವೈದ್ಯ ಪದ್ಧತಿ ಹೇಗೆ ಮಾಡುವರು ಎಂಬುದನ್ನು ನೋಡಲಾಗಿದೆ. ಮತ್ತು ಮಾಲ ಸಮುದಾಯ ಮತ್ತು ಆಧುನಿಕ ಜಗತ್ತು,

ಅಧ್ಯಾಯ ಏಳು ಸಮಾರೋಪ, ಅಧ್ಯಯನದ ಫಲಿತಗಳು, ಅಧ್ಯಯನದ ಸಲಹೆಗಳು, ಅಧ್ಯಯನದ ಮುಂದಿನ ಸಾಧ್ಯತೆಗಳು, ಹಾಗೂ ಅನುಬಂಧಗಳಿವೆ.

ಒಟ್ಟಾರೆಯಾಗಿ ಈ ಅಧ್ಯಯನದಲ್ಲಿ ಅಲೆಮಾರಿಗಳಾಗಿ ಗುರುತಿಸಿಕೊಂಡಿರುವ ಮಾಲ ಸಮುದಾಯದ ಸಾಮಾಜಿಕ ಹಾಗೂ ಆರ್ಥಿಕ, ಶೈಕ್ಷಣಿಕ, ಆರೋಗ್ಯ ಹಾಗೂ ರಾಜಕೀಯ ಪರಿಸ್ಥಿತಿಗಳನ್ನು ಅರಿಯಲು ಸಾಧ್ಯವಾಗಿದೆ.

ಕೊನೆ ಟಿಪ್ಪಣಿ

೧. ಚ. ನ. ಶಂಕರರಾವ್, (೨೦೦೦) "ಸಮಾಜಶಾಸ್ತ್ರದ ಮೂಲತತ್ವಗಳು" ಜೈ ಭಾರತ ಪ್ರಕಾಶನ ಮಂಗಳೂರ.

೨. ಡಾ. ತಾರಿಹಳ್ಳಿ ಹನುಮಂತಪ್ಪ, (೨೦೧೦) ಕರ್ನಾಟಕ ಬುಡಕಟ್ಟು ಸಮುದಾಯಗಳು. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೩. ಹಯವದನರಾವ್, (೧೯೦೧), "ದ ಮೈಸೂರು ಟ್ರೈಬ್ಸ ಮತ್ತು ಕ್ಯಾಸ್ಟ್", ಏಷಿಯನ್ ಎಜ್ಯುಕೇನಲ್ ಸರ್ವೀಸಸ್, ನ್ಯೂದೆಲ್ಲಿ

೪. ಅದೇ ಪುಟ---------(೧೯೦೧)

೫. ಎಡ್ಗರ್ಡ್ ಥರ್ಸ್ಟನ್, (೧೯೦೯) "ಕಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರ್ನ ಇಂಡಿಯಾ" ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಆಕ್ಸ್‌ಫರ್ಡ್

೬. SIRAJ UL HASSN , (1920), CASTE S AND TRIBES OF H E H THE NIZAM'S DOMINATIONS, VOLUME 1, Bombay the times press

೭. ನಂಜುಂಡಯ್ಯ, "ಕಾಸ್ಟ್ ಅಂಡ್ ಟ್ರೈಬ್ಸ್ ಇನ್ ಮೈಸೂರು ಸ್ಟೇಟ್"(೧೯೪೫) ಏಷಿಯನ್ ಎಜ್ಯುಕೇನಲ್ ಸರ್ವೀಸಸ್, ನ್ಯೂದೆಲ್ಲಿ

೮. ಕೆಂದ್ರ ಸರಕಾರದ (೧೯೬೧) "ಅಂತ್ರೂಪಾಲಜಿಕಲ್ ಸರ್ವೇ ಆಪ್ ಇಂಡಿಯಾ" ಎಂತ್ರೊಪಾಲಜಿಕಲ್ ನೋಟ್ಸ ಆಫ್ ಎಸ್ ಸಿ

೯. ಕಮಲಾಕ್ಷಿ ಪಿ (೧೯೬೮) ಧಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನ ಸಾಮಾಜಿಕ ಇತಿಹಾಸ

೧೦. Enthoven R. E, 1990, the Tribes and Castes of Bombay, Asian Educational Services, New Delhi, Vol. 1.

೧೧. ಕೊಟಿಗಾನಹಳ್ಳಿ ರಾಮಯ್ಯ, (೧೯೯೩) "ಸಿಂದ್ ಮಾದಿಗರರ ಸಂಸ್ಕೃತಿ" ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು

೧೨. ಲಕ್ಷ್ಮಿಪತಿ ಕೊಲಾರ, (೧೯೯೩) "ಮಾಸ್ಟಿಕರ ಸಂಸ್ಕೃತಿ" ಮಾಸ್ಟಿಕರ ಸಂಸ್ಕೃತಿ ಕನ್ನಡ ಸಾಹಿತ್ಯ ಅಕಾಡೆಮಿ,ಬೆಂಗಳೂರ

೧೩. Singh K S, (1994), the Scheduled Castes, Anthropological Survey of India, New Delhi.

೧೪. ದಾಸನೂರು ಕೂಸಣ್ಣ, (೧೯೯೫) "ಶೋಷಿತ ಜಂಗಮರ ಮೀಸಲಾತಿ" ಮಾತಂಗ ಪ್ರಕಾಶನ, ಮೈಸೂರು.

೧೫. ಸೂರ್ಯನಾಥ ಯು ಕಾಮತ್(೧೯೯೫) "ಧಾರವಾಡ ಜಿಲ್ಲೆ ಗಾಸೆಟಿಯರ್" ಕರ್ನಾಟಕ ಗ್ಯಾಸೆಟಿಯರ್ ೮ ನೆ ಮಹಡಿ ಬೆಂಗಳೂರ

೧೬. ಸುಭಾಸ್ ಭರಣಿ, "ಧರೆಗೆ ದೊಡ್ಡವರು" (೧೯೯೬)ಕನ್ನಡ ಪುಸ್ತಕ ಪ್ರಾದಿಕಾರ ಬೆಂಗಳೊರ.

೧೭. ಎಂ. ವೆಂಕಟಸ್ವಾಮಿ, (೧೯೯೭) "ಅಸ್ಪೃಶ್ಯರು ಒಂದು ಪರಿಶೀಲನೆ" ನವಕರ್ನಾಟಕನ ಪಬ್ಲಿಕೆಷನ್ಸ ಬೆಂಗಳೊರ

೧೮. ಎಂ.ಬಿ ಪಾಟೀಲ (೧೯೯೭) "ಗುಲಬರ್ಗಾ ಜಿಲ್ಲೆ ಗ್ಯಾಜೆಟಿಯರ್" ಡಾ. ಅಂಬೆಡ್ಕರ್ ವೀದಿ ಬೆಂಗಳೂರ

೧೯. ಡಾ. ಆರ್ ಮುನಿಸ್ವಾಮಿ. (೧೯೯೯) "ವಿಜಾಪೂರ ಜಿಲ್ಲೆ ಗ್ಯಾಜೆಟಿಯರ್" ಡಾ. ಅಂಬೆಡ್ಕರ್ ವೀದಿ ಬೆಂಗಳೂರ

೨೦. ಪ್ರಶಾಂತ್ ಎಚ್ ಡಿ, (೨೦೦೦) "ಜನಸಮುದಾಯ ಸಂಪುಟ" ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೧. ಎಸ್.ಎಸ್ ಹೀರೆಮಠ (೨೦೦೫) "ಜನಪದ ಸಮಾಜ ಮತ್ತು ಸಂಸ್ಕೃತಿ" ಸೂರ್ಯ ಪ್ರಕಾಶನ ಚಿತ್ರದುರ್ಗ ಜಿಲ್ಲೆ.

೨೨. Nandu ram(2007) "Encyclopaedia SCHEDULED CASTES IN INDIA in 5 volumes Gyan publishing hous new dehli.

೨೩. ಕುಪ್ಪೆ ನಾಗರಾಜ, (೨೦೦೮) "ದೊಂಬಿದಾಸ" ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೨೪. ಹಿಮ್ಮಡಿ ವೈ ಬಿ,(೨೦೦೮) "ಚೆನ್ನದಾಸರ" ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೨೫. ದೇವರಾಜ ಓ, (೨೦೧೩) "ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು" ಪ್ರಗತಿ ಪ್ರಿಂಟರ್ಸ್, ಬೆಂಗಳೂರು

೨೬. ರಹಮತ್ ತರೀಕೆರೆ, (೨೦೧೭) "ಕರ್ನಾಟಕ ಶಾಕ್ತಪಂಥ" ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೭. ಎಸ್. ಎಸ್ ಹೀರೆಮಠ(೨೦೧೮) "ದಲಿತ ಸಂಸ್ಕೃತಿ ಅಧ್ಯಯನ ಮಾಲೆ ೩ ದಲಿತ ಸಂಸ್ಕೃತಿ" ಸರಸ್ವತಿ ಮಾರಾಟ ಮಳಿಗೆ ಪ್ರಸಾರಾಂಗ ಕನ್ನಡ ವಿಶ್ವವಿಧ್ಯಾಲಯ ಹಂಪಿ

ಅಧ್ಯಾಯ ಎರಡು

ಮಾಲ ಸಮುದಾಯದಚಾರಿತ್ರಿಕ ಹಿನ್ನೆಲೆ

೨.೧ ಪದ ನಿಷ್ಪತ್ತಿ

೨.೨ ಮಾಲ ಸಮುದಾಯದ ಮೂಲ

೨.೩ ಮಾಲ (ಪರ್ವತ ಮಲ್ಲಯ್ಯ) ಸಮುದಾಯದ ಪರ್ಯಾಯ ಪದಗಳು

೨.೪ ಮಾಲ ಸಮುದಾಯದ ಪಂಗಡಗಳು

೨.೬ ಮಾಲ ಸಮುದಾಯದ ಹುಟ್ಟಿನಕುರಿತಾಗಿ ಪ್ರಚಲಿತವಿರುವ ಪೌರಾಣಿಕ ಕಥೆಗಳು

೨.೭ ಭೌಗೋಳಿಕ ಪರಿಸರ

೨.೮ ಜನಸಂಖ್ಯೆ

೨.೯ ಸಮೀಕ್ಷೆಗೊಳಪಡಿಸಿದ ಮಾಲ ಸಮುದಾಯದ ಜಿಲ್ಲಾವಾರು ಜನಸಂಖ್ಯಾ ವಿವರ

ಅಧ್ಯಾಯ ಎರಡು

ಮಾಲ ಸಮುದಾಯದ ಚಾರಿತ್ರಿಕ ಹಿನ್ನೆಲೆ

೨.೧ ಪದ ನಿಷ್ಪತ್ತಿ

ಭಾರತದಲ್ಲಿ ವಾಸವಾಗಿರುವ ಅಸ್ಪೃಶ್ಯ ಸಮುದಾಯಗಳು ನಾಗರಿಕ ಸಮಾಜದಿಂದ ದೂರ ವಾಸಿಸುತ್ತಿರುವುದು ವಾಸ್ತವವಾಗಿ ಕಂಡುಬರುತ್ತದೆ. ಅಸ್ಪೃಶ್ಯ ಸಮುದಾಯಗಳಲ್ಲಿ ಹೊಲೆಯ ಮಾಲ (ಪರ್ವತ ಮಲ್ಲಯ್ಯ) ಸಮುದಾಯವು ಸಹ ಒಂದಾಗಿರುತ್ತದೆ. ಇಂತಹ ಹಲವಾರು ತಳ ಸಮುದಾಯಗಳ ಉಗಮ ವೇಧಕಾಲದಿಂದಲು ಆಗಿದ್ದು ಬಹು ದೀರ್ಘಕಾಲದ ಪ್ರಾಚೀನತೆಯನ್ನು ಹೊಂದಿದೆ. ಮಾಲ ಸಮುದಾಯದವರು ಆ ಕಾಲದಲ್ಲಿ ಪುರೋಹಿತ ವರ್ಗದ ಸೇವೆ ಮಾಡುತ್ತ ಗ್ರಾಮದ ಹೊರವಲಯಗಳಲ್ಲಿ ವಾಸಿಸುತ್ತಿದ್ದುದು ತಿಳಿದುಬರುತ್ತದೆ.

ಮಾಲ ಪದದ ಅರ್ಥ ಇನ್ನು ಸ್ಪಷ್ಟವಾಗಿ ಕಾಣುತ್ತಿಲ್ಲ ಸಮಾಜದ ಅತ್ಯಂತ ಕೆಳಸ್ತರದಲ್ಲಿರುವ ಇವರಿಗೆ ಬೇರೆ ಬೇರೆ ಪ್ರದೇಶದಲ್ಲಿ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಹಲವಾರು ಹೆಸರುಗಳಿಂದ ಕರೆಯುವುದು ನಮಗೆ ತಿಳಿದುಬರುತ್ತದೆ. ಮಾಲ ಪದಕ್ಕೆ ಹಲವಾರು ಪರ್ಯಾಯ ಪದಗಳಿವೆ. ಮೈಸೂರ ಭಾಗದಲ್ಲಿ ಛಲವಾದಿ, ಆದಿದ್ರಾವಿಡ, ಆದಿಕರ್ನಾಟಕ ಎಂದರೆ ಭಾರತದ ವಿವಿಧ ರಾಜ್ಯಗಳಲ್ಲಿ ಇವರನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಆಂಧ್ರಪ್ರದೇಶದಲ್ಲಿ ಮಾಲ, ಆರ್ಯಮಾಲ ಎಂದು ಕರೆದರೆ, ಮಾಹಾರಾಷ್ಟ್ರದಲ್ಲಿ ಮಹರ್, ಬಿಹಾರದಲ್ಲಿ ಹಲಾಲ್ಖೊರ, ತಮಿಳುನಾಡಿನಲ್ಲಿ 'ಪರೈಯನ್' ಕೇರಳದಲ್ಲಿ ಪುಲೈಯನ್, ಮಧ್ಯಪ್ರದೇಶದಲ್ಲಿ ಹೊಲೆಯ, ಒರಿಸ್ಸಾದಲ್ಲಿ ಚಾಂಡಾಲ, ಕರ್ನಾಟಕದಲ್ಲಿ ಹೊಲೆಯ, ಅರುಣಾಚಲ ಪ್ರದೇಶದಲ್ಲಿ ಮಹರ್ ಎಂದು ಈ ರೀತಿಯಾಗಿ ಅಲ್ಲಿನ ಪ್ರಾದೇಶಿಕತೆಗೆ ಅಣುಗುಣವಾಗಿ ಆಯಾ ಪ್ರಾಂತ್ಯದ ಭಾಷೆಗನುಗುಣವಾಗಿ ಆಯಾ ರಾಜ್ಯ ಭಾಷೆಯಲ್ಲಿ ನಾನಾ ಹೆಸರುಗಳಿಂದ ಕರೆಯಲಾಗುತ್ತಿದೆ.

"ಮಾಲ Mala. = ಮಾದೆ, ಮಾಳ 1. N. of a district, lying west and south-west of Bengal (B.2,52)._ಮಾಲ, ಪಶ್ಚಿಮ ಬಂಗಾಳ ರಾಜ್ಯದ ಪಶ್ಚಿಮ ಮತ್ತು ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸಿಸುತ್ತಾರೆ.

೨. N.of a barbarous tribe; a barbarin- ಇದು ಒಂದು ಅನಾಗರಿಕ ಬುಡಕಟ್ಟು ಆಗಿರುತ್ತದೆ.

೩, a forest or wood near a village (cf ಮಲೆ)– ಅರಣ್ಯ ಅಥವಾ ಕಾಡಿನ ಬಳಿ ಇರುವ ಹಳ್ಳಿಗಳಲ್ಲಿ ವಾಸವಾಗಿರುತ್ತಾರೆ.

೪. Deceit, fraud artifice. - ವಂಚನೆ, ಮೋಸ, ಕಲಾಕೃತಿ,

೫. Low base (Sk; Te ಮಾಲ pariah, outcaste = ಚಣ್ಡಾಲ; vile base, inferior wild): –ಮಾಲಕಾಕಿ ಮಾದೆ–. (Te,; Si.೧೭೩). – ಹೊಲೆಯ ಅಥವಾ ದಕ್ಷಿಣ ಭಾರತದ ಕೆಳಜಾತಿಗೆ ಪೆರಿಯಾ ಎಂದು ಕರೆಯುತ್ತಾರೆ. ಊರಿನ ಹೊರಗೆ ಹೋಗಿ ಕಾಡಿನ ಕೆಳಗೆ ವಾಸಮಾಡುತ್ತಾರೆ."[೧] ಈ ಕೃತಿಯ ಮೂಲಕ ತಿಳಿಯುವದೇನೆಂದರೆ ಮಾಲ ಎಂಬುದು ಒಂದು ಅನಾಗರಿಕ ಬುಡಕಟ್ಟು ಆಗಿದ್ದು ಇವರು ಊರಿನ ಹೊರಗೆ ಅಥವಾ ಕಾಡಿನ ಬಳಿ ಇರುವ ಹಳ್ಳಿಗಳಲ್ಲಿ ವಾಸವಾಗಿರುತ್ತಾರೆ. ಇವರು ಹೆಚ್ಚಾಗಿ ಪಶ್ಚಿಮ ಬಂಗಾಳ ರಾಜ್ಯದ ಪಶ್ಚಿಮ ಮತ್ತು ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸಿಸುತ್ತಾರೆ. ಅಲ್ಲಿರುವ ಕೆಳಜಾತಿಗೆ ಪೆರಿಯಾ ಎನ್ನುತ್ತಾರೆ ಎಂದು ತಿಳಿಸಿದ್ದಾರೆ. ಅಂದರೆ ಮಾಲ ಎಂಬುದರಲ್ಲಿನ ಒಂದು ಪಂಗಡ ದಕ್ಷಿಣ ಭಾಗದ ಜಿಲ್ಲೆಗಳಿಂದ ಕರ್ನಾಟಕದ ಕಡೆ ಬಂದಿರಬಹುದು.

"ಮಾಲ ಸಮುದಾಯವು ಆಂಧ್ರಪ್ರದೇಶದ ಮೂಲಿಗರೆಂದು ಗುರುತಿಸಲಾಗುತ್ತದೆ. ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗಳ ಅನುಸೂಚಿತ ಪಟ್ಟಿಯಲ್ಲಿ ಮಾಲ ಸಮುದಾಯದ ಹೆಸರಿದೆ. ಇವರನ್ನು ಬಲಗೈ ಫಣ ಸಂಸ್ಕೃತಿಗೆ ಸೇರಿದ ಸಮುದಾಯವೆಂಬುದನ್ನು ಎಡ್ಗರ್ ಥರ್ಸ್ಟನ್ ಆದಿಯಾಗಿ ಬಹುತೇಕ ಎಲ್ಲಾ ವಿದ್ವಾಂಸರು ಒಪ್ಪಿಕೊಂಡಿರುವರು. ಅಸ್ಪೃಶ್ಯ ಸಮುದಾಯವಾದ ಮಾಲ ಸಮುದಾಯವು ಆಂಧ್ರದಲ್ಲಿ ಕೃಷಿ ಸಂಬಂಧಿ ಕೆಲಸಗಳನ್ನು ಮಾಡುವವರಾಗಿರುವರು. ಮೇಲ್ಜಾತಿಯವರು ಸತ್ತರೆ ಅವರಿಗೆ ಶವದ ಕುಣಿ ತೆಗೆಯುವ ಹಕ್ಕು ಇವರಿಗೇ ಸೇರಿದ್ದಿತು ಎಂಬುದಾಗಿ ತಿಳಿದು ಬರುವುದು. ಮೇಲ್ನೋಟಕ್ಕೆ ಕರ್ನಾಟಕದ ಹೊಲೆಯ, ಚಲವಾದಿ ಸಮುದಾಯದ ಕಳ್ಳುಬಳ್ಳಿ ಸಮುದಾಯವಾಗಿದೆ ಎಂದು ಹೇಳಬಹುದು." ಈ ಕೃತಿಯಲ್ಲಿ ಮೂಲಕ ನಮಗೆ ತಿಳಿಯುವದೇನೆಂದರೆ ಮಾಲ/ಹೊಲೆಯ ಸಮುದಾಯದವರು ಮೇಲ್ಜಾತಿಯವರು ಸತ್ತರೆ ಅವರಿಗೆ ಶವದ ಕುಣಿ ತೆಗೆಯುವ ಹಕ್ಕು ಇವರಿಗೇ ಸೇರಿದ್ದಿತ್ತಾ ಇಲ್ಲವಾ ಎಂಬುದನ್ನು ತಿಳಿಯಲು ಉಪಯುಕ್ತವಾಯಿತು. ಮತ್ತು ಈ ಅಧ್ಯಯನದ ಹಿನ್ನಲೆಯಲ್ಲಿ ಇವರ ಮೂಲ ವೃತ್ತಿಯನ್ನು ತಿಳಿದುಕೊಳ್ಳಲು ಅನುಕೂಲವಾಯಿತು.

"ಮಾಲ ಎನ್ನುವುದು ಮೂಲತಃ ತೆಲುಗು ಶಬ್ಧವಾಗಿದೆ. ಮಾಲ ಎಂದರೆ ತೆಲುಗಿನಲ್ಲಿ ಪರ್ವತ ಎಂಬ ಅರ್ಥವಿದೆಯಂತೆ. ಪರ್ವತವಾಸಿ ಎಂಬರ್ಥದಲ್ಲಿ ಮಾಲ ಪದ ಬಳಕೆಗೊಂಡಿರಬೇಕು. ಥರ್ಸ್ಟನ್ ಅವರ ಕಾಸ್ಟ್ ಅಂಡ್ ಟ್ರೈಬ್ಸ್ ಇನ್ ಸದರ್ನ್ ಇಂಡಿಯಾ ಕೃತಿಯಲ್ಲಿ ಈ ರೀತಿಯಾಗಿ ಉಲ್ಲೇಖಿಸಲಾಗಿದೆ "The Malas," Mr. H. A. Stuart writes, "are the Pariahs of the Telugu country. Dr. Oppert derives the word from a Dravidian root meaning a mountain, which is represented by the Tamil malai, Telugu

mala, etc., so that Mala is the equivalent of Paraiyan, and also of Mar or Mhar and the Mal of Western and Central Bengal. I cannot say whether there is sufficient ground for the assumption that the vowel of a Dravidian root can be lengthened in this way. I know of no other derivation of Mala"[೨]

"Both Malas and Tamil Paraiyans belong to the right-hand section"[೩]

ತೆಲುಗಿನ ಶಬ್ದಕೋಶದಲ್ಲಿ ಮೈಲ ಎಂಬ ಪದವಿದೆ. ಮೈಲ ಎಂಬುದು ಮೈಲಿಗೆ, ಮುಟ್ಟಲು ಯೋಗ್ಯವಲ್ಲದ್ದು ಎಂಬರ್ಥದಲ್ಲಿ ಬಳಕೆಗೊಳ್ಳುವುದನ್ನು ಸೂಚಿಸುತ್ತದೆ. ಮೈಲ ಪದದಿಂದಲೇ ಮಾಲ ಎಂಬ ಪದ ಬಳಕೆಗೆ ಬಂದಿರಬೇಕು ಎಂದು ಸಹ ಹೇಳಲಾಗುವುದು.

''Mala, dher, antyajy, panchama - a very numerous Telugu cast of menlale and village servante, supposed to be identical with the mahar of Maharashtra , the holers of the karnatk and the pariahha of Tmil country. The etyomology of the name mala uncertain, some derive if from the Sanskrit word mald. Which means dirt, and is said to refer to their traditionary origin from parvtis cloths This word tmilu malar,a hill is more able, for it is not improhable that the people, as old dwellere on the soil, were driven to the hilly fracts by the pressure of later fild grants and came or hillmen, some of the mala tribe, as mala Aryans, still cling to the hilly tracts"[೪]

ಮಾಲ, ಡೇರ್, ಅಂತ್ಯಜ, ಪಂಚಮ, ಇವೆಲ್ಲವು ತೆಲುಗಿನಲ್ಲಿ ಬಳಸುವ ಹೆಸರಾಂತ ಜಾತಿ ಪದಗಳಾಗಿದ್ದು, ಇವರು ಮನೆಕೆಲಸದವರು ಮತ್ತು ಗ್ರಾಮದಲ್ಲಿ ಸೇವಕರಾಗಿದ್ದು, ಮಾಹಾರಾಷ್ಟ್ರದಲ್ಲಿ ಮಹರ್ಸ ಎಂದು ಗುರುತಿಸಲಾಗಿದೆ. ಕರ್ನಾಟಕದಲ್ಲಿ ಹೊಲೆರ್ಸ ಎಂದು ತಮಿಳುನಾಡಿನಲ್ಲಿ ಪೆರಿಯರ್ಸ ಎಂದು ಗುರುತಿಸಲಾಗಿದೆ. ಮತ್ತು ಈ ಹಿನ್ನಲೆಯ ಮೂಲ ಅನಿರ್ಧಿಷ್ಟವಾಗಿದೆ. ಈ ಪದ ಸಂಸ್ಕೃತ ಪದದ "ಮಾಲ್ದ" ಎಂಬ ಪದದಿಂದ ಬಂದಿದೆ ಇದರ ಅರ್ಥ ವಂಚನೆ, ನಂಬಿಕೆ ಎಂದು ಮತ್ತು ಹೊಲಸುಮಾಡು ಎಂದು. ಈ ವಂಶ ಪಾರ್ವತಿದೇವಿಯ ವಸ್ತ್ರಗಳಿಂದ ಬಂದಿದೆ ಎಂಬ ನಂಬಿಕೆಯಿದೆ. ಈ ಪದ ತಮೀಳು ಪದದ ಮಲರ್‌ದಿಂದ ಬಂದಿದೆ, ಕೆಲವರು ಹೇಳುವ ಹಾಗೆ ಇವರು ಬೆಟ್ಟದಲ್ಲಿರುತ್ತಾರೆ ಎಂದು. ಆದರೆ ಇವರು ಮಣ್ಣಿನಲ್ಲಿ ವಾಸಮಾಡುತ್ತಿದ್ದು, ಬೆಟ್ಟಗಳಲ್ಲಿ ಕಾರ್ಯನಿರ್ವಯಿಸುತ್ತಿದ್ದರು. ಹಾಗಾಗಿ ಇವರು ಮೂಲ ಬೆಟ್ಟವಾಸಿಗಳು ಆಗಿದ್ದಾರೆ. ಹಾಗಾಗಿ ಇವರ ಮೂಲ ವರ್ಗದವರಿಗೂ ಮಾಲ ಆರ್ಯನ್ ಎಂದು ಕರೆಯುತ್ತಾರೆ ಎಂದು ತಿಳಿದು ಬರುತ್ತದೆ.

"ಮಾಲ ಸಮುದಾಯದ ಕುರಿತು ರಸೆಲ್ ಅವರು "A low telugu Caste of labourers and cotton weavers.The Malas were the sons of the soil. Originally their

profession was weaving and belonged to the wrestling community or the community of "Mallavodhulu1 or wrestlers.However, on account of their - settlement identification they were called after the region in which they were living.

ಎಂದಿದೆ. ಮಾಲ ಸಮುದಾಯವು ಕರ್ನಾಟಕದಲ್ಲಿಯೂ ಕಂಡುಬರುವರು. ಮಾಲ ಎಂಬುದು ಆಂಧ್ರ ಹಾಗೂ ತೆಲಂಗಾಣ ಪ್ರದೇಶಗಳಲ್ಲಿ ಕಂಡುಬರುವ ಅಸ್ಪೃಶ್ಯ ಸಮುದಾಯಗಳಲ್ಲೊಂದು. ಮಾಲ ಎಂದರೆ ಭೂಮಿಯ ಮಕ್ಕಳು ಎಂದರ್ಥ ಎಂದು ಹೇಳಲಾಗುತ್ತದೆ. ಆದರೆ ಅವರು ಮೂಲತಃ ಯೋಧರ ಕಸುಬನ್ನು ಮಾಡುವ ಸಮುದಾಯವೆಂದು ಹೇಳಲಾಗುವುದು. ಮಲ್ಲಯುದ್ಧ ಎಂಬ ಪದದಿಂದ ಮಾಲ ಎಂಬ ಪದ ಬಂದಿರಬೇಕೆಂದು ಹೇಳುವರು."[೫]

"ಮಾಲ, ಮಾಳ (ನಾ) ೧. ಬಯಲು; ಕ್ಷೇತ್ರ. ೨. ಎತ್ತರವಾದ ಪ್ರದೇಶ; ೩. ಹಳ್ಳಿಬಳಿಯಿರುವ ಕಾಡು. ೪. ಕಪಟ; ಮೋಸ; "ಮಾಟ-ಕಪಟ ವಂಚನೆ"[೬] ಈ ಪುಸ್ತಕದಲ್ಲಿ ಲೇಖಕರು ಮಾಲ ಪದದ ಅರ್ಥವನ್ನು ಹೇಳಿದ್ದಾರೆ. ಲೇಖಕರ ಪ್ರಕಾರ ಮಾಲ ಎಂದರೆ ಬಯಲು ಕ್ಷೇತ್ರ, ಎತ್ತರವಾದ ಪ್ರದೇಶ ಎಂದಿದ್ದಾರೆ. ಅಂದರೆ ಎತ್ತರವಾದ ಪ್ರದೇಶದಲ್ಲಿ, ಬಯಲು ಜಾಗದಲ್ಲಿ ಕಾಡಿನಲ್ಲಿ ವಾಸಮಾಡುವವರನ್ನು ಮಾಲ ಎಂದು ಕರೆದಿರಬಹುದು.

"ತೆಲುಗಿನಲ್ಲಿ 'ಮಾಲ' ಎಂಬ ಪದವು ಕನ್ನಡದಲ್ಲಿ ಹೊಲಯ, ತಮಿಳಿನಲ್ಲಿ ಪರ್ರೈಯನ್, ಮಲಯಾಳಂದಲ್ಲಿ ಪುಲಯನ್, ಮರಾಠಿಯಲ್ಲಿ ಮಹರ್ ಎಂಬ ಹೆಸರಿನಿಂದ ಕರೆಯಲಾಗುತ್ತಿದೆ. ಮಾಲ/ಹೊಲಯರು ಕೃಷಿಕಾಯಕರಾಗಿದ್ದು, ಹೊಲದಿಂದಲೆ ಹೊಲೆಯ ಎಂಬ ಪದ ಬಂದಿದೆ. ಅಂದರೆ ಹೊಲವನ್ನು ಕಾಯುವವರಿಂದಲೂ ಅಥವಾ ಹೊಲದ ಒಡೆಯರಾಗಿದ್ದರಿಂದ ಹೊಲಯ ಎಂಬ ಪದ ಬಂದಿದೆ. ತಮಿಳಿನ 'ಪ'ಕಾರವು ಕನ್ನಡದಲ್ಲಿ 'ಹ'ಕಾರವಾಗಿ ತೆಲುಗಿನಲ್ಲಿ 'ಮ'ಕಾರವು ಕನ್ನಡದಲ್ಲಿ 'ಹ'ಕಾರವಾಗಿ ಬಂದಿದೆ. ಮಲೆಯಾಳಂದ ಪುಲಯನ್ ಕನ್ನಡದಲ್ಲಿ ಹೊಲಯನ್ ಎಂಬುದಾಗಿದೆ. ಪೊಲೆಯ ಎಂಬ ಪದವು ಸಂಸ್ಕೃತದಲ್ಲಿ ಪುಳಿಂದ ಎಂಬುದಕ್ಕೆ ಸಂಬಂಧಿಸಿದ್ದಾಗಿದೆ. ಹಳಗನ್ನಡದ ಹೊಲೆಯ ತಮಿಳಿನ ಪರ್ರೈಯನ್ ಮಲೆಯಾಳಂನ ಪುಲಯುನ್ ಇವುಗಳ ಮೂಲರೂಪ ಪೊಲೆ. ಪೊಲೆ ಎಂದರೆ ಅಶುದ್ಧ, ಕೊಳಕು, ಕನಿಷ್ಟ ಎಂದರ್ಥ. ಹೊಲಸು ಎಂಬುದರಲ್ಲಿಯೂ ಅದೇ ಪ್ರಕೃತಿಯಿದೆ. ಮಲ/ಹೊಲ ಎಂದರೆ ಕೊಳಕಾಗಿರುವವನು ಎಂದರ್ಥ. ಹೊಲಸಿನಿಂದ ಕೂಡಿದವನೆ ಹೊಲೆಯ. ಹೊಲಸನ್ನು ಒಳಗೊಂಡವರು ಹೊಲತಿ ಎಂದಾದರೆ ಇಂದು ಜಾತಿಯಿಂದ ಹೊಲೆಯರಾದವರಷ್ಟೆ ಹೊಲೆಯರಲ್ಲ ಎಂದು ಮತ್ತು ಸಮಾಜದಲ್ಲಿ ಅವರ ಸ್ಥಾನಮಾನ ಬದಲಾದಂತೆ ಅವರಿಗೆ ಕರೆಯುವ ಹೆಸರಿನಲ್ಲಿಯೂ ಬದಲಾವಣೆಯಾದವು ಎಂದು ಈ ಪುಸ್ತಕದಲ್ಲಿ ತಿಳಿಸಲಾಗಿದೆ. ಹೊಲೆ/ಮಾಲ ಈ ನೆಲದ ಮೂಲ ಒಡೆಯರಾಗಿದ್ದರು. ಅವರೇ ಹಳ್ಳಿಗಳನ್ನು ಸ್ಥಾಪಿಸಿದರು. ಬೇಸಾಯವನ್ನು ಆರಂಭಿಸಿದರು."[೭] ಈ ಕೃತಿಯಲ್ಲಿ ಮಾಲ ಎಂಬ ಪದವು ಯಾವ ರೂಪದಿಂದ, ಹಳಗನ್ನಡದ ಯಾವ ಪದದಿಂದ ಬಂದಿತೆಂದು ತಿಳಿಯಲಾಗಿದೆ. ಅದೇ ರೀತಿಯಾಗಿ ಈ ಅಧ್ಯಯನದ

ಹಿನ್ನಲೆಯಲ್ಲಿ ಪರ್ವತ ಮಲ್ಲಯ್ಯ ಎಂಬ ಪದ ಮಾಲ ಸಮುದಾಯದವರಿಗೆ ಯಾವ ಆಧಾರದ ಮೇಲೆ ಬಂದಿತು ಎಂದು ತಿಳಿಯಲು ಉಪಯುಕ್ತವಾಗಿದೆ. ಪರ್ವತ ಮಲ್ಲಯ್ಯ ಎಂಬ ಪದ ಬಳಕೆ ಕುರಿತು ಎರಡನೆಯ ಅಧ್ಯಾಯದಲ್ಲಿ ಬಳಸಿಕೊಳ್ಳಲು ಈ ಕೃತಿಯ ಮೂಲಕ ಅನುಕೂಲವಾಗಿದೆ.

೨.೨ ಮಾಲ ಸಮುದಾಯದ ಮೂಲ

ಕರ್ನಾಟಕದ ಮಾಲ(ಪರ್ವತ ಮಲ್ಲಯ್ಯ) ಸಮುದಾಯದ ಐತಿಹಾಸಿಕತೆ ಕುರಿತು ಕೆಲವು ವಿಚಾರಗಳು ಮಾತ್ರ ಪ್ರಸ್ತಾಪವಾಗಿರುತ್ತವೆ. ಈ ಹಿನ್ನಲೆಯಲ್ಲಿ ಮಾಲ ಸಮುದಾಯವು ರಾಜಪ್ರಭುತ್ವದ ಕಾಲದಿಂದಲು ಗುರುತಿಸಿಕೊಂಡು ಯುದ್ದಪ್ರೀಯರಾಗಿ ಜೀವನ ನಡೆಸಿದ್ದು ಕಂಡುಬರುತ್ತದೆ. ರಾಜ್ಯ ರಕ್ಷಿಸುವ ಸೈನಿಕರಿಗೆ ಮುನ್ನೆಚ್ಚರಿಕೆ ನೀಡುವ ಕೆಲಸ ಈ ಸಮುದಾಯದವರಾಗಿತ್ತು. ಈ ಸಮುದಾಯದವರು ಬೇರೆ ಬೇರೆ ರಾಜ್ಯಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುತ್ತಿದ್ದು ಈ ಸಮುದಾಯದವರ ಆಚಾರ ವಿಚಾರಗಳು, ಸಂಸ್ಕೃತಿ ವಿಭಿನ್ನವಾಗಿದ್ದುದು ತಿಳಿದು ಬರುತ್ತದೆ. ಈ ಸಮುದಾಯದವರು ಒಂದು ಕಾಲದಲ್ಲಿ ರಾಜ್ಯವನ್ನಾಳುತ್ತಿದ್ದ ರಾಜಪ್ರಭುಗಳಿಗೆ ಸೇವೆ ಸಲ್ಲಿಸುತ್ತಿದುದು ತಿಳಿದು ಬರುತ್ತದೆ.

ಪ್ರತಿಯೊಂದು ಸಮುದಾಯದ ಮಾನವ ಕುಲಕ್ಕೆ ತನ್ನದೆಯಾದ ವಿಶಿಷ್ಟವಾದ ಕೊಡುಗೆ ಅಥವಾ ಹಿನ್ನಲೆ ಇರುವ ಹಾಗೆ ಮಾಲ ಸಮುದಾಯವು ಸಹ ತನ್ನದೇಯಾದ ಹಿನ್ನಲೆಯನ್ನು ಪಡೆದುಕೊಂಡಿದೆ. ತನ್ನದೇಯಾದ ಸಂಸ್ಕೃತಿಯ ಮೂಲಕ ಒಂದು ವಿಶಿಷ್ಟವಾದ ಹಿನ್ನಲೆಯನ್ನು ಪಡೆದುಕೊಂಡಿರುತ್ತದೆ. ತಮ್ಮದೇಯಾದ ಸಂಪ್ರದಾಯ, ಆಚರಣೆ, ಪದ್ದತಿಗಳು, ಹೊಂದಿರುವುದು ಇತಿಹಾಸದ ಮೂಲಕ ಕಾಣುತ್ತೆವೆ. ನೂರಾರು ವರ್ಷಗಳ ರಾಜ ಮನೆತನಗಳ ಆಳ್ವಿಕೆಯಲ್ಲಿ ಸ್ವಕೀಯ ಪರಕೀಯ ದಾಳಿಗಳಿಂದ ನುಚ್ಚುನೂರಾಗಿ ಮತ್ತೆ ಮತ್ತೆ ಏಳುತ್ತ ಬಿಳುತ್ತ ಜೀವನ ಸಾಗಿಸುತ್ತಿದ್ದರು. ಸಮಾಜದಲ್ಲಿ ಉಚ್ಚ-ನೀಚ ಸಮುದಾಯಗಳೆಂದು ಗುರುತಿಸಲಾಗಿದೆ. ಉತ್ತಮ ಕೆಲಸ ಮಾಡುವವರೆಲ್ಲರು ಉಚ್ಚ ಕುಲದವರು, ಕೆಳಮಟ್ಟದ ಕೆಲಸ ಮಾಡುವವರೆಲ್ಲರು ನಿಚರೆಂಬುದು ಭಾರತೀಯ ಸಂಸ್ಕೃತಿಯಲ್ಲಿ ನೆಲೆ ನಿಂತಿದೆ. ಅನೇಕ ಬುಡಕಟ್ಟು ಸಮುದಾಯಗಳು ತಮ್ಮದೆಯಾದ ನಿರ್ಧಿಷ್ಟ ಪ್ರದೇಶವನ್ನು ಗುರುತಿಸಿಕೊಂಡು ತಮ್ಮ ಸಂಸ್ಕೃತಿಯನ್ನು ಬೆಳೆಸಿಕೊಂಡು ಜೀವನ ಸಾಗಿಸುತ್ತಿವೆ. ಈ ಎಲ್ಲಾ ವಿಭಿನ್ನ ಸಂಸ್ಕೃತಿಯ ಜನತೆ ಇಡೀ ಭಾರತೀಯ ಸಮಾಜದಲ್ಲಿ ನಿರ್ಧೇಶಿಸುತ್ತಾ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ.

"ಹೂಲೆಯರೆ ಮೊದಲ ಕೃಷಿಕರು ಇದಕ್ಕಿಂತಲು ಮುಂಚಿತವಾಗಿ ಇವರು ಬೇಟೆಗಾರರಾಗಿದ್ದರು, ಇವರಲ್ಲಿ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯಿತ್ತು. ಎರಡನೆಯ ಹಂತದಲ್ಲಿ ಪಶುಪಾಲಕರಾಗಿದ್ದ ದ್ರಾವಿಡರು ದಕ್ಷಿಣಕ್ಕೆ ವಲಸೆ ಬಂದರು ಹಾಗೆ ವಲಸೆ ಬಂದ ನಂತರ ಅವರು ಕೃಷಿಕರಾಗಿ ಮಾರ್ಪಟ್ಟರು. ಇವರು ಹೊಲೆ ಮಾದಿಗರೊಂದಿಗೆ ಬಂದ ಬವಣೆಯ ಸಮನ್ವಯತೆಯನ್ನು ಏರ್ಪಡಿಸಿಕೊಂಡು ಇವರು ಸಿದ್ದ ಪರಂಪರೆಯವರು ಅಲ್ಲದೆ ಜನಪದ ದೈವಗಳ ಆಚರಣೆ, ಹಲವು ವಿಧಿವಿದಾನಗಳಲ್ಲಿ ಬಾಗಿಯಾಗುತ್ತಿದ್ದರು".[೮] ಈ ಒಂದು ಕೃತಿಯಲ್ಲಿ ಮಾಲ/ಹೊಲೆಯ ಸಮುದಾಯದವರು ಬೇಟೆಗಾರರಾಗಿದ್ದರು, ನಂತರದಲ್ಲಿ ಇವರು ಕೃಷಿಕರಾದರು ಎಂಬುದನ್ನು ಈ ಸಮುದಾಯದ ಕುರಿತು ವಿವರಿಸಿದ್ದಾರೆ. ಈ ಹಿನ್ನಲೆಯಲ್ಲಿ ಕೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡ ಹಾಗೆ

ಮಾಲ (ಪರ್ವತ ಮಲ್ಲಯ್ಯ) ಸಮುದಾಯದಲ್ಲಿ ಬೇಟೆ ಪದ್ಧತಿ ಇದುವರೆಗು ಇರುತ್ತದೆಯೋ ಇಲ್ಲವೋ ಎಂಬುದನ್ನು ತಿಳಿಯಲು ಸಾಹಾಯಕವಾಯಿತು. ಆದರೆ ಈ ಸಮುದಾಯದವರಿಗೆ ಭೂಮಿ ಇರುವುದಿಲ್ಲ ಆದರೆ ಭೂಮಿಯಲ್ಲಿ ದುಡಿಯುವಂತವರಾಗಿದ್ದಾರೆ. ಈ ಸಮುದಾಯದವರಲ್ಲಿ ಆಗಿನ ಸಂದರ್ಭದಲ್ಲಿ ಇದ್ದಂತಹ ಮಾತೃ ಪ್ರಧಾನ ಕುಟುಂಬ ಇಂದಿಗೂ ಕಂಡುಬರುತ್ತವೆ ಅಂದರೆ ಆ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಬಂದಿರಬಹುದು.

"ಮಾಲ ಎಂಬ ಶಬ್ದವ್ಯುತ್ಪತ್ತಿ ಇಂದಿಗೂ ಅನಿಶ್ಚಿತವಾಗಿದೆ. ಶಬ್ಧದ ವ್ಯುತ್ಪತ್ತಿಯನ್ನು ಅಭ್ಯಾಸ ಮಾಡಿದಾಗ ಸಂಸ್ಕೃತ ಮೂಲವನ್ನು ವ್ಯಕ್ತಪಡಿಸುತ್ತದೆ. 'ಮಾಲ' ಅಂದರೆ ಶ್ವಪಚ ಎಂದಾಗುತ್ತದೆ. ಕನ್ನಡದಲ್ಲಿ 'ಮೈಲಿಗೆ' ಅದವನೆಂಬ ಅರ್ಥವಿದೆ. ಅನಾದಿಕಾಲದಿಂದಲೂ ಅಸ್ಪೃಶ್ಯ ಜಾತಿಯ ಹಿನ್ನಲೆಯಲ್ಲಿ ಅನೈರ್ಮಲ್ಯದ ಕಸುಬುದಾರರೆಂದು ಗುರುತಿಸಿಕೊಂಡಿದ್ದಾರೆ. ತಮಿಳು ಗ್ರಂಥಗಳಲ್ಲಿ 'ಮಾಲೇರು' ಎಂಬ ಪದಕ್ಕೆ ಪರ್ವತದವನೆಂಬ ಅರ್ಥವಿದೆ. ಅಂದರೆ ಇವರೆಲ್ಲರು ಈ ಪ್ರಾಂತ್ಯದ ಮೂಲನಿವಾಸಿಗಳೆಂಬ ಅಭಿಮತವಿದೆ ಅಂದಿನಿಂದಲೂ ಇವರ ಸಾಮಾಜಿಕ ಸ್ಥಾನಮಾನ ಮಾತ್ರ ಕಟ್ಟ ಕಡೆಯದು 'ಪಂಚಮ ಮತ್ತು ಅಂತ್ಯಜ' ರೆನ್ನುವ ಪದಗಳ ಈ ದೃಷ್ಟಿಯಲ್ಲಿ ಪ್ರಯೋಗವಾಗಿವೆ. 'ಅಂತ್ಯಜ' ರೆಂದರೆ ಕೊನೆಯಲ್ಲಿ ಜನಿಸಿದವ ಎನ್ನುವ ಅರ್ಥವಿದೆ"[೯] ಈ ಒಂದು ಕೃತಿಯಲ್ಲಿ ವಿದ್ವಾಂಸರು ಹೇಳಿದ ಹಾಗೆ ಈ ಮೇಲಿನ ಎರಡು ಪದಗಳು ಅಸ್ಪೃಶ್ಯ ಜಾತಿಯ ಜನರ ಸಾಮಾಜಿಕ ಹಿನ್ನಲೆಯನ್ನು ಮತ್ತು ಅವರ ಸಾಮಾಜಿಕ ಸ್ಥಾನಮಾನಗಳನ್ನು ತಿಳಿಯಲು ಅತ್ಯಂತ ಸಾಹಾಯಕಾರಿಯಾಗಿದೆ.

"ವಿಜಯಪುರ ಗಡಿಭಾಗದಲ್ಲಿ ಮಾಲ ಸಮುದಾಯದವರನ್ನು ಹೊಲೆಯರೆಂದು ಕರೆಯುವುದು ಕಂಡುಬರುತ್ತದೆ. ಕರ್ನಾಟಕದ ಬವುಪಾಲು ಭಾಗದಲ್ಲಿ ಮಾದಿಗ ಎಂತಲು ಕರೆಯುತ್ತಾರೆ. ಹಾಗೆಯೇ ಶರಣ ಮಾದರ ಹರಳಯ್ಯನನ್ನು "ಹೊಲೆಯ ಹರಳಯ್ಯ" ಎಂದು ಕರೆಯುತ್ತಿರುವುದು ಅಲ್ಲಿ ಕಂಡುಬರುತ್ತದೆ. ದಕ್ಷಿಣ ಕರ್ನಾಟಕದ ಭಾಗದಲ್ಲಿ ಆದಿದ್ರಾವಿಡರು ಎಂದು ಕರೆಯುತ್ತಾರೆ."[೧೦] ಈ ಕೃತಿಯಲ್ಲಿ ಮಾಲ ಸಮುದಾಯದವರನ್ನು ವಿಜಯಪುರ ಭಾಗದಲ್ಲಿ ಹೊಲೆಯರೆಂದು ಕರೆಯುತ್ತಾರೆ ಕೆಲವು ಕಡೆ ಇವರನ್ನು ಮಾದಿಗರೆಂದು ಕರೆಯುತ್ತಾರೆ ಎಂದು ಹೇಳಿದ್ದಾರೆ. ಆದರೆ ಈ ಅಧ್ಯಯನದ ಹಿನ್ನಲೆಯಲ್ಲಿ ಕ್ಷೇತ್ರಕಾರ್ಯ ಮಾಡಿದ ಸಂದರ್ಬದಲ್ಲಿ ಮಾಲ ಮತ್ತು ಮಾದಿಗ ಈ ಎರಡು ಸಮುದಾಯದ ಆಚಾರ ವಿಚಾರ, ಹಬ್ಬ ಹರಿದಿನಗಳ ಕುರಿತು ಮಾಹಿತಿ ಪಡೆದಾಗ ಇವರಲ್ಲಿ ಸಾಮ್ಯತೆ ಇರುವುದು ತಿಳಿದು ಬಂದಿತು. ಮಾಲ ಸಮುದಾಯದವರಿಗೂ ಮತ್ತು ಹೊಲೆಯ ಸಮುದಾಯದ ಆಚಾರ ವಿಚಾರಗಳಿಗೂ ವಿಭಿನ್ನತೆಯಿದೆ ಎಂಬುದನ್ನು ತಿಳಿಯಲಾಯಿತು.

"ವಿಜಯನಗರ ಸಾಮ್ರಾಜ್ಯದಲ್ಲಿ ಅಸ್ಪೃಶ್ಯರಲ್ಲಿಯೇ ಅತ್ಯಂತ ಕೆಳವರ್ಗದವರಾದ ಹೊಲೆಯರು ಮತ್ತು ಮಾದಿಗರು ಊರ ಹೊರಗೆ ಒಟ್ಟಾಗಿ ವಾಸ ಮಾಡುತ್ತಿದ್ದರು. ಆ ಕೇರಿಗಳನ್ನು ಮಾದಿಗೇರಿ, ಹೊಲೆಗೇರಿ ಎಂಬ ಜಾತಿಗಳಿಂದ ಗುರುತಿಸಿಕೊಂಡಿವೆ. ಇವರುಗಳು ಪ್ರತಿಯೊಂದು ಊರಿನಲ್ಲಿಯೂ ಗ್ರಾಮದ ದಕ್ಷಿಣ ದಿಕ್ಕಿನಲ್ಲಿಯೇ ವಾಸಿಸುತ್ತಿದ್ದರು. ಏಕೆಂದರೆ ನಾಲ್ಕು ದಿಕ್ಕುಗಳಲ್ಲಿ ದಕ್ಷಿಣ ದಿಕ್ಕು ಅಮಂಗಳವಾದದ್ದೆಂದು ಶಾಸ್ತ್ರಗಳು ತಿಳಿಸುತ್ತವೆ. ಊರಿನ ಹೊರಗೆ ಒಟ್ಟಾಗಿ ವಾಸ ಮಾಡುತ್ತಿದ್ದರು

ಆ ಭಾಗವನ್ನು ಹೊಲಗೇರಿ ಎಂದು ಕರೆಯಲಾಗುತ್ತಿತ್ತೆಂದು ಸಾಹಿತ್ಯಧಾರಗಳಿಂದ, ಶಾಸನಗಳಿಂದಲೂ ತಿಳಿಯಬಹುದಾಗಿದೆ."[೧೧] ಆಗಿನ ಸಂದರ್ಭದಲ್ಲಿ ಮಾಲ ಮತ್ತು ಮಾದಿಗರಂತಹ ಅಸ್ಪೃಶ್ಯ ಸಮುದಾಯಗಳು ಊರಿನ ಹೊರಗೆ ವಾಸಿಸುತ್ತಿದ್ದರೆಂಬುದು ಇಂದಿಗೂ ಕಂಡುಬರುತ್ತದೆ. ಈ ಅಧ್ಯಯನದ ಹಿನ್ನಲೆಯಲ್ಲಿ ಗಮನಿಸಿದಾಗ ಮಾಲ ಸಮುದಾಯದವರು ಊರ ಹೊರಗೆ ಗುಡಾರಗಳನ್ನು, ಗುಡಿಸಲುಗಳನ್ನು ಹಾಕಿಕೊಂಡು ಜೀವನ ಸಾಗಿಸುತ್ತಾರೆ ಆದ್ದರಿಂದ ಈ ಅಧ್ಯಯನದ ಹಿನ್ನಲೆಯಲ್ಲಿ ಮಾಲ ಸಮುದಾಯದ ವಸತಿ ಬಗ್ಗೆ ಕುರಿತು ಮಾಹಿತಿ ಪಡೆಯಲು ಸಹಾಯಕವಾಗಿದೆ.

'ಶೂದ್ರವೆನಿಸಿಕೊಂಡಿರುವ ಈ ಸಮುದಾಯ ಕೇವಲ ಸಾಮ್ರಾಜ್ಯದಲ್ಲಿ ಅತ್ಯಂತ ಕಷ್ಟದ, ಶ್ರಮದ ಹಾಗೂ ಅಸಹ್ಯ ತರುವಂತಹ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಇದಕ್ಕಾಗಿಯೇ ಶೂದ್ರರನ್ನು ಪುರುಷ ಸೂಕ್ತದಲ್ಲಿ ಬ್ರಹ್ಮಪಾದದಿಂದ ಹುಟ್ಟಿ ಬಂದರು ಹಾಗೂ ಅವರ ಕರ್ತವ್ಯವೇನೆಂದರೆ ಬ್ರಾಹ್ಮಣ, ಕ್ಷೇತ್ರಿಯ, ವೈಶ್ಯ, ಈ ಮೂರು ವರ್ಣಗಳ ಸೇವೆ ಮಾಡಲು ಜನ್ಮವೆತ್ತಿದ ಜನರೆಂದು ನಿರೂಪಿಸಲಾಗಿದೆ. ಈ ಸಮುದಾಯಗಳು ಇಂತಹ ಕಾಯಕ ಮಾಡಿ ಜೀವನ ನಡೆಸಬೇಕಾಗಿತ್ತು. "ಶ್ರೀಮಂತರ ಜಮೀನಿನಲ್ಲಿ ಯಾವುದೇ ರೀತಿಯ ಸೌಕರ್ಯಗಳಿಲ್ಲದೆ ಅತ್ಯಂತ ಕನಿಷ್ಟ ರೀತಿಯ ಕೆಳಮಟ್ಟದಲ್ಲಿ ದುಡಿಯಬೇಕಾಗಿತ್ತು. ಕೆಲಸ ಮಾಡುವದನ್ನು ತಪ್ಪಿದರೆ ಕಠಿಣ ಶಿಕ್ಷೆಗೆ ಗುರಿಯಾಗುತ್ತಿದ್ದರು. ದೇವತಾಕಾರ್ಯಗಳಲ್ಲಿ ನರಬಲಿ ಕೊಡುವ ಕೆಟ್ಟ ಸಂಪ್ರದಾಯ ಬಳಕೆಯಲ್ಲಿತ್ತು ಇಂತಹ ಸಮಯದಲ್ಲಿ ನರಬಲಿಗೆ ಕಳವರ್ಗದವರನ್ನು ನೀಡಲಾಗುತ್ತಿತ್ತು. ಅವರಲ್ಲಿದ್ದ ಅಜ್ಞಾನದಿಂದ ಅವರು ಅದನ್ನು ದೇವತಾಕಾರ್ಯವೆಂಬಂತೆ ಭಕ್ತಿಭಾವದಿಂದ ಅರ್ಪಿಸಿಕೊಳ್ಳುತ್ತಿದ್ದರು. ಇವರು ಆಚರಿಸುತ್ತಿದ್ದ ಹಬ್ಬಗಳಲ್ಲಿ ಪ್ರಾಣಿಬಲಿ, ನರಬಲಿ, ಅಂಗಾಂಗಗಳ ಛೇದನ ಮುಂತಾದ ಬಲಿಗಳನ್ನು ಅರ್ಪಿಸಿ ತಮ್ಮ ದೇವರುಗಳನ್ನ ತೃಪ್ತಪಡಿಸುತ್ತಿದ್ದರು".[೧೨] ಈ ಕೃತಿಯ ಮೂಲಕ ಶೂದ್ರರು ದೇವಾನುದೇವತೆಗಳ ಮೇಲೆ ನಂಬಿಕೆ, ವಿಶ್ವಾಸ ಮತ್ತು ಪ್ರೀತಿಯನ್ನು ಇಟ್ಟಿದ್ದರು ಎಂದು ತಿಳಿದು ಬರುತ್ತದೆ. ಆದ್ದರಿಂದ ಅವರು ತಮ್ಮ ಜೀವವನ್ನು ದೇವರಿಗೆ ಅರ್ಪಿಸುತ್ತಿದ್ದರೆನ್ನಲಾಗಿದೆ. ಆದರೆ ಈ ಪದ್ಧತಿ ಇಂದು ಮಾಯವಾಗಿರುತ್ತದೆ. ತಳ ಸಮುದಾಯಗಳು ಆಗಿನ ಕಾಲದಲ್ಲಿ ಸಾಮಾಜಿಕ ವ್ಯವಸ್ಥೆಯ ನಿಯಂತ್ರಣದಲ್ಲಿದ್ದರು ಎಂಬುದು ಈ ಕೃತಿಯ ಮೂಲಕ ತಿಳಿದು ಬರುತ್ತದೆ. ಇಂತಹ ಪರಿಸ್ಥಿತಿಯ ಕಾರಣದಿಂದ ಯಾವುದೇ ಕ್ಷೇತ್ರದಲ್ಲಿ ಇವರು ಗುರುತಿಸಿಕೊಳ್ಳುವುದು ಅಸಾಧ್ಯವಾಗಿದೆ.

"ಕೆಲವು ರಾಜ ವಂಶರ ಆಡಳಿತದಲ್ಲಿ ಸೈನಿಕರಾಗಿದ್ದರೂ ಯುದ್ಧಗಳಲ್ಲಿ ಹೆಚ್ಚು ಪ್ರಾಣಹಾನಿಯಾಗುತ್ತಿದ್ದದ್ದು ಮಾಲ ಸಮುದಾಯದಲ್ಲಿ ಆಗಿತ್ತು. ಯುದ್ದ ಘೋಷಣೆಯಾದಾಗ ಪ್ರತಿಯೊಂದು ಗ್ರಾಮದಿಂದಲು ಸಹ ಮನೆಗೊಬ್ಬ ಗಂಡು ಮಗ (ಹೊಲೆ ಮಾದಿಗರ ಕೇರಿಯಿಂದ) ಸ್ವತಃ ತಾವೇ ಯುದ್ದ ಸಾಮಗ್ರಿಗಳಾದ ಭರ್ಚಿ, ಕತ್ತಿ, ಕೊಡಲಿ, ಚಾಕು, ಬಿಸುಕೊಡಲಿಗಳನ್ನು ದಾಲ್‌ಪಟ ಇವೆಲ್ಲವುಗಳನ್ನು ತಯಾರಿಸಿಕೊಂಡು ಸಿದ್ದನಾಗಿ ಬರಬೇಕಾಗಿತ್ತು. ತಪ್ಪಿಸಿದರೆ ಶಿಕ್ಷೆಗೆ ಒಳಗಾಗುವುದು ಆಗಿತ್ತು ಇದು ರಾಜಜ್ಞೆಯಾಗಿತ್ತು."[೧೩] ಈ ಒಂದು ಕೃತಿಯ ಆಧಾರದ ಮೇಲೆ ಗಮನಿಸಿದಾಗ ಈ ಅಧ್ಯಯನದ ಹಿನ್ನಲೆಯಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡಂತಹ ಸಂದರ್ಭದಲ್ಲಿ ಇವರು ಯುದ್ದಪ್ರೀಯರಾಗಿದ್ದರು ಎಂಬ ಮಾಹಿತಿ ಲಭಿಸುತ್ತದೆ. ಕೆಲವೇ ಪಾಳೆಗಾರರು ಮಾತ್ರ

ಸೈನ್ಯದಲ್ಲಿದ್ದುದ್ದು ಮತ್ತು ಹೋರಾಡಿದ್ದು ಚರಿತ್ರೆಗಳು ಬಿಂಬಿಸುತ್ತುವೆ. ಆದರೆ ಮಾಲ ಮತ್ತು ಮಾದಿಗ ಸಮುದಾಯಗಳಂತಹ ತಳಸಮುದಾಯಗಳು ಸಹ ರಾಜಪ್ರಭುತ್ವದ ಪರ ಸೈನಿಕರಾಗಿ ಸೇವೆ ಸಲ್ಲಿಸಲು ಹೋರಾಡಿ ಮಡಿದ ಉದಾಹರಣೆಗಳು ಇಂದಿಗೂ ನಮಗೆ ಮೌಖಿಕವಾಗಿ ದೊರೆಯುತ್ತವೆ. ಆದರೆ ಚರಿತ್ರೆಕಾರರು ಇಂತಹ ಸಮುದಾಯಗಳ ಈ ಕೊಡುಗೆಯನ್ನು ಗುರುತಿಸುವಲ್ಲಿ ಅನಾಸಕ್ತಿ ಅಸಡ್ಯ ತೋರಿಸುತ್ತಿರುವುದು ಕಂಡುಬರುತ್ತದೆ. ಮತ್ತು ಕಥೆಗಳ ಮೂಲಕ ರಾಜರಾಗಿದ್ದರು ಎಂಬ ಉಲ್ಲೇಖಗಳು ದೊರೆಯುತ್ತವೆ.

"ಗ್ರಾಮದ ನೈರ್ಮಲ್ಯವನ್ನು ಕಾಪಾಡುವ ಕೆಲಸ ಇವರ ಪಾಲಾಗಿತ್ತು ಮತ್ತು ಊರಿನಲ್ಲಿ ಯಾವುದಾದರು ಪ್ರಾಣಿಗಳು ಸತ್ತುಹೊಗಿದ್ದರೆ ಆ ಸತ್ತ ಪ್ರಾಣಿಗಳನ್ನು ಗ್ರಾಮದಿಂದ ಹೊರಗೆ ಹೊತ್ತೂಯ್ಯುವ ಕೆಲಸವನ್ನು ಇವರು ಮಾಡಬೇಕಾಗಿತ್ತು ಮತ್ತು ಅವರು ವಾಸವಿದ್ದ ಗ್ರಾಮದಲ್ಲಿ ಯಾರಾದರು ಮರಣ ಹೊಂದಿದ್ದರೆ ಸತ್ತ ಸುದ್ದಿಯನ್ನು ಬೇರೆ ಊರಿಗೆ ಮುಟ್ಟಿಸುವ ಕೆಲಸ ಇವರದಾಗಿತ್ತು ಆ ಗ್ರಾಮದ ಕೊಳೆಯನ್ನು ಅಥವಾ ಹೊಲಸನ್ನು ಸ್ವಚ್ಚಗೊಳಿಸುವ ಕೆಲಸ ಇವರದಾಗಿತ್ತು"[೧೪] ಇವಾಗಲೂ ಸಹ ಈ ಸಮುದಾಯದವರು ತಾವು ನೆಲೆಸಿದ ಊರಿನಲ್ಲಿ ಕಸಗೂಡಿಸುವುದನ್ನು ಇವರು ಮಾಡುತ್ತಾರೆ. ಈ ಸಮುದಾಯದವರಿಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಸ್ಥರದ ಸ್ಥಾನಮಾನ ನೀಡಿರುವುದು ಗೋಚರಿಸುತ್ತದೆ. ಮಾಲ ಸಮುದಾಯದ ಮೂಲ ವೃತ್ತಿಯನ್ನು ತಿಳಿಯುವ ಸಂದರ್ಭದಲ್ಲಿ ಈ ಕೃತಿಯು ಈ ಅಧ್ಯಯನದ ಹಿನ್ನಲೆಯಲ್ಲಿ ಉಪಯುಕ್ತವಾಗಿದೆ.

"Originally belonging to Andrapradesh, Mala is a widespred caste of southern India. This caste of agrestic serfs has often been equated with the oaraiyan of Tamil Nadu and the Holeya of Karnataka. The similarity between tha malas. Paralyans and Holeyas is so great that the malas settled in the Tamil -Speaking areas often go by the name of vaduga Paraiyan Manna Paraiyan. Similarly, the Holeyas settled in the same relglon go by the name of Morasu Paraiyan. The local telugu landowing castes of Reddi and Kamma call the Tamil Parayan by the learn Mala it is also reported that in some areas, the indigenous Holeyas are called as Malas by the Telugu speaking Kapus.

After 1930 the bulk of the Malas designated themselves as Adi Andhra in their desire to elevate their social position. In addition to Adi Andhra. The other names by which the Malas prefer to call themselves are Adi Dravi, Dher, Antyayaja Arundhathiyar, Chandala, Jambavathulu and Panchama. In Tamil Nadu and Pondicherry, they are known as Arava

Mala, Parayan and Harijan. They call themselves as Adi Andhra in Karnataka as well.

ಮೂಲತಃ ಆಂಧ್ರಪ್ರದೇಶಕ್ಕೆ ಸೇರಿದಂತೆ ಮಾಲ ಸಮುದಾಯ ಎಂಬುದು ಒಂದು ದಕ್ಷಿಣ ಭಾರತದಲ್ಲಿ ವಿಶಾಲವಾಗಿ ಹರಡಿರುವ ಜಾತಿ. ಹಳ್ಳಿಗಾಡಿನಲ್ಲಿ ದುಡಿಯುವ ಈ ಜಾತಿಯು ತಮಿಳುನಾಡಿನ ಪರ್ರೈಯಾನ್, ಆಂಧ್ರದ ಮಾಲಗಳು ಕರ್ನಾಟಕದ ಹೊಲೆಯರಲ್ಲಿ ಒಂದೇ ಹೋಲಿಕೆ ಕಂಡುಬರುತ್ತದೆ. ಪ್ರಮುಖ ವಿಷಯ ತಮಿಳು ಮಾತನಾಡುವ ಪ್ರದೇಶದಲ್ಲಿ ಮಾಲ ಜನಾಂಗದವರು ನೆಲೆಗೊಂಡಿದ್ದು, ನಂತರ ಇವರಿಗೆ ವಡುಗ ಪರ್ರೈಯಾನ್ ಮತ್ತು ಮನ್ನ ಪರ್ರೈಯಾನ್ ಎಂದು ಹೆಸರಾದರು. ಹೂಲೆಯರು ಕೂಡ ಅದೇ ಪ್ರದೇಶದಲ್ಲಿ ನೆಲೆಗೊಂಡು ಮೂರಸು ಪರ್ರೈಯನ್ ಎಂದು ಹೆಸರಾದರು. ಭೂಮಿಯ ಯಜಮಾನರಾದ ಸ್ಥಳಿಯ ತೆಲುಗಿನ ರೆಡ್ಡಿ ಮತ್ತು ಕಮ್ಮಾ ಜನರು ತೆಲುಗಿ ಪರ್ರೈಯನ್ ಎಂಬ ಮಾಲ ಜನಾಂಗದಿಂದ ಹೆಸರಾದರು. ಕೆಲವು ಪ್ರದೇಶದಲ್ಲಿ ಇದು ವರದಿಯಾಗಿದೆ. ಭಾರತದ ಹೂಲೆಯರು ತೆಲುಗು ಮಾತನಾಡುವ ಕಾಪಸ್‌ರಿಂದ ಮಾಲಾ ಎಂದು ಕರೆಯಲ್ಪಡುತ್ತಾರೆ. ೧೯೩೦ ರ ನಂತರ ಮಾಲ ಜನಾಂಗದವರು ತಮ್ಮನು ಆದಿಆಂಧ್ರ ಎಂದು ಅವರ ವೃತ್ತಿಗಳು ಸಾಮಾಜಿಕ ಸ್ಥಾನಮಾನಗಳು ನಿರ್ಧರಿಸಿದವು. ಆದಿಆಂಧ್ರದೊಂದಿಗೆ ಇನ್ನಿತರ ಹೆಸರುಗಳಾದ ಮಾಲ ಜನಾಂಗದವರು ಆದಿಆಂಧ್ರ, ಡೆರ್, ಅಂತ್ಯಜ ಅರುಂಧತಿಯಾರ್, ಚಂಡಾಲ, ಜಾಂಬವಂತಲು, ಮತ್ತು ಪಂಚಮ ಎಂಬುದಾಗಿ ಕರೆದುಕೊಂಡಿದ್ದಾರೆ. ತಮಿಳುನಾಡು ಮತ್ತು ಪಾಂಡಿಚ್ಚೇರಿಯಲ್ಲಿ ಇವರು ಅರವ ಮಾಲ, ಪರ್ರೈಯಾನ್, ಮತ್ತು ಹರಿಜನ್ ಎಂದು ಗುರುತಿಸಲ್ಪಡುತ್ತಾರೆ. ಕರ್ನಾಟಕದಲ್ಲೂ ಕೂಡ ಆದಿಆಂಧ್ರ ಎಂದು ಗುರುತಿಸಿಕೊಳ್ಳುತ್ತಾರೆ."[೧೫] ಈ ಕೃತಿಯ ಮೂಲಕ ಮಾಲ ಸಮುದಾಯದವರಿಗೆ ಪ್ರದೇಶಕ್ಕನುಸಾರವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿರುವುದು ತಿಳಿದುಬರುತ್ತದೆ. ಈ ಮೇಲಿರುವ ಸಮುದಾಯಕ್ಕೂ ಮತ್ತು ಈ ಅಧ್ಯಯನಕ್ಕೆ ಒಳಪಟ್ಟ ಸಮುದಾಯಕ್ಕೂ ಗುರುತಿಸಿರುವ ಪದಗಳ ವ್ಯತ್ಯಾಸವನ್ನು ತಿಳಿಯಲು ಈ ಅಧ್ಯಯನದ ಹಿನ್ನಲೆಯಲ್ಲಿ ಸಾಹಾಯಕವಾಗಿದೆ.

"ಸುಮೇರಿಯನ್ ಭಾಷಾಶಾಸ್ತ್ರದ ಆಧಾರದ ಮೇಲೆ ಅಭ್ಯಾಸ ಮಾಡಿ ಭಾರತೀಯ ದ್ರಾವಿಡ ಭಾಷೆಗಳೊಂದಿಗೆ ಹೋಲಿಸಿ ಮತ್ತು ಸಂಸ್ಕೃತದ ಪದಗಳೆಂದು ನೋಡಿದಾಗ ಸಾಂಸ್ಕೃತೀಕರಣಗೊಂಡು ಅರ್ಥ ನೀಡುವ ಪದಗಳ ದೂರವಿಟ್ಟು ನೋಡಿದಾಗ ಜಮೀನುದಾರರು ಅಥವಾ ರಾಜರು ಎಂದು ಅರ್ಥ ಕೊಡುವ ಮೊದಲ ಪದ ಮಾದ ಅಥವಾ ಮಾಲ

೧. ಮಾದ ಎಂಬ ಪದವು ಮಾರ ಎಂದಾಯಿತು. ಮಾರ ಎಂಬ ಪದವು ಮಾಳ ಎಂದಾಯಿತು. ಮಾಳ ಎಂಬ ಪದವು ಮಾಲ ಎಂದಾಯಿತು.

೨. ಇದೇ ಮಾದ ಎಂಬ ಪದದಿಂದ ಮಾರ ಎಂಬ ಪದ ಬಂದಿತು. ಮಾರ ಎಂಬ ಪದದಿಂದ ಬಾರ, ಬಾರಗ, ಭಾರ ಎಂಬ ಪದಗಳು ಉದ್ಭವವಾದವು. ನಂತರ ಈ ಮೇಲಿನ ಪದಗಳಿಂದ ಬಾರಗ, ಬರಾಕ್ ಹಾಗೂ ಭಾರತ ಎಂಬ ಪದಗಳು ಉದಯಿಸಿದವು.

೩. ಈ ಮಾದ ಎಂಬ ಪದವು ಮಾತಂಗ ಎಂಬ ಪದಕ್ಕೂ ಮೂಲವಾಗಿದೆ.

೪.ಮಾ ಅಥವಾ ಮಾಹ್ ಅಥವಾ ಮಹ್ ಅಥವಾ ಮಹ್ರ ಎಂಬ ಪದಗಳಿಂದ ಮಹರು, ಮಹಾರು, ಮಹರರು ಮತ್ತು ಮಹಾರರು ಎಂಬ ಪದಗಳು ಉದಯಸಿದವು.

೫.ಪಲಿಲ್ ಎಂಬ ಪದದಿಂದ ಪಲ ಪಲಂ, ಪಲಿಲ, ಪಲ್ಲ, ಪೊಲ್ಲ, ಪೊಲ್ಲಂ ಪೊಲಯ, ಹೊಲಯ, ಹೊಲೆಯ ಹಾಗೂ ಹೊಲಿಯ ಎಂಬ ಪದಗಳು ಉದಯಿಸಿವೆ. ಈ ಪದಗಳು ಮಾದ, ಮಾಲ, ಮಾರ ಹಾಗೂ ಮಾಳ ಪದಗಳಿವೆ ಸಮವಾದಿಗಳಾಗಿವೆ.

೧.ಮದ	ಮಾದ	ಮಾದಿಗ, ಮಾದ್ಗ, ಮಾದಿಗ.
೨.ಮರ	ಮಾರ	ಮರವ, ಮಾರವ ಪೂರ್ವ ಮಾರವಾಡಿ.
೩.ಮಲ	ಮಾಲ	ಮಾಲ್ವ, ಮಾಲವ ಮಾಲವಿಯ.
೪.ಮಳ	ಮಾಳ	ಮಾಳ್ವ, ಮಾಳವ, ಮಾಳ್ವೀಯ.
೫.ಪಲ	ಪಾಲ	ಪಾಲಕ, ಪಲಾರು.
೬.ಪಲಂ	ಪಾಲಂ	ಪಾಲಕಂ.
೭.ಪೊಲ	ಪೂಲಂ	ಪೂಲಯ, ಪುಲ್ಲಕೇಶಿ.
೮.ಪಲ್ಲಿ	ಪೂಲ್ಲಂ	ಪಲ್ಲಿ, ಹೊಲಿಯ, ಹೂಲ್ಯ
೯.ಪಲ	ಹಲ	ಪಲ್ಲ, ಪಲ್ಲವ, ಹಲಸ, ಹಳಸ, ಹಳಬ.
೧೦.	ಪೂಲ	ಹೊಲ ಪೂಲವ, ಪಲ್ಲವ, ಹೊಲವ, ಹೊಲಿವ, ಹೂಲಯ.

ಮಹಾರಾಷ್ಟ್ರದಲ್ಲಿ ಪ್ರಖ್ಯಾತವಾಗಿರುವ ಮಲ್ಲಕಂಬ ಮತ್ತು ಮಲ್ಲ ಹಗ್ಗದ ಕ್ರೀಡೆಗಳು ಮೂಲತಃ ಮಹಾರರು, ಪುರಾತನ ಕಾಲದಿಂದಲೂ ಆಡಿಕೊಂಡು ಬಂದಿರುವ ಕ್ರೀಡೆಗಳಾಗಿವೆ. ಮಲ್ಲಯುದ್ಧವು ಸಹ ಮಲ್ಲರಲ್ಲಿ ಆರಂಭಗೊಂಡು ಪ್ರಖ್ಯಾತವಾದ ದ್ವಂದ್ವಯುದ್ಧ. ಈಗ ಮಲ್ಲರು ಈ ಯುದ್ಧವ ಮಾಡದಿದ್ದರು ಮಲ್ಲರಿಂದ ಆರಂಭವಾದ ಈ ಕ್ರೀಡೆ ಅವರ ನಾಮದೇಯದೊಂದಿಗೆ ಪ್ರಖ್ಯಾತವಾಗಿದೆ.

ಭಾರತದ ಪ್ರತಿಯೊಂದು ರಾಜ್ಯಗಳಲ್ಲಿ ಮಲ್ಲರನ್ನು ಮತ್ತು ಅವರ ರಕ್ತಸಂಬಂಧಿಗಳನ್ನು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ ಮತ್ತು ಅವರ ಭಾಷೆಯು ಸಹ ದ್ರಾವಿಡ ಭಾಷೆಯ ಬೇರೆ ಬೇರೆ ರೂಪಗಳನ್ನು ಹೊಂದಿದೆ.

೧.ಮಹಾರಾಷ್ಟ್ರದಲ್ಲಿ ಮಾಲಾರಿಗೆ ಮಹರರು ಎನ್ನುತ್ತಾರೆ. ಇವರು ಮಹಾರಾಷ್ಟ್ರದಲ್ಲಿ ಮರಾಠಿ ಮಾತನಾಡುತ್ತಾರೆ.

೨.ರಾಜಸ್ತಾನದಲ್ಲಿ ಅವರು ಮಾರವರು ಎನಿಸಿಕೊಳ್ಳುತ್ತಾರೆ. ಅವರು ಮಾರವಾಡಿ ಮಾತನಾಡುತ್ತಾರೆ.

೩.ಮಧ್ಯಪ್ರದೇಶದಲ್ಲಿ ಅವರು ಮಾಲ್ವರು ಎನಿಸಿಕೊಳ್ಳುತ್ತಾರೆ. ಅವರು ಮಾಲ್ವಿ ಮಾತನಾಡುತ್ತಾರೆ.

೪.ಕರ್ನಾಟಕದಲ್ಲಿ ಅವರು ಹೊಲೆಯ/ಮಾಲ ಎನಿಸಿಕೊಳ್ಳುತ್ತಾರೆ. ಅವರು ಕನ್ನಡ ಮಾತನಾಡುತ್ತಾರೆ.

೫.ಕೇರಳದಲ್ಲಿ ಅವರು ಮಲಯರು ಎನಿಸಿಕೊಳ್ಳುತ್ತಾರೆ. ಮಲೆಯಾಳಂ ಮಾತನಾಡುತ್ತಾರೆ.

೬. ಆಂಧ್ರದಲ್ಲಿ ಅವರು ಮಾಲರು ಎನಿಸಿಕೊಳ್ಳುತ್ತಾರೆ. ಅವರು ತೆಲುಗು ಮಾತನಾಡುತ್ತಾರೆ.

ಇವರು ಇನ್ನು ಬೇರೆ-ಬೇರೆ ಕಡೆ ಬೇರೆ ಬೇರೆ ಹೆಸರುಗಳಿಂದ ಕರೆಸಿಕೊಳ್ಳುತ್ತಾರೆ. ಮಲ್ಲರುಗಳ ಹಿರಿಮೆ-ಗರಿಮೆ ಈಗಲೂ ಅವರ ಹೆಸರುಗಳಲ್ಲಿ ಅವರು ಆರಾಧಿಸುವ ದೇವರುಗಳ ಹೆಸರಿನಲ್ಲಿ ಅವರ ಮನೆತನಗಳ ಹೆಸರಿನಲ್ಲಿ ಹಾಗೂ ಸ್ಥಳನಾಮಗಳಲ್ಲಿ ಕಂಡುಬರುತ್ತವೆ. ಉದಾಹರಣೆಗೆ ಮಲ್ಲಯ್ಯ, ಮಲ್ಲಣ್ಣ, ಮಲಯಪ್ಪ, ಮಲಾಜಕ್ಕ, ಮಲಾಜಮ್ಮ, ಮಲ್ಲಾಜಿ, ಮಲ್ಲರಸ, ಮಲ್ಲದೇವ, ರಾಚಮಲ್ಲ, ಮಲ್ಲಿಕಾರ್ಜುನ, ಮಲ್ಲಮ್ಮ, ಮಲ್ಲಿಕಾ ಇತ್ಯಾದಿ ಹೆಸರುಗಳು ಹೊಲೆಯರಲ್ಲಿ, ಮಾಲಾರರಲ್ಲಿ, ಮಾಲಾಗಳಲ್ಲಿ ಮತ್ತು ಪರ್ರೈಯರಲ್ಲಿ ಸಾಮಾನ್ಯವಾಗಿವೆ."[೧೬]

ಹೊಲೆಯ ಪದದ ಬಗ್ಗೆ ಎಡ್ಗರ್ ಥರ್ಸ್ಟನ್ ಅವರ ವಿಚಾರವನ್ನ ವಿವರಿಸಿದ್ದಾರೆ

"Holeyas are the labourers, and former agrestic serfs of south Canara, Pulayn being the Malayalam and paraiyan the tamil form of the same word. The name is derived by Brahmins from hole pollution, and by others from hola, land or soil, in recognition of the fact that, as in the case of the paraiyan, there are coustoms remaining which seem to indicate that the holeyas were once masters of the land ; but whatever the derivation may be, it is no doubt the same as that of paraiyan and pulayan. The Holeyas are divided into many sub- divisions, but the most important are Mari, Mera, and Mandala of Bakudu"

ಹೊಲೆಯರು ಹೊಲದಲ್ಲಿ ಕೆಲಸ ಮಾಡುವವರು ಮತ್ತು ದಕ್ಷಿಣ ಕನ್ನಡದಲ್ಲಿ ಊಳಿಗದವರಾಗಿದ್ದರು ಅಥವಾ ಜೀತದಾಳುಗಳಾಗಿದ್ದರು. ಹೊಲದಲ್ಲಿ ಕೆಲಸ ಮಾಡುವವನೆ ಹೊಲೆಯ ಎಂಬ ಪದರೂಪ ಮಲಯಾಳಂ ನಲ್ಲಿ ಪುಲಯನ್ ಮತ್ತು ತಮಿಳುನಲ್ಲಿ ಪರ್ರೈಯನ್ ಎಂದು ಆಗಿದೆ. ಬ್ರಾಹ್ಮಣರು ಈ ಪದ ಅಂದರೆ ಹೊಲೆ ಅಂದರೆ ಹೊಲಸ್ಸು ಎಂಬ ಪದದಿಂದ ಬಂದಿದೆ ಎನ್ನುತ್ತಾರೆ. ಬೇರೆಯವರು ಈ ಪದ ಹೊಲ ಅಂದರೆ ನೆಲ ಅಥವಾ ಭೂಮಿ ಎಂಬ ಪದದಿಂದ ಬಂದಿದೆ ಎನ್ನುತ್ತಾರೆ. ಪರ್ರೈಯನರಿಗೆ ಸಂಬಂಧಿಸಿದ ಕೆಲವು ಆಚರಣೆಗಳಿದ್ದು ಅವು ಒಂದು ಕಾಲದಲ್ಲಿ ಹೊಲೆಯರೆ ಭೂಮಿಯ ಒಡೆಯರಾಗಿದ್ದರೆಂದು ಸೂಚಿಸುತ್ತವೆ. ಹೊಲಯ ಎಂಬ ಪದವನ್ನು ಯಾರು ಯಾವ ರೂಪದಲ್ಲಾದರು ಪಡೆದಿರಲಿ ಅದು ಪರ್ರೈಯನ್ ಮತ್ತು ಪುಲಯನ್‌ಗಳಿಗೆ ಸಮಾನಾರ್ಥಕವಾಗಿದೆ ಎಂದು ತಿಳಿಸಿದ್ದಾರೆ. ಹೊಲೆಯರಲ್ಲಿ ಹಲವು ಒಳಪಂಗಡಗಳಾಗಿ ವಿಭಜನೆಯಾಗಿದ್ದು ಅವುಗಳಲ್ಲಿ ಮಾರಿ, ಮೇರ, ಬಾಕುಡ, ಮತ್ತು ಮುಂಡಾಲ ಮುಖ್ಯವಾಗಿವೆ."[೧೭] ಈ ಪದಕ್ಕೆ ಪರ್ಯಾಯವಾಗಿ ಆದಿದ್ರಾವಿಡ ಎಂಬ ಪದವಿದೆ ದ್ರಾವಿಡರು ಮೂಲನಿವಾಸಿಗಳು. ಇವರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೊಗಿ ಕೊನೆಗೆ ದಕ್ಷಿಣ ಭಾರತದಲ್ಲಿ ನೆಲೆ ನಿಂತರು. ಮಾಲ ಸಮುದಾಯದವರಿಗೆ ಕರೆಯುವ ಹೆಸರುಗಳು ಬೇರೆ ಬೇರೆ ರಾಜ್ಯಗಳಲ್ಲಿ ವಿಭಿನ್ನತೆಯನ್ನು ಒಳಗೊಂಡಿರುತ್ತವೆ.

"ದಕ್ಷಿಣ ಕರ್ನಾಟಕದ ಇಂದಿನ ಹೊಲೆಯರ ಭಾಷೆಯಲ್ಲಿ ಮಾಲ ಎಂದರೆ ಹೊಲ ಎಂದು ಅರ್ಥ. ಮಾಲ ಪದದ ಬಳಕೆಯು ಬರುವ ಮೊದಲು ಅದು ಮರ ಎಂಬುದಾಗಿತ್ತು. ಅದಕ್ಕಿಂತಲೂ ಮೊದಲು ಅದು ಮಾದ ಎಂಬುದಾಗಿತ್ತು. ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಒಂದು ದೊಡ್ಡ ಪಟ್ಟಣವಾದ ಮಲವಳ್ಳಿಯು ಚೋಳರ ಆಳ್ವಿಕೆಯಲ್ಲಿ ಮಾರಳ್ಳಿ, ಮಾರರಳ್ಳಿ, ಮಾರಹಳ್ಳಿ ಅಥವಾ ಮಾರೇನಹಳ್ಳಿಯಾಗಿತ್ತು. ಚೋಳರು ಪತನವಾಗುವ ಕಾಲಕ್ಕೆ ಮಾಲವಳ್ಳಿ ಪಟ್ಟಣ ಉದಯವಾಗಿತ್ತು. ಇದಕ್ಕೆ ಒಂದು ದಂತಕಥೆಯು ಮಲವಳ್ಳಿಯಲ್ಲಿ ಪ್ರಚಲಿತವಾಗಿದೆ. ಅದೇನೆಂದರೆ ದಕ್ಷಿಣ ಭಾರತದಲ್ಲಿ ಹಲವು ಕುಟುಂಬಗಳಿಗೆ ಮನೆ ದೈವವಾಗಿರುವ ಸಿದ್ಧಪ್ಪಾಜಿಯು ಒಂದು ದಿನ ಮಾರಳ್ಳಿಗೆ ಬಂದು ನೆಲೆಸಿದನು ಅಥವಾ ವಾಸವಾದನು. ಆ ಸಿದ್ಧಪ್ಪಾಜಿಗೆ ಊರಿನಲ್ಲಿರುವ ಕೆಲವು ಮುಖಂಡರು ಅವಮಾನಿಸುತ್ತಾರೆ. ಆ ಕಾರಣದಿಂದ ಸಿದ್ಧಪ್ಪಾಜಿಯು ಮಾರಳ್ಳಿಗೆ ಶಾಪ ಹಾಕಿದನು. ಮಾದಪ್ಪನ ಪದ ಹೇಳುವ ನೀಲಗಾರರ ಪ್ರಕಾರ ಆ ಶಾಪ ಏನೆಂದರೆ "ಮಾರಳ್ಳಿ ಎಕುಟ್ಟೂಗ್ಲಿ ಮಲವಳ್ಳಿ ಹುಲುಸಾಗಿ ಬೆಳೆಯಲಿ" ಎಂದು. ಅಂದರೆ ಮಾರಳ್ಳಿ ಹಾಳಾಗಲಿ ಮಲವಳ್ಳಿ ಬೆಳೆಯಲಿ ಎಂದು ಅರ್ಥ. ಈಗಲೂ ಮಳವಳ್ಳಿ ಪಟ್ಟಣದಲ್ಲಿ ಮಾದರು ಹೊಲ/ಮಾಲರು ಸೇರಿದರೆ ಅವರ ಜನಸಂಖ್ಯೆ ಅರ್ಧದಷ್ಟಾಗಿರುತ್ತದೆ ಎಂದು ಈ ಪುಸ್ತಕದಲ್ಲಿ ತಿಳಿಸಿದ್ದಾರೆ. ಆದ್ದರಿಂದ ಭಾರತ ದೇಶದ ಎಲ್ಲ ಕಡೆ ಈಗಲೂ ಮಾಳವನಾಡು ಮಾಲವರಾಜ್ಯ, ಮಾಲವರಹಳ್ಳಿ, ಮಲವಳ್ಳಿ, ಮಾರರಹಳ್ಳಿ, ಮಾರಿಗಾಂವ್, ಮಲಗಾಂವ್, ಮಾಲಗಾಂವ್, ಮಲಪಲ್ಲಿ, ಮೂಲಪಲಿ, ಮಾದಳಿ, ಮಾದೆಹಳ್ಳಿ, ಮಾರೆನಹಳ್ಳಿ, ಹೊಲನಹಳ್ಳಿ ಎಂಬ ಈ ಬಗೆಯ ಅರ್ಥ ಬರುವ ಸಾವಿರಾರು ಊರುಗಳು ಇವೆ ಎಂದು ತಿಳಿಸಿದ್ದಾರೆ. ಆದ್ದರಿಂದ ಮಾದ್ಗ 'ಮಾರ' ಮಾರರು ಮಾಳ, ಮಾಲ, ಮಾಳವರು ಹೊಲಯ, ಹೊಲರು ಪದಗಳು ಪರಯ ಪುಲಯ ಹ ಕಾರ ಬದಲಾಗಿ ಪ ಕಾರ ಇವೆಲ್ಲವು ಒಂದೇ ಇವರು ನೆಲವನ್ನಾಳಿದವರೆಂದು ತಿಳಿಸಿದ್ದಾರೆ"[೧೮]

"ಕಾಳಿದಾಸನ ಮೇಘದೂತದ ವಿಮರ್ಶಕ ಮತ್ತುಕವಿಯೊಬ್ಬನ ಹೆಸರು ಮಲ್ಲಬಟ್ಟ ಮತ್ತೊರ್ವ ಐತಿಹಾಸಿಕ ಪಂಡಿತನ ಹೆಸರು ಮಲ್ಲಣಾಚಾರ್ಯ ಮತ್ತು ಕಾಳಿದಾಸನ ಪ್ರಖ್ಯಾತ ನಾಟಕ ಮಾಲವಿಕಾಗ್ನಿ ಮಿತ್ರಂ ಮಲ್ಲರು-ಮಲಬಾರಿಗಳ ರಾಜರು ಸಹ ಆಗಿದ್ದರು ಮಲ್ಲ ಎಂಬುದು ಮಲ, ಮಾಲ, ಮಾಳ, ಎಂದೆಲ್ಲಾ ರೂಪಗಳನ್ನು ಪಡೆದುಕೊಂಡಿದೆ. ಅಂದರೆ ಮಲ್ಲರುಗಳೇ ಮಾಲರು ಹಾಗೂ ಮಾಳವರು ಆಗಿದ್ದಾರೆ. ಹೊಲೆಯ ಎಂಬ ಪದದಿಂದ ಮಾಲಾ ಎಂಬ ಪದ ಉತ್ಪತ್ತಿಯಾಯಿತು ಎಂಬುದನ್ನು ನಾವು ಕಾಣುತ್ತೇವೆ. ಹೊಲೆಯ ಪದದ ಅರ್ಥ, ಒಡೆಯ, ನೆಲದವನು, ನೇಗಿಲು ಬಳಸಿದವನು, ಹೊಲ ಹೂಳುವವನು ಎಂದು ಅರ್ಥಕೊಡುತ್ತದೆ. ಹೊಲೆಯ ಎಂಬ ಪದದ ಸಮನಾರ್ಥಕ ಪದ-ಮಾಳವ, ಮಳವ, ಮಾರ, ಬಾರ, ಮಹಾರ್, ಮಲ್ಲ, ಮಾಲ, ಪುಲಯ, ಪರಯ್ಯ, ರಾಜಬಾರ, ಪಾಸ್ವನ, ಪೈಲ್ವಾನ, ವಲ್ಲವ, ಪರಮಾರ ಎಂದು ಅರ್ಥವನ್ನು ಕೊಡುತ್ತದೆ. ಅಲ್ಲದೆ ಇವರದು ವಂಶಕುಲ ನೋಡಿದಾಗ ಇದರಲ್ಲಿ ಇವರದು ಸೂರ್ಯವಂಶ, ನಾಗವಂಶ, ಸ್ವರ್ಣವಂಶ, ಅಗ್ನಿವಂಶ, ಶಾಕ್ಯವಂಶ ಎಂಬುದು ತಿಳಿದುಬರುತ್ತದೆ. ಅಲ್ಲದೆ ಇವರದು ರಾಜಕುಲ ಮತ್ತು ಸೈನಿಕ ಕುಲ ಎಂಬುದು ಇದರಲ್ಲಿದೆ. ಅಂದರೆ ಇವರು ಮಗಧ, ದ್ರಾವಿಡ, ಕರ್ನಾಟಕ,

ಚೋಳ, ಗಂಗ, ಶಾತವಾಹನ, ಪಲ್ಲವ, ಚೇರ, ಪಾಂಡ್ಯ, ಪಾಳ, ರಟ್ಟ, ರಾಷ್ಟ್ರಕೂಟ, ಚೌಹಾನ್, ಸೋಲಂಕಿ, ಚಾಲುಕ್ಯ, ಕಾಕತೀಯ, ಸಾಳುವ ಮತ್ತು ತುಳುವ ಇತ್ಯಾದಿ ರಾಜಮನೆತನದ ಆಳ್ವಿಕೆಯ ಸಂದರ್ಭದಲ್ಲಿ ಸೈನಿಕರಾಗಿದ್ದರು, ಯುದ್ಧಪ್ರೀಯರಾಗಿದ್ದರು ಎಂದು ತಿಳಿದುಬರುತ್ತದೆ."[೧೯] ಈ ಕೃತಿಯ ಮೂಲಕ ಮಾಲ ಸಮುದಾಯದವರು ರಾಜರು ಆಗಿದ್ದರೆಂದು ತಿಳಿಯುತ್ತದೆ. ಇವರು ಮಧ್ಯಯುಗಿನ ಕಾಲದಲ್ಲಿ ರಾಜ ಪ್ರಭುತ್ವದಲ್ಲಿ ಇವರು ಪ್ರಮುಖವಾದಂತಹ ಸ್ಥಾನಮಾನವನ್ನು ಅಲಂಕರಿಸಿಕೊಂಡಿದ್ದರು. ಇವರು ಬೇರೆ ಬೇರೆ ಕೆಲಸ ಕಾರ್ಯಗಳಲ್ಲಿ ಗುರುತಿಸಿಕೊಂಡಿದ್ದರೆಂದು ಈ ಕೃತಿಯ ಮೂಲಕ ತಿಳಿಯಲಾಗಿದೆ. ಈ ಅಧ್ಯಯನದ ಹಿನ್ನಲೆಯಲ್ಲಿ ಮಾಲ ಸಮುದಾಯದ ಕೆಲಸ ಕಾರ್ಯಗಳ ಬಗ್ಗೆ ತಿಳಿದುಕೊಳ್ಳಲು ಅವರ ಸ್ಥಾನಮಾನಗಳನ್ನು ತಿಳಿದು ಪ್ರಸ್ತುತ ಅಧ್ಯಯನಕ್ಕೆ ಅಳವಡಿಸಿಕೊಳ್ಳಲು ಉಪಯುಕ್ತವಾಗಿರುತ್ತದೆ.

"ಬಾಬಾಸಾಹೇಬ ಅಂಬೇಡ್ಕರ್ ಪ್ರಕಾರ ಮಾಲ/ಹೊಲಯರಂತಹ ಇತ್ಯಾದಿ ಅಸ್ಪೃಶ್ಯ ಜಾತಿಗಳು/ ಸಮುದಾಯಗಳು ಪುರಾತನ ನಾಗವಂಶಕ್ಕೆ ಸೇರಿದವರು. ಸುಪ್ರಸಿದ್ಧ ಸಿಂಧೂ ನದಿಯ ನಾಗರಿಕತೆಯನ್ನು ಕಟ್ಟಿದವರು ಇದೇ ನಾಗಜನರು. ಆದ್ದರಿಂದ ನಾಗ ಜನರು ವಾಸಿಸುತ್ತಿದ್ದ ಸ್ಥಳಗಳನ್ನು ನಗರಗಳೆಂದು ಕರೆಯಲಾಗುತ್ತಿತ್ತು ಎಂದು ತಿಳಿಸಿದ್ದಾರೆ. ನಾಗಜನರ ಸುಂದರ ಜೀವನಶೈಲಿಯೇ ನಾಗರಿಕತೆ ಎನಿಸಿಕೊಂಡಿತು. ನಗರವಾಸಿ ನಾಗಜನರನ್ನು 'ನಾಗರಿಕ' ಎನ್ನಲಾಗುತ್ತಿತ್ತು. ನಾಗರಿಕತೆಯ ಮೂಲ ವಾರಸುದಾರರಾದ ನಾಗಜನರು ಆಧುನಿಕ ಹೊಲೆಯ/ಮಾಲರಾಗಿರುವಾಗ ಅದು ಹೊಲಸು/ಮಲ ಎನಿಸಿಕೊಳ್ಳುವುದಿಲ್ಲ ಎಂದಿದ್ದಾರೆ. ಇದಕ್ಕೆ ಖ್ಯಾತ ಅಂಬೇಡ್ಕರ್ ವಾದಿ ಎಂ.ಗೋಪಿನಾಥರವರು ತಮ್ಮ ನಾಗಲೋಕ ಕೃತಿಯಲ್ಲಿ ಹೇಳಿದ ವಿವರಣೆಯೆಂದರೆ ಕ್ರಿ.ಪೂ. ೨೦೦೦ನೇ ವರ್ಷದ ಸುಮಾರಿನಲ್ಲಿ ಬಿಳತೊನ್ನಿನಂತೆ ತೊಗಲು ಹೊಂದಿದ್ದ ಆರ್ಯರು ಎಂಬ ಅಲೆಮಾರಿ ತಂಡವೊಂದು ನಾಗಮಂಡಲ (ಭಾರತ)ಕ್ಕೆ ದನಕಾಯುತ್ತಾ ಅನ್ನ, ನೀರು ಹುಡುಕಿಕೊಂಡು ಬಂದರು. ಆ ಆರ್ಯರೇ ಬ್ರಾಹ್ಮಣ ಬನಿಯಾಗಳ ಪೂರ್ವಿಕರು ಆಗಿದ್ದರು. ಆದರೆ ನಾಗಜನಾಂಗದ ರಾಜರುಗಳು ಮಹಾ ಕರುಣಾಮಯಿಗಳಾಗಿದ್ದರು. ಅವರು ಆರ್ಯರಿಗೆ ಅನ್ನ ನೀರು ನೀಡಿದ್ದಲ್ಲದೆ ತಮ್ಮ ರಾಜ್ಯಗಳಲ್ಲಿ ಉಳಿಯುವುದಕ್ಕೂ ಆರ್ಯರಿಗೆ ಅವಕಾಶವನ್ನು ಮಾಡಿಕೊಟ್ಟರು. ಭೂಮಿಯ ಒಡೆಯರಾದ ನಾಗ ಜನಾಂಗದವರು/ಮಾಲ/ಹೊಲೆಯ ಆರ್ಯರಿಗೆ ಸ್ವತಂತ್ರವಾಗಿ ಬದುಕಲು ಭೂಮಿ ನೀಡಿದ್ದಲ್ಲದೆ ಹಿಂದುಮುಂದು ಯೋಚಿಸದೇ ಅಪರಿಚಿತ ಆರ್ಯರಿಗೆ ದಯೆತೋರಿದರು. ಹೀಗೆ ನಾಗ/ಮಾಲ ಜನಾಂಗದವರಿಂದ ಭೂಮಿ ಮತ್ತು ಬದುಕುವ ಹಕ್ಕು ಪಡೆದ ಆರ್ಯರು ನಾಗ-ನಾಗ ಜನಾಂಗದ ರಾಜರುಗಳ ಮಧ್ಯ ಹುಳಿಹಿಂಡಿ ಅವರು ಪರಸ್ಪರ ಕಚ್ಚಾಡುವಂತೆ ಮಾಡಿದರು. ಅಂತಹ ಕಚ್ಚಾಡುವಿಕೆಯ ಲಾಭ ಪಡೆದ ಆರ್ಯರು ಇಡೀ ನಾಗಮಂಡಲವನ್ನು ಆಕ್ರಮಿಸಿದ್ದು ಮತ್ತು ನಾಗ ಜನಾಂಗದ ಹಲವಾರು ಕುಲಗಳನ್ನು ಸಣ್ಣಪುಟ್ಟ ಜಾತಿಗಳಾಗಿ ವಿಂಗಡಿಸಿ ಜಾತಿ ಎಂಬ ವಿಷದ ಬೀಜ ಬಿತ್ತಿದ್ದು ಒಂದು ಇತಿಹಾಸವಾಗಿದೆ. ಆ ಇತಿಹಾಸವೇನೆಂದರೆ ನಾಗವಂಶದ ರಾಜರುಗಳನ್ನು ಅಸುರ ಎಂದರೆ ಸುರೆಯನ್ನು ಕುಡಿಯದವ, ರಾಕ್ಷಸ ಎಂದರೆ ರಕ್ಷಿಸುವವ, ದಾನವ ಎಂದರೆ ದಾನ ನೀಡುವವ ಎನ್ನಲಾಗುತ್ತಿತ್ತು. ಆದರೆ ಆ ಪದಗಳಿಗೆ ಆರ್ಯರು ಕೆಟ್ಟ ಕಥೆಗಳನ್ನು ಕಟ್ಟಿ ಅವರನ್ನು ಕ್ರೂರಿಗಳು

ಎಂದು ಪ್ರಚಾರ ಮಾಡಿದರು ಮತ್ತು ಅವರನ್ನು ಮೋಸದಿಂದ ಕೊಂದರು. ನಾಗವಂಶದವರನ್ನು ಕೊಂದ ಆರ್ಯರು ತಮ್ಮನ್ನು ತಾವು ದೇವತೆಗಳು ಎಂದು ಕರೆದುಕೊಂಡರು. ಶಾಂತಿ ಸೌಹಾರ್ದತೆಯ ನಾಡಾಗಿದ್ದ ನಾಗಮಂಡಲದಲ್ಲಿ ಪ್ರಾಣಿಬಲಿ, ಯಜ್ಞಯಾಗಾದಿಗಳು ಪ್ರಾರಂಭವಾದವು. ದನ ಕಾಯುತ್ತಾ ಬಂದ ಆರ್ಯರು ದನದ ಮಾಂಸ ತಿನ್ನುತ್ತಿದ್ದರು. ಈ ಸಂದರ್ಭದಲ್ಲೇ ಅನೈತಿಕತೆ, ಅರಾಜಕತೆ ಈ ಸಂದರ್ಬದಲ್ಲಿ ತಾಂಡವವಾಡುತ್ತಿತ್ತು. ಇಷ್ಟೆಲ್ಲಾ ಆದರೂ ನಾಗಜನಾಂಗದಲ್ಲಿ ಇನ್ನೂ ಸಾತ್ವಿಕತೆ ಹೋರಾಟದ ಕೆಚ್ಚು ಮಾಯವಾಗಿರಲಿಲ್ಲ. ಈ ಸಂದರ್ಭದಲ್ಲಿಯೇ ಕ್ರಿ.ಪೂ. ೫೬೩ ರಲ್ಲಿ ನಾಗ ಜನಾಂಗದ ಶಾಕ್ಯ ಕುಲದಲ್ಲಿ ಭಗವಾನ್ ಗೌತಮಬುದ್ಧ ಜನಿಸಿದ್ದು. ಬುದ್ಧನ ನಂತರ ಆರ್ಯರ ಪ್ರಭಾವ ತುಸು ಕಡಿಮೆಯಾಯಿತು. ನಂತರ ನಾಗ ಜನಾಂಗದ ಪಾರುಪತ್ಯ ಮತ್ತೆ ಹೆಚ್ಚಾಯಿತು. ಮುಂದೆ ಶಿಸುನಾಗ ವಂಶಕ್ಕೆ ಸೇರಿದ ಚಂದ್ರಗುಪ್ತ ಮೌರ್ಯನು ಮೌರ್ಯ ಸಂತತಿ ಸ್ಥಾಪಿಸಿದ್ದನು. ಮತ್ತು ಆ ಸಂತತಿಯ ಶ್ರೇಷ್ಠ ಚಕ್ರವರ್ತಿ ಸಾಮ್ರಾಟ ಅಶೋಕನು ಬೌದ್ಧ ಧರ್ಮವನ್ನು ಜಗತ್ತಿನಾದ್ಯಂತ ಹರಡಿಸಿದ್ದು ನಾಗಜನರ ಪ್ರಾಬಲ್ಯಕ್ಕೆ ಪ್ರಬಲ ಉದಾಹರಣೆಯಾಯಿತು"[೨೦] ಈ ಕೃತಿಯ ಮೂಲಕ ಮಾಲ ಸಮುದಾಯದ ಚಾರಿತ್ರಿಕತೆಯಲ್ಲಿ ಮಾಲ ಸಮುದಾಯದ ಉದಾರ ಮನೂಭಾವನೆಯನ್ನು ತಿಳಿಯಲಾಯಿತು. ಮಾಲ ಸಮುದಾಯದಲ್ಲಿ ಇತಿಹಾಸ ರೂಪಿಸಿದ ಮಾಹಾನ್ ಪುರುಷರು ಇದ್ದರು ಎಂಬುದನ್ನು ತಿಳಿದು ಈ ಅಧ್ಯಯನದ ಹಿನ್ನಲೆಯಲ್ಲಿ ಸಾಹಾಯಕವಾಗಿದೆ.

"ಮಾಲ ಇದು ಭಾರತೀಯರ ಒಂದು ಜಾತಿಯ ಹೆಸರು. ಈ ಜಾತಿಯ ಜನರು ಹೆಚ್ಚಾಗಿ ಆಂಧ್ರಪ್ರದೇಶದಲ್ಲಿ ಕಂಡುಬರುತ್ತಾರೆ. ಆಂಧ್ರಪ್ರದೇಶದಲ್ಲಿ ಮಾದಿಗ ಜಾತಿಯ ನಂತರ ದಲಿತರಲ್ಲಿ ಮಾಲಾ ಜಾತಿಯವರು ಸಂಖ್ಯಾಬಾಹುಳ್ಯ ಹೊಂದಿದ್ದಾರೆ. ಸಂಸ್ಕೃತದಲ್ಲಿ ಮಲ ಎಂಬುದು ಸಂಸ್ಕೃತದ ಮಲ್ಲ ಎಂಬ ಶಬ್ದದ ಅಪಭ್ರಂಶವಾಗಿದೆ. ಮಲ, ಮಾಲ ಅಥವಾ ಮಲ್ಲ ಎಂಬುದು ಒಂದು ಸಾಮಾಜಿಕ ಗುಂಪು. ಈ ಮಾಲಾ ಸಮುದಾಯದವರು ಆಂಧ್ರಪ್ರದೇಶ ಮತ್ತು ತೆಲಂಗಾಣದ ದಕ್ಷಿಣ ಭಾರತೀಯ ರಾಜ್ಯಗಳ ಬಹುತೇಕ ಜಾತಿ. ಮಾಲ ಈ ಪದವನ್ನು ಸಂಸ್ಕೃತದ ಮಲ್ಲ ಎಂಬ ಪದದಿಂದ ಆರಿಸಲಾಗಿದೆ. ಮಾಲಾ ಸಮುದಾಯದವರನ್ನು ಭಾರತ ಸರಕಾರವು ಪರಿಶಿಷ್ಟ ಜಾತಿ ಎಂದು ಪರಿಗಣಿಸಿದೆ. ೧೯೩೦ ರ ಆದಿಆಂಧ್ರ ಚಳುವಳಿಯ ಸಂದರ್ಭದಲ್ಲಿ ಮಾಲ ಸಮುದಾಯದ ಜನರು ಹಾಗೂ ಮಾದಿಗ ಎನ್ನುವ ಸಮುದಾಯದ ಜನರು ಸೇರಿ ಆಂಧ್ರದ ಕರಾವಳಿ ಭಾಗದಲ್ಲಿ ವಾಸಿಸಿ 'ಆದಿಆಂಧ್ರ' ಎಂದು ತಮ್ಮನ್ನು ಕರೆದುಕೊಳ್ಳುತ್ತಿದ್ದರು. ನಂತರ 'ಆದಿಆಂಧ್ರ ಬದಲಿಗೆ ಮಲ ಅಥವಾ ಮಾಲ ಎಂದು ಕರೆಯಲಾರಂಭಿಸಿದರು"[೨೧] ಈ ಕೃತಿಯ ಮೂಲಕ ತಿಳಿಯುವದೇನೆಂದರೆ ಮಾಲ ಸಮುದಾಯದವರ ಮೂಲ ಆಂಧ್ರಪ್ರದೇಶದ ದಕ್ಷಿಣ ಭಾಗದಿಂದ ಕಾರ್ನಾಟಕಕ್ಕೆ ಒಂದು ಪಂಗಡ ಅಥವಾ ಮಾಲ ಜಾತಿಯ ಒಂದು ಗುಂಪು ವಲಸೆ ಬಂದಿರಬಹುದು ಎಂದು ತಿಳಿದು ಬರುತ್ತದೆ. ಆದ್ದರಿಂದ ಈ ಅಧ್ಯಯನದ ಹಿನ್ನಲೆಯಲ್ಲಿ ಅದನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ,

"ಬಾಬಾ ಸಾಹೇಬ್ ಅಂಬೇಡ್ಕರರು ಹೇಳುವಂತೆ ಮಾಲಾ ಜಾತಿಯವರನ್ನು ಒಂದು ಅಸ್ಪೃಶ್ಯ ಜಾತಿಯೆಂದು ಹೇಳಲಾಗಿದೆ. ಈ ಅಸ್ಪೃಶ್ಯ ಜಾತಿಯವರು ಒಂದು ಕಾಲದಲ್ಲಿ ಯೋಧ ಕುಲದವರಾಗಿದ್ದು ಇವರು ರಜಪೂತರ ಅರಸರಲ್ಲಿ ಮತ್ತು ಹಲವಾರು ರಾಜಮನೆತನದ ಅರಸರ ಕೈಯಲ್ಲಿ ಸೋತದ್ದರಿಂದ ಗೆದ್ದ ಆಕ್ರಮಣಕಾರರ ಕೈಗೊಂಬೆಗಳಾಗಿ ಮುಂದುವರಿದು ತದನಂತರದಲ್ಲಿ ಸಮಾಜದಿಂದ ಬಹಿಷ್ಕೃತರಾಗಿ ಊರ ಹೊರಗೆ ಬದುಕಬೇಕಾಗಿ ಬಂತೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ."[೨೨] ಈ ಹಿನ್ನಲೆಯಲ್ಲಿ ಮಾಲ ಸಮುದಾಯ ರಾಜ ಪ್ರಭುತ್ವದ ಕಾಲದಿಂದಲೂ ಆಡಳಿತದೊಂದಿಗೆ ಗುರುತಿಸಿಕೊಂಡು ಕಹಳೆಯುವರಾಗಿ ಜೀವನ ನಡೆಸಿದ್ದು ಕಂಡುಬರುತ್ತದೆ. ಇವರು ರಾಜರಕ್ಷಕರಾಗಿದ್ದರೆಂದು ತಿಳಿಯಲಾಗಿದೆ. ಮಾಲ ಸಮುದಾಯದವರ ವಂಶಪಾರಂಪರಿಕ ಕಲೆಗಳು ತಾವು ಯುದ್ಧಪ್ರೀಯರಾಗಿದ್ದರೆಂದು ಬಿಂಬಿಸುತ್ತಿವೆ. ಈ ಒಂದು ಕೃತಿಯು ಈ ಅಧ್ಯಯನದ ಹಿನ್ನಲೆಯಲ್ಲಿ ಯುದ್ಧಪ್ರೀಯರು ಹೌದೊ ಇಲ್ಲವೊ ಎಂಬುದನ್ನು ತಿಳಿದು ನಾಲ್ಕನೆಯ ಅಧ್ಯಾಯದಲ್ಲಿ ಬಳಸಿಕೊಳ್ಳಲು ಸಾಹಾಯಕವಾಗಿದೆ.

"ಕ್ರಿ.ಶ. ೧೪ನೇ ಶತಮಾನದ ತೆಲುಗು ಶಾಸನದಲ್ಲಿ ಮೊಟ್ಟಮೊದಲು ಪಟ್ಟು ಎಂಬ ಉಲ್ಲೇಖವಿದ್ದು. ಇದಕ್ಕೆ A Kind of silk woren by pariahas ಎಂಬ ಅರ್ಥ ಹೇಳಲಾಗಿದೆ. ಅಂದರೆ ಮಾಲ ಜನಾಂಗದವರು ರೇಷ್ಮೆ ಬಟ್ಟೆಗಳನ್ನು ನೆಯುವ ಕಾರ್ಯವನ್ನು ೧೪ನೇ ಶತಮಾನದ ಕೆಲವಡೆಗಳಲ್ಲಿ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿದ್ದರೆಂದು ಇದರಿಂದ ತಿಳಿದುಬರುತ್ತದೆ. ಮಾಲ ಎಂದರೆ ಹೊಲೆಯರು ಎಂದಾಗುತ್ತದೆ. ಅಂದರೆ ೧೪ನೇ ಶತಮಾನದಲ್ಲಿ ರೇಷ್ಮೆ ಬಟ್ಟೆ ನೆಯುವಂತಹ ಒಳ್ಳೆಯ ಕೆಲಸಗಳನ್ನು ಕೆಲವರಾದರೂ ಹೊಲೆಯರು ಅಥವಾ ಅಂತ್ಯಜರು ಮಾಡುತ್ತಿದ್ದರೆಂದು ನಂಬಬೇಕಾಗಿದೆ ಎಂದು ತಿಳಿಸಿದ್ದಾರೆ"[೨೩] ಯಾವುದೇ ಸಮುದಾಯ ಇಡೀ ಮಾನವ ಕುಲಕ್ಕೆ ತನ್ನದೇ ಆದ ವಿಶಿಷ್ಟವಾದ ಸಾಂಪ್ರದಾಯಿಕ ಕೊಡುಗೆ ನೀಡಿರುವಂತೆ ಮಾಲ ಸಮುದಾಯವು ಸಹ ತನ್ನ ಕೊಡುಗೆ ನೀಡಿದೆ. ಸಮುದಾಯಗಳು ಯಾವುದೇ ಪರಿಸ್ಥಿತಿಯಲ್ಲಿದ್ದರು ನಿಂತ ನೀರಿನಂತಿರದೆ ಸದಾ ಕಾರ್ಯ ಪ್ರವೃತ್ತಿಯನ್ನು ಹೊಂದಿರುತ್ತವೆ ಎಂದು ಈ ಕೃತಿಯ ಮೂಲಕ ಅರಿತುಕೊಳ್ಳಲಾಗಿದೆ. ಆದ್ದರಿಂದ ಮಾಲ ಸಮುದಾಯ ಸಮಾಜದಲ್ಲಿ ವಿಕಾಸ ಮತ್ತು ಬೆಳವಣಿಗೆ ಹೊಂದಲಿಕ್ಕೆ ಶತ ಪ್ರಯತ್ನ ಮಾಡುತ್ತಿದೆ. ಮತ್ತು ಕರ್ನಾಟಕದ ಮಾಲ ಸಮುದಾಯ ಆಂಧ್ರಪ್ರದೇಶದ ಯಾವ ಪಂಗಡಕ್ಕೆ ಸೇರಿದ್ದುದು ಎಂಬುದನ್ನು ಮಾಹಿತಿ ಪಡೆಯಲು ಉಪಯುಕ್ತವಾಗಿದೆ.

ಮಾಲ ಸಮುದಾಯದವರ ಮೂಲ ನೆಲೆ ಆಂಧ್ರಪ್ರದೇಶವಾಗಿದ್ದು, ಆಯಾ ಪ್ರದೇಶಕ್ಕೆ ತಕ್ಕ ಹಾಗೆ ಮತ್ತು ಆಯಾ ರಾಜ್ಯದ ಭಾಷೆಕ್ಕೆ ತಕ್ಕ ಹಾಗೆ ಬೇರೆ-ಬೇರೆ ಹೆಸರುಗಳಿಂದ ಕರೆಯುತ್ತಿರುವುದು ನಮಗೆ ತಿಳಿದುಬರುತ್ತದೆ. ಮಾಲ ಸಮುದಾಯದ ಪಂಗಡಗಳಲ್ಲಿರುವ ಕೆಲವು ಒಳಪಂಗಡಗಳನ್ನು ಅವರ ವೃತ್ತಿಯ ಆಧಾರದ ಮೇಲೆ ಕರೆಯುತ್ತಾರೆ. ಹೊಲ_ಭೂಮಿ, ಮಣ್ಣು ಎಂಬ ಪದದಿಂದ ಮಾಲ ಎಂಬ ಪದ ನಿಷ್ಪತ್ತಿ ಹೊಂದಿರಬಹುದೆಂದು ವಿದ್ವಾಂಸರು ಊಹಿಸುತ್ತಾರೆ. ಇದರಿಂದ ಇವರು ಹೊಲದ -ಭೂಮಿಯ ಒಡೆಯರಾಗಿದ್ದರೆಂಬುದು ತಿಳಿದು ಬರುತ್ತದೆ. ಮೊದಲಿಗೆ ಹೊಲವನ್ನು ಉಳುತ್ತಿದ್ದ ಸಮುದಾಯವನ್ನು ಈ ರೀತಿ ಕರೆದಿರಬಹುದು ಆದರೆ ಈ ಅಧ್ಯಯನದ ಹಿನ್ನಲೆಯಲ್ಲಿ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಮಾಲ(ಪರ್ವತ ಮಲ್ಲಯ್ಯ) ಸಮುದಾಯದಲ್ಲಿ ಯಾರು

ಭೂಮಿಯನ್ನು ಹೊಂದಿರುವ ಮಾಹಿತಿ ಇರುವುದಿಲ್ಲ. ಆದರೆ ಕೃಷಿ ಬಗ್ಗೆ ಮತ್ತು ಕೃಷಿ ಕೂಲಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಹೊಂದಿದವರಾಗಿದ್ದಾರೆ ಎಂಬುದು ಕ್ಷೇತ್ರಕಾರ್ಯ ಸಂದರ್ಬದಲ್ಲಿ ತಿಳಿದುಬಂದಿತು. ರೆಸಲ್ ಅವರು ಹೇಳುವ ಹಾಗೆ ಮಾಲ ಎಂಬುದು ಆಂಧ್ರದಲ್ಲಿ ಕಂಡುಬರುವ ಒಂದು ಕೆಳಸಮುದಾಯವಾಗಿದೆ ಮತ್ತು ಮಾಲ ಎಂದರೆ ಭೂಮಿಯ ಮಕ್ಕಳು ಯೋಧಕುಲದವರಾಗಿದ್ದು, ಮಲ್ಲಯುದ್ಧದಿಂದ ಮಾಲ ಎಂಬ ಪದ ಬಳಕೆಗೆ ಬಂದಿತೆಂದು ಹೆಳುತ್ತಾರೆ. ಎಸ್.ಎಸ್. ಹೀರೆಮಠ ರವರು ಹೆಳುವ ಹಾಗೆ ಅವರ ಅಭಿಪ್ರಾಯ ಗಮನಿಸಿದಾಗ ಹೊಲೆಯರೆ ಈ ನೆಲದ ಒಡೆಯರಾಗಿದ್ದರು ಅವರೆ ಹಳ್ಳಿಗಳನ್ನು ಸ್ಥಾಪಿಸಿಕೊಂಡವರು ಎಂಬುದನ್ನು ತಿಳಿಸಿದ್ದಾರೆ ಮತ್ತು ಕೆಲವು ವಿದ್ವಾಂಸರು ಮತ್ತು ಇತಿಹಾಸಕಾರರ ಪ್ರಕಾರ ಮಾಲ ಸಮುದಾಯದವರು ಯೋಧಕುಲದವರಾಗಿದ್ದು ಹಲವಾರು ರಾಜಮನೆತನದ ಪ್ರಭಲ ಅರಸರ ಕೈಯಲ್ಲಿ ಸೊತದ್ದರಿಂದ ಗೆದ್ದ ಆಕ್ರಮಣಕಾರರ ಕೈಗೊಂಬೆಗಳಾಗಿ ಮುಂದುವರೆದು ತದನಂತರ ಸಮಾಜದಿಂದ ಬಹಿಸ್ಕೃತರಾಗಿ ಊರ ಹೊರಗೆ ಬದುಕಬೇಕಾಗಿ ಬಂತೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಮಾತು ಗಮನಿಸಿದಾಗ ಮಾಲ ಸಮುದಾಯದವರೆ ಯೋಧರಾಗಿದ್ದರೆಂಬುದು ಗಮನಾರ್ಹವಾಗಿದೆ. ಏಕೆಂದರೆ ಈ ಸಮುದಾಯದವರು ಈ ವರೆಗು ಆಡುತ್ತಿದ್ದ ಸಾಂಸ್ಕೃತಿಕ ಆಟದ ಆಧಾರದ ಮೆಲೆ ಗಮನಿಸಬೇಕಾಗಿದೆ. ಮಾಲ ಸಮುದಾಯದವರು ಯುದ್ದ ಪರಿಕರಗಳನ್ನು ಉಪಯೋಗಿಸಿ ಹಲವಾರು ವಿವಿಧ ಸಾಂಸ್ಕೃತಿಕ ಆಟಗಳನ್ನು ಇವತ್ತಿನವರೆಗೂ ಪ್ರದರ್ಶಿಸಿ ತಮ್ಮ ಆರ್ಥಿಕ ಸಮಸ್ಯಯನ್ನು ನಿಭಾಯಿಸಿಕೊಳ್ಳುತ್ತಾರೆ. ಮತ್ತು ತಮ್ಮ ಯುದ್ದಪರಿಕರಗಳನ್ನು ಉಳಿಸಿಕೊಂಡು ಬಂದಿರುವುದು ಕಾಣುತ್ತದೆ. ಪ್ರಭಲ ಅರಸರ ದಾಳಿಯಿಂದ ಈ ಸಮುದಾಯದವರು ಸೋಲನ್ನು ಅನುಭವಿಸಿ ತಮ್ಮ ಅಸ್ಥಿತ್ವನ್ನು ಈ ಸಮುದಾಯದವರು ಕಳೆದುಕೊಂಡಿರಬಹುದು.

ದಾಸನೂರು ಕೊಸಣ್ಣನವರು ಹೆಳುವ ಹಾಗೆ ತಮಿಳು ಗ್ರಂಥದಲ್ಲಿ ಮಾಲೇರು ಎಂಬ ಪದಕ್ಕೆ ಪರ್ವತದವನೆಂಬ ಅರ್ಥವಿದೆ ಎಂದು ಹೆಳುತ್ತಾರೆ. ಇವರನ್ನು ಕರ್ನಾಟಕದಲ್ಲಿ ಪರ್ವತ ಮಲ್ಲಯ್ಯ ಎಂದು ಕರೆಯುವರು. ಮಾಲ ಎಂಬುದು ಪರ್ವತವನ್ನೇ ಪ್ರತಿನಿಧಿಸುವ ಪದ. ಕನ್ನಡದಲ್ಲಿ ಪರ್ವತ+ಮಾಲ>ಪರ್ವತಮಾಲ>ಪರ್ವತ ಮಲ್ಲಯ್ಯ ಆಗಿರುವ ಸಾಧ್ಯತೆ ಇದೆ. ಆದರೆ ಕರ್ನಾಟಕದ ಅನುಸೂಚಿತ ಪಟ್ಟಿಯಲ್ಲಿ ಪರ್ವತಮಲ್ಲಯ್ಯ ಎಂಬುದು ಎಲ್ಲಿಯೂ ನಮೂದಿತವಾಗಿರುವುದಿಲ್ಲ. ಜನರ ಆಡುಮಾತಿನಲ್ಲಷ್ಟೆ ಪರ್ವತಮಲ್ಲಯ್ಯ ಆಗಿ ಉಳಿದುಕೊಂಡಿರುವರು. ಕರ್ನಾಟಕದಲ್ಲಿ ಅಲೆಮಾರಿಗಳು ಹಾಗೂ ಅಲ್ಪಸಂಖ್ಯಾತರಾದ ಇವರನ್ನು ಆಂಧ್ರದಲ್ಲಿರುವಂತೆ ಅಸ್ಪೃಶ್ಯತೆ ಅಷ್ಟಾಗಿ ಕಾಡುತ್ತಿಲ್ಲ. ತೆಲುಗಿನೊಂದಿಗೆ ಸ್ಥಳೀಯವಾದ ಕನ್ನಡದಲ್ಲಿಯೂ ಸುಲಲಿತವಾಗಿ ವ್ಯವಹರಿಸುವರು.

ಮಾಲ ಎಂಬ ಪದದ ಅರ್ಥ ಸರಳ ಅರ್ಥದಲ್ಲಿ ಹೊಲಸನ್ನು –ಕೊಳಕನ್ನು ಹೊಂದಿರುವವನು ಎಂದಿದೆ. ಸಮಾಜದಲ್ಲಿ ಮೇಲು_ಕೀಳು ಉಚ್ಚ –ನೀಚ ಎಂಬ ವರ್ಗಗಳನ್ನಾಗಿ ಮಾಡಲಾಗಿದೆ. ಹೊಲಸನ್ನು ತಿನ್ನುವವನು ಹೊಲೆಯ, ಊರ ಹೂರಗೆ ವಾಸಿಸುವ ಜನಸಮುದಾಯವೆ ಅಸ್ಪೃಶ್ಯ ಸಮುದಾಯವೆಂಬುದಾಗಿ ಮೇಲ್ವರ್ಗದ ಸಮುದಾಯಗಳು ಗುರುತಿಸಿವೆ. ಪುರೋಹಿತಶಾಹಿ ವರ್ಗ ಸಮಾಜದ ಅತ್ಯಂತ ತಳಮಟ್ಟದ ಜನರನ್ನು ತಮ್ಮ ಸೇವೆಗೆ ಸಿಮಿತಗೊಳಿಸಿಕೊಂಡಿತು. ಅವರಿಂದ ಎಲ್ಲಾ ಬಗೆಯ ಕೆಲಸಗಳನ್ನು ಮಾಡಿಸಿಕೊಂಡಿತು ಅಂದಿನ ದಿನಗಳಲ್ಲಿ ಕೆಳವರ್ಗದ ಜನರು ಸ್ವಾತಂತ್ರವಾಗಿ

ಜೀವನ ನಡೆಸುವುದು ತುಂಬಾ ಕಷ್ಟಕರವಾಗಿತ್ತು. ಕೆಳವರ್ಗದವರು ತಮ್ಮ ಹಸಿವನ್ನು ನಿಗಿಸಿಕೋಳ್ಳಲು ಮೇಲ್ವರ್ಗದವರು ಸೂಚಿಸಿದ ಕೆಲಸವನ್ನು ಮಾಡುವುದು ಅನಿವಾರ್ಯವು ಆಗಿತ್ತು. ಉನ್ನತ ಸಮುದಾಯಗಳಿಗೆ ಸದಾ ಸೇವೆಗೈಯುವವರಿಗೆ ಅಸ್ಪೃಶ್ಯ ಅಥವಾ ಕೆಳವರ್ಗದವರು ಎಂದು ಕರೆದು ಹಿನಾಯವಾಗಿ ದುಡಿಸಿಕೊಳ್ಳತೊಡಗಿದರು.

ಹೀಗಿದ್ದೂ ಈ ಸಮುದಾಯವು ಕರ್ನಾಟಕದ ಚಲವಾದಿ ಮತ್ತು ಮಾದಿಗ ಸಮುದಾಯದೊಂದಿಗೆ ಮಾಲ ಸಮುದಾಯವು ವೈವಾಹಿಕ ಸಂಬಂಧವನ್ನು ಬೆಸೆದುಕೊಳ್ಳುವುದಿಲ್ಲ. ವೈವಾಹಿಕ ಸಂಬಂಧಗಳನ್ನು ಬೆಸೆಯಲು ಬೆಡಗನ್ನೇ ಪ್ರಮುಖವಾಗಿ ಪರಿಗಣಿಸುವುದರಿಂದ ಹಾಗೂ ಕರ್ನಾಟಕದ ಚಲವಾದಿ ಸಮುದಾಯದ ಕೆಲವು ಬೆಡಗುಗಳಿಗೆ ಹೋಲಿಕೆಯಿದ್ದರೂ ಬಹುಪಾಲು ಬೆಡಗುಗಳು ಭಿನ್ನವಾಗಿರುವುದರಿಂದ ತಾವು ವೈವಾಹಿಕ ಸಂಬಂಧಗಳನ್ನು ಬೆಸೆದುಕೊಳ್ಳುತ್ತಿಲ್ಲ ಎಂದು ತಿಳಿಸುತ್ತಾರೆ. ಆಂಧ್ರ, ತೆಲಂಗಾಣದ ಎಲ್ಲಾ ಜಿಲ್ಲೆಗಳಲ್ಲಿಯೂ ಕಂಡುಬರುವ ಮಾಲ ಸಮುದಾಯವು ತಮ್ಮ ಮೂಲ ಆಂಧ್ರದ ನಲ್ಲಮಲೆಯ ಪರ್ವತವೆಂದು ಹೇಳುವರು.

೨.೩. ಮಾಲ(ಪರ್ವತ ಮಲ್ಲಯ್ಯ) ಸಮುದಾಯಕ್ಕಿರುವ ಪರ್ಯಾಯ ಪದಗಳು

ಮಾಲ ಸಮುದಾಯದ ಸಾಮಾಜಿಕ ಅಧ್ಯಯನದ ಉದ್ದೇಶದ ಆಧಾರದ ಮೇಲೆ ಮಾಲ ಸಮುದಾಯದವರಿಗೆ ಸಾಮಾಜಿಕವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ತಿಳಿದುಕೊಳ್ಳಲಾಯಿತು.

೧. ಮಲ್ಲರು: ಮಲ್ಲ ಎಂಬುದು ಸಂಸ್ಕೃತದ ಪದವಾಗಿದೆ. ಮಾಲ ಎಂಬ ಪದವನ್ನು ಸಂಸ್ಕೃತದ ಮಲ್ಲ ಎಂಬ ಪದದಿಂದ ಆರಿಸಲಾಗಿದೆ. 'ಮಲ್ಲ' ಎಂದರೆ ಕುಸ್ತಿಪಟು ಎಂದು ಅರ್ಥಕೊಡುತ್ತದೆ. ಮಾಲ ಸಮುದಾಯದವರ ಬಗ್ಗೆ ಐತಿಹಾಸಿಕವಾಗಿ ನೋಡಿದಾಗ ರಾಜ ಮಹಾರಾಜರ ಕಾಲದಲ್ಲಿ ಇವರು ಯುದ್ಧಪ್ರೀಯರು, ಸೈನಿಕ ವೃತ್ತಿಯವರು, ಕುಸ್ತಿಪಟುಗಳು ಆಗಿದ್ದರು. ಅಂದರೆ ಮಾಲ ಸಮುದಾಯದವರು ಪ್ರಾಚೀನ ಕಾಲದಲ್ಲಿ ರಜಪೂತರ ಆಳ್ವಿಕೆಯ ಕಾಲದಲ್ಲಿ ಸೈನಿಕರಾಗಿದ್ದು ತಮ್ಮ ಎದುರಾಳಿಗಳನ್ನು ಸದೆಬಡಿದು ಜಯವನ್ನು ಸಾಧಿಸುತ್ತಿದ್ದರು. ಉದಾಹರಣೆಯೆಂದರೆ ಈ ಸಮುದಾಯದವರು ಇವತ್ತಿಗೂ ದಾಲಪಟದ ಆಟ, ಕತ್ತಿವರಸೆ ಆಟ, ಮುಳ್ಳಿನ ಚಕ್ರದಾಟ, ಬೆಂಕಿ ಚಕ್ರದಾಟ, ಸಮರ ಕಲೆ, ಕೋಲನ್ನು ತಿರುಗಿಸುವ ಆಟ, ಎರಡು ಕೈಯಲ್ಲಿ ಎರಡು ಬೆತ್ತದ ಕಟ್ಟಿಗೆಯನ್ನು ಹಿಡಿದು ಗಿರಗಿರನೆ ತಿರುಗಿಸುವ ಆಟ ಇವು ಮಾಲ ಸಮುದಾಯದವರ ವಂಶಪಾರಂಪರ್ಯ ಆಟಗಳಾಗಿವೆ. ಈ ಆಟಗಳು ಪ್ರಾಚೀನ ಕಾಲದಲ್ಲಿ ತಮ್ಮ ಸೈನಿಕ ವೃತ್ತಿಯಲ್ಲಿ ಎದುರಾಳಿಗಳನ್ನು ಸದೆಬಡಿಯಲು ಈ ಆಟಗಳನ್ನು ಪ್ರಯೋಗಿಸಿ ಗೆಲುವು ಸಾಧಿಸುತ್ತಿದ್ದರು. ಈ ಆಟಗಳನ್ನು ಮಾಲ ಸಮುದಾಯದವರು ಇವತ್ತಿನವರೆಗೂ ಆಡುತ್ತ ತಮ್ಮ ಹೊಟ್ಟೆಪಾಡಿಗಾಗಿ ಬದುಕಲು ವಂಶಪಾರಂಪರ್ಯ ಪ್ರದರ್ಶನ ಕಲೆಗಳಾಗಿ ಮಾರ್ಪಡಿಸಿಕೊಂಡಿದ್ದು ಕಂಡುಬರುತ್ತದೆ. ಆದ್ದರಿಂದ ಈ ಸಮುದಾಯದವರು ಸೈನಿಕರಾಗಿದ್ದು ಯುದ್ಧ ಪ್ರೀಯರಾಗಿದ್ದರಿಂದ ಮತ್ತು ತಮ್ಮ ಎದುರಾಳಿಗಳ ಜೊತೆ ಮಲ್ಲಯುದ್ಧವನ್ನು ಮಾಡುತ್ತಿದ್ದುದು ತಿಳಿದುಬರುತ್ತದೆ. ಆದ್ದರಿಂದ ಇವರಿಗೆ ಮಲ್ಲರು ಎನ್ನುತ್ತಿದ್ದರೆಂದು ತಿಳಿಯಲಾಗಿದೆ.

೨. ಶ್ರೀಶೈಲ ಮಲ್ಲಯ್ಯನವರು: ಶ್ರೀಶೈಲ ಮಲ್ಲಯ್ಯ ಮಾಲ ಸಮುದಾಯದ ಪ್ರತಿಯೊಂದು ಕುಟುಂಬದ ಆರಾಧ್ಯ ದೇವರು ಮತ್ತು ಕುಲದೇವರು ಆಗಿರುತ್ತದೆ. ಆದ್ದರಿಂದ 'ದೈವನಾಮ' ಸೂಚಕ ಪದವನ್ನು ಬಳಸಿ ಮಾಲ ಸಮುದಾಯದವರಿಗೆ ಸಮಾಜದ ಇತರೆ ಸಮುದಾಯದ ಜನರು ಶ್ರೀಶೈಲ ಮಲ್ಲಯ್ಯನವರು ಎನ್ನುತ್ತಾರೆ. ಮಾಲ ಸಮುದಾಯದವರು ಪ್ರತಿವರ್ಷ ಶ್ರೀಶೈಲದ ಯುಗಾದಿ ಜಾತ್ರೆಗೆ ಪ್ರತಿಯೊಂದು ಮನೆಯಿಂದ ಒಬ್ಬರು ಅಥವಾ ಇಬ್ಬರು ತಾವು ವಾಸವಿದ್ದ ಸ್ಥಳದಿಂದ ಶ್ರೀಶೈಲ ಮಲ್ಲಯ್ಯನ ಗುಡಿ ತಲುಪುವವರೆಗೂ ಪಾದಯಾತ್ರೆ ಮಾಡುತ್ತಾರೆ ಮತ್ತು ಮಾಲ ಸಮುದಾಯದ ಪ್ರತಿಯೊಂದು ಮನೆಯ ಜಗುಲಿಯ ಮೇಲೆ ಶ್ರೀಶೈಲ ಮಲ್ಲಯ್ಯನ ಮೂರ್ತಿ ಇರುತ್ತದೆ ಮತ್ತು ಈ ಸಮುದಾಯದವರ ಪ್ರತಿಯೊಂದು ಕುಟುಂಬದ ಮನೆಯಲ್ಲಿಯೂ ಕಂಬಿಯಾಕಾರದ ಗುಡಿ ಆ ಗುಡಿಯಲ್ಲಿ ಶ್ರೀಶೈಲ ಮಲ್ಲಯ್ಯನ ಮೂರ್ತಿ ಇರುತ್ತದೆ. ಆದ್ದರಿಂದ ಮಾಲ ಸಮುದಾಯದವರಿಗೆ ಶ್ರೀಶೈಲ ಮಲ್ಲಯ್ಯನವರು ಎನ್ನುತ್ತಾರೆ ಎಂದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿತು. ಹಾಗೂ ಪ್ರತಿ ವರ್ಷ ಶಿವರಾತ್ರಿ ಹಬ್ಬಕ್ಕೆ ಶ್ರೀಶೈಲ ಮಲ್ಲಯ್ಯನ ಆರಾಧನೆಯನ್ನು ಮಾಡುತ್ತಾರೆ. ಮಾಲ ಸಮುದಾಯದವರು ಈ ಪದ್ದತಿಯನ್ನು ಇವತ್ತಿಗೂ ಮಾಡುತ್ತಾರೆ.

೩. ಪರ್ವತ ಮಲ್ಲಯ್ಯನವರು: ಮಾಲ ಸಮುದಾಯದವರಿಗೆ ಪರ್ವತ ಮಲ್ಲಯ್ಯನವರು ಎಂದು ಕರೆಯುತ್ತಾರೆ. ಪರ್ವತ ಮಲ್ಲಯ್ಯನವರು ಎಂಬುದು ಒಂದು "ವೃತ್ತಿ ಸೂಚಕ" ಪದವಾಗಿದೆ. (ಏಕೆಂದರೆ ಆಂಧ್ರಪ್ರದೇಶದಲ್ಲಿ ಇರುವ ಶ್ರೀಶೈಲ ಮಲ್ಲಯ್ಯನನ್ನು ಅಥವಾ) ಮಾಲ ಸಮುದಾಯದವರಿಗೆ ಪರ್ವತ ಮಲ್ಲಯ್ಯನವರು ಎನ್ನಲಿಕ್ಕೆ ಕಾರಣವೇನೆಂದರೆ "ಪರ್ವತ" ಎಂದರೆ ಶಿಖರ, ಎತ್ತರವಾದ ಪ್ರದೇಶ, ಬೆಟ್ಟ, ಗುಡ್ಡ ಎಂದು. ಇಂತಹ ಎತ್ತರದ ಪ್ರದೇಶದಲ್ಲಿ ಶ್ರೀಶೈಲ ಮಲ್ಲಯ್ಯನ ಧಾರ್ಮಿಕ ಸ್ಥಳ ಅಥವಾ ಗುಡಿ ಇರುತ್ತದೆ ಅಥವಾ ದೇವಸ್ಥಾನ ಇದೆ. ಆ ದೇವರಿನ ಆರಾಧ್ಯ ಭಕ್ತರು ಮಾಲ ಸಮುದಾಯದವರು ಆಗಿದ್ದಾರೆ. ಮಾಲ ಸಮುದಾಯದ ಪ್ರತಿಯೊಂದು ಗುಡಿಸಲಿನಲ್ಲಿ ಕೈಯಿಂದ ತಯಾರಿಸಿದ ಕಂಬಿ, ಆ ಕಂಬಿಯಾಕಾರದ ಗುಡಿಯಲ್ಲಿ ಏಳು ಎಡೆ ಸರ್ಪವಿರುವ ಮಲ್ಲಯ್ಯನ ಮೂರ್ತಿ ಇಟ್ಟು ಕಂಬಿಯಾಕಾರದ ಗುಡಿಯೊಳಗಿನ ಮಲ್ಲಯ್ಯನ ಮೂರ್ತಿಯನ್ನು ಪೂಜಿಸಿಕೊಂಡು. ನಂತರ ಆ ಗುಡಿಯಾಕಾರದ ಕಂಬಿಯನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡು ತಮ್ಮ ಹೊಟ್ಟೆಪಾಡಿಗಾಗಿ ಭಿಕ್ಷೆ ಬೇಡಲು ಊರು-ಊರು, ಹಳ್ಳಿ-ಹಳ್ಳಿಗೆ ಕಾಲ್ನಡಿಗೆಯಿಂದ ಸಂಚಾರ ಮಾಡುತ್ತಿದ್ದರು. ಆಂಧ್ರದ ಪರ್ವತದ ಮೇಲೆ ಇರುವ ಶ್ರೀಶೈಲ ಮಲ್ಲಯ್ಯನ ಹೆಸರನ್ನು ಹೇಳಿ ಕಂಬಿಯಾಕಾರದ ಗುಡಿಯನ್ನು ಮಾಲ ಸಮುದಾಯದವರು ತಲೆಯ ಮೇಲೆ ಹೊತ್ತುಕೊಂಡು ಭಿಕ್ಷೆ ಬೇಡುವುದಕ್ಕೆ ಇತರೆ ಜನರು ಪರ್ವತ ಮಲ್ಲಯ್ಯನವರು ಎಂದು ಹೇಳುತ್ತಿದ್ದುದಲ್ಲದೆ ಅವರು ಹೊತ್ತುಕೊಂಡ ಕಂಬಿಯಾಕಾರದ ಗುಡಿ ಮತ್ತು ದೇವರನ್ನು ನೋಡಿ ಪರ್ವತ ಮಲ್ಲಯ್ಯನವರು ಭಿಕ್ಷೆ ಬೇಡಲು ಬಂದಿದ್ದಾರೆ ಎಂದು ಗುರುತಿಸುತ್ತಿದ್ದರೆಂದು ಕ್ಷೇತ್ರಕಾರ್ಯದ ಮೂಲಕ ತಿಳಿಯಲಾಯಿತು. ಇವತ್ತಿಗೂ ಇವರಿಗೆ ಹೆಚ್ಚಾಗಿ ಆಡು ಭಾಷೆಯಲ್ಲಿ ಪರ್ವತ ಮಲ್ಲಯ್ಯನವರು ಎನ್ನುತ್ತಾರೆ.

೪. ಜಂಗಮರು: ಒಂದು ಹೊತ್ತಿಗೂ ಊಟಕ್ಕೆ ಇಲ್ಲದೆ ಇರುವ ಪರಿಸ್ಥಿತಿಯುಳ್ಳವರೆ ಮಾಲ ಸಮುದಾಯವರು. ಮಾಲ ಸಮುದಾಯದವರಿಗೆ ಜಂಗಮರು ಎಂದು ಸಮಾಜದ ಇತರೆ

ಸಮುದಾಯದ ಜನರು ಆಡುಭಾಷೆಯಲ್ಲಿ ಉಪಯೋಗಿಸುತ್ತಾರೆ. ಕಾರಣವೆಂದರೆ ಮಾಲ ಸಮುದಾಯದವರ ಮೂಲ ವೃತ್ತಿ ಧಾರ್ಮಿಕ ಭಿಕ್ಷೆಯಾಗಿತ್ತು. ಮಾಲ ಸಮುದಾಯದವರಿಗೆ ನಿರ್ಧಿಷ್ಟವಾದ ನೆಲೆ, ಆಸ್ತಿ ಪಾಸ್ತಿ ಇಲ್ಲದೆ ಇರುವ ಕಾರಣದಿಂದಾಗಿ ತಮ್ಮ ಜೀವನ ನಿರ್ವಹಣೆಗಾಗಿ ತಾವು ಮತ್ತು ತಮ್ಮ ಮಕ್ಕಳ ಹೊಟ್ಟೆ ತುಂಬಿಸಿಕೊಳ್ಳುವ ಸಲುವಾಗಿ ತಮ್ಮ ಬದುಕಿಗಾಗಿ ವಂಶಪಾರಂಪರ್ಯ ಧಾರ್ಮಿಕ ವೃತ್ತಿಯಾದ ಭಿಕ್ಷೆಯನ್ನು ಅವಲಂಬಿಸಿದ್ದರು. ಆದ್ದರಿಂದ ಭಿಕ್ಷೆ ಬೇಡಲು ಊರೂರು ಕಾಲ್ನಡಿಗೆಯಿಂದ ಸಂಚಾರ ಮಾಡುತ್ತಿದ್ದರು. ಆದ್ದರಿಂದ ಇವರಿಗೆ ಜಂಗಮರೆನ್ನುತ್ತಿದ್ದರು ಎಂದು ಕ್ಷೇತ್ರಕಾರ್ಯದ ಮೂಲಕ ತಿಳಿದು ಬಂದಿತು.

೫. ಮಲ್ಲಯ್ಯನವರು: ಮಾಲ ಸಮುದಾಯದವರಿಗೆ ಮಲ್ಲಯ್ಯನವರು ಎಂದು ಕರೆಯುತ್ತಾರೆ. ಮಾಲ ಸಮುದಾಯದವರು ಸದಾ ಸಂಚಾರಿಗಳು. ತಮ್ಮ ಹೊಟ್ಟೆಪಾಡಿಗಾಗಿ ಧಾರ್ಮಿಕ ಭಿಕ್ಷೆಯನ್ನು ಅವಲಂಬಿಸಿ ಊರೂರು ತಿರುಗುವುದೇ ಇವರ ವೃತ್ತಿಯಾಗಿತ್ತು. ಆದ್ದರಿಂದ ತಮ್ಮ ಮೂಲ ಜಾತಿಯ ಹೆಸರಿನ ಪರಿವೆಯೇ ಅವರಿಗೆ ಇರಲಿಲ್ಲ. ಆದ್ದರಿಂದ ಮಾಲ ಸಮುದಾಯದವರು ಕೆಲವು ವರ್ಷದ ಹಿಂದೆ ತಮ್ಮ ಮಕ್ಕಳನ್ನು (ಸರಕಾರಿ ಶಾಲೆಗೆ ಅಂಗನವಾಡಿಗೆ) ತಮ್ಮ ಮಕ್ಕಳನ್ನು ಅಂಗನವಾಡಿ ಅಥವಾ ಸರಕಾರಿ ಶಾಲೆಗೆ ಒಂದನೆಯ ತರಗತಿಗೆ ದಾಖಲಾತಿಸಲು ಹೋದಾಗ ತಮ್ಮ ಜಾತಿಯನ್ನು ಹಿಂದೂ ಮಲ್ಲಯ್ಯನವರು ಎಂದು ದಾಖಲಿಸಲು ನೊಂದಾಯಿಸಲು ಶಾಲಾ ಮುಖ್ಯೋಪಾಧ್ಯಯರಿಗೆ ಹೇಳಿ ಬರೆಸುತ್ತಿದ್ದೆವು ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು. ಕಾರಣವೆಂದರೆ ತಮ್ಮ ಆರಾಧ್ಯದೇವರು ಮಲ್ಲಯ್ಯ ಆಗಿರುವುದರಿಂದ ಮಲ್ಲಯ್ಯನ ಹೆಸರು ಹೇಳಿ ಭಿಕ್ಷೆ ಬೇಡಿ ಜೀವನ ಸಾಗಿಸುವುದರಿಂದ ತಮ್ಮ ಆರಾಧ್ಯ ದೇವರಿನ ಹೆಸರನ್ನೇ ತಮ್ಮ ಜಾತಿಯನ್ನಾಗಿಟ್ಟುಕೊಂಡು ಬಂದಿದ್ದಾರೆ. ಆದ್ದರಿಂದ ಈ ಸಮುದಾಯದವರಿಗೆ ಮಲ್ಲಯ್ಯನವರು ಎಂದು ಕರೆಯುತ್ತಾರೆ ಎಂದು ಕ್ಷೇತ್ರಕಾರ್ಯದ ಮೂಲಕ ತಿಳಿಸಿದರು.

೬. ಮುತ್ತುಗಾರರು: ಮಾಲ ಸಮುದಾಯದವರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಒಂದು ಊರಿನಿಂದ ಇನ್ನೊಂದು ಊರಿಗೆ ಹಲವಾರು ವೃತ್ತಿಗಳನ್ನು ಅವಲಂಬಿಸಿಕೊಂಡು ಅಲೆದಾಡುವವರಾಗಿದ್ದಾರೆ. ತಮ್ಮ ಜೀವನ ನಿರ್ವಹಣೆಗಾಗಿ ಹಲವಾರು ಕೆಲಸ-ಕಾರ್ಯಗಳನ್ನು ಮಾಡುತ್ತಾ ಹಲವಾರು ವೃತ್ತಿ-ಜೀವನದಲ್ಲಿ ಮುಳುಗಿದ್ದಾರೆ. ಅದರಲ್ಲಿ ವ್ಯಾಪಾರಿ ವೃತ್ತಿಯು ಸಹ ಪ್ರಮುಖವಾದ ವೃತ್ತಿಯಲ್ಲದೆ ಮಾಲ ಸಮುದಾಯದವರ ಜೀವನ ಸಾಗಿಸಲಿಕ್ಕೆ ವ್ಯಾಪಾರಿ ವೃತ್ತಿಯು ಒಂದು ಬೆನ್ನೆಲುಬಿನಂತಿದೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು. ಆದ್ದರಿಂದ ಮಾಲ ಸಮುದಾಯದವರು ತಮ್ಮ ಜೀವನವನ್ನು ಸಾಗಿಸುವ ಸಲುವಾಗಿ ಹಲವಾರು ರೀತಿಯ ಸ್ಟೇಷನರಿ ಸಾಮಾನುಗಳನ್ನು, ವಿಧ-ವಿಧವಾದ ಮುತ್ತಿನ ಸರಗಳನ್ನು ಮತ್ತು ಮುತ್ತುಗಳನ್ನು ತಲೆಯ ಮೇಲೆ ಹೊತ್ತುಕೊಂಡು, ಹಳ್ಳಿ-ಹಳ್ಳಿ ತಿರುಗಾಡಿ ಮಾರಾಟ ಮಾಡಿ ಜೀವನ ಸಾಗಿಸುವುದರಿಂದ ಮಾಲ ಸಮುದಾಯದವರಿಗೆ ಮುತ್ತುಗಾರರು ಎನ್ನುತ್ತಾರೆ. ಮುತ್ತು ಮಾರಾಟ ಹಾಗೂ ಸ್ಟೇಷನರಿ ಮಾರಾಟದ ಜೊತೆಗೆ ಇನ್ನು ಹಲವಾರು ಪ್ಲಾಸ್ಟಿಕ್ ಸಾಮಾನುಗಳನ್ನು, ಬಟ್ಟೆಗಳನ್ನು ಮಾರಾಟ ಮಾಡುವುದು ಕಂಡುಬರುತ್ತದೆ. ಆದ್ದರಿಂದ ಮಾಲ ಸಮುದಾಯದವರು ಮಾಡುವ ವ್ಯಾಪಾರಿ ವೃತ್ತಿಯ ಸೂಚಕವಾಗಿ,

ವ್ಯಾಪಾರಿ ಸೂಚಕ ಪದಗಳನ್ನು ಬಳಸಿ ಮಾಲ ಸಮುದಾಯದವರಿಗೆ ಸಮಾಜದ ಇತರೆ ಜನರು ಇವರಿಗೆ ಮುತ್ತುಗಾರರು ಎಂದು ಕರೆಯುತ್ತಾರೆ. ಈ ಸಮುದಾಯದವರು ಮುಂದೆ ಈ ಪದದ ಹೆಸರಿನಿಂದ ತಮ್ಮ ಮನೆತನವಾಗಿಸಿಕೊಂಡರೆಂದು ತಿಳಿಸಿದರು

೭. ಚೆನ್ನಮಲ್ಲಯ್ಯನವರು: ಮಾಲ ಸಮುದಾಯದವರು ಯಾವಾಗಲೂ ಅಲೆಮಾರಿ ಜೀವನ ಮಾಡುವುದರಿಂದ ತಮ್ಮ ಹೊಟ್ಟೆಪಾಡಿಗಾಗಿ ತಮ್ಮ ಜೋಪಡಿಗಳನ್ನು ಕಿತ್ತುಕೊಂಡು ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವುದರಿಂದ ಅವರಿಗೆ ವಾಸಸ್ಥಳದ ಭದ್ರತೆ ಇರದೆ ಇರುವುದರಿಂದ ಮಾಲ ಸಮುದಾಯದ ಹಿರಿಯರ ಜಾತಿ ಪ್ರಮಾಣಪತ್ರ, ವಾಸಸ್ಥಳದ ಪ್ರಮಾಣ ಪತ್ರ, ಗುರುತಿನ ಚೀಟಿ ಇದು ಯಾವುದು ಮಾಲ ಸಮುದಾಯದ ಕುಟುಂಬದ ಹಿರಿಯರ ಹತ್ತಿರ ಇರುತ್ತಿರಲಿಲ್ಲ. ಆದ್ದರಿಂದ ಹಾವೇರಿ ಜಿಲ್ಲೆಗೆ ವಲಸೆ ಹೋದ ಮಾಲ ಕುಟುಂಬಸ್ಥರಿಗೆ ಚೆನ್ನಮಲ್ಲಯ್ಯನವರೆನ್ನುತ್ತಾರೆ ಇನ್ನೊಂದು ಕಾರಣವೆನೆಂದರೆ ಮಾಲ ಸಮುದಾಯದ ಕುಟುಂಬದ ಹಿರಿಯರು ಅಜ್ಜ-ಮುತ್ತಜ್ಜರ ಹಿಂದಿನ ಕಾಲದ ಜಾತಿ ಪ್ರಮಾಣಪತ್ರ ವಾಸಸ್ಥಳ ಸಿಗದೆ ಇರುವ ಕಾರಣದಿಂದ ಇವತ್ತಿಗೂ ತಮ್ಮ ತಂದೆ-ಅಜ್ಜನವರ 'ಜಾತಿ ಪ್ರಮಾಣ ಪತ್ರ" ಇರುವುದಿಲ್ಲ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು. ಮತ್ತು ಚೆನ್ನಮಲ್ಲಯ್ಯನವರು ಎಂಬುದು ಒಂದು ಮನೆತನದ ಹೆಸರಾಗಿ ಮುಂದುವರೆಯಿತು ಎಂದು ತಿಳಿಸಿದರು. ಮಾಲ ಸಮುದಾಯದವರು ಇತ್ತೀಚೆಗೆ ಜಾತಿ ಪ್ರಮಾಣ ಪತ್ರವನ್ನು ತಗೆದುಕೊಂಡಿರುತ್ತಾರೆ.

೮. ಮಾಲ ಜಂಗಮ: ಮಾಲ ಸಮುದಾಯದವರಿಗೆ ಮಾಲ ಜಂಗಮರು ಎಂದು ಕರೆಯುತ್ತಿದ್ದರು. "ಜಂಗಮ" ಎಂದರೆ ಧಾರ್ಮಿಕ ಹೆಸರನ್ನು ಹೇಳಿಕೊಂಡು ಧರ್ಮದ ದೇವರನ್ನು ಹಿಡಿದುಕೊಂಡು ಭಿಕ್ಷೆ ಬೇಡುವವರಿಗೆ ಜಂಗಮರು ಎನ್ನುತ್ತಾರೆ ಮತ್ತು ಧಾರ್ಮಿಕ ಅಲೆದಾಡುವ ಸನ್ಯಾಸಿ ಎಂದರ್ಥ ಜಂಗಮರು ಶಿವನ ಅನುಯಾಯಿಗಳು ಎಂದು ತಿಳಿಯಲಾಗಿದೆ. ಮಾಲ ಸಮುದಾಯದವರು ತಮ್ಮ ಆರಾಧ್ಯ ದೇವರಾದ ಶ್ರೀಶೈಲ ಮಲ್ಲಯ್ಯನನ್ನು ಒಂದು ಕಂಬಿಯಾಕಾರದ ಗುಡಿಯಲ್ಲಿಟ್ಟುಕೊಂಡು ತಲೆಯ ಮೇಲೆ ಹೊತ್ತುಕೊಂಡು ತಮ್ಮ ಹೆಗಲಿಗೆ ಜೋಳಿಗೆಯನ್ನು ಹಾಕಿಕೊಂಡು, ಆ ಜೋಳಿಗೆಯಲ್ಲಿ ಜನರು ಕೊಟ್ಟ ಅನ್ನ, ದುಡ್ಡು ಇನ್ನಿತರ ಉಡುಗೊರೆಯನ್ನು ಭಿಕ್ಷೆಯ ರೂಪದಲ್ಲಿ ಪಡೆಯುತ್ತಿದ್ದರು. ಆದ್ದರಿಂದ ಮಾಲ ಸಮುದಾಯದವರಿಗೆ ಮಾಲ ಜಂಗಮ ಎಂದು ಹೆಸರು ಬಿದ್ದಿತೆಂದು ತಿಳಿಸಿದರು.

೯. ಬುಡಗ ಜಂಗಮ: ಮಾಲ ಸಮುದಾಯದವರಿಗೆ ಬುಡಗ ಜಂಗಮರು ಎನ್ನುತ್ತಿದ್ದರೆಂದು ಕ್ಷೇತ್ರಕಾರ್ಯದ ಮೂಲಕ ತಿಳಿದುಕೊಳ್ಳಲಾಯಿತು. ಬುಡಗ ಜಂಗಮರು ಎಂದರೆ ಬುರ್ ಕಥೆಗಳನ್ನು ಹೇಳುತ್ತಾ, ಹಾಡನ್ನು ಹಾಡುತ್ತಾ ಊರು-ಊರು, ಹಳ್ಳಿ-ಹಳ್ಳಿ ಅಲೆದಾಡುವರು ಮತ್ತು ತಮ್ಮ ಹೊಟ್ಟೆಪಾಡಿಗಾಗಿ ಹೆಗಲಿಗೆ ಜೋಳಿಗೆಯನ್ನು ಹಾಕಿಕೊಂಡು ಭಿಕ್ಷೆ ಬೇಡಿ ತಿನ್ನುವವರಿಗೆ ಬುಡಗ ಜಂಗಮರು ಎನ್ನುತ್ತಾರೆ ಮತ್ತು ಕೊಪ್ಪಳ ಜಿಲ್ಲೆಯ ಕುದರಿಮೋತಿಯಲ್ಲಿ ನೆಲೆಸಿರುವ ಬುಡಗ ಜಂಗಮರು ಕೊಪ್ಪಳ ಜಿಲ್ಲೆಯ ಚಿಲಕಮುಖಿ ಮತ್ತು ಕುದುರಿಮೋತಿಯಲ್ಲಿ ವಾಸವಿರುವ ಮಾಲ ಸಮುದಾಯದವರು ಒಳ್ಳೆಯ ಸ್ನೇಹ ಸಂಬಂಧಿಗಳಾಗಿದ್ದರು. ಮಾಲ ಸಮುದಾಯದವರು ಮತ್ತು ಬುಡಗ ಜಂಗಮರು

ಒಟ್ಟಿಗೆ ಸೇರಿಕೊಂಡು ಬೇಟೆಯಾಲು ಹೋಗುತ್ತಿದ್ದರು. ಬೇಟೆಯಾಡಿ ತಂದ ಪ್ರಾಣಿಪಕ್ಷಿಗಳ ಮಾಂಸವನ್ನು ಈ ಎರಡು ಸಮುದಾಯದವರು ಹಂಚಿಕೊಂಡು ತಿನ್ನುತ್ತಿದ್ದರು. ಈ ಎರಡು ಸಮುದಾಯದವರು ಮಾಡುವಂತಹ ಜಾತ್ರೆ, ಹಬ್ಬ, ಜಾತಿಪಂಚಾಯಿತಿ ಒಂದೇ ರೀತಿಯದವುಗಳಾಗಿದ್ದವು. ಬುಡಗ ಜಂಗಮರು ಆಚರಿಸುವ ಕುದುರಿಮೋತಿ ಪ್ರಸಿದ್ಧ ಮೊಹರಂ ಆಚರಣೆಯಲ್ಲಿ ಮಾಲ ಸಮುದಾಯದವರು ಭಾಗಿಯಾಗುತ್ತಿದ್ದರು ಮತ್ತು ಮಾಲ ಸಮುದಾಯದವರು ಆಚರಿಸುವ ಚಿಲಕಮುಖಿ ಗ್ರಾಮದ ದುರ್ಗಾಪರಮೇಶ್ವರಿ ಜಾತ್ರೆಯಲ್ಲಿ ಬುಡಗ ಜಂಗಮರು ಭಾಗಿಯಾಗುತ್ತಿದ್ದರು. ಬುಡಜಂಗಮರು ಹಳ್ಳಿಹಳ್ಳಿಗೆ ಹೋಗಿ ಆಡುವ ಹಗಲು ವೇಷದ ಆಟದಲ್ಲಿ ಮಾಲ ಸಮುದಾಯದವರು ಭಾಗಿಯಾಗಿ ಬುಡಗ ಜಂಗಮರಿಗೆ ಸಹಾಯ ಮಾಡುತ್ತಿದ್ದರು. ಬುಡಗ ಜಂಗಮರು ಮಾಲ ಸಮುದಾಯದವರು ಒಟ್ಟಿಗೆ ಸೇರಿಕೊಂಡು ತಮ್ಮ ಹೊಟ್ಟೆಪಾಡಿಗಾಗಿ ಭಿಕ್ಷೆ ಬೇಡಲು ಜೋಪಡಿಗಳನ್ನು ಕಿತ್ತಿಕೊಂಡು ಹಳ್ಳಿಹಳ್ಳಿಗೆ ಮತ್ತು ಪಟ್ಟಣಗಳಿಗೆ ಹೋಗುತ್ತಿದ್ದರು. ಇವತ್ತಿಗೂ ಕೊಪ್ಪಳದ ಸಿದ್ದೇಶ್ವರ ನಗರದಲ್ಲಿ ಬುಡಗ ಜಂಗಮರು ಮತ್ತು ಮಾಲ ಸಮುದಾಯದವರು ಅಕ್ಕಪಕ್ಕದಲ್ಲಿ ಜೋಪಡಿಗಳನ್ನು ಹಾಕಿಕೊಂಡು ಸ್ನೇಹಸಂಬಂಧಿಗಳಾಗಿರುವುದನ್ನು ಕ್ಷೇತ್ರಕಾರ್ಯದ ಮೂಲಕ ವೀಕ್ಷಿಸಲಾಯಿತು. ಆದ್ದರಿಂದ ಇತರೆ ಜನರು ಮಾಲ ಸಮುದಾಯದವರಿಗೂ ಬುಡಗಜಂಗಮರು ಎಂದು ಕರೆಯುತ್ತಿದ್ದರು ಎಂದು ತಿಳಿಯಲಾಗಿದೆ.

ಆಂಧ್ರಪ್ರದೇಶದಲ್ಲಿ ಆದಿ ಆಂಧ್ರ, ಅಂತ್ಯಜ, ಅರವಮಾಲ, ಮಾಲ, ಬಜಗಿರಿ, ಭಂಡ, ಮರಯನ್ ಇತ್ಯಾದಿ ಹೆಸರುಗಳಿಂದ ಗುರುತಿಸುವರು. ಕರ್ನಾಟಕದಲ್ಲಿ ಅಲೆಮಾರಿ ಸಮುದಾಯವಾಗಿ ಮಾರ್ಪಾಡುಗೊಂಡಿರುವ ಈ ಸಮುದಾಯದವರು ತಮ್ಮ ಮೂಲ ಭಾಷೆಯನ್ನು ಇಂದಿಗೂ ಜೀವಂತವಾಗಿರಿಸಿಕೊಂಡಿರುವರು. ಆಂಧ್ರದ ಕರ್ನೂಲು, ಅನಂತಪುರ, ಗುಂತಕಲ್ಲು ಭಾಗಗಳ ಮಾಲರೊಂದಿಗೆ ವೈವಾಹಿಕ ಸಂಬಂಧ ಬೆಸೆದುಕೊಂಡಿರುವರು.

ಸ್ಥಳಿಯರಿಂದ ಪರ್ವತ ಮಲ್ಲಯ್ಯ ಎಂದು ಗುರುತಿಸಿರುವ ಮಾಲ ಸಮುದಾಯವನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಕೈಗೊಂಡಿದ್ದು ಈ ಸಮುದಾಯದವರು ಆಂಧ್ರದಿಂದ ಕರ್ನಾಟಕಕ್ಕೆ ಬಂದವರಾಗಿದ್ದು ಇವರ ಮಾತೃ ಭಾಷೆ ತೆಲುಗು ಆಗಿದ್ದು ಜೊತೆಗೆ ಕನ್ನಡವನ್ನು ಸುಲಲಿತವಾಗಿ ಸಮಾಜದ ಇತರೆ ಜನರ ಜೂತೆಗೆ ಮಾತನಾಡುತ್ತಾರೆ. ಸಮಾಜದಲ್ಲಿ ಅತ್ಯಂತ ಕೆಳಸ್ತರದಲ್ಲಿದ್ದ ಇವರಿಗೆ ಮಲ್ಲರು, ಶ್ರೀಶೈಲ ಮಲ್ಲಯ್ಯನವರು, ಪರ್ವತ ಮಲ್ಲಯ್ಯನವರು, ಮಲ್ಲಯ್ಯನವರು, ಮುತ್ತುಗಾರರು, ಚನ್ನಮಲ್ಲಯ್ಯನವರು, ಬುಡುಗ ಜಂಗಮ ಎಂದು ಈ ರೀತಿಯಾಗಿ ಅವರು ಮಾಡುವ ವೃತ್ತಿಯ ಹೆಸರನ್ನು ಅನುಸರಿಸಿ, ಅವರ ಆರಾಧ್ಯ ದೇವರನ್ನು ಅನುಸರಿಸಿ, ವ್ಯಾಪಾರಿ ವಸ್ತುವಿನ ಸೂಚಕವಾಗಿ, ಇವರಿಗೆ ಸ್ಥಳಿಯವಾಗಿ ಅಥವಾ ಸಮಾಜದ ಜನರು ಕರೆಯುತ್ತಾರೆ. ಆದರೆ ಈ ಮೇಲಿನ ಯಾವ ಹೆಸರುಗಳು ಸಂವಿಧಾನದಲ್ಲಿ ಉಲ್ಲೇಖವಿರದ ಕಾರಣ ಈ ಸಮುದಾಯದವರು ಹಲವಾರು ಸೌಲಭ್ಯದಿಂದ ವಂಚಿತರಾಗಿದ್ದಾರೆ. ಇಂತಹ ಹಲವಾರು ಹೆಸರುಗಳನ್ನು ಹೆಸರಿಸಿ ಕರೆಯುವದಕ್ಕೆ ಮುಖ್ಯ ಕಾರಣವೇನೆಂದರೆ, ಇವರನ್ನು ಅಂಟಿಕೊಂಡಿರುವ ಅಸ್ಪೃಶ್ಯತೆ ಮತ್ತು ಅಲೆಮಾರಿತನದ ಜೀವನವಾಗಿದೆ, ಈ ಸಮುದಾಯವು ಸಮಾಜದಲ್ಲಿ ಅತ್ಯಂತ ಬಹಿಸ್ಕೃತವಾದ

ಸಮುದಾಯವಾಗಿದೆ. ಆರ್ಥಿಕ ಅಭದ್ರತೆಯನ್ನು ಇಂದಿಗೂ ಅನುಭವಿಸುತ್ತಿದ್ದು, ಸಾಮಾಜಿಕವಾಗಿ ಹಲವಾರು ಸ್ತರಗಳಲ್ಲಿ ಹಿಂದುಳಿದವರಾಗಿದ್ದಾರೆ. ಆದ ಕಾರಣದಿಂದಾಗಿ ತಮ್ಮ ಮೂಲ ವೃತ್ತಿಯನ್ನು ಧಾರ್ಮಿಕ ಭಿಕ್ಷೆಯಾಗಿಸಿಕೊಂಡು ಇವರು ಇಂದಿಗೂ ಅಲೆಮಾರಿತನವನ್ನು ಮೈಗೂಡಿಸಿಕೊಂಡಿದ್ದಾರೆ. ಆರ್ಥಿಕ ಭದ್ರತೆಯಿಲ್ಲದ ಇವರು ತಮ್ಮ ಹೊಟ್ಟೆಪಾಡಿಗಾಗಿ ತಮ್ಮ ಮಕ್ಕಳ ಹೊಟ್ಟೆಪಾಡಿಗಾಗಿ ಒಂದೂರಿನಿಂದ ಇನ್ನೊಂದು ಊರಿಗೆ ಅಲೆಮಾರಿಯಾಗಿ ಹೊಗುತ್ತಾರೆ ಇದಕ್ಕೆ ಮುಖ್ಯವಾದ ಇನ್ನೊಂದು ಕಾರಣ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿಯುವಿಕೆ ಕಾರಣವಾಗಿದೆ ಆದ್ದರಿಂದ ಇವರಿಗೆ ಹಲವಾರು ಹೆಸರಿನಿಂದ ಕರೆಯುವುದುಂಟು. ಮುಗ್ದ ಸ್ವಭಾವದವರಾದ ಮಾಲ(ಪರ್ವತ ಮಲ್ಲಯ್ಯ) ಸಮುದಾಯದವರು ಇತರೆ ಜನರು ಕರೆಯುವ ವಿವಿಧ ಹೆಸರುಗಳಿಗೆ ಭಾಜನರಾಗಿದ್ದಾರೆ. ಆದರೆ ಅತಿ ಹೆಚ್ಚು ಪರ್ವತ ಮಲ್ಲಯ್ಯನವರು ಎಂದು ಕರೆಯುತ್ತಾರೆ. ಇವರಿಗೆ ಬುಡುಗ ಜಂಗಮ ಎಂತಲು ಕರೆಯುತ್ತಾರೆಂಬುದು ಕ್ಷೇತ್ರಕಾರ್ಯದ ಮೂಲಕ ತಿಳಿದು ಬಂದಿತು. ಕಾರಣವೇನೆಂದರೆ, ಮಾಲ ಸಮುದಾಯದವರು ಮತ್ತು ಬುಡುಗ ಜಂಗಮದವರಲ್ಲಿ ಇರುವ ಸ್ನೇಹ ಸಂಬಂಧ ಮುಖ್ಯವಾದ ಕಾರಣವಾಗಿದೆ, ಆದರೆ ಈ ಎರಡು ಸಮುದಾಯಗಳಲ್ಲಿ ಅತ್ಯಂತ ಸಾಮ್ಯತೆ ಕಂಡುಬರುತ್ತದೆ. ಈ ಎರಡು ಸಮುದಾಯಗಳು ಒಂದೇ ಮೂಲದಿಂದ ಬಂದಿದ್ದು, ಎರಡು ಸಮುದಾಯಗಳು ಒಂದೇ ಭಾಷೆಯನ್ನು ಮಾತನಾಡುತ್ತಾರೆ. ಈ ಎರಡು ಸಮುದಾಯಗಳು ಅತ್ಯಂತ ಸ್ನೇಹಪರತೆಯಿಂದ ಇರುತ್ತಾರೆ ಕೆಲವು ಬಾವನೆಗಳನ್ನು ಪರಸ್ಪರ ಹಂಚಿಕೊಳ್ಳುತ್ತಾರೆ, ಮತ್ತು ಜೀವನ ಶೈಲಿ ಒಂದೇ ತೆರನಾಗಿರುತ್ತದೆ ಆದರೆ ಈ ಎರಡು ಸಮುದಾಯಗಳ ಆಚಾರ ವಿಚಾರಗಳು ಜೀವನಾವರ್ತಕ ಕ್ರೀಯಗಳು ಬೇರೆ-ಬೇರೆ ಅಥವಾ ಭಿನ್ನ ಭಿನ್ನವಾಗಿರುತ್ತವೆ ಈ ಎರಡು ಸಮುದಾಯಗಳು ಆರಾಧಿಸುವ ದೈವಗಳು ಸಹ ಬೇರೆ- ಬೇರೆ ಆಗಿರುತ್ತವೆ ಎಂಬುದು ತಿಳಿದು ಬಂದಿತು. ಆದರೆ ಈ ಎರಡು ಸಮುದಾಯಗಳ ಪ್ರತಿಯೊಂದು ಕಾರ್ಯಕ್ರಮಗಳಾದ ಹಬ್ಬ-ಹರಿದಿನಗಳು, ಮದುವೆ ಸಮಾರಂಭಗಳು, ಜಾತ್ರೆಗಳು, ಹುಟ್ಟು-ಸಾವು, ಈ ರೀತಿಯಾದ ಪ್ರತಿಯೊಂದು ಕಾರ್ಯಕ್ರಮಗಳಿಗೆ ಎರಡು ಸಮುದಾಯಗಳು ಪರಸ್ಪರ ಬಾಗಿಯಾಗುತ್ತಿರುವುದು ಕ್ಷೇತ್ರಕಾರ್ಯದ ಮೂಲಕ ತಿಳಿದು ಬಂದಿತು. ಹಾವೇರಿ ಜಿಲ್ಲೆಯಲ್ಲಿ ವಾಸಮಾಡುವ ಮಾಲ(ಪರ್ವತ ಮಲ್ಲಯ್ಯ) ಸಮುದಾಯದವರಿಗೆ ಚೆನ್ನಮಲ್ಲಯ್ಯನವರು ಮತ್ತು ಮುತ್ತುಗಾರರೆಂದು ಕರೆಯುತ್ತಾರೆ ಚೆನ್ನಮಲ್ಲಯ್ಯನವರಿಗು ಮತ್ತು ಮಾಲ ಸಮುದಾಯದವರಿಗು ಯಾವುದೇ ಸಂಬಂಧ ಇರುವದಿಲ್ಲ ಮತ್ತು ವೈವಾಹಿಕ ಸಂಬಂಧಗಳು ಸಹ ನಡೆಯುದಿಲ್ಲ ಆದರೆ ಈ ಎರಡು ಸಮುದಾಯಗಳ ಸ್ನೇಹಪರತೆಯ ಕಾರಣದಿಂದ ಚೆನ್ನಮಲ್ಲಯ್ಯವರು ಎಂದು ಕರೆಯುತ್ತಾರೆ ಆದರೆ ಉಳಿದೆಲ್ಲ ಪದಗಳು ವೃತ್ತಿ ಸೂಚಕ ಪದಗಳಾಗಿರುತ್ತವೆ.

೨.೪ ಮಾಲ ಪಂಗಡಗಳು

ದಾಸನೂರು ಕೂಸಣ್ಣ ಅವರು ಮಾಲ ಪಂಗಡಗಳೆಂದು ಗುರಿತಿಸಿದ ಪಂಗಡಗಳು ಈ ಕೆಳಗಿನಂತಿವೆ.

೧. ಅಂದ್ಧವಂತ್ 　　　　 ೨. ಆರ್ಢೇ ಮಾಲ

೩. ಆರ್ವ ಮಾಲ 　　　　 ೪. ಬಡಜೇ ಮಾಲ

೫. ಚಲಕ ಮಾಲ

೬. ಬೇಗಾರ್ ಮಾಲ

೭. ಭಟ್ ಮಾಲ

೮. ಬಿರ್ಜ ಮಾಲ

೯. ಬೊಯ ಮಾಲ

೧೦. ದಾಡಿ ಮಾಲ

೧೩. ಗುಂಟಾ ಮಾಲ

೧೪. ಗುರ್ಜಿ ಮಾಲ

೧೫. ಗುರಮ್ ಮಾಲ

೧೬. ಹಟಗಾರ ಮಾಲ

೧೭. ಜಾತಿ ಮಾಲ

೧೮. ಜಿನ ಮಾಲ

೧೧. ದಾಸ ಮಾಲ

೧೨. ದೊಳ ಮಾಲ

೧೯.ಕ್ವಾರ್ನೇ ಮಾಲ

೨೦. ಲಾಂಡವಂತ್

೨೧. ಲಾಂಢ ಮಾ

೨೨. ಮಾಲ ಅಯ್ಯವರ್

೨೩. ಮಾಲ ಬೋಗಂ

೨೪. ಮಾಲ ದಾಸರಿ

೨೫. ಮಾಲ ಜಂಗಮ ಅಥವಾ ವಲವಾದಿ

೨೬. ಮಾಲ ಮನೇವಾರ್

೨೭. ಮಾಲ ಮಾಸ್ತಿ

೨೮. ನೇಟಕಾನಿ ಮಾಲ

೨೯. ಪಾಚಿ ಮಾಲ

೩೦. ಪಂಬಲವಾಡ

೩೧. ರಾಚ ಮಾಲ

೩೨. ಶಿವಕಾಂತ ಮಾಲ

೩೩. ಸೋಮವಂಶೀ ಮಾಲ

೩೪. ತೆಲುಗು ಮಾಲ

೩೫. ಲವಾನ್ ಮಾಲ

೩೬. ತುಕ ಮಾಲ

೩೭. ವರ್ಣ ಮಾಲ

೧.ಗುಂಟಾಮಾಲ: 'ಗುಂಟಾ' ಎಂದರೆ ಗುಂಡಿ ಎಂದಾಗುತ್ತದೆ. ಇವರು ಖಾದಿಯ ಕೋರಾ ವಸ್ತ್ರದ ನೇಕಾರರು, ಇವರನ್ನು ನೆಟ್‌ಕಾನಿ, ಮನೇಪುವರು ಮತ್ತು ಮಾಲಸಾಲೆಗಳೆನ್ನುತ್ತಾರೆ.

೨.ಗುರುಮ್ ಮಾಲ: ಯಾಂಗ ಮಾಲಕುಂಡ, ಸಾದಿಲಂಗರು, ಮತ್ತು ಚಿಂತಾಲರು ಹೊಲೆಯ ಜಾತಿಯ ಉಪಜಾತಿಯ ಇವರೆಲ್ಲರೂ ಕೇರಿಯಿಂದಾಚೆ ಇರುತ್ತಾರೆ. ಮಾಲರ ಮನೆಗಳಲ್ಲಿ ಬೇಡಿ ತಿನ್ನುತ್ತಾರೆ ಗುರುಮ್ ಮಾಲ ಇತರ ಮಾಲ ಜಾತಿಯ ಜನರು ಮದುವೆಯ ಮೆರೆವಣಿಗೆಗರ ಕುದುರೆ ನೀಡುತ್ತಾರೆ.

೩.ದಾಸ ಮಾಲರು: ಮರಗೆಣಸು ಮತ್ತು ಮರದ ಕಾರ್ಖಾನೆಗಳಲ್ಲಿ ಹೆಚ್ಚಾಗಿದ್ದಾರೆ.

೪.ದೋಳಮಾಲ: ಸ್ಪೃಶ್ಯ ಜಾತಿಯ ಜನರ ಶುಭ ಸಮಾರಂಭಗಳಿಗೆ ಪಂಚವಾದ್ಯ ನುಡಿಸುವುದು(ಓಲಗದ ಹೊಲೆಯ) ಉಳಿದ ದಿನಗಳಲ್ಲಿ ಕೃಷಿಕಾರ್ಮಿಕರಾಗಿ ಜೀವನೋಪಾಯ ಮಾಡುವರು.

೫.ಪಂಬಲವಾಡ: ಮಾಲರ ಗ್ರಾಮ ದೇವತೆಗಳು, ದೇವತಾರಾಧನೆ ಮತ್ತು ಭೂತಾರಾಧರೆ ವೇಳೆಯಲ್ಲಿ ಸಂಗೀತವಾದ್ಯ (ಬ್ಯಾಗಾರ ಮಾಲರ ಮೂಲ)ಗಳೊಂದಿಗೆ ನೃತ್ಯ ಮಾಡುತ್ತಾ ಭವಿಷ್ಯ ಹೇಳುತ್ತಾರೆ

ಕರ್ನಾಟಕದಲ್ಲಿ ಇವರನ್ನು ಬೋನೆ ಗುರು ಮತ್ತು ಬೆಂಡಾಲರೆನ್ನುತ್ತಾರೆ. ಬ್ಯಾಗಾರರು ಸಹ ಮಾಲರನ್ನು (ಹೊಲೆಯ) ಜಂಗಮರು.

೬.ಬಡಜೇ ಮಾಲ: ಬೊಂಬೆ ಆಟದೊಳಗೆ ಪ್ರಮುಖವಾಗಿ ಚರ್ಮ ಮತ್ತು ಮರದ ಸಾಧನೆಗಳನ್ನು ಬಳಸುವರು. ಬಡಜೇಮಾಲ ಮತ್ತು ಅರೇಮಾಲ ಅತಿ ಪುರಾತನ ಸಂಸ್ಕೃತಿಯ ತೊಲುಬೊಮ್ಮಲು ಆಟಗಳನ್ನು ಪ್ರದರ್ಶಿಸುತ್ತಿದ್ದವರು. ಬೊಂಬೆಯಾಟದ ಪ್ರಭೇದದೊಳಗೆ ಕೆಲವು ಅತಿ ಹಿಂದುಳಿದ ಜಾತಿಗಳು ಸಹ ಇವೆ. ಇವುಗಳಾವುವು ಅಸ್ಪೃಶ್ಯ ವ್ಯಾಪ್ತಿಗೆ ಸೇರ್ಪಡೆಯಾಗುವುದಿಲ್ಲ. ಬಡಜೇ ಮಾಲರು ಸಹ ಬೇಡುವ ಮೂಲದವರಾಗಿದ್ದಾರೆ ಬಡಜೇ ಮಾಲರು ಸಹ ಬೇಡ ಜಂಗಮರೆಂದು ಕರೆದುಕೊಳ್ಳುವರು. ಸಾಮಾನ್ಯವಾಗಿ ಬುಡುಗಿ ಸಂಸ್ಕೃತಿಯ ಜನರಂತೆ ಕಾಣುವರು. ಬಡಗಿ ಅರೇಮಾರಠಿ ಮತ್ತು ಕತಾಬರು ಇವರಿಗಿಂತ ವಿಭಿನ್ನರು.

೭.ಬೇಗಾರ್ ಮಾಲರು: ಬೇಗಾರ್ ಅಂದರೆ ಉಚಿತ ಸೇವಕರೆಂದು. ಇವರು ಚಂಡಲರಾಗಿ ಸ್ಮಶಾನದಲ್ಲಿ ಸೇವೆಗೈಯುತ್ತಾರೆ. ಸ್ಮಶಾನ ಜೋಗಿ ಅಥವಾ ಸುಡುಗಾಡು ಸಿದ್ದರೆಲ್ಲರೂ ಸೂರ್ಯವಂಶಿಗಳೆಂದು ಕರೆದುಕೊಳ್ಳುವರು.

೮.ಭಟ್ಟ ಮಾಲರು: ಹಿಂದೂ ಶ್ರೀವೈಷ್ಣವ ದೇವತೆಗಳ ಹೆಸರಿನಲ್ಲಿ ನಾಮಸ್ಮರಣೆ ಮಡುತ್ತಾ, ಭಿಕ್ಷಾಟನೆಯಿಂದ ಜೀವನೋಪಾಯ ಮಾಡುವರು. ಇವರು ಸಹ ಬಹುರೂಪ ವೇಷದಾರಿಗಳು. ಸದಾ ಸಾಂಪ್ರದಾಯ ಮಾಡುವರು. ಇವರು ಸಹ ಬಹುರೂಪಿ ವೇಷದಾರಿಗಳು. ಸದಾ ಸಾಂಪ್ರದಾಯದ ಸಂಗೀತ ಸಾಧನಗಳಾದ ತಂಬೂರಿ, ಬುಡುಗಿ, ಬಟ್ಟುತಾಳ ಇತ್ಯಾದಿಗಳೊಡನೆ ಅಲೆದಾಡುತ್ತಾರೆ.

೯.ಮಾಲ ಬೋಗಂ: ಮಾಲ ಜಾತಿಯ ವಾರಂಗನೆಯರ ಮಕ್ಕಳೆಂದು ಭಿಕ್ಷಾಟನೆ ಮಾಡುತ್ತಾರೆ ಬೋಗಂ ಸಂಸ್ಕೃತಪದ ಬೋಗಂ ಆಂದರೆ ಸಾಮಾನ್ಯ ಹೆಂಗಸೆಂಬ ಅರ್ಥವಿದೆ ಎಲ್ಲರಿಗು ಸಲ್ಲುವ ಹೆಂಗಸರೆಂಬ ಅರ್ಥವಿದೆ. ಬೋಗಂರಲ್ಲಿ ಹಿಂದೂ ಮತ್ತು ಮಹಮದೀಯರೆಂಬ ಪ್ರಬೇಧಗಳಿವೆ. ಹಿಂದೂ ಬೋಗಂ ಜಾತಿಯ ಜನರನ್ನು ಸಾಣಿ ಮತ್ತು ನಾಯಕಸಾನಿ ಎಂದು ಕರೆದುಕೊಳ್ಳುತ್ತಾರೆ. ಇವರನ್ನೇ 'ಜನ' ಅಥವಾ 'ನಾಯಕನ್' ಗಳೆಂದು ಕರೆದುಕೊಳ್ಳುತ್ತಾರೆ. ಇವರು ಐತಿಹಾಸಿಕ ಅಪ್ಸರೆಯರ ಮೂಲವನ್ನು ಉಲ್ಲೇಖಿಸುತ್ತಾರೆ. ಇಂದ್ರನ ಅಸ್ಥಾನದಲ್ಲಿದ್ದ ರಂಭೆ, ಊರ್ವಶಿ, ಮೇನಕಾ ಮತ್ತು ತಿಲೋತ್ತಮೆಯರು ನೃತ್ಯರೂಪಕವನ್ನು ಧಾರೆ ಎರೆದರಂತೆ; ಮಾಲ ಬೋಗಂ ಮತ್ತು ಮಾದಿಗ ಬೋಗಂ ನೃತ್ಯಗಾರರು ಇವರ ಸಹಾಯಕರಾಗಿ ಪರಿಪೂರ್ಣ ಪಾಂಡಿತ್ಯ ಪಡೆದ ಮೇಲೆ ಧರೆಗೆ ಇಳಿದರಂತೆ ಆದರೂ ಜನರೆಲ್ಲ ಮಾದಿಗ ಮತ್ತು ಹೊಲೆಯ ನಾಯಕ ಸಾಣಿಯರಾದ ಕಾರಣ ಹೊರೆಗೆ ಇಟ್ಟಿದ್ದಾರೆನ್ನುವ ವಾದ ಇವರದು. ಊರಿನಿಂದ ಊರಿಗೆ ಅಲೆದು ಎಲ್ಲಾ ಜಾತಿಯ ಜನರ ಮನೆಗಳ ಮುಂದೆ ತಮ್ಮ ಪ್ರದರ್ಶನ ಕಲೆಗಳನ್ನು ಏರ್ಪಡಿಸಿ ಭಿಕ್ಷೆ ಬೇಡುತ್ತಾರೆ. ಸವರ್ಣೀಯರಾದ ತೆಲಗು ಮತ್ತು ಕನ್ನಡ ಬೋಗಂ ನಾಯಕಸಾಣಿಯರು ವೃತ್ತಿಪರ ನೃತ್ಯಗಾರರು. ನಾಟಕ, ಯಕ್ಷಗಾನ ಮತ್ತು ಇತ್ಯಾದಿ ಕಲಾತ್ಮಕ ಪ್ರದರ್ಶನಗಳಿಂದ ಆದಾಯ ಗಳಿಸುತ್ತಾರೆ. ಈ ರೀತಿಯ ಸೌಲಭ್ಯ ಮಾಲ ಮತ್ತು ಮಾದಿಗ ಬೋಗಂ ಜಾತಿಯ ಜನರಿಗಿಲ್ಲ. ಇವರೆಲ್ಲರೂ ಮತ್ತಷ್ಟು ಶೋಷಿತರಾಗಿದ್ದಾರೆ.

೧೦. ಮಾಲ ಅಯ್ಯವರ್, ಜೋಗಿ ಮತ್ತು ಮಾಲ ದಾಸರಿ: ತಿರುಮಲಧಾರಿಗಳಾದ ಹೊಲಯರಿಗೆ ಈ ದಾಸರಿಗಳು ಅರ್ಚಕರು.

೧೧. ಮಾಲ ಜಂಗಮ: ಇವರನ್ನು 'ಶಿವನಾಗಯ್ಯ'ಗಳೆನ್ನುತ್ತಾರೆ. ಸೋಮವಂಶೀ ಶಿವಕಾಂತ ಮಾಲರು ಸಹ ವಿಭೂತಿಧಾರಿಗಳು. ಮಾಲ ಜಂಗಮರ ತತ್ಸಮಾನರು ಶ್ರೀವೈಷ್ಣವ ಮತ್ತು ಶೈವ ಪಂಥಗಳ ನಡುವೆ ತಿಕ್ಕಾಟವಾದಾಗ ಶೈವಧರ್ಮದ ಪರಮೇಶ್ವರನ ಅನಿಯಾಯಿಗಳಾಗಿ ಸಾಗರ ಮಥನ ಕಾರ್ಯಕ್ಕೆ ಮುಂದಾದವರು. ಇಂದೊಂದು ಮಣ್ಣಿನ ಮಕ್ಕಳೆಂಬ ವಾದಕ್ಕೆ ಇಂಬು ನೀಡುವ ಕಥೆಯಿದು.

೧೨. ಮಾಲ ಮಾಸ್ತಿ: ವ್ಯಾಯಾಮ ಪ್ರದರ್ಶನ ಮತ್ತು ಶಕ್ತಿ ದೇವತೆಗಳೊಂದಿಗೆ ಭಿಕ್ಷಾಟನೆ ಮಾಡುವವರಾಗಿದ್ದಾರೆ. (ದೊಂಬರಾಟ).

೧೩. ವೇಲುಪು ಮಾಲ: ಶಕ್ತಿ ದೇವತೆಗಳಿಗೆ ಪ್ರಾಣಿ ಬಲಿ ನೀಡುತ್ತಾರೆ. ಪೋತರಾಜ ಬಲಿಕೊಡಲು ಮೊಂದೆ ಬರುತ್ತಾರೆ. ಪೋತರಾಜ ಗಂಡು ದೇವರ (ದೇವದಾಸಿ ರೂಪದಲ್ಲಿ) ಅಂದು ಮಾಸ್ತರಿಯಾದ ಮಾಲ ಮಕ್ಕಳಿಗೆ ದೊಂಬರಾಟ ತೋರಿಸುತ್ತಾರೆ. ಅದೇ ಸಂದರ್ಭದಲ್ಲಿ ಶಕುನ ನುಡಿಯುತ್ತಾನೆ.

೧೪. ಲಾಂಡ ಮಾಲ: ಕೊಂಬು (ಹೊಲೆಯ) ಮಾಲರೆನ್ನುತ್ತಾರೆ. ಪ್ರಾಣಿಗಳನ್ನು ಶೃಂಗಾರ ಮಾಡುತ್ತಾರೆ. ಸ್ಥಳೀಯವಾಗಿ ಸಿಗುವ ಸಸ್ಯಗಳಿಂದ ಪಶುವೈದ್ಯಕೀಯ ನೀಡುತ್ತಾರೆ. ಈ ಕಲೆ ಅನುವಂಶಿಕವಾಗಿ ಬಂದಿದೆ. ಮಾದಿಗರಲ್ಲೂ ಸಹ ಇಂತಹ ಪ್ರವೃತ್ತಿಯವರನ್ನು ಕಾಣಬಹುದು.

ಆಂಧ್ರ ಪ್ರದೇಶ, ತೆಲಂಗಾಣಗಳಲ್ಲಿರುವ ಮಾಲರಲ್ಲಿ ಹಲವು ಒಳಪಂಗಡಗಳಿವೆ. ಅವುಗಳನ್ನು ಕ್ರಮವಾಗಿ

ನೆಟ್‌ಪಾನಿವಂಡ್ಲು (ನೇಕಾರಿಕೆ ಮಾಡುವವರು),

ಅರುವ, ಕಂಠ (ಕಾಂತ),

ಮುರುಕಿನಾಡು, (ಮುರಕಿಂದು ಅಥವಾ ಮುರಿಕಿಂದುಲು)

ಪೋಕುನಾಟಿ,

ರೆಡ್ಡಿಭೂಮಿ,

ಸರಿಂಡ್ಲಾ,

ಸಾವು,

ಸೈಂಡುಲಾ,

ದಿಂಡ್ಲುಲಾ (ದಿಂಡ್ಲಾ) ಹೆಸರುಗಳಿಂದ ಕರೆಯುವುದಾಗಿ ಥರ್ಸ್ಟನ್ ಅವರು ಉಲ್ಲೇಖಿಸಿರುವರು.

ಇವೆಲ್ಲವೂ ಮಾಲ ಸಮುದಾಯಕ್ಕೆ ಕರೆಯುವ ಭಿನ್ನ ಭಿನ್ನ ಹೆಸರುಗಳಾಗಿದ್ದು ಪ್ರಾದೇಶಿಕವಾಗಿ ಮಾಲ ಸಮುದಾಯವನ್ನು ಈ ರೀತಿಯ ಭಿನ್ನ ಹೆಸರುಗಳಿಂದ ಗುರುತಿಸಲಾಗುತ್ತದೆ ಎಂದು ಹೇಳಲಾಗುತ್ತದೆ. ಅರವ ಮಾಲರು ಹೊರಗಿನಿಂದ ಬಂದು ಮಾಲ ಸಮುದಾಯದೊಳಗೆ

ಗುರುತಿಸಿಕೊಳ್ಳುತ್ತಿರುವರು ಎನ್ನಲಾಗುತ್ತಿದೆ. ಕಂಠ ಮಾಲವೆಂಬ ಉಪಪಂಗಡವು ಅವರ ಒಂದು ಆಚರಣೆಯ ಆಧಾರದ ಮೇಲೆ ಬಂದಿದೆ ಎಂದು ಹೇಳಲಾಗುತ್ತಿದೆ.

ಕಂಠ (ಕಾಂತ) ಎಂಬುದು ಸಂಸ್ಕೃತ ಪದ, ಅದನ್ನು ಕನ್ನಡದಲ್ಲಿ ಗಂಟಲು ಎಂದು ಕರೆಯುತ್ತೇವೆ. ಆಂಧ್ರದಲ್ಲಿ ಮುರಿಕಿರಿಯುಡು ಎಂಬ ಪ್ರದೇಶದಿಂದ ಮುರಿಕಿರಿಯುಡು, ಮುರಿಕಿಂದುಲು ಎನ್ನುವ ಹೆಸರು ಬಂದಿದೆಯಂತೆ. ಮೂಲತಃ ಮುರಿಕಿರಿಯುಡು ಪ್ರದೇಶದವರು ಇವರಾಗಿದ್ದರಂತೆ.

ರೆಡ್ಡಿಭೂಮಿ ಎಂಬುದೂ ಇದೇ ರೀತಿ ಭೌಗೋಳಿಕ ಪ್ರದೇಶವನ್ನೇ ಸೂಚಿಸುತ್ತದೆ ಎಂದು ಹೇಳಲಾಗುತ್ತದೆ. ಕೃಷಿ ಕೆಲಸಗಾರರಾದ ಈ ಸಮುದಾಯದವರು ರೆಡ್ಡಿಯವರ ಭೂಮಿಗಳಲ್ಲಿ ಜೀತ ಮಾಡುವವರಾಗಿದ್ದು ಅವರ ಭೂಮಿಗಳಿಂದ ಬಂದವರು ಎಂಬುದನ್ನು ಈ ಪದವು ಸೂಚಿಸುತ್ತದೆ ಎಂಬ ಅಭಿಪ್ರಾಯವೂ ಇದೆ. ಅದೇ ರೀತಿ ಮಾಲ ಸಮುದಾಯದ ಮಹಿಳೆಯರು ಬಲಭಾಗಕ್ಕೆ ಸೆರಗನ್ನು ಹಾಕಿಕೊಳ್ಳುವುದರಿಂದ ಮುರಿಕಿರಡು (ತಿರುವುಮುರುವು) (ರೆಡ್ಡಿ ಮುಸುಕಿನವರು) ಎಂಬ ಹೆಸರು ಬಂದಿರಬಹುದು ಎನ್ನುವ ಅಭಿಪ್ರಾಯವೂ ಇದೆ.

೨.೫ ಬೆಡಗುಗಳು

ರೆಡ್ಡಿಭೂಮಿ, ಪಕರ್‌ಘತಿ, ಸಾರಿಂಡಲ, ದ್ಯೆಂದ್ಲು ಉಪಪಂಗಡಗಳು ವಿಜಾತಿ ಬೆಡಗುಗಳನ್ನು ಅನುಸರಿಸುತ್ತಿದ್ದು ಅವುಗಳು ಕ್ರಮವಾಗಿ ಈ ಕೆಳಗಿನಂತಿವೆ.

ರೆಡ್ಡಿಭೂಮಿ ಪಂಗಡದ ಬೆಡಗುಗಳು

೧ ಆವುಕ (ಜವುಗು ಭೂಮಿ)

೨ ಬಂಡಿ (ಎತ್ತಿನಗಾಡಿ)

೩ ಬೊಮ್ಮಲ (ಗೊಂಬೆ)

೪ ಬೆಜ್ಜಮು (ಕಿಂಡಿ)

೫ ದಕ್ಕು (ಭಯ)

೬ ದಿಂಡ್ಲ (ಹಿಂಬಾಗಿಲು)

೭ ದೋಮ (ಸೊಳ್ಳೆ)

೮ ಗೇರ (ಕೇರಿ)

೯ ಕೈಯಿಲಾ ಸೇರು (ಧಾನ್ಯಗಳನ್ನು ಅಳೆಯಲು ಬಳಸುವ ಮಾಪಕ)

೧೦ ಕಾಟಿಕಾ (ಕಾಡಿಗೆ)

೧೧ ನಾಥಾಲು (ಬಸವನಹುಳು)

೧೨ ಪಯಿಡಾಗೋಲ (ದುಂಡನೆಯ ಆಕೃತಿ)

೧೩ ಪಿಲ್ಲಿ (ಬೆಕ್ಕು)

೧೪ ರಾವಿ (ಕಲ್ಲು)

೧೫ ಸಮುದ್ರಾಲು (ಸಮುದ್ರ)

೧೬ ಶೀಲಮು (ಶೀಲ)

೧೭ ಥಂಡಾ (ಹಡಗಿನ ತಳಭಾಗ)

ಸರಿಂಡ್ಲಾ ಪಂಗಡದ ಬೆಡಗುಗಳು

೧ ಬೂರಿ (ಪೂರಿ)

೨ ಬೊಮ್ಮಿಡಿ ಈಲ್ ಮೀನು (ಉದ್ದ ತಲೆಯ ಮೀನು)

೩ ಭಲ್ಲೆಮು (ಈಟಿ)

೪ ಚಲ್ಲಾ (ಮಜ್ಜಿಗೆ)

೫ ಚಿಂತಲು (ಹುಣುಸೆ)

೬ ಡಬ್ಬು (ದುಡ್ಡು)

೭ ಗಾಳಿ (ಗಾಳಿ)

೮ ಕಮ (ಚೆಮ)ಕಿವಿ

೯ ಕಾಕಿ (ಕಾಗೆ)

೧೦ ಮುದಿ (ಗಂಟು)

೧೧ ಮದ್ದಿಲಿ (ಮದ್ದಳೆ)

೧೨ ಮಲ್ಲೆ (ಮಲ್ಲಿಗೆಹೂ)

೧೩ ಪುಟ್ಟ (ಬೆಟ್ಟದ ಇರುವೆ)

೧೪ ಪಾಕುಲ (ಹಾವು)

೧೫ ಪಿಡಿಗಿ (ಹಿಡಿಕೆ) ಕೈತುಂಬ ಹಿಡಿಯುವುದು

೧೬ ಉವಾಲಾ (ಗರಗಸ)

ದೈಂಡ್ಲಾ ಪಂಗಡದ ಬೆಡಗುಗಳು

೧ ದಾಸರಿ (ದಾಸ)

೨ ದೊಡ್ಡಿ (ದನಗಳನ್ನು ಕೂಡಿಹಾಕುವ ಸ್ಥಳ)

೩ ಗೊಣ್ಣೆ (ಒಂದು ಜಾತಿಯ ಬಳ್ಳಿ) (Indian Myrtle)

೪ ಕೊಮ್ಮಲು (ಕಹಳೆ)

೫ ಮರ್ರಿ (Ficus bengilensis)

೬ ಪಥ್ರಾ (ಪಾಲು) ಹಾಲು

೭ ಪೋವಕು (ತಂಬಾಕು)

ಕರ್ನಾಟಕದ ಪರ್ವತ ಮಲ್ಲಯ್ಯ ಸಮುದಾಯದವರ ಬೆಡಗುಗಳು

ನೆರಸಲ್: (ಪಾಯಲ್)

ಗುಂಡರೆಡ್ಡಿ: (ಇರಿಕುಳ್ಳಿ)

ಲದ್ದಲ್: (ಶಶೇಂದ್ರ)

ಉಳ್ಳಿ: ಮದ್ದಿಲನೀರು (ಮದ್ದಳೆಯವರು)

ಬಂಗಾರಿ: (ಪಶುವನೇಳ್ಳು) ಪಶುನೀಳ

ಬೋಗಿ: (ನರೇಂದ್ರ)

ಬಂದೂಕು: (ಸೈನೀಳು)

ಬಬ್ಬಲ: (ನಲ್ಲಿವೋಳ್ಳು) ನಲ್ಲನೀರು

ವಿರಶಟ್: (ವೀರಶೆಟ್ಟಿ)

ಪಗಡಂ: (ಪಗಡೆಯವರು)

ಎರ್ರವೋಳ್ಳು: ಕೆಂಪು ಆಕಳ (ಕೂಂಡೂಳ್)

ಮಾಲಾ(ಪರ್ವತ ಮಲ್ಲಯ್ಯ) ಸಮುದಾಯದವರ ಮನೆತನಗಳು ಬೆಡಗುಗಳು ಮತ್ತು ಆರಾಧ್ಯದೇವರು

ಮಾಲಾ (ಪರ್ವತ ಮಲ್ಲಯ್ಯ) ಬುಡಕಟ್ಟು ಸಮುದಾಯದವರಲ್ಲಿ ಮುಖ್ಯವಾಗಿ ಹನ್ನೊಂದು ಮನೆತನ ಹನ್ನೊಂದು ಬೆಡಗುಗಳು ಕಂಡು ಬರುತ್ತವೆ. ಪ್ರತಿಯೊಂದು ಪಂಗಡದವರಿಗೆ ಪ್ರತಿಯೊಂದು ಕುಲಚಿಹ್ನೆ ಮತ್ತು ಕುಲದೇವರು ಇರುತ್ತದೆ. ಪ್ರತಿಯೊಂದು ಮಾಲಾ ಸಮುದಾಯದ ಕುಟುಂಬದವರ ಪ್ರಮುಖ ಆರಾಧ್ಯ ದೇವರು ಶ್ರೀಶೈಲ ಮಲ್ಲಯ್ಯ ಆದರೆ ಶ್ರೀಶೈಲ ಮಲ್ಲಯ್ಯನ ದೇವಸ್ಥಾನ ಆಂಧ್ರದಲ್ಲಿ ಇರುವುದರಿಂದ ಕರ್ನಾಟಕದಲ್ಲಿ ಬೇರೆ ಬೇರೆ ದೇವರುಗಳನ್ನು ತಮ್ಮ ಮನೆ ದೆವರುಗಳನ್ನಾಗಿಕೊಂಡಿದ್ದಾರೆ. ಶಿವರಾತ್ರಿ ಸಮಯದಲ್ಲಿ ಪ್ರತಿಯೊಂದು ಕುಟುಂಬದವರು ಶ್ರೀಶೈಲ ಮಲ್ಲಿಕಾರ್ಜುನನ ಸನ್ನಿಧಿಗೆ ಪಾದಯಾತ್ರೆ ಮಾಡುತ್ತಾರೆ.

ಕ್ರ.ಸಂ	ಮನೆತನ	ಬೆಡಗು	ಕನ್ನಡ	ತೆಲುಗು	ಮನೆದೇವರು
೧	ನರಸಲ್	ಪಾಯಲ್	ಕಿರಸಲಿಪಲ್ಯ	ಪಾಯಲ	ನಂಜುಂಡೇಶ್ವರ
೨	ಗುಂಡರೆಡ್ಡಿ	ಇರುಕುಳ	ಚಳ್ಳಿಹಣ್ಣು	ಇರುಕುಳ	ಮಲ್ಲಯ್ಯಹುಲಿಗೇಮ್ಮ
೩	ಲದ್ದಲ	ಶಶೇಂದ್ರ	ನಾಗರಹೆಡೆ	ಶಶೇಂದ್ರ	ಹನಮಪ್ಪ

೪	ಹುಳ್ಳಿ	ಮದ್ದಿನೀರು	ಹಳೆನೀರು ಮದ್ದಿನೀರು	ಹಳೇನೀರು	ಚಾಮುಂಡೇಶ್ವರಿ
೫	ಬಂಗಾರಿ	ಪಶುನಿಳ	ಅರಿಶಿಣಕೊಂಬು	ಪಶುನಿಳ	ದುರುಗಮ್ಮ
೬	ಬೋಗಿ	ನರೇಂದ್ರ	ನಟರಾಜ	ನರೇಂದ್ರ	ಸುಂಕ್ಲೇಮ್ಮ
೭	ಬಂದೂಕ	ಸೈನಿಳು	ಸಿಹಿನೀರು	ಸೈನಿಳು	ಯಮನೂರಪ್ಪ
೮	ಬಬ್ಬಲ	ಕರಿನೀಳು	ಕರಿನೀರು ಕರಿನೀಳು	ನಲ್ಲನೀಳು	ಹನುಮಪ್ಪ
೯	ಪರ್ವತ್ತೇರ	ವೀರಶೆಟ್ಟಿ	ಸಾಹಸ	ವೀರಶಟ್	ಚೌಡೇಶ್ವರಿ
೧೦	ಮುತ್ತುಗಾರರು	ಪಗಡಿಶೆಟ್ಟಿ	ಹವುಳ	ಪಗಡಂ	ಚನ್ನಮಲ್ಲಿಕಾರ್ಜುನ
೧೧	ಗುಡ್ಡದರ	ಕೊಂಡೊಳ್	ಕೆಂಪ ಆಕಳಿನ	ಎರಾವುಲ್	ಬಂಡಿದುರುಗಮ್ಮ

ಇಲ್ಲಿ ಪ್ರತಿಯೊಂದು ಮನೆತನದವರಿಗೆ ಪ್ರತಿಯೊಂದು ಬೇಡಗು(ಗೊತ್ರ)ಗಳು ಮತ್ತು ಕುಲಚಹ್ನೆ ಮನೆದೇವರು (ಆರಾದ್ಯೆ ದೆವರು) ಇರುತ್ತವೆ. ಈ ಮನೆತನಗಳಲ್ಲಿ ವೈವಾಹಿಕ ಸಂಬಂಧ ಎರ್ಪಡಬೇಕಾದರೆ ಮದುವೆ ಮಾಡಿಕೊಳ್ಳುವ ಎರಡು ಕುಟುಂಬದವರ ಮನೆತನ ಮತ್ತು ಬೆಡಗುಗಳು ಒಂದೇ ತರಹ ಇದ್ದರೆ ವೈವಾಹಿಕ ಸಂಬಂಧ ಎರ್ಪಡುವುದಿಲ್ಲ, ಅವು ಬೇರೆ ಬೇರೆಯಾಗಿರಬೇಕು.

ಉದಾ: ಲದ್ದಲ ಮನೆತನ–ಲದ್ದಲ ಮನೆತನ, ಬೋಗಿ ಮನೆತನ–ಬೋಗಿ ಮನೆತನ ಇದ್ದಲ್ಲಿ ವೈವಾಹಿಕ ಸಂಬಂಧಗಳು ಏರ್ಪಡುವುದ್ದಿಲ್ಲ. ಏಕೆಂದರೆ ಅಣ್ಣ–ತಮ್ಮಂದಿರ ಸಂಬಂಧ ಎಂದು ತಿಳಿದುಕೊಳ್ಳುತ್ತಾರೆ. ವೈವಾಹಿಕ ಸಂಬಂಧಗಳು ಏರ್ಪಡಬೇಕಾದರೆ ಲದ್ದಲ–ಬೋಗಿ ಈ ರೀತಿ ಬೇರೆ ಬೇರೆ ಮನೆತನಗಳು ಮತ್ತು ಭಿನ್ನ–ಭಿನ್ನ ಬೆಡಗುಗಳು ಇದ್ದಲ್ಲಿ ಅವರ ವೈವಾಹಿಕ ಸಂಬಂಧಗಳು ಏರ್ಪಡುತ್ತವೆ.

೧. ನರಸಲ್ ಮನೆತನ

ನರಸಲ ಮನೆತನದವರು ಪಾಯಲ್ ಎಂಬ ಬೇಡಗುವನ್ನು ಹೊಂದಿದ್ದು. ಪಾಯಲ್ ಎಂದರೆ ಕನ್ನಡದಲ್ಲಿ "ಕಿರಸಲಿ ಪಲ್ಯ" ಎಂದರ್ಥ, ಕಿರಸಲಿ ಪಲ್ಯ ಈ ಮನೆತನದವರ ಕಲಚಿಹ್ನೆಯಾಗಿದೆ. ಮತ್ತು ಮನೆತನದವರ ಮನೆದೇವರು ನಂಜುಂಡೇಶ್ವರ ಎಂದು ಈ ಮನೆತನದವರು ಕಿರಸಲಿ ಪಲ್ಯ ವನ್ನು ಯಾವುದೇ ಸಮಯ ಬಂದರು ಉಪಯೋಗಿಸುವುದಿಲ್ಲ, ತಿನ್ನುವುದಿಲ್ಲ ಮತ್ತು ತುಳಿಯುದಿಲ್ಲ, ಅದನ್ನು ಕಿತ್ತಿ ಎಸೆಯುದಿಲ್ಲ, ಯಾರಿಗೂ ದಾನಮಾಡುವುದಿಲ್ಲ. ಈ ಪಂಗಡದವರು ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದಿಲ್ಲ ಈ ಪಲ್ಯವನ್ನು ಕೊಳ್ಳುವುದಿಲ್ಲ ಮತ್ತು ಮಾರುವುದಿಲ್ಲ ಅದನ್ನು ಪೂಜ್ಯ

ಬಾವನೆಯಿಂದ ನೋಡುತ್ತಾರೆ. ಅದನ್ನು ತಿಂದರೆ, ಎಸೆದರೆ ಮತ್ತು ಉಪಯೋಗಿಸಿದರೆ ತಾವು ತಮ್ಮ ಮನೆಯ ದೇವರ ವಿರುದ್ಧ ಕೆಲಸ ಮಾಡಿದ ಹಾಗೆ ಎಂದು ಭಾವಿಸಿಕೊಂಡಿದ್ದಾರೆ. ಇವರು ತಮ್ಮ ಕುಲದೇವರಾದ ನಂಜುಂಡೇಶ್ವೇರನಿಗೆ ನಡೆದುಕೊಳ್ಳುತ್ತಾರೆ ಮತ್ತು ಪೂಜಿಸುತ್ತಾರೆ ಹಬ್ಬ ಹುಣ್ಣಿಮೆ, ಅಮವಾಸ್ಯೆ ಜಾತ್ರೆ ಬಂದರೆ ನಂಜುಂಡೇಶ್ವರನಿಗೆ ಹೋಗಿ ಪೊಜಿಸಿಕೊಂಡು ಬಂದ ಮೇಲೆಯೇ ಮುಂದಿನ ಕಾರ್ಯಕ್ರಮವನ್ನು ಪ್ರಾರಂಭಿಸುತ್ತಾರೆ. ಆದರೆ ಮಾಲ ಸಮುದಾಯದ ಬೇರೆ ಮನೆತನದವರು ಮತ್ತು ಬೇರೆ ಬೆಡಗುದವರು ಕಿರಸಲಿ ಪಲ್ಯವನ್ನು ತಿನ್ನುಬಹುದು ಆದರೆ ನರಸಲ್ ಮನೆತನದವರು ಮಾತ್ರ ಉಪಯೋಗಿಸುವಂತಿಲ್ಲ. ಎಂದು ಕ್ಷೇತ್ರಕಾರ್ಯದ ಮುಖಾಂತರ ತಿಳಿಯಲಾಯಿತು.

೨. ಗುಂಡರೆಡ್ಡಿ ಮನೆತನದವರು

ಈ ಮನೆತನದವರು ಇರುಕುಳ ಎಂಬ ಬೆಡಗುವನ್ನು ಹೊಂದಿದ್ದು ಇರುಕುಳ ಎಂದರೆ ಚಳ್ಳಿಹಣ್ಣು ಎಂದು ಅರ್ಥ. ಚಳ್ಳಿಹಣ್ಣು ಈ ಮನೆತನದವರ ಕುಲಚಿಹ್ನೆಯಾಗಿದೆ. ಹಾಗೂ ಈ ಮನೆತನದವರ ಮನೆದೇವರು ಮಲ್ಲಯ್ಯ ಮತ್ತು ಹುಲಿಗೇಮ್ಮ. ಇವರು ಚಳ್ಳಿ ಹಣ್ಣನ್ನು ತಿನ್ನುವಂತಿಲ್ಲ. ಈ ಹಣ್ಣು ಅಡವಿಯಲ್ಲಿ ಸಿಗುತ್ತದೆ ಈ ಹಣ್ಣನ್ನು ಚಿಕ್ಕವರಾಗಲಿ–ಹಿರಿಯರಾಗಲಿ ಈ ಮನೆತನಕ್ಕೆ ಸಂಬಂಧಪಟ್ಟವರು ಯಾರು ತಿನ್ನುವಂತಿಲ್ಲ. ಈ ಹಣ್ಣಿನ ಗಿಡವನ್ನು ಕಡಿಯುವಂತಿಲ್ಲ, ಚಳ್ಳಿಹಣ್ಣು ಮತ್ತು ಅದರ ಗಿಡವನ್ನು ಪೂಜ್ಯ ಭಾವನೆಯಿಂದ ಕಾಣುತ್ತಾರೆ. ವಿಶೇಷವಾದ ಸಂದರ್ಬದಲ್ಲಿ ಅಂದರೆ ಮದುವೆ, ಅಮವಾಸ್ಯ, ಹುಣ್ಣಿಮೆ ಈ ಮನೆತನದವರ ಮನೆಯಲ್ಲಿ ಯಾವುದೇ ಕಾರ್ಯಕ್ರಮಗಳು ಜರುಗಿದರು ಚಳ್ಳಿ ಹಣ್ಣಿನ ಗಿಡವನ್ನು ಪೂಜೆಮಾಡಿದ ನಂತರ ಮಂದಿನ ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತಾರೆ. ಆದರೆ ಚಳ್ಳಿಹಣ್ಣಿನ ಗಿಡಗಳು ಇಂದು ಸಿಗುವುದು ಅಪರೂಪವಾಗಿದೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು. ಆದರೂ ಆ ಗಿವನ್ನು ಅಡವಿಯಲ್ಲಿ ಹುಡುಕಿ ಪೂಜಿಸುತ್ತೇವೆ ಎಂದು ಮಾಹಿತಿ ನೀಡಿದರು.

೩. ಲದ್ದಲ ಮನೆತನದವರು

ಲದ್ದಲ ಮನೆತನದವರ ಗೋತ್ರ ಶೇಶಂದ್ರ ಎಂದು. ಶೇಶಂದ್ರ ಎಂದರೆ ನಾಗರಹೆಡೆ ಎಂದರ್ಥ. ನಾಗರಹೆಡೆ ಈ ಮನೆತನದವರ ಕುಲಚಿಹ್ನೆಯಾಗಿದೆ. ಈ ಮನೆತನದವರು ನಾಗರ ಹಾವನ್ನು ಸಾಯಿಸುವುದಿಲ್ಲ ವಿಶೇಷ ಕಾರ್ಯಕ್ರಮ, ಹಬ್ಬ–ಹುಣ್ಣಿಮೆ ಅಮವಾಸ್ಯೆ ಬಂದರೆ ನಾಗರಹೆಡೆಗೆ ಪೂಜೆ ಸಲ್ಲಿಸಿ ನಂತರ ಕಾರ್ಯಕ್ರಮ ಮುಂದುವರೆಸುತ್ತಾರೆ. ಮನೆಯ ಜಗುಲಿಯ ಮೇಲೆ ನಾಗರಹೆಡೆಯ ಮೂರ್ತಿ ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ಒಂದು ವೇಳೆ ನಾಗರ ಹಾವು ಕಂಡಕೂಡಲೇ ಅದನ್ನು ಸಾಯಿಸಿದರೆ ತಮ್ಮ ಮನೆಯದೇವರ ವಿರುದ್ಧ ನಡೆದುಕೊಂಡ ಹಾಗೆ ಎಂದು ಭಾವಿಸಿಕೊಳ್ಳುತ್ತಾರೆ. ಅಥವಾ ಅವರ ಮನೆತನಕ್ಕೆ ಅಪಾಯಕಾರಿ ಎಂದು ತಿಳಿದುಕೊಳ್ಳುತ್ತಾರೆ. ಈ ಮನೆತನದವರು ಹನುಮಪ್ಪನಿಗೆ ಪೂಜಿಸುತ್ತಾರೆ ಮತ್ತು ಹರಕೆಯನ್ನು ಹೊತ್ತುಕೊಂಡು ನಡೆದುಕೊಳ್ಳುತ್ತಾರೆ.

೪. ಹುಳ್ಳಿ ಮನೆತನದವರು

ಈ ಪಂಗಡದವರು ಮದ್ದಿನೀರು ಎಂಬ ಗೋತ್ರ (ಬೆಡಗು)ವನ್ನು ಹೊಂದಿದ್ದು ಮದ್ದಿನೀರು, ಹಳೆಯ ನೀರು ಅಂದರೆ ಮೊದಲಿನ ನೀರು ಮೂರು ನಾಲ್ಕು ದಿನಗಳಿಂದ ಸಂಗ್ರಹಿಸಿದ ನೀರು ಇದು ಈ ಪಂಗಡದವರ ಕುಲಚಿಹ್ನೆಯಾಗಿದೆ. ಈ ಪಂಗಡದವರ ಮೂರು ಮಾಲ್ಕು ದಿವಸಗಳಿಂದ ಸಂಗ್ರಹಿಸಿದ ನೀರನ್ನು ಕುಡಿಯುವದಿಲ್ಲ ಮತ್ತು ಉಪಯೋಗಿಸುವುದಿಲ್ಲ, ಆ ನೀರಿನಿಂದ ಸ್ನಾನ ಮಾಡುವುದಿಲ್ಲ, ಬಟ್ಟೆ ತೊಳೆಯುವುದಿಲ್ಲ, ಅಡುಗೆ ಮಾಡುವುದಿಲ್ಲ. ಒಂದು ವೇಳೆ ಮೊದಲಿನ ನೀರು ಉಪಯೋಗಿಸಿದ್ದಲ್ಲಿ ಅವರಿಗೆ ಅಪಾಯ ಮತ್ತು ತಮ್ಮ ಮನೆಯ ದೇವರಿಗೆ ವಿರುದ್ದವಾಗಿ ನಡೆದುಕೊಂಡಂತೆ ತಮಗೆ ಒಳ್ಳೆಯದಾಗುವುದಿಲ್ಲ ಎಂಬ ಭಾವನೆ ಈ ಮನೆತನದವರಲ್ಲಿದೆ ಆದ್ದರಿಂದ ಹಳೆ ನೀರನ್ನು ಈ ಪಂಗಡದವರು ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಈ ಪಂಗಡದವರ ಆರಾಧ್ಯ ದೇವರು ಮೈಸೂರಿನ ಶ್ರೀ ಚಾಮುಂಡೇಶ್ವರಿ ಎಂದು ಈ ಪಂಗಡದವರ ಗಂಡು ಮಕ್ಕಳ ಮದುವೆ ಬಂದರೆ ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗಿ ದೇವರಿಗೆ ಉಡಿ ತುಂಬಿ. ಟಗರಿನ ಬ್ಯಾಟಿ ಮಾಡಿ ತಮ್ಮ ಬಂದುಗಳಿಗೆಲ್ಲಾ ಊಟ ಬಡಿಸುತ್ತಾರೆ. ಮದುವೆ ಒಂದು ವಾರ ಮುಂಚಿತವಾಗಿ ಇದ್ದಾಗ ಚಾಮುಂಡೇಶ್ವರಿಗೆ ಹೋಗಿ ಬ್ಯಾಟಿ ಮಾಡಿದ ನಂತರವೆ ಮದುವೆಯನ್ನು ಮಾಡಿಕೊಳ್ಳುತ್ತಾರೆ. ಹೆಣ್ಣುಮಕ್ಕಳ ಮದುವೆ ಇದ್ದರೆ ಈ ಪಂಗಡದವರು ಟಗರಿನ ಬ್ಯಾಟಿ ಮಾಡುವುದಿಲ್ಲ. ಈ ಸಂಪ್ರದಾಯವನ್ನು ಈ ಮನೆತನದವರು ಇವತ್ತಿಗೂ ಮುಂದುವರೆಸಿಕೊಂಡು ಬರುತ್ತಿದ್ದಾರೆ.

೫. ಬಂಗಾರಿ ಮನೆತನ

ಈ ಮನೆತನದವರು ಪಶುನೀಳ ಎಂಬ (ಬೆಡಗು)ವನ್ನು ಹೊಂದಿದ್ದು, ಪಶುನೀಳ ಎಂದರೆ ಅರಿಶಿಣ ಕೊಂಬು ಎಂದರ್ಥ. ಇದು ಈ ಮನೆತನದವರ ಕುಲಚಿಹ್ನೆಯಾಗಿದೆ. ಅರಿಶಿಣವನ್ನು ಇವರು ಪೂಜ್ಯಭಾವನೆಯಿಂದ ಕಾಣುತ್ತಾರೆ. ಇವರು ಮದುವೆ ಸಂದರ್ಭದಲ್ಲಿ, ಋತುಮತಿಯಾದವರಿಗೆ ಬಾಣಂತಿಯರಿಗೆ ಮತ್ತು ಮಧು ಮಕ್ಕಳಿಗೆ ಅರಿಶಿಣವನ್ನು ಮೈಗೆ ಹಚ್ಚುವದಿಲ್ಲ. ಮದುವೆಯ ಕಂಕಣಕ್ಕಾಗಿಯು ಈ ಮನೆತನದವರು ಅರಿಶಿಣ ಕೊಂಬನ್ನು ಕಟ್ಟುವುದಿಲ್ಲ. ಊಟದ ಸಾಂಬಾರಿಗೆ, ಊಟದ ಪಲ್ಯಕ್ಕೆ ಇನ್ನಿತರ ಯಾವುದೇ ಅಡುಗೆ ಸಾಮಗ್ರಿಗೆ ಮತ್ತು ಮನೆಮದ್ದಾಗಿ ಇವರು ಅರಿಶಿಣವನ್ನು ಉಪಯೋಗಿಸುವುದಿಲ್ಲ ಮತ್ತು ಅರಿಶಿಣವನ್ನು ಯಾರಿಗೂ ಧಾನವಾಗಿ ಕೊಡುವುದಿಲ್ಲ, ಅದನ್ನು ಮಾರಾಟ ಮಾಡುವುದಿಲ್ಲ, ಇನ್ನಿತರ ಯಾವುದೇ ಕಾರ್ಯಕ್ರಮಗಳಿಗೂ ಅರಿಶಿಣವನ್ನು ಬಳಸುವುದಿಲ್ಲ. ಈ ಮನೆತನದವರು ಹಳದಿ ಬಟ್ಟೆಯನ್ನು ಹಾಕಿಕೊಳ್ಳುವುದಿಲ್ಲ, ಮನೆಗೆ ಹಳದಿ ಬಣ್ಣವನ್ನು ಉಪಯೋಗಿಸಿ ಅಚ್ಚುವದಿಲ್ಲ ಒಂದು ವೇಳೆ ಉಪಯೋಗಿಸಿದ್ದೇ ಆದರೆ ತಮ್ಮ ದೇವರಿಗೆ ವಿರುದ್ದವಾಗಿ ನೆಡೆದಂತೆ ಮತ್ತು ದ್ರೋಹ ಮಾಡಿದಂತೆ ಎಂಬ ನಂಬಿಕೆ ಈ ಪಂಗಡದವರದ್ದಾಗಿರುತ್ತದೆ ಈ ಸಂಪ್ರದಾಯವನ್ನು ಈ ಮನೆತನದವರು ಇವತ್ತೀಗೂ ಇ ನಿಯಮಗಳನ್ನು ಪಾಲಿಸುತ್ತಾ ಇದ್ದಾರೆ ಎಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದು ಬಂದಿತು.

೬. ಬೋಗಿ ಮನೆತನದವರು

ಈ ಮನೆತನದವರು ನರೇಂದ್ರ ಎಂಬ ಬೆಡಗು ಹೊಂದಿದ್ದು ನರೇಂದ್ರ ಎಂದರೆ ನಟರಾಜ ಎಂದರ್ಥ. ಇದು ಈ ಮನೆತನದವರ ಕುಲಚಿಹ್ನೆಯಾಗಿದೆ. ನಟರಾಜನನ್ನು ಇವರು ಪೂಜ್ಯ

ಭಾವನೆಯಿಂದ ಕಾಣುತ್ತಾರೆ. ಈ ಮನೆತನದವರಲ್ಲಿ ಒಳ್ಳೆಯ ಕೆಲಸ ಕಾರ್ಯಗಳು ಜರುಗಬೇಕಾದರೆ ಮೊದಲು ನಟರಾಜನಿಗೆ ಪೂಜಿಸಿದ ನಂತರವೆ ಕಾರ್ಯಕ್ರಮಗಳನ್ನು ಪ್ರಾರಂಭಮಾಡುತ್ತಾರೆ. ಇವರು ಸುಂಕ್ಲಮ್ಮ ಎಂಬ ಹೆಣ್ಣು ದೇವರನ್ನು ತಮ್ಮ ಆರಾಧ್ಯ ದೇವರನ್ನಾಗಿಸಿಕೊಂಡಿದ್ದಾರೆ. ಪ್ರತಿಯೊಂದು ಕಾರ್ಯಕ್ರಮಗಳು ನಡೆದರು ಸುಂಕ್ಲಮ್ಮ ದೇವರಿಗೆ ಹೋಗಿ ದರ್ಶನ ಪಡೆದುಕೊಂಡು ಬರುತ್ತಾರೆ. ಆ ದೇವರಿಗೆ ಹೋಗಿ ಬಂದ ನಂತರ ಬೇರೆ ಬೇರೆ ಕಾರ್ಯಕ್ರಮಗಳನ್ನು ಪ್ರಾರಂಭಿಸುತ್ತಾರೆ. ಈ ಮನೆತನದವರಲ್ಲಿ ಈ ಪದ್ಧತಿ ಇವತ್ತಿಗೂ ಪ್ರಚಲಿತವಿದೆ.

೭. ಬಂದೂಕ ಮನೆತನ

ಈ ಮನೆತನದವರು ಸೈನೀಳು ಎಂಬ ಬೆಡಗು ಹೊಂದಿದ್ದು ಸೈನೀಳು ಎಂದರೆ ಸಿಹಿನೀರು ಎಂದರ್ಥ. ಸಿಹಿನೀರು ಈ ಮನೆತನದವರ ಕುಲಚಿಹ್ನೆಯಾಗಿದೆ. ಈ ಮನೆತನದವರು ದಿನಾಲು ಕುಡಿಯಲು, ಮದುವೆ ಇನ್ನಿತರ ಸಭೆ– ಸಮಾರಂಭಗಳಿಗೆ ಸಿಹಿ ನೀರನ್ನು ಬಳಸುವುದಿಲ್ಲ. ಸಿಹಿನೀರು ಇದ್ದರೆ ಅದಕ್ಕೆ ಸ್ವಲ್ಪ ಉಪ್ಪು ಹಾಕಿ ಉಪಯೋಗಿಸುತ್ತಾರೆ. ಉಪ್ಪು ಹಾಕದೇ ಹಾಗೇ ನೀರನ್ನು ಕುಡಿದರೆ ತಮಗೆ ತಮ್ಮ ಮನೆತನಕ್ಕೆ ಒಳ್ಳೆಯದು ಆಗುವುದಿಲ್ಲ ಎಂಬ ನಂಬಿಕೆ ಇವರಲ್ಲಿದೆ. ಈ ಪದ್ಧತಿಯನ್ನು ಈ ಮನೆತನದವರು ಇವತ್ತಿಗೂ ಮುಂದುವರೆಸಿಕೊಂಡು ಬಂದಿದ್ದಾರೆ. ಇವರು ಹೆಚ್ಚಾಗಿ ಯೂಮನೂರಪ್ಪ ದೇವರಿಗೆ ಪೂಜಿಸುತ್ತಾರೆ.

೮. ಬಬ್ಬಲ ಮನೆತನ:

ಈ ಮನೆತನದವರು ಕರಿನೀಳು– ನಲ್ಲನೀಳು ಎಂಬ ಬೆಡಗುವನ್ನು ಹೊಂದಿದ್ದು. ಕರಿನೀಳು ಎಂದರೆ ಕರಿನೀರು ಎಂದರ್ಥ ಇದು ಈ ಮನೆತನದವರ ಕುಲ ಚಿಹ್ನೆಯಾಗಿದೆ. ಈ ಮನೆತನದವರು ಕಪ್ಪು ಇದ್ದಂತಹ ವಸ್ತುವನ್ನು ಉಪಯೋಗಿಸುವುದಿಲ್ಲ ಮತ್ತು ಮದುವೆ ಸಮಯದಲ್ಲಿ ಕರಿನೀರಿನಿಂದ ಮದುಮಕ್ಕಳಿಗೆ ದೃಷ್ಠಿ ತೆಗೆಯುದಿಲ್ಲ. ಕರಿದಾರವನ್ನು ಕೊರಳಿಗೆ ಹಾಕಿಕೊಳ್ಳುವುದಿಲ್ಲ. ಕರಿಬಟ್ಟೆಗಳನ್ನು ಮೈಗೆ ಹಾಕಿಕೊಳ್ಳುವುದಿಲ್ಲ. ಕರಿಬಣ್ಣವನ್ನು ಮನೆಗೆ ಹಚ್ಚುವುದಿಲ್ಲ ಮಕ್ಕಳಿಗೆ ಕರಿಕಾಡಿಗೆ ಹಚ್ಚುವುದಿಲ್ಲ. ಕಪ್ಪು ವಸ್ತುಗಳನ್ನು ಮಾರಾಟ ಮಾಡುವುದಿಲ್ಲ. ಒಟ್ಟಿನಲ್ಲಿ ಕಪ್ಪು ವಸ್ತುಗಳನ್ನು ಈ ಮನೆತನದವರು ಉಪಯೋಗಿಸುವುದಿಲ್ಲ. ಕಪ್ಪು ವಸ್ತುವನ್ನು ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಈ ಮನೆತನದವರು ಈ ಪದ್ಧತಿಯನ್ನು ಇವತ್ತಿಗೂ ಆಚರಿಸುತ್ತಾರೆ. ಈ ಮನೆತನದವರು ಆಂಜನೇಯ ದೇವರನ್ನು ತಮ್ಮ ಆರಾಧ್ಯ ದೇವರನ್ನಾಗಿಕೊಂಡಿದ್ದಾರೆ.

೯. ಪರ್ವತ್ತೆರ ಮನೆತನ:

ಈ ಮನೆತನದವರು ವೀರಶೆಟ್ಟಿ ಎಂಬ ಬೆಡಗವನ್ನು ಹೊಂದಿದ್ದು ತೆಲುಗಿನಲ್ಲಿ ವೀರಶಟ್ ಎಂದು ಅರ್ಥ ವೀರಶಟ್ ಎಂದರೆ ಕನ್ನಡದಲ್ಲಿ ಸಾಹಸ. 'ಸಾಹಸ' ಎಂಬುದು ಪರ್ವತ್ತೇರ ಮನೆತನದವರ ಕುಲಚಿಹ್ನೆಯಾಗಿದೆ ಈ ಮನೆತನದವರು ತಮ್ಮ ಸಾಹಸಿ ಕಲೆಗಳಾದ ವಂಶಪಾರಂಪರಿಕ ಪ್ರದರ್ಶನ ಕಲೆಗಳನ್ನು ಆಡುವಂತಿಲ್ಲ ಈ ಮನೆತನದವರಿಗೆ ಎಂತಹ ಅರ್ಥಿಕ ತೊಂದರೆ ಬಂದರೂ ತಮ್ಮ

ಸಾಹಸಿ ವಂಶಪಾರಂಪರ್ಯ ಆಟಗಳನ್ನು ಆಡಿ ಸಾಹಸವನ್ನು ಎಲ್ಲರ ಎದುರಿಗೆ ಪ್ರದರ್ಶಿಸಿ ಜೀವನ ಸಾಗಿಸುವುದಿಲ್ಲ. ಈ ಮನೆತನದವರು ತಮ್ಮ ವಂಶಪಾರಂಪರ ಪ್ರದರ್ಶನ ಕಲೆಗಳನ್ನಾಡಿ ಜೀವನ ಸಾಗಿಸಿದರೆ ತಮ್ಮ ಕುಲದೇವರ ವಿರುದ್ಧ ನಡೆದುಕೊಂಡ ಹಾಗೆ ಮತ್ತು ವಂಶಪಾರಂಪರ್ಯ ಆಟಗಳನ್ನಾಡಿದರೆ ಈ ಮನೆತನದವರಿಗೆ ಒಳ್ಳೆಯದಾಗುವುದಿಲ್ಲ ಎಂಬ ನಂಬಿಕೆ ಈ ಮನೆತನದರಲ್ಲಿ ಇರುತ್ತದೆ. ಮತ್ತು ಈ ಮನೆತನದವರು ತಮ್ಮ ವಂಶಪಾರಂಪರಿಕ ಕಲೆಗಳಿರಬಹುದು ಇನ್ನಿತರೆ ಯಾವುದೇ ಪ್ರದರ್ಶನ ಕಲೆಗಳನ್ನು ಸಹ ಆಡುವುದಾಗಲಿ, ಕಲಿಯುವುದಾಗಲಿ ಮಾಡುವಂತಿಲ್ಲ. ಪರ್ವತ್ತೇರ ಎಂಬ ಮನೆತನದವರು ಹಿಂದಿನ ಕಾಲದಲ್ಲಿದ್ದ ತಮ್ಮ ಪ್ರದರ್ಶನ ಕಲೆಗಳಿಗಾಗಿ ಉಪಯೋಗಿಸುವ ಸಾಮಾಗ್ರಿಗಳನ್ನು ವಾಧ್ಯಪರಿಕರಗಳನ್ನು ಪೂಜಿಸುತ್ತಾರೆ ಮತ್ತು ಪೂಜ್ಯಭಾವನೆಗಳಿಂದ ಕಾಣುತ್ತಾರೆ. ಈ ಮನೆತನದವರು ಪ್ರತಿ ಅಮಾವಾಸ್ಯೆ ಮತ್ತು ಹುಣ್ಣಿಮೆಗೊಮ್ಮೆ ತಮ್ಮ ಪ್ರಮುಖ ವಾಧ್ಯಪರಿಕರಗಳಾದ ಕತ್ತಿ, ದಾಲ್‌ಪಟ, ಕೋಲು, ಚಕ್ರ, ಒಂದು ಸಂಬಾಳ ಇವುಗಳನ್ನು ಸ್ವಚ್ಚವಾಗಿ ತೊಳೆದು ಜಗುಲಿಯ ಮುಂದೆ ಇಟ್ಟು ವಿಭೂತಿ ಕುಂಕುಮ ಹಚ್ಚಿ ಸಿಹಿ ನೈವೇದ್ಯವನ್ನು ಎಡೆ ಹಿಡಿದು ಪೂಜಿಸುತ್ತಾರೆ. ಈ ಮನೆತನದವರ ಮನೆಯಲ್ಲಿ ಒಳ್ಳೆಯ ಕಾರ್ಯಕ್ರಮಗಳು ಜರುಗಿದರೆ ತಮ್ಮ ಪ್ರದರ್ಶನ ಕಲೆಗಳ ಪ್ರಮುಖ ಸಾಮಗ್ರಿಗಳನ್ನು ತಮ್ಮ ತಮ್ಮ ಮನೆಯ ಜಗುಲಿಯ ಮುಂದೆ ಪೂಜಿಸಿದ ನಂತರ ತಮ್ಮ ತಮ್ಮ ಮನೆಯ ಕುಲದೇವರಾದ ಚೌಡೇಶ್ವರಿ ದೇವಸ್ಥಾನಕ್ಕೆ ಮನೆಯ ಸದಸ್ಯರೆಲ್ಲರು ಹೋಗಿ ಆ ದೇವರಿಗೆ ಪೂಜಿಸಿಕೊಂಡು ಮನೆಗೆ ಬಂದ ನಂತರ ಮುಂದಿನ ಒಳ್ಳೆಯ ಕಾರ್ಯಕ್ರಮಗಳನ್ನು ಪ್ರಾರಂಭಿಸುತ್ತೇವೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು. ಈ ಎಲ್ಲಾ ಪದ್ಧತಿ ಈ ಮನೆತನದವರಲ್ಲಿ ಇವತ್ತಿಗೂ ಪ್ರಚಲಿತವಿದೆ.

೧೦. ಮುತ್ತುಗಾರರ ಮನೆತನ

ಈ ಮನೆತನದವರು ಪಗಡಿಶೆಟ್ಟಿ ಗೋತ್ರವನ್ನು ಹೊಂದಿದ್ದು ಪಗಡಿಶೆಟ್ಟಿ ಎಂದರೆ ತೆಲುಗಿನಲ್ಲಿ ಪಗಡಂ(ಪಗಡಿಶಾಲಿ)ಎಂದು ಅರ್ಥ ವೀರಶಟ್ ಎಂದರೆ ಕನ್ನಡದಲ್ಲಿ ಹವಳದಮಣಿ ಅಥವಾ ಹವಳದಸರ ಎಂಬ ಅರ್ಥವನ್ನು ಕೊಡುತ್ತದೆ. ಹವಳ ಎಂಬುದು ಮತ್ತು ಗಾರರು ಎಂಬ ಮನೆತನದವರ ಕುಲಚಿಹ್ನೆಯಾಗಿರುತ್ತದೆ. ಈ ಮನೆತನದವರು ಹವಳದ ಮಣಿಗಳನ್ನು ಯಾವುದೇ ಕೆಲಸಕಾರ್ಯಗಳಿಗಾಗಲಿ ಕೊರಳಿನಲ್ಲಿ ಆಥವಾ ಮುತ್ತೈದೆ ಹೆಣ್ಣುಮಕ್ಕಳು ತಮ್ಮ ಮಾಂಗಲ್ಯದ ಸರದಲ್ಲಿ ಹವಳದ ಮಣಿಗಳನ್ನು ಪೋಣಿಸಿಕೊಂಡು ಹಾಕುವಂತಿಲ್ಲ. ಮತ್ತು ಈ ಪಂಗಡದವರ ಚಿಕ್ಕ ಮಕ್ಕಳ ಕೊರಳಿನಲ್ಲಿಯು ಸಹ ಹವಳದ ಸರವನ್ನು ಹಾಕುವಂತಿಲ್ಲ. ಈ ಮನೆತನದವರು ಹವಳದ ಮಣಿಗಳನ್ನು ಹವಳದ ಸರಗಳನ್ನು ಹವಳದಿಂದ ತಯಾರಿಸಿದ ವಸ್ತುಗಳನ್ನು ತಲೆಯ ಮೇಲೆ ಹೊತ್ತುಕೊಂಡು ತಾವು ವ್ಯಾಪಾರ ಮಾಡುವ ಸ್ಟೇಶನರಿ ಸಾಮಾನುಗಳ ಜೊತೆಗೆ ಮಾರುವಂತಿಲ್ಲ ಮತ್ತು ಈ ಮನೆತದವರು ಹವಳದ ಮಣಿಗಳನ್ನು ಕಾಲಿನಿಂದ ತುಳಿಯುವಂತಿಲ್ಲ. ಅವುಗಳನ್ನು ಧಾನವಾಗಿ ಯಾರಿಗೂ ಕೊಡುವಂತಿಲ್ಲ. ಹಾಗೆನಾದರು ಮಾಡಿದವರು ತಮ್ಮ ಕುಲದ ದೇವರ ವಿರುದ್ಧ ಮತ್ತು ತಮ್ಮ ಮನೆಯ ಕುಲದ ಆರಾಧ್ಯ ದೇವರಿನ ವಿರುದ್ಧ ನಡೆದುಕೊಂಡಂತೆ ಮತ್ತು

ತಮಗೆ ಒಳ್ಳೆಯದಗುವುದಿಲ್ಲ ಎಂಬ ಭಾವನೆ ಈ ಮನೆತನದವರಲ್ಲಿ ಇರುತ್ತದೆ. ಹವಳವೆಂಬ ಮಣಿ ಅಥವಾ ವಸ್ತು ಈ ಮನೆತನದವರಿಗೆ ಪವಿತ್ರವಾದ ವಸ್ತುವಾಗಿರುತ್ತದೆ. ಈ ಮನೆತನದವರು ಹವಳವನ್ನು ಪೂಜ್ಯಭಾವನೆಯಿಂದ ಕಾಣುತ್ತಾರೆ. ಈ ಮನೆತನದವರು ಒಂದು ಶುದ್ಧವಾದ ಹವಳದ ಸರವನ್ನು ಮಣಿ ಅಥವಾ ಹವಳದ ಸರವನ್ನು ತೆಗೆದುಕೊಂಡು ಹವಳದ ಸರವನ್ನು ಸ್ವಚ್ಚವಾಗಿ ಶುದ್ಧ ನೀರಿನಲ್ಲಿ ತೊಳೆದು ತಮ್ಮ ಮನೆಯ ಜಗಲಿಯ ಮೇಲೆ ಇಟ್ಟು ಆ ಹವಳದ ಸರಕ್ಕೆ ವಿಭೂತಿ ಕುಂಕುಮ ಹಚ್ಚಿ ಸಿಡಿ ಎಡೆಯನ್ನು ಹಿಡಿದು ಅಮವಾಸ್ಯೆ ಮತ್ತು ಹುಣ್ಣಿಮೆಯ ದಿವಸ ಪೂಜಿಸುತ್ತಾರೆ. ಮತ್ತು ಈ ಪಂಗಡದವರ ಮನೆಯಲ್ಲಿ ಹೆಣ್ಣುಮಕ್ಕಳು ಅಥವಾ ಗಂಡು ಮಕ್ಕಳ ಮದುವೆಗಳಿದ್ದರೆ, ಒಳ್ಳೆಯ ಕಾರ್ಯಕ್ರಮಗಳಿದ್ದರೆ ತಮ್ಮ ಜಗಲಿಯ ಮೇಲಿದ್ದ ಹವಳದ ಸರವನ್ನು ಪೂಜಿಸಿದ ನಂತರ ತಮ್ಮ ಮನೆಯ ಆರಾಧ್ಯ ದೇವರಾದ ಚೆನ್ನಮಲ್ಲಯ್ಯನ ದೇವಸ್ಥಾನಕ್ಕೆ ಮನೆಯ ಸದಸ್ಯರೆಲ್ಲರೂ ಕೂಡಿಕೊಂಡು ಹೋಗಿ ಆ ದೇವರಿಗೆ ಪೂಜಿಸಿಕೊಂಡು ಮನೆಗೆ ಬಂದ ನಂತರ ಮದುವೆಯ ಕಾರ್ಯಕ್ರಮಗಳು ಇನ್ನಿತರ ಒಳ್ಳೆಯ ಕಾರ್ಯಕ್ರಮಗಳನ್ನು ಪ್ರಾರಂಭಿಸುತ್ತಾರೆ. ಈ ಪದ್ಧತಿಯನ್ನು ಈ ಮನೆತನದವರಲ್ಲಿ ಇವತ್ತಿಗೂ ಪ್ರಚಲಿತವಿದೆ. ಈ ಮನೆತನದವರು ಹಾವೇರಿ ಜಿಲ್ಲಾದಲ್ಲಿ ವಾಸವಾಗಿರುವ ಮಾಲ ಸಮುದಾಯದವರಲ್ಲಿ ಕಾಣಸಿಗುತ್ತಾರೆ.

೧೧. ಗುಡ್ಡದರ ಮನೆತನ

ಗುಡ್ಡದರ ಎಂಬ ಮನೆತನದವರು 'ಕೊಂಡೂಳ್' ಎಂಬ ಬೆಡಗುವನ್ನು ಹೊಂದಿದ್ದು ಕೊಂಡೂಳ್ ಎಂದರೆ ಕನ್ನಡದಲ್ಲಿ "ಕೆಂಪುಆಕಳ" ಎಂದು ಅರ್ಥ. ತೆಲುಗಿನಲ್ಲಿ ಕೆಂಪುಆಕಳ ಎಂದರೆ "ಎರಾವುಲ್" ಎಂದು ಅರ್ಥವಾಗುತ್ತದೆ. ಕೆಂಪುಆಕಳ ಎಂಬುದು ಗುಡ್ಡದರ ಎಂಬ ಮನೆತನದವರ ಕುಲಚಿಹ್ನೆಯಾಗಿರುತ್ತದೆ. ಈ ಪಂಗಡದವರ ಮನೆಯಲ್ಲಿ ಕೆಂಪುಆಕಳಿನ ಕರು ಜನಿಸಿದರೆ ಆ ಕರುವನ್ನು ಮಾರುವುದಿಲ್ಲ. ಒಂದು ವೇಳೆ ಮನೆಯಲ್ಲಿ ಜನಿಸಿದ ಕೆಂಪು ಆಕಳವನ್ನು ಈ ಮನೆತನದವರು ಮಾರಾಟ ಮಾಡಿದರೆ ತಮ್ಮ ಮನೆತನಕ್ಕೆ ಒಳ್ಳೆಯದು ಆಗುವುದಿಲ್ಲ ಎಂದು ನಂಬಿಕೊಂಡಿದ್ದಾರೆ. ಮತ್ತು ಈ ಮನೆತನದವರು ಕೆಂಪು ಆಕಳವನ್ನು ಪೂಜ್ಯಭಾವನೆಯಿಂದ ಕಾಣುತ್ತಾರೆ. ಪ್ರತಿ ಅಮಾವಾಸ್ಯೆ ಹುಣ್ಣಿಮೆಗೊಮ್ಮೆ ಈ ಮನೆತನದವರು ಕೆಂಪು ಆಕಳವನ್ನು ಅಥವಾ ಕೆಂಪು ಆಕಳಿನ ಮೂರ್ತಿಯನ್ನು ಶುದ್ಧವಾದ ನೀರಿನಿಂದ ತೊಳೆದು ವಿಭೂತಿ ಕುಂಕುಮ ಹಚ್ಚಿ ಸಿಹಿ ಎಡೆಯನ್ನು ನೈವೇದ್ಯ ಹಿಡಿದು ಪೂಜಿಸುತ್ತಾರೆ. ನಂತರ ಆ ಸಿಹಿ ಹೆಡೆಯನ್ನೆಲ್ಲಾ ತಮ್ಮ ಮನೆಯಲ್ಲಿದ್ದ ಕೆಂಪು ಆಕಳಿಗೆ ತಿನಿಸುವ ಪದ್ಧತಿ ಈ ಮನೆತನದವರಲ್ಲಿ ಇರುತ್ತದೆ. ಕೆಲವೊಂದು ಮನೆಯಲ್ಲಿ ಜೀವಂತ ಆಕಳಿರದಿದ್ದರೆ ಕೆಂಪು ಆಕಳಿನ ಮೂರ್ತಿಯನ್ನು ಜಗುಲಿಯ ಮೇಲಿಟ್ಟು ಪೂಜಿಸುತ್ತಾರೆ. ಈ ಆಚರಣೆಯನ್ನು ಇವರು ಇವತ್ತಿಗೂ ಆಚರಿಸುತ್ತಾರೆ.

ಈ ಮನೆತನದವರ ಮನೆಗಳಲ್ಲಿ ಹೆಣ್ಣುಮಕ್ಕಳು ಅಥವಾ ಗಂಡುಮಕ್ಕಳ ಮದುವೆಗಳು ಮತ್ತು ಒಳ್ಳೆಯ ಕಾರ್ಯಗಳು ಜರುಗಬೇಕಾದರೆ ಈ ಪಂಗಡದವರ ಕುಲಚಿಹ್ನೆಯಾದ 'ಕೆಂಪುಆಕಳ' ಅಥವಾ ಕೆಂಪುಆಕಳಿನ ಮೂರ್ತಿಗೆ ಸ್ವಚ್ಚವಾಗಿ ತೊಳೆದು ವಿಭೂತಿ ಕುಂಕುಮ ಹಚ್ಚಿ ಸಿಹಿ ಎಡೆಯ

ನೈವೆದ್ಯ ಹಿಡಿದು ಊದಿನಕಡ್ಡಿ ಬೆಳಗಿ ಪೂಜಿಸುತ್ತಾರೆ. ನಂತರ ಈ ಮನೆತನದವರ ಆರಾಧ್ಯದೇವರಾದ ಅಥವಾ ಕುಲದೇವರಾದ ಬಂಡಿದುರಗಮ್ಮ ದೇವರಿಗೆ ಹೋಗಿ ಪೂಜೆಗಳನ್ನು ಸಲ್ಲಿಸಿಕೊಂಡು ಮನೆಗೆ ಬಂದ ನಂತರ ಒಳ್ಳೆಯ ಶುಭಕಾರ್ಯಕ್ರಮಗಳನ್ನು ಈ ಮನೆತನದವರು ಪ್ರಾರಂಭಿಸುತ್ತಾರೆ. ಇದರಿಂದ ಈ ಮನೆತನದವರಿಗೆ ತಮ್ಮ ಮನೆತನಕ್ಕೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಇರುತ್ತದೆ ಎಂಬುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿತು. ಈ ಮನೆತನದವರು ಮನೆಯ ಗಂಡುದೇವರು ಆರಾಧ್ಯದೇವರು ಶ್ರೀಶೈಲ ಮಲ್ಲಯ್ಯನಿಗೆ ಆಗಿರುತ್ತಾನೆ. ಈ ಮನೆತನದವರು ಪ್ರತಿ ಶಿವರಾತ್ರಿಗೊಮ್ಮೆ ಶ್ರೀಶೈಲ ಮಲ್ಲಯ್ಯನಿಗೆ ಕಾಲ್ನಡಿಗೆಯಿಂದ ನಡೆದುಕೊಂಡು ಹೋಗಿ ಪೂಜೆ ಸಲ್ಲಿಸುತ್ತಾರೆ.

ಬಹುತೇಕ ಮಾಲಾ ಸಮುದಾಯದ ಕುಟುಂಬಗಳು ಈ ಬೆಡಗುಗಳನ್ನೇ ಉಪನಾಮಗಳಾಗಿ ಇರಿಸಿಕೊಳ್ಳುವರು. ಇವುಗಳಲ್ಲದೆ ಯುದ್ಧ ಸಂಬಂಧಿ ಉಪಕರಣಗಳ ಹೆಸರುಗಳೂ ಉಪನಾಮಗಳಾಗಿರುವುದನ್ನು ಆಂಧ್ರದಲ್ಲಿ ಕಾಣಬಹುದು. ಉದಾಹರಣೆಗೆ ಭಲ್ಲೆಮು, ಮದ್ದಲಿ, ಕೊಮ್ಮಲು ಇತ್ಯಾದಿ. ಇವುಗಳು ಹಿಂದೆ ಯುದ್ಧ ಸಂದರ್ಭದಲ್ಲಿ ಬಳಕೆಗೊಳ್ಳುತ್ತಿದ್ದು ಆ ಉಪಕರಣಗಳನ್ನು ಮಾಲ ಸಮುದಾಯದವರು ಬಳಸುತ್ತಿದ್ದರು ಎಂದು ಹೇಳುವರು. ಕರ್ನಾಟಕದ ಮಾಲ (ಪರ್ವತ ಮಲ್ಲಯ್ಯ) ಸಮುದಾಯದವರ ಹನ್ನೊಂದು ಮನೆತನಗಳು ಮತ್ತು ಹನ್ನೊಂದು ಬೆಡಗುಗಳು ಇರುತ್ತವೆ. ಇವರ ಬೆಡಗುಗಳು ತೆಲುಗು ಶಬ್ದದಲ್ಲಿ ಇರುತ್ತವೆ. ಅವರ ಬೆಡಗುಗಳನ್ನು ಕನ್ನಡ ಭಾಷೆಗೆ ಅನುವಾದಿಸಿದಾಗ ಅವುಗಳು ಕಿರಸಲಿಪಲ್ಯ, ಚಳ್ಳಿಹಣ್ಣು, ನಾಗರಹೆಡೆ, ಹಳೆನೀರು, ಅರಿಶಿಣಕೊಂಬು, ನಟರಾಜ, ಸಿಹಿನೀರು, ಕರಿನೀರು, ಸಾಹಸ, ಕೆಂಪು ಆಕಳು, ಈ ಜೀವಿ ಮತ್ತು ಸಜೀವಿಯ ವಸ್ತುಗಳನ್ನು ಪ್ರತಿನಿಧಿಸುತ್ತವೆ. ತಮ್ಮ ಬೆಡಗಿನ ಆಧಾರದ ವಸ್ತುಗಳ ಮೇಲೆ ವಿಧಿ ನಿಷೆಧಗಳಿರುತ್ತವೆ. ಈ ಸಮುದಾಯದವರು ತಮ್ಮ ಬೆಡಗಿನಾಧಾರದ ವಸ್ತುಗಳನ್ನು ಬಹಳ ಪೂಜ್ಯಭಾವನೆಯಿಂದ ಕಾಣುತ್ತಾರೆ. ಆ ವಸ್ತುಗಳನ್ನು ಇವರು ಉಪಯೋಗಿಸುವುದಿಲ್ಲ ಅವುಗಳನ್ನು ಆಯಾ ಬೆಡಗಿನ ಮನೆತನದವರು ತಮಗೆ ಸೇರಿದ ವಸ್ತುವನ್ನು ಉಪಯೋಗಿಸಿದರೆ ಆ ಮನೆತನಕ್ಕೆ ಅಪಾಯ ಎಂಬ ನಂಬಿಕೆ ಅವರಲ್ಲಿದೆ. ಬಹುಶಃ ಇವರು ಯೋಧಕುಲದವರಾಗಿರುವದರಿಂದ ಆಯಾ ಮನೆತನದವರು ತಮ್ಮ ಬೆಡಗಿನ ವಸ್ತುವನ್ನು ಉಪಯೋಗಿಸಿ ಯುದ್ದಕ್ಕೆಂದು ಹೊದವರು ಮರಣವನ್ನು ಅಪ್ಪಿರಬಹುದು. ಇಲ್ಲವೆ ಇನ್ನಿತರ ಸಮಸ್ಯಗಳಾಗಿರಬಹುದು. ಆ ಒಂದು ಸಂಸ್ಕೃತಿಯನ್ನು ಮಾಲ ಸಮುದಾಯದ ಪ್ರತಿಯೊಂದು ಕುಟುಂಬದವರು ಇವತ್ತಿಗೂ ಕಟ್ಟುನಿಟ್ಟಾಗಿ ಅನುಸರಿಸುತ್ತಾ ಬರುತ್ತಿದ್ದಾರೆ.

ಮಾಲ (ಪರ್ವತ ಮತ್ತಯ್ಯ) ಸಮುದಾಯದವರ ಕುರಿತು ಮಾಹಿತಿಯನ್ನು ಪಡೆದಾಗ ಈ ಸಮುದಾಯದವರು ಇತಿಹಾಸದ ಪುಟಗಳಲ್ಲಿ ಮಿಂಚಿ ಮರೆಯಾಗಿದ್ದರೆಂದು ತಿಳಿದು ಬರುತ್ತದೆ. ಇವರು ಮಧ್ಯಯುಗಿನ ರಾಜಪ್ರಭುತ್ವದ ಕಾಲದಿಂದಲು ಆಡಳಿತದೊಂದಿಗೆ ಗುರುತಿಸಿಕೊಂಡು ಕೆಳಮಟ್ಟದ ಜೀವನ ನಡೆಸಿರುವುದು ಮತ್ತು ನಡೆಸುತ್ತಿರುವುದು ಕಾಣುತ್ತದೆ. ಇಂತಹ ಹಲವು ಸಮುದಾಯಗಳು ಪ್ರಾದೇಶಿಕ ಭಿನ್ನತೆಯನ್ನು ಕಂಡುಕೊಂಡಿವೆ ಅಂದರೆ ಮಾಲ ಸಮುದಾಯದವರನ್ನು ಆಯಾ ರಾಜ್ಯಕ್ಕೆ ಅನುಗುಣವಾಗಿ ಮತ್ತು ಆಯಾ ಜಿಲ್ಲೆಗನುಗುಣವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ.

ಆದರೆ ಕರ್ನಾಟಕದ ಮಾಲ ಸಮುದಾಯದವರನ್ನು ಪರ್ವತ ಮಲ್ಲಯ್ಯನವರು ಎಂದು ಕರೆಯುತ್ತಾರೆ. ಈ ರೀತಿ ಕರೆಯಲು ಕಾರಣವೇನೆಂದರೆ, ಇವರು ಆಂಧ್ರಪ್ರದೇಶದ ನಲ್ಲಮಲೆಯ ಪರ್ವತದವರೆಂದು ಕರ್ನಾಟಕ್ಕೆ ವಲಸೆ ಬಂದು ತಮ್ಮ ಆರಾಧ್ಯ ದೇವರು ಶ್ರೀಶೈಲ ಮಲ್ಲಯ್ಯ ಎಂದು ಹೇಳಿಕೊಂಡು ಮೊದಲು ಈ ಸಮುದಾಯದ ಎಲ್ಲಾ ಮನೆತನದವರು ಎಲ್ಲಾ ಬೆಡಗಿನವರು ಶ್ರೀಶೈಲ ಮಲ್ಲಯ್ಯನ ಮೂರ್ತಿಯನ್ನು ಮಾತ್ರ ಆರಾಧಿಸುತ್ತಿದ್ದರು. ಆದರೆ ಕಾಲಾಂತರದಲ್ಲಿ ಒಂದೊಂದು ಮನೆತನದವರು ಮತ್ತು ಒಂದೊಂದು ಬೆಡಗಿಗನುಗುಣವಾಗಿ ಬೇರೆ ಬೇರೆ ದೇವರುಗಳನ್ನು ತಮ್ಮ ತಮ್ಮ ಮನೆತನದ ಆರಾಧ್ಯ ದೇವರು ಎಂದು ಗುರುತಿಸಿಕೊಂಡಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಯಿತು.

೨.೬ ಮಾಲ ಸಮುದಾಯದ ಹುಟ್ಟಿನ ಕುರಿತಾಗಿ ಪ್ರಚಲಿತವಿರುವ ಪೌರಾಣಿಕ ಕಥೆಗಳು

೧. ಮಾದಿಗ ಹಾಗೂ ಮಾಲರ ಮೂಲ ಹಂಪಿಯೆಂದು ಪೌರಾಣಿಕ ಕಥೆಯೊಂದನ್ನು ಹೇಳುವರು. ಮಾತಂಗ ಮಹಾಮುನಿ ಹಾಗೂ ಮಾಲ ಮಹಾಮುನಿಯರು ಹಂಪೆಯ ವಿರೂಪಾಕ್ಷನ ಪುತ್ರರಂತೆ. ವಿರೂಪಾಕ್ಷನ ಕೃಪಾಕಟಾಕ್ಷದಿಂದಲೇ ಈ ಈರ್ವರು ಅಣ್ಣ ತಮ್ಮಂದಿರು ದೀರ್ಘ ತಪ್ಪಸ್ಸು ಮಾಡಿ ಸೃಷ್ಟಿಯ ರಹಸ್ಯವನ್ನು ಅರಿತರಂತೆ. ಮತಂಗ ಮಹಾಮುನಿಯು ಮತಂಗ ಪರ್ವತದಲ್ಲಿ ತಪ್ಪಸ್ಸು ಮಾಡಿದರೆ ಮಾಲ ಮಹಾಮುನಿಯು ಮಾಲ (ಮಾಲ್ಯವಂತ) ಪರ್ವತದಲ್ಲಿ ಕುಳಿತು ತಪಸ್ಸು ಮಾಡಿದನಂತೆ. ತಪಸ್ಸು ಮಾಡಿ ವಿರೂಪಾಕ್ಷನನ್ನು ಒಲಿಸಿಕೊಂಡ ತರುವಾಯ ಮತಂಗನಿಗೆ ಕೈಕಸುಬುಗಾರಿಕೆ ಮಾಡಿ ಬದುಕೆಂದು ಹಾಗೂ ಮಾಲನಿಗೆ ಭೂಮಿಯನ್ನು ಹದ ಮಾಡಿ ಉತ್ತಿಬಿತ್ತಿ ಬೆಳೆಯನ್ನು ಬೆಳೆಯೆಂದು ಆಶೀರ್ವದಿಸಿದನಂತೆ. ಈ ಇಬ್ಬರೂ ಅಣ್ಣ ತಮ್ಮಂದಿರಲ್ಲಿ ದೊಡ್ಡವನು ಮಾಲ ಆಗಿದ್ದು ಅವನು ಬಲಗೈಯನ್ನು ಪ್ರತಿನಿಧಿಸಿದನಂತೆ. ಸಣ್ಣವನು ಮತಂಗನಾಗಿದ್ದು ಅಣ್ಣನು ಉತ್ತಿ ಬಿತ್ತಿ ಬೆಳೆಯಲು ಬೇಕಾದ ಉಪಕರಣಗಳನ್ನು ತಯಾರಿಸಿಕೊಟ್ಟನಂತೆ. ಸಣ್ಣವನಾದ ಮತಂಗನು ಎಡಗೈಯ ಪ್ರತಿನಿಧಿಯಾದನಂತೆ. ಮಾಲನ ವಂಶಜರು ಭೂಮಿಯನ್ನು ಆಧರಿಸಿ ಜೀವಿಸಿದರೆ ಮತಂಗನ ವಂಶಜರು ಕಸುಬುಗಾರಿಕೆ ಅವಲಂಭಿಸಿದರಂತೆ. ಇಂದಿಗೂ ಹಂಪೆಯಲ್ಲಿ ಮಾಲವಂತ, ಮತಂಗ ಪರ್ವತಗಳಿವೆಯೆಂದೂ ಅವು ತಮಗೆ ಪವಿತ್ರವಾದವುಗಳೆಂದೂ ಮಾದಿಗ, ಮಾಲ ಸಮುದಾಯದವರು ತಿಳಿಸುವರು.

೨. ಮತ್ತೊಂದು ಕಥೆಯ ಪ್ರಕಾರ ಹರಿಶ್ಚಂದ್ರನಿಗೆ ಜಯ ದೊರಕಿದರೆ ತನ್ನ ಮೂವರು ಹೆಂಡತಿಯರನ್ನು ಅರ್ಪಿಸುವುದಾಗಿ ವೀರಭಾಹು ಕಾಳಿ ದೇವತೆಗೆ ಸವಾಲು ಒಡ್ಡಿದನಂತೆ. ವಿಶ್ವಾಮಿತ್ರನು ನೀಡಿದ ಕಿರುಕುಳಗಳನ್ನೆಲ್ಲಾ ಸಹಿಸಿ ಕೊನೆಗೆ ಸತ್ಯಕ್ಕೆ ಜಯವೆಂಬುದನ್ನು ಸಾಬೀತುಮಾಡಿ ಹರಿಶ್ಚಂದ್ರನು ಗೆದ್ದನಂತೆ. ಕಲಿದೇವನಿಗೆ ಕೊಟ್ಟ ಮಾತಿನಂತೆ ವೀರಬಾಹು ತನ್ನ ಮೂವರು ಹೆಂಡತಿಯರನ್ನೂ ಕಾಳಿಯ ದೇವಾಲಯಕ್ಕೆ ಕರೆದೊಯ್ದನಂತೆ. ತಮ್ಮ ಗಂಡ ಕಲಿಗೆ ತಮ್ಮನ್ನು ಅರ್ಪಿಸುವನು ಎಂಬ ಇಂಗಿತವನ್ನರಿತ ಅವನ ಹೆಂಡತಿಯರು ಅದರಿಂದ ಪಾರಾಗಲು ಬೇರೆ ಬೇರೆ ಕಡೆ ಹೋದರಂತೆ. ಮೊದಲನೇ ಹೆಂಡತಿಯು ರೆಡ್ಡಿಭಾಮಲ ಎನ್ನುವವರ ಮನೆಯಲ್ಲಿ ಅಡಗಿ ಕುಳಿತಳಂತೆ. ಎರಡನೇಯವಳು ಪೂರ್ವ ದೇಶಕ್ಕೆ (ಪೋಕನಾಟಿ) ಓಡಿಹೋಗಿ ತಲೆಮರೆಸಿಕೊಂಡಳಂತೆ, ಮೂರನೇವಳು ತಪ್ಪಿಸಿಕೊಳ್ಳಲು ಸಾಧ್ಯವಾಗದೆ ಕೊಳಕು ಬಟ್ಟೆ (ಮುರುಕಿ) ತೊಟ್ಟು ತನ್ನ ಗಂಡ ಹೇಳಿದಂತೆ ಕೇಳಲು ನಿರ್ಧರಿಸಿದಳಂತೆ.

ಹೀಗಾಗಿ ಕಾಳಿಗೆ ಕೊನೆಯ ಹೆಂಡತಿ ಬಲಿಯಾದಳಂತೆ. ಅವಳ ಭಕ್ತಿ ಹಾಗೂ ಪತಿನಿಷ್ಠೆಯನ್ನು ನೋಡಿ ಕಾಳಿಯು ಸಂತುಷ್ಟಳಾಗಿ ಪ್ರಾಣಭಿಕ್ಷೆ ನೀಡಿದಳು ಮತ್ತು ಅವಳ ಕಷ್ಟಕ್ಕೆ ತಾನು ಬೆಂಗಾವಲಾಗಿ ನಿಂತು ಸಹಾಯ ಮಾಡುವುದಾಗಿ ಕಾಳಿಯು ಭರವಸೆ ನೀಡಿದಳಂತೆ. ಈ ವಿಚಾರ ತಿಳಿದ ಮೊದಲ ಮತ್ತು ಎರಡನೆಯ ಹೆಂಡತಿಯರು ತಾವು ನಿಷ್ಠೆಯಿಂದ ಇರದೆ ತಪ್ಪು ಮಾಡಿದೆವು ಎಂದು ದೇವಿಯಲ್ಲಿ ಬೇಡಿಕೊಂಡರಂತೆ. ಆಗ ದೇವಿಯು ನನ್ನ ನೆನಪಿಗಾಗಿ ನೀವಿಬ್ಬರೂ ಬಲಗಡೆ ಸೆರಗನ್ನು ಹಾಕಿಕೊಂಡು ಬೇರೆ ಜನರಿಗಿಂತ ಭಿನ್ನರಾಗಿ ಕಾಣಿರಿ, ಇದೇ ನಿಮಗೆ ಶಿಕ್ಷೆ ಎಂದು ತಿಳಿಸಿದಳಂತೆ. ಅಂದಿನಿಂದ ಭೂಮಿರೆಡ್ಡಿ ಹಾಗೂ ಪೋಕನಾಟಿಯರು ಬಲಗಡೆ ಸೆರಗು ಹಾಕುವರಂತೆ. ವೀರಬಾಹುವಿನ ಹೆಂಡತಿಯರ ವಂಶಜರೇ ತಾವೆಂದೂ ಹೇಳುವರು.

೩. ಮತ್ತೊಂದು ಕಥೆಯ ಪ್ರಕಾರ ಪಾರ್ವತಿ ಪರಮೇಶ್ವರರು ಆಕಾಶದಲ್ಲಿ ಸಂಚರಿಸುತ್ತಿದ್ದಾಗ ಪಾರ್ವತಿಯು ಮುಟ್ಟಾದಳಂತೆ. ಮುಟ್ಟಾದ ಬಟ್ಟೆಯನ್ನು ತೆಗೆದು ಹಾಕಿ ಬೇರೆ ಬಟ್ಟೆ ತೊಟ್ಟಳಂತೆ. ಮುಟ್ಟಾದ ಬಟ್ಟೆಯನ್ನು ತೆಗೆದುಹಾಕಿದಾಗ ಅದು ಭೂಮಿಯ ಮೇಲೆ ಬಿದ್ದಿತಂತೆ. ಪಾರ್ವತಿಯ ಮುಟ್ಟಿನ ರಕ್ತದಿಂದ ಒಂದು ಮಗು ಜನಿಸಿತಂತೆ. ತನ್ನ ಬಟ್ಟೆಯೊಳಗಿಂದ ಹುಟ್ಟಿದ ಮಗನನ್ನು ಗಮನಿಸಿದ ಪಾರ್ವತಿಯು ಮಗನನ್ನೂ ಕೈಲಾಸಕ್ಕೆ ಕರೆದುಕೊಂಡು ಹೋದಳಂತೆ. ಹುಡುಗ ಬೆಳೆದು ಸ್ವಲ್ಪ ದೊಡ್ಡವನಾದ ನಂತರ ಕೈಲಾಸದಲ್ಲಿದ್ದ ನಂದಿ ಇತ್ಯಾದಿ ದನಗಳನ್ನು ಕಾಯುವ ಕಾಯಕ ಕೈಗೊಂಡನಂತೆ. ತನ್ನ ಮಗ ಯಾವ ಕಾರಣಕ್ಕೂ ಕೆನೆ, ಬೆಣ್ಣೆ, ತುಪ್ಪ ಇತ್ಯಾದಿಗಳು ತಿನ್ನದಂತೆ ಪಾರ್ವತಿ ನಿರ್ಭಂಧಿಸಿದ್ದಳಂತೆ. ಆದರೆ ಒಂದು ದಿನ ಪಾರ್ವತಿ ಕಣ್ಮರೆಯಾದ ದಿನ ಹುಡುಗನು ಗಡಿಗೆಯಲ್ಲಿರಿಸಿದ ಕೆನೆಯನ್ನು ಸವಿದುಬಿಟ್ಟನಂತೆ. ಕೆನೆಯ ರುಚಿಗೆ ಮಾರುಹೋದ ಹುಡುಗ ದಿನಂಪ್ರತಿ ಪಾರ್ವತಿಗೆ ತಿಳಿಯದಂತೆ ಕೆನೆ, ಬೆಣ್ಣೆಗಳನ್ನು ಕದ್ದು ತಿನ್ನತೊಡಗಿದನಂತೆ. ಹೀಗೆ ಇದ್ದಾಗ ಒಂದು ದಿನ ದನ ಕಾಯುತ್ತಾ ಹುಡುಗನು ದನದ ದೇಹದಿಂದ ಬರುವ ಕೆನೆ, ಬೆಣ್ಣೆಗಳು ಅಷ್ಟು ರುಚಿಯಾಗಿರುವಾಗ ಅದನ್ನು ಉತ್ಪಾದಿಸುವ ದನ ಇನ್ನೆಷ್ಟು ರುಚಿಯಾಗಿರಬೇಡ ಎಂದು ಆಲೋಚಿಸಿ ದನವನ್ನು ಕೊಂದು ಅದರ ಮಾಂಸದ ರುಚಿ ನೋಡಿದನಂತೆ. ತಮ್ಮ ದನದ ಹಿಂಡಿನಲ್ಲಿ ಒಂದು ದನ ಕಾಣದಿರುವುದನ್ನು ಗಣಾಧೀಶ್ವರರಲ್ಲಿ ಒಬ್ಬನು ಶಿವ ಪಾರ್ವತಿಯರಿಗೆ ವರದಿ ಮಾಡಿದರಂತೆ. ಹುಡುಗನನ್ನು ಕರೆದು ದನ ಎಲ್ಲಿ ಕಳೆದುಹೋಯಿತು ಎಂದು ಕೇಳಿದಾಗ ತಾನು ಮಾಡಿದ ತಪ್ಪನ್ನು ಹುಡುಗ ಒಪ್ಪಿಕೊಂಡನಂತೆ. ಇದನ್ನು ಕೇಳಿ ಸಿಟ್ಟಿಗೆ ಬಂದ ಶಿವನು ಇನ್ನು ಮುಂದೆ ನಿನಗೆ ಕೆನೆ, ಬೆಣ್ಣೆ ಸಿಗದಂತಾಗಲಿ, ಸತ್ತ ದನವನ್ನೇ ತಿಂದು ಜೀವಿಸುವಂತಾಗಲಿ ಎಂದು ಶಾಪಕೊಟ್ಟು ಭೂಮಿಗೆ ತಳ್ಳಿದನಂತೆ. ಅಂದಿನಿಂದ ತಾವು (ಮಾಲ) ಸತ್ತ ದನ ತಿನ್ನುವ ಕುಲದವರಾಗಿ ಮುಂದುವರೆದೆವು ಎನ್ನುವ ಕಥೆಯನ್ನು ಹೇಳುವರು.

೨.೭ ಭೌಗೋಳಿಕ ಪರಿಸರ

ಮಾಲ ಸಮುದಾಯದ ಮೂಲ ನೆಲೆಯ ಮೇಲೆ ತಿಳಿಸಿರುವಂತೆ ಆಂಧ್ರಪ್ರದೇಶವಾಗಿದೆ. ಆದರೆ ಇವರು ಆಂಧ್ರ ಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳಲ್ಲದೆ ರಾಷ್ಟ್ರದ ಇತರ ರಾಜ್ಯಗಳಲ್ಲಿಯೂ

ಕಂಡುಬರುವರು. "ಮಾಲ ಸಮುದಾಯವು ಮೂಲತಃ ಚಾಂದ, ನಾಗಪುರ, ಜಬ್ಬಲಪುರ ಮತ್ತು ಯೆಯೋಟಮಾಲ್ ಜಿಲ್ಲೆಗಳಲ್ಲಿ ಮತ್ತು ಬೆಸ್ತರ್ ರಾಜ್ಯದಲ್ಲಿ ನೆಲೆಸಿರುವರು"[೨೩] (ರಸೆಲ್ ಆರ್ ವಿ:೧೯೯೩:೧೫೬). ಅದೇ ರೀತಿಯಾಗಿ ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ ಇತ್ಯಾದಿ ರಾಜ್ಯಗಳಲ್ಲಿಯೂ ಕಂಡುಬರುವರು.

೨.೮ ಜನಸಂಖ್ಯೆ

ಮಾಲ ಸಮುದಾಯವು ತೆಲುಗು ಜಾತಿಯವರಾಗಿದ್ದು ನೇಕಾರರ ಬಳಿ ಕೂಲಿ ಕೆಲಸ ನಿರ್ವಹಿಸುವವರಾಗಿರುವರು. "೧೯೧೧ರ ಜನಗಣತಿ ಪ್ರಕಾರ ಕೇಂದ್ರಾಡಳಿತ ಪ್ರದೇಶಕ್ಕೆ ಒಳಪಟ್ಟ ಪ್ರದೇಶಗಳಲ್ಲಿ ಇವರು ೧೪,೦೦೦ದಷ್ಟು ಜನಸಂಖ್ಯೆಯನ್ನು ಹೊಂದಿರುವರು"[೨೪] ಎಂದು ತಿಳಿದುಬರುತ್ತದೆ. ೨೦೧೧ರ ಜನಗಣತಿ ಪ್ರಕಾರ ಆಂಧ್ರಪ್ರದೇಶದಲ್ಲಿ ಒಟ್ಟು ೪,೦೬೯,೦೦೦ ಜನಸಂಖ್ಯೆ ಇರುವುದಾಗಿ ದಾಖಲಾಗಿದೆ. ಅದೇ ರೀತಿಯಾಗಿ ತೆಲಂಗಾಣದಲ್ಲಿ ೧,೫೩೪,೦೦೦ ಜನಸಂಖ್ಯೆ ಇದೆ. ಕರ್ನಾಟಕದಲ್ಲಿ ೨೦,೧೦೫ ಜನಸಂಖ್ಯೆ ಇರುವುದಾಗಿ ತಿಳಿದುಬರುವುದು.

ಕೋಷ್ಟಕ ೨.೧: ವಿವಿಧ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾಲ ಸಮುದಾಯದ ಜನಸಂಖ್ಯೆ

ಕ್ರಸಂ	ರಾಜ್ಯಗಳು	ಮಾಲ ಸಮುದಾಯದ ಜನಸಂಖ್ಯೆ
೧	ಆಂಧ್ರ ಪ್ರದೇಶ	೪,೦೬೯,೦೦೦
೨	ತೆಲಂಗಾಣ	೧,೫೩೪,೦೦೦
೩	ಕರ್ನಾಟಕ	೨೦,೧೦೫
೪	ಮಹಾರಾಷ್ಟ್ರ	೧೬,೦೦೦
೫	ಮಧ್ಯಪ್ರದೇಶ	೪,೯೦೦
೬	ಪಾಂಡಿಚೆರಿ (ಕೇ.ಪ್ರ)	೩,೮೦೦
೭	ತಮಿಳ್ನಾಡು	೩,೮೦೦
೮	ಗುಜರಾತ್	೩,೭೦೦
೯	ದೆಹಲಿ	೨,೮೦೦
೧೦	ಪಶ್ಚಿಮ ಬಂಗಾಳ	೨,೫೦೦
೧೧	ಒಡಿಸ್ಸಾ	೧,೪೦೦
೧೨	ಜಾರ್‌ಖಂಡ್	೧,೦೦೦
೧೩	ಕೇರಳ	೮೦೦
೧೪	ಅಸ್ಸಾಂ	೬೦೦

ಕೃಪೆ:೨೦೧೧ರ ಜನಗಣತಿ ವರದಿ

"ಮಹಾರಾಷ್ಟ್ರದಲ್ಲಿ ೧೬,೦೦೦, ಮಧ್ಯಪ್ರದೇಶದಲ್ಲಿ ೪,೯೦೦, ಪಾಂಡಿಚೆರಿ ಹಾಗೂ ತಮಿಳ್ನಾಡಿನಲ್ಲಿ ತಲಾ ೩,೮೦೦, ಗುಜರಾತಿನಲ್ಲಿ ೩,೭೦೦, ದೆಹಲಿಯಲ್ಲಿ ೨,೮೦೦, ಪಶ್ಚಿಮ ಬಂಗಾಲದಲ್ಲಿ ೨,೫೦೦, ಒಡಿಸ್ಸಾದಲ್ಲಿ ೧,೪೦೦, ಝಾರಖಂಡ್‌ನಲ್ಲಿ ೧,೦೦೦, ಕೇರಳದಲ್ಲಿ ೮೦೦ ಹಾಗೂ ಅಸ್ಸಾಂನಲ್ಲಿ ೬೦೦ರಷ್ಟು ಮಾಲ ಜನಸಂಖ್ಯೆ ದಾಖಲಾಗಿರುವುದು."೨೪

ಕರ್ನಾಟಕ ರಾಜ್ಯ

ಭಾರತದ ಐದು ಪ್ರಮುಖ ದಕ್ಷಿಣಾತ್ಯ ರಾಜ್ಯಗಳಲ್ಲಿ ಕರ್ನಾಟಕವು ಅತಿ ದೊಡ್ಡ ರಾಜ್ಯ ಹಾಗೂ ದೇಶದ ಆರನೇ ದೊಡ್ಡ ರಾಜ್ಯವಾಗಿದೆ. ೧೯೭೩ ಕ್ಕೆ ಮೊದಲು ಕರ್ನಾಟಕದ ಹೆಸರು ಮೈಸೂರು ರಾಜ್ಯ ಎಂದಿತ್ತು. ಇದಕ್ಕೆ ಕಾರಣವೇನೆಂದರೆ, ಕರ್ನಾಟಕ ಮೊದಲು ಮೈಸೂರ ಸಂಸ್ಥಾನವನ್ನು ಆಧರಿಸಿತ್ತು. ನಂತರ ೧೯೫೬ ರಲ್ಲಿ ಸುತ್ತಮುತ್ತ ರಾಜ್ಯಗಳ ಕನ್ನಡ ಪ್ರಧಾನ ಪ್ರದೇಶಗಳನ್ನು ಸೇರಿಸಲಾಯಿತು. ಕರ್ನಾಟಕ ಎಂಬುದು "ಕರು+ನಾಡು" ಎಂಬುದರಿಂದ ವ್ಯುತ್ಪತ್ತಿಯನ್ನು ಪಡೆದಿದೆ. ಕರುನಾಡು ಎಂದರೆ ಕಪ್ಪು ಮಣ್ಣಿನ ನಾಡು, ಎತ್ತರದ ಪ್ರದೇಶ ಎಂದರ್ಥ. ಕರ್ನಾಟಕವು ದಕ್ಷಿಣ ಭಾರತ ಪ್ರದೇಶಕ್ಕೊಳಪಟ್ಟಿದೆ. ಕರ್ನಾಟಕದ ರಾಜಧಾನಿ ಬೆಂಗಳೂರು.

ಕರ್ನಾಟಕವು ಪಶ್ಚಿಮದಲ್ಲಿ ಅರಬ್ಬಿ ಸಮುದ್ರದಿಂದ, ವಾಯುವ್ಯದಲ್ಲಿ ಗೋವಾದಿಂದ, ಉತ್ತರದಲ್ಲಿ ಮಹಾರಾಷ್ಟ್ರದಿಂದ, ಪೂರ್ವದಲ್ಲಿ ತೆಲಂಗಾಣ ಮತ್ತು ಆಂಧ್ರಪ್ರದೇಶದಿಂದ, ಆಗ್ನೇಯದಲ್ಲಿ ತಮಿಳುನಾಡಿನಿಂದ, ನೈಋತ್ಯದಲ್ಲಿ ಕೇರಳದಿಂದ ಸುತ್ತುವರಿಯಲ್ಪಟ್ಟಿದೆ.

ಕರ್ನಾಟಕದಲ್ಲಿ ೨೦೧೧ ರ ಜಣಗಣತಿಯಂತೆ ಜನಸಂಖ್ಯೆಯು ೬,೧೧,೩೦,೭೦೪ ಆಗಿದೆ. ಇದರಲ್ಲಿ ಪರುಷರ ಸಂಖ್ಯೆ ೩,೧೦,೫೭,೭೪೨(೫೦,೮೦) ಸ್ತ್ರೀಯರ ಸಂಖ್ಯೆ ೩,೦೦,೭೨,೯೬೨.(೪೯.೧೯) ಇರುತ್ತಾರೆ. ಕರ್ನಾಟಕದ ಒಟ್ಟು ಸಾಕ್ಷರತೆ ೭೫.೬ರಷ್ಟಿರುತ್ತದೆ. ಇದರಲ್ಲಿ ಪುರುಷರ ಸಾಕ್ಷರತೆಯು ೮೨.೮೫ರಷ್ಟು ಇರುತ್ತದೆ. ಮತ್ತು ಸ್ತ್ರೀಯರ ಸಾಕ್ಷರತೆಯು ೬೮,೧೩ರಷ್ಟಿದೆ. ಕರ್ನಾಟಕದಲ್ಲಿರುವ ಒಟ್ಟು ಜಿಲ್ಲೆಗಳು ಮೂವತ್ತು ಇರುತ್ತವೆ.

ಕರ್ನಾಟಕದ ಐದು ಪ್ರದೇಶಗಳು

೧. **ವಾಯುವ್ಯ ಕರ್ನಾಟಕ:** ವಿಜಯಪುರ, ಬಾಗಲಕೋಟ, ಗದಗ, ಧಾರವಾಡ, ಹಾವೇರಿ, ಬೆಳಗಾವಿ, ಉತ್ತರ ಕನ್ನಡ.

೨. **ಈಶಾನ್ಯ ಕರ್ನಾಟಕ:** ಕಲಬುರಗಿ, ಬೀದರ್, ಯಾದಗಿರಿ, ಕೊಪ್ಪಳ, ರಾಯಚೂರ, ಬಳ್ಳಾರಿ.

೩. **ಹಳೇ ಮೈಸೂರು:** ಮೈಸೂರು, ರಾಮನಗರ, ಮಂಡ್ಯ, ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ಚಿಕ್ಕಮಂಗಳೂರು, ಶಿವಮೊಗ್ಗ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಬೆಂಗಳೂರು, ಬೆಂಗಳೂರು ಗ್ರಾಮಾಂತರ.

೪. **ತುಳುನಾಡು:** ಉಡುಪಿ, ದಕ್ಷಿಣ ಕನ್ನಡ.

೫. ಕೊಡಗು: ಮಡಿಕೇರಿ.

ಕರ್ನಾಟಕದ ಮೂರು ವಲಯಗಳು

೧. ಕರಾವಳಿ

೨. ಉತ್ತರ ಒಳನಾಡು

೩. ದಕ್ಷಿಣ ಒಳನಾಡು.

ಮಾಲ(ಪರ್ವತ ಮಲ್ಲಯ್ಯ) ಸಮುದಾಯದವರು ಕರ್ನಾಟಕದ ಏಳು ಜಲ್ಲೆಗಳಾದ ಕೊಪ್ಪಳ, ಗದಗ, ಧಾರವಾಡ, ಮೈಸೂರ, ರಾಯಚೂರ, ಶಿವಮೊಗ್ಗ, ಹಾವೇರಿ ಈ ಜಿಲ್ಲೆಗಳಲ್ಲಿ ನೆಲೆಸಿರುತ್ತಾರೆ. ಆಧಾರ: ಕರ್ನಾಟಕ ವಿಕಿಪಿಡಿಯಾ

ಕೋಷ್ಟಕ ೨.೨: ಕರ್ನಾಟಕ ರಾಜ್ಯದಲ್ಲಿಯ ಪರಿಶಿಷ್ಟ ಜಾತಿ ಹಾಗೂ ಮಾಲ ಸಮುದಾಯದ ಜನಸಂಖ್ಯಾ ವಿವರ

ಕ್ರಸಂ		ಪರಿಶಿಷ್ಟ ಜಾತಿಯಜನಸಂಖ್ಯೆ			ಮಾಲ ಸಮುದಾಯದಜನಸಂಖ್ಯೆ		
	ಜಿಲ್ಲೆಗಳು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
೧	ಉಡುಪಿ	೭೫,೪೨೯	೩೬,೯೮೮	೩೮,೪೪೧	೬೧	೩೪	೨೭
೨	ಉತ್ತರಕನ್ನಡ	೧,೧೬,೪೩೧	೫೭,೮೪೧	೫೮,೫೯೦	೧,೫೨೦	೭೨೧	೭೯೯
೩	ಕಲಬುರ್ಗಿ	೬,೪೮,೭೮೨	೩,೩೦,೦೯೧	೩,೧೮,೬೯೧	೭೨೮	೩೫೪	೩೭೪
೪	ಕೊಡಗು	೭೩,೫೮೪	೩೫,೭೫೯	೩೭,೮೨೫	೫	೩	೨
೫	ಕೊಪ್ಪಳ	೨,೫೮,೬೦೮	೧,೨೯,೩೪೧	೧,೨೯,೨೬೭	೧,೩೧೨	೬೬೭	೬೪೫
೬	ಕೋಲಾರ	೪,೬೫,೮೬೭	೨,೩೨,೫೪೬	೨,೩೩,೩೨೧	೪೩೪	೨೨೩	೨೧೧
೭	ಗದಗ	೧,೭೪,೧೯೬	೮೭,೭೪೫	೮೬,೪೫೧	೫೫	೨೬	೨೯
೮	ಚಾಮರಾಜ ನಗರ	೨,೫೯,೪೪೫	೧,೩೦,೮೯೪	೧,೨೮,೫೫೧	೩	೨	೧
೯	ಚಿಕ್ಕಬಳ್ಳಾಪುರ	೩,೧೨,೫೬೫	೧,೫೭,೬೨೮	೧,೫೪,೯೩೭	೫೩೫	೨೬೩	೨೭೨
೧೦	ಚಿಕ್ಕಮಗಳೂರು	೨,೫೩,೬೫೧	೧,೨೫,೦೧೬	೧,೨೮,೬೩೫	೨೨	೧೨	೧೦
೧೧	ಚಿತ್ರದುರ್ಗ	೩,೮೯,೧೧೭	೧,೯೬,೮೧೯	೧,೯೨,೨೯೮	೫	೩	೨
೧೨	ತುಮಕೂರು	೫,೦೬,೯೦೧	೨,೫೪,೫೩೫	೨,೫೨,೩೬೬	೩೮	೧೭	೨೧
೧೩	ದಕ್ಷಿಣಕನ್ನಡ	೧,೪೮,೧೭೮	೭೩,೩೨೪	೭೪,೮೫೪	೮೮	೪೪	೪೪
೧೪	ದಾವಣಗೆರೆ	೩,೯೨,೫೯೫	೧,೯೮,೨೯೯	೧,೯೪,೨೯೬	೧೮	೧೨	೬
೧೫	ಧಾರವಾಡ	೧,೭೭,೮೫೫	೮೯,೧೩೭	೮೮,೭೧೮	೩,೯೭೭	೧,೯೫೧	೨,೦೨೬
೧೬	ಬಳ್ಳಾರಿ	೫,೧೭,೪೦೯	೨,೫೮,೫೮೨	೨,೫೮,೮೨೭	೯೧೫	೪೬೦	೪೫೫

೧೭	ಬಾಗಲಕೋಟೆ	೩,೧೯,೧೪೯	೧,೫೮,೧೩೫	೧,೬೧,೦೧೪	೪೬	೨೦	೨೬
೧೮	ಬೀದರ್	೩,೯೯,೭೮೫	೨,೦೪,೨೮೦	೧,೯೫,೫೦೫	೨೧೪	೧೦೫	೧೦೯
೧೯	ಬೆಳಗಾವಿ	೫,೭೭,೪೧೮	೨,೮೯,೦೯೬	೨,೮೮,೩೨೨	೬೬	೪೩	೨೩
೨೦	ಬೆಂಗಳೂರು ನಗರ	೧೧,೯೮,೩೮೫	೬,೦೭,೭೨೫	೫,೯೦,೬೬೦	೫,೧೯೯	೨,೬೮೨	೨,೫೧೭
೨೧	ಬೆಂಗಳೂರು ಗ್ರಾಮಾಂತರ	೨,೧೩,೭೦೦	೧,೦೭,೪೨೪	೧,೦೬,೨೭೬	೧೯	೯	೧೦
೨೨	ಮೈಸೂರು	೫,೩೬,೬೪೩	೨,೬೯,೩೩೧	೨,೬೭,೩೧೨	೬೨	೨೫	೩೭
೨೩	ಮಂಡ್ಯ	೨,೬೫,೨೯೪	೧,೩೧,೬೭೫	೧,೩೩,೬೧೯	೧೦	೬	೪
೨೪	ಯಾದಗಿರಿ	೨,೭೩,೩೧೫	೧,೩೭,೨೦೪	೧,೩೬,೧೧೧	೩೮೬	೨೦೫	೧೮೧
೨೫	ರಾಮನಗರ	೨,೦೩,೮೧೯	೧,೦೨,೬೧೨	೧,೦೧,೨೦೭	೧೨	೭	೫
೨೬	ರಾಯಚೂರು	೪,೦೦,೯೩೩	೨,೦೦,೩೫೯	೨,೦೦,೫೭೪	೪,೦೮೬	೨,೦೫೬	೨,೦೩೦
೨೭	ವಿಜಯಪುರ	೪,೪೨,೭೭೩	೨,೨೬,೪೪೦	೨,೧೬,೩೩೩	೨೩	೧೧	೧೨
೨೮	ಶಿವಮೊಗ್ಗ	೩,೦೮,೧೫೮	೧,೫೩,೫೪೬	೧,೫೪,೬೧೨	೨೧೩	೧೧೨	೧೦೧
೨೯	ಹಾಸನ	೩,೪೫,೦೩೧	೧,೬೯,೯೬೧	೧,೭೫,೦೭೦	೨೪	೧೧	೧೩
೩೦	ಹಾವೇರಿ	೨,೧೯,೯೭೬	೧,೧೨,೨೧೨	೧,೦೭,೭೬೪	೨೯	೧೬	೧೩
	ಒಟ್ಟು ೦.೧೯	೧,೦೪,೭೪,೯೯೨	೫೨,೬೪,೫೫	೫೨,೧೦,೪೭	೨೦,೧೫	೧೦,೧೦	೧೦,೦೫

ಕೃಪೆ:೨೦೧೧ರ ಜನಗಣತಿ ವರದಿ

ಕರ್ನಾಟಕದಲ್ಲಿ ಒಟ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ೧,೦೪,೭೪,೯೯೨ ಇದೆ. ಇದರಲ್ಲಿ ಮಾಲ ಸಮುದಾಯದ ಜನಸಂಖ್ಯೆಯು ೨೦,೧೦೫ ಇದೆ. ಅಂದರೆ ಕರ್ನಾಟಕದ ಪರಿಶಿಷ್ಟ ಜಾತಿಗಳಲ್ಲಿ ಮಾಲ ಸಮುದಾಯವು ಶೇಕಡ ೦.೧೯ರಷ್ಟು ಮಾತ್ರವಿದೆ. ಕರ್ನಾಟಕದ ಮೂವತ್ತು ಜಿಲ್ಲೆಗಳಲ್ಲಿಯೂ ಈ ಸಮುದಾಯವಿದೆಯೆಂಬುದನ್ನು ೨೦೧೧ರ ಜನಗಣತಿಯ ಮೂಲಕ ತಿಳಿಯುವುದು. ಬೆಂಗಳೂರು ನಗರ ಜಿಲ್ಲೆಯಲ್ಲಿ (೫,೧೯೯)ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮಾಲ ಸಮುದಾಯವು ಕಂಡುಬಂದಿದೆ. ಅದರತರುವಾಯ ರಾಯಚೂರು ಜಿಲ್ಲೆಯಲ್ಲಿ (೪,೦೮೬) ಹೆಚ್ಚಿನ ಸಂಖ್ಯೆಯಲ್ಲಿರುವವರು. ಮೂರನೇ ಸ್ಥಾನದಲ್ಲಿ ಧಾರವಾಡ (೩,೯೭೭)ಜಿಲ್ಲೆಯಿರುವುದು. ಧಾರವಾಡದ ನಂತರದ ಸ್ಥಾನವು ಕೊಪ್ಪಳದ್ದಾಗಿದೆ. ಚಿತ್ರದುರ್ಗ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಮಾಲ ಸಮುದಾಯದ ಕನಿಷ್ಟ ಜನಸಂಖ್ಯೆ ದಾಖಲಾಗಿದೆ. ಒಟ್ಟಾರೆಯಾಗಿ ಜನಸಂಖ್ಯಾ ದಾಖಲಾತಿಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಮಾಲ ಸಮುದಾಯ ಕಂಡುಬಂದಿದೆ. ಮೂವತ್ತು ಜಿಲ್ಲೆಗಳಲ್ಲಿ ಬೆಂಗಳೂರು ನಗರದಲ್ಲಿ ಮಾಲ ಸಮುದಾಯದ ಜನಸಂಖ್ಯೆ ಗರಿಷ್ಟ ಶೇಕಡ ೨.೨೩ ರಷ್ಟುದಾಖಲಾಗಿದೆ. ಕನಿಷ್ಟ ಶೇಕಡ ೦.೦೧ ಚಾಮರಾಜನಗರದಲ್ಲಿ ೨೦೧೧ರ ಜನಗಣತಿ ವರದಿಯಲ್ಲಿ ದಾಖಲಾಗಿರುವುದು ಕಾಣುತ್ತೇವೆ.

ಕೋಷ್ಟಕ ೨.೩: ಮಾಲ ಸಮುದಾಯದ ನಗರ ಹಾಗೂ ಗ್ರಾಮೀಣ ಪ್ರದೇಶದ ಜನಸಂಖ್ಯೆ


ಕ್ರಸಂ	ಜಿಲ್ಲೆಗಳು	ಮಾಲ ಸಮುದಾಯದ ಒಟ್ಟು ಜನಸಂಖ್ಯೆ			ಮಾಲ ಸಮುದಾಯದ ನಗರ ಜನಸಂಖ್ಯೆ			ಮಾಲ ಸಮುದಾಯದ ಗ್ರಾಮೀಣ ಜನಸಂಖ್ಯೆ		
		ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
೧	ಉಡುಪಿ	೬೧	೩೪	೨೭	೨೩	೨೦	೩	೩೮	೧೪	೨೪
೨	ಉತ್ತರಕನ್ನಡ	೧,೫೨೦	೭೨೧	೭೯೯	೧,೩೬೫	೬೩೮	೭೨೭	೧೫೫	೮೩	೭೨
೩	ಕಲಬುರ್ಗಿ	೭೨೮	೩೫೪	೩೭೪	೩೮	೨೧	೧೭	೬೯೦	೩೩೩	೩೫೭
೪	ಕೊಡಗು	೫	೩	೨	೩	೨	೧	೨	೧	೧
೫	ಕೊಪ್ಪಳ	೧,೩೧೨	೬೬೭	೬೪೫	೩೨೪	೧೭೯	೧೪೫	೯೮೮	೪೯೮	೪೯೦
೬	ಕೋಲಾರ	೪೩೪	೨೨೩	೨೧೧	೬೬	೨೯	೩೭	೩೬೮	೧೯೪	೧೭೪
೭	ಗದಗ	೫೫	೨೬	೨೯	೨೧	೧೨	೯	೩೪	೧೪	೨೦
೮	ಚಾಮರಾಜನಗರ	೩	೨	೧	೨	೧	೧	೧	೧	೦
೯	ಚಿಕ್ಕಬಳ್ಳಾಪುರ	೫೩೫	೨೬೩	೨೭೨	೮೪	೪೨	೪೨	೪೫೧	೨೨೧	೨೩೦
೧೦	ಚಿಕ್ಕಮಗಳೂರು	೨೨	೧೨	೧೦	೨	೧	೧	೨೦	೧೧	೯
೧೧	ಚಿತ್ರದುರ್ಗ	೫	೩	೨	೫	೩	೨			
೧೨	ತುಮಕೂರು	೩೮	೧೭	೨೧	೨೨	೧೨	೧೦	೧೬	೫	೧೧
೧೩	ದಕ್ಷಿಣಕನ್ನಡ	೮೮	೪೪	೪೪	೪೪	೨೮	೧೬	೪೪	೧೬	೨೮
೧೪	ದಾವಣಗೆರೆ	೧೮	೧೨	೬	೧೬	೧೧	೫	೨	೧	೧
೧೫	ಧಾರವಾಡ	೩,೯೭೭	೧,೯೫೧	೨,೦೨೬	೩,೯೫೧	೧,೯೩೫	೨,೦೧೬	೨೬	೧೬	೧೦

೧೬	ಬಳ್ಳಾರಿ	೯೧೫	೪೬೦	೪೫೫	೮೭೪	೪೩೧	೪೪೩	೪೧	೨೯	೧೨
೧೭	ಬಾಗಲಕೋಟೆ	೪೬	೨೦	೨೬	೯	೨	೭	೩೭	೧೮	೧೯
೧೮	ಬೀದರ್	೨೧೪	೧೦೫	೧೦೯	೧೮೪	೯೦	೯೪	೩೦	೧೫	೧೫
೧೯	ಬೆಳಗಾವಿ	೬೬	೪೩	೨೩	೫೩	೩೬	೧೭	೧೩	೭	೬
೨೦	ಬೆಂಗಳೂರು ನಗರ	೫,೧೯೯	೨,೬೮೨	೨,೫೧೭	೫,೦೯೪	೨,೬೨೩	೨,೪೭೧	೧೦೫	೫೯	೪೬
೨೧	ಬೆಂಗಳೂರು ಗ್ರಾಮಾಂತರ	೧೯	೯	೧೦	೧೦	೨	೮	೯	೭	೨
೨೨	ಮೈಸೂರು	೬೨	೨೫	೩೭	೫೮	೨೩	೩೫	೪	೨	೨
೨೩	ಮಂಡ್ಯ	೧೦	೬	೪	೧೦	೬	೪			
೨೪	ಯಾದಗಿರಿ	೩೮೬	೨೦೫	೧೮೧	೯೨	೫೧	೪೧	೨೯೪	೧೫೪	೧೪೦
೨೫	ರಾಮನಗರ	೧೨	೭	೫	೧೦	೫	೫	೨	೨	೦
೨೬	ರಾಯಚೂರು	೪,೦೮೬	೨,೦೫೬	೨,೦೩೦	೩,೭೭೬	೧,೮೯೩	೧,೮೮೩	೩೧೦	೧೬೩	೧೪೭
೨೭	ವಿಜಯಪುರ	೨೩	೧೧	೧೨	೭	೩	೪	೧೬	೮	೮
೨೮	ಶಿವಮೊಗ್ಗ	೨೧೩	೧೧೨	೧೦೧	೨೦೫	೧೦೮	೯೭	೮	೪	೪
೨೯	ಹಾಸನ	೨೪	೧೧	೧೩	೧೫	೮	೭	೯	೩	೬
೩೦	ಹಾವೇರಿ	೨೯	೧೬	೧೩	೧೧	೬	೫	೧೮	೧೦	೮
	ಒಟ್ಟು	೨೦,೧೦೫	೧೦,೧೦೦	೧೦,೦೦೫	೧೬,೩೭೪	೮,೨೧೧	೮,೧೬೩	೩,೭೩೧	೧,೮೮೯	೧,೮೪೨

ಕೃಪೆ:೨೦೧೧ರ ಜನಗಣತಿ ವರದಿ

ಮಾಲ ಸಮುದಾಯವು ಕರ್ನಾಟಕದ ನಗರ ಪ್ರದೇಶದಲ್ಲಿಯೇ ಹೆಚ್ಚಾಗಿ ನೆಲೆಸಿರುವರು. ೨೦೧೧ರ ಜನಗಣತಿ ಪ್ರಕಾರ ನಗರ ಪ್ರದೇಶದಲ್ಲಿ ನೆಲೆನಿಂತ ಮಾಲ ಸಮುದಾಯದ ಒಟ್ಟು ಜನಸಂಖ್ಯೆ ೧೬,೩೭೪ ಇರುವುದು. ಇದರಲ್ಲಿ ಪುರುಷರು ೮,೨೧೧ ಹಾಗೂ ಮಹಿಳೆಯರು ೮,೧೬೩ ಜನಸಂಖ್ಯೆಯನ್ನು ಹೊಂದಿರುವರು. ಗ್ರಾಮೀಣ ಪ್ರದೇಶದಲ್ಲಿ ಮಾಲ ಸಮುದಾಯದ ಒಟ್ಟು ಜನಸಂಖ್ಯೆ ೩,೭೩೧ ಇದೆ. ಇದರಲ್ಲಿ ಪುರುಷರು ೧,೮೮೯ ಹಾಗೂ ಮಹಿಳೆಯರು ೧,೮೪೨ ಜನಸಂಖ್ಯೆಯನ್ನು ಹೊಂದಿರುವರು.

ವೃತ್ತಚಿತ್ರ ೨.೧: ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ನೆಲೆನಿಂತ ಮಾಲ ಸಮುದಾಯದವರ ಶೇಕಡವಾರು ಜನಸಂಖ್ಯೆ (೨೦೧೧)



(೧ ನಗರ ಪ್ರದೇಶ, ೨ ಗ್ರಾಮೀಣ ಪ್ರದೇಶ)

ಅಂದರೆ ಶೇಕಡ ೮೧.೪೫ರಷ್ಟು ನಗರ ಪ್ರದೇಶದಲ್ಲಿಯೂ, ಶೇಕಡ ೧೮.೫೫ರಷ್ಟು ಗ್ರಾಮೀಣ ಪ್ರದೇಶದಲ್ಲಿ ನೆಲೆನಿಂತಿರುವರು

೨.೯ ಸಮೀಕ್ಷೆಗೊಳಪಡಿಸಿದ ಮಾಲ ಸಮುದಾಯದ ಜಿಲ್ಲಾವಾರು ಜನಸಂಖ್ಯಾ ವಿವರ

ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಮಾಲ ಸಮುದಾಯದಲ್ಲಿಯೇ ಅಲೆಮಾರಿಗಳಾಗಿ ಉಳಿದಿರುವ, ಸ್ಥಳೀಯವಾಗಿ ಪರ್ವತಮಲ್ಲಯ್ಯ ಎಂದು ಕರೆಯಲ್ಪಡುವ ಸಮುದಾಯವನ್ನು ಅಧ್ಯಯನಕ್ಕಾಗಿ ಸಮೀಕ್ಷಿಸಿದಾಗ ಕಂಡುಬಂದ ಜಿಲ್ಲಾವಾರು ಅಂಕಿ ಅಂಶಗಳನ್ನು ಈ ಕೆಳಗೆ ನೀಡಲಾಗಿದೆ.

ಮಾಲ (ಪರ್ವತ ಮಲ್ಲಯ್ಯ) ಸಮುದಾಯದವರು ಕಂಡುಬರುವ ಸ್ಥಳಗಳು

ಮಾಲ ಸಮುದಾಯದವರು ಮೂಲತಃ ಆಂಧ್ರಪ್ರದೇಶದವರಾಗಿದ್ದು, ಸುಮಾರು ೪೦೦ ವರ್ಷಗಳ ಹಿಂದೆ ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದವರಾಗಿದ್ದಾರೆ. ಇವರ ಮಾತೃಭಾಷೆ ತೆಲುಗು

ಆಗಿದ್ದು, ಕರ್ನಾಟಕದಲ್ಲಿ ತೆಲುಗು ಭಾಷೆಯ ಜೊತೆಗೆ ಕನ್ನಡವನ್ನು ಸಹ ಅಚ್ಚುಕಟ್ಟಾಗಿ ಮಾತನಾಡುತ್ತಾರೆ. ಕರ್ನಾಟಕಕ್ಕೆ ವಲಸೆ ಬಂದಂತಹ ಮಾಲ ಸಮುದಾಯದವರು ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ, ಹಳ್ಳಿಗಳಲ್ಲಿ ಮತ್ತು ತಾಲೂಕು ಸ್ಥಳಗಳಲ್ಲಿ ವಾಸವಾಗಿದ್ದಾರೆ. ಒಂದು ಊರಿನಲ್ಲಿ ವಾಸವಾಗಿದ್ದ ಈ ಸಮುದಾಯದವರು ತಮ್ಮ ಹೊಟ್ಟೆಪಾಡಿಗಾಗಿ ದುಡಿಯಲು ಹೋಗಿ ಇನ್ನೊಂದು ಊರಿನಲ್ಲಿ ಮತ್ತೊಂದು ಊರಿನಲ್ಲಿ ಈ ರೀತಿ ಗುಡಿಸಲು ಹಾಕಿಕೊಂಡು ನೆಲೆಸಿದ್ದಾರೆ. ಇವರ ವೃತ್ತಿ ಧಾರ್ಮಿಕ ಭಿಕ್ಷೆಯಾಗಿದ್ದು, ಇವತ್ತಿಗೂ ಸಹ ಈ ಸಮುದಾಯದ ಕೆಲವು ಕುಟುಂಬದ ಹಿರಿಯ ಸದಸ್ಯರು ಭಿಕ್ಷೆಯನ್ನು ಅವಲಂಬಿಸಿದ್ದಾರೆ. ವ್ಯಾಪಾರವನ್ನು ಅರೆಸಿಕೊಂಡು ಉಧ್ಯೋಗವನ್ನು ಅರೆಸಿಕೊಂಡು ಬೇರೆ ಬೇರೆ ಊರುಗಳಿಗೆ ಹೋಗಿದ್ದಾರೆ. ಸದಾ ಅಲೆಮಾರಿಯಾದ ಮಾಲ ಸಮುದಾಯದವರು ಇನ್ನು ಕೆಲವು ಕುಟುಂಬಗಳಿಗೆ ನಿರ್ಧಿಷ್ಟ ನೆಲೆಯನ್ನು ಕಂಡುಕೊಳ್ಳಲಿಕ್ಕೆ ಸಾಧ್ಯವಾಗುತ್ತಿಲ್ಲ. ಈ ಆಧುನಿಕ ಯುಗದಲ್ಲಿ ಸರ್ಕಾರದ ಕಡ್ಡಾಯ ನಿಯಮದಂತೆ ಪ್ರತಿಯೊಬ್ಬರಿಗೂ ಪ್ರತಿಯೊಂದು ಕೆಲಸಕ್ಕೂ ಆಧಾರ ಕಾರ್ಡ್, ರೇಷನ್ ಕಾರ್ಡ್, ಓಟರ್ ಕಾರ್ಡ್, ವಾಸಸ್ಥಳ ಪ್ರಮಾಣ ಪತ್ರ ಕಡ್ಡಾಯವಾಗಿರುವುದರಿಂದ ಈ ಸಮುದಾಯದ ಕೆಲವು ಜನರ ಆಧಾರ ಕಾರ್ಡ್, ರೇಷನ್ ಕಾರ್ಡ್, ಓಟರ್ ಕಾರ್ಡ್ ಇವುಗಳು ಒಂದು ಊರಿನ ಹೆಸರಿನಲ್ಲಿ ಇದ್ದರೆ ಆ ಫಲಾನುಭವಿಗಳು ಅಥವಾ ಸದಸ್ಯರು ಇನ್ನೊಂದು ಊರಿನಲ್ಲಿ ವಾಸವಾಗಿರುತ್ತಾರೆ. ಇದರಿಂದ ಅವರಿಗೆ ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳುವಲ್ಲಿ ಅನಾನುಕೂಲತೆಯನ್ನು ಎದುರಿಸುತ್ತಿದ್ದಾರೆ ಮತ್ತು ಸರಿಯಾದ ಸಮಯಕ್ಕೆ ಬೇರೆ ಊರಿನಿಂದ ಬಂದು ಬೆರಳಚ್ಚು ತಂತ್ರಕ್ಕೆ ಹೆಬ್ಬೆಟ್ಟನ್ನು ಒತ್ತುವುದಕ್ಕೆ ಆಗುವುದಿಲ್ಲ. ಇದರಿಂದ ರೇಷನ್ ಅಕ್ಕಿಗಳು ದೊರೆಯದಂತಾಗಿದೆ. ಇದಕ್ಕೆಲ್ಲಾ ಕಾರಣ ಇವರ ಅಲೆಮಾರಿತನದ ಬದುಕು ಆಗಿರುತ್ತದೆ. ಆದ್ದರಿಂದ ರೇಷನ್ ಕಾರ್ಡ್ ಇದ್ದರು ಸಹ ಇವರಿಗೆ ಉಪಯೋಗವಾಗುತ್ತಿಲ್ಲ ನಾಮ ಮಾತ್ರಕ್ಕೆ ನಿರ್ಧಿಷ್ಟ ಸ್ಥಳ ಗುರುತಿಸಲಿಕ್ಕೆ ರೇಷನ್ ಕಾರ್ಡ್ ಆಧಾರ ಕಾರ್ಡ್, ಓಟಿನ ಕಾರ್ಡ್ ವಾಸಸ್ಥಳ ಪ್ರಮಾಣ ಪತ್ರಗಳು ಇರುತ್ತವೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು.

೧. ಕೊಪ್ಪಳ ಜಿಲ್ಲೆ.

ಕೊಪ್ಪಳ ಜಿಲ್ಲೆಯು ಕರ್ನಾಟಕದ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಬರುವ ಒಂದು ಜಿಲ್ಲೆಯಾಗಿದೆ. ಕರ್ನಾಟಕದ ಬತ್ತದ ಕಣಜ ಎನಿಸಿಕೊಂಡಿರುವ ಕೊಪ್ಪಳ ಜಿಲ್ಲೆಯು ರಾಯಚೂರು ಜಿಲ್ಲೆಯಿಂದ ೧-೪-೧೯೯೮ ರಂದು ವಿಭಜನೆಗೊಂಡಿತು. ಅಂದಿನಿಂದ ಕರ್ನಾಟಕ ರಾಜ್ಯದ ಹೊಸ ಜಿಲ್ಲೆಗಳಲ್ಲಿ ಒಂದಾಗಿದೆ. ಕೊಪ್ಪಳ ಜಿಲ್ಲೆಯು ಗಂಗಾವತಿ, ಕುಷ್ಟಗಿ ಮತ್ತು ಯಲಬುರ್ಗಾ ಹಾಗೂ ಹೊಸದಾಗಿ ರೂಪುಗೊಂಡ ೧೯-೧-೨೦೧೮ ರಿಂದ ಕನಕಗಿರಿ, ಕುಕನೂರ ಈ ಐದು ತಾಲೂಕುಗಳನ್ನು ಒಳಗೊಂಡಿದೆ. ಕೊಪ್ಪಳದ ದಕ್ಷಿಣದಲ್ಲಿ ಬಳ್ಳಾರಿ ಜಿಲ್ಲೆ, ಉತ್ತರ ದಿಕ್ಕಿನಲ್ಲಿ ಬಾಗಲಕೋಟೆ ಜಿಲ್ಲೆ, ಪಶ್ಚಿಮದಲ್ಲಿ ಗದಗ ಜಿಲ್ಲೆ, ಪೂರ್ವದಲ್ಲಿ ರಾಯಚೂರ ಜಿಲ್ಲೆ ಈ ಎಲ್ಲಾ ಜಿಲ್ಲೆಯಿಂದ ಸುತ್ತುವರಿದಿದೆ. ಕೊಪ್ಪಳ ಜಿಲ್ಲೆಯು ವಿಶ್ವ ಕೇಂದ್ರ ಪರಂಪರೆಯಾದ ಹಂಪಿಯಿಂದ ಹತ್ತಿರವಾಗಿದೆ.

ಕೊಪ್ಪಳ ಜಿಲ್ಲೆ ಕೃಷ್ಣಾ ಮತ್ತು ತುಂಗಭದ್ರ ನದಿಗಳ ಆಸುಪಾಸಿನಲ್ಲಿದ್ದು ಪ್ರಾಚೀನ ಕಾಲದಿಂದಲು ಜನವಸತಿ ಹೊಂದಿದ ಪ್ರದೇಶವಾಗಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಬೆಣಕಲ್ ಮತ್ತು ಕೆರೆಹಾಳ, ಕುಕನೂರ ತಾಲೂಕಿನ ಕಲ್ಲೂರ ಮೋದಲಾದ ಕಡೆಗಳಲ್ಲಿ ಇತಿಹಾಸ ಪೂರ್ವ ಕಾಲದ ನಿವೇಶನಗಳಿವೆ ಎಂದು ಗುರುತಿಸಿದ್ದಾರೆ. ಅದೇ ರೀತಿ ಗಂಗಾವತಿ ತಾಲೂಕಿನ ಆನೆಗೂಂದಿ ರಾಮಾಯನ ಕಾಲದ ಕಿಸ್ಕಿಂದೆಯ ಭಾಗವಾಗಿತ್ತೆಂದು ನಂಬಿಕೆಯಿದೆ. ಗವಿಮಠ ಬೆಟ್ಟ ಮತ್ತು ಪಾಲ್ಕಿಗುಂಡು ಬೆಟ್ಟದಲ್ಲಿ ಒಂದೊಂದು ಅಶೋಕನ ಶಾಸನಗಳು ದೊರೆತಿವೆ ಎಂದು ಚರಿತ್ರೆ ಹೆಳುತ್ತದೆ. ಮೌರ್ಯರ ಶಾಸನಗಳಲ್ಲಿ ಬರುವ ಸುವರ್ಣಗಿರಿಯನ್ನು ಕೊಪ್ಪಳ ಜಿಲ್ಲೆಯ ಕನಕಗಿರಿ ಎಂದು ಇತಿಹಾಸಕಾರರು ಗುರುತಿಸಿದ್ದಾರೆ. ಈ ಪ್ರದೇಶ ಬವು ಪುರಾತನ ನಾಗರಿಕತೆ ಮತ್ತು ಸಂಸ್ಕೃತಿಗಳ ನೆಲೆಬಿಡೆಂದು ಸ್ಪಷ್ಟವಾಗಿದೆ. ಕೊಪ್ಪಳವು ಶಾತವಾಹನರ ಕಾಲದಿಂದ ಬಹಳ ಪ್ರಸಿದ್ಧಿ ಪಡೆದಿತ್ತು ಎಂದು ತಿಳಿಯಲಾಗಿದೆ. ಆದ್ದರಿಂದ ಕೊಪ್ಪಳದ ಸುತ್ತಮುತ್ತಲಿನ ಬೆಟ್ಟ ಗುಡ್ಡಗಳಿಗೆ ಕೊಪಣಾದ್ರಿ ಮತ್ತು ಕೊಪಾಣಾಚಲ ಎಂದು ಹೆಸರುಗಳಿವೆ. ಆದ್ದರಿಂದ ಕೊಪ್ಪಳಕ್ಕೆ ಕೊಫಣ ಅಥವಾ ಕೊಣ ನಗರವೆಂದು ಹೆಸರಿದ್ದಿತು ಎಂದು ತಿಳಿಯಲಾಗಿದೆ. ಅದೇ ರೀತಿ ಕೊಪ್ಪಳವು ಗಂಗ ಮನೆತನಕ್ಕೆ ಬಹಳ ಪ್ರಸಿದ್ದಿಯಾಗಿದೆ. ಕೊಪ್ಪಳ ಹೆಸರು ವಿಧಿತ ಮಾಹಾಕೊಪಣ ಎಂದು ಮಾಹಾನ್ ಕವಿ ಕವಿರಾಜಮಾರ್ಗ ಮಾಹಾಕಾವ್ಯದಿಂದ ಆಯ್ಕ ಮಾಡಲಾಗಿದೆ. ಆಶೋಕನ ಕಾಲದಲ್ಲಿ ಜೈನ ಧರ್ಮವು ಈ ಪ್ರದೇಶದಲ್ಲಿ ಹೆಚ್ಚು ಮಹತ್ವ ಪಡೆದುಕೊಂಡಿತ್ತು. ಆದ್ದರಿಂದ ಇದನ್ನು ಜೈನಕಾಶಿ ಎಂದು ಕರೆಯಲಾಗುತ್ತದೆ.

ಕೊಪ್ಪಳ ಜಿಲ್ಲೆಯ ಕುಕನೂರ ತಾಲೂಕಿನ ಇಟಗಿಯ ಮಾಹಾದೇವ ದೇವಾಲಯವು ಪ್ರಸಿದ್ದಿಯಾಗಿರುತ್ತದೆ. ಈ ದೇವಾಲಯವನ್ನು ಕ್ರಿ. ಶ ೧೧೧೨ ರಲ್ಲಿ ಕಲ್ಯಾಣಿ ಚಾಲುಕ್ಯರ ದೋರೆ ಆರನೆ ವಿಕ್ರಮಾದಿತ್ಯನ ಮಾಹಾಮಂತ್ರಿಯಾಗಿದ್ದ ಇಟಗಿಯ ಮಾಹದೇವ ದಂಡನಾಯಕನು ಮಹತ್ತರ ಯುದ್ಧ ಜಯಿಸಿದ ಪ್ರತೀಕವಾಗಿ ನಿರ್ಮಿಸಿದನು ಎಂದು ತಿಳಿದು ಬರುತ್ತದೆ.

ಕೊಪ್ಪಳ ಜಿಲ್ಲೆಯು ೭೧೯೦ ಚ.ಕಿ.ಮೀ ವಿಸ್ತಿರ್ಣ ಹೊಂದಿದೆ ಮತ್ತು ೨೦೧೧ ರ ಜನಗಣತಿಯ ಪ್ರಕಾರ ಕೊಪ್ಪಳ ಜಿಲ್ಲೆಯ ಜನಸಂಖ್ಯೆ ಒಟ್ಟು ೭೦,೬೮೮ ಇರುತ್ತದೆ. ಇದು ೨೦ ಹೊಬಳಿಗಳು ಹಾಗು ೬೧೮ ಗ್ರಾಮಗಳನ್ನು ಒಳಗೂಂಡಿರುತ್ತದೆ. ಕೊಪ್ಪಳ ಜಿಲ್ಲೆಯು ಹಲವು ರೀತಿಯ ಐತಿಹಾಸಿಕ ಪ್ರವಾಸಿ ತಾಣಗಳನ್ನು ಕೂಡ ಒಳಗೊಂಡಿರುತ್ತದೆ ಮತ್ತು ಧಾರ್ಮಿಕ ಕೇಂದ್ರಗಳನ್ನು ಮತ್ತು ಶೈಕ್ಷಣಿಕ ಕೇಂದ್ರಗಳನ್ನು ಒಳಗೊಂಡಿರುತ್ತದೆ. ಹಲವು ಜಾತಿ ಜನಾಂಗಗಳನ್ನು ಮತ್ತು ಸಂಸ್ಕೃತಿಗಳನ್ನು ಒಳಗೊಂಡ ಜಿಲ್ಲೆಯಾಗಿರುತ್ತದೆ.

ಕೊಪ್ಪಳ ಜಿಲ್ಲೆಯಲ್ಲಿ ಮಾಲ(ಪರ್ವತ ಮಲ್ಲಯ್ಯ) ಸಮುದಾಯದವರು ಜಿಲ್ಲೆ ಮತ್ತು ತಾಲೂಕು ಮತ್ತು ಹಳ್ಳಿಗಳನ್ನು ಸೇರಿದಂತೆ ಒಟ್ಟು ಹತ್ತು ಊರುಗಳಲ್ಲಿ ವಾಸವಾಗಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿಯೇ ಮಾಲ ಸಮುದಾಯದವರು ಹೆಚ್ಚಾಗಿ ತಮ್ಮ ನೆಲೆಯನ್ನು ಕಂಡುಕೊಂಡಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಇರುವ ಇವರ ಒಟ್ಟು ಜನಸಂಖ್ಯೆ ೧೦೬೯ ಇರುತ್ತದೆ.

೨.೯.೧ ಕೊಪ್ಪಳ ಜಿಲ್ಲೆಯ ಮಾಲ ಸಮುದಾಯದ ಕುಟುಂಬವಾರು ಜನಸಂಖ್ಯೆ

೧. ಕನಕಗಿರಿ

ಕನಕಗಿರಿ ಗ್ರಾಮದಲ್ಲಿ ೧೫ ಕುಟುಂಬಗಳು ನೆಲೆಸಿವೆ. ಈ ಗ್ರಾಮದಲ್ಲಿ ಇವರ ಒಟ್ಟು ಜನಸಂಖ್ಯೆ ೭೮, ಇದರಲ್ಲಿ ಪುರುಷರು ೪೦ ಮಹಿಳೆಯರು ೩೮ ಇರುವರು.

ಮಾಲ ಸಮುದಾಯದವರು ಕೊಪ್ಪಳ ಜಿಲ್ಲೆ(ಗಂಗಾವತಿ) ಕನಕಗಿರಿ ತಾಲೂಕಿನ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಕನಕಗಿರಿಯಲ್ಲಿ ೧೫ ಕುಟುಂಬದವರು ವಾಸವಾಗಿದ್ದಾರೆ. ಕನಕಗಿರಿಯು ಕೊಪ್ಪಳದಿಂದ ೪೮ ಕಿ.ಮೀ. ದೂರದಲ್ಲಿದೆ. ಕನಕಗಿರಿಯಲ್ಲಿ ವಾಸವಾಗಿರುವ ಐದು ಕುಟುಂಬಗಳಿಗೆ ಆಶ್ರಯ ಮನೆಗಳಿರುತ್ತವೆ. ಇನ್ನು ಕೆಲವು ಕುಟುಂಬಗಳಿಗೆ ಗುಡಿಸಲುಗಳು ಇವೆ. ಕನಕಗಿರಿಯಲ್ಲಿ ವಾಸವಾಗಿರುವ ಸದಸ್ಯರ ಮೂಲ ವೃತ್ತಿಯೆನೆಂದರೆ ಕೃಷಿಕೂಲಿ ಮಾಡುವುದು, ವ್ಯಾಪಾರಿ ವೃತ್ತಿ ಮಾಡುವುದು ಒಂದೂರಿನಿಂದ ಇನ್ನೊಂದು ಊರಿಗೆ ಆರ್ಥಿಕ ನಿರ್ವಹಣೆಗಾಗಿ ದುಡಿಯಲು ಹೋಗುವುದು ಮತ್ತು ತಮ್ಮ ವಂಶಪಾರಂಪರ್ಯ ಪ್ರದರ್ಶನ ಆಟಗಳನ್ನು ಆಡುವುದು ಆಗಿದೆ. ಇಂತಹ ವೃತ್ತಿಗಳನ್ನು ಇಲ್ಲಿರುವ ಸಮುದಾಯದವರು ಇವಾಗಲೂ ಕೂಡ ಅವಲಂಬಿಸಿಕೊಂಡು ಬರುತ್ತಿದ್ದಾರೆ.

೨. ಕೆಸಕ್ಕಿ ಹಂಚಿನಾಳ

ಕೆಸಕ್ಕಿ ಹಂಚಿನಾಳ ಗ್ರಾಮದಲ್ಲಿ ಒಟ್ಟು ೦೨ ಕುಟುಂಬಗಳು ವಾಸವಾಗಿವೆ ಅದರಲ್ಲಿ ೫ ಗಂಡು ೫ ಹೆಣ್ಣು ಒಟ್ಟು ಜನಸಂಖ್ಯೆ ೧೦ ಇರುತ್ತದೆ.

ಮಾಲ ಸಮುದಾಯದವರು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಮುಸಲಾಪೂರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಕೆಸಕ್ಕಿ ಹಂಚಿನಾಳ ಎಂಬ ಗ್ರಾಮದಲ್ಲಿ ೨ ಕುಟುಂಬಗಳು ವಾಸವಾಗಿವೆ. ಕೆಸಕ್ಕಿಹಂಚಿನಾಳ ಗ್ರಾಮವು ಕೊಪ್ಪಳದಿಂದ ೫೦ ಕಿ.ಮೀ.ದೂರದಲ್ಲಿದೆ. ಈ ಎರಡು ಕುಟುಂಬಗಳು ಕನಕಗಿರಿಯಲ್ಲಿ ವಾಸವಾಗಿದ್ದು, ಇವರು ಗುಡಾರಗಳಲ್ಲಿ ವಾಸಮಾಡುತ್ತಾರೆ. ಈ ಕುಟುಂಬದ ಸದಸ್ಯರ ವೃತ್ತಿಗಳಾದ ಕೃಷಿಕೂಲಿ, ವ್ಯಾಪಾರಿ ವೃತ್ತಿಯಾಗಿರುತ್ತದೆ. ಒಂದೂರಿನಿಂದ ಇನ್ನೊಂದು ಊರಿಗೆ ಹೋಗಿ ದುಡಿದುಕೊಂಡು ಆರ್ಥಿಕ ನಿರ್ವಹಣೆ ಮಾಡಿಕೊಳ್ಳುವುದನ್ನು ಇವರು ಇಂದಿನವರೆಗೂ ಮಾಡುತ್ತಾರೆ.

೩. ಮಸಬಾ ಹಂಚಿನಾಳ

ಮಸಬ ಹಂಚಿನಾಳ ಗ್ರಾಮದಲ್ಲಿ ೧೦ ಕುಟುಂಬಗಳು ನೆಲೆಸಿವೆ. ಈ ಗ್ರಾಮದಲ್ಲಿ ಇವರ ಒಟ್ಟು ಜನಸಂಖ್ಯೆ ೫೧, ಇದರಲ್ಲಿ ಪುರುಷರು ೨೫, ಮಹಿಳೆಯರು ೨೬, ಇರುವರು.

ಮಾಲ ಸಮುದಾಯದವರು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಈಗಿನ ಕೂಕನೂರು ತಾಲೂಕು, ಕುಕನೂರು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ 'ಮಸಬ ಹಂಚಿನಾಳ' ಎಂಬ

ಗ್ರಾಮದಲ್ಲಿ ಹತ್ತು ಕುಟುಂಬದವರು ವಾಸವಾಗಿದ್ದಾರೆ. ಇಲ್ಲಿರುವ ಐದು ಕುಟುಂಬಗಳಿಗೆ ಆಶ್ರಯ ಮನೆಗಳಿದ್ದು, ಇನ್ನುಳಿದ ಕುಟುಂಬಗಳಿಗೆ ಗುಡಿಸಲುಗಳು ಇವೆ. ಮಸಬ ಹಂಚಿನಾಳ ಎಂಬ ಗ್ರಾಮವು ಕೊಪ್ಪಳದಿಂದ ೩೧ ಕಿ.ಮೀ.ದೂರದಲ್ಲಿದೆ. ಈ ಊರಿನಲ್ಲಿ ವಾಸವಾಗಿರುವವರ ವೃತ್ತಿಯೆಂದರೆ ಕೃಷಿಕೂಲಿ, ವ್ಯಾಪಾರ, ಒಂದೂರಿನಿಂದ ಇನ್ನೊಂದು ಊರಿಗೆ ಹೋಗಿ ದುಡಿದುಕೊಂಡು ಬರುವುದು ಪ್ರದರ್ಶನ ಕಲೆಗಳನ್ನು ಕಲಿಯುವುದನ್ನು ಮಾಡುತ್ತಾರೆ. ಇವರು ಹೆಚ್ಚಾಗಿ ಇವತ್ತಿಗೂ ಕೃಷಿಕೂಲಿಯನ್ನು ಮಾಡುತ್ತಾರೆ.

೪. ಇಲಕಲ್ ಗಡ

ಇಲಕಲ್ ಗಡ ಗ್ರಾಮದಲ್ಲಿ ಒಂದು ಕುಟುಂಬ ನೆಲೆಸಿದೆ. ಈ ಗ್ರಾಮದಲ್ಲಿ ಇವರ ಒಟ್ಟು ಜನಸಂಖ್ಯೆ ೪, ಇದರಲ್ಲಿ ಪುರುಷರು ೨, ಮಹಿಳೆಯರು ೨ ಇರುವರು.

ಮಾಲ ಸಮುದಾಯದವರು ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲೂಕಿನ ಇಲಕಲ್‌ಗಡ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಇಲಕಲ್‌ಗಡ ಎಂಬ ಗ್ರಾಮದಲ್ಲಿ ಒಂದು ಮನೆ ಅಥವಾ ಒಂದು ಕುಟುಂಬದವರು ಮಾತ್ರ ವಾಸವಾಗಿದ್ದಾರೆ. ಇಲಕಲ್‌ಗಡ ಎಂಬ ಗ್ರಾಮವು ಕೊಪ್ಪಳದಿಂದ ೨೫ ಕಿ.ಮೀ.ದೂರದಲ್ಲಿ ಇದೆ. ಇಲಕಲ್‌ಗಡದಲ್ಲಿ ವಾಸವಿರುವ ಕುಟುಂಬಕ್ಕೆ ಮನೆ ಇರುವುದಿಲ್ಲ, ಗುಡಿಸಲು ಮಾತ್ರ ಇರುತ್ತದೆ. ಇಲಕಲ್ ಗಡದಲ್ಲಿ ವಾಸವಿರುವ ಸದಸ್ಯರು ಕೂಲಿಯನ್ನು ದುಡಿಯುತ್ತಾರೆ. ಪ್ಲಾಸ್ಟಿಕ್ ಸಾಮಾನುಗಳನ್ನು ವ್ಯಾಪಾರ ಮಾಡುತ್ತಾರೆ. ಒಂದೂರಿನಿಂದ ಇನ್ನೊಂದು ಊರಿಗೆ ಹೋಗಿ ದುಡಿದುಕೊಂಡು ಆರ್ಥಿಕ ಜೀವನ ನಿರ್ವಹಣೆ ಮಾಡಿಕೊಳ್ಳುತ್ತಾರೆ. ಈ ಎಲ್ಲಾ ವೃತ್ತಿಯನ್ನು ಇವರು ಇವತ್ತಿಗೂ ಮಾಡುತ್ತಾರೆ.

೫. ಕಲ್ ಅಬ್ಬಿಗೆರಿ.

ಕಲ್ ಅಬ್ಬಿಗೇರಿ ಗ್ರಾಮದಲ್ಲಿ ೩೧ ಕುಟುಂಬಗಳು ನೆಲೆಸಿವೆ. ಈ ಗ್ರಾಮದಲ್ಲಿ ಇವರ ಒಟ್ಟು ಜನಸಂಖ್ಯೆ ೧೫೬, ಇದರಲ್ಲಿ ಪುರುಷರು ೭೭ ಜನರಿರುತ್ತಾರೆ. ಮಹಿಳೆಯರು ೭೯ ಜನರು ಇರುವರು.


ಮಾಲ ಸಮುದಾಯದವರು ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲೂಕಿನ ಕಲ್ ತಾವರಗೇರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕಲ್ ಅಬ್ಬಿಗೇರಿ ಎಂಬ ಗ್ರಾಮದಲ್ಲಿ ಮೂವತ್ತೊಂದು ಕುಟುಂಬಗಳು ಇರುತ್ತವೆ. ಕಲ್ ಅಬ್ಬಿಗೇರಿ ಎಂಬ ಗ್ರಾಮವು ಕೊಪ್ಪಳದಿಂದ ೩೧ ಕಿ.ಮೀ. ದೂರದಲ್ಲಿದೆ. ಕಲ್ ಅಬ್ಬಿಗೇರಿಯಲ್ಲಿ ವಾಸವಾಗಿರುವ ಕೆಲವು ಕುಟುಂಬಗಳಿಗೆ ಆಶ್ರಯ ಮನೆಗಳು, ಸ್ವಂತ ಮನೆಗಳು ಇವೆ. ಇನ್ನು ಕೆಲವು ಕುಟುಂಬಗಳಿಗೆ ಗುಡಿಸಲುಗಳು ಇವೆ. ಈ ಗ್ರಾಮದಲ್ಲಿ ವಾಸವಾಗಿರುವ ಮಾಲ ಸಮುದಾಯದವರ ವೃತ್ತಿಗಳೆಂದರೆರೆ ಕೃಷಿ ಕೂಲಿ ಮಾಡುವುದು, ವ್ಯಾಪಾರ ವೃತ್ತಿ ಮಾಡುವುದು, ಬೇರೆ ಬೇರೆ ಊರಿಗೆ ಪಟ್ಟಣಗಳಿಗೆ ಹೋಗಿ ದುಡಿದುಕೊಂಡು ಬರುವುದು ಆಗಿರುತ್ತದೆ. ಮೇಲಿನ ಎಲ್ಲಾ ವೃತ್ತಿಗಳನ್ನು ಇವರು ಇವತ್ತಿಗೂ ಅವಲಂಬಿಸಿ ಜೀವನ ಸಾಗಿಸುತ್ತಾ ಇದ್ದಾರೆ.

ಕೋಷ್ಟಕ ೨.೪: ಕೊಪ್ಪಳ ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ

ಕ್ರ.ಸ	ಜಿಲ್ಲೆ	ತಾಲೂಕು	ಗ್ರಾಮ	ಕುಟುಂಬ	ಗಂಡು	ಹೆಣ್ಣು	ಒಟ್ಟು
೧	ಕೊಪ್ಪಳ	ಕನಕಗಿರಿ	ಕನಕಗಿರಿ	೧೫	೪೦	೩೮	೭೮
೨	ಕೊಪ್ಪಳ	ಕನಕಗಿರಿ	ಕೆಸಕ್ಕಿಹಂಚಿನಾಳ	೦೨	೫	೫	೧೦
೩	ಕೊಪ್ಪಳ	ಕುಕನೂರ	ಮಸಬಾ ಹಂಚಿನಾಳ	೧೦	೨೫	೨೬	೫೧
೪	ಕೊಪ್ಪಳ	ಕೊಪ್ಪಳ	ಇರಕಲ್‌ಗಡ	೦೧	೨	೨	೦೪
೫	ಕೊಪ್ಪಳ	ಕೊಪ್ಪಳ	ಕಲ್ ಅಬ್ಬಿಗೇರಿ	೩೧	೭೭	೭೯	೧೫೬
೬	ಕೊಪ್ಪಳ	ಕೊಪ್ಪಳ	ಕುದುರಿಮೋತಿ	೦೬	೧೫	೧೬	೩೧
೭	ಕೊಪ್ಪಳ	ಕೊಪ್ಪಳ	ಕೊಪ್ಪಳ	೪೦	೧೦೫	೧೦೩	೨೦೮
೮	ಕೊಪ್ಪಳ	ಕೊಪ್ಪಳ	ಚಿಲಕಮುಖಿ	೯೮	೨೪೫	೨೪೭	೪೯೨
೯	ಕೊಪ್ಪಳ	ಕೊಪ್ಪಳ	ದನಗಳದೊಡ್ಡಿ	೦೭	೧೮	೧೮	೩೬
೧೦	ಕೊಪ್ಪಳ	ಗಂಗಾವತಿ	ಶಿವಪುರ	೦೧	೧	೨	೦೩
				೨೧೧	೫೩೩	೫೩೬	೧೦೬೯

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ಲಂಬಚಿತ್ರ ೨.೧ ಕೊಪ್ಪಳ ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ ಪ್ರಮಾಣ



೬.ಕುದರಿಮೋತಿ

ಕುದುರಿಮೋತಿ ಗ್ರಾಮದಲ್ಲಿ ೬ ಕುಟುಂಬಗಳು ನೆಲೆಸಿವೆ. ಈ ಗ್ರಾಮದಲ್ಲಿ ಇವರ ಒಟ್ಟು ಜನಸಂಖ್ಯೆ ೩೧, ಇದರಲ್ಲಿ ಪುರುಷರು ೧೫ ಜನರಿರುವರು. ಮಹಿಳೆಯರು ೧೬ ಜನರಿರು ಇರುವರು.

ಮಾಲ ಸಮುದಾಯದವರು ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲೂಕಿನ ಕುದರಿಮೋತಿ ಮಂಗಳೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕುದರಿಮೋತಿ ಎಂಬ ಗ್ರಾಮದಲ್ಲಿ ಆರು ಕುಟುಂಬಗಳು ವಾಸವಾಗಿವೆ. ಕುದರಿಮೋತಿ ಎಂಬ ಗ್ರಾಮವು ಕೊಪ್ಪಳದಿಂದ ೩೦ ಕಿ.ಮೀ.ದೂರದಲ್ಲಿ ಇದೆ. ಕುದರಿಮೋತಿಯಲ್ಲಿ ವಾಸವಾಗಿರುವ ಮಾಲ ಸಮುದಾಯದ ಮೂರು ಕುಟುಂಬದವರಿಗೆ ಆಶ್ರಯ ಮನೆಗಳಿರುತ್ತವೆ. ಕೆಲವರಿಗೆ ಗುಡಿಸಲು ಇದೆ. ಇಲ್ಲಿ ವಾಸಮಾಡುವ ಸದಸ್ಯರ ಮೂಲ ವೃತ್ತಿಯೆಂದರೆ ಕೃಷಿಕೂಲಿ, ಸಣ್ಣಪುಟ್ಟ ವ್ಯಾಪಾರ ಮಾಡುವುದು ಆಗಿರುತ್ತದೆ.

೭. ಕೊಪ್ಪಳ

ಕೊಪ್ಪಳ ನಗರದಲ್ಲಿ ೪೦ ಕುಟುಂಬಗಳು ನೆಲೆಸಿವೆ. ಈ ನಗರದಲ್ಲಿ ಇವರ ಒಟ್ಟು ಜನಸಂಖ್ಯೆ ೨೦೮ ಇರುತ್ತದೆ. ಇದರಲ್ಲಿ ಪುರುಷರು ೧೦೫ ಜನರಿರುವರು. ಮಹಿಳೆಯರು ೧೦೩ ಜನರು ಇರುವರು.

ಮಾಲ ಸಮುದಾಯದವರು ಕೊಪ್ಪಳದ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಸಿದ್ಧೇಶ್ವರ ನಗರ ಎಂಬ ಬಡಾವಣೆಯಲ್ಲಿ ಸುಮಾರು ನಲವತ್ತು ಕುಟುಂಬದವರು ವಾಸವಾಗಿದ್ದಾರೆ. ಇಲ್ಲಿ ವಾಸ ಮಾಡುವ ಹದಿನೈದು ಕುಟುಂಬಗಳಿಗೆ ಆಶ್ರಯ ಮನೆಗಳು ಇರುತ್ತವೆ. ಉಳಿದ ಎಲ್ಲಾ ಕುಟುಂಬದವರು ಗುಡಾರ ಹಾಕಿಕೊಂಡು ವಾಸವಾಗಿದ್ದಾರೆ. ಈ ನಗರದಲ್ಲಿ ವಾಸಮಾಡುವ ಸದಸ್ಯರ ಪ್ರಮುಖ ವೃತ್ತಿ ಧಾರ್ಮಿಕ ಭಿಕ್ಷೆ, ಕೂಲಿ, ವ್ಯಾಪಾರ, ದುಡಿಯುವುದು, ಪ್ರದರ್ಶನ ಕಲೆ ಆಡುವುದು ಆಗಿರುತ್ತದೆ ಮತ್ತು ಒಂದೂರಿನಿಂದ ಇನ್ನೊಂದು ಊರಿಗೆ ದುಡಿಯಲು ಹೋಗುವುದನ್ನು ಮಾಡುತ್ತಾರೆ. ಇವತ್ತಿಗೂ ಈ ವೃತ್ತಿಗಳನ್ನು ಅವಲಂಬಿಸಿ ಜೀವನ ಮಾಡುತ್ತಾರೆ.

೮. ಚಿಲಕಮುಖಿ

ಕೊಪ್ಪಳ ಜಿಲ್ಲೆಯ ಚಿಲಕಮುಖಿ ಗ್ರಾಮದಲ್ಲಿ ಮಾಲ ಸಮುದಾಯದ ೯೮ ಕುಟುಂಬಗಳು ನೆಲೆಸಿವೆ. ಈ ಗ್ರಾಮದಲ್ಲಿ ಇವರ ಒಟ್ಟು ಜನಸಂಖ್ಯೆ ೪೯೨ ಇರುತ್ತದೆ. ಇದರಲ್ಲಿ ಪುರುಷರು ೨೪೫ ಜನರಿರುತ್ತಾರೆ. ಮಹಿಳೆಯರು ೨೪೭ ಜನರು ಇರುತ್ತಾರೆ.

ಮಾಲ ಸಮುದಾಯದವರು ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲೂಕಿನ ಹಾಸಗಲ್ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಚಿಲಕಮುಖಿ ಎಂಬ ಗ್ರಾಮದಲ್ಲಿ ಸುಮಾರು ೯೮ ಕುಟುಂಬಗಳು ವಾಸವಾಗಿದ್ದಾರೆ. ಚಿಲಕಮುಖಿ ಎಂಬ ಗ್ರಾಮವು ಕೊಪ್ಪಳದಿಂದ ೨೫ ಕಿ.ಮೀ. ದೂರದಲ್ಲಿದೆ. ಚಿಲಕಮುಖಿ ಗ್ರಾಮದಲ್ಲಿ ವಾಸ ಮಾಡುವ ಮಾಲ ಸಮುದಾಯದ ಕೆಲವು ಕುಟುಂಬಗಳಿಗೆ ಆಶ್ರಯ ಮನೆಗಳು, ಸ್ವಂತ ಮನೆಗಳು ಇರುತ್ತವೆ. ಇನ್ನು ಕೆಲವು ಕುಟುಂಬಗಳಿಗೆ ಗುಡಾರ ಇರುತ್ತವೆ. ಇಲ್ಲಿ ವಾಸ ಮಾಡುವ

ಸದಸ್ಯರ ಪ್ರಮುಖ ವೃತ್ತಿಗಳೆಂದರೆ ಕೃಷಿ, ಕೂಲಿ, ದುಡಿಯುವುದು, ಧಾರ್ಮಿಕ ಭಿಕ್ಷೆ ಬೇಡುವುದು ಮತ್ತು ಪ್ರದರ್ಶನ ಕಲೆಗಳನ್ನು ಆಡುವುದು, ಆಟಗಳನ್ನು ಕಲಿಯುವುದು ಮತ್ತು ಸಣ್ಣಪುಟ್ಟ ವ್ಯಾಪಾರಗಳನ್ನು ಅವಲಂಬಿಸಿರುವುದು ಆಗಿರುತ್ತದೆ. ಒಂದೂರಿನಿಂದ ಇನ್ನೊಂದು ಊರಿಗೆ ವಲಸೆ ಹೋಗಿ ಆರ್ಥಿಕ ಪರಿಸ್ಥಿತಿ ನಿರ್ವಹಣೆಗಾಗಿ ದುಡಿಯುವುದನ್ನು ಮಾಡುತ್ತಾರೆ. ಇಲ್ಲಿರುವ ಕುಡುಂಬದವರು ಇವತ್ತಿಗೂ ಮೇಲಿನ ವೃತ್ತಿಗಳನ್ನು ಅವಲಂಭಿಸಿ ಜೀವನ ನಿರ್ವಹಣೆ ಮಾಡಿಕೊಳ್ಳುತ್ತಾರೆ.

೯. ದನಗಳದೊಡ್ಡಿ

ದನಗಳದೊಡ್ಡಿ ಗ್ರಾಮದಲ್ಲಿ ಮಾಲ ಸಮುದಾಯದ ೭ ಕುಟುಂಬಗಳು ನೆಲೆಸಿವೆ. ಈ ಗ್ರಾಮದಲ್ಲಿ ಇವರ ಒಟ್ಟು ಜನಸಂಖ್ಯೆ ೩೬ ಇರುತ್ತದೆ. ಇದರಲ್ಲಿ ಪುರುಷರು ೧೮ ಜನರಿರುವರು. ಮಹಿಳೆಯರು ೧೮ ಜನರು ಇರುವರು.

ಮಾಲ ಸಮುದಾಯದವರು ಕೊಪ್ಪಳ ಜಿಲ್ಲೆ ಕೊಪ್ಪಳ ತಾಲೂಕಿನ ಕಲ್ ತಾವರಗೇರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ದನಗಳ ದೊಡ್ಡಿ ಎಂಬ ಗ್ರಾಮದಲ್ಲಿ ೭ ಕುಟುಂಬಗಳು ವಾಸವಾಗಿವೆ. ದನಗಳದೊಡ್ಡಿ ಎಂಬ ಗ್ರಾಮವು ಕೊಪ್ಪಳದಿಂದ ೩೫ ಕಿ.ಮೀ.ದೂರದಲ್ಲಿ ಇದೆ. ದನಗಳದೊಡ್ಡಿಯಲ್ಲಿ ವಾಸವಾಗಿರುವ ಮೂರು ಕುಟುಂಬ ಗಳಿಗೆ ಆಶ್ರಯ ಮನೆಗಳು ಇವೆ. ಇನ್ನುಳಿದ ಕುಟುಂಬಗಳಿಗೆ ಗುಡಾರ (ಗುಡಿಸಲು) ಇವೆ. ಈ ಊರಿನಲ್ಲಿ ವಾಸವಾಗಿರುವ ಸದಸ್ಯರ ದುಡಿಮೆಯೆಂದರೆ ಕೃಷಿಕೂಲಿ, ಸಣ್ಣಪುಟ್ಟ ವ್ಯಾಪಾರಗಳಾದ ಹೂ ವ್ಯಾಪಾರ, ಮಾಡುತ್ತಾರೆ. ಮತ್ತು ಇವರು ಒಂದೂರಿನಿಂದ ಇನ್ನೊಂದು ಊರಿಗೆ ಹೋಗಿ ದುಡಿದುಕೊಂಡು ಆರ್ಥಿಕ ನಿರ್ವಹಣೆ ಮಾಡಿಕೊಳ್ಳುತ್ತಾರೆ.

೧೦. ಶಿವಪುರ

ಶಿವಪುರ ಗ್ರಾಮದಲ್ಲಿ ಒಂದು ಕುಟುಂಬ ನೆಲೆಸಿದೆ. ಈ ಗ್ರಾಮದಲ್ಲಿ ಇವರ ಒಟ್ಟು ಜನಸಂಖ್ಯೆ ೩, ಇದರಲ್ಲಿ ಪುರುಷರು ೧, ಮಹಿಳೆಯರು ೨ ಇರುವರು.

ಮಾಲ ಸಮುದಾಯದವರು ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಸ್ಥಳೀಯ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಶಿವಪುರ ಗ್ರಾಮದಲ್ಲಿ ಒಂದು ಕುಟುಂಬದವರು ವಾಸವಾಗಿದ್ದಾರೆ. ಶಿವಮುರ ಎಂಬ ಗ್ರಾಮವು ಕೊಪ್ಪಳದಿಂದ ४೫ ಕಿ.ಮೀ.ದೂರದಲ್ಲಿದೆ. ಈ ಕುಟುಂಬದವರಿಗೆ ಆಶ್ರಯ ಮನೆ ಇದೆ. ಈ ಕುಟುಂಬದ ಸದಸ್ಯರು ವ್ಯಾಪಾರವನ್ನು ಮಾಡುತ್ತಾರೆ ಮತ್ತು ಕೃಷಿ ಕೂಲಿ ಮಾಡಿ ಜೀವನವನ್ನು ಸಾಗಿಸುತ್ತಾರೆ. ಇವರು ಈ ವೃತ್ತಿಗಳನ್ನು ಅವಲಂಬಿಸಿದ್ದಾರೆ.

ಒಟ್ಟಿನಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು ೨೧೧ ಅಲೆಮಾರಿ ಮಾಲ ಸಮುದಾಯದ ಕುಟುಂಬಗಳು ನೆಲೆಸಿವೆ. ಈ ಜಿಲ್ಲೆಯಲ್ಲಿ ಇವರ ಒಟ್ಟು ಜನಸಂಖ್ಯೆ ೧೦೬೯ ಇರುತ್ತದೆ. ಇದರಲ್ಲಿ ಪುರುಷರು ೫೩೩ ಇರುತ್ತಾರೆ. ಮಹಿಳೆಯರು ೫೩೬ ಜನರು ಇರುವರು. ಹಾಗೆಯೇ ಕೊಪ್ಪಳ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ೧೫೬ ಕುಟುಂಬಗಳು ನೆಲೆಸಿವೆ. ಗ್ರಾಮೀಣ ಪ್ರದೇಶದಲ್ಲಿ ನೆಲೆಸಿದ ಅಲೆಮಾರಿ ಮಾಲ ಸಮುದಾಯದ ಒಟ್ಟು ಜನಸಂಖ್ಯೆಯು ೭೮೩,

ವತ್ತಚಿತ್ರ ೨.೨: ಕೊಪ್ಪಳ ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶದ ಮಾಲ ಸಮುದಾಯದ ಜನಸಂಖ್ಯೆ



(೧ ಗ್ರಾಮೀಣ ಪ್ರದೇಶ, ೨ ನಗರ ಪ್ರದೇಶ)

ಇದರಲ್ಲಿ ಪುರುಷರು ೩೮೮ ಜನರು ಇರುತ್ತಾರೆ. ಮಹಿಳೆಯರು ೩೯೫ ಜನರು ಇರುತ್ತಾರೆ. ಕನಕಗಿರಿ ಹಾಗೂ ಕೊಪ್ಪಳ ನಗರಗಳಲ್ಲಿ ಅಲೆಮಾರಿ ಮಾಲ ಸಮುದಾಯದವರು ನೆಲೆಸಿದ ಕುಟುಂಬಗಳು ಒಟ್ಟು ೫೫, ಇವರ ನಗರ ಪ್ರದೇಶದ ಒಟ್ಟು ಜನಸಂಖ್ಯೆ ೨೮೬ ಇರುತ್ತಾರೆ, ಇದರಲ್ಲಿ ಪುರುಷರು ೧೪೫ ಜನರಿರುವರು, ಮಹಿಳೆಯರು ೧೪೧ ಜನರು ಇರುವರು.

೨. ಗದಗ ಜಿಲ್ಲೆ

ಗದಗ ಜಿಲ್ಲೆಯು ಕರ್ನಾಟಕ ರಾಜ್ಯದ ಆಡಳಿತಾತ್ಮಕವಾದ ಒಂದು ಜಿಲ್ಲೆಯಾಗಿದೆ. ಗದಗ ಜಿಲ್ಲೆಯು ಧಾರವಾಡ ಜಿಲ್ಲೆಯ ಒಂದು ಭಾಗವಾಗಿತ್ತು. ೧೯೯೭ ರ ಜಿಲ್ಲಾ ಮರುವಿಂಗಡನಾ ಯೋಜನೆಯ ಮೇರೆಗೆ ಧಾರವಾಡ ಜಿಲ್ಲೆಯಿಂದ ಬೆರ್ಪಟ್ಟು ಧಾರವಾಡ ಜಿಲ್ಲೆಯ ಐದು ತಾಲೂಕುಗಳನ್ನು ಬೇರ್ಪಡಿಸಿ ಗದಗ ಜಿಲ್ಲೆಯನ್ನು ರಚಿಸಲಾಯಿತು. ಗದಗ ಜಿಲ್ಲೆಯಲ್ಲಿ ಬರುವ ಪ್ರಮುಖ ತಾಲೂಕುಗಳೆಂದೆ, ಗದಗ, ರೋಣ, ನರಗುಂದ, ಮುಂಡರಗಿ ಮತ್ತು ಶಿರಹಟ್ಟಿ ಇವುಗಳನ್ನು ಒಳಗೊಂಡಿದೆ. ಗದಗ ಜಿಲ್ಲೆಯ ಉತ್ತರಕ್ಕೆ ಬಾಗಲಕೋಟೆ, ದಕ್ಷಿಣಕ್ಕೆ ಹಾವೇರಿ ಜಿಲ್ಲೆ, ಪೂರ್ವಕ್ಕೆ ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳು, ಪಶ್ಚಿಮಕ್ಕೆ ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳು ಇರುತ್ತವೆ. ಇದು ಒಂದು ಒಳನಾಡು ಬಯಲು ಪ್ರದೇಶದ ಜಿಲ್ಲೆಯಾಗಿರುತ್ತದೆ. ಉತ್ತರದ ಗಡಿಯಲ್ಲಿ ಮಲಪ್ರಭಾ ನದಿ ಮತ್ತು ದಕ್ಷಿಣದ ಗಡಿಯಲ್ಲಿ ತುಂಗಭದ್ರೆ ನದಿಗಳು ಹರಿಯುತ್ತವೆ. ಇದನ್ನು ಹೊರತುಪಡಿಸಿ ಬೆಣ್ಣೆ ಹಳ್ಳ ಎಂಬುದು ರೋಣ ಸಮೀಪದಲ್ಲಿದ್ದು ಇದು ಮಲಪ್ರಭಾ ನದಿಗೆ ಸೇರುತ್ತದೆ. ಜಿಲ್ಲೆಯ ವಿಸ್ತೀರ್ಣ ೪.೬೫೭ ಚ.ಕೀ.ಮೀಟರ್ ಇರುತ್ತದೆ. ಗದಗ ಜಿಲ್ಲಯ ಜನಸಂಖ್ಯೆ ೨೦೧೧ ರ ಜನಗಣತಿಯ ಪ್ರಕಾರ



೧೦,೬೫, ೨೩೫ ಇರುತ್ತದೆ. ಗದಗ ಜಿಲ್ಲೆಯು ಕರ್ನಾಟಕ ರಾಜ್ಯದ ಉತ್ತರ ಭಾಗಕ್ಕಿದ್ದು ಉತ್ತರ ಅಕ್ಷಾಂಶ ೧೫.೧೫, ಪೂರ್ವ ರೇಖಾಂಶ ೨೫.೨೦ ಮತ್ತು ೨೫-೪೭ರ ಮಧ್ಯದಲ್ಲಿರುತ್ತದೆ.

ಗದಗ ಜಿಲ್ಲೆಯು ಉತ್ತರ ಕರ್ನಾಟಕದ ಒಂದು ಜಿಲ್ಲೆಯಾಗಿದ್ದು ಗದಗ ಮತ್ತು ಅದರ ಅವಳಿ ನಗರ ಬೇಟಗೇರಿ ಒಂದು ಸಂಯೋಜಿತ ನಗರವಾಗಿ ಆಡಳಿತವನ್ನು ಹೊಂದಿರುತ್ತದೆ. ಗದಗ ಜಿಲ್ಲೆಯು ೧೯೯೭ ರಲ್ಲಿ ನೂತನ ಜಿಲ್ಲೆಯಾಗಿ ಉದಯವಾಗಿದ್ದು, ಈ ಜಿಲ್ಲೆ ಪ್ರಾಚೀನ ಕಾಲದಿಂದಲು ಕಲೆ, ಸಾಹಿತ್ಯ ಸಂಸ್ಕೃತಿ, ಆಧ್ಯಾತ್ಮಿಕತೆ ಮತ್ತು ಉಧ್ಯಮದ ಕ್ಷೇತ್ರಗಳಲ್ಲಿ ತನ್ನದೇಯಾದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿರುತ್ತದೆ. ಈ ಪ್ರದೇಶವು ನಿಸರ್ಗ ಸೌಂದರ್ಯದ ನೆಲೆಬಿಡಾಗಿರುತ್ತದೆ. ಗದಗ ಜಿಲ್ಲೆಯು ಮನಮೋಹಕ ಶಿಲ್ಪಕಲೆಯನ್ನು ಒಳಗೊಂಡಿರುವ ದೇವಾಲಯಗಳನ್ನು, ಬಸದಿಗಳನ್ನು, ಪ್ರಾಚೀನ ಸ್ಮಾರಕಗಳನ್ನು, ಶ್ರೇಷ್ಠ ಸಾಹಿತ್ಯಗಳನ್ನು ರಚಿಸಿದ ಖ್ಯಾತ ಕವಿಗಳನ್ನು, ಬರಹಗಾರರನ್ನು, ನಟ ನಿರ್ದೇಶಕರನ್ನು ಮತ್ತು ಸಮಾಜ ಸುಧಾರಕರನ್ನು, ಹಲವಾರು ಸಂಗೀತ ವಿದ್ವಾಂಸರನ್ನು, ಸ್ವಾತಂತ್ರ ಹೋರಾಟಗಾರರನ್ನು, ಒಳಗೊಂಡ ಜನ್ಮಭೂಮೀಯಾಗಿರುತ್ತದೆ. ಜನರನ್ನು ಸನ್ಮಾರ್ಗದಲ್ಲಿ ನಡೆಸುವ ಧರ್ಮಾಧಿಕಾರಿಗಳಿಂದ ಈ ಜಿಲ್ಲೆಯ ಆಂತರಿಕ ಸಂಪತ್ತು ಅದ್ವಿತೀಯವೆನಿಸಿರುತ್ತದೆ. ಗದಗ ಜಿಲ್ಲೆಯು ಹಿಂದುಸ್ಥಾನಿ ಸಂಗೀತದ ಪ್ರಮುಖ ಸ್ಥಾನವಾಗಿರುತ್ತದೆ ಮತ್ತು ಹಲವು ಮಠಗಳನ್ನು ಹೊಂದಿದ್ದು ಧಾರ್ಮಿಕ ಮತ್ತು ಐತಿಹಾಸಿಕ ಮಹತ್ವವನ್ನು ಪಡೆದಿರುತ್ತದೆ.

ಗದಗ ಜಿಲ್ಲೆಯು ಹಿಂದೆ ಧಾರವಾಡ ಜಿಲ್ಲೆಯ ಒಂದು ಭಾಗವಾಗಿದ್ದು, ಇದರ ಜಿಲ್ಲಾ ಕೇಂದ್ರ ಧಾರವಾಡ, ಹುಬ್ಬಳ್ಳಿ ಇವು ಉತ್ತರಕರ್ನಾಟಕದಲ್ಲೆ ಹೆಚ್ಚು ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿದ ಸ್ಥಳಗಳಾಗಿರುತ್ತವೆ. ಅಲ್ಲಿನ ಕರ್ನಾಟಕ ಕಾಲೇಜು, ಇಂಜನಿಯರಿಂಗ್ ಮತ್ತು ವೈದ್ಯಕೀಯ ಕಾಲೆಜುಗಳಿಂದ ಗದಗ ಜಿಲ್ಲೆಯ ವಿದ್ಯಾರ್ಥಿಗಳು ಹೆಚ್ಚು ಉಪಯುಕ್ತತೆಯನ್ನು ಪಡೆಯುತ್ತಿದ್ದಾರೆ.

ಗದಗ ಜಿಲ್ಲೆಯ ಒಟ್ಟು ಸಾಕ್ಷರತಾ ಪ್ರಮಾಣ ಶೇಕಡಾ ೭೫ ರಷ್ಟು ಇರುತ್ತದೆ. ಇದರಲ್ಲಿ ಪುರುಷರ ಸಾಕ್ಷರತೆ ೭೯.೫೫ ಇರುತ್ತದೆ ಸ್ತ್ರೀಯರ ಸಾಕ್ಷರತೆ ೫೨.೫೮ ಇರುತ್ತದೆ.


ಗದಗ ಜಿಲ್ಲೆಯಲ್ಲಿ ಮಾಲ ಸಮುದಾಯದವರು ಜಿಲ್ಲೆ ತಾಲೂಕ ಮತ್ತು ಹಳ್ಳಿಗಳು ಸೆರಿದಂತೆ ಮೂರು ಉರುಗಳಲ್ಲಿ ಸಿಗುತ್ತಾರೆ, ಆದರೆ ಇವರು ಅಲೆಮಾರಿಗಳಾಗಿರುವದರಿಂದ ಒಂದು ಊರಿನಿಂದ ಇನ್ನೊಂದು ಊರಿಗೆ ಸಂಚಾರ ಮಾಡುತ್ತಲೆ ಇರುತ್ತಾರೆ.

ಕೋಷ್ಠಕ ೨.೩: ಗದಗ ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ

ಜಿಲ್ಲೆ	ತಾಲೂಕು	ಊರು	ಕು	ಗಂ	ಹೆ	ಒಟ್ಟು
ಗದಗ	ಗದಗ	ಗದಗ	೦೮	೨೧	೨೧	೪೨
ಗದಗ	ಗದಗ	ಹುಲಿಕೋಟೆ	೦೧	೦೧	೦೨	೦೩
ಗದಗ	ರೋಣ	ಗಜೇಂದ್ರಗಡ	೦೨	೦೫	೦೬	೧೧
ಒಟ್ಟು			೧೧	೨೭	೨೯	೫೬

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ವೃತ್ತಚಿತ್ರ ೨.೩: ಗದಗ ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶದ ಮಾಲ ಸಮುದಾಯದ ಶೇಕಡವಾರು ಜನಸಂಖ್ಯೆ



(೧ ನಗರ ಪ್ರದೇಶ, ೨ ಗ್ರಾಮೀಣ ಪ್ರದೇಶ)

೧. ಗದಗ

ಗದಗ ನಗರದಲ್ಲಿ ಮಾಲ ಸಮುದಾಯದ ೮ ಕುಟುಂಬಗಳು ನೆಲೆಸಿವೆ. ಇಲ್ಲಿ ಇವರ ಒಟ್ಟು ಜನಸಂಖ್ಯೆ ೪೨ ಇರುತ್ತದೆ. ಇದರಲ್ಲಿ ಪುರುಷರು ೨೧ ಜನರಿರುವರು. ಮಹಿಳೆಯರು ೨೧ ಜನರು ಇರುವರು.

ಮಾಲ ಸಮುದಾಯದವರು ಗದಗ ನಗರದ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಮುಳಗುಂದ ನಾಕಾ ವಾರ್ಡ್‌ನಲ್ಲಿ ೮ ಕುಟುಂಬದವರು ವಾಸವಾಗಿದ್ದಾರೆ. ಗದಗ ನಗರದಲ್ಲಿ ವಾಸವಾಗಿರುವ ಕುಟುಂಬಗಳಿಗೆ ಗುಡಾರಗಳು ಇರುತ್ತವೆ. ಇಲ್ಲಿರುವ ಸದಸ್ಯರು ಕೂಲಿ, ಗೌಂಡಿ ಕೆಲಸಕ್ಕೆ ಹೋಗುವುದು, ಸಣ್ಣಪುಟ್ಟ ಸ್ಟೇಷನರಿ ಸಾಮಾನುಗಳನ್ನು ವ್ಯಾಪಾರ ಮಾಡುವುದು, ಒಂದೂರಿನಿಂದ ಇನ್ನೊಂದು ಊರಿಗೆ ಹೋಗಿ ದುಡಿದುಕೊಂಡು ಆರ್ಥಿಕ ನಿರ್ವಹಣೆ ಮಾಡಿಕೊಳ್ಳುತ್ತಾರೆ. ಇವತ್ತಿಗೂ ಈ ಕೆಲಸಗಳನ್ನು ಇವರು ಅವಲಂಬಿಸಿದ್ದಾರೆ.

೨. ಹುಲಕೋಟಿ

ಗದಗ ಜಿಲ್ಲೆಯ ಹುಲಿಕೋಟೆ ಗ್ರಾಮದಲ್ಲಿ ಒಂದು ಕುಟುಂಬ ನೆಲೆಸಿದೆ. ಈ ಗ್ರಾಮದಲ್ಲಿ ಇವರ ಒಟ್ಟು ಜನಸಂಖ್ಯೆ ೩, ಇದರಲ್ಲಿ ಪುರುಷರು ೧, ಮಹಿಳೆಯರು ೨ ಇರುವರು.

ಮಾಲ ಸಮುದಾಯದವರು ಗದಗ ಜಿಲ್ಲೆಯ ಹುಲಕೋಟಿ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹುಲಕೋಟಿ ಎಂಬಲ್ಲಿ ಒಂದು ಕುಟುಂಬದವರು ವಾಸವಾಗಿದ್ದಾರೆ. ಗದಗನಿಂದ ಹುಲಕೋಟಿಯು



೨೫ ಕಿ.ಮೀ.ದೂರದಲ್ಲಿ ಇದೆ. ಹುಲಕೋಟೆಯಲ್ಲಿ ವಾಸವಾಗಿರುವ ಕುಟುಂಬದವರಿಗೆ ಗುಡಾರ (ಗುಡಿಸಲು) ಇರುತ್ತವೆ. ಈ ಕುಟುಂಬದವರ ವೃತ್ತಿಯೇನೆಂದರೆ ಕೂಲಿ ಮಾಡುವುದು, ಬೇರೆ ಪಟ್ಟಣಗಳಿಗೆ ಹೋಗಿ ದುಡಿದು ಆರ್ಥಿಕ ಜೀವನವನ್ನು ನಿರ್ವಹಣೆ ಮಾಡಿಕೊಳ್ಳುತ್ತಾರೆ. ಇವತ್ತಿಗೂ ಕೂಡ ಇಲ್ಲಿ ವಾಸಮಾಡುವ ಕುಟುಂಬದವರು ಒಂದೂರಿನಿಂದ ಇನ್ನೊಂದು ಊರಿಗೆ ದುಡಿಯಲು ಹೊಗುತ್ತಾರೆ.

೩. ಗಜೇಂದ್ರಗಡ

ಗಜೇಂದ್ರಗಡದಲ್ಲಿ ಎರಡು ಕುಟುಂಬ ನೆಲೆಸಿವೆ. ಇಲ್ಲಿ ಇವರ ಒಟ್ಟು ಜನಸಂಖ್ಯೆ ೧೧ ಇರುತ್ತದೆ. ಇದರಲ್ಲಿ ಪುರುಷರು ೫ ಜನರಿರುವರು. ಮಹಿಳೆಯರು ೬ ಜನರು ಇರುವರು.

ಮಾಲ ಸಮುದಾಯದವರು ಗದಗ ಜಿಲ್ಲೆಯ ರೋಣ ತಾಲೂಕಿನ ಸ್ಥಳೀಯ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗಜೇಂದ್ರಗಡ ನಗರದಲ್ಲಿ ಎರಡು ಕುಟುಂಬಗಳು ವಾಸವಾಗಿರುತ್ತವೆ. ಗಜೇಂದ್ರಗಡದಲ್ಲಿ ವಾಸವಾಗಿರುವ ಕುಟುಂಬಗಳಿಗೆ ಮನೆ ಇರುವುದಿಲ್ಲ. ಗುಡಾರ (ಗುಡಿಸಲು) ಇರುತ್ತದೆ. ಗಜೇಂದ್ರಗಡದಲ್ಲಿ ವಾಸವಾಗಿರುವ ಸದಸ್ಯರ ವೃತ್ತಿಗಳೆಂದರೆ ಕೂಲಿ ಮಾಡುವುದು, ಸಣ್ಣಪುಟ್ಟ ಪ್ಲಾಸ್ಟಿಕ್ ಸಾಮಾನುಗಳನ್ನು ಮಾರಾಟ ಮಾಡುವುದು ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಿ ದುಡಿದು ಆರ್ಥಿಕ ಸಮಸ್ಯೆಯನ್ನು ನಿಭಾಯಿಸಿಕೊಳ್ಳುವುದು ಈ ಸಮುದಾಯದವರ ವೃತ್ತಿಗಳಾಗಿರುತ್ತವೆ. ಇವತ್ತೀಗೂ ಸಹ ಇವರು ಇಂತಹ ಸಮಸ್ಯಯನ್ನು ಅನುಭವಿಸುತ್ತಿದ್ದಾರೆ.

ಗದಗ ಜಿಲ್ಲೆಯಲ್ಲಿ ಮಾಲ ಸಮುದಾಯದ ಒಟ್ಟು ೧೧ ಕುಟುಂಬಗಳು ನೆಲೆಸಿವೆ. ಗ್ರಾಮೀಣ ಪ್ರದೇಶದಲ್ಲಿ ಒಂದು ಕುಟುಂಬ ಮಾತ್ರ ನೆಲೆಸಿದ್ದು ಇವರ ಒಟ್ಟು ಜನಸಂಖ್ಯೆಯು ೩ ಇದೆ. ಇದರಲ್ಲಿ ಪುರುಷರು ೧, ಮಹಿಳೆಯರು ೨ ಜನ ಇರುವರು. ಗಂಡ, ಹೆಂಡತಿ ಹಾಗೂ ಮಗಳನ್ನು ಈ ಕುಟುಂಬ ಒಳಗೊಂಡಿದೆ. ಗಜೇಂದ್ರಗಡ ಹಾಗೂ ಗದಗ ನಗರಗಳೆರಡನ್ನೂ ಒಳಗೊಂಡು ಮಾಲ ಸಮುದಾಯದ ಒಟ್ಟು ೧೦ ಕುಟುಂಬ ನೆಲೆಸಿವೆ. ನಗರದ ಇವರ ಒಟ್ಟು ಜನಸಂಖ್ಯೆಯು ೫೩ ಇದೆ. ಇದರಲ್ಲಿ ಪುರುಷರು ೨೬ ಜನರು ಇರುವರು. ಮಹಿಳೆಯರು ೨೭ ಜನರು ಇರುವರು.

ಗದಗ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ನೆಲೆಸಿದ ಮಾಲ ಸಮುದಾಯದ ಕುಟುಂಬಗಳು ಶೇಕಡ ೫.೩೫, ಇರುತ್ತದೆ. ನಗರ ಪ್ರದೇಶದ ಮಾಲ ಸಮುದಾಯದ ಜನಸಂಖ್ಯೆ ಶೇಕಡ ೯೪.೬೫ ಇರುತ್ತದೆ.

೩. ಧಾರವಾಡ ಜಿಲ್ಲೆ

ಧಾರವಾಡ ಕರ್ನಾಟಕ ರಾಜ್ಯದ ಒಂದು ಜಿಲ್ಲೆಯಾಗಿದೆ. ಧಾರವಾಡ ನಗರ ಈ ಜಿಲ್ಲೆಯ ಕೇಂದ್ರಸ್ಥಳ. ಹುಬ್ಬಳ್ಳಿ ಮತ್ತು ಧಾರವಾಡ ಅವಳಿ ನಗರಗಳು ಕರ್ನಾಟಕದಲ್ಲಿ ಬೆಂಗಳೂರಿನ ನಂತರ ಎರಡನೆಯ ಅತಿ ದೊಡ್ಡ ನಗರ ಎಂದರೆ ಹುಬ್ಬಳ್ಳಿ-ಧಾರವಾಡ ನಗರ, ಹುಬ್ಬಳ್ಳಿ ವಾಣಿಜ್ಯ ನಗರವಾದರೆ, ಧಾರವಾಡ ಶೈಕ್ಷಣಿಕ ಜಿಲ್ಲೆಯಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುತ್ತದೆ. ಧಾರವಾಡ ಅತಿ

ಹೆಚ್ಚು ತಂಪು ವಾತಾವರಣ ಹೊಂದಿರುವ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುತ್ತದೆ. ಧಾರವಾಡದ ಮೂಲ ರೂಪ 'ದಾರವಾಡ' ಇದು ಒಂದು ವ್ಯಕ್ತಿಯ ನಾಮದ ಹೆಸರು ಎಂದು ಇತಿಹಾಸದಿಂದ ತಿಳಿದು ಬರುತ್ತದೆ. ವಿಜಯನಗರದ ರಾಜಮಾಹಾರಾಜರ ಕಾಲದ ಧಾರಾರಾವ್ ಎಂಬುವನು ೧೪೦೩ ರಲ್ಲಿ ಕೋಟೆ ಕಟ್ಟಿಸಿದ್ದರ ನಿಮಿತ್ತ ಧಾರವಾಡ ಎಂಬ ಹೆಸರು ಬಂದಿತೆಂದು ತಿಳಿಯುತ್ತದೆ. ಧಾರವಾಡ ಶಬ್ದವು ಸಂಸ್ಕೃತದ ದ್ವಾರವಾಟ ಶಬ್ದದಿಂದ ಬಂದಿದೆ. ಸಂಸ್ಕೃತದಲ್ಲಿ ದ್ವಾರ ಎಂದರೆ "ಬಾಗಿಲು" ಮತ್ತು ವಾಟ ಎಂದರೆ ಊರು ಎಂದರ್ಥ.

ಭಾರತ ಸ್ವತಂತ್ರ್ಯಾ ನಂತರ, ೧೯೫೬ ರಲ್ಲಿ ಕನ್ನಡ ಭಾಷಾವಾರು ವಿಂಗಡಣೆಯಿಂದಾಗಿ ಧಾರವಾಡವು ಮೈಸೂರು ರಾಜ್ಯದ ಭಾಗವಾಯಿತು. ೧೯೭೩ ರಲ್ಲಿ ಮೈಸೂರು ರಾಜ್ಯ ಕರ್ನಾಟಕವಾಗಿ ಮರುನಾಮಕರಣಗೊಂಡಿತು. ೧೯೯೭ ರ ಮೊದಲು ಧಾರವಾಡದ ವಿಸ್ತೀರ್ಣ ೧೩೭೩೮ ಚ.ಕೀ.ಮೀ. ಆಗಿತ್ತು. ೧೯೯೭ ರಲ್ಲಿ ಧಾರವಾಡ ಜಿಲ್ಲೆಯನ್ನು ವಿಂಗಡಿಸಿ ಧಾರವಾಡ, ಹಾವೇರಿ, ಗದಗ ಜಿಲ್ಲೆಗಳನ್ನಾಗಿ ಮಾಡಲಾಯಿತು.

ಧಾರವಾಡ ಜಿಲ್ಲೆಯ ವಿಸ್ತೀರ್ಣ.

ವಿಸ್ತೀರ್ಣ, ೪೨೬೫ ಚ. ಕೀ. ಮೀ. ಜನಸಂಖ್ಯೆ ೧೮,೪೬,೯೯೩. ಸಾಕ್ಷರತೆ, ೭೮ ರಷ್ಟು. ಹೋಬಳಿಗಳು ೧೪ ಇರುತ್ತವೆ. ಒಟ್ಟು ಹಳ್ಳಿಗಳು ೩೯೦ ಇರುತ್ತವೆ. ಗ್ರಾಮ ಪಂಚಾಯತಿಗಳು ೧೨೭ ಇರುತ್ತವೆ. ೫ ತಾಲೂಕು ಪಂಚಾಯತ್‌ಗಳು ಇರುತ್ತವೆ.

ತಾಲೂಕುಗಳು

ಧಾರವಾಡ ಜಿಲ್ಲೆಯು ಐದು ತಾಲೂಕುಗಳನ್ನ ಒಳಗೊಂಡಿರುತ್ತದೆ. ಅವುಗಳೆಂದರೆ, ಧಾರವಾಡ, ಹುಬ್ಬಳ್ಳಿ, ಕುಂದಗೋಳ, ಕಲಘಟಗಿ, ನವಲಗುಂದ.

ಪ್ರಮುಖ ನದಿಗಳು

ಧಾರವಾಡ ಜಿಲ್ಲೆಯ ಪ್ರಮುಖ ನದಿಗಳು: ಮಲಪ್ರಭಾ, ಶಲ್ಮಲಾ, ಧರ್ಮ, ವರದಾ, ಗೂಗಿಹಳ್ಳ, ತುಪ್ಪರಿ ಹಳ್ಳ, ಪಿಂಜರ ಹಳ್ಳ, ಹಂದಿನಗಹಳ್ಳ, ಬೆಣ್ಣೆ ಹಳ್ಳ.

ಪ್ರವಾಸಿ ತಾಣಗಳು

ಹುಬ್ಬಳ್ಳಿಯ ಚಂದ್ರಮೌಳೇಶ್ವರ ದೇವಸ್ಥಾನ, ಉಣಕಲ್ ಕೆರೆ, ಭವಾನಿಶಂಕರ ದೇವಾಲಯ, ನೃಪತುಂಗ ಬೆಟ್ಟ.

ಭೌಗೋಳಿಕತೆ

ಧಾರವಾಡ ಜಿಲ್ಲೆಯು ಕರ್ನಾಟಕದ ಪಶ್ಚಿಮ ಭಾಗದ ಉತ್ತರಾರ್ಧ ಕರ್ನಾಟಕದಲ್ಲಿ ಕಂಡುಬರುತ್ತದೆ. ಉತ್ತರಕ್ಕೆ ಬೆಳಗಾವಿ, ದಕ್ಷಿಣಕ್ಕೆ ಹಾವೇರಿ, ಪೂರ್ವಕ್ಕೆ ಗದಗ, ಪಶ್ಚೀಮಕ್ಕೆ ಉತ್ತರ ಕನ್ನಡ ಜಿಲ್ಲೆಗಳಿಂದ ಆವರಿಸಿವೆ. ಈ ಜಿಲ್ಲೆಯು ಮಲೆನಾಡು, ಗಡಿನಾಡು, ಬೆಳವನಾಡು ಎಂಬ ಮೂರು ವಿಭಾಗಗಳನ್ನು ಹೊಂದಿರುತ್ತದೆ.

ಮಾಲ(ಪರ್ವತ ಮಲ್ಲಯ್ಯ) ಸಮುದಾಯದವರು ಧಾರವಾಡ ಜಿಲ್ಲೆಯ ಹುಬ್ಬಳ್ಳಿಯ ಗೊಕನಕೊಪ್ಪ ಬಡಾವಣೆಯಲ್ಲಿ ವಾಸಮಾಡುತ್ತಾರೆ

ಕೋಷ್ಟಕ ೨.೬: ಧಾರವಾಡ ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ

ಜಿಲ್ಲೆ	ತಾಲ್ಲೂಕು	ಊರು	ಕು.	ಗಂ	ಹೆ	ಒಟ್ಟು
ಧಾರವಾಡ	ಧಾರವಾಡ	ಹುಬ್ಬಳ್ಳಿ	೨೮	೭೨	೭೩	೧೪೫
		ಒಟ್ಟು	೨೮	೭೨	೭೩	೧೪೫

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ಲಂಬಚಿತ್ರ: ೨.೨ ಧಾರವಾಡ ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ ಪ್ರಮಾಣ



ಹುಬ್ಬಳ್ಳಿ: ಮಾಲ ಸಮುದಾಯದವರು ಧಾರವಾಡ ಜಿಲ್ಲೆ ಹುಬ್ಬಳ್ಳಿಯ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗೋಕನಕೊಪ್ಪದ ಮಹಾಲಕ್ಷ್ಮಿ ಬಡಾವಣೆಯಲ್ಲಿ ೨೮ ಕುಟುಂಬಗಳು ವಾಸವಾಗಿವೆ. ಇಲ್ಲಿ ಇವರ ಒಟ್ಟು ಜನಸಂಖ್ಯೆ ೧೪೫ ಇರುತ್ತದೆ. ಇದರಲ್ಲಿ ಪುರುಷರು ೭೨ ಇರುತ್ತಾರೆ. ಇದರಲ್ಲಿ ಮಹಿಳೆಯರು ೭೩ ಜನರು ಇರುವರು.

ಇದರ ಹೊರತಾಗಿ ಗ್ರಾಮೀಣ ಪ್ರದೇಶದಲ್ಲಿ ಇವರು ಕಾಣಸಿಗುವುದಿಲ್ಲ. ಹುಬ್ಬಳ್ಳಿಯು ಧಾರವಾಡದಿಂದ ೨೦ ಕಿ.ಮೀ.ದೂರದಲ್ಲಿದೆ. ಹುಬ್ಬಳ್ಳಿಯಲ್ಲಿ ವಾಸವಾಗಿರುವ ಕುಟುಂಬದವರಿಗೆ ಸ್ವಂತ ಜಾಗ ಮನೆ ಇರುವುದಿಲ್ಲ. ಇಲ್ಲಿ ವಾಸವಾಗಿರುವ ಎಲ್ಲಾ ಕುಟುಂಬಸ್ಥರು ಗುಡಾರಗಳನ್ನು ಹಾಕಿಕೊಂಡು ಜೀವನ ಮಾಡುತ್ತಾರೆ. ಹುಬ್ಬಳ್ಳಿಯಲ್ಲಿ ವಾಸವಾಗಿರುವ ಮಾಲ ಸಮುದಾಯದವರ ಮೂಲ ವೃತ್ತಿಗಳೆಂದರೆ ಹಿರಿಯ ಸದಸ್ಯರು ಭಿಕ್ಷೆ ಬೇಡುವುದು, ಕೂಲಿ ದುಡಿಯುವುದು, ಹೆಣ್ಣು ಮಕ್ಕಳು ಸಣ್ಣಪುಟ್ಟ ಸ್ಟೇಷನರಿ ಸಾಮಾನುಗಳನ್ನು ವ್ಯಾಪಾರ ಮಾಡುವುದು, ಗಂಡುಮಕ್ಕಳು ಪ್ರದರ್ಶನ ಕಲೆಗಳನ್ನು ಕಲಿಯುವುದು ಮತ್ತು ಆಡುವುದು ಆಗಿರುತ್ತದೆ. ಇಲ್ಲಿ ವಾಸಮಾಡುವ ಸಮುದಾಯದವರು ಇವತ್ತಿಗೂ ಸಹ ಇಂತಹ ಮೇಲಿನ ಎಲ್ಲಾ ವೃತ್ತಿಗಳನ್ನು ಅವಲಂಬಿಸಿರುತ್ತಾರೆ.



೪. ಮೈಸೂರು ಜಿಲ್ಲೆ

ಮೈಸೂರು ಜಿಲ್ಲೆಯು ಕರ್ನಾಟಕ ರಾಜ್ಯದಲ್ಲಿರುವ ಒಂದು ಪ್ರಸಿದ್ಧ ನಗರವಾಗಿರುತ್ತದೆ. ಮೈಸೂರು ಅದೇ ಹೆಸರಿನ ಜಿಲ್ಲೆಯ ಮೈಸೂರು ಸಂಸ್ಥಾನದ ಹಳೆಯ ರಾಜಧಾನಿ. ಮೈಸೂರನ್ನು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಕರೆಯಲಾಗುತ್ತದೆ. ಮೈಸೂರನ್ನು ಕೆಲವೊಮ್ಮೆ ಅರಮನೆಯ ನಗರವೆಂದು ಕರೆಯಲಾಗುತ್ತದೆ. ಈ ಜಿಲ್ಲೆ ಕರ್ನಾಟಕ ರಾಜ್ಯದ ಎರಡನೇ ಅತಿ ದೊಡ್ಡ ನಗರವೆಂಬ ಪ್ರಖ್ಯಾತಿಯನ್ನು ಪಡೆದಿರುತ್ತದೆ. ಮೈಸೂರು ಎಂಬ ಹೆಸರು ಆಂಗ್ಲಭಾಷೆಯಿಂದ ರೂಪಾಂತರಗೊಂಡಿದೆ. ಇದರ ಮೂಲ ಹೆಸರು "ಮಹಿಷಪುರಿ" ಮಹಿಷೂರು. ಇದರ ಅರ್ಥವೆನೆಂದರೆ ಮಹಿಷನ ವಾಸಸ್ಥಾನವೆಂದು ಕನ್ನಡದಲ್ಲಿ ಹೇಳಬಹುದು.

ಮೈಸೂರು ನಗರದ ಸ್ಥಾಪನೆ

ಈ ನಗರದ ಸ್ಥಾಪನೆ ೧೧ ನೇಯ ಶತಮಾನದಲ್ಲಿ ನಡೆಯಿತೆಂದು ತಿಳಿದು ಬರುತ್ತದೆ. ೧೪ ನೇ ಶತಮಾನದ ಕೊನೆಯ ಹೊತ್ತಿಗೆ ಒಡೆಯರ್ ವಂಶದ ಅರಸರು ಮೈಸೂರನ್ನು ಆಳಲಾರಂಭಿಸಿದರು. ಈ ವಂಶದ ಮೊದಲ ಅರಸು ಯದುರಾಯ. ಮೊದಲಿಗೆ ವಿಜಯನಗರ ಸಾಮ್ರಾಜ್ಯದ ಭಾಗವಾಗಿದ್ದ ಮೈಸೂರು ಸಂಸ್ಥಾನ ೧೯೬೫ ರಲ್ಲಿ ವಿಜಯನಗರ ಪತನದ ನಂತರ ಸ್ವತಂತ್ರ ರಾಜ್ಯವಾಯಿತು. ನಂತರ ಕಂಠೀರವ ನರಸರಾಜ ಒಡೆಯರು ಈ ಸಂಸ್ಥಾನವನ್ನು ವಿಸ್ತರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ ಎಂದು ಇತಿಹಾಸ ಪುಟಗಳಿಂದ ತಿಳಿದು ಬರುತ್ತದೆ. ೧೮ ನೇಯ ಶತಮಾನದಲ್ಲಿ ಒಡೆಯರ್ ಅರಸರ ಪ್ರಭಾವ ಕಡಿಮೆಯಾಗಿ ಹೈದರ್‌ಅಲಿ ಮತ್ತು ಟಿಪ್ಪು ಸುಲ್ತಾನರ ಆಡಳಿತ ಜಾರಿಗೆ ಬಂದಿತು. ಇವರ ಕಾಲದಲ್ಲಿ ಮೈಸೂರು ಸಂಸ್ಥಾನ ಅವಾಗವಾಗ ಬದಲಾಗುತ್ತಿತ್ತು.

ಮೈಸೂರು ಜಿಲ್ಲೆಯ ೨೦೧೧ರ ಜನಗಣತಿಯ ಪ್ರಕಾರ ಜನಸಂಖ್ಯೆ ೩೦,೦೧, ೧೨೭ ಇರುತ್ತದೆ. ಮೈಸೂರು ಜಿಲ್ಲೆಯು ಕರ್ನಾಟಕದ ದಕ್ಷಿಣ ಭಾಗದಲ್ಲಿರುತ್ತದೆ. ಇದು ದಕ್ಷಿಣಕ್ಕೆ ಚಾಮರಾಜನಗರ ಜಿಲ್ಲೆಯೊಂದಿಗೆ, ಪಶ್ಚಿಮಕ್ಕೆ ಕೊಡಗು ಜಿಲ್ಲೆಯೊಂದಿಗೆ, ಪೂರ್ವಕ್ಕೆ ಮಂಡ್ಯ ಜಿಲ್ಲೆಯೊಂದಿಗೆ, ಸುತ್ತುವರಿದಿರುತ್ತದೆ. ಮೈಸೂರು ಜಲ್ಲೆ ೬೮೫೪ ಚದರ ಕೀ ಮೀ ಪ್ರದೇಶವನ್ನು ಹೊಂದಿರುತ್ತದೆ. ಇದು ೭೮೮ ಮೀಟರಿನಿಂದ ೬೬೦ ಮೀಟರ್ ಎತ್ತರದ ವ್ಯಾಪ್ತಿಯಲ್ಲಿ ಇರುತ್ತದೆ. ಈ ಜಿಲ್ಲೆ ದಕ್ಷಿಣ ಭಾರತಕ್ಕೆ ಸೇರಿರುತ್ತದೆ.

ಮೈಸೂರು ಜಿಲ್ಲೆಯು ಒಂದು ಐತಿಹಾಸಿಕ ತಾಣವಾಗಿದೆ, ಈ ಜಿಲ್ಲೆಯು ಇತಿಹಾಸದ ಪುಟಗಳಲ್ಲಿ ಮನೆ ಮಾತಾಗಿರುತ್ತದೆ ಅನೇಕ ರಾಜ ಮಾಹಾರಾಜರು ಆಳಿದ ಸಂಪದ್ಭರಿತ ನಾಡಾಗಿರುತ್ತದೆ. ಈ ಜಿಲ್ಲೆಯು ತನ್ನದೇಯಾದ ವಿಶಿಷ್ಟತೆಯನ್ನು ಹೊಂದಿರುತ್ತದೆ. ಮೈಸೂರು ತನ್ನ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರಮುಖವಾದ ಪ್ರವಾಸಿ ತಾಣಗಳನ್ನು ಒಳಗೊಂಡಿರುತ್ತದೆ. ಮೈಸೂರ ಜಿಲ್ಲೆಯಲ್ಲಿ ಜಗನ್ಮೋಹನ ಅರಮನೆ, ಬಳ್ಳೆ ಆನೆ ಶಿಬಿರ, ಮೈಸೂರು ಚಾಮುಂಡಿ ಬೆಟ್ಟ, ಶ್ರೀ ಚಾಮರಾಜೇಂದ್ರ ಮೃಗಾಲಯ, ಹಳೆ ತಿರುಮಕೂಡಲು ಅರಮನೆ ಈ ರೀತಿಯ ಪ್ರಮುಖ ಪ್ರವಾಸಿ ತಾಣಗಳಿಂದ ರಂಜಿಸುತ್ತದೆ. ಪ್ರತಿವರ್ಷ ಪ್ರಸಿದ್ದ ದಸರಾ ಹಬ್ಬವನ್ನು ನಾಡ ಹಬ್ಬವನ್ನಾಗಿ ಆಚರಿಸಲಾಗುತ್ತದೆ.

ಮಾಲ(ಪರ್ವತ ಮಲ್ಲಯ್ಯ) ಸಮುದಾಯದವರು ಮೈಸೂರಿನ ಬರ್ನಿಮಂಟಪ ಬಡಾವಣೆಯಲ್ಲಿ ವಾಸಮಾಡುತ್ತಾರೆ.


ಆಧಾರ: ಅಂತರ್ಜಾಲ ಮಾಹಿತಿ

ಕೋಷ್ಟಕ ೨.೭: ಮೈಸೂರು ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ

ಜಿಲ್ಲೆ	ತಾಲ್ಲೂಕು	ಊರು	ಕು.	ಗಂ	ಹೆ	ಒಟ್ಟು
ಮೈಸೂರು	ಮೈಸೂರು	ಮೈಸೂರು	೦೭	೧೯	೧೮	೩೭
		ಒಟ್ಟು	೦೭	೧೯	೧೮	೩೭

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ವೃತ್ತಚಿತ್ರ: ೨.೪ ಮೈಸೂರು ಜಿಲ್ಲೆಯ ಮಾಲ ಸಮುದಾಯದ ಶೇಕಡಾವಾರು ಜನಸಂಖ್ಯೆ



ಮಾಲ ಸಮುದಾಯದವರು ಮೈಸೂರು ಜಿಲ್ಲೆಯ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಮೈಸೂರು ಜಿಲ್ಲೆಯ ಮೈಸೂರು ನಗರದ ಬನ್ನಿಮಂಟಪದ ಬಳಿ ಒಟ್ಟು ೭ ಮಾಲ ಸಮುದಾಯದ ಕುಟುಂಬಗಳು ನೆಲೆಸಿವೆ. ಒಟ್ಟು ಜನಸಂಖ್ಯೆ ೩೭ ಇರುತ್ತದೆ. ಇದರಲ್ಲಿ ಪುರುಷರು ೧೯ ಇರುತ್ತದೆ. ಇದರಲ್ಲಿ ಮಹಿಳೆಯರು ೧೮ ಜನರು ಜನರಿರುವರು.

ಮೈಸೂರಿನಲ್ಲಿ ವಾಸ ಮಡುವ ಮಾಲ ಸಮುದಾಯದ ಕುಟುಂಬದವರಿಗೆ ಗುಡಾರಗಳು ಇರುತ್ತವೆ. ಮೈಸೂರಿನಲ್ಲಿ ವಾಸ ಮಾಡುವ ಮಾಲ ಕುಟುಂಬದ ಸದಸ್ಯರ ವೃತ್ತಿಗಳೆಂದರೆ ಕೂಲಿ, ಬೇರೆಯವರ ಅಡಿಕೆ ತೋಟಗಳಿಗೆ ಕೂಲಿಗಾಗಿ ದುಡಿಯಲು ಹೋಗುವುದು, ಸಣ್ಣಪುಟ್ಟ ವ್ಯಾಪಾರಿ ವೃತ್ತಿ ಮಾಡುವುದು ಮತ್ತು ಬೇರೆ ಬೇರೆ ಪಟ್ಟಣಗಳಿಗೆ ಆರ್ಥಿಕ ನಿರ್ವಹಣೆಗಾಗಿ ದುಡಿಯಲು ಹೋಗುವುದನ್ನು ಇವರು ಇವತ್ತೀಗೂ ಮಾಡುತ್ತಾರೆ.

೫. ರಾಯಚೂರ ಜಿಲ್ಲೆ.

ರಾಯಚೂರು ಜಿಲ್ಲೆಯು ಕರ್ನಾಟಕದ ಉತ್ತರ ಭಾಗಕ್ಕಿರುವ ಹೈದರಾಬಾದ್ ಕರ್ನಾಟಕದ ಪ್ರಮುಖವಾದ ಜಿಲ್ಲೆಯಾಗಿರುತ್ತದೆ. ರಾಯಚೂರು ಜಿಲ್ಲೆಯು ದೇವದುರ್ಗ, ಸಿಂದನೂರು, ಮಾನವಿ, ಲಿಂಗಸೂರು ಐದು ತಾಲೂಕುಗಳನ್ನು ಒಳಗೂಂಡಿರುತ್ತದೆ. ರಾಯಚೂರು ಜಿಲ್ಲೆಯ ಜನಸಂಖ್ಯೆ ೨೦೧೧ರ ಜನಗಣತಿಯ ಯಂತೆ ೧೬,೪೮,೨೧೨ ರಷ್ಟು ಇರುತ್ತದೆ. ರಾಯಚೂರು ಜಿಲ್ಲೆಯ ಹವಾಗುಣವು ಬಹುತೇಕ ಒಣ ಹವೆ ಇರುತ್ತದೆ. ಈ ಜಿಲ್ಲೆಯಲ್ಲಿ ಸಾಧಾರಣ ಪ್ರಮಾಣದ ಮಳೆಯಾಗುತ್ತದೆ. ಬೇಸಿಗೆಯಲ್ಲಿ ರಾಜ್ಯದಲ್ಲಿ ಅತಿ ಹೆಚ್ಚು ಅಂದರೆ, ೪೫ ಡಿಗ್ರಿವರೆಗೆ ಉಷ್ಣತೆ ಇರುತ್ತದೆ. ಈ ಜಿಲ್ಲೆಯಲ್ಲಿ ಮಳೆಯ ಅಭಾವದಿಂದ ಜನರ ಜೀವನ ಬಹಳ ತೊಂದರೆಯಾಗಿರುತ್ತದೆ ಎಂದು ತಿಳಿಯಲಾಗಿದೆ.

ರಾಯಚೂರು ಜಿಲ್ಲೆಯ ಈಶಾನ್ಯ ಮತ್ತು ಪೂರ್ವದಲ್ಲಿ ಆಂಧ್ರಪ್ರದೇಶ, ವಾಯುವ್ಯದಲ್ಲಿ ಬಿಜಾಪುರ, ಉತ್ತರದಲ್ಲಿ ಗುಲ್ಬರ್ಗ, ದಕ್ಷಿಣದಲ್ಲಿ ಬಳ್ಳಾರಿ, ಪಶ್ಚಿಮದಲ್ಲಿ ಬಾಗಲಕೋಟೆ ಮತ್ತು ಕೊಪ್ಪಳ ಜಿಲ್ಲೆಗಳಿಂದ ರಾಯಚೂರು ಜಿಲ್ಲೆ ಸುತ್ತುವರಿದಿದೆ. ಈ ಜಿಲ್ಲೆ ಕರ್ನಾಟಕದ ಉತ್ತರದಲ್ಲಿ ಪೂರ್ವ ಭಾಗಕ್ಕಿದೆ.

ರಾಯಚೂರು ಜಲ್ಲೆಯು ಭಾರತ ಸ್ವಾತಂತ್ರ ಮತ್ತು ಹೈದರಬಾದ್ ಪ್ರಾಂತ್ಯ ವಿಮೋಚನಾ ಹೊರಾಟದಲ್ಲಿ ಈ ಜಿಲ್ಲೆಯ ಪಾತ್ರ ಪ್ರಮುಖವದುದು. ರಾಯಚೂರು ಕೋಟೆಯು ರಾಯಚೂರ ನಗರದ ಆಕರ್ಷಣೆಗೆ ಪ್ರಮುಖವಾಗಿದೆ. ಈ ಕೋಟೆಯನ್ನು ೧೨೯೪ ರಲ್ಲಿ ಕಟ್ಟಲಾಯಿತು ಎಂದು ತಿಳಿದು ಬರುತ್ತದೆ. ಇದು ವಿಜಯನಗರ ಅರಸರ ಕಾಲದಲ್ಲಿ ಈ ಪ್ರದೇಶ ಹೋರಾಟದ ಅಂಗಳವಾಗಿತ್ತೆಂದು ಇತಿಹಾಸದಿಂದ ತಿಳಿದು ಬರುತ್ತದೆ. ರಾಯಚೂರು ಜಿಲ್ಲೆಯ ದಕ್ಷಿಣದಲ್ಲಿ ತುಂಗಭದ್ರಾ ನದಿ ಹಾಗೂ ಉತ್ತರದಲ್ಲಿ ಕೃಷ್ಣಾ ನದಿ ಹರಿಯುತ್ತಿದ್ದು, ಈ ಜಿಲ್ಲೆಯು ಬಹುತೇಕ ಬಯಲು ಪ್ರದೇಶವನ್ನು ಹೊಂದಿರುತ್ತದೆ.

ರಾಯಚೂರು ಜಿಲ್ಲೆಯ ಶಕ್ತಿನಗರದಲ್ಲಿ ಇರುವ ಶಾಖೊತ್ಪನ್ನ ವಿಧ್ಯುತ್ ಸ್ಥಾವರ ಕರ್ನಾಟಕದಲ್ಲಿ ಬಳಸಲ್ಪಡುವ ವಿಧ್ಯುತ್‌ಚ್ಛಕ್ತಿಯ ಪ್ರಮುಖ ಕೇಂದ್ರಗಳಲ್ಲಿ ಒಂದಾಗಿರುತ್ತದೆ. ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಹಟ್ಟಿ ಚಿನ್ನದ ಗಣಿಯನ್ನು ಹೊಂದಿರುತ್ತದೆ, ದೇಶದಲ್ಲಿಯೇ ಅತಿ ಹೆಚ್ಚು ಚಿನ್ನದ ಅದಿರು ಹೊಂದಿರುವ ಗಣಿ ಇದಾಗಿರುತ್ತದೆ. ಅಶೋಕನ ಕಾಲದ ಮಸ್ಕಿ ಶಾಸನ ದೊರೆತಿರುವುದು ಲಿಂಗಸೂಗೂರು ತಾಲೂಕಿನ ಮಸ್ಕಿಯಲ್ಲಿ. ಈ ಶಾಸನದಲ್ಲಿ ದೇವನಾಂಪ್ರಿಯ ಪ್ರಿಯದರ್ಶಿನಿ ಎಂಬ ಅಶೋಕನ ಪ್ರಸಿ ಸಾಲು ಇರುತ್ತದೆ ಎಂದು ಇತಿಹಾಸದ ಪುಟಗಳಿಂದ ತಿಳಿದು ಬರುತ್ತದೆ. ರಾಯಚೂರು ಜಿಲ್ಲೆಯ ಸಿಂದನೂರು ರಾಜ್ಯದಲ್ಲಿಯೇ ಅತಿ ಹೆಚ್ಚು ಪ್ರಮಾಣದ ಭತ್ತ ಬೆಳೆಯುವ ಪ್ರದೇಶವಾಗಿದೆ. ಲಿಂಗಸೂಗೂರು ತಾಲೂಕಿನ ಮುದಗಲ್ಲಿನಲ್ಲಿ ಐತಿಹಾಸಿಕ ಕೋಟೆ ಇದ್ದು ಇಲ್ಲಿ ಮೊಹರಂ ಆಚರಣೆಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ರಾಯಚೂರು ಜಲ್ಲೆಯ ಮಾನವಿ ತಾಲೂಕಿನಲ್ಲಿ

ದಾಸ ಸಾಹಿತ್ಯ ಉಗಮವಾಗಿದ್ದು. ವಿಜಯ ದಾಸರು ಮಾನವಿ ತಾಲೂಕಿನವರಾಗಿದ್ದರೆಂದು ತಿಳಿದು ಬರುತ್ತದೆ.

ಈ ಜಿಲ್ಲೆಯು ಕಪ್ಪುಮಣ್ಣಿನಿಂದ ಕೂಡಿರುತ್ತದೆ. ಹೆಚ್ಚು ಕೆಂಪು ಮಣ್ಣಿನಿಂದ ಕೂಡಿದ ಪ್ರದೇಶವಾಗಿದೆ. ರಾಯಚೂರು ಜಿಲ್ಲೆ ಚಿನ್ನ, ಕಬ್ಬಣ, ತಾಮ್ರ, ಸೀಸದ ಅದಿರು, ಕಾವಿಮಣ್ಣು, ಸ್ಪತಿಕ ಶಿಲೆ, ಕಟ್ಟಡಗಳಿಗೆ ಉಪಯೋಗಿಸುವ ಶಿಲೆಗಳು, ಮತ್ತು ಜಂಬು ಮಣ್ಣು ಸಿಗುತ್ತದೆ. ರಾಯಚೂರಿನ ಕೆಲವು ಪ್ರದೇಶವು ನಿರಾವರಿಯಿಂದ ಕೂಡಿರುತ್ತದೆ. ಈ ಜಿಲ್ಲೆಗೆ ನೀರು ಅತಿ ಹೆಚ್ಚು ಕೆರೆ ಮತ್ತು ಕಾಲುವೆಯಿಂದ ಸರಬರಾಜು ಆಗುತ್ತದೆ.

ರಾಯಚೂರು ಜಿಲ್ಲೆಯ ಮಾನವಿ ತಾಲೂಕಿನ ಪೋತ್ನಾಳ ಎಂಬ ಗ್ರಾಮದಲ್ಲಿ ಮಾಲ (ಪರ್ವತ ಮಲ್ಲಯ್ಯ) ಸಮುದಾಯದವರು ವಾಸವಾಗಿದ್ದಾರೆ ಈ ಸಮುದಾಯದವರು ಈ ಜಿಲ್ಲೆಯ ಒಂದೇ ಊರಿನಲ್ಲಿ ನೆಲೆಸಿರುವುದು ಕಂಡುಬರುತ್ತದೆ.

ಕೋಷ್ಟಕ ೨.೮: ರಾಯಚೂರು ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ

ಜಿಲ್ಲೆ	ತಾಲೂಕ	ಗ್ರಾಮ	ಕು	ಗ	ಹೆ	ಒ
ರಾಯಚೂರು	ಮಾನ್ವಿ	ಪೋತ್ನಾಳ	೦೭	೧೬	೧೮	೩೪
		ಒಟ್ಟು	೦೭	೧೬	೧೮	೩೪

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ವೃತ್ತಚಿತ್ರ ೨.೫: ರಾಯಚೂರು ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ





ರಾಯಚೂರು ಜಿಲ್ಲೆಯ ಪೋತ್ನಾಳ ಗ್ರಾಮದಲ್ಲಿ ಮಾತ್ರ ೭ ಮಾಲ ಸಮುದಾಯದವರ ಕುಟುಂಬಗಳು ನೆಲೆಸಿರುವರು. ಇವರ ಒಟ್ಟು ಜನಸಂಖ್ಯೆ ೩ ಇರುತ್ತದೆ. ಇದರಲ್ಲಿ ಪುರುಷರು ೧೬ ಜನರಿರುತ್ತಾರೆ. ಮಹಿಳೆಯರು ೧೮ ಜನರು ಇರುವರು.

ಮಾಲ ಸಮುದಾಯದವರು ರಾಯಚೂರು ಜಿಲ್ಲೆ ಮಾನ್ವಿ ತಾಲೂಕಿನ ಕೊಟ್ನೇಕಲ್ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಪೊತ್ನಾಳ ಎಂಬ ಗ್ರಾಮದಲ್ಲಿ ಏಳು ಕುಟುಂಬದವರು ವಾಸವಾಗಿದ್ದಾರೆ. ಪೋತ್ನಾಳ ಎಂಬ ಗ್ರಾಮವು ರಾಯಚೂರಿನಿಂದ ೨೦ ಕಿ.ಮೀ. ದೂರದಲ್ಲಿದೆ. ಪೊತ್ನಾಳದಲ್ಲಿ ವಾಸಮಾಡುವ ಕುಟುಂಬದ ಮೂರು ಕುಟುಂಬಗಳಿಗೆ ಆಶ್ರಯ ಮನೆಗಳು ಇರುತ್ತವೆ. ಇನ್ನುಳಿದ ಕುಟುಂಬದವರು ಗುಡಿಸಲು ಮತ್ತು ಜೋಪಡಿಯನ್ನು ಹಾಕಿಕೊಂಡು ವಾಸಮಾಡುತ್ತಾರೆ. ಇಲ್ಲಿರುವ ಸದಸ್ಯರ ದುಡಿಮೆಯೆಂದರೆ ಕೃಷಿಕೂಲಿ, ದಿನಗೂಲಿಗಾಗಿ ಹೊಲಗದ್ದೆಗಳ ಕೆಲಸಕ್ಕೆ ಹೋಗುವುದು, ಗೌಂಡಿ ಕೆಲಸಗಳಿಗಾಗಿ ಹೋಗುವುದು ಮತ್ತು ಸಣ್ಣಪುಟ್ಟ ವಸ್ತುಗಳ ವ್ಯಾಪಾರ ಮಾಡುವುದು ಮತ್ತು ಒಂದೂರಿನಿಂದ ಇನ್ನೊಂದು ಊರಿಗೆ ಹೋಗಿ ದುಡಿದು ಆರ್ಥಿಕ ಸಮಸ್ಯೆಯನ್ನು ನಿಭಾಯಿಸಿಕೊಳ್ಳುವುದನ್ನು ಮಾಡುತ್ತಾರೆ.

೬. ಶಿವಮೊಗ್ಗ ಜಿಲ್ಲೆ

ಶಿವಮೊಗ್ಗ ಎಂಬ ಹೆಸರು ಶಿವ ಮತ್ತು ಮುಖ ಪದಪುಂಜದಿಂದ ಬಂದಿದ್ದು, ಇನ್ನೊಂದು ವ್ಯುತ್ಪತ್ತಿಯಂತೆ ಇದು ಸಿಹಿ–ಮೂಗೆ (ಸಿಹಿಯಾದ ಮೂಗ್ಗು) ಎಂದಿದ್ದು ಅದು ಶಿವಮೊಗ್ಗವಾಗಿ ಮಾರ್ಪಾಟು ಹೊಂದಿರುತ್ತದೆ. ಈ ಪ್ರದೇಶವು ಕ್ರಿ. ಪೂ ೩ನೇ ಶತಮಾನದಲ್ಲಿ ಸಾಮ್ರಾಟ್ ಅಶೋಕನ ಮೌರ್ಯ ಸಾಮ್ರಾಜ್ಯದ ದಕ್ಷಿಣದ ತುದಿಯಾಗಿದ್ದಿತು. ಶಿವಮೊಗ್ಗ ಕರ್ನಾಟಕ ರಾಜ್ಯದ ಒಂದು ಸಂಪದ್ಭರಿತ ನಗರವಾಗಿದೆ. ಇದು ಕರ್ನಾಟಕ ರಾಜಧಾನಿಯಾದ ಬೆಂಗಳೂರ ನಗರದಿಂದ ೨೬೬ ಕಿ,ಮಿ, ದೂರದಲ್ಲಿ ಇರುತ್ತದೆ. ಶಿವಮೊಗ್ಗವು ಕರ್ನಾಟಕದ ನಿಸರ್ಗಭರಿತ ಮಲೆನಾಡಿನ ಒಂದು ಭಾಗವಾಗಿದೆ. ಸಹ್ಯಾದ್ರಿ ಪರ್ವತಶ್ರೇಣಿ ಮತ್ತು ಅಲ್ಲಿ ಉಗಮಗೊಳ್ಳುವ ನದಿ ಉಪನದಿಗಳು ಶಿವಮೊಗ್ಗಕ್ಕೆ ಯಥೆಚ್ಚ ನೈಸರ್ಗಿಕ ಸೌಂದರ್ಯವನ್ನು ತಂದುಕೊಟ್ಟಿವೆ. ಶಿಮಮೊಗ್ಗದಿಂದ ೧೧೨ ಕಿ, ಮೀ ದೂರದಲ್ಲಿರುವ ಜಗತ್ಪ್ರಸಿದ್ಧ ಜೋಗದ ಜಲಪಾತ ಪ್ರಕೃತಿಯ ಒಂದು ಅಪೂರ್ವ ದೃಶ್ಯವಾಗಿರುತ್ತದೆ. ಇಲ್ಲಿ ಶರಾವತಿ ನದಿ ೨೩೫ ಮೀಟರ್ ಎತ್ತರದಿಂದ ಮನೋಹರವಾಗಿ ಧುಮುಕುತ್ತದೆ. ರಾಜ, ರಾಣಿ, ರೋರಲ್, ರಾಕೆಟ್ ಎಂಬ ನಾಲ್ಕು ವಿಭಿನ್ನ ಪ್ರವಾಹಗಳಾಗಿ ಶರಾವತಿ ಏಷ್ಯದ ಅತಿ ಎತ್ತರವಾದ ಜಲಪಾತವನ್ನು ನಿರ್ಮಿಸಿದೆ.

ಇಲ್ಲಿ ತುಂಗಭದ್ರಾ, ಶರಾವತಿ, ಕುಮುದ್ವತಿ, ಮತ್ತು ಇತರ ನದಿಗಳಿಂದ ಜಲ ಸರಬರಾಜಿನ ಸೌಕರ್ಯವನ್ನು ಶಿವಮೊಗ್ಗ ಜಿಲ್ಲೆ ಹೊಂದಿರುತ್ತದೆ. ಈ ಜಿಲ್ಲೆಯು ಕರ್ನಾಟಕದ 'ಅನ್ನದ ಬಟ್ಟಲು' ಎಂದು ಪ್ರಸಿದ್ದಿ ಪಡೆದಿರುತ್ತದೆ.

ಪ್ರವಾಸಿ ತಾಣಗಳು

ಜೋಗದ ಜಲಪಾತ, ಚಂದ್ರಗುತ್ತಿ, ಲಕ್ಷ್ಮೀ ನರಸಿಂಹ ದೇವಸ್ಥಾನ, ಲಿಂಗನಮಕ್ಕಿ ಅಣೆಕಟ್ಟು, ಒಣಕೆ ಅಬ್ಬೆ ಜಲಪಾತ, ಆಗುಂಬೆ, ಭದ್ರಾನದಿ ಯೋಜನೆ, ತುಂಗಾನದಿ ಯೋಜನೆ, ಮಂಡಗದ್ದೆ ಪಕ್ಷಿಧಾಮ. ಅಂಬುತೀರ್ಥ, ಕುಂದಾದ್ರಿ ಬೆಟ್ಟ, ಹಿಡ್ಲುಮನೆ ಜಲಪಾತ, ಸಿರಿಮನೆ ಜಲಪಾತ, ದಬ್ಬೆ ಜಲಪಾತ, ಮುಂತಾದವುಗಳಿರುತ್ತವೆ.

ತಾಲೂಕುಗಳು

ತೀರ್ಥಹಳ್ಳಿ, ಭದ್ರಾವತಿ, ಶಿಕಾರಿಪುರ, ಶಿವಮೊಗ್ಗ, ಸಾಗರ, ಸೊರಬ, ಹೊಸನಗರ ಏಳು ತಾಲೂಕುಗಳನ್ನು ಒಳಗೊಂಡಿರುತ್ತದೆ. ಈ ಜಿಲ್ಲೆಯು ಶಿಕ್ಷಣದಲ್ಲಿಯು ಮುಂದುವರೆದ ಜಿಲ್ಲೆಯಾಗಿ ಪರಿಗಣಿಸಲಾಗಿದೆ ಒಟ್ಟು ಸಾಕ್ಷರತಾ ಪ್ರಮಾಣ ೭೪.೮೬ರಷ್ಟು ಶಿವಮೊಗ್ಗ ಜಿಲ್ಲೆಯು ಪ್ರಮುಖವಾದಂತಹ ತಾಂತ್ರಿಕ, ವ್ಯಜ್ಞಾನಿಕ, ವ್ಯದ್ಯಕೀಯ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಾಮುಖ್ಯತೆಯನ್ನು ಹೊಂದಿರುತ್ತದೆ. ಮತ್ತು ಈ ಜಿಲ್ಲೆಯು ಪ್ರಮುಖವಾದ ಸಾಹಿತಿಗಳನ್ನು, ಶಿಕ್ಷಣ ತಜ್ಞರನ್ನು, ಸಂಶೋಧಕರನ್ನು, ವಿದ್ವಾಂಸರನ್ನು ಒಳಗೊಂಡ ಜಿಲ್ಲೆ ಎಂದು ಹೆಸರುವಾಸಿಯಾಗಿರುತ್ತದೆ.

ಕರ್ನಾಟಕದ ಮಾಲ(ಪರ್ವತ ಮಲ್ಲಯ್ಯ) ಸಮುದಾಯದವರು ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಎರಡು ಊರುಗಳಲ್ಲಿ ವಾಸವಾಗಿರುತ್ತಾರೆ.


ಆಧಾರ ಅಂತರ್ಜಾಲ ಮಾಹಿತಿ

ಕೋಷ್ಟಕ ೨.೯: ಶಿವಮೊಗ್ಗ ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ

ಜಿಲ್ಲೆ	ತಾಲೂಕು	ಗ್ರಾಮ	ಕು	ಗಂ	ಹೆ	ಒಟ್ಟು
ಶಿವಮೊಗ್ಗ	ಸೊರಬ	ಕುದರಿಗಣಿ	೦೮	೨೨	೨೦	೪೨
	ಸೊರಬ	ಜಡೆ	೧೦	೨೫	೨೬	೫೧
		ಒಟ್ಟು	೧೮	೪೭	೪೬	೯೩

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ಲಂಬಚಿತ್ರ: ೨.೩ ಶಿವಮೊಗ್ಗ ಜಿಲ್ಲೆಯ ಮಾಲ ಸಮುದಾಯದ ಜನಸಂಖ್ಯೆ ಪ್ರಮಾಣ



ಮಾಲ ಸಮುದಾಯದವರು ಶಿವಮೊಗ್ಗ ಜಿಲ್ಲೆಯ ನಗರ ಮತ್ತು ಹಳ್ಳಿಗಳು ಸೇರಿದಂತೆ ಎರಡು ಊರಿನಲ್ಲಿ ವಾಸ ಮಾಡುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು ೧೮ ಮಾಲ ಸಮುದಾಯದ ಕುಟುಂಬಗಳು ನೆಲೆಸಿವೆ. ಒಟ್ಟು ಜನಸಂಖ್ಯೆ ೯೩, ಇದರಲ್ಲಿ ಪುರುಷರು ೪೭, ಮಹಿಳೆಯರು ೪೬ ಜನರಿರುವರು.

೧. ಕುದುರೆಗಣಿ

ಕುದುರೆಗಣಿ ಎಂಬ ಗ್ರಾಮದಲ್ಲಿ ೮ ಕುಟುಂಬಗಳು ನೆಲೆಸಿವೆ. ಒಟ್ಟು ಜನಸಂಖ್ಯೆ ೪೨ ಇರುತ್ತದೆ. ಇದರಲ್ಲಿ ಪುರುಷರು ೨೨ ಜನರಿರುತ್ತಾರೆ. ಮಹಿಳೆಯರು ೨೦ ಜನರು ಇರುವರು.

ಮಾಲ ಸಮುದಾಯದವರು ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಗುಡವಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ(ಗುಡವಿ ಗುನ್ನೂರ ರೋಡ) ಕುದರಿಗಣಿ ಎಂಬ ಗ್ರಾಮವು ಶಿವಮೊಗ್ಗದಿಂದ ೩೫ ಕಿ.ಮೀ.ದೂರದಲ್ಲಿ ಇರುತ್ತದೆ. ಕುದರಿಗಣಿಯಲ್ಲಿ ವಾಸ ಮಾಡುವ ಕುಟುಂಬದವರಿಗೆ ಎರಡು ಸರಕಾರಿ ಮನೆಗಳು ಇರುತ್ತವೆ. ಇನ್ನುಳಿದ ಕುಟುಂಬಗಳಿಗೆ ಜೋಪಡಿಗಳು ಇರುತ್ತವೆ. ಕುದರಿಗಣಿಯಲ್ಲಿ ವಾಸ ಮಾಡುವವರ ವೃತ್ತಿಗಳೆಂದರೆ ಪ್ಲಾಸ್ಟಿಕ್ ಸಾಮಾನುಗಳನ್ನು ವ್ಯಾಪಾರ ಮಾಡುವುದು, ರಸ್ತೆಗಳ ಕೆಲಸಕ್ಕೆ ಹೋಗಿ ಕೂಲಿ ದುಡಿಯುವುದು, ಜಮೀನುಗಳಿಗೆ ಕೂಲಿ ಕೆಲಸಕ್ಕೆ ಹೋಗುವುದು, ಬೇರೆ ಬೇರೆ ಪಟ್ಟಣಗಳಿಗೆ ಆರ್ಥಿಕ ನಿರ್ವಹಣೆಗಾಗಿ ದುಡಿಯಲು ಹೋಗುವುದು. ಇಲ್ಲಿ ವಾಸವಿರುವ ಮಾಲ ಸಮುದಾಯದವರು ಇವತ್ತಿಗೂ ಹಲವಾರು ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ.

೨. ಜಡೆ

ಹಾವೇರಿ ಜಿಲ್ಲೆಗಳ ಗಡಿಭಾಗದಲ್ಲಿರುವ ಜಡೆ ಎಂಬ ಗ್ರಾಮದಲ್ಲಿ ೧೦ ಕುಟುಂಬಗಳು ನೆಲೆಸಿವೆ. ಒಟ್ಟು ಜನಸಂಖ್ಯೆ ೫೧ ಇರುತ್ತದೆ. ಇದರಲ್ಲಿ ಪುರುಷರು ೨೫ ಜನರಿರುವರು, ಮಹಿಳೆಯರು ೨೬ ಜನರು ಇರುವರು.

ಮಾಲ ಸಮುದಾಯದವರು ಶಿವಮೊಗ್ಗ ಜಿಲ್ಲೆ ಸೊರಬ ತಾಲೂಕಿನ ಸ್ಥಳೀಯ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕದಲ್ಲಿರುವ ಜಡೆ ಶಿವಮೊಗ್ಗದಿಂದ ೫೫ ಕಿ.ಮೀ.ದೂರದಲ್ಲಿದೆ. ಜಡೆ ಎಂಬಲ್ಲಿ ವಾಸ ಮಾಡುವ ಕುಟುಂಬಗಳಿಗೆ ಎರಡು ಸರಕಾರಿ ಮನೆಗಳಿರುತ್ತವೆ. ಇನ್ನುಳಿದ ಕುಟುಂಬಗಳಿಗೆ ಜೋಪಡಿಗಳು ಇರುತ್ತವೆ. ಜಡೆಯಲ್ಲಿ ವಾಸ ಮಾಡುವ ಕುಟುಂಬದವರ ವೃತ್ತಿಗಳೆಂದರೆ ಕೃಷಿಕೂಲಿ, ರಸ್ತೆ ಕೆಲಸಗಳಿಗೆ ಹೊಗುವುದು, ಸಣ್ಣಸಣ್ಣ ಸಸಿಗಳನ್ನು ನೆಡಲು ಹೋಗುವುದು, ಸಣ್ಣಪುಟ್ಟ ಸ್ಟೇಷನರಿ ಸಾಮಾನುಗಳನ್ನು ವ್ಯಾಪಾರ ಮಾಡಲಿಕ್ಕೆ ಹೋಗುವುದು ಮತ್ತು ಬೇರೆ ಬೇರೆ ಪಟ್ಟಣಗಳಿಗೆ ಆರ್ಥಿಕ ನಿರ್ವಹಣೆಗಾಗಿ ದುಡಿಯಲು ಹೋಗುತ್ತಾರೆ. ಇವತ್ತೀಗೂ ಸಹ ಇಲ್ಲಿರುವ ಕುಟುಂಬದವರು ಈ ಮೇಲಿನ ವೃತ್ತಿಗಳನ್ನು ಅವಲಂಬಿಸಿ ಬದುಕುತ್ತಿದ್ದಾರೆ ಎಂಬುದು ಕ್ಷೇತ್ರಕಾರ್ಯದ ಮೂಲಕ ಕಂಡುಬಂದಿತು.

೭. ಹಾವೇರಿ ಜಿಲ್ಲೆ

ಹಾವೇರಿ ಜಲ್ಲೆಯನ್ನು ಏಲಕ್ಕಿ ನಾಡು, ಸರ್ವಜ್ಞನ ಬೀಡು, ಕನಕನ ನೆಚ್ಚಿನ ಊರು ಬ್ಯಾಡಗಿ ಮೇಣಸಿನಕಾಯಿ ಸೀಮೆ, ವರದಾ ನದಿ ತಾಣ, ಅಪ್ಪಟ ರೈತಾಪಿ ಜನರ ಭೂಮಿ ಎಂದು ಹಾವೇರಿ ಜಿಲ್ಲೆಯು ಬಹಳ ಹೆಸರುವಾಸಿಯಾಗಿರುತ್ತದೆ. ಹಾವೇರಿ ಜಿಲ್ಲೆಯನ್ನು ಧಾರವಾಡ ಜಿಲ್ಲೆಯಿಂದ ವಿಭಜಿಸಿ ೧೯೯೭ ರಲ್ಲಿ ಹಾವೇರಿ ಜಿಲ್ಲೆಯನ್ನು ರಚಿಸಲಾಯಿತು. ಹಾವೇರಿ ಜಿಲ್ಲೆಯು ರಾಣೆಬೆನ್ನೂರ, ಹೀರೆಕೆರೂರ, ಶಿಗ್ಗಾಂವ, ಬ್ಯಾಡಗಿ, ಹಾನಗಲ್ ಮತ್ತು ಸವಣೂರ ಎಂಬ ಏಳು ತಾಲೂಕುಗಳನ್ನು ಹೊಂದಿರುತ್ತದೆ. ಹಾವೇರಿ ಜಿಲ್ಲೆಯು ವರದಾ ನದಿ ಹಾಗೂ ತುಂಗಭದ್ರಾ ನದಿಯನ್ನು ಹೊಂದಿರುತ್ತದೆ.

ಹಾವೇರಿ ಜಿಲ್ಲೆಯ ೨೦೧೧ ರ ಒಟ್ಟು ಜನಸಂಖ್ಯೆ ೧೫,೯೭,೬೬೮ ಆಗರುತ್ತದೆ. ಇದರಲ್ಲಿ ಪುರುಷರು ೮.೧೯.೧೨೮ ಇರುತ್ತಾರೆ. ಮಹಿಳೆಯರು ೭,೭೮,೫೪೦ ಇರುತ್ತಾರೆ. ಇಲ್ಲಿ ಪ್ರತಿ ಚ.ಕೀ.ಮೀ ೨೯೮ ಜನಸಾಂದ್ರತೆ ಇರುತ್ತದೆ. ಈ ಜಿಲ್ಲೆಯಲ್ಲಿ ಲಿಂಗಾನುಪಾತ ೧೦೦೦ ಪುರುಷರಿಗೆ ೯೫೦ ಇರುತ್ತದೆ. ಹಾವೇರಿ ಜಲ್ಲೆಯು ಕೃಷಿ ಪ್ರಧಾನವಾದ ಜಿಲ್ಲೆಯಾಗಿರುತ್ತದೆ. ಐತಿಹಾಸಿಕವಾಗಿ ತನ್ನದೇ ಆದ ಕೊಡುಗೆಯನ್ನು ನೀಡಿರುತ್ತದೆ. ವಾರ್ಷಿಕವಾಗಿ ಸರಾಸರಿ ೭೫೨ ಮೀ,ಮೀ ಮಳೆ ಕಾಣುವ ಜಿಲ್ಲೆಯಾಗಿರುತ್ತದೆ.

ಹಾವೇರಿ ಜಲ್ಲೆ ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿದ್ದು ಉತ್ತರದ ಬೀದರ ಮತ್ತು ದಕ್ಷಿಣದ ಕೊಳ್ಳೆಗಾಲ ಇವುಗಳಿಗೆ ಸಮಾನ ಅಂತರದಲ್ಲಿದೆ. ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಹೆಬ್ಬಾಗಿಲು ಜಿಲ್ಲೆ ಎಂದು ಸಹ ಈ ಜಿಲ್ಲೆ ಪ್ರಸಿದ್ಧಿಯಾಗಿರುತ್ತದೆ. ಹಾವೇರಿ ಜಿಲ್ಲೆಯು ಸಾಂಸ್ಕೃತಿಕವಾಗಿ ಶ್ರೀಮಂತ ಜಿಲ್ಲೆಯಾಗಿರುತ್ತದೆ ಎಂದು ತಿಳಿದು ಬರುತ್ತದೆ.

ಹಾವೇರಿ ಜಿಲ್ಲೆಯು ಸಾಕಷ್ಟು ಐತಿಹಾಸಿಕ ಹಿನ್ನಲೆಯನ್ನು ಹೊಂದಿರುತ್ತದೆ. ಈ ಜಿಲ್ಲೆ ತುಂಗಭದ್ರಾ ಮತ್ತು ವರದಾ ನದಿ ಪಾತ್ರದಲ್ಲಿ ಬರುತ್ತಿದ್ದು ಜನರ ಇತಿಹಾಸ ಮತ್ತು ನಾಗರಿಕತೆ ಬಗ್ಗೆ ಸಾಕಷ್ಟು ಐತಿಹ್ಯಗಳು ಕಾಣಸಿಗುತ್ತವೆ. ಶಿಲ್ಪಕಲಾ ವೈಭವವನ್ನು ತೋರಿಸುವ ಹಲವಾರು ಕುರುಹುಗಳು ಕಂಡುಬರುತ್ತವೆ. ಚಾಲುಕ್ಯ ರಾಷ್ಟ್ರಕೂಟರ ಕಾಲದ ಶಿಲಾಶಾಸನಗಳು ಈ ಜಿಲ್ಲೆಯಲ್ಲಿ ಪತ್ತೆಯಾಗಿರುತ್ತವೆ. ಬಂಕಾಪುರದ ಚಳ್ಳಕೇತರರು, ಗುತ್ತವುಲದ ಗುತ್ತರು, ಹಾನಗಲ್ಲಿನ ಕದಂಬರು ಹೆಸರಾಂತ ಸಾಮಂತರು ಸಹ ಆಳಿದ್ದಾರೆ. ಕನ್ನಡದ ಆದಿಕವಿ ಪಂಪನ ಗುರುಗಳಾದ ದೇವೇಂದ್ರಮುನಿಗಳು ರನ್ನ ಚಾವುಂಡರಾಯನ ಗುರುಗಳಾದ ಅಜೀತ ಸೇನಾಚಾರ್ಯರು ಹಾವೇರಿ ಜಿಲ್ಲೆಯ ಬಂಕಾಪುರದಲ್ಲಿ ವಾಸವಾಗಿದ್ದರೆಂದು ತಿಳಿದು ಬರುತ್ತದೆ. ಈ ಜಿಲ್ಲೆಗೆ ತನ್ನದೇಯಾದ ವೈಶಿಷ್ಟತೆಗಳಿದ್ದು ಇಲ್ಲಿ ಹೇರಳವಾದ ವನಸಿರಿ ಕಾಣಸಿಗುತ್ತದೆ. ರಾಜ್ಯದಲ್ಲಿ ಅತಿ ಹೆಚ್ಚು ಶಿಲ್ಪಕಲಾ ವೈಭವದಿಂದ ಕೂಡಿದ ಹೆಚ್ಚು ದೇವಾಲಯಗಳನ್ನು ಮತ್ತು ಕೋಟೆ ಕೊತ್ತಲಗಳನ್ನು ಹೊಂದಿದ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುತ್ತದೆ. ಈ ಜಿಲ್ಲೆಗೆ ಕಲ್ಯಾಣಿ ಚಾಲುಕ್ಯರು, ಹೊಯ್ಸಳರು, ರಾಷ್ಟ್ರಕೂಟರು, ಪಲ್ಲವರು, ಮುಂತಾದ ರಾಜ ಮಹಾರಾಜರು ತಮ್ಮದೆ ಆದ ವಿಶಿಷ್ಟ ಕೊಡುಗೆಗಳನ್ನು ನೀಡಿದ್ದಾರೆ. ಇಲ್ಲಿ ಹಲವಾರು ಧಾರ್ಮಿಕ ಕೇಂದ್ರಗಳು ಇರುತ್ತವೆ.

ಮಾಲ(ಪರ್ವತ ಮತ್ತಯ್ಯ)ಸಮುದಾಯದವರು ಹಾವೇರಿ ಜಿಲ್ಲೆಯ ಜಿಲ್ಲೆ, ತಾಲೂಕು ಮತ್ತು ಹಳ್ಳಿಗಳನ್ನು ಸೇರಿ ಆರು ಊರುಗಳಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡಿದ್ದಾರೆ.

೨.೯.೭. ಹಾವೇರಿ ಜಿಲ್ಲೆಯ ಕುಟುಂಬವಾರು ಜನಸಂಖ್ಯೆ

ಮಾಲ ಸಮುದಾಯದವರು ಹಾವೇರಿ ಜಿಲ್ಲೆಯ ನಗರ ಮತ್ತು ಹಳ್ಳಿ ಸೇರಿದಂತೆ ಎಂಟು ಊರುಗಳಲ್ಲಿ ವಾಸವಾಗಿದ್ದಾರೆ. ಹಾವೇರಿ ಜಿಲ್ಲೆಯಲ್ಲಿ ಮಾಲ ಸಮುದಾಯದ ಒಟ್ಟು ೪೦ ಕುಟುಂಬ ನೆಲೆಸಿವೆ. ಒಟ್ಟು ಜನಸಂಖ್ಯೆಯು ೨೦೭ ಇದೆ. ಇದರಲ್ಲಿ ಪುರುಷರು ೧೦೪ ಇರುತ್ತಾರೆ. ಮಹಿಳೆಯರು ೧೦೩ ಜನರು ಇರುವರು.

ಗ್ರಾಮೀಣ ಪ್ರದೇಶದಲ್ಲಿ ೩೭ ಕುಟುಂಬ ನೆಲೆಸಿದ್ದು ಇವರ ಒಟ್ಟು ಜನಸಂಖ್ಯೆಯು ೧೯೧ ಇದೆ. ಇದರಲ್ಲಿ ಪುರುಷರು ೯೭, ಮಹಿಳೆಯರು ೯೪ ಜನ ಇರುವರು.


ಕೋಷ್ಟಕ ೨.೧೦: ಹಾವೇರಿ ಜಿಲ್ಲೆಯ ಕುಟುಂಬವಾರು ಜನಸಂಖ್ಯೆ

ಜಿಲ್ಲೆ	ತಾಲೂಕು	ಗ್ರಾಮ	ಕು	ಗಂ	ಹೆ	ಒಟ್ಟು
ಹಾವೇರಿ	ಬ್ಯಾಡಗಿ	ಬಡಮಲ್ಲಿ	೧೯	೪೯	೪೭	೯೬
ಹಾವೇರಿ	ಬ್ಯಾಡಗಿ	ಬಡಮಲ್ಲಿ ತಾಂಡ	೦೩	೦೮	೦೯	೧೭
ಹಾವೇರಿ	ಬ್ಯಾಡಗಿ	ರಾಮಪುರ	೦೪	೧೧	೧೦	೨೧
ಹಾವೇರಿ	ಬ್ಯಾಡಗಿ	ಹಂಸಬಾವಿ	೦೩	೦೯	೦೭	೧೬
ಹಾವೇರಿ	ಹಾನಗಲ್	ಹಾನಗಲ್	೦೩	೦೭	೦೯	೧೬

ಹಾವೇರಿ	ಹೀರೇಕೆರುರ	ಚಿಕ್ಕಕೆರೂರು	೦೮	೨೦	೨೧	೪೧
		ಒಟ್ಟು	೪೦	೧೦೪	೧೦೩	೨೦೭

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ಲಂಬಚಿತ್ರ: ೨.೪ ಹಾವೇರಿ ಜಿಲ್ಲೆಯ ಕುಟುಂಬವಾರು ಜನಸಂಖ್ಯೆ ಪ್ರಮಾಣ



೧. ಬಡಮಲ್ಲಿ

ಮಾಲ ಸಮುದಾಯದವರು ಹಾವೇರಿ ಜಿಲ್ಲೆಯ ಬಡಮಲ್ಲಿ ಗ್ರಾಮದಲ್ಲಿ ೧೯ ಕುಟುಂಬಗಳು ನೆಲೆಸಿವೆ. ಈ ಗ್ರಾಮದಲ್ಲಿ ಇವರ ಒಟ್ಟು ಜನಸಂಖ್ಯೆ ೯೬ ಇರುತ್ತದೆ. ಇದರಲ್ಲಿ ಪುರುಷರು ೪೯ ಜನರಿರುತ್ತಾರೆ. ಇದರಲ್ಲಿ ಮಹಿಳೆಯರು ೪೭ ಜನರು ಇರುವರು.

ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಸ್ಥಳೀಯ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಬಡಮಲ್ಲಿ ಎಂಬ ಗ್ರಾಮವು ಹಾವೇರಿಯಿಂದ ಬುಡಮಲ್ಲಿ ಗ್ರಾಮವು ೩೧ ಕಿ.ಮೀ.ದೂರದಲ್ಲಿ ಇರುತ್ತದೆ. ಬಡಮಲ್ಲಿಯಲ್ಲಿ ವಾಸವಾಗಿರುವ ಮಾಲ ಸಮುದಾಯದ ಎಂಟು ಕುಟುಂಬಗಳಿಗೆ ಆಶ್ರಯ ಮನೆಗಳು ಇರುತ್ತವೆ ಕೆಲವು ಕುಟುಂಬಗಳು ಗುಡಾರಗಳನ್ನು ಹಾಕಿಕೊಂಡು ವಾಸಮಾಡುತ್ತಾರೆ. ಇವರ ಮೂಲ ವೃತ್ತಿ ಕೃಷಿ, ಕೂಲಿ, ಸಣ್ಣಪುಟ್ಟ ಸ್ಟೇಷನರಿ ಸಾಮಾನುಗಳ ವ್ಯಾಪಾರ ಮಾಡುವುದು ಮತ್ತು ಆರ್ಥಿಕ ನಿರ್ವಹಣೆಗಾಗಿ ಬೇರೆ ಬೇರೆ ಪಟ್ಟಣಗಳಿಗೆ ದುಡಿಯಲು ಹೋಗುವುದು ಆಗಿರುತ್ತದೆ. ಇವತ್ತಿಗೂ ಸಹ ಇಲ್ಲಿ ವಾಸಮಾಡುವ ಕುಟುಂಬದವರು ಈ ಮೇಲಿನ ಎಲ್ಲಾ ವೃತ್ತಿಗಳನ್ನು ಅವಲಂಬಿಸಿದ್ದಾರೆ.

೨. ಬಡಮಲ್ಲಿ ತಾಂಡಾ

ಬಡಮಲ್ಲಿ ಗ್ರಾಮಕ್ಕೆ ಹತ್ತಿರದಲ್ಲಿಯೇ ಬಡಮಲ್ಲಿ ತಾಂಡವಿದೆ. ಇಲ್ಲಿ ಲಂಬಾಣಿಗರೇ ಇರುವುದು. ಲಂಬಾಣಿ ತಾಂಡದ ಸರಹದ್ದಿಗೆ ಹೊಂದಿಕೊಂಡ ಹೊರವಲಯದಲ್ಲಿ ೦೩ ಕುಟುಂಬ ನೆಲೆಸಿವೆ. ಈ

ತಾಂಡದ ಸರಹದ್ದಿನಲ್ಲಿ ನೆಲೆಸಿದ ಮಾಲ ಸಮುದಾಯದ ಒಟ್ಟು ಕುಟುಂಬಗಳು ೩ ಇರುತ್ತವೆ. ಒಟ್ಟು ಜನಸಂಖ್ಯೆ ೧೭ ಇರುತ್ತಾರೆ. ಇದರಲ್ಲಿ ಪುರುಷರು ೮ ಜನರಿರುತ್ತಾರೆ. ಮಹಿಳೆಯರು ೯ ಜನರು ಇರುವರು.

ಮಾಲ ಸಮುದಾಯದವರು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಬಡಮಲ್ಲಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬಡಮಲ್ಲಿ ತಾಂಡಾ ಎಂಬ ಗ್ರಾಮದಲ್ಲಿ ಮೂರು ಕುಟುಂಬಗಳು ವಾಸವಾಗಿರುತ್ತವೆ. ಹಾವೇರಿಯಿಂದ ಈ ಊರು ೩೨ ಕಿ.ಮೀ. ದೂರದಲ್ಲಿದೆ. ಬಡಮಲ್ಲಿ ತಾಂಡಾದಲ್ಲಿ ವಾಸವಾಗಿರುವ ಕುಟುಂಬಗಳಿಗೆ ಗುಡಾರಗಳು ಮಾತ್ರ ಇರುತ್ತವೆ. ಇವರು ಮಾಡುವ ವೃತ್ತಿಗೆಳೆಂದರೆ ಕೂಲಿ, ಸಣ್ಣಪುಟ್ಟ ಪ್ಲಾಸ್ಟಿಕ್ ಸಾಮಾನುಗಳನ್ನು ಮಾರಾಟ ಮಾಡುವುದು, ಬೇರೆ ಪಟ್ಟಣಗಳಿಗೆ ಹೋಗಿ ದುಡಿದು ಜೀವನ ಸಾಗಿಸುವುದನ್ನು ಇವಾಗಲೂ ಮಾಡುತ್ತಾರೆ.

೩. ರಾಮಾಪೂರ

ಮಾಲ ಸಮುದಾಯದವರು ಹಾವೇರಿ ಜಿಲ್ಲೆ ಹಾನಗಲ್ ತಾಲೂಕಿನ ಸ್ಥಳೀಯ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ರಾಮಪುರ ಗ್ರಾಮದಲ್ಲಿ ೪ ಕುಟುಂಬಗಳು ನೆಲೆಸಿವೆ. ಈ ಗ್ರಾಮದಲ್ಲಿ ಇವರ ಒಟ್ಟು ಜನಸಂಖ್ಯೆ ೨೧ ಇರುತ್ತದೆ. ಇದರಲ್ಲಿ ಪುರುಷರು ೧೧ ಜನರಿರುತ್ತಾರೆ. ಮಹಿಳೆಯರು ೧೦ ಜನರು ಇರುವರು.

ರಾಮಾಪೂರ ಎಂಬ ಗ್ರಾಮವು ಹಾವೇರಿಯಿಮದ ೩೮ ಕಿ.ಮೀ.ದೂರದಲ್ಲಿ ಇದೆ. ರಾಮಾಪೂರದಲ್ಲಿ ವಾಸ ಮಾಡುವ ಕುಟುಂಬದವರಿಗೆ ಮನೆಗಳು ಇರುವುದಿಲ್ಲ. ಗುಡಾರಗಳನ್ನು ಹಾಕಿಕೊಂಡು ವಾಸ ಮಾಡುತ್ತಾರೆ. ಇವರ ವೃತ್ತಿಗಳೆಂದರೆ ಕೃಷಿಕೂಲಿ, ಸಣ್ಣಪುಟ್ಟ ಸ್ಟೇಷನರಿ ಸಾಮಾನುಗಳ ವ್ಯಾಪಾರ ಮತ್ತು ಪಟ್ಟಣಗಳಿಗೆ ಹಳ್ಳಿಗಳಿಗೆ ಹೋಗಿ ದುಡಿದು ಆರ್ಥಿಕ ನಿರ್ವಹಣೆ ಮಾಡಿಕೊಂಡು ಬರುವುದನ್ನು ಇವತ್ತೀಗೂ ಇವರು ಮಾಡುತ್ತಾರೆ.

೪. ಹಂಸಬಾವಿ

ಹಂಸಬಾವಿ ಗ್ರಾಮದಲ್ಲಿ ೩ ಕುಟುಂಬಗಳು ನೆಲೆಸಿವೆ. ಈ ಗ್ರಾಮದಲ್ಲಿ ಇವರ ಒಟ್ಟು ಜನಸಂಖ್ಯೆ ೧೬ ಇರುತ್ತದೆ. ಇದರಲ್ಲಿ ಪುರುಷರು ೯ ಜನರು ಇರುತ್ತಾರೆ. ಮಹಿಳೆಯರು ೭ ಜನರು ಇರುವರು.

ಮಾಲ ಸಮುದಾಯದವರು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಸ್ಥಳೀಯ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹಂಸಬಾವಿ ಎಂಬ ಗ್ರಾಮವು ಹಾವೇರಿಯಿಂದ ೪೫ ಕಿ.ಮೀ.ದೂರದಲ್ಲಿದೆ. ಹಂಸಬಾವಿಯಲ್ಲಿ ವಾಸ ಮಾಡುವ ಮಾಲ ಸಮುದಾಯದ ಕುಟುಂಬದವರು ಗುಡಿಸಲಿನಲ್ಲಿ ವಾಸ ಮಾಡುತ್ತಾರೆ. ಇವರ ವೃತ್ತಿಗಳೆಂದರೆ ಕೃಷಿಕೂಲಿ, ಬೇರೆ ಪಟ್ಟಣಗಳಿಗೆ ಹೋಗಿ ದುಡಿದು ಆರ್ಥಿಕ ನಿರ್ವಹಣೆ ಮಾಡಿಕೊಳ್ಳುವುದು ಮತ್ತು ಸಣ್ಣಪುಟ್ಟ ವಸ್ತುಗಳನ್ನು ವ್ಯಾಪಾರ ಮಾಡುವುದಾಗಿದೆ. ಇವರು ಇಂತಹ ವೃತ್ತಿಗಳನ್ನು ಇವತ್ತೀಗೂ ಮಾಡುತ್ತಾರೆ.

೫. ಹಾನಗಲ್

ಮಾಲ ಸಮುದಾಯದವರು ಹಾವೇರಿ ಜಿಲ್ಲೆಯ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹಾನಗಲ್ ನಗರದಲ್ಲಿ ೩ ಕುಟುಂಬಗಳು ನೆಲೆಸಿವೆ. ಈ ಗ್ರಾಮದಲ್ಲಿ ಇವರ ಒಟ್ಟು ಜನಸಂಖ್ಯೆ ೧೬ ಇರುತ್ತದೆ. ಇದರಲ್ಲಿ ಪುರುಷರು ೭ ಜನರಿರುವರು ಮಹಿಳೆಯರು ೯ ಜನರು ಇರುವರು.


ಹಾವೇರಿಯಿಂದ ಹಾನಗಲ್ ತಾಲೂಕು ೩೫ ಕಿ.ಮೀ.ದೂರದಲ್ಲಿ ಇರುತ್ತದೆ. ಈ ಹಾನಗಲ್ಲಿನಲ್ಲಿ ವಾಸಮಾಡುವ ಮಾಲ ಕುಟುಂಬದವರಿಗೆ ಗುಡಿಸಲು ಇರುತ್ತದೆ. ಇವರ ವೃತ್ತಿಗಳೆಂದರೆ ಕೃಷಿ ಕೂಲಿ, ರಸ್ತೆ ಕೆಲಸಗಳಿಗೆ ಹೋಗುವುದು, ಪಟ್ಟಣಗಳಿಗೆ ಹೋಗಿ ದುಡಿಯುವುದು ಇವರ ಕೆಲಸಗಳಾಗಿರುತ್ತವೆ. ಇದುವರೆಗೂ ಈ ಸಮುದಾಯದವರು ಇಂತಹ ಕೆಲಸಗಳನ್ನು ಮಾಡುತ್ತಾರೆ.

೬. ಚಿಕ್ಕಕೆರೂರು

ಮಾಲ ಸಮುದಾಯದವರು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ಚಿಕ್ಕಕೆರೂರು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಚಿಕ್ಕೆರೂರು ಗ್ರಾಮದಲ್ಲಿ ೮ ಕುಟುಂಬ ನೆಲೆಸಿವೆ. ಈ ಗ್ರಾಮದಲ್ಲಿ ಇವರ ಒಟ್ಟು ಜನಸಂಖ್ಯೆ ೪೧ ಇರುತ್ತದೆ. ಇದರಲ್ಲಿ ಪುರುಷರು ೨೦ ಜನರಿರುವರು ಮಹಿಳೆಯರು ೨೧ ಜನರು ಇರುವರು.

ಹಾವೇರಿಯಿಂದ ಚಿಕ್ಕೆರೂರ ೩೦ ಕಿ.ಮೀ.ದೂರದಲ್ಲಿದೆ. ಇಲ್ಲಿರುವ ಕುಟುಂಬದವರು ಗುಡಿಸಲು ಹಾಕಿಕೊಂಡು ವಾಸ ಮಾಡುತ್ತಾರೆ. ಇವರ ಮೂಲ ವೃತ್ತಿಗಳೆಂದರೆ ಕೃಷಿ ಕೂಲಿ, ಸಣ್ಣಪುಟ್ಟ ಸ್ಟೇಷನರಿ ಸಾಮಾನುಗಳ ವ್ಯಾಪಾರ ಮತ್ತು ಆರ್ಥಿಕ ನಿರ್ವಹಣೆಗಾಗಿ ಬೇರೆ ಬೇರೆ ಊರಿಗೆ ಹೋಗಿ ದುಡಿಯುವುದು ಇಲ್ಲಿರುವ ಮಾಲ ಸಮುದಾಯದ ಕುಟುಂಬದವರು ಇವತ್ತಿಗೂ ಮೇಲಿನ ವೃತ್ತಿಗಳನ್ನು ಅವಲಂಬಿಸಿ ಬದುಕುತ್ತಿದ್ದಾರೆ.

ವೃತ್ತಚಿತ್ರ ೨.೬: ಹಾವೇರಿ ಜಿಲ್ಲೆಯ ಮಾಲ ಸಮುದಾಯದ ಗ್ರಾಮೀಣ ಹಾಗೂ ನಗರ ಜನಸಂಖ್ಯೆ



(೧ ಗ್ರಾಮೀಣ ಪ್ರದೇಶ, ೨ ನಗರ ಪ್ರದೇಶ)

ಹಾವೇರಿ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ನೆಲೆಸಿದ ಮಾಲ ಸಮುದಾಯದ ಜನಸಂಖ್ಯೆಯು ಶೇಕಡ ೯೨.೨೭, ನಗರ ಪ್ರದೇಶದ ಜನಸಂಖ್ಯೆ ಶೇಕಡ ೭.೭೩ ಇದೆ.


ಕೋಷ್ಟಕ ೨.೧೧: ಸಮೀಕ್ಷೆಗೊಳಗಾದ ಅಲೆಮಾರಿ ಮಾಲ ಸಮುದಾಯದ ಒಟ್ಟು ಜನಸಂಖ್ಯೆ ವಿವರ

	ಜಿಲ್ಲೆಗಳು	ತಾಲೂಕು	ಗ್ರಾಮ	ಕುಟುಂಬ	ಗಂಡು	ಹೆಣ್ಣು	ಒಟ್ಟು
೧	ಕೊಪ್ಪಳ	ಕನಕಗಿರಿ	ಕನಕಗಿರಿ	೧೫	೪೦	೩೮	೭೮
		ಕನಕಗಿರಿ	ಕೆಸಕ್ಕಿಹಂಚಿನಾಳ	೦೨	೫	೫	೧೦
		ಕುಕನುರ	ಮಸಬಾ ಹಂಚಿನಾಳ	೧೦	೨೫	೨೬	೫೧
		ಕೊಪ್ಪಳ	ಇರಕಲ್‌ಗಡ	೦೧	೨	೨	೦೪
		ಕೊಪ್ಪಳ	ಕಲ್ ಅಬ್ಬಿಗೇರಿ	೩೧	೭೭	೭೯	೧೫೬
		ಕೊಪ್ಪಳ	ಕುದುರಿಮೋತಿ	೦೬	೧೫	೧೬	೩೧
		ಕೊಪ್ಪಳ	ಕೊಪ್ಪಳ	೪೦	೧೦೫	೧೦೩	೨೦೮
		ಕೊಪ್ಪಳ	ಚಿಲಕಮುಖಿ	೯೮	೨೪೫	೨೪೭	೪೯೨
		ಕೊಪ್ಪಳ	ದನಗಳದೊಡ್ಡಿ	೦೭	೧೮	೧೮	೩೬
		ಗಂಗಾವತಿ	ಶಿವಪುರ	೦೧	೧	೨	೦೩
೨	ಗದಗ	ಗದಗ	ಗದಗ	೦೮	೨೧	೨೧	೪೨
		ಗದಗ	ಹುಲಿಕೋಟೆ	೦೧	೦೧	೦೨	೦೩
		ರೋಣ	ಗಜೇಂದ್ರಗಡ	೦೨	೦೫	೦೬	೧೧
೩	ಧಾರವಾಡ	ಹುಬ್ಬಳ್ಳಿ	ಹುಬ್ಬಳ್ಳಿ	೨೮	೭೨	೭೩	೧೪೫
೪	ಮೈಸೂರು	ಮೈಸೂರು	ಮೈಸೂರು	೦೭	೧೯	೧೮	೩೭
೫	ರಾಯಚೂರು	ಮಾನ್ವಿ	ಪೋತ್ನಾಳ	೦೭	೧೬	೧೮	೩೪
೬	ಶಿವಮೊಗ್ಗ	ಸೊರಬ	ಕುದರಿಗಣಿ	೦೮	೨೨	೨೦	೪೨
		ಸೊರಬ	ಜಡೆ	೧೦	೨೫	೨೬	೫೧
೭	ಹಾವೇರಿ	ಬ್ಯಾಡಗಿ	ಬಡಮಲ್ಲಿ	೧೯	೪೯	೪೭	೯೬
		ಬ್ಯಾಡಗಿ	ಬಡಮಲ್ಲಿ ತಾಂಡ	೦೩	೦೮	೦೯	೧೭
		ಬ್ಯಾಡಗಿ	ರಾಮಪುರ	೦೪	೧೧	೧೦	೨೧

ಬ್ಯಾಡಗಿ	ಹಂಸಬಾವಿ	೦೩	೦೯	೦೭	೧೬
ಹಾನಗಲ್	ಹಾನಗಲ್	೦೩	೦೭	೦೯	೧೬
ಹಿರೇಕೆರುರ	ಚಿಕ್ಕಕೆರೂರು	೦೮	೨೦	೨೧	೪೧
		೩೨೨	೮೧೮	೮೨೩	೧೬೪೧

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ಲಂಬಚಿತ್ರ: ೨.೫ ಸಮೀಕ್ಷೆಗೊಳಗಾದ ಅಲೆಮಾರಿ ಮಾಲ ಸಮುದಾಯದ ಒಟ್ಟು ಜನಸಂಖ್ಯೆ ವಿವರ



ಸ್ಥಳೀಯವಾಗಿ ಪರ್ವತಮಲ್ಲಯ್ಯ ಸಮುದಾಯವೆಂದು ಗುರುತಿಸಿಕೊಳ್ಳುವ ಅಲೆಮಾರಿ ಮಾಲ ಸಮುದಾಯವನ್ನು ಅಧ್ಯಯನಕ್ಕಾಗಿ ಸಮೀಕ್ಷಿಸಿದಾಗ ಕಂಡುಬಂದ ಕುಟುಂಬಗಳು ೩೨೨ ಇರುತ್ತವೆ, ಒಟ್ಟು ಜನಸಂಖ್ಯೆಯು ೧೬೪೧, ಇದರಲ್ಲಿ ಪುರುಷರು ೮೧೮ ಜನರಿರುತ್ತಾರೆ. ಇದರಲ್ಲಿ ಮಹಿಳೆಯರು ೮೨೩ ಜನರಿರುವರು. ಕೊಪ್ಪಳ ಜಿಲ್ಲೆಯಲ್ಲಿಯೇ ಅತ್ಯಧಿಕ ಸಂಖ್ಯೆಯಲ್ಲಿ ನೆಲೆಸಿರುವರು. ಮೈಸೂರಿನಲ್ಲಿ ಅತ್ಯಂತ ಕಡಿಮೆ ಕುಟುಂಬಗಳಿವೆ.

ಒಟ್ಟಾರೆಯಾಗಿ ನೋಡಿದಾಗ ಮಾಲ ಸಮುದಾಯವು ಯಾವುದೋ ಒಂದು ಹಂತದಲ್ಲಿ ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದಿರುವುದು ತಿಳಿದುಬರುವುದು. ಹಾಗೆಯೇ ಮಾಲ ಸಮುದಾಯದ ಒಂದು ಪಂಗಡವನ್ನು ಕರ್ನಾಟಕದಲ್ಲಿ ಪರ್ವತಮಲ್ಲಯ್ಯ ಎಂದು ಕರೆಯಲಾಗುತ್ತಿದ್ದು ಈ ಪದವು ಅನುಸೂಚಿತ ಪಟ್ಟಿಯಲ್ಲಿ ಸೇರದೇ ಇರುವುದು ತಿಳಿದುಬರುವುದು. ಪರ್ವತಮಲ್ಲಯ್ಯ ಎಂಬ ಹೆಸರಿನಿಂದ ಸ್ಥಳೀಯವಾಗಿ ಗುರುತಿಸಲ್ಪಡುತ್ತಿರುವ ಮಾಲ ಸಮುದಾಯದ ಜನಸಂಖ್ಯೆಯು

ಕರ್ನಾಟಕದಲ್ಲಿ ತುಂಬಾ ಕಡಿಮೆ ಇದ್ದು ಈ ಸಮುದಾಯ ಕರ್ನಾಟಕದಲ್ಲಿ ಅಲೆಮಾರಿ ಸಮುದಾಯವಾಗಿ ಮಾರ್ಪಾಡು ಹೊಂದಿರುವುದು ತಿಳಿದುಬರುತ್ತದೆ. ಕರ್ನಾಟಕದಲ್ಲಿ ಇವರು ಅಲೆಮಾರಿತನವನ್ನು ಮೈಗೂಡಿಸಿಕೊಂಡಿದ್ದಾರೆ.

ಮಾಲ ಸಮುದಾಯದ ಸಾಮಾಜಿಕ ಸ್ಥಿತ್ಯಂತರ

ಮಾಲ ಸಮುದಾಯದ ಕುರಿತು ನೋಡಿದಾಗ ರಾಜಾಶ್ರಯವಿದ್ದ ಮಧ್ಯಕಾಲೀನ ಯುಗದಲ್ಲಿ ಆರ್ಥಿಕವಾಗಿ ಅಷ್ಟು ದುರ್ಬಲವಾಗಿರಲಿಲ್ಲವೆನಿಸುತ್ತದೆ. ಹಾಗೂ ಕರ್ನಾಟಕದ ರಾಜರ ಅವನತಿಯ ನಂತರ ಇವರು ಅಲೆಮಾರಿತನವನ್ನು ಆಶ್ರಯಿಸುವಂತಾಯಿತು. ರಾಜಾಶ್ರಯವನ್ನು ಕಳೆದುಕೊಂಡ ನಂತರ ಕರ್ನಾಟಕಕ್ಕೆ ವಲಸೆ ಬಂದಿದ್ದಾರೆ. ಮಾಲ (ಪರ್ವತ ಮಲ್ಲಯ್ಯ) ಸಮುದಾಯದವರ ಮೂಲ ನೆಲೆ ಆಂಧ್ರಪ್ರದೇಶವಾಗಿದೆ. ಇವರು ಆಂಧ್ರಪ್ರದೇಶದ ಕಡಪಾ ಮತ್ತು ತೆಲಂಗಾಣ ಪ್ರದೇಶದಿಂದ ಸುಮಾರು ನಾಲ್ಕುನೂರು ವರ್ಷದಿಂದ ಕರ್ನಾಟಕಕ್ಕೆ ವಲಸೆ ಬಂದಿರುವುದಾಗಿ ಚರಿತ್ರೆಗಳು ಬಿಂಬಿಸುತ್ತಿವೆ ಮತ್ತು ಇವರು ಸಹ ಹೇಳುತ್ತಾರೆ. ತಾವು ಕರ್ನಾಟಕಕ್ಕೆ ಯಾವಾಗ ಬಂದಿದ್ದೆವೆ ಎಂಬುದು ನಮ್ಮ ತಾತ ಮುತ್ತಾತನಿಗೂ ಗೊತ್ತಿದ್ದಿಲ್ಲವಂತೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು. ಆಂಧ್ರಪ್ರದೇಶದಿಂದ ವಲಸೆ ಬಂದ ಇವರು ಪ್ರಪ್ರಥಮವಾಗಿ ಕೊಪ್ಪಳ ಜಿಲ್ಲೆಯ ಚಿಲಕಮುಖಿ ಎಂಬ ಗ್ರಾಮದಲ್ಲಿ ಊರ ಹೊರಗೆ ಸಣ್ಣ ಪುಟ್ಟ ಗುಡಾರಗಳನ್ನು ಹಾಕಿಕೊಂಡು ತಮ್ಮ ನೆಲೆಯನ್ನು ಕಂಡುಕೊಂಡರು. ಇವರು ಆರ್ಥಿಕವಾಗಿ ಸಬಲತೆ ಇಲ್ಲದ ಕಾರಣ ಇವರು ತಮ್ಮ ಜೀವನ ನಿರ್ವಹಣೆಗಾಗಿ ಮತ್ತು ಮಕ್ಕಳ ಜೀವನೋಪಾಯಕ್ಕಾಗಿ ದುಡಿಯಲು ಬೇರೆ ಬೇರೆ ಪ್ರದೇಶಗಳಿಗೆ ಗ್ರಾಮಗಳಿಗೆ ದುಡಿಯಲು ಸ್ತ್ರೀಯರು ಮತ್ತು ಪುರುಷರು ತಮ್ಮ ಮಕ್ಕಳನ್ನು ಕರೆದುಕೊಂಡು ಹೊಗುತ್ತಿದ್ದರು. ನಂತರದ ದಿನಮಾನಗಳಲ್ಲಿ ನಗರ, ಪಟ್ಟಣಗಳಿಗೆ ತಮ್ಮ ಜೀವನ ನಿರ್ವಹಣೆಗಾಗಿ ಹೋಗುವುದರ ಮೂಲಕ ಹೊರಗಿನ ಜಗತ್ತನ್ನು ಕಾಣುವುದರ ಮೂಲಕ ತಾವಿರುವ ಸ್ಥಿತಿಯಲ್ಲಿ ಬದಲಾವಣೆಯನ್ನು ಬಯಸುತ್ತಾರೆ.

ಯಾವುದೇ ಆಸ್ತಿ ಅಂತಸ್ತು ಇಲ್ಲದ ಇವರು ತಮ್ಮ ಜೀವನ ನಿರ್ವಹಣೆಗಾಗಿ ಭಿಕ್ಷೆ ಬೆಡುತ್ತಾ ಸಣ್ಣ ಪುಟ್ಟ ಆಟಗಳನ್ನು ಆಡುತ್ತಾ ಕರ್ನಾಟಕದ ಬೇರೆ-ಬೇರೆ ಹಳ್ಳಿಗಳಿಗೆ ಪಟ್ಟಣಗಳಿಗೆ ಹೋಗಿ ತಂದಂತಹ ಭಿಕ್ಷೆಯಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು.

ಮಾಲ ಸಮುದಾಯದವರ ತಾಯ್ನಾಡಿನ ಭಾಷೆ ತೆಲುಗು ಆಗಿರುವದರಿಂದ ಇವರ ಮಾತೃ ಭಾಷೆ ತೆಲುಗು ಆಗಿರುತ್ತದೆ. ಇವರು ಹೆಚ್ಚಾಗಿ ತಮ್ಮ ತಮ್ಮ ಸಂಬಂಧಿಕರೊಡನೆ ತೆಲುಗು ಮಾತನಾಡುತ್ತಾರೆ. ಕರ್ನಾಟಕದ ಮಾತೃಭಾಷೆ ಕನ್ನಡ ಆಗಿರುವದರಿಂದ ಕಾಲಾಂತರದಲ್ಲಿ ಇವರು ಕನ್ನಡ ಭಾಷೆಯನ್ನು ಇತರರು ಮಾತನಾಡುವದನ್ನು ಗ್ರಹಿಸಿ ಅದನ್ನು ಅರ್ಥಮಾಡಿಕೊಂಡು ಅಲ್ಪ ಸ್ವಲ್ಪ ಕನ್ನಡ ಬಾಷೆಯನ್ನು ಮಾತನಾಡುವದನ್ನು ಕಲಿತುಕೊಂಡರು. ಕರ್ನಾಟಕದ ಜನರ ಒಡನಾಟದಿಂದ ಕನ್ನಡ ಭಾಷೆಯನ್ನು ಸಂಪೂರ್ಣವಾಗಿ ಸುಲಲಿತವಾಗಿ ಮಾತನಾಡುತ್ತಾರೆ. ಮತ್ತು ತೆಲುಗು ಭಾಷೆಯ ಜೊತೆಗೆ ತಮ್ಮ ಮಕ್ಕಳಿಗೆ ಕನ್ನಡ ಮಾತನಾಡುವದನ್ನು ಕಲಿಸುತ್ತಾರೆ. ಪ್ರಸ್ತುತ ಇವರು ಕನ್ನಡವನ್ನು

ಚೆನ್ನಾಗಿ ಗ್ರಹಿಸಬಲ್ಲವರಾಗಿದ್ದಾರೆ ಮತ್ತು ಕನ್ನಡ ಭಾಷೆಯಲ್ಲಿ ವ್ಯವಹರಿಸುತ್ತಾರೆ ಕನ್ನಡ ಭಾಷೆಯನ್ನು ಮಾತನಾಡುವದರ ಮೂಲಕ ಸಮಾಜದಲ್ಲಿ ಸಸ್ಥಿತ್ಯಂತರವನ್ನು ಕಂಡುಕೊಂಡಿದ್ದಾರೆ.

ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದ ಇವರು ಆಂಧ್ರಪ್ರದೇಶದ ಪ್ರಸಿದ್ದ ದೇವರಾದ ಶ್ರೀಶೈಲ ಮಲ್ಲಯ್ಯನನ್ನು ತಮ್ಮ ಆರಾಧ್ಯ ದೇವರು ಎಂಬುದಾಗಿಸಿಕೊಂಡು ಶ್ರೀಶೈಲ ಮಲ್ಲಯ್ಯನ ಮೂರ್ತಿಯನ್ನು ತಮ್ಮ ಕಂಬಿ(ದೇವರ ಪೆಟ್ಟಿಗೆ)ಯಲ್ಲಿ ಇಟ್ಟುಕೊಂಡು ಊರುರು ಅಲೆದಾಡಿ ಮಲ್ಲಯ್ಯನ ಹೆಸರಿನಲ್ಲಿ ಹಾಡನ್ನು ಹಾಡಿ ಭಿಕ್ಷೆ ನೀಡಿಸಿಕೊಳ್ಳುತ್ತಿದ್ದರು ಮತ್ತು ತಮ್ಮ ಗುಡಾರದಲ್ಲಿ ಶ್ರೀಶೈಲ ಮಲ್ಲಯ್ಯನ ಮೂರ್ತಿಯನ್ನು ಮಾತ್ರ ಇಟ್ಟು ಪೂಜಿಸುತ್ತಿದ್ದರು. ಆದರೆ ಕಾಲಾನಂತರದಲ್ಲಿ ಇವರು ಕರ್ನಾಟಕದ ಬೇರೆ ಬೇರೆ ಶಕ್ತಿ ದೇವರುಗಳ ಪ್ರಭಾವಕ್ಕೆ ಒಳಗಾಗಿ ಕಾಲಾಂತರದಲ್ಲಿ ದುರಗಮ್ಮ, ದ್ಯಾಮಮ್ಮ, ಸುಂಕ್ಲಮ್ಮ, ಹುಲಿಗೆಮ್ಮ, ಯಲ್ಲಮ್ಮ, ಮಾರಮ್ಮ, ಚೌಡೇಶ್ವರಿ, ಚಾಮುಂಡೇಶ್ವರಿ, ಗಾಳೆಮ್ಮ, ಮಲಿಯಮ್ಮ, ಈ ರೀತಿಯ ಇನ್ನಿತರ ಶಕ್ತಿ ದೇವತೆಗಳನ್ನು ಆರಾಧಿಸುತ್ತಾರೆ. ಅದೇ ರೀತಿ ಗಂಡು ದೇವರುಗಳಾದ ಮಾರುತೇಶ್ವರ, ನಂಜುಂಡೇಶ್ವರ, ಯಮನೂರಪ್ಪ, ಚೆನ್ನಮಲ್ಲಿಕಾರ್ಜುನ, ಶರಣಬಸವೇಶ್ವರ, ಕನಕರಾಯ, ಇನ್ನಿತರ ದೇವರುಗಳನ್ನು ಆರಾಧಿಸುತ್ತಾರೆ ಮತ್ತು ಕೆಲವು ದೇವರುಗಳಿಗೆ ಅರಕೆಯನ್ನು ಹೊತ್ತುಕೊಳ್ಳುತ್ತಾರೆ. ತಮ್ಮ ಗುಡಾರದಲ್ಲಿ ಬೇರೆ ಬೇರೆ ದೇವರುಗಳನ್ನು ಇಟ್ಟು ಪೂಜಿಸುತ್ತಾರೆ. ಈ ರೀತಿ ಕಾಲಾಂತರದಲ್ಲಿ ಶ್ರೀಶೈಲ ಮಲ್ಲಯ್ಯನನ್ನು ಪೂಜಿಸುವದರ ಜೊತೆಗೆ ಮಾಲ ಸಮುದಾಯದವರು ಆರಾಧಿಸುವ ದೇವರುಗಳನ್ನು ಬದಲಾವಣೆ ಮಾಡಿಕೊಳ್ಳುವದರ ಮೂಲಕ ಸ್ಥಿತ್ಯಂತರವನ್ನು ಬಯಸುತ್ತಿದ್ದಾರೆ. ಸಮಾಜದಲ್ಲಿ ಪರ್ವತ ಮಲ್ಲಯ್ಯ ಎನ್ನುತ್ತಿದ್ದ ಇವರಿಗೆ ಕಾಲಾಂತರದಲ್ಲಿ ಇವರ ವೃತ್ತಿಯ ಆಧಾರದ ಮೇಲೆ ಇನ್ನಿತರ ಹೆಸರುಗಳಾದ ಮಲ್ಲಯ್ಯನವರು, ಮಾಲ ಜಂಗಮರು, ಬುಡುಗ ಜಂಗಮರು, ಶ್ರೀಶೈಲ ಮಲ್ಲಯ್ಯನವರು, ಚೆನ್ನಮಲ್ಲಯ್ಯನವರು, ಮುತ್ತುಗಾರರು, ಮಲ್ಲರು, ಜಂಗಮರು, ಈ ರೀತಿಯ ಹೆಸರುಗಳಿಂದ ಕರೆಯಲಾರಂಭಿಸಿದರು.

ಕೊನೆ ಟಿಪ್ಪಣಿ

೧ ರೆವೆರೆಂಡ್ ಎಫ್ ಕಿಟ್ಟೆಲ್(೧೮೯೪) ಕನ್ನಡ ಇಂಗ್ಲಿಷ್ ಡಿಕ್ಷನರಿ

೨ Edger Thurston; Caste and Tribes in Southrn India: 1909; pp189

೩ Edger Thurston; Caste and Tribes in Southrn India:; 1909; pp189

೪ SIRAJ UL HASSN(1920) CASTE S AND TRIBES OF H E H THE NIZAM'S DOMINATIONS VOLUME 1 Bombay the times press

೫ R V Russel, 1993 The Tribes and Castes of the Central Provinces of India: 1993:156

೬ ಶ್ರೀ ಎನ್ ಬಸವರಾಧ್ಯ ಎಂ ಎ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಏಳನೇಯ ಸಂಪುಟ ಸರಕಾರಿ ಮುದ್ರಣಾಲಯ ಬೆಂಗಳೂರ

೭ ಎಸ್ ಎಸ್ ಹೀರೆಮಠ ೧೯೯೩ "ಜಾತ್ರೆಗಳು" ಕರ್ನಾಟಕ ದಲಿತ ಸಂಸ್ಕೃತಿಯ ಪರಂಪರೆ ಹೊಸಪೇಟೆ ಸಮತಾ ಪ್ರಕಾಶನ

೮ ಎಸ್ ಎಸ್ ಹೀರೆಮಠ ೧೯೯೩ "ಜಾತ್ರೆಗಳು" ಕರ್ನಾಟಕ ದಲಿತ ಸಂಸ್ಕೃತಿಯ ಪರಂಪರೆ ಹೊಸಪೇಟೆ ಸಮತಾ ಪ್ರಕಾಶನ

೯ ದಾಸನೂರು ಕೂಸಣ್ಣ: ೧೯೯೫: ಶೋಷಿತ ಜಂಗಮರ ಮೀಸಲಾತಿ: ಮಾತಂಗ ಪ್ರಕಾಶನ ಮೈಸೂರ ೧೯೯೫:೨೫

೧೦ ಅರ್ಜುನ ಗೂಳಸಂಗಿ (೨೦೦೦) "ದಲಿತ ಬದುಕು ಮತ್ತು ಸಂಸ್ಕೃತಿಯ ಜಾನಪದೀಯ ಅಧ್ಯಯನ" ದೇವದಾಸಿ ವಿಮೂಚನಾ ಸಂಸ್ಥೆ ಅಥಣಿ-

೧೧ ಸೋಸಲೆ ಚಿನ್ನಸ್ವಾಮಿ ಎನ್: ೨೦೦೪ (ಮೀಸಲಾತಿ) "ಸಾಮ್ರಾಜ್ಯ ಮತ್ತು ಸಂಸ್ಥಾನ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೧೭

೧೨ ಸೋಸಲೆ ಚಿನ್ನಸ್ವಾಮಿ ಎನ್: ೨೦೦೪ (ಮೀಸಲಾತಿ) "ಸಾಮ್ರಾಜ್ಯ ಮತ್ತು ಸಂಸ್ಥಾನ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೬

೧೩ ಸೋಸಲೆ ಚಿನ್ನಸ್ವಾಮಿ ಎನ್: ೨೦೦೪: (ಮೀಸಲಾತಿ) "ಸಾಮ್ರಾಜ್ಯ ಮತ್ತು ಸಂಸ್ಥಾನ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ : ೨೦೭

೧೪ ಎಸ್ ಎಸ್ ಹೀರೆಮಠ ೨೦೦೫ "ಜನಪದ ಸಮಾಜ ಮತ್ತು ಸಂಸ್ಕೃತಿ" ಸೂರ್ಯ ಪ್ರಕಾಶನ ಚಿತ್ರದುರ್ಗ ಜಿಲ್ಲೆ

೧೫ Nandu ram (2007) "Encyclopaedia SCHEDULED CASTES IN INDIA in 5 volumes Gyan publishing hous new dehli.

೧೬ ಎಂ ನಂಜುಂಡಸ್ವಾಮಿ ೨೦೧೨ "ಹೊಲೆಯ- ಮಾದರು ರಾಜರು" ಮಾಳವ ಫಿಲೂಸಫಿಕಲ್ ಬೆಂಗಳೂರ /೩೨

೧೭ ಎಂ ನಂಜುಂಡಸ್ವಾಮಿ ೨೦೧೨ "ಹೊಲೆಯ- ಮಾದರು ರಾಜರು" ಮಾಳವ ಫಿಲೂಸಫಿಕಲ್ ಬೆಂಗಳೂರ /೪೯

೧೮ ಎಂ ನಂಜುಂಡಸ್ವಾಮಿ ೨೦೧೨ "ಹೊಲೆಯ- ಮಾದರು ರಾಜರು" ಮಾಳವ ಫಿಲೂಸಫಿಕಲ್ ಬೆಂಗಳೂರ /೮೯

೧೯ ಅಸ್ಪೃಶ್ಯ ಸಂಘಟನೆಗಾಗಿ ಸ್ವಾಭಿಮಾನ ಚಳುವಳಿ (ಪ್ರಜಾವಾಣಿ.ನೆಟ್ ಜೂನ್ ೧೦ ೨೦೧೧)

೨೦ ಸದಸ್ಯ: Monika Pallavi Wikipedia ಅಂಬೇಡ್ಕರ್ ನನ್ನ ಪ್ರಯೋಗ ಪುಟ ೨೮/೧೧/೨೦೧೧

(ಅಂತರ್ಜಾಲ ಮಾಹಿತಿ)

೨೧ ಅಂತರ್ಜಾಲ ಮಾಹಿತಿ : ನಾವು ಹೊಲೆಯರು ಚೆಲುವಾದಿಯರು

೨೨ ಕರ್ನಾಟಕ ದಲಿತ ಬಾಹುಜನ ಬ್ಲಾಗ್ಸ್ ಪಾಟ್. ಕಾಮ್ (ಸೋಮವಾರ ಮೇ ೯ ೨೦೧೧)

೨೩ ಅಂತರ್ಜಾಲ ಮಾಹಿತಿ

೨೪ R V Russel, The Tribes and Castes of the Central Provinces of India: ೧೯೯೩:೧೫೬

೨೫ ೨೦೧೧ರ ಜನಗಣತಿ

ಅಧ್ಯಾಯ ಮೂರು
ಮಾಲ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ

೩.೧. ಸಾಮಾಜಿಕಜೀವನ

೩.೨. ಜೀವನಾವರ್ತನ ಆಚರಣೆಗಳು

೩.೩ ವಾರ್ಷಿಕಾವರ್ತನ ಆಚರಣೆಗಳು

೩.೪ ವಿಧಿ ನಿಷೇಧಗಳು

೩.೫ ಸಾಂಸ್ಕೃತಿಕ ಆಟ

೩.೬ ಇತರ ವೃತ್ತಿಯವರು ಮತ್ತು ಸಮಾಜಗಳೊಂದಿಗಿನ ಸಂಬಂಧಗಳು

ಅಧ್ಯಾಯ ಮೂರು

ಮಾಲ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ

ಮೂಲತಃ ಆಂಧ್ರ ಪ್ರದೇಶದವರಾದ ಮಾಲ ಸಮುದಾಯವು ಅಸ್ಪೃಶ್ಯ ಸಮುದಾಯವಾಗಿದ್ದರೂ ರಾಜಾಶ್ರಯವನ್ನು ಪಡೆದು ಜೀವನ ನಿರ್ವಹಣೆಗೆ ಕಷ್ಟವಿಲ್ಲದಂತೆ ಜೀವಿಸಿದ್ದಿತು. ಮಾಲ ಸಮುದಾಯವು ರಾಜಾಶ್ರಯಕ್ಕೆ ಒಳಗಾಗಿದ್ದಿತು ಎಂಬುದನ್ನು ಸೂಚಿಸುವ ಬೆಡಗುಗಳು ಅವರಲ್ಲಿಂದೂ ಜೀವಂತವಾಗಿವೆ. ಮದ್ದಳೆಯವರು, ಕಾಳೆ (ಕಹಳೆ), ಇತ್ಯಾದಿ ಬೆಡಗಿನ ಹೆಸರುಗಳು ಅವರು ಸೈನ್ಯದಲ್ಲಿ ನಿರ್ವಹಿಸುತ್ತಿದ್ದ ಕೆಲಸವನ್ನು ಪ್ರತಿನಿಧಿಸುತ್ತವೆ. ಮಾಲ ಎಂಬುದು ಒಂದು ಜಾತಿಯಾಗಿ ಗುರುತಿಸಿಕೊಂಡರೂ ಅದರೊಳಗೆ ಹಲವಾರು ಒಳಪಂಗಡಗಳಿವೆ. ಅವುಗಳು ಪರಸ್ಪರ ಕೊಡಕೊಳ್ಳುವಿಕೆಯನ್ನೂ ಮಾಡುತ್ತಿದ್ದಿಲ್ಲವೆಂಬುದೂ ತಿಳಿದುಬರುತ್ತದೆ. ಉದಾಹರಣೆಗೆ ವಿಶ್ವಕರ್ಮ ಎಂದು ಕರೆಯುವ ಸಮುದಾಯವೊಂದರಲ್ಲಿ ಐದು ಕುಶಲಕರ್ಮಿ ಸಮುದಾಯಗಳಿವೆ. ಕಮ್ಮಾರ, ಬಡಿಗಾರ, ಕಂಚುಗಾರ, ಶಿಲ್ಪಿ, ಅಕ್ಕಸಾಲಿ ಈ ಐದು ಪಂಗಡಗಳು ಮೇಲ್ನೋಟಕ್ಕೆ ವಿಶ್ವಕರ್ಮ ಎಂದು ಹೇಳಿಕೊಳ್ಳುವವಾದರೂ ಪರಸ್ಪರ ರಕ್ತಸಂಬಂಧವನ್ನು ನಡೆಸುವುದಿಲ್ಲ. ಅದೇ ರೀತಿಯಾಗಿ ಮಾಲ ಸಮುದಾಯದೊಳಗಿನ ಪಂಗಡಗಳೂ ಸಹ ಪರಸ್ಪರ ರಕ್ತಸಂಬಂಧವನ್ನು ಬೆಸೆದುಕೊಳ್ಳುವುದಿಲ್ಲ.

ಈ ಮಾಲ ಸಮುದಾಯದ ನಾನಾ ಪಂಗಡಗಳು ಕರ್ನಾಟಕಕ್ಕೆ ವಲಸೆಬಂದಿವೆ. ಕರ್ನಾಟಕಕ್ಕೆ ವಲಸೆಬಂದ ಪಂಗಡಗಳಲ್ಲಿ ಒಂದು ಪಂಗಡ ನೇಕಾರಿಕೆಗೆ ಸಹಾಯಕ ಕೆಲಸವನ್ನು ಮಾಡುತ್ತಿದ್ದಿತು ಎಂದು ದಾಖಲಾಗಿದೆ. "Mala weavers are known as Netpanivandlu (Nethapani, weaving work). According to the Census Report, ೧೮೯೧"[೧] ವಿಜಯನಗರ ಸಾಮ್ರಾಜ್ಯದ ಸೈನ್ಯದೊಳಗೆ ಪರಿಚಾರಕರಾಗಿ ಕಾರ್ಯನಿರ್ವಹಿಸಲು ತಮ್ಮ ಹಿರಿಯರು ಬಂದರು ಎಂದು ಅಲೆಮಾರಿ ಮಾಲ ಸಮುದಾಯದ ಹಿರಿಯ ವಕ್ತೃಗಳು ತಿಳಿಸುವರು. ರಾಜಾಶ್ರಯದ ಆಸರೆ ತಪ್ಪಿದ ಮೇಲೆ ಭೂಮಿ ಇತ್ಯಾದಿ ಆಸ್ತಿ ಇರದ ಇವರು ಅಲೆಮಾರಿಗಳಾಗಿ ಊರೂರು ಸುತ್ತುತ್ತ ಭಿಕ್ಷಾಟನೆಯನ್ನು ವೃತ್ತಿಯಾಗಿಸಿಕೊಂಡರಂತೆ. ಆಂಧ್ರದಲ್ಲಿ ಅಸ್ಪೃಶ್ಯರಾಗಿ ಗುರುತಿಸಿಕೊಂಡಿರುವ ಮಾಲ ಸಮುದಾಯವು ಕರ್ನಾಟಕದಲ್ಲಿ ಅಸ್ಪೃಶ್ಯತೆಯನ್ನು ಅಷ್ಟಾಗಿ ಅನುಭವಿಸಿದ ಉದಾಹರಣೆಗಳಿಲ್ಲ. ಎರಡನೇದಾಗಿ ಕರ್ನಾಟಕದ ಹೊಲೆಯ ಸಮುದಾಯದೊಂದಿಗೆ ವೈವಾಹಿಕ ಸಂಬಂಧ ಬೆಳೆಸದೆ ಪ್ರತ್ಯೇಕವಾಗಿಯೇ ಉಳಿದಿದೆ.

ಮಾತೃ ದೇವತಾರಾಧಕರಾದ ಇವರು ಹೊಟ್ಟೆಪಾಡಿಗೆ ಕಾವಡಿಯಲ್ಲಿ ಮಲ್ಲಯ್ಯನ ಪುಟ್ಟಿಯನ್ನು ಜೋತುಹಾಕಿಕೊಂಡು ಊರೂರು ಅಲೆಯುತ್ತ ಭಿಕ್ಷಾಟನೆ ನಡೆಸುವರು. ಊರ ಹೊರಭಾಗದ ಯಾವುದಾದರೂ ಸರ್ಕಾರಿ ಜಾಗದಲ್ಲಿ ಅಥವಾ ಖಾಸಗಿಯವರ ಖಾಲಿ ಜಾಗದಲ್ಲಿ ಗುಡಾರಗಳನ್ನು ಹಾಕಿಕೊಂಡು ನೆಲೆಸುವರು. ಸ್ವಂತ ನೆಲೆಯಂಬುದಿರದ ಈ ಸಮುದಾಯದ ಕೆಲವು ಕುಟುಂಬಗಳು ಕೊಪ್ಪಳ ಜಿಲ್ಲೆಯಲ್ಲಿ ನೆಲೆಗೊಂಡಿವೆ. ಒಂದೆರಡು ಕುಟುಂಬಗಳು ತುಂಡು ಭೂಮಿಯನ್ನೂ ಹೊಂದಿವೆ. ಹೀಗೆ ನೆಲೆಗೊಂಡರೂ ಕೂಡ ಇವರು ಸಂಪೂರ್ಣವಾಗಿ ಅಲೆಮಾರಿಯತನವನ್ನು ದೂರಮಾಡಿಲ್ಲ.

೩.೧. ಸಾಮಾಜಿಕ ಜೀವನ

ಪ್ರಾಚೀನ ಕಾಲದಲ್ಲಿ ಜಾತಿ ವ್ಯವಸ್ಥೆಯೇ ಕಾಲಿಡದ ಸಂದರ್ಭದಲ್ಲಿ ಮನುಷ್ಯನು ಚಿಕ್ಕ ಚಿಕ್ಕ ಗುಂಪುಗಳಾಗಿ ವಾಸಿಸುತ್ತಿದ್ದನು. ನಾಗರೀಕತೆ ಬೆಳೆದಂತೆಲ್ಲ ಈ ಗುಂಪುಗಳಲ್ಲಿಯೇ ಒಂದು ಗುಂಪು ಕೃಷಿ ಚಟುವಟಿಕೆಗಳಲ್ಲಿ ತೊಡಗಿದರೆ ಮತ್ತೊಂದು ಗುಂಪು ಕೃಷಿ ಚಟುವಟಿಕೆಗೆ ಪೂರಕವಾದ ಉಪಕರಣಗಳ ತಯಾರಿಕೆ ಮಾಡುವುದನ್ನು ರೂಢಿಸಿಕೊಂಡಿತು. ಈ ವೃತ್ತಿ ಬದುಕನ್ನು ಆಶ್ರಯಿಸಿಯೇ ಎರಡು ಗುಂಪುಗಳು ಪ್ರತ್ಯೇಕಗೊಂಡವು. ಕೃಷಿ ಚಟುವಟಿಕೆಗಳಲ್ಲಿ ತೊಡಗಿದ ಗುಂಪು ಬಲಗೈಯೆಂದೂ, ಅದಕ್ಕೆ ಪೂರಕ ಸಾಮಾಗ್ರಿಯನ್ನು ಒದಗಿಸುವ ಗುಂಪು ಎಡಗೈಯೆಂದೂ ಗುರುತಿಸಲ್ಪಟ್ಟಿತು. ಈ ಎರಡೂ ಗುಂಪುಗಳೂ ಪರಸ್ಪರ ಕೊಡುಕೊಳ್ಳುವಿಕೆಯ ಮೂಲಕ ಸಹಬಾಳ್ವೆಯನ್ನು ಮಾಡುತ್ತಿದ್ದವು. ಇದಾದ ತರುವಾಯ ಎರಡೂ ಗುಂಪುಗಳಲ್ಲಿಯೂ ಪ್ರತ್ಯೇಕವಾದ ಒಳಗುಂಪುಗಳು ಸೃಷ್ಟಿಗೊಂಡು ಅವು ಜಾತಿಗಳಾಗಿ ವಿಂಗಡನೆಗೊಂಡವು.

ಒಂದು ಕಾಲಕ್ಕೆ ಸ್ವಾಭಿಮಾನದ ಬದುಕನ್ನು ಬದುಕಿದ ಸಮುದಾಯಗಳಲ್ಲಿ ಮಾಲ ಸಮುದಾಯವೂ ಪ್ರಮುಖವಾದುದು. ಮುಖ್ಯವಾಗಿ ತಳಸಮುದಾಯಗಳು ತಮ್ಮದೇ ಆದ ಗುಂಪುಗಳನ್ನು ರಚಿಸಿಕೊಂಡು ಜೀವನ ನಿರ್ವಹಣೆ ಮಾಡುತ್ತವೆ. ಇವುಗಳದೇ ಆದ ಕಟ್ಟೆಮನೆ ಪದ್ಧತಿ, ಜಾತಿ ಪಂಚಾಯ್ತಿಗಳನ್ನು ಇಂದಿಗೂ ಕಾಣಬಹುದು. ಒಂದು ತಳಸಮುದಾಯ ಮತ್ತೊಂದು ತಳಸಮುದಾಯದೊಂದಿಗೆ ಅಥವಾ ಬೇರೆ ಜಾತಿಯೊಂದಿಗೆ ಯಾವುದೇ ಕಾರಣಕ್ಕೂ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದಿಲ್ಲ. ಪ್ರತಿಯೊಂದು ಸಮುದಾಯಕ್ಕೂ ಅವರದೇ ಆದ ವಿಶಿಷ್ಟ ಬೆಡಗುಗಳು, ಆರಾಧನಾ ದೈವಗಳು ಇವೆ. ಇವರದೇ ಆದ ಸಾಂಸ್ಕೃತಿಕ ನಾಯಕರು ಇಂದು ದೈವಗಳಾಗಿ ಪೂಜೆಗೊಳ್ಳುತ್ತವೆ. ಮಾತೃದೇವತಾರಾಧಕರಾದ ತಳಸಮುದಾಯಗಳು ವೈವಾಹಿಕ ಸಂಬಂಧಗಳನ್ನು ಬೆಳೆಸಲು ಮುಖ್ಯವಾಗಿ ಬೆಡಗುಗಳನ್ನು ಆಧಾರವಾಗಿ ಇರಿಸಿಕೊಳ್ಳುತ್ತವೆ.

ಈ ಹಿಂದಿನ ಅಧ್ಯಾಯದಲ್ಲಿ ಹೇಳಿರುವಂತೆ ಮಾಲ ಸಮುದಾಯದಲ್ಲಿಯೂ ಹಲವಾರು ಒಳಪಂಗಡಗಳು ಇವೆ. ಈ ಒಳಪಂಗಡಗಳಿಗೆ ಪ್ರತ್ಯೇಕ ಬೆಡಗುಗಳಿವೆ. ಇದರಲ್ಲಿ ಮುಖ್ಯವಾಗಿ

- ನೇಟ್‌ಪಾನಿವಂಡ್ಲು ಮಾಲ (ನೇಕಾರಿಕೆ ಮಾಡುವವರು)
- ಅರುವ ಮಾಲ

- ಕಂಠ (ಕಾಂತ) ಮಾಲ
- ಮುರುಕಿನಾಡು ಮಾಲ (ಮುರಕಿಂದು ಅಥವಾ ಮುರಿಕಿಂದುಲು)
- ಪೋಕುನಾಟಿ ಮಾಲ
- ರೆಡ್ಡಿಭೂಮಿ ಮಾಲ
- ಸರಿಂಡ್ಲಾ ಮಾಲ (ಸೈಂಡುಲಾ, ಸಾವುಲು)
- ದಿಂಡ್ಲುಲಾ ಮಾಲ (ದಿಂಡ್ಲಾ) ಪಂಗಡಗಳು ಕಂಡುಬರುತ್ತವೆ.

ಇಂದು ಈ ಎಲ್ಲಾ ಪಂಗಡಗಳು ಒಂದೇ ಜಾತಿ ಮೂಲದವರಾದರೂ ಅವುಗಳ ವೃತ್ತಿಯಾಧಾರದ ಮೇಲೆ ಪಂಗಡಗಳಾಗಿ ವಿಂಗಡನೆಗೊಂಡಿರುವುದಾಗಿ ಮಾಲ ಸಮುದಾಯದ ವಕ್ತೃಗಳು ತಿಳಿಸುವರು.

ಸರಿಂಡ್ಲ ಮಾಲದ ಕಳ್ಳುಬಳ್ಳಿಗೆ ಸೇರಿದವರು ಕರ್ನಾಟಕದ ಅಲೆಮಾರಿ ಮಾಲ ಸಮುದಾಯವಾಗಿದೆ. ಹಿಂದೆ ತಮ್ಮ ಹಿರಿಯರು ಬಲಿಕೊಟ್ಟ ಕೋಣವನ್ನು ತಿನ್ನುತ್ತಿದ್ದುದಾಗಿ ಹೇಳುವ ಈ ಸಮುದಾಯದವರು ಇಂದು ಕೋಣದ ಬಲಿಯನ್ನು ಕೊಡುವುದಿಲ್ಲ ಹಾಗೂ ಕೋಣ, ದನ, ಊರ ಹಂದಿ ಮಾಂಸವನ್ನು ತಿನ್ನುವುದಿಲ್ಲವೆಂದು ತಿಳಿಸುವರು. ಆದರೆ ಬೇಟೆಯಾಡಿದ ಕಾಡು ಪ್ರಾಣಿಗಳು ಹಾಗೂ ಕುರಿ, ಕೋಳಿ, ಉಡ ಮುಂತಾದ ಪ್ರಾಣಿಗಳ ಮಾಂಸವನ್ನು ಭಕ್ಷಣೆ ಮಾಡುತ್ತಾರೆ. ಆದರೆ ಆಂಧ್ರದ ಮಾಲ ಸಮುದಾಯದವರು ದೇವರಿಗೆ ಬಲಿಕೊಡುವ ಪ್ರಾಣಿಗಳಾದ ಕೋಣ, ದನ, ಕುರಿ, ಕಾಡು ಹಂದಿ, ಮತ್ತು ಇತರ ಕಾಡುಪ್ರಾಣಿಗಳನ್ನು ತಿನ್ನುವುದಾಗಿ ತಿಳಿಸುವರು. ಪ್ರಾಣಿಗಳ ಮಾಂಸದೊಂದಿಗೆ ಈಚಲು ಹೆಂಡ ಇವರಿಗೆ ಪವಿತ್ರವಾದುದು. ಪ್ರತಿಯೊಂದು ದೇವರ ಕಾರ್ಯ, ಮದುವೆ, ಹುಟ್ಟು, ಸಾವುಗಳಲ್ಲಿ ಹೆಂಡಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡುವರು. ಅಲೆಮಾರಿಗಳಂತೆ ಕರ್ನಾಟಕದ ಮಾಲ ಸಮುದಾಯದವರೂ ಸಹ ಊರ ಹೊರಭಾಗದಲ್ಲಿ ಪ್ರತ್ಯೇಕವಾಗಿ ತಮ್ಮ ಗುಡಾರಗಳನ್ನು ರಚಿಸಿಕೊಂಡು ನೆಲೆಸುವರು. ಇಂದಿಗೂ ಅಲೆಮಾರಿಗಳಾಗಿಯೇ ಜೀವನ ನಿರ್ವಹಣೆ ಮಾಡುತ್ತಾರೆ. ಒಂದು ಕಾಲಕ್ಕೆ ಸೈನ್ಯದಲ್ಲಿ ವಾದ್ಯಗಳನ್ನು ನುಡಿಸುವ, ಛತ್ರಿ ಚಾಮರಗಳನ್ನು ಹಿಡಿಯುವ ಕಾಯಕ ಮಾಡುತ್ತಿದ್ದ ಇವರು ರಾಜಾಶ್ರಯ ತಪ್ಪಿದ ತರುವಾಯ ಬಿಕ್ಷಾಟನೆಯನ್ನೇ ಮುಖ್ಯ ವೃತ್ತಿಯಾಗಿಸಿಕೊಂಡಿದ್ದರು. ಆದರೆ ಭಿಕ್ಷಾಟನೆಯನ್ನು ಸರ್ಕಾರ ನಿಷೇಧಿಸಿದ ತರುವಾಯ ಚಿಕ್ಕಪುಟ್ಟ ವ್ಯಾಪಾರ, ಕೂದಲು ಆಯುವುದು, ರದ್ದಿ ಆಯುವುದು, ಕೂಲಿ ಕೆಲಸ ದೊರೆತರೆ ಕೂಲಿನಾಲಿ ಮಾಡುವ ಕಾಯಕ ಮಾಡುವರು. ಜೊತೆಗೆ ಪುರುಷರು ಊರೂರಿಗೆ ತೆರಳಿ ತಮ್ಮ ಸಮರ ಕಲೆಯನ್ನು ಪ್ರದರ್ಶಿಸಿ ಊರಿನವರು ನೀಡಿದ ದವಸ ಧಾನ್ಯಗಳನ್ನು ಸಂಗ್ರಹಿಸುವ ಕಾಯಕದಲ್ಲಿ ಮುಂದುವರೆದಿರುವರು.

ಮಾಲ ಸಮುದಾಯದ ವಿವಿಧ ಪಂಗಡಗಳಲ್ಲಿ ಆಚರಣೆಗೊಳ್ಳುವ ದೈವಗಳು ಬೇರೆ ಬೇರೆಯಾದರೂ, ಆಚರಣೆಗಳಲ್ಲಿ ವ್ಯತ್ಯಾಸ ಕಂಡುಬರುವುದಾದರೂ ಶೇಕಡ ಎಂಭತ್ತರಷ್ಟು ಆಚರಣೆಗಳಲ್ಲಿ ಸಾಮ್ಯತೆ ಕಂಡುಬರುತ್ತದೆ.

ಮಾಲ ಸಮುದಾಯದವರು ತಾವು ಆಂಧ್ರದಲ್ಲಿ ಅಸ್ಪೃಶ್ಯರಾಗಿದ್ದರೂ ಕರ್ನಾಟಕದಲ್ಲಿ ಸ್ಪೃಶ್ಯರಾಗಿರುವುದಾಗಿ ತಿಳಿಸುವರು. ಆದರೆ ಇವರು ನೆಲೆಸಿದ ಊರುಗಳಲ್ಲಿ ಇತರೆ ಅಸ್ಪೃಶ್ಯರಾಗಿಯೇ ಪರಿಗಣಿಸುವರು.

ಮನುಷ್ಯನು ಬದುಕುತ್ತಿರುವ ಈ ವ್ಯವಸ್ಥೆ ಮೇಲ್ನೋಟಕ್ಕೆ ಒಂದೇ ಎಂದು ತೋರುತ್ತದೆ. ಆದರೆ ಅವನ ಬದುಕಿನ ತೀರಾ ಹತ್ತಿರಕ್ಕೆ ಬಂದು ಅವಲೋಕಿಸಿದರೆ ಒಬ್ಬ ವ್ಯಕ್ತಿ ಜೀವನ ಕ್ರಮಕ್ಕೂ ಇನ್ನೊಬ್ಬ ವ್ಯಕ್ತಿಯ ಜೀವನ ಕ್ರಮಕ್ಕೂ ತುಂಬಾ ವ್ಯತ್ಯಾಸವಿರುವುದು ಕಂಡುಬರುತ್ತದೆ. ಇದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಮನುಷ್ಯನ ಆಚರಣೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಮೊದಲನೇಯದು ಜೀವನಾವರ್ತನ ಆಚರಣೆ, ಎರಡನೇಯದು ಧಾರ್ಮಿಕ ಆಚರಣೆ ಎನ್ನಬಹುದು. ಜೀವನಾವರ್ತನ ಆಚರಣೆಗಳು ಎಂದರೆ ಹುಟ್ಟು, ಸಾವುಗಳನ್ನೊಳಗೊಂಡು ಬಹುತೇಕ ಅವನು ರೂಢಿಸಿಕೊಂಡಿರುವ ಜೀವನ ಕ್ರಮವನ್ನು ಸೂಚಿಸುವ ಆಚರಣೆಗಳಾಗಿರುತ್ತವೆ. ಇನ್ನು ಧಾರ್ಮಿಕಾಚರಣೆಗಳು ಎಂದರೆ ಮಾನವನು ನಂಬಿಕೊಂಡು ಬಂದಿರುವ ದೇವರು, ಧರ್ಮ, ಹಿರಿಯರ ಆಚರಣೆಗಳನ್ನು ಅವಲಂಭಿಸಿದ ಆಚರಣೆಗಳಾಗಿರುವವು. ಈ ಕೆಳಗೆ ಮಾಲ ಸಮುದಾಯದೊಳಗೆ ರೂಢಿ ಇರುವ ಜೀವನಾವರ್ತನ, ಧಾರ್ಮಿಕ ಆಚರಣೆಗಳ ಕುರಿತು ವಿಶ್ಲೇಷಿಸಲಾಗಿದೆ.

೩.೨. ಮಾಲ ಸಮುದಾಯದವರ ಜೀವನಾವರ್ತನ ಆಚರಣೆಗಳು

ವ್ಯವಸ್ಥೆಯ ಅತೀ ಕನಿಷ್ಟತಮ ಘಟಕವೆಂದರೆ ವ್ಯಕ್ತಿಯಾಗಿರುತ್ತಾನೆ. ಆನಂತರ ಕುಟುಂಬವಾಗಿರುವುದು. ಅದೇ ರೀತಿ ಅವನು ಅನುಸರಿಸಿಕೊಂಡು ಬರುವ ವೃತ್ತಿ ಮುಖ್ಯವಾಗುತ್ತದೆ. ಒಂದೇ ಮನೋಭಾವ, ಒಂದೇ ರೀತಿಯ ಆಚರಣೆಗೆ ಒಳಗಾದ ವ್ಯಕ್ತಿ ಸಮೂಹಕ್ಕೆ ಗುಂಪು, ಸಮುದಾಯ, ಜಾತಿಗಳೆಂದು ಗುರುತಿಸಲಾಗುತ್ತದೆ. ಆಧುನಿಕ ಜಗತ್ತು ತನ್ನ ಆಳವಾದಂತೆ, ಮನುಷ್ಯ, ಮನುಷ್ಯರೊಳಗಿನ ಸಂಬಂಧಗಳೆ ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತಾ ನಡೆಯುತ್ತವೆ. ಯಾವುದೇ ಒಂದು ಸಮುದಾಯವು ತನ್ನ ಸುತ್ತಲಿನ ವಾತಾವರಣದ ಪ್ರಭಾವಕ್ಕೆ ಒಳಗಾಗಿ ಬದಲಾವಣೆಯ ಪ್ರಕ್ರಿಯೆಗೆ ಒಳಗಾದರೂ ಕೂಡ ಅದು ತನ್ನ ಮೂಲ ಸಂಸ್ಕೃತಿಯನ್ನು ಕಾಯ್ದಿಟ್ಟುಕೊಳ್ಳಲು ಪ್ರಯತ್ನಿಸುತ್ತಲೇ ಇರುತ್ತದೆ. ಇದನ್ನು ಆ ಸಮುದಾಯದ ಜೀವನಾವರ್ತನ ಆಚರಣೆಗಳು, ಹಬ್ಬ, ಹರಿದಿನ, ಜಾತ್ರೆ ಮುಂತಾದವುಗಳ ಮೂಲಕ ಗಮನಿಸಬಹುದು. ಇದಕ್ಕೆ ಕರ್ನಾಟಕದಲ್ಲಿ ನೆಲೆಸಿ ಅಲೆಮಾರಿತನವನ್ನು ಮೈಗೂಡಿಸಿಕೊಂಡಿರುವ ಮಾಲ ಸಮುದಾಯವೂ ಹೊರತಾಗಿಲ್ಲ. ಮಾಲ ಸಮುದಾಯವು ತನ್ನದೇ ವಿಶಿಷ್ಟ ಆಚರಣೆ, ವಿಧಿನಿಷೇಧಗಳ ಮೂಲಕ ತನ್ನ ಮೂಲ ಸಂಸ್ಕೃತಿಯ ಬೇರುಗಳನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಮಾಲ ಸಮುದಾಯದ ಜೀವನಾವರ್ತನ ಆಚರಣೆಗಳನ್ನು ನೋಡುವುದರೊಂದಿಗೆ ಅವರ ವಾರ್ಷಿಕವಾರ್ತನ ಆಚರಣೆಗಳನ್ನು ಅವಲೋಕಿಸಲಾಗಿದೆ.

೩.೨.೧. ಮದುವೆ ಮತ್ತು ವಿಚ್ಛೇದನ

ಮದುವೆ: ಸಂಸ್ಕೃತಿಯೊಂದರ ಕನಿಷ್ಠತಮ ಘಟಕಗಳೆಂದರೆ ಗಂಡು ಮತ್ತು ಹೆಣ್ಣು. ಪರಸ್ಪರ ವಿರುದ್ಧವಾದ ಮತ್ತು ಪೂರಕವಾದ ದೇಹ ರಚನೆ ಮತ್ತು ಸ್ವಭಾವಗಳನ್ನು ಹೊಂದಿರುವ ಹೆಣ್ಣುಗಂಡುಗಳು ಬಾಳಿನುದ್ದಕ್ಕೂ

ಒಂದು ಬಗೆಯ ಸಮನ್ವಯತೆಯನ್ನು ಜೀವನದ ಉದ್ದಕ್ಕೂ ಕಾಪಾಡಿಕೊಂಡು ಬರುತ್ತವೆ. ಮದುವೆ ಮತ್ತು ಸಂತಾನದ ಮೂಲಕ ಈ ಘಟಕಗಳು ವಿಸ್ತರಣೆ ಹೊಂದುತ್ತವೆ. ಮದುವೆ ಎನ್ನುವುದು ಬರೀ ಲೈಂಗಿಕ ಕ್ರಿಯೆಗೆ ಮಾತ್ರ ಸೀಮಿತವಾದುದಲ್ಲ. ಅದು ತನ್ನ ಇಡೀ ಸಮುದಾಯದ ವಂಶವನ್ನು ಭವಿಷ್ಯ ಬದುಕಿಗೆ ಒಯ್ಯುವ ಮಹತ್ವದ ಬಂಧವೂ ಆಗಿರುತ್ತದೆ.

ಸಾಮಾನ್ಯವಾಗಿ ಅಲೆಮಾರಿ ಸಮುದಾಯಗಳು ತಮ್ಮ ವಂಶದ ಮುಂದುವರಿಕೆ ಮತ್ತು ಶುದ್ಧತ್ವಕ್ಕೆ ಹೆಚ್ಚಿನ ಮಹತ್ವ ಕೊಡುತ್ತವೆ. ಇಂತಹ ಸಮುದಾಯಗಳು ತಮ್ಮ ವಂಶದ ಶುದ್ಧತ್ವಕ್ಕಾಗಿ ತಮ್ಮ ಸಮುದಾಯದೊಳಗಿನ ಹೆಣ್ಣೊಂದನ್ನು ವಿವಾಹವಾಗುತ್ತವೆ. ಕರ್ನಾಟಕದ ಅಲೆಮಾರಿ ಮಾಲ ಸಮುದಾಯದ ಮಹಿಳೆಯರ ಸಂಖ್ಯೆ ಪುರುಷರ ಸಂಖ್ಯೆಗಿಂತಲೂ ಅಧಿಕ ಪ್ರಮಾಣದಲ್ಲಿದೆ. ಇದರಿಂದಾಗಿಯೇ ಏನೋ ಈ ಸಮುದಾಯದೊಳಗೆ ವೈವಾಹಿಕ ಸಂಬಂಧಗಳನ್ನು ಬೆಸೆಯುವಾಗ ಬೆಡಗುಗಳನ್ನು ಮಾತ್ರ ಅನುಲಕ್ಷಿಸಿ, ಇನ್ನುಳಿದ ಯಾವುದೇ ಸಂಬಂಧಗಳನ್ನು ಪರಿಗಣಿಸುವುದಿಲ್ಲವಾಗಿದೆ. ಭೌಗೋಳಿಕವಾಗಿ ಕರ್ನಾಟಕದ ಅಲೆಮಾರಿಗಳಾದ ಮಾಲ ಸಮುದಾಯದವರು ಅಲ್ಪ ಸಂಖ್ಯಾತರು.

ಹೀಗಾಗಿ ಈ ಸಮುದಾಯದಲ್ಲಿ ತಮ್ಮ ನೆಲೆಗೆ ಹತ್ತಿರದ ಮಾಲ ಸಮುದಾಯದ ಬೇರೆ ಬೆಡಗಿನ ಹೆಣ್ಣುಗಳನ್ನೇ ವಿವಾಹವಾಗುವರು. ಇತ್ತೀಚೆಗೆ ಆಂಧ್ರದ ಕಡಪ, ನಂದ್ಯಾಲ ಇತ್ಯಾದಿ ಕಡೆ ವೈವಾಹಿಕ ಸಂಬಂಧಗಳನ್ನು ಬೆಳೆಸುತ್ತಿರುವರು. ಕರ್ನಾಟಕದ ಮಾಲ ಸಮುದಾಯವು ದಿಕ್ಕೇಡಿಗಳಂತೆ ಅಲೆಮಾರಿಯತನವನ್ನು ರೂಢಿಸಿಕೊಂಡಿರುವುದರಿಂದ ಆಂಧ್ರದ ಮಾಲ ಸಮುದಾಯವು ಇವರಿಗೆ ಹೆಣ್ಣು ಕೊಡಲು ಹಿಂಜರಿಯುವರೆಂದು ಹೇಳುವರು. ಆದರೆ ಇತ್ತೀಚೆಗೆ ಎರಡು ಹೆಣ್ಣುಮಕ್ಕಳನ್ನು ಆಂಧ್ರಪ್ರದೇಶಕ್ಕೆ ಮದುವೆ ಮಾಡಿ ಕೊಟ್ಟಿದ್ದೆವೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು.

ಮಾಲ ಸಮುದಾಯದಲ್ಲಿ ಸಾಮಾನ್ಯವಾಗಿ ದೂರದ ಊರಿನ ಹೆಣ್ಣುಗಳನ್ನು ಮದುವೆಯಾಗಲು ಇಷ್ಟಪಡುವುದಿಲ್ಲ. ತಮ್ಮ ಗ್ರಾಮದೊಳಗಿನ ಹೆಣ್ಣುಗಳನ್ನು ಮದುವೆಯಾಗುವುದು ಮತ್ತು ತಮ್ಮ ಮಕ್ಕಳನ್ನು ಅದೇ ಗ್ರಾಮದೊಳಗಿನ ಗಂಡುಗಳಿಗೆ ಮದುವೆ ಮಾಡಿಕೊಡುವುದೇ ಹೆಚ್ಚು. ಅವಿಭಕ್ತ ಕುಟುಂಬಗಳಲ್ಲಿಯೇ ಹೆಚ್ಚಾಗಿ ವಾಸಿಸುವ ಮಾಲ ಸಮುದಾಯದ ಜನ ತಮ್ಮ ಊರಿನಲ್ಲಿ ಹೆಣ್ಣುಗಳನ್ನು ಕೊಡಲು ಸಾಧ್ಯವಾಗದೇ ಇದ್ದಾಗ, ತಮ್ಮ ಗ್ರಾಮಕ್ಕೆ ಅತೀ ಸಮೀಪದಲ್ಲಿರುವ ಮಾಲ ಸಮುದಾಯದ ಇನ್ನೊಂದು ಗಡ್ಡೆಗೆ (ಊರು) ಹೆಣ್ಣನ್ನು ಕೊಡುತ್ತಾರೆ. ಆದರೆ ದೂರದ ಗ್ರಾಮಗಳಿಗೆ ಇವರು ಹೆಣ್ಣು ಕೊಡುವುದು ಮತ್ತು ತರುವುದು ಅಪರೂಪವೆಂದೇ ಹೇಳಬಹುದು.

ಮಾಲ ಸಮುದಾಯದಲ್ಲಿ ಮದುವೆಗಳನ್ನು ನಿಯಂತ್ರಿಸುವ ಮತ್ತು ನಿರ್ಣಯಿಸುವ ಶಕ್ತಿ ಬೆಡಗಿಗಿರುವುದನ್ನು ಕಾಣಬಹುದಾಗಿದೆ. ಸ್ವಜಾತೀಯ ಬೆಡಗಿನಲ್ಲಿ ವಿವಾಹ ನಿಷೇಧಿಸಲ್ಪಟ್ಟಿದೆ. ವಿಜಾತಿಯ ಬೆಡಗುಗಳೊಳಗಿನ ವಿವಾಹವನ್ನು ಇದು ಸ್ವಾಗತಿಸುತ್ತದೆ. ತನ್ನದಲ್ಲದ ವ್ಯಕ್ತಿಯೊಬ್ಬ ತನ್ನ ಸಮೂಹಕ್ಕೆ ಪ್ರವೇಶ ಪಡೆಯುತ್ತಾನಲ್ಲ ಎನ್ನುವ ಆತಂಕದಿಂದಾಗಿ ಅಂತರ್‌ಜಾತಿ ವಿವಾಹವನ್ನು ಈ ಸಮುದಾಯ ಅಪೇಕ್ಷಿಸುವುದಿಲ್ಲ. ಯಾವುದೇ ಒಂದು ಅಲೆಮಾರಿ ಸಮುದಾಯದಲ್ಲಿ ಮೊದಲಿಗೆ ಜಾತಿ, ನಂತರ

ಅವರ ಬೆಡಗು, ಅನಂತರ ಕುಟುಂಬದ ಸ್ಥಿತಿ, ಕೊನೆಗೆ ಮದುವೆಯಾಗುವ ವ್ಯಕ್ತಿ ಹೀಗೆ ಎಲ್ಲವನ್ನು ಪರಿಶೀಲಿಸಿಯೇ ಮದುವೆಗಳು ನಡೆಯುವುದು. ಈ ಪದ್ಧತಿಯನ್ನು ಇವತ್ತಿಗೂ ಅನುಸರಿಸುತ್ತಿದ್ದಾರೆ.

ವಿವಾಹ ಕ್ರಮ

ಎಲ್ಲಾ ತಳ ಸಮುದಾಯಗಳಂತೆ ಮಾಲ ಸಮುದಾಯದಲ್ಲಿ ಕನ್ಯೆಯ ಕಡೆಯವರು ಎಂದೂ ವರನನ್ನು ಹುಡುಕಿಕೊಂಡು ಹೋಗಲಾರರು. ಏನಿದ್ದರೂ ಗಂಡಿನ ಕಡೆಯವರೇ ಮೊದಲಿಗೆ ಕನ್ಯೆಯ ಬಗ್ಗೆ ಪ್ರಸ್ತಾಪಿಸುತ್ತಾ ಮದುವೆಯ ಪ್ರಸ್ತಾಪದ ಇಂಗಿತವನ್ನು ತಿಳಿಸಬೇಕು. ಆಗ ಹೆಣ್ಣಿನ ಕಡೆಯವರು ತಮ್ಮ ಕನ್ಯೆಯನ್ನು ಹುಡುಗನಿಗೆ ಕೊಡುವ ಪ್ರಸ್ತಾಪ ಮಾಡಿದಲ್ಲಿ ಮಾತ್ರ ಮುಂದಿನ ಕಾರ್ಯಗಳಿಗೆ ಅಣಿಯಾಗುವುದು. ಎಷ್ಟೋ ಸಾರಿ ಮಗು ಹೊಟ್ಟೆಯಲ್ಲಿರುವಾಗಲೇ ಮದುವೆಯ ಪ್ರಸ್ತಾಪದ ಒಡಂಬಡಿಕೆಯೂ ನಡೆಯುವುದುಂಟು. ಆದರೆ ಇತ್ತೀಚೆಗೆ ಮಗು ಹೊಟ್ಟೆಯಲ್ಲಿರುವಾಗಲೆ ಮದುವೆಯ ಪ್ರಸ್ತಾಪ ನಡೆಯುದಿಲ್ಲ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು.

ಮೊದಲಿಗೆ ವಿವಾಹವಾಗುವ ಗಂಡು ಹೆಣ್ಣಿನ ತಂದೆ ಮನೆಯಲ್ಲಿ ಎರಡು ಮೂರು ವರ್ಷ ದುಡಿದ ನಂತರ ಆತನ ಯೋಗ್ಯತೆಯನ್ನು ಗಮನಿಸಿ ವಿವಾಹ ಮಾಡಿಕೊಡುವ ಪರಿಪಾಠ ಮಾಲ ಸಮುದಾಯದಲ್ಲಿದ್ದಿತು. ಆದರೆ ಈ ಸಂಪ್ರದಾಯ ಇತ್ತೀಚೆಗೆ ಇಲ್ಲವಾಗುತ್ತಿದೆ. ಕನ್ಯೆಯನ್ನು ಮದುವೆಯಾಗುವ ಗಂಡು ನೋಡುವ ಪರಿಪಾಠ ಈ ಸಮುದಾಯದಲ್ಲಿಲ್ಲ. ಕನ್ಯೆಯನ್ನು ನೋಡಿ ನಿಶ್ಚಯಿಸುವ ಕಾರ್ಯವೇನಿದ್ದರೂ ಗಂಡಿನ ಹಿರಿಯರೇ ಮಾಡುವರು. ಆದರೆ ಇತ್ತೀಚೆಗೆ ಕನ್ಯಯನ್ನು ಮದುವೆಯ ಗಂಡು ಹುಡುಗಿಯನ್ನು ನೋಡಲು ಮುಂದಾಗುವನು.

ಹೆಣ್ಣನ್ನು ನೋಡುವ ಪೂರ್ವದಲ್ಲಿಯೇ ಅವರ ಮನೆ, ಬೆಡಗು ಯಾವುದೆಂದು ಗಂಡಿನ ಹಿರಿಯರು ತಿಳಿದುಕೊಳ್ಳುವರು. ಬಹುತೇಕ ಹೆಣ್ಣು ಗಂಡುಗಳ ಕೊಡುಕೊಳ್ಳುವಿಕೆಯ ಮಾತುಕತೆಯಾಗುವುದು ಹೆಂಡದ ಅಥವಾ ಸರಾಯಿ ಅಂಗಡಿಗಳಲ್ಲಿ. ಹೆಣ್ಣನ್ನು ಕೊಡುವುದಾಗಿ ಹೆಣ್ಣಿನ ಕಡೆಯವರು ಪ್ರಸ್ತಾಪ ಮಾಡಿದ ನಂತರ, ಹೆಣ್ಣನ್ನು ಬಹಿರಂಗವಾಗಿ ದೈವದ ಯಜಮಾನರ ಸಮ್ಮುಖದಲ್ಲಿ ನೋಡುವ ಶಾಸ್ತ್ರ ನಡೆಯುತ್ತದೆ. ಆದರೆ ಇತ್ತೀಚೆಗೆ ಹೆಣ್ಣನ್ನು ಕೊಡುವ ಮಾತುಕತೆಯನ್ನು ಮನೆಯಲ್ಲಿಯೇ ಮಾಡುವರು.(ಛಾ:೩.೧) ಹೆಣ್ಣನ್ನು ನೋಡಿದ ತರುವಾಯ ನಿಶ್ಚಯ ಕಾರ್ಯ ಯಾವ ದಿವಸ ಮಾಡುವುದು ಎಂಬುದನ್ನು ದೇವರ ಸಮ್ಮುಖದಲ್ಲಿ ನಿರ್ಣಯಿಸುವರು. ಸಾಮಾನ್ಯವಾಗಿ ಒಳ್ಳೆಯ ಕಾರ್ಯಗಳನ್ನು ಮಾಡುವ ಪೂರ್ವದಲ್ಲಿ ಕನಕಗಿರಿ ತಾಲೂಕಿನಲ್ಲಿ ಬರುವ ತೆವರಿ ತೂಂಡೆಪ್ಪ ಎಂಬ ಆಂಜನೇಯ ದೇವರಲ್ಲಿ ಹೂವಿನ ಫಲ ಕೇಳುವ ಪದ್ಧತಿ ಮಾಲ ಸಮುದಾಯದಲ್ಲಿದೆ. ಆ ದೇವರಿನ ಬಲಬಾಗದಿಂದ ಹೂವು ಬಂದರೆ ನಿಶ್ಚಿತಾರ್ಥಕ್ಕೆಂದು ಒಂದು ದಿವಸ ನಿಗದಿಪಡಿಸುತ್ತಾರೆ. ಎಡಗಡೆಯಿಂದ ಹೂವು ಬಂದರೆ ಒಳ್ಳೆಯದಾಗುವದಿಲ್ಲ ಎಂದು ಭಾವಿಸುತ್ತಾರೆ. ಈ ಸಮುದಾಯದವರು ಈ ರೀತಿಯ ದೇವರನ್ನು ಕೇಳುವ ಪದ್ಧತಿಯನ್ನು ಮೂವತ್ತು ವರ್ಷದಿಂದ ಮುಂದುವರೆಸಿಕೊಂಡು ಬಂದಿದ್ದೇವೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು.

ನಿಶ್ಚಯ ಕಾರ್ಯ

ನಿಶ್ಚಯ ಕಾರ್ಯಕ್ಕೆ ಹೆಣ್ಣನ್ನು ಗಟ್ಟಿಮಾಡಿಕೊಳ್ಳುವ ಶಾಸ್ತ್ರ ಎಂದು ಮಾಲ ಸಮುದಾಯದವರು ಹೇಳುವರು. ದೇವರು ಫಲ ಪಡೆದ ತರುವಾಯ ದೈವದ ಹಿರಿಯರೊಂದಿಗೆ ಸೇರಿ ಹುಡುಗನ ಮನೆಯವರು ಹೆಣ್ಣು ನಿಶ್ಚಯ ಮಾಡಲು ಹುಡುಗಿಯ ಮನೆಗೆ ಹೋಗುವರು. ಸಾಯಂಕಾಲದ ಹೊತ್ತಿನಲ್ಲಿ ಹೆಣ್ಣನ್ನು ಗಟ್ಟಿಮಾಡಿಕೊಳ್ಳುವ ಶಾಸ್ತ್ರ ಮಾಡುವರು. ಸಂಜೆ ಹೆಣ್ಣಿನ ಗುಡಾರದ ಮುಂದೆ ಈಚಲ ಚಾಪೆ ಹಾಸಿ ಒಂದು ಕಡೆ ಹೆಣ್ಣಿನ ಕಡೆಯ ದೈವದವರೂ, ಮತ್ತೊಂದು ಕಡೆ ಗಂಡಿನ ಕಡೆ ದೈವದವರೂ ಕೂಡುವರು. ಮಧ್ಯದಲ್ಲಿ ಹೆಣ್ಣಿಗೆ ತಂದಿರುವ ಹೂವು, ಬಾಳೆಹಣ್ಣು, ಹಸಿರುಬಳೆ, ಅರಿಶಿಣ, ಕುಂಕುಮ, ಐದು ಕೊಬ್ಬರಿ ಗಿಟುಗ, ಅರಿಶಿಣ ಕೊಂಬು, ಒಂದು ಕುಬುಸದ ಕಣ, ವೀಳ್ಯದ ಎಲೆ, ಅಡಿಕೆ ಇಡುವರು. ಅಲ್ಲಿಯೇ ಹುಡುಗಿಗೆ ತೆರ ಕೊಡುವ ಬಾಬತ್ತಿನ ಕುರಿತು ದೈವದ ಎದುರಿಗೆ ಗಂಡಿನ ಮನೆಯವರು ಹೇಳಿದ ಮೇಲೆ ನಿಶ್ಚಯ ಕಾರ್ಯ ಮಾಡುವರು. ನಿಶ್ಚಯ ಮಾಡುವ ಪೂರ್ವದಲ್ಲಿ ಮದುವೆಯಾಗುವ ಗಂಡು ಕನಿಷ್ಠ ಮೂರು ವರ್ಷ ಹೆಣ್ಣಿನ ಮನೆಯಲ್ಲಿರಲು ಗಂಡಿನ ಕಡೆಯವರು ಒಪ್ಪಿಗೆ ಕೊಡಬೇಕು. ಆದರೆ ಇತ್ತೀಚೆಗೆ ಗಂಡನ್ನು ಹೆಣ್ಣಿನ ಮನೆಯಲ್ಲಿ ಮೂರು ವರ್ಷ ಬಿಡುವ ಪದ್ಧತಿಯನ್ನು ಕೈಬಿಟ್ಟಿದ್ದಾರೆ. ತರುವಾಯ ಹೆಣ್ಣಿಗೆ ಉಡಿ ತುಂಬುವರು. ನಂತರ ಐದು ಜನ ದೈವದ ಹಿರಿಯರಿಗೆ ನಮಸ್ಕರಿಸಲು ತಿಳಿಸುತ್ತಾರೆ. ಇದಾದ ತರುವಾಯ ಹೆಣ್ಣು ಖಾಯಂ ಆದಂತೆ ಎಂದು ಭಾವಿಸಲಾಗುತ್ತದೆ. ಅಂದು ಊಟ, ಕುಡಿತದ ಖರ್ಚನ್ನೆಲ್ಲ ಗಂಡಿನ ಕಡೆಯವರೇ ನೋಡಿಕೊಳ್ಳಬೇಕು ಎಂಬ ನಿಯಮವಿದೆ.

ವೀಳ್ಯಶಾಸ್ತ್ರ: ಸಣ್ಣ ವೀಳ್ಯ ಮತ್ತು ಹಿರೇವೀಳ್ಯವೆಂದು ಎರಡು ಕ್ರಮದ ವೀಳ್ಯವನ್ನು ಮಾಲ ಸಮುದಾಯದವರು ನಡೆಸುತ್ತಾರೆ. ಹೆಣ್ಣನ್ನು ನೋಡಿದ ಶಾಸ್ತ್ರವಾದ ಕೆಲವು ದಿನಗಳೊಳಗೆ ಹೆಣ್ಣಿಗೆ ಒಂದು ಹೊಸ ಸೀರೆ ತಂದು, ಹೂವು ಹಣ್ಣು ತಾಂಬೂಲ ಮುಂತಾದವುಗಳನ್ನು ತಂದು ಗಂಡು ಮತ್ತು ಹೆಣ್ಣಿನ ಮನೆಯವರ ಸಮ್ಮುಖದಲ್ಲಿ ಈ ಸಮುದಾಯದ ಹಿರಿಯರ ಸಮ್ಮುಖದಲ್ಲಿ ಮತ್ತು ಕಟ್ಟೆಮನೆಯ ಯಜಮಾನರ ಸಮ್ಮುಖದಲ್ಲಿ ಉಡಿ ತುಂಬಿ ವೀಳ್ಯವನ್ನು ಎರಡು ಕಡೆಯ ಕುಟುಂಬಗಳು ಮತ್ತು ಸಂಬಂಧಿಕರು ಹಂಚಿಕೊಳ್ಳುತ್ತವೆ. ಇದು ಸಣ್ಣ ವೀಳ್ಯಯಾಗಿರುತ್ತದೆ. ಈ ಸಂಪ್ರದಾಯ ಈ ಸಮುದಾಯದವರಲ್ಲಿ ಇವತ್ತಿಗೂ ಎಲ್ಲಾ ಮನೆತನದವರಲ್ಲಿ ಇರುತ್ತದೆ.

ಹಿರೇವೀಳ್ಯ: ಮಾಲ ಸಮುದಾಯದವರ ಮದುವೆಯ ಹಿಂದಿನ ದಿನ ಹೆಣ್ಣಿನ ಮನೆಯಲ್ಲಿ ನಡೆಯುವ ಕಾರ್ಯವಿದು. ಕಟ್ಟೆಮನೆ ಯಜಮಾನರು ಮತ್ತು ಸಮಸ್ತ ದೈವದ ಎದುರಿಗೆ ಈ ಕಾರ್ಯ ನಡೆಯುತ್ತದೆ.

♦ ಗಂಡಿನ ಕಡೆಯವರು ಹೆಣ್ಣಿಗೆ ಕೊಡಬೇಕಾದ ವಸ್ತುಗಳನ್ನು ಕೊಡುತ್ತಾರೆ.

♦ ಐದು ಸೇರು ಅಡಿಕೆ, ಐದು ಚಟ್ಟು ಎಲೆ, ಐದು ಸೇರು ಕೆಂಪು ಸಕ್ಕರೆಯನ್ನು ವೀಳ್ಯಕ್ಕೆ ತರುವರು.

♦ ತಮ್ಮ ಕುಲದೈವಕ್ಕೆ ೨೧ ರೂಪಾಯಿ ಮತ್ತು ಅಷ್ಟೇ ಹಣವನ್ನು ಸೇರಿದ ದೈವದವರಿಗೆ ಗಂಡಿನ ಕಡೆಯವರು ಕೊಡಬೇಕು. ಆದರೆ ಇತ್ತೀಚೆಗೆ ಇವರು ಐದು ಸೇರು ಅಡಿಕೆ ಬದಲಾಗಿ ಐದು ಎಡಿಕೆ,

ಐದು ಎಲೆ, ಎರಡು ಕೆ.ಜಿ ಸಕ್ಕರೆಯನ್ನು ವೀಳ್ಯಕ್ಕೆ ತರುವರು. ಮತ್ತು ೫೧ ರೂಪಾಯಿ ಮತ್ತು ಅಷ್ಟೇ ಹಣವನ್ನು ಸೇರಿದ ದೈವದವರಿಗೆ ಗಂಡಿನ ಕಡೆಯವರು ಕೊಡುತ್ತಾರೆ.

♦ ಹೆಣ್ಣಿನ ಕಡೆಯವರು ಐದು ರೂಪಾಯಿ ಕುಲದೈವಕ್ಕೆ ಮತ್ತು ಅಷ್ಟೇ ಪ್ರಮಾಣದ ಹಣವನ್ನು ಸೇರಿದ ದೈವದವರಿಗೆ ಕೊಡಬೇಕು. ಆದರೆ ಇತ್ತೀಚೆಗೆ ಐದು ರೂಪಾಯಿ ಬದಲಾಗಿ ೫೧ ರೂಪಾಯಿ ಕುಲದೈವಕ್ಕೆ ಮತ್ತು ಅಷ್ಟೇ ಪ್ರಮಾಣದ ಹಣವನ್ನು ಸೇರಿದ ದೈವದವರಿಗೆ ಕೊಡಬೇಕು. ಸಾಮಾನ್ಯವಾಗಿ ಹೆಣ್ಣಿನ ಮನೆಯ ಅಂಗಳದಲ್ಲಿ ಈ ವೀಳ್ಯ ಕಾರ್ಯ ರಾತ್ರಿ ಹೊತ್ತಿನಲ್ಲಿ ನಡೆಯುತ್ತದೆ. ಅಂಗಳದಲ್ಲಿ ಈಚಲ ಚಾಪೆ ಹಾಸಲಾಗುತ್ತದೆ. ಆದರೆ ಇತ್ತೀಚೆಗೆ ಇಚಲ ಚಾಪೆಯ ಬದಲಾಗಿ ಪ್ಲಾಸ್ಟಿಕ್ ಚಾಪೆಯನ್ನು ಹಾಸುತ್ತಾರೆ. ಹೆಣ್ಣನ್ನು ಸಾಮಾನ್ಯವಾಗಿ ಉತ್ತರ ಇಲ್ಲವೆ ಪೂರ್ವ ದಿಕ್ಕಿಗೆ ಮುಖವಾಡಿ ಕೂಡಿಸಲಾಗುತ್ತದೆ. ಕಳಸದ ಮುಂಭಾಗಕ್ಕೆ ಎಲೆ, ಅಡಿಕೆ, ಕೆಂಪುಸಕ್ಕರೆ, ಹೂ, ಹಣ್ಣು ಸೀರೆಗಳನ್ನು ತಟ್ಟೆಗಳಲ್ಲಿ ಇಡಲಾಗಿರುತ್ತದೆ. ಅವುಗಳ ಮುಂಭಾಗಕ್ಕೆ ಸಮೇವುಗಳನ್ನು ಹಚ್ಚಿ ಇಟ್ಟಿರುತ್ತಾರೆ. ಗಂಡು ಹೆಣ್ಣಿನ ಕಡೆಯ ಸಮಸ್ತ ದೈವದವರ ಸಮ್ಮುಖದಲ್ಲಿ ಮಾತುಕತೆಯಾಡುವ ಶಾಸ್ತ್ರ ಮಾಡಿ, ವೀಳ್ಯ ಹಂಚುತ್ತಾರೆ. ಈ ಸಂಪ್ರದಾಯ ಈ ಸಮುದಾಯದ ಎಲ್ಲಾ ಮನೆತನದವರಲ್ಲಿ ಇರುತ್ತದೆ ಈ ಸಂಪ್ರದಾಯವನ್ನು ಇವತ್ತಿನವರೆಗೂ ಮುಂದುವರೆಸಿಕೊಂಡು ಬರುತ್ತಿದ್ದಾರೆ.

ವೀಳ್ಯ ಹಂಚುವ ಕ್ರಮ: ವೀಳ್ಯವನ್ನು ಹಂಚುವಾಗ ಮೊದಲಿಗೆ ಕುಲದೈವಕ್ಕೆ ಮೀಸಲು ವೀಳ್ಯ. ಸಕ್ಕರೆ ತೆಗೆದಿಡುತ್ತಾರೆ.

♦ ಗಾಳೆಮ್ಮ, ಹುಲಿಗೆಮ್ಮ, ಸುಂಕ್ಲಮ್ಮ, ಹನುಮಪ್ಪ, ಶ್ರಿಶೈಲ ಮಲ್ಲಯ್ಯ ದೈವಗಳಿಗೆ ವೀಳ್ಯ ತೆಗೆಯಲಾಗುತ್ತದೆ.

♦ ಕಟ್ಟೆಮನೆ ಯಜಮಾನನನಿಗೆ ಒಂದು ವೀಳ್ಯ.

♦ ಸಮಸ್ತ ಕಟ್ಟೆಮನೆ ದೈವಗಳಿಗೂ ಒಂದೊಂದು ವೀಳ್ಯ ತೆಗೆದಿಡಲಾಗುತ್ತದೆ.

♦ ಕೊನೆಗೆ ಅಲ್ಲಿ ಸೇರಿದ ಸಮಸ್ತ ದೈವಕ್ಕೂ ವೀಳ್ಯ ಸಕ್ಕರೆ ಹಂಚಲಾಗುತ್ತದೆ.

ತೆರವಿನ ಪದ್ಧತಿ: ಮಾಲ ಸಮುದಾಯದಲ್ಲಿ ತೆರವನ್ನು ಕೊಡುವ ಪದ್ಧತಿ ಇಂದಿಗೂ ರೂಢಿಯಲ್ಲಿದೆ. ಸಾಮಾನ್ಯವಾಗಿ ತೆರವಿನ ಹಣವನ್ನು ವಧುವಿನ ತಂದೆಗೆ ಕೊಡಲಾಗುತ್ತಿತ್ತು. ಆ ಹಣದ ಮೌಲ್ಯವು ಮೊದಲಿಗೆ ೧೬ ರೂಪಾಯಿಗಳಿದ್ದಿತು. ಆದರೆ ಈಗ ಅದು ೧೦೦ ರೂಪಾಯಿ ಆಗಿದೆ. ಇತ್ತೀಚೆಗೆ ಒಂದೊಂದು ಮನೆತನದವರು ವರಧಕ್ಷಿಣೆಯನ್ನು ಮಾತನಾಡುತ್ತಾರೆ. ಮಾಲ ಸಮುದಾಯದಲ್ಲಿ ವರಧಕ್ಷಿಣೆ ಪದ್ಧತಿಯನ್ನು ಕೇಳುವ ವಾಡಿಕೆ ಉಂಟಾಗಿದೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು.

ಮದುವೆ ನಡೆಯುವ ಸ್ಥಳ: ಮದುವೆಯು ಗಂಡಿನ ಮನೆಯ ಮುಂದೆ ಮಾಡಲಾಗುವುದು. ಮದುವೆಯನ್ನು ಮಾಡಲು ದಿನ, ತಿಥಿಗಳನ್ನು ನೋಡುವ ಪದ್ಧತಿ ಮಾಲ ಸಮುದಾಯದಲ್ಲಿಲ್ಲ. ಆದರೆ ತಮಗೆ ಅನುಕೂಲವಾದಾಗ ಮದುವೆ ಮಾಡುವುದು ಎಂದು ನಿಶ್ಚಯಿಸುವರು. ಆದರೆ ಮದುವೆ ಮಾಡುವ ಪೂರ್ವದಲ್ಲಿ ಇಂತಹ ದಿನ ಮದುವೆ ಮಾಡಬೇಕೆಂದಿರುವೆವು, ನೀನು ಫಲ ಕೊಟ್ಟರೆ ಅಂದು

ಮದುವೆ ಮಾಡುತ್ತೇವೆ. ಇಲ್ಲದಿದ್ದರೆ ಮುಂದೂಡುತ್ತೇವೆ ಎಂದು ಆಂಜನೇಯ ದೇವರಲ್ಲಿ ಫಲ ಕೇಳುವರು. ಬಲಗಡೆಯ ಹೂವು ನೀಡಿದರೆ ಶುಭ ಸೂಚಕವೆಂದೂ, ಎಡ ಹೂವು ನೀಡಿದರೆ ಮಿತಿ ಸರಿಯಾಗಿಲ್ಲವೆಂದೂ ಮದುವೆಯನ್ನು ಮುಂದೂಡುವರು. ಆದರೆ ಇತ್ತೀಚೆಗೆ ಮದುವೆ ಬಗ್ಗೆ ದೇವರನ್ನು ಕೇಳುತ್ತಾರಾದರು ಮದುವೆಯ ದಿನಕ್ಕೆಂದು ಒಂದು ಒಳ್ಳೆಯ ಮಹೂರ್ತವನ್ನು ನಿಗದಿಪಡಿಸುವ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ.

ಹೆಣ್ಣಿನ ಕಡೆಯ ದೈವದೂಟ: ಮದುವೆಗೆ ಐದಾರು ದಿನಗಳ ಮೊದಲು ಹೆಣ್ಣಿನ ಮನೆಯಲ್ಲಿ ಬ್ಯಾಟೆ (ಓತ) ಮಾಡುವರು. ಅಂದು ಸೇರಿದ ದೈವದವರಿಗೆ ಮದ್ಯ ಕುಡಿಸಿ ಊಟ ಮಾಡಿಸುವರು. ಈ ಬ್ಯಾಟೆ ಮಾಡದೆ ಇದ್ದರೆ ಮದುವೆ ಕಾರ್ಯ ಪೂರ್ಣಗೊಳ್ಳುವುದಿಲ್ಲ ಎಂಬ ನಂಬುಗೆ ಮಾಲ ಸಮುದಾಯದಲ್ಲಿದೆ. ಈ ಪದ್ಧತಿಯನ್ನು ಇಂದಿಗೂ ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಹಂದರಶಾಸ್ತ್ರ: ಮದುವೆ ನಡೆಯುವ ಸ್ಥಳದಲ್ಲಿ ನೆಲೆಸಿದ ಮಾಲ ಸಮುದಾಯದ ದೈವದವರೆಲ್ಲಾ ಸೇರಿ ಹಂದರ ಹಾಕುವ ಕಾರ್ಯ ಮಾಡುತ್ತಾರೆ.

♦ ಗಂಡಿನ ಗುಡಾರದ ಮುಂಭಾಗ ಆರು ಕಂಬಗಳ ಮೇಲೆ ಚಪ್ಪರ ಹಾಕಿ, ಚಪ್ಪರಕ್ಕೆ ಹಂದರದ ತಪ್ಪಲು (ಕಾಣಿಗ ಮರದ) ಎಲೆ ಹರಡುತ್ತಾರೆ. ಹಂದರದ ಮಧ್ಯಭಾಗದಲ್ಲಿ ಕಿರಿದಾದ ಗಂಟೆಯನ್ನು ಕಟ್ಟುವರು. ಇತ್ತೀಚೆಗೆ ಅಂತ್ರಗಾಯಿ (ಅಂತರ ಕಾಯಿ) ಕಟ್ಟುವ ಪದ್ಧತಿ ರೂಢಿಗೆ ಬಂದಿದೆ.

ಹಂದರದ ಕಾಲಿಗೆ ಹಾಲುಕಂಬ, ಹತ್ತಿಕಂಬ ಎಂದು ಕಟ್ಟುತ್ತಾರೆ. ಸಾಮಾನ್ಯವಾಗಿ ಗಂಡಿನ ಮನೆಯ ಮುಂದೆ ವಿವಾಹವಾಗುವುದರಿಂದ ಗಂಡಿಗೆ ಬೀಗರಾಗುವವರು ಹಾಲುಕಂಬ, ಹತ್ತಿ ಕಂಬ ತರುತ್ತಾರೆ.

♦ ಹಲವಾಣದ ಕೊಲ್ಲೆಗೆ ಹಾಲುಕಂಬವೆಂದು, ಅತ್ತಿ ಮರದ ಕೊಂಬೆಗೆ ಅತ್ತಿಕಂಬವೆಂದು ಕರೆಯಲಾಗುತ್ತದೆ. ಹಂದರದ ಪೂಜೆಯನ್ನು ಮನೆಯ ಯಜಮಾನ ಮಾಡುತ್ತಾನೆ. ಯಜಮಾನನು ಹಂದರ ಕಂಬಗಳಿಗೆ ಸುಣ್ಣ ಕೆಮ್ಮಣ್ಣು ಹಚ್ಚಿ ಪೂಜಿಸುವನು. ಹಂದರದ ಪೂಜೆಯ ನಂತರ ಅಂದು ರಾತ್ರಿ ಹುಡುಗನ ಮನೆಯವರು ದೈವದ ಊಟವನ್ನು ತಮ್ಮ ದೈವದವರಿಗೆ ಕೊಡುವರು. ಆ ದಿನ ಗೋಧಿನುಚ್ಚಿನ ಹುಗ್ಗಿ, ಸಂಕಟಿ ಕೊಡುವರು. ಇತ್ತೀಚೆಗೆ ಸಂಕಟಿಯ ಸ್ಥಾನವನ್ನು ಅಕ್ಕಿ ಅನ್ನ ಆವರಿಸಿದೆ.

ಐರಾಣಿ: ಐದು ಮಣ್ಣಿನ ಪಾತ್ರೆಗಳಿಗೆ ಐರಾಣಿ ಎಂದು ಕರೆಯುತ್ತಾರೆ.(ಛಾ:೩.೨) ಇವುಗಳನ್ನು ಹೊರುವವರಿಗೆ ಐದುಗಿತ್ತಿಯರು ಎಂದು ಕರೆಯುತ್ತಾರೆ. ಈ ಐದುಗಿತ್ತಿಯರು ಮದುವೆಯ ಸಮಸ್ತ ಕಾರ್ಯದಲ್ಲಿಯೂ ಭಾಗವಹಿಸಬೇಕು. ಐರಾಣಿಯನ್ನು ಗಂಡಿನ ಕಡೆಯವರು ಹೊರುವುದು ವಾಡಿಕೆ.

ಐರಾಣಿ ಉಪಕರಣಗಳು

ಎರಡು ದೊಡ್ಡ ಗಡಿಗೆ	+೨	ಮಣ್ಣಿನ ಮುಚ್ಚಳ
ಎರಡು ಸಣ್ಣ ಬಿಂದಿಗೆ	+೨	ಮಣ್ಣಿನ ಮುಚ್ಚಳ
ಒಂದು ಮಗಿ	+೧	ಮಣ್ಣಿನ ಮುಚ್ಚಳ

ಎರಡು ಗಡಿಗೆಗಳಲ್ಲಿ ಗೋಧಿ, ರಾಗಿ ಜೋಳ, ನವಣೆ ಇತ್ಯಾದಿ ಐದು ಬಗೆಯ ಧಾನ್ಯಗಳನ್ನು ಬೆರೆಸಿ ಸಸಿ (ಅಗೆ) ಹಾಕಲಾಗಿರುತ್ತದೆ. ಈ ಐರಾಣಿಗಳನ್ನು ಹಂದರದೊಳಗೆ ಪ್ರತಿಷ್ಠಾಪಿಸಲಾಗಿರುತ್ತದೆ. ಎರಡು ಗಡಿಗೆಯ ಮುಚ್ಚಳಗಳಿಗೆ ಮೇಲೆ ಕಕ್ಕಡ ಬತ್ತಿ ಮಾಡಿ ಅವುಗಳು ಮದುವೆ ಮುಗಿಯುವವರೆಗೂ ಆರದಂತೆ ನೋಡಿಕೊಳ್ಳಲಾಗುತ್ತದೆ. ಈ ಎಲ್ಲಾ ಪಾತ್ರೆಗಳನ್ನು ನಾಗೋಲಿಶಾಸ್ತ್ರ ಆದ ನಂತರ ಹರಿಯುವ ನೀರಿಗೆ ಬಿಡಲಾಗುತ್ತದೆ. ಈ ಪಾತ್ರೆಗಳನ್ನು ತಯಾರಿಸುವ ಕುಂಬಾರನಿಗೆ ಒಂದು ಸೇರು ಅಕ್ಕಿ, ಜೋಳದ ಹಿಟ್ಟು, ಬೆಲ್ಲ, ಗಿಟುಗ, ಮತ್ತು ೧೦೧ ರೂಪಾಯಿ (ಚಾರ್ಜು) ಕೊಟ್ಟು ಐರಾಣಿ ಪಾತ್ರೆಗಳನ್ನು ತರುವರು.

ಸುರಗಿ: ಐದು ಮಣ್ಣಿನ ಕೊಡಗಳನ್ನು ಕುಂಬಾರನಿಂದ ತರಲಾಗುತ್ತದೆ. ಸುರಗಿಗೆ ತಂದ ಐದು ಕೊಡಗಳಿಗೆ ಸುಣ್ಣ, ಕೆಮ್ಮಣ್ಣು, ಹಚ್ಚಿ ಅಲಂಕರಿಸುವರು. ಈ ಸಮುದಾಯದವರಲ್ಲಿ ಇಂತಹ ಸಂಪ್ರದಾಯ ಇವತ್ತಿನವರೆಗೂ ಮುಂದುವರೆದುಕೊಂಡಿರುತ್ತಾರೆ.

ಗಂಗೆ ಸ್ಥಳಕ್ಕೆ ಹೋಗಿ ಗಂಡಿನವರು ಮೂರು ಕೊಡ, ಹೆಣ್ಣಿನವರು ಎರಡು ಕೊಡಗಳಂತೆ ಸುರಗಿ ನೀರನ್ನು ತರುತ್ತಾರೆ.(ಛಾ:೩.೩) ಅವುಗಳನ್ನು ಹಂದರದೊಳಗೆ ಚೌಕಾಕಾರವಾಗಿ ನಾಲ್ಕು ಕಡೆ ಇಡುವರು. ಮುಂಭಾಗದಲ್ಲಿ ಒಂದು ಕೊಡವನ್ನು ಇಡುತ್ತಾರೆ. ಸುರಗಿ ಕೊಡಗಳ ಕಂಠಕ್ಕೆ ಸುರಗಿ ದಾರವನ್ನು ಸುತ್ತುತ್ತಾರೆ. ಸುರಗಿ ದಾರದ ಉಂಡೆಯನ್ನು ಒಂದು ತುಂಬಿದ ತಂಬಿಗೆಯಲ್ಲಿ ತರಲಾಗುತ್ತದೆ. ಕಟ್ಟೆಮನೆ ಯಜಮಾನನು ಸುರಗಿ ದಾರವನ್ನು ಸುರಗಿ ಕೊಡಗಳ ಕೊರಳಿಗೆ ಸುತ್ತಿ ನಾಲ್ಕೂ ಕೊಡಗಳನ್ನು ಒಂದು ಬಂಧಕ್ಕೆ ತರುತ್ತಾನೆ.(ಛಾ:೩.೪) ಈ ಸಂಪ್ರದಾಯ ಮಾಲ ಸಮುದಾಯದವರಲ್ಲಿ ಇವತ್ತಿನವರೆಗೂ ಇರುತ್ತದೆ.

ಗಂಡಿನದೆಂದು ಆರು ಸುತ್ತುದಾರ ಮತ್ತು ಹೆಣ್ಣಿನ ಕಡೆಯದೆಂದು ಐದು ಸುತ್ತು ದಾರವನ್ನು ಒಟ್ಟು ೧೧ ಸುತ್ತು ದಾರವನ್ನು ಸುರಗಿ ಕೊಡಗಳಿಗೆ ಸುತ್ತುತ್ತಾರೆ. ಮುಂಭಾಗದ ಕೊಡದ ನೀರಿನ ಸ್ವಲ್ಪ ಭಾಗವನ್ನು ಸುರಗಿ ಹಾಕುವ ನೀರಿಗೆ ಬೆರೆಸಲಾಗುತ್ತದೆ. ಈ ಸಂಪ್ರದಾಯವನ್ನು ಇವರು ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಸುರಗಿ ದಾರ ಜಾರದಂತೆ ನಾಲ್ಕೂ ಮಗ್ಗಲು ಸುರಗಿ ಕೊಡಗಳನ್ನು ಜನರು ಹಿಡಿದುಕೊಂಡಿರುತ್ತಾರೆ.(ಛಾ:೩.೫) ಮೊದಲಿಗೆ ವರನ ತಂದೆ ತಾಯಿಯರಿಗೆ, ಹುಡುಗಿಯ ತಂದೆ ತಾಯಿಯರಿಗೆ ಸುರಗಿ ನೀರು ಹಾಕಿ ಕಂಕಣ ಕಟ್ಟಲಾಗುತ್ತದೆ. ಐರಾಣಿ ಹೊತ್ತವರಿಗೂ ಸುರಗಿ ನೀರನ್ನು ಹಾಕಲಾಗುತ್ತದೆ. ನಂತರ ಮದುವೆಯಾಗುವ ಗಂಡು ಹೆಣ್ಣಿಗೆ ಸುರಗಿ ನೀರನ್ನು ಹಾಕಿ ಕಂಕಣ ಕಟ್ಟಲಾಗುತ್ತದೆ. ಸುರಗಿ ನೀರಿಗೆ ಮೊದಲು ಅರಿಶಿಣ ಹಚ್ಚುವ ಶಾಸ್ತ್ರವನ್ನು ಮಾಡಲಾಗುತ್ತದೆ.

ಸುರಗಿ ನೀರು ಹಾಕಿದ ತರುವಾಯ ಕರಿ ಕಂಬಳಿಯ ಗದ್ದಿಗೆ ಹಾಕಿ ಅದರ ಮೇಲೆ ಅಕ್ಕಿಯ ಹಸೆ ಬರೆಯಲಾಗುತ್ತದೆ. ಅದರ ಮೇಲೆ ಗಂಡು ಹೆಣ್ಣನ್ನು ಕೂರಿಸುತ್ತಾರೆ. ಗಂಡಿಗೆ ಎಲೆ ಬಾಸಿಂಗ ಮತ್ತು ಹೆಣ್ಣಿಗೆ ಸೂಸುಗ ಹಾಕುವರು.

ತಾಳಿ ಶಾಸ್ತ್ರ ಮಾಡಲು ಬೇರೆ ಯಾರೂ ಪುರೋಹಿತರನ್ನು ಕರೆಯುವುದಿಲ್ಲ. ತಾಳಿ ಕಟ್ಟಿಸುವ ಶಾಸ್ತ್ರವನ್ನು ಕಟ್ಟೆಮನೆ ಯಜಮಾನರಲ್ಲಿ ಗೌಡ (ನರಸಲು) ಮಾಡುತ್ತಾನೆ. ಇದಕ್ಕೆ ಸಾಕ್ಷಿದಾರರಾಗಿ ಶಾನುಭೋಗ (ಗುಂಡರೆಡ್ಡಿ), ವಾಲಿಕಾರ (ಲದ್ದಲು) ಇರುವರು. ದೈವದ ಸಮ್ಮುಖದಲ್ಲಿ ಗಂಡಿನ ಕೈಯಿಂದ ಹುಡುಗಿಗೆ ತಾಳಿ ಕಟ್ಟಿಸಿದ ನಂತರ ವಧೂವರರು ಮದುವೆಗೆ ಸೇರಿದ ದೈವದ ಹಿರಿಯರಿಗೆ ನಮಸ್ಕರಿಸುತ್ತಾರೆ. ಈ ಪದ್ಧತಿಯನ್ನು ಮತ್ತು ಸಂಪ್ರದಾಯವನ್ನು ಈ ಸಮುದಾಯದವರು ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಭೂಮ: ಮದುವೆಯಾದ ರಾತ್ರಿ ಭೂಮದ ಶಾಸ್ತ್ರವಿರುತ್ತದೆ. ಮಾಲ ಸಮುದಾಯದಲ್ಲಿ ಭೂಮದ ಶಾಸ್ತ್ರಕ್ಕೆ ಒಂದು ಮಹತ್ವದ ಸ್ಥಾನವಿದೆ.

ಭೂಮ ಎಂದರೆ ಎರಡೂವರೆ ಸೇರು ಅಕ್ಕಿ (ಎರಡೂವರೆ ಸೇರು ಹಕ್ಕಿ) ಬೆಲ್ಲ, ಆಕಳ ತುಪ್ಪ ಹಾಕಿ ಮಾಡಿದ ಅಡುಗೆ, ಮೊದಲಿಗೆ ಸಪ್ಪನೆಯ ಅನ್ನ ಮಾಡಿ ಅದನ್ನು ಸ್ವಚ್ಛವಾಗಿ ತೊಳೆದ ನೆಲದ ಮೇಲೆ ಹರಡಿ, ಅನ್ನವನ್ನು ದೋಣಿಯಾಕಾರ ಮಾಡಿ, ಅದರೊಳಗೆ ಬೆಲ್ಲ ಮತ್ತು ತುಪ್ಪನ್ನು ಸುರಿದು, ವಧುವರರು, ಐದು ಗಿತ್ತಿಯರು ಅಂದರೆ ಐದು ಜನ ಮುತ್ತೈದೆಯರು ಮತ್ತು ಸುರಗಿಯವರು ಅದನ್ನು ಊಟ ಮಾಡಬೇಕು. ಇದನ್ನು ರಾತ್ರಿ ಹೊತ್ತಿನಲ್ಲಿ ಮಾಡುತ್ತಾರೆ. ಈ ಸಂಪ್ರದಾಯವನ್ನು ಮಾಲ ಸಮುದಾಯದವರು ಇವತ್ತೀನವರೆಗೂ ಮಾಡಿಕೊಂಡು ಬರುತ್ತಿದ್ದಾರೆ.

ನಿಷೇಕ ಶಾಸ್ತ್ರ: ತಾಳಿಯಾದ ಮೂರನೆಯ ದಿನಕ್ಕೆ ನಿಷೇಕವಿರುತ್ತದೆ. ಅಂದು ಗಂಡಿನ ಕಡೆಯವರು ಒಂದು ಬ್ಯಾಟೆಯನ್ನು ಮಾಡಿ ದೈವದವರಿಗೆ ಹಾಗೂ ಹೆಣ್ಣಿನ ಕಡೆಯವರಿಗೆ ಮಾಂಸದ ಊಟವನ್ನು ಕೊಡುವರು. ಅಂದು ತಮ್ಮ ಗುಡಾರದ ಪಕ್ಕದಲ್ಲಿಯೇ ಮತ್ತೊಂದು ಗುಡಾರವನ್ನು ಕಟ್ಟಿ ಅದರೊಳಗೆ ವಧುವರರಿಗೆ ನಿಷೇಕ ಮಾಡುವರು. ಅಂದಿನಿಂದ ಆ ಗುಡಾರ ಆ ದಂಪತಿಗಳಿಗೆ ಸೇರುತ್ತದೆ. ಈ ಪದ್ಧತಿ ಇವತ್ತಿಗೂ ಚಾಲ್ತಿಯಲ್ಲಿದೆ.

ನಾಲ್ಕನೇ ದಿನಕ್ಕೆ ಹೆಣ್ಣಿಗೆ ಹೊದಿಕೆ ಹೊದಿಸಿ ಗಂಡ ಹೆಂಡತಿಯರನ್ನು ಮರಳಿ ಮದುಮಗಳ ಊರಿಗೆ ಕಳುಹಿಸಲಾಗುತ್ತದೆ.

ಹೆಣ್ಣು ಗಂಡಿನ ಮನೆಗೆ ಮರಳಿ ಬರುವಾಗ ಹೆಣ್ಣಿನ ತಂದೆ ತಾಯಿಯರು ಭಿಕ್ಷಾಟನೆಯ ಜೋಳಿಗೆ, ಮುದ್ದೆಕೋಲು, ಚಿಕ್ಕಪುಟ್ಟ ಪಾತ್ರೆಗಳನ್ನು ಕಡ್ಡಾಯವಾಗಿ ಹೆಣ್ಣಿನೊಂದಿಗೆ ಕಳಿಸಿಕೊಡುವರು. ಈ ಪದ್ಧತಿ ಇಂದಿಗೂ ಚಾಲ್ತಿಯಲ್ಲಿದೆ. ಆದರೆ ಇತ್ತೀಚೆಗೆ ಕೆಲವೊಬ್ಬರು ಜೋಳಿಗೆಯನ್ನು ಕೊಟ್ಟು ಕಳುಹಿಸುವದಿಲ್ಲ.

ಉಡುಕಿ ಮದುವೆ: ಮಾಲ ಸಮುದಾಯದಲ್ಲಿ ಉಡಿಕೆ ಮದುವೆಗಳು ನಡೆಯುತ್ತವೆ. ಸಾಮಾನ್ಯವಾಗಿ ಗಂಡ ಸತ್ತ ಪಕ್ಷದಲ್ಲಿ ಆ ಹೆಣ್ಣನ್ನು ಮದುವೆಯಾಗುವ ಹಕ್ಕು ಗಂಡನ ತಮ್ಮಂದಿರಿಗಿರುತ್ತದೆ. ಆದರೆ ಇದು ಇಂದು ಇಲ್ಲವೆನ್ನುವಷ್ಟು ಅಪರೂಪವಾಗಿದೆ.

ತಮ್ಮ ಸಮುದಾಯಕ್ಕೆ ಸೇರಿದ ವಿಜಾತಿ ಬೆಡಗಿನ ಗಂಡನ್ನು ಮರು ಮದುವೆಯಾಗುವ ಹಕ್ಕು ಮಾಲ ಸಮುದಾಯದ ವಿಧವೆಗೆ ಇದೆ.

ಉಡುಕಿ ಮದುವೆ ಕ್ರಮ: ಸಾಮಾನ್ಯವಾಗಿ ಯಾವುದೇ ಬಂಧು ಬಳಗವನ್ನು ಈ ಮದುವೆಗೆ ಆಹ್ವಾನಿಸುವುದಿಲ್ಲ. ಹಂದರ ಇತ್ಯಾದಿ ಸಡಗರಗಳು ಇಲ್ಲಿರುವುದಿಲ್ಲ. ಒಂದು ಪ್ರಶಸ್ತ್ಯವಾದ ದಿನದ ಮಧ್ಯರಾತ್ರಿ ಗಂಡು, ಹೆಣ್ಣು ಗುಡಾರದ ಮರೆಯಲ್ಲಿ ತಾಳಿ ಕಟ್ಟಿಕೊಳ್ಳುವ ಶಾಸ್ತ್ರ ಮಾಡುತ್ತಾರೆ. ತಾಳಿ ಕಟ್ಟುವಾಗ ವಧುವರರು ಮತ್ತು ಐದು ಜನ ವಿಧವೆರು ಇರಬೇಕು ಅವರ ಹೊರತಾಗಿ ಮನೆಯಲ್ಲಿ ಒಂದು ಪ್ರಾಣಿಯೂ ಇರಬಾರದೆಂಬ ನಂಬುಗೆ ಇದೆ. ಮಾರನೆ ದಿನ ಬೆಳಿಗ್ಗೆ ಸ್ನಾನ ಮಾಡಿಕೊಂಡು ಆಂಜನೇಯ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸಿಕೊಂಡು ಬರುತ್ತಾರೆ. ಮದುವೆಯಾಗುವ ಹೆಣ್ಣಿಗೆ ಗಂಡಾಗುವವನು ಹೊಸ ಸೀರೆಯೊಂದನ್ನು ಕೊಡುತ್ತಾನೆ. ತಾಳಿ ಮಾಡಿಸುತ್ತಾನೆ. ಇಷ್ಟಾದರೆ ಉಡುಕಿ ಮದುವೆ ಮುಗಿದಂತೆ. ಈ ಸಂಪ್ರದಾಯ ಮಾಲ ಸಮುದಾಯದವರಲ್ಲಿ ಇಂದಿಗೂ ಇರುತ್ತದೆ.

ವಿವಾಹ ವಿಚ್ಛೆದನ

ಮಾಲ ಸಮುದಾಯದವರಲ್ಲಿ ವಿವಾಹ ವಿಚ್ಛೇದನಗಳು ಜರುಗುತ್ತವೆ. ಮದುವೆಯಾದ ತರುವಾಯ ಗಂಡ ಹೆಂಡಿರ ಮಧ್ಯ ಬಿಕ್ಕಟ್ಟಿನ ಸಮಸ್ಯಗಳು ಉಂಟಾದಾಗ ಹುಡುಗಿಯ ನಡೆತೆಗಳು ಸರಿ ಇಲ್ಲವೆಂದಾಗ ಹುಡುಗಿಯ ತಂದೆ ತಾಯಿಗಳನ್ನು ಕರೆಸಿ ಮಾಲ ಸಮುದಾಯದ ಕಟ್ಟೆಮನೆಯ ಹಿರಿಯರ ಸಮ್ಮುಖದಲ್ಲಿ ಎರಡು ಕುಟುಂಗಳ ಸದಸ್ಯರ ಸಮ್ಮುಖದಲ್ಲಿ ನಡೆಯುತ್ತದೆ.

೩.೨.೨ ಒಡಲಕ್ಕಿಶಾಸ್ತ್ರ / ಸೀಮಂತ ಕಾರ್ಯ

ವಿವಾಹಿತ ಕನ್ಯೆಯು ಪ್ರೌಡಾವಸ್ಥೆಗೆ ಬಂದು ತನ್ನ ಗಂಡನ ಮನೆಗೆ ಹೋದ ಒಂದು ವರ್ಷದೊಳಗೆ ಗರ್ಭಿಣಿಯಾಗುವುದುನ್ನು ಶುಭ ಸೂಚಕವೆಂದು ಮಾಲ ಸಮುದಾಯವು ಭಾವಿಸುತ್ತದೆ. ಹೆಣ್ಣು ಮೂರು ವರ್ಷಗಳೊಳಗೆ ಗರ್ಭಿಣಿಯಾಗದಿದ್ದಲ್ಲಿ ಆತಂಕಕ್ಕೆ ಒಳಗಾಗುವ ಆ ಕುಟುಂಬಗಳು ಗಾಳೆಮ್ಮ, ಆಂಜನೇಯರಲ್ಲಿ ಹೆಣ್ಣಿನ ಒಡಲನ್ನು ತುಂಬಿಸುವಂತೆ ಹಲವು ಹರಕೆಗಳನ್ನು ಕಟ್ಟುತ್ತಾರೆ. ಸುಂಕಲಮ್ಮ, ಹುಲಿಗೆಮ್ಮ, ದುರಗಮ್ಮ, ಮಲಿಯಮ್ಮನಂತಹ ದೈವಕ್ಕೆ ಬಲಿಕೊಡುವುದಾಗಿಯೂ ಹರಕೆ ಹೊತ್ತುಕೊಳ್ಳುವುದುಂಟು.

ಗರ್ಭಿಣಿ ಹೆಣ್ಣನ್ನು ತವರು ಮನೆ ಮತ್ತು ಗಂಡನ ಮನೆ ಎರಡರಲ್ಲೂ ಸಂಭ್ರಮದಿಂದ ಕಾಣಲಾಗುತ್ತದೆ. ಹೆಣ್ಣಿನ ಮೊದಲ ಬಸುರಿಗೆ ಚೊಚ್ಚಲ ಬಸಿರೆಂದು ಕರೆಯುತ್ತಾರೆ. ಚೊಚ್ಚಲ ಬಸಿರಿಗೆ ಒಡಲಕ್ಕಿ ಶಾಸ್ತ್ರ ಮಾಡುವ ಪದ್ಧತಿ ಹಿಂದೆ ಮಾಲ ಸಮುದಾಯದಲ್ಲಿ ಇರಲಿಲ್ಲ. ಆದರೆ ಇತ್ತೀಚೆಗೆ ಅನ್ಯ ಸಮುದಾಯಗಳ ಪ್ರಭಾವಕ್ಕೆ ಒಳಗಾಗಿ ಒಡಲಕ್ಕಿ ಶಾಸ್ತ್ರವನ್ನು ಈ ಸಮುದಾಯದವರೂ ಮಾಡುವರು.

ಈ ಒಡಲಕ್ಕಿ ಶಾಸ್ತ್ರವನ್ನು ಗಂಡನ ಮನೆಯಲ್ಲಿ ಮಾಡಲಾಗುತ್ತದೆ. ಆದರೆ ಆ ಕಾರ್ಯದ ಖರ್ಚೆಲ್ಲವನ್ನೂ ಗರ್ಭಿಣಿ ಮಹಿಳೆಯ ತವರಿನವರು ವಹಿಸಿಕೊಳ್ಳುವರು.

ಹೆಣ್ಣು ಗರ್ಭಿಣಿಯಾದ ಐದು ತಿಂಗಳು, ಇಲ್ಲವೆ ಏಳು ತಿಂಗಳಲ್ಲಿ ಒಡಲಕ್ಕಿ ಆಚರಣೆಯನ್ನು ನಡೆಸಲಾಗುವುದು.

ಗರ್ಭಿಣಿ ಸ್ತ್ರೀಗೆ ಹೊಸ ಹಸಿರು ಸೀರೆ, ಅದು ಸಾಧ್ಯವಾಗದಿದ್ದ ಪಕ್ಷದಲ್ಲಿ ಒಂದು ಹಸಿರು ಕುಪ್ಪಸ ಕೊಡಲಾಗುತ್ತದೆ. ಕೈಗೆ ಹಸಿರು ಬಳೆಗಳನ್ನು, ಇಲ್ಲವೆ ಕಪ್ಪನೆಯ ಬಳೆಗಳನ್ನು ತೊಡಲಾಗುತ್ತದೆ.

ಸಾಮಾನ್ಯವಾಗಿ ಮಾಲ ಸಮುದಾಯದ ಮುತ್ತೈದೆಯರನ್ನು ತಮ್ಮ ನೆರೆಯ ಇತರ ಸಮುದಾಯದವರನ್ನು ಸೇರಿಸಿ ಸಾಯಂಕಾಲ ಉಡಿ ತುಂಬುವ ಶಾಸ್ತ್ರ ಮಾಡುತ್ತಾರೆ.*(ಛಾ:೩.೬)* ಅಕ್ಕಿ, ಎಲೆ, ಅಡಿಕೆ, ಕೊಬ್ಬರಿ ಗಿಟುಕ, ಅರಿಶಿನಕೊಂಬುಗಳಿಂದ ಗರ್ಭಿಣಿ ಹೆಣ್ಣಿಗೆ ಉಡಿ ತುಂಬಲಾಗುತ್ತದೆ. ಆ ಕಾರ್ಯದ ನಂತರ ಉಡಿ ಶಾಸ್ತ್ರಕ್ಕಾಗಿ ಬಂಧು ಬಳಗಕ್ಕೆ ಸಿಹಿ ಊಟ ಮಾಡಿಸಲಾಗುತ್ತದೆ. ಊಟದ ಕೊನೆಗೆ ಮೊಸರನ್ನವನ್ನು ಹಾಕಲಾಗುತ್ತದೆ. (ಹೊಟ್ಟೆ ತಂಪಾಗಿಸಿ ಕೊಂಡು ನಮ್ಮ ಮಗಳಿಗೆ ಒಳಿತಾಗಲೆಂದು ಹರಸಿ ಎಂದಿರಬೇಕು.)

ಒಡಲಕ್ಕಿ ಶಾಸ್ತ್ರದ ನಂತರ ಹೆಣ್ಣನ್ನು ಎರಡನೆ ದಿವಸ ತವರು ಮನೆಗೆ ಕರೆದುಕೊಂಡು ಹೋಗಲಾಗುತ್ತದೆ. ಹೆರಿಗೆಯಾಗಿ ಮೂರು ತಿಂಗಳು, ಇಲ್ಲವೆ ಐದು ತಿಂಗಳ ನಂತರ ಹೆಣ್ಣು ಮರಳಿ ಗಂಡನ ಮನೆ ಸೇರುವುದು. ಅಲ್ಲಿಯವರೆಗೂ ಆಕೆಯನ್ನು ನೋಡಿಕೊಳ್ಳುವ ಜವಾಬ್ದಾರಿ ಆಕೆಯ ತವರು ಮನೆಯವರಿಗೆ ಸೇರಿರುತ್ತದೆ. ಹೆರಿಗೆಯಾದ ಹೆಣ್ಣು ಮರಳಿ ಗಂಡನ ಮನೆಗೆ ಬರುವಾಗ ಒಂದು ಬಿದಿರಿನ ತೊಟ್ಟಿಲು, ಮಗುವಿಗೆ ಅಕ್ಕಿಮಣಿ (ಹಕ್ಕಿಯ ಎಲಬು) ಉಡಿದಾರ, ಕಿವಿಗೆ ಮುರುವನ್ನು ಹೆಣ್ಣಿನ ತವರು ಮನೆಯವರು ಖಡ್ಡಾಯವಾಗಿ ತರುತ್ತಾರೆ. ಈ ಸಂಪ್ರದಾಯ ಇವತ್ತಿಗೂ ಎಲ್ಲಾ ಮನೆತನದವರಲ್ಲಿ ಇರುತ್ತದೆ.

೩.೨.೩ ಹೆರಿಗೆ / ಜನನ ಮತ್ತು ನಾಮಕರಣ

ಬಹುಪಾಲು ಸಮುದಾಯಗಳಲ್ಲಿ ಹೆರಿಗೆ ಸೂತಕವೆಂದೇ ಭಾವಿಸಲ್ಪಡುತ್ತದೆ. ಆ ಕಾರಣಕ್ಕಾಗಿಯೇ ಹೆರಿಗೆಯಾದ ಹೆಣ್ಣನ್ನು ಒಂದು ಪ್ರತ್ಯೇಕ ಗುಡಾರದಲ್ಲಿ ಉಳಿಸುವುದು ವಾಡಿಕೆ.*(ಛಾ:೩.೭)*

"ಕಾಡುಗೊಲ್ಲರಲ್ಲಿ ಇಂದಿಗೂ ಸಹ ಅವರ ಹಟ್ಟಿಯಿಂದ ದೂರದಲ್ಲಿ ಪ್ರತ್ಯೇಕವಾಗಿ ಹಾಕಿದ ಸೂತಕದ ಗುಡಿಸಲಿನಲ್ಲಿ ಹೆರಿಗೆಯನ್ನು ಮಾಡಿಸುವುದನ್ನು ಕಾಣಬಹುದು. ಸೂಲಗಿತ್ತಿ ಎಂದು ನಿಯಮಿಸಿದ ನಾಯಕ ಹೆಂಗಸೊಬ್ಬಳ ಹೊರತಾಗಿ ಆ ಗುಡಿಸಲಿಗೆ ಯಾರ ಪ್ರವೇಶವೂ ಇರುವುದಿಲ್ಲ."[೨]

ಮಾಲ ಸಮುದಾಯದಲ್ಲಿ ಈ ರೀತಿಯ ಪದ್ಧತಿ ಪೂರ್ವದಲ್ಲಿ ಇದ್ದುದಾಗಿ ಹಿರಿಯರು ತಿಳಿಸಿರುತ್ತಾರೆ. ಆದರೆ ಇಂದು ಇವರಲ್ಲಿ ಈ ರೀತಿಯ ಪ್ರತ್ಯೇಕ ಹೆರಿಗೆ ಇಲ್ಲವೆ ಬಾಣಂತಿ ಗುಡಾರ ಇರುವುದು ಕಂಡುಬರುವುದಿಲ್ಲ.

ತಮ್ಮ ಗುಡಾರಗಳ ಸ್ವಲ್ಪ ದೂರದಲ್ಲಿ ಬಾಣಂತಿಯ ಗುಡಾರ ನಿರ್ಮಿಸುತ್ತಿದ್ದರು. ಈ ಗುಡಾರದೊಳಗೆ ಸೂಲಗಿತ್ತಿಯ ಹೊರತಾಗಿ ಯಾರಿಗೂ ಪ್ರವೇಶವಿರುತ್ತಿರಲಿಲ್ಲ. ಹೆರಿಗೆಯಾದ ನಂತರ ಮಾಸುವನ್ನು ಗುಡಿಸಲಿನ ಮುಂದೆ ಒಂದು ತೆಗ್ಗು ತೆಗೆದು ಹಾಕಿ ಮಚ್ಚುತ್ತಾರೆ. ಆ ಮಾಸು ಮುಚ್ಚಿದ ಜಾಗದ ಮೇಲೆ ಮೂರು ದಿವಸ ಕ್ರಮವಾಗಿ ಬಾಣಂತಿಗೆ ಸ್ನಾನ ಮಾಡಿಸುತ್ತಾರೆ. ಮಗು ಹುಟ್ಟಿದ ಕೂಡಲೆ ಮೂರು ದಿವಸ ಕ್ರಮವಾಗಿ ಸ್ನಾನ ಮಾಡಿಸಿ*(ಛಾ:೩.೮)* ಒಂದು ಮೂರದ ಮೇಲೆ ಒಂದು ಅರಿಬೆಯನ್ನು ಹಾಸಿ ೩ ದಿವಸ ಆ ಮೋರದಲ್ಲಿ ಆ ಮಗುವನ್ನು ಹಾಕುತ್ತಾರೆ. ಮೂರು ದಿನದ ಕಾರ್ಯದ ನಂತರ ಬಾಣಂತಿಯನ್ನು ಮನೆಯೊಳಗೆ ಕರೆದುಕೊಳ್ಳಲಾಗುತ್ತಿತ್ತು. ನಂತರ ಬಾಣಂತಿ ಗುಡಾರವನ್ನು ಕಿತ್ತು

ದೂರ ಎಸೆಯುತ್ತಿದ್ದರು. ಗುಡಾರದೊಳಗೆ ನೆಲದ ಮೇಲೆ ಹಳೆಯ ಕೌದಿ/ಕಂಬಳಿಯೊಂದನ್ನು ಹಾಸಿ ಅದರ ಮೇಲೆ ಬೇವಿನ ಸೊಪ್ಪನ್ನು ಹರಡಿ ಬಾಣಂತಿ ಮಗುವನ್ನು ಮಲಗಿಸಿರುತ್ತಾರೆ. ಹಾಗೆಯೇ ಅರಿಶಿನ ಮತ್ತು ಬೇವಿನ ಸೊಪ್ಪು ಅರೆದು ಬಾಣಂತಿಯ ಇಡೀ ದೇಹಕ್ಕೆ ಹಚ್ಚಲಾಗುತ್ತದೆ. ಬಾಣಂತಿ ಮತ್ತು ಮಗುವಿನ ಸ್ನಾನ, ಊಟೋಪಚಾರಗಳ ಹೊಣೆಯನ್ನು ಸೂಲಗಿತ್ತಿಯೇ ವಹಿಸಿಕೊಂಡಿರುತ್ತಾಳೆ.

ಬಾಣಂತಿಗೆ ಬೇವಿನ ಸೊಪ್ಪಿನಿಂದ ಮಾಡಿದ ಗಜ್ಜಗದ ಗಾತ್ರದ ಉಂಡೆಯನ್ನು ಹೆರಿಗೆಯಾದ ತಕ್ಷಣಕ್ಕೆ ನುಂಗಲು ಕೊಡಲಾಗುತ್ತದೆ. ಈ ಔಷಧಿಯನ್ನು ನುಂಗಿದರೆ ನಂಜು ತೊಲಗುತ್ತದೆ. ಯಾವ ನಂಜೂ ಆಗುವುದಿಲ್ಲ ಎನ್ನುವ ನಂಬಿಕೆ ಇವರಲ್ಲುಂಟು. ಆದರೆ ಇತ್ತೀಚೆಗೆ ಇಂತಹ ಔಷಧಿಗಳ ಅಪರೂಪವಾಗಿದೆ ಎಂದು ತಿಳಿಸಿದರು.

ಬಾಣಂತಿ ಮತ್ತು ಮಗುವಿಗೆ ದುಷ್ಟಶಕ್ತಿಗಳು ಕಾಡದಂತೆ ಗುಡಾರದೊಳಗೆ ಹಳೆಯ ಕಸಬರಿಗೆ (ಪೊರಕೆ), ಕುಡುಗೋಲನ್ನು ಇಡಲಾಗುತ್ತದೆ. ಮೂರು ದಿನಕ್ಕೆ ಮನೆಯನ್ನು ತೊಳೆದುಕೊಂಡು ಶುದ್ಧೀ ಮಾಡಿಕೊಂಡ ನಂತರ ಇಡೀ ಮನೆಯ ಸೂತಕ ಪರಿಹಾರವಾಗುತ್ತದೆ.

ಕೊಲ್ಲಗುಂತ (ತಾತ್ಕಾಲಿಕ ಬಚ್ಚಲು): ಬಾಣಂತಿ ಮಗುವನ್ನು ಇರಿಸಿದ ಗುಡಾರದ ಮುಂಭಾಗದಲ್ಲಿ ತಗ್ಗು ತೆಗೆದು ಒಂದು ಚಿಕ್ಕ ಹಾಸುಬಂಡೆ ಹಾಕುವರು. ಕಲ್ಲುಹಾಸಿನ ಸುತ್ತ ಮಣ್ಣಿನ ದಿಬ್ಬ ಕಟ್ಟುವರು. ಇದನ್ನು ಮಾಲ ಸಮುದಾಯದವರು ಕೊಲ್ಲಗುಂತ ಎಂದು ಕರೆಯುವರು. ಬಾಣಂತಿ, ಮಗುವಿಗೆ ಮೈ ತೊಳೆಯಲೆಂದೇ ಈ ಕೊಲ್ಲಗುಂತವನ್ನು ತಾತ್ಕಾಲಿಕವಾಗಿ ನಿರ್ಮಿಸುತ್ತಾರೆ. ತಾಯಿ ಮಗುವಿನ ಮೈತೊಳೆದ ನೀರನ್ನು ಬೇರೆ ದಾರಿಹೋಕರು ತುಳಿಯಬಾರದು ಎಂಬ ನಂಬುಗೆ ಇವರಲ್ಲಿದೆ. ಈ ಪದ್ಧತಿಯನ್ನು ಈ ಸಮುದಾಯದಲ್ಲಿ ಇವತ್ತಿನವರೆಗೂ ಇರುತ್ತದೆ.(ಛಾ.ಶಿ.೯)

ಮೂರು ದಿನದ ಕಾರ್ಯ/ನೀರ್ಲ

ಹೆರಿಗೆಯಾದಾಗ ಮಗುವಿನೊಂದಿಗೆ ಬೀಳುವ ಮಾಸುವನ್ನು ಮಾಲ ಸಮುದಾಯದವರು ಮಗು ಹುಟ್ಟಿದಾಗ ಬಂದ ಮಾಸವನ್ನು ಮಗಿಯಲ್ಲಿ ಹಾಕಿ ಈ ಕೊಲ್ಲಗುಂತದ ಬಂಡೆಯ ಕೆಳಗೆ ಹೂತು ಹಾಕಿರುತ್ತಾರೆ. ಈ ಎಲ್ಲಾ ಕಾರ್ಯವನ್ನು ಸೂಲಗಿತ್ತಿಯೇ ಮಾಡುತ್ತಾಳೆ. ಈ ರೀತಿಯಾಗಿ ಮಾಸುವನ್ನು ಮುಚ್ಚಿದ ಮೂರು ದಿನಕ್ಕೆ ನೀರ್ಲ ಎನ್ನುವ ಒಂದು ಆಚರಣೆ ಇವರಲ್ಲಿದೆ. ಈ ಆಚರಣೆಯನ್ನು ಕಡ್ಡಾಯವಾಗಿ ಮಾಲ ಸಮುದಾಯದವರು ಮಾಡುತ್ತಾರೆ.

ಮೂರನೆಯ ದಿನ ಬೆಳಿಗ್ಗೆ ಕೊಲ್ಲಗುಂತವನ್ನು ಆಕಳ ಸಗಣಿಯಿಂದ ಸಾರಿಸಿ ಆ ಸ್ಥಳವನ್ನು ಸಿಂಗರಿಸಲಾಗುತ್ತದೆ. ಮಾಸ ಇರಿಸಿದ ಸ್ಥಳದ ಮೇಲ್ಭಾಗದಲ್ಲಿ ಐದು ಚಿಕ್ಕ ಕಲ್ಲುಗಳನ್ನಿರಿಸುವರು. ಆ ಕಲ್ಲುಗಳಿಗೆ ಅರಿಶಿಣ, ಕುಂಕುಮ ಹಚ್ಚಿ ಪೂಜೆ ಮಾಡುವರು. ಮಗು ಹಾಗೂ ಬಾಣಂತಿಗೆ ಮೈ ತೊಳೆದಿರುತ್ತಾರೆ. ಬಜೆಯ ಬೇರಿನ ತುಂಡುಗಳು ಹಾಗೂ ಬೆಳ್ಳೊಳ್ಳಿಯ ಫಲಕನ್ನು ಸೇರಿಸಿ ಮಾಡಿದ ಸರವನ್ನು ಬಾಣಂತಿಯ ಕೊರಳೊಳಗೆ ಹಾಕುವರು. ಈ ಸಂಪ್ರದಾಯವನ್ನು ಈ ಸಮುದಾಯದವರು ಇವತ್ತಿನವರೆಗೂ ಮುಂದುವರೆಸಿಕೊಂಡು ಬರುತ್ತಿದ್ದಾರೆ.

ನಾಮಕರಣ / ತೊಟ್ಟಿಲು ಕಾರ್ಯ

ಮಾಲ ಸಮುದಾಯದಲ್ಲಿ ತೊಟ್ಟಿಲು ಕಾರ್ಯವನ್ನು ಮೂರು ದಿನಕ್ಕೆ ಮಾಡುವರು. ಕೊಲ್ಲಗುಂತದ ಬಂಡೆಯ ಮೇಲೆ ಮಾಸು ಪೂಜೆ ಮಾಡಿದ ಸ್ಥಳದಲ್ಲಿ ಬಾಣಂತಿಯನ್ನು ಕೂರಿಸುವರು. ಬಾಣಂತಿಯ ತೊಡೆಯಮೇಲೆ ಮಗುವನ್ನು ಮಲಗಿಸುತ್ತಾರೆ. ಅಂದು ತಾವು ಸಾಕಿದ ನಾಯಿಯನ್ನು ಹಿಡಿದುಕೊಂಡು ಬಂದು ಬಾಣಂತಿಯ ಮುಂಭಾಗದಲ್ಲಿ ನಿಲ್ಲಿಸುವರು. ನಾಯಿಗೂ ಪೂಜೆ ಮಾಡುವರು. ನಾಯಿಗೆ ಪೂಜೆ ಮಾಡಿದ ನಂತರ ನೈವೇಧ್ಯಕ್ಕೆ ಇಟ್ಟ ಅನ್ನದಲ್ಲಿ ಒಂದು ಮಿಟಿಗೆ ಅನ್ನವನ್ನು ನಾಯಿಗೆ ತಿನ್ನಿಸುವರು. ನಾಯಿ ಅನ್ನ ತಿಂದ ತರುವಾಯ ಅದಕ್ಕೆ ಮುದ್ದೆಕೋಲಿನಿಂದ ಹೊಡೆಯುವರು. ನಾಯಿ ಓಡಿಹೋದ ನಂತರ ಮಗುವಿಗೆ ಮನೆದೇವರ ಹೆಸರು ಕರೆದು ತರುವಾಯ ತಮಗೆ ಇಷ್ಟವಾದ ಹೆಸರನ್ನು ಕರೆಯುವರು.(ಲದ್ದಲ್ ಮನೆತನದವರು ಮಾತ್ರ) ಮನೆಯ ಯಜಮಾನ ಅಥವಾ ಮಗುವಿಗೆ ಅತ್ತೆ ಮಾವ ಆಗುವವರು ಹೆಸರನ್ನು ಇಡುವರು. ಹೆಸರಿಟ್ಟ ನಂತರ ಸೇರಿದ ಕುಲಸ್ಥರಿಗೆ ಮಂಡಾಳು ಹಂಚುವರು. ಇದ್ದುದರಲ್ಲಿ ಸ್ಥಿತಿವಂತವರಾಗಿರುವವರಾದರೆ ಊಟವನ್ನು ಹಾಕುವರು. ಈ ಎಲ್ಲಾ ನಾಮಕರಣ ಕಾರ್ಯ ಕಟ್ಟೆಮನೆ ಯಜಮಾನರ ಸಮ್ಮುಖದಲ್ಲಿಯೇ ನಡೆಯುವುದು. ಈ ಸಂಪ್ರದಾಯ ಇವತ್ತಿನವರೆಗೂ ಈ ಸಮುದಾಯದವರಲ್ಲಿ ಇರುತ್ತದೆ.

೨ನೇ ಹಂತದ ನಾಮಕರಣ: ೫ನೇ ದಿನಕ್ಕೆ ನಾಮಕರಣ(ತೊಟ್ಟಿಲಕಾರ್ಯ) ಮಾಡುತ್ತಾರೆ. ೫ನೇ ದಿನಕ್ಕೆ ಮಾಡುವ ನಾಮಕರಣ ಅತ್ಯಂತ ಮುಖ್ಯವಾಗಿದ್ದು, ಸಂಭ್ರಮದಿಂದ ಕೂಡಿರುತ್ತದೆ. ಅಂದು ಬಾಣಂತಿಯ ಗಂಡನ ಮನೆ ಮತ್ತು ತವರು ಮನೆ ಕಡೆಯವರು ಮನೆಯನ್ನೆಲ್ಲಾ ಸಾರಿಸಿ ಬಾಣಂತಿಗೆ ಎರೆದು, ಕೂಸಿಗೆ ಎರೆದು, ಹೊಸ ಬಟ್ಟೆಯನ್ನು ಮತ್ತು ಹೊಸ ಬಳೆಗಳನ್ನು ಹಾಕಿಕೊಳ್ಳುತ್ತಾಳೆ. ಐದನೆಯ ದಿನ ಆಕಳದ ಗೋಮೂತ್ರವನ್ನು ತಂದು ಬಾಣಂತಿಯ ಗಂಡನ ಮನೆ ಮತ್ತು ತವರು ಮನೆ ಕಡೆಯವರು ಗುಡಾರದ (ಮನೆಯ) ಮೂಲೆ ಮೂಲೆಗಳಿಗೆಲ್ಲಾ ಆ ನೀರನ್ನು ಚಿಮುಕಿಸಿ ದೇವರಿಗೆ ನೈವೆದ್ಯ ಮಾಡಿ ದೀಪ ಹಚ್ಚಿ ಮನೆಯಲ್ಲಿ ಮತ್ತು ತಮ್ಮ ಮನೆ ದೇವರಿಗೆ ಕಾಯಿಯನ್ನು ಒಡೆಯುತ್ತಾರೆ. ತೊಟ್ಟಿಲಿನ ಕಾರ್ಯಕ್ಕೆ ತಮ್ಮ ಸಮುದಾಯದ ಎಲ್ಲಾ ಸದಸ್ಯರನ್ನು ಕರೆದಿರುತ್ತಾರೆ.(ಭಾ:೩.೧೦)

೫ನೇ ದಿನದ ನಾಮಕರಣಕ್ಕೆ ಮಗುವಿಗೆ ಹೊಸಬಟ್ಟೆ ಹಾಕಿರುತ್ತಾರೆ. ತೊಟ್ಟಿಲನ್ನು ಕಟ್ಟಬೇಕಾದರೆ ಗುಡಿಸಲು ಇದ್ದವರು ಗುಡಿಸಲಿಗೆ ಉದ್ದವಾಗಿ ಹಾಕಲಾದ ಕಟ್ಟಿಗೆಗೆ ಎರಡು ಕಡೆ ಹಗ್ಗ ಕಟ್ಟಿ ಒಂದು ದಪ್ಪವಾದ ಜಮಖಾನದಿಂದ ಸುತ್ತಿ ತೊಟ್ಟಿಲಿನ ಆಕಾರಕ್ಕೆ ತರುತ್ತಾರೆ. (ಇತ್ತೀಚಿಗೆ ಕೆಲವೊಬ್ಬರು ಮನೆ ಇದ್ದವರು ಹೊಸ ಕಬ್ಬಿಣದ ತೊಟ್ಟಿಲನ್ನು ತಂದು ಕಟ್ಟುವುದುಂಟು. ಮಗು ಹುಟ್ಟಿದ ಗಳಿಗೆ ಚೆನ್ನಾಗಿಲ್ಲವೆಂದರೆ ಅಥವಾ ದೋಷವೆಂದು ಯಾರಾದರೂ ಹೇಳಿದರೆ ಅಂಥಹ ಸಂದರ್ಭದಲ್ಲಿ ಮನೆದೇವರ ಪೂಜಾರಿಗೆ ಬೆಳ್ಳಿಯ ವಸ್ತುಗಳನ್ನು, ದಾನ ಮಾಡುತ್ತಾರೆ. ನಂತರ ಮಗುವಿನ ತಾಯಿ ಮಗುವನ್ನು ಒಯ್ದು ತೊಟ್ಟಿಲಿನಲ್ಲಿ ಹಾಕುತ್ತಾಳೆ. ೫ನೇ ದಿನದಲ್ಲಿ ಮಗುವಿನ ನಾಮಕರಣವನ್ನು ಮಗುವಿನ ಸೋದರತ್ತೆ ಅಥವಾ ಸಹೋದರ ಮಾವ ಆದವರು ನಾಮಕರಣ ಮಾಡುತ್ತಾರೆ. ಸೋದರತ್ತೆ ಆದರೆ ಆಕೆಗೆ ಹೊಸ ಸೀರೆ ಉಡಿಸುತ್ತಾರೆ. ಸಹೋದರಮಾವ ಹೆಸರಿಟ್ಟರೆ ಅವನಿಗೆ ಹೊಸ ಬಟ್ಟೆ

ಮತ್ತು ತಲೆಗೆ ಟವಲನ್ನು ಸುತ್ತಿಕೊಂಡು ತೊಟ್ಟಿಲಿಗೆ ೫೧ ರೂಪಾಯಿ ಇಟ್ಟು ಹೂ ಹಾಕಿ ವಿಭೂತಿ ಕುಂಕುಮ ಹಚ್ಚಿ ಕಾಯಿ ಒಡೆದು ಹೆಣ್ಣಾದರೆ ಮನೆದೇವರ ಹೆಸರಾದ ದುರಗಮ್ಮ ದುರಗಮ್ಮ ನಿಮ್ಮಪ್ಪ ನಿಮ್ಮವ್ವಗ ಬುತ್ತಿ ಕೊಟ್ಟು ಬಾ ಕುಟುಕುಟು ಕಡ್ರ ಎಂದು ಹೇಳಿ ತಮಗೆ ಇಷ್ಟವಾದ ಹೆಸರನ್ನು ಕೊನೆಗೆ ಹೇಳುತ್ತಾನೆ. ಹೆಸರಿಡುವಾಗ ತೊಟ್ಟಿಲಕಾರ್ಯದ ಹಾಡನ್ನು ಹಾಡುತ್ತಾರೆ. ಬಂದಂತಹ ಎಲ್ಲಾ ಸಂಬಂಧಿಕರು ತಮಗೆ ಅನುಕೂಲವಾಗುವಂತೆ ಕೊಬ್ಬರಿ, ಬೆಲ್ಲಾ, ಅಕ್ಕಿ ರವಾ ಮಗುವಿಗೆ ಬಟ್ಟೆ ಈ ರೀತಿ ತಂದಿರುತ್ತಾರೆ. ಹೆಸರಿಟ್ಟ ನಂತರ ಸಿಹಿ ಊಟ ಎಲ್ಲರಿಗೂ ಬಡಿಸುತ್ತಾರೆ. ಒಂದು ವೇಳೆ ಮಗು ಜನಿಸುವಾಗ ಹೊಕ್ಕಳ ಬಳ್ಳಿಯನ್ನು ಕೊರಳಿಗೆ ಸುತ್ತಿಕೊಂಡು ಹುಟ್ಟಿದರೆ ಅದು ಮಗುವಿನ ತಂದೆಗೆ ಒಳ್ಳೆಯದು ಅಲ್ಲ ಅದು ದೋಷ ಎಂಬ ನಂಬಿಕೆಯಿರುತ್ತದೆ. ಆ ಕಾರಣದಿಂದಾಗಿ ಸಿಹಿ ಊಟದ ಬದಲು ಕುರಿ ಅಥವಾ ಟಗರಿನ ಬ್ಯಾಟಿಯನ್ನು ಮಾಡಿ ಆ ಸಮುದಾಯದ ಎಲ್ಲಾ ಸದಸ್ಯರಿಗೆ ಹೆಸರಿಟ್ಟ ನಂತರ ಊಟ ಬಡಿಸುತ್ತಾರೆ. ನಾಮಕರಣದ ದಿನವೇ ಸೂಲಗತ್ತಿಗೆ ಒಂದು ಹೊಸ ಗಂಗಳ, ಚರಿಗೆ, ಹೊಸ ಸೀರೆ, ಜಂಪರ ಕಣ, ಕೊಬ್ಬರಿ ಬಟ್ಲ, ಅಕ್ಕಿ, ಬೆಲ್ಲ ಮತ್ತು ೫೧ ರೂಪಾಯಿ ಈ ರೀತಿ ಖುಷಿಯನ್ನು ಕೊಡುತ್ತಾರೆ. ಈ ಸಂಪ್ರದಾಯ ಮಾಲ ಸಮುದಾಯದ ಎಲ್ಲಾ ಮನೆತನದವರಲ್ಲಿ ಇವತ್ತಿನವರೆಗೂ ಪ್ರಚಲಿತವಿದೆ.

ಗಂಗೆಪೂಜೆ: ಮಾಲಾ ಸಮುದಾಯದವರು ಹೆರಿಗೆಯಾದ ೫ನೇ ದಿನಕ್ಕೆ ಮಗುವಿಗೆ ನಾಮಕರಣ ಮಾಡುವುದಕ್ಕಿಂತ ಮೊದಲು, ಸಾಯಂಕಾಲದ ಹೊತ್ತು ಏನಾದರೂ ಸಿಹಿ ಎಡೆಯನ್ನು ಮಾಡಿಕೊಂಡು ಎಲಿ ಅಡಿಕೆ ತೆಗೆದುಕೊಂಡು ಬಾಣಂತಿ ಕೈಗೆ ಒಂದು ಖಾಲಿ ಕೊಡ ಕೊಟ್ಟು ಆಕೆಯ ಉಡಿಯಲ್ಲಿ ಬೇವಿನ ಹೂ ಹಾಕಿ ಅಕ್ಕಿಕಾಳು, ಅರಿಶಿಣ ಪುಡಿ, ಇವುಗಳನ್ನು ಉಡಿಯಲ್ಲಿ ಕಟ್ಟಿ ಆಕೆಯ ಜೊತೆಗೆ ಐದು ಚಿಕ್ಕಮಕ್ಕಳನ್ನು ಕಳುಹಿಸಿ ಕೊಡುತ್ತಾರೆ ಆ ಬಾಣಂತಿಯು ಉಡಿಯಲ್ಲಿಟ್ಟುಕೊಂಡ ಅಕ್ಕಿಕಾಳು ಮತ್ತು ಬೇವಿನ ಹೂವುವನ್ನು ಒಂದೊಂದಾಗಿ ದಾರಿಗುಂಟ ಬಿತ್ತುತ್ತಾ ಅಥವಾ ಒಂದೊಂದು ಕಾಳು ಚೆಲ್ಲುತ್ತಾ ಹತ್ತಿರವಿರುವ ಬಾವಿ ಅಥವಾ ಬೋರ್‌ವೆಲ್‌ಗೆ ಹೋಗಿ ಬಿಂದಿಗೆ ತುಂಬ ನೀರು ತುಂಬಿಕೊಂಡು ಇನ್ನು ಉಳಿದ ಅಕ್ಕಿಕಾಳನ್ನು ತುಂಬಿದ ಕೂಡದ ಮುಂದೇ ಇಟ್ಟು, ಎಲೆ, ಅಡಿಕೆ, ಬೆಲ್ಲ, ಶಾವಿಗಿ ಎಡೆ, ೧೦ ರೂಪಾಯಿ ಇಟ್ಟು ಪೂಜಿಸಿ ಹುಡುಗರಿಗೂ ವಿಭೂತಿ ಹಚ್ಚಿದ ನಂತರ ಕಾಯಿ ಒಡೆಯುತ್ತಾಳೆ. (ಛಾ:೩.೧೧) ಮನೆಗೆ ಬರುವಾಗ ಎಲಿ ಅಡಿಕೆಯನ್ನು ಗಂಗೆಗೆ ಹಾಕಿ "ನೀರಿಂದು ನೀ ತಗೋ ಹಾಲಿಂದು ನನಗೆ ಕೊಡು" ಎಂದು ಹೇಳಿ ಬಿಂದಿಗೆ ಹೊತ್ತುಕೊಂಡು ಮನೆಗೆ ಬರುತ್ತಾಳೆ. ಆಕೆ ಗಂಗೆಯಿಂದ ತಂದ ನೀರನ್ನು ಮತ್ತು ಅಗಸರ ಮನೆಯಿಂದ ತಂದ ನೀರನ್ನು ಆಕಳದ ಗೋಮೂತ್ರದಲ್ಲಿ ಕಲೆಸಿ ಮನೆಯ ಮೂಲೆ ಮೂಲೆಗೂ ಹುಗ್ಗುತ್ತಾರೆ. ಉಗ್ಗಿದ ನಂತರ ಮೈಲಿಗೆ ಹೋಗುತ್ತದೆ ಎಂಬ ನಂಬಿಕೆ ಅವರಲ್ಲಿದೆ ಸಂಜೆ ಹೊತ್ತು ನಾಮಕರಣದ ಕಾರ್ಯವನ್ನು ಇಟ್ಟುಕೊಂಡಿರುತ್ತಾರೆ. ಗಂಗೆಗೆ ಹೋಗಿ ಬಂದ ನಂತರ ಬಾಣಂತಿ ತಣ್ಣೀರನ್ನು ಮುಟ್ಟುತ್ತಾಳೆ. ಈ ಒಂದು ಸಂಪ್ರದಾಯ ಮಾಲ ಸಮುದಾಯದ ಎಲ್ಲಾ ಮನೆತನದವರಲ್ಲಿ ಇವತ್ತಿನವರೆಗೂ ಇರುತ್ತದೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಲ ಸಮುದಾಯದ ಹಿರಿಯರು ತಿಳಿಸಿದರು.

೩.೨.೪ ಚೌಲಶಾಸ್ತ್ರ

ಹುಟ್ಟಿದ ಮಗು ಹೆಣ್ಣಾಗಲಿ ಗಂಡಾಗಲಿ ಮಗು ಹುಟ್ಟಿದ ಒಂದು ವರ್ಷ ಪೂರ್ಣವಾಗುವ ಮೊದಲು ಹುಟ್ಟು ಕೂದಲು ತೆಗೆಯುವ ಶಾಸ್ತ್ರ ಮಾಡುತ್ತಾರೆ ಇದಕ್ಕೆ ಚೌಲಶಾಸ್ತ್ರ ಎಂದು ಕರೆಯುತ್ತಾರೆ. ಮಾಲ ಸಮುದಾಯದವರು ವರ್ಷಕ್ಕೊಮ್ಮೆ ದಸರಾ ಸಂದರ್ಭದಲ್ಲಿ ದುರ್ಗಾದೇವಿಯ ಜಾತ್ರೆಯನ್ನು ಮಾಡುತ್ತಾರೆ ಆ ಜಾತ್ರೆಗೆ ಮಾಲ(ಪರ್ವತ ಮಲ್ಲಯ್ಯ) ಕರ್ನಾಟಕದ ಎಲ್ಲಾ ಕಡೆಯವರೂ ಒಂದೇ ಕಡೆ ಸೇರುವರು. ಆ ಸಂದರ್ಭದಲ್ಲಿ ಜವಳ ತೆಗೆಯದ ಎಲ್ಲಾ ಮಕ್ಕಳಿಗೂ ಜವಳ (ಹುಟ್ಟು ಕೂದಲು) ತೆಗೆಸುವುದುಂಟು. ಇವರು ಜವಳದ ಕೂದಲು ತೆಗೆಸಲು ಹಡಪದರನ್ನು ಕರೆಸದೆ ಕುಟುಂಬದ ಸದಸ್ಯರೇ ಹುಟ್ಟುಗೂದಲನ್ನು ತೆಗೆಯುವರು. ಆ ಮಗುವಿನ ತಂದೆ ತಾಯಿ ಮತ್ತು ಸಂಬಂಧಿಕರು ಮಗುವನ್ನು ಎತ್ತಿಕೊಂಡು ದೆವಸ್ಥಾನದ ಸುತ್ತಲು ಪ್ರದಕ್ಷಿಣೆ ಹಾಕಿ ನಂತರ ಮಗುವಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆಗಳನ್ನು ಹಾಕಿ ನಂತರ ದೇವರಿಗೆ ಕಾಯಿ ಹೊಡೆಸಿದ ನಂತರ ದೆವಸ್ಥಾನದ ಜಾಗದಲ್ಲಿ ಒಂದು ಚಾದರ ಹಾಸಿ ಎರಡು ಸೇರು ಮಂಡಾಳ ಆ ಚದರದ ಮೇಲೆ ಹಾಕಿ ಆ ಮಂಡಳನ ಮೇಲೆ ಮಗುವನ್ನ ಕುಳ್ಳಿರಿಸಿ(ಛಾ:೩.೧೨) ಆರತಿ ಮಾಡಿ ನಂತರ ಆ ಮಂಡಳುಗಳನ್ನು ಬಂದಂತಹ ಸಂಬಂದಿಕರುಗಳಿಗೆಲ್ಲ ತಿನ್ನಲು ಹಂಚುತ್ತಾರೆ. ನಂತರ ಪೂಜಾರಿಯ ಕಡೆಯಿಂದ ಮಗುವಿನ ತಲೆಗೆ ಐದು ಬಾರಿ ಎಲೆಯನ್ನು ಮುಟ್ಟಿಸುತ್ತಾರೆ. ರಾತ್ರಿ ಹೊತ್ತು ಆ ಮಗುವಿನ ಸೋದರ ಮಾವನ ಕಡೆಯಿಂದ ೧೧ ರೂಪಾಯಿ ಧಕ್ಷಿಣೆಯನ್ನು (ದುಡ್ಡು) ಇಟ್ಟು ತಲೆಯ ಕೂದಲನ್ನು ಕತ್ತರಿಸುತ್ತಾರೆ. ಈ ಸಂಪ್ರದಾಯ ಮಾಲ ಸಮುದಾಯದ ಪ್ರತಿಯೊಂದು ಮನೆತನದವರಲ್ಲಿ ಇವತ್ತಿನವರೆಗೂ ಇರುತ್ತದೆ.

೩.೨.೫ ಪ್ರೌಢಸಂಸ್ಕಾರ

ಬಾಲೆ ಕನ್ಯೆಯಾಗುವ ಪ್ರಕ್ರಿಯೆಯನ್ನು ಅಲೆಮಾರಿ ಸಮುದಾಯಗಳು ಅತಿ ಸಂಭ್ರಮದಿಂದ ಎದಿರುಗೊಳ್ಳುತ್ತವೆ. ಒಂದೊಂದು ಬುಡಕಟ್ಟು/ಸಮುದಾಯಗಳಲ್ಲಿ ವಿಭಿನ್ನ ರಿತಿಗಳಲ್ಲಿ ಈ ಪ್ರೌಢ ಸಂಸ್ಕಾರಗಳನ್ನು ಆಚರಿಸುತ್ತಾರೆ. ಇವರಲ್ಲಿ ಬಾಲೆ ಕನ್ಯೆಯಾಗುವ ಕ್ರಿಯೆ ಮನುಷ್ಯ ಬದುಕಿನ ಮಹತ್ವದ ಕ್ರಿಯೆಯಾಗಿರುತ್ತದೆ.

ಮಾಲ ಸಮುದಾಯದ ಹೆಣ್ಣು ಮೈನೆರೆದಾಗ ಕೆಲವು ಸಂಪ್ರದಾಯಗಳನ್ನು ಅನುಸರಿಸುತ್ತಾರೆ. ಹುಡುಗಿ ಮೈನೆರೆದ ದಿನ ಹುಡುಗಿಗಾಗಿ ತಮ್ಮ ಗುಡಾರಕ್ಕೆ ಹತ್ತಿರದಲ್ಲಿಯೇ ಮೂರು ಗಳಗಳನ್ನಿರಿಸಿ ಗುಡಾರವೊಂದನ್ನು ರಚಿಸುವರು. ಗುಡಾರದ ಮೇಲೆ ಹಳೆಯ ಕೌದಿಯನ್ನು ಹೊದೆಸುತ್ತಾರೆ. ಹುಡುಗಿ ಐದು ದಿನ ಆ ಗುಡಾರದಲ್ಲಿಯೇ ಕೂಡಬೇಕು.(ಛಾ:೩.೧೩) ಐದನೇ ದಿನಕ್ಕೆ ಹುಡುಗಿಯನ್ನು ಗುಡಾರದ ಹೊರಗೆ ಕರೆದುಕೊಂಡು ಬರುವರು. ಹುಡುಗಿ ಹೊರಬಂದ ತರುವಾಯ ಹುಡುಗಿ ಕುಳಿತ ಸ್ಥಳವನ್ನು ಈಚಲಗರಿ ಹಾಕಿ ಸುಟ್ಟು ಶುದ್ಧಗೊಳಿಸುವರು. ಹುಡುಗಿಗೆ ಬೆಳಿಗ್ಗೆ ಮೈತೊಳೆದು ಹರಿಯುವ ನೀರಿನ ಬಳಿಗೆ ಕರೆದುಕೊಂಡುಹೋಗಿ ಗಂಗೆ ಪೂಜೆ ಮಾಡಿಸುವರು. ಸಂಜೆಗೆ ಹುಡುಗಿಯನ್ನು ಆಂಜನೇಯನ ಗುಡಿಗೆ ಕರೆದುಕೊಂಡು ಹೋಗಿ ಹಣ್ಣುಕಾಯಿ ಅರ್ಪಿಸಿ ಬರುವರು. ಮೈನೆರೆಯುವುದಕ್ಕೆ ಪೂರ್ವದಲ್ಲಿಯೇ ಹುಡುಗಿಗೆ ಮದುವೆಯಾಗಿದ್ದರೆ ಹುಡುಗಿಗೆ ನಿಷೇಕ ಎಂದು ಮಾಡುವುದು ಎಂದು ಗಂಡಿನವರೊಂದಿಗೆ ಸಮಾಲೋಚಿಸಿ ಆಂಜನೇಯನಲ್ಲಿ ಪ್ರಶಸ್ತವಾದ ದಿನಕ್ಕಾಗಿ

ಫಲ ಕೇಳುವರು. ದೇವರು ಬಲಭಾಗದ ಪ್ರಸಾದ ನೀಡಿದರೆ ಒಳಿತೆಂದು ಭಾವಿಸಿ ಅಂದು ನಿಷೇಕ ಮಾಡುವರು. ಈ ರೀತಿ ಮಾಡುವ ಸಂಪ್ರದಾಯ ಮಾಲ ಸಮುದಾಯದ ಎಲ್ಲಾ ಮನೆತನದವರಲ್ಲಿ ಇವತ್ತಿಗೂ ಚಾಲ್ತಿಯಲ್ಲಿದೆ.

"ಕಾಡುಗೊಲ್ಲರಲ್ಲಿ ಮೈನೆರೆದ ಹೆಣ್ಣನ್ನು ತಮ್ಮ ಹಟ್ಟಿಯಿಂದ ದೂರಕ್ಕೆ ಒಂದು ಪ್ರತ್ಯೇಕ ಗುಡಿಸಲನ್ನು ಹಾಕಿ ಸೂತಕ ಕಳೆಯುವವರೆಗೂ ಆ ಹೆಣ್ಣನ್ನು ಗುಡಿಸಲಿನಲ್ಲಿ ಇಡುತ್ತಾರೆ" (ಶಂಕರನಾರಾಯಣ, ೧೯೮೬, ೧೨೫).

ಅಂದರೆ ಈ ಆಚರಣೆ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ರೂಪಾಂತರಗೊಂಡಿರುವುದನ್ನು ಮಾಲ ಸಮುದಾಯದಲ್ಲಿ ಕಾಣಬಹುದಾಗಿದೆ.

ಈ ಹೆಣ್ಣಿರುವ ಜಾಗಕ್ಕೆ ದುಷ್ಟಶಕ್ತಿ ನುಸುಳದಂತೆ ಕಸಬರಿಗೆ, ಕುಡುಗೋಲು ಇಡುವ ಪದ್ಧತಿ ಮಾಲ ಸಮುದಾಯದಲ್ಲಿದೆ.

೩.೨.೬ ಸಾವು

"ಒಂದು ಸಮುದಾಯದ ಸಂಸ್ಕೃತಿಯು ಅದು ಎದುರಿಸುತ್ತಿರುವ ಬಿಕ್ಕಟ್ಟುಗಳ ಮೂಲಕ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಾ ಹೋಗುತ್ತದೆ. ಬಿಕ್ಕಟ್ಟುಗಳು ಸಾಮಾನ್ಯವಾಗಿ ಅನ್ಯ ಸಂಸ್ಕೃತಿಯ ಪ್ರಭಾವದಿಂದ ಕಾಣಿಸಿಕೊಳ್ಳುತ್ತದೆ. ಅಥವಾ ಅದರ ಒಳಗಿನ ಜನರ ಭಿನ್ನ ನಡಾವಳಿಗಳ ಮೂಲಕ ಪ್ರಕಟವಾಗುತ್ತದೆ."೩ ಇಂಥ ಬಿಕ್ಕಟ್ಟುಗಳನ್ನು ಬಗೆಹರಿಸಿಕೊಳ್ಳಲೆಂದೇ ಸಾವು ಮತ್ತು ಇತರ ಜೀವನಾವರ್ತನ ಆಚರಣೆಗಳನ್ನು ಹೆಚ್ಚು ಹೆಚ್ಚು ಬಿಗುವಿನ ಬಂಧದಿಂದ ಕೊಡುವಂತೆ ಆ ಸಮುದಾಯಗಳು ಪ್ರಯತ್ನಿಸುತ್ತವೆ. ಅಲ್ಲಿ ಪ್ರಾದೇಶಿಕ ಒತ್ತಡಗಳ ಸೆಳಕು ಎಷ್ಟೇ ಇದ್ದರೂ ಅದರ ಅಂತರಾಳದಲ್ಲಿ ಒಂದು ಏಕಮುಖತೆ ಇದ್ದೇ ಇರುತ್ತದೆ.

ಜನನದಂತೆ ಮನುಷ್ಯನಿಗೆ ಸಾವೂ ಕೂಡ ಅನಿವಾರ್ಯ. ಹುಟ್ಟಿನಂತೆ ಸಾವನ್ನು ಆತ ನಿಯಂತ್ರಿಸಲಾರನು.

ಮಾಲ ಸಮುದಾಯದ ಜನನ, ವಿವಾಹಗಳಂತಹ ಆಚರಣೆಗಳಲ್ಲಿ ಕೆಲವೊಂದು ಸಂದರ್ಭಗಳಲ್ಲಿ ಪರೋಕ್ಷವಾಗಿ ಪ್ರಾದೇಶಿಕ ಪ್ರಭಾವಗಳು ಆಗುವುದುಂಟು. ಅದರಂತೆಯೇ ಸಾವಿನ ಸಂದರ್ಭದಲ್ಲಿಯೂ ಇಂತಹ ಪ್ರಭಾವಗಳು ಆಗಿರುವುದನ್ನು ಗುರುತಿಸಬಹುದಾಗಿದೆ.

ಸಾವು ಮನುಷ್ಯ ಸಂಬಂಧಗಳ ಗಾಢತೆಯನ್ನು ನೆನಪಿಸುವ, ಆ ಸಂಬಂಧಗಳನ್ನು ಸೇರಿಸುವ ಕ್ರಿಯೆಯಾಗಿರುವಂತೆಯೇ, ಸಂಬಂಧಗಳನ್ನು ಬೇರ್ಪಡಿಸುವ ಕ್ರಿಯಾವಿಧಿಯಾಗಿ ರೂಪುಗೊಂಡಿರುವುದನ್ನು ನಾವು ಕಾಣಬಹುದಾಗಿದೆ.

ಮಾಲ ಸಮುದಾಯದವರ ಅಂತ್ಯ ಸಂಸ್ಕಾರ ಬಹುತೇಕ ಶೈವ ಪರಂಪರೆಯನ್ನು ಅನುಸರಿಸುವ ಲಿಂಗಾಯತ ಸಮುದಾಯವನ್ನು ಹೋಲುತ್ತದೆ. ಇವರು ಶೈವ ಪರಂಪರೆಗೆ ಸೇರಿದವರು ಎಂಬುದನ್ನು ಇವರ ಅಂತ್ಯಸಂಸ್ಕಾರ ಮೂಲಕ ನೋಡಬಹುದಾಗಿದೆ.

ಕೊಪ್ಪಳ, ಗದಗ, ಧಾರವಾಡ, ರಾಯಚೂರು, ಮೈಸೂರು ಜಿಲ್ಲೆಗಳಲ್ಲಿ ಹಂಚಿಹೋಗಿರುವ ಮಾಲಸಮುದಾಯದವರ ಸಾವಿಗೆ ಸಮಬಂಧಿಸಿದ ಆಚರಣೆಗಳ ಮೂಲ ಒಂದೇ ತರನಾಗಿದೆ. ಆದರೆ ಶಿವಮೊಗ್ಗ ಮತ್ತು ಹಾವೇರಿ ಜಿಲ್ಲೆಯಲ್ಲಿ ನೆಲೆಸಿದ ಮಾಲ ಸಮುದಾಯದ ಅಂತ್ಯ ಸಂಸ್ಕಾರ ಸ್ವಲ್ಪ ಭಿನ್ನವಾಗಿದೆ. ಇಂತಹ ಭಿನ್ನತೆಗಳ ಮಧ್ಯೆಯೂ ಅವರ ಆಚರಣೆಗಳ ಆಂತರ್ಯವನ್ನು ಇನ್ನು ಕಾಯ್ದುಕೊಂಡು ಬಂದಿರುವುದೊಂದು ವಿಶೇಷ. ಬಹುಶಃ ಎಲ್ಲಾ ಒತ್ತಡಗಳ ಮಧ್ಯೆಯೂ ತಮ್ಮತನವನ್ನು ಕಾಯ್ದುಕೊಳ್ಳುವ ಹೋರಾಟವೇ ಇದಾಗಿರಬೇಕು.

ಮಾಲ ಸಮುದಾಯದವರಲ್ಲಿ ಮರಣ ಹೊಂದಿದ ವ್ಯಕ್ತಿಯನ್ನು ಪೂರ್ವಾಭಿಮುಖವಾಗಿ ಕೂಡಿಸುವರು. ವ್ಯಕ್ತಿ ಸತ್ತ ತಕ್ಷಣಕ್ಕೆ ಹೆಣದ ತಲೆಗೆ ಎಣ್ಣೆ ಹಾಕಿ ತಲೆ ಸ್ನಾನ ಮಾಡಿಸುವರು. ಗುಡಾರಗಳಿಂದ ಕೂಡಿದ ವಸತಿ ನೆಲೆಗಳಿರುವುದರಿಂದ ಗುಡಾರದ ಮುಂಭಾಗ ಹೆಣ ಕೂರಿಸಲು ಅನುಕೂಲವಾಗುವಂತೆ ಮೂರು ಅಡಿ ಎತ್ತರಕ್ಕೆ ಬರುವಂತೆ ಎರಡು ಗೂಟಗಳನ್ನು ನೆಡುವರು. ಆ ಗೂಟಗಳನ್ನು ಹೆಣದ ಬೆನ್ನಿಗೆ ಆಸರೆಯಾಗಿರಿಸಿ ಪೂರ್ವಾಭಿಮುಖವಾಗಿ ಹೆಣವನ್ನು ಕೂರಿಸುವರು.(ಭಾ:೩.೧೪) ಹೆಣದ ಗೋಣು ಕೆಳಗೆ ವಾಲಬಾರದೆಂದು ಕತ್ತರಿಯಾಕಾರದಲ್ಲಿ ಮಾಡಿದ ಗುಟ್ಟಿಗೆಯನ್ನು ಕುತ್ತಿಗೆಗೆ ಆಸರೆಯಾಗಿ ಇಡುವರು. ಇದನ್ನು ಗುಟಿಗೆ ಬಡಿಯುವುದು ಎನ್ನುತ್ತಾರೆ. ಸತ್ತ ವ್ಯಕ್ತಿಯ ಬಾಯಿಯೊಳಗೆ ರುದ್ರಾಕ್ಷಿಯ ಮಣಿಯನ್ನು ಇರಿಸುವರು. ತರುವಾಯ ಎಲೆ ಅಡಿಕೆಯನ್ನು ಕುಟ್ಟಿ ತುಟಿಗೆ ಇಡುವರು. ಧ್ಯಾನದಲ್ಲಿ ಕುಳಿತ ರೀತಿಯಲ್ಲಿ ಹೆಣವನ್ನು ಕೂರಿಸಿ ಎರಡೂ ಕೈಗಳನ್ನು ಜೋಡಿಸಿ ಅಂಗೈಯೊಳಗೆ ಎಲೆ ಅಡಿಕೆ ಇರಿಸುವರು. ಹೆಣದ ಮುಂಭಾಗ ಬಲಗಡೆ ಕೋಳಿಯಮೊಟ್ಟೆ ಹಾಗೂ ಕುಡುಗೋಲನ್ನು ಇರಿಸುವರು. ಮಾಲ ಸಮುದಾಯದವರಲ್ಲಿ ಮರಣ ಹೊಂದಿದವರಿಗೆ ಈ ರೀತಿಯಾಗಿ ಮಾಡುವ ಸಂಪ್ರದಾಯ ಇವತ್ತಿನವರೆಗೂ ಎಲ್ಲಾ ಮನೆತನದವರಲ್ಲಿ ಇರುತ್ತದೆ.

ತರುವಾಯ ಮನೆ ಹೊರಭಾಗದಲ್ಲಿ ಕುಳ್ಳಿನಲ್ಲಿ ಬೆಂಕಿ ಮಾಡುತ್ತಾರೆ. ಈ ಬೆಂಕಿಯನ್ನು ಹೆಣವನ್ನು ಸ್ಮಶಾನಕ್ಕೆ ಒಯ್ಯುವಾಗ ಅದರೊಂದಿಗೆ ಒಯ್ಯಲಾಗುತ್ತದೆ.

ಉರಿಕೊನೆಯಲ್ಲಿ (ಸೆಣಬಿನ ದಾರ) ನೆಲುವನ್ನು ಮಾಡುತ್ತಾರೆ. ಆ ನೆಲುವಿನಲ್ಲಿ ಮಣ್ಣಿನ ಚಿಕ್ಕ ಗಡಿಗೆಗೆ ಮೂರು ತೂತುಗಳನ್ನು ಹಾಕಿ ಇಟ್ಟು ಅದರೊಳಗೆ ಕುಳ್ಳಿನ ಬೆಂಕಿ ಹಾಕುತ್ತಾರೆ. ಇದನ್ನು ಮನೆಯ ಹಿರಿಯ ಮಗ ಹಿಡಿದುಕೊಳ್ಳುತ್ತಾನೆ. ಇಲ್ಲವೆ ಉತ್ತರ ಕ್ರಿಯೆಗಳನ್ನು ಮಾಡಲು ಯಾರು ಅರ್ಹರಾಗಿರುತ್ತಾರೋ ಆ ವ್ಯಕ್ತಿ ಈ ಬೆಂಕಿಯನ್ನು ಹಿಡಿದುಕೊಳ್ಳುತ್ತಾನೆ. ಈ ಬೆಂಕಿಯು ಎಡಗೈಯಲ್ಲಿ ಇರುತ್ತದೆ. ತುಂಬಿದ ಮಣ್ಣಿನ ಕೊಡವನ್ನು ಹೆಗಲ ಮೇಲೆ ಇಟ್ಟುಕೊಂಡು ಬಲಗೈಯಲ್ಲಿ ಕೊಡವನ್ನು ಹಿಡಿದುಕೊಂಡು ಹೆಣದ ಮುಂಭಾಗ ಸಾಗುವನು.

ಸಿದಿಗಿ/ಚಟ್ಟ

ಎರಡು ನಾಲ್ಕು ಅಡಿಯ ಗಳುವು ಅಥವಾ ಬಿದಿರನ್ನು ತೆಗೆದುಕೊಂಡು ಆ ಎರಡನ್ನು ಹೊಂದಿಸುವಂತೆ ಗೋಣಿ ಚೀಲ ಅಥವಾ ಕೌದಿಯನ್ನು ಹೊಲಿಯುವರು. ಹೆಣವನ್ನು ಆ ಗೋಣಿತಟ್ಟಿನ ಸಿದಗಿಯಲ್ಲಿಯೇ ಒಯ್ಯುವರು. ಹಿಂದೆ ಹೊತ್ತವರು ಇಬ್ಬರು ಹೆಗಲ ಮೇಲೆ ಬಿದಿರನ್ನು ಇರಿಸಿಕೊಂಡರೆ

ಮುಂಭಾಗದ ಇಬ್ಬರು ಕೈಯೊಳಗೆ ಬಿದಿರನ್ನು ಹಿಡಿದುಕೊಳ್ಳುವರು. ಹೆಣವನ್ನು ಕೂರಿಸಿದ ಆಕಾರದಲ್ಲಿಯೇ ಸ್ಮಶಾನಕ್ಕೆ ಒಯ್ಯುವರು. ಅಲೆಮಾರಿಗಳಾದ ಇವರು ಯಾವ ಊರಿನಲ್ಲಿ ವ್ಯಕ್ತಿ ಸಾಯುವನೊ ಆ ಊರಿನ ಮುಖಂಡರ ಅನುಮತಿ ಪಡೆದು ಅವರು ತೋರಿಸಿದ ಸ್ಥಳದಲ್ಲಿ ಹೆಣವನ್ನು ಮಣ್ಣು ಮಾಡುವರು.

ಕೋಳಿಮೊಟ್ಟೆ ಹಾಗೂ ಕುಡುಗೋಲನ್ನು ಹೆಣದೊಂದಿಗೆ ಸಿದಗಿಯಲ್ಲಿಯೇ ಇರಿಸಿರುತ್ತಾರೆ. ಸಮುದಾಯದೊಳಗಿನ ವ್ಯಕ್ತಿಗಳು ಮಾತ್ರ ಹೆಣವನ್ನು ಹೊರಲು ಅರ್ಹರೆಂಬ ನಂಬುಗೆ ಇವರದು. ಹೆಂಡತಿ ಬಸಿರೆ ಇದ್ದಲ್ಲಿ ಅಂತಹ ವ್ಯಕ್ತಿ ಹೆಣ ಹೊರುವಂತಿಲ್ಲ ಎನ್ನುವ ನಿಷೇಧ ಇವರಲ್ಲಿದೆ. ಜೊತೆಗೆ ಅಂತಹ ವ್ಯಕ್ತಿಯು ಸ್ಮಶಾನಕ್ಕೂ ಹೋಗಿ ಮಣ್ಣು ಕೊಡುವಂತಿಲ್ಲ. ಬಹುಶಃ ಸತ್ತ ವ್ಯಕ್ತಿ ಮರಳಿ ಗರ್ಭಿಣಿಯ ಹೊಟ್ಟೆಯನ್ನು ಸೇರಿಯಾನು ಎನ್ನುವ ಭಯದಿಂದಾಗಿ ಈ ರೀತಿಯ ನಿಷೇಧಗಳನ್ನು ಸಮುದಾಯವು ರೂಪಿಸಿಕೊಂಡಿರಬೇಕು. ಸ್ಮಶಾನಕ್ಕೆ ಹೆಣ ತೆರಳುವಾಗ ಹೆಣದ ಮುಂಭಾಗದಲ್ಲಿ ಹಿಂಡಿಗೆ ಬೆಂಕಿಯನ್ನು ಮತ್ತು ಕೊಡವನ್ನು ಹಿಡಿದ ವ್ಯಕ್ತಿ ಇರುತ್ತಾನೆ. ಆತನ ಹಿಂಭಾಗಕ್ಕೆ ಹೆಣ, ಹೆಣದ ಹಿಂಭಾಗಕ್ಕೆ ಉಳಿದ ಬಂಧು ಬಾಂಧವರು ಇರುತ್ತಾರೆ.

ಸ್ಮಶಾನ ತಲುಪುವ ಪೂರ್ವದಲ್ಲಿ ಶವವನ್ನು ಕೆಳಗೆ ಇಳಸುತ್ತಾರೆ ಸ್ವಲ್ಪ ಹಿಂಭಾಗಕ್ಕೆ ಹೆಣವನ್ನು ನಿಲ್ಲಿಸಿ ಮುಖ ನೋಡದವರು ಮುಖ ನೋಡಲು ತಿಳಿಸುತ್ತಾರೆ ಮತ್ತು ಶವದ ಹಿಂಬಾಗದಲ್ಲಿ ಮಣ್ಣಿನ ಕುಡಿಕೆಯಲ್ಲಿದ್ದ ಅನ್ನವನ್ನ ಮೂರು ಸಾರಿ ಇಳೆ ತೆಗೆದು ಇದಕ್ಕೆ ಇಳಗಡ ಎನ್ನುತ್ತಾರೆ ಮೂರನೆ ಸಾರಿ ಆ ಅನ್ನವನ್ನ ಅಲ್ಲಿಯೇ ಕೆಳಗೆ ಜೂರಾಗಿ ಒಕ್ಕಟ್ಟು ಮತ್ತೆ ಶವವನ್ನು ಹೂತ್ತುಕೊಂಡು ಹಿಂದಕ್ಕೆ ತಿರುಗಿ ನೂಡದೆ ಕುಣಿಯ ಹತ್ತಿರ ಸಾಗುತ್ತಾರೆ. ಹೆಣ ಸ್ಮಶಾನಕ್ಕೆ ತೆರಳಿದ ತರುವಾಯ ಕುಲಭಾಂದವರೇ ಹೆಣದ ಮುಖ ಪೂರ್ವಭಾಗಕ್ಕೆ ಬರುವಂತೆ ಕುಣಿಯನ್ನು ತೆಗೆಯುವರು. ಲಿಂಗಾಯತರಂತೆ ಹೆಣವನ್ನು ಕೂರಿಸಲು ಅನುಕೂಲವಾಗುವಂತೆ ಕುಣಿಯೊಳಗೆ ಒಂದು ಗುಣೇವನ್ನು ಮಾಡಿರುತ್ತಾರೆ. ಕುಣಿ ತೆಗೆದ ತರುವಾಯ ಹೆಣವನ್ನು ಕುಣಿಗೆ ಇಳಿಸಿ ಗುಣೇವಿನಲ್ಲಿ ಹೆಣ ಕೂರಿಸುವರು. ಮತ್ತು ಹೆಣದ ಪಕ್ಕದಲ್ಲಿ ಒಂದು ಉಳ್ಳಾಗಡ್ಡಿ ಒಂದು ಕೂಳಿತ್ತಿಯನ್ನು ಇಡುತ್ತಾರೆ ಹೆಣಕ್ಕೆ ಪೂಜೆಮಾಡಿದ ತರುವಾಯ ಬಿದಿರಿನ ತಟ್ಟಿನಿಂದ ಗುಣೇವು ಮುಚ್ಚಿ ಶವಸಂಸ್ಕಾರಕ್ಕೆ ಬಂದ ಬಂಧುಗಳು ಮಣ್ಣು ಕೊಡುವರು. ಹೆಣ ಮುಚ್ಚಿದ ಗುಟ್ಟೆಯ ಮೇಲ್ಭಾಗದಲ್ಲಿ ಮೂರು ಹಂತದಲ್ಲಿ ತಲೆಭಾಗ, ಮಧ್ಯಭಾಗ, ಕಾಲುಭಾಗಗಳಲ್ಲಿ ಮೂರು ದೊಡ್ಡ ಕಲ್ಲುಗಳನ್ನು ಹೇರಲಾಗುತ್ತದೆ. ಕೊನೆಗೆ ಕುಳಿ ಮುಚ್ಚಿ ಕಲ್ಲು ಹೇರಿದ ನಂತರ (ಹಿಂಡಿಗೆ) ಬೆಂಕಿ, ನೀರು ಹಿಡಿದಾತನು ಗುಟ್ಟೆಯ ತಲೆಭಾಗಕ್ಕೆ ಹೋಗಿ, ಗುಟ್ಟೆಗೆ ಬೆನ್ನಾಗಿ ನಿಲ್ಲುತ್ತಾನೆ (ಪಶ್ಚಿಮ ದಿಕ್ಕಿಗೆ ಮುಖಮಾಡಿ) ಯಾರಾದರು ಕುಲದ ಹಿರಿಯರು ಕುಡುಗೋಲಿನಿಂದ ಕೊಡಕ್ಕೆ ಒಂದು ತೂತನ್ನು ಹಾಕುತ್ತಾನೆ. ಕೊಡವನ್ನು ಹೊತ್ತಾತನು ಗುಟ್ಟೆಯ ಸುತ್ತ ಸುತ್ತುತ್ತಾನೆ. ಹೀಗೆ ಮೂರು ಬಾರಿ ತೂತುಗಳನ್ನು ಹಾಕಲಾಗುತ್ತದೆ. ಮೂರು ಸುತ್ತು ಸುತ್ತಿದ ನಂತರ ಕೊಡವನ್ನು ಹಿಮ್ಮುಖವಾಗಿ ಹೆಣದ ತಲೆಭಾಗದಲ್ಲಿ ಬಿಟ್ಟು ಗುಟ್ಟೆಯನ್ನು ಹಿಂತಿರುಗಿ ನೋಡದಂತೆ ಆ ವ್ಯಕ್ತಿ ಮನೆಯ ಕಡೆ ಹೋಗುತ್ತಾನೆ. ನಂತರ ಸೇರಿದ ಎಲ್ಲಾ ಬಳಗವೂ ಸಮೀಪದ ಹಳ್ಳಗಳಲ್ಲಿ ಸ್ನಾನ ಮಾಡಿ ಸತ್ತ ವ್ಯಕ್ತಿಯ ಮನೆಗೆ ತೆರಳಿ ಹೆಣವಿದ್ದ ಜಾಗದಲ್ಲಿ ಇರಿಸಿದ ಕರ್ಕಿ ಹಾಕಿರಿಸಿದ ನೀರು

ತುಂಬಿದ ತಂಬಿಗೆಯನ್ನು ನೋಡುವರು. ಎಲ್ಲರೂ ತುಂಬಿದ ತಂಬಿಗೆಯ ದರ್ಶನ ಮಾಡಿದ ತರುವಾಯ ಕೊನೆಗೆ ನಡುವ ವ್ಯಕ್ತಿಯು ತಂಬಿಗೆಯ ನೀರನ್ನು ಯಾರೂ ತುಳಿಯದ ಜಾಗದಲ್ಲಿ ಹಾಕುವನು. ಮಾಲ ಸಮುದಾಯದವರಲ್ಲಿ ಮರಣ ಹೊಂದಿದಾಗ ಮೇಲಿನ ಎಲ್ಲಾ ವಿಧಾನಗಳನ್ನು ಎಲ್ಲಾ ಮನೆತನದವರು ಕಡ್ಡಾಯವಾಗಿ ಇವತ್ತಿನವರೆಗೂ ಅನುಸರಿಸುತ್ತಾರೆ.

ಇಸಬಾಯಿ ತೊಳೆಸುವುದು: ಸತ್ತ ವ್ಯಕ್ತಿಯ ಮನೆಯ ಪ್ರತಿಯೊಬ್ಬ ವ್ಯಕ್ತಿಗೂ ಶವಸಂಸ್ಕಾರಕ್ಕೆ ಬಂದ ಕುಲಸ್ಥರು ಇಸಬಾಯಿ (ವಿಷಬಾಯಿ) ತೊಳೆಸುವರು. ಈಚಲ ಹೆಂಡವನ್ನು ಬೊಗಸೆಗೆ ಹಾಕುವರು. ಸತ್ತ ವ್ಯಕ್ತಿಯ ಮನೆಯವರು ಹೆಂಡವನ್ನು ಬಾಯಿಗೆ ಹಾಕಿ ಬಾಯಿ ಮುಕ್ಕಳಿಸಿ ಉಗುಳುವರು. ತರುವಾಯ ಸ್ವಲ್ಪ ಬೆಲ್ಲ, ಮಂಡಾಳನ್ನು ತಿನ್ನಲು ಕೊಡುವರು. ಹೆಂಡ ಕುಡಿಯುವವರಾಗಿದ್ದರೆ ಮಂಡಾಳು ತಿಂದ ತರುವಾಯ ಅವರಿಗೆ ಇಷ್ಟವಾದಷ್ಟು ಹೆಂಡವನ್ನು ಕುಡಿಸುವರು. ಈ ಪದ್ಧತಿಯು ಕರ್ನಾಟಕದ ಚಲವಾದಿ ಸಮುದಾಯದಲ್ಲಿಯೂ ಇದೆ. ಈ ಸಮುದಾಯದವರಲ್ಲಿ ಇಸಬಾಯಿ ತೊಳೆಸುವಾಗ ಮಾಡುವ ಸಂಪ್ರದಾಯುವನ್ನು ಎಲ್ಲಾ ಮನೆತನದವರು ಕಟ್ಟುನಿಟ್ಟಾಗಿ ಸಂಪ್ರದಾಯಬದ್ಧವಾಗಿ ಎಲ್ಲಾ ಮನೆತನದವರು ಅನುಸರಿಸುತ್ತಾರೆ. ಇಸಬಾಯಿ ತೊಳಿಸಲೆಂದು ಸ್ವಲ್ಪವಾದರು ಸರಾಯಿಯನ್ನು ಮಾಲ ಸಮುದಾಯದವರು ತರಲೇಬೆಕೆಂಬ ನಿಯಮವು ಇದೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು.

ಮೂರು ದಿನದ ಕಾರ್ಯ

ಕೂಳು ಹಾಕುವುದು

ಮೂರು ದಿನದ ಕಾರ್ಯಕ್ಕೆ ಮುಖ್ಯವಾಗಿ ಸತ್ತ ವ್ಯಕ್ತಿಗೆ ಇಷ್ಟವಾದ ಆಹಾರ ಪದಾರ್ಥಗಳನ್ನು ಅಡಿಗೆ ಮಾಡಿಕೊಂಡು ಸಾಯಂಕಾಲ ಸ್ಮಶಾನಕ್ಕೆ ಒಯ್ಯಲಾಗುವುದು. ತರುವಾಯ ಸ್ಮಶಾನದಲ್ಲಿ ಹೆಣದ ಗುಟ್ಟೆಯ ಮೇಲೆ ಗೂಡುಮಾಡಿ ದೀಪ ಹಚ್ಚುವರು. ಗುಟ್ಟೆಗೆ ಪೂಜೆ ಮಾಡಿದ ತರುವಾಯ ಸ್ಮಶಾನಕ್ಕೆ ಒಯ್ದು ಆಹಾರ ಪದಾರ್ಥ, ಹೆಂಡ ಇತ್ಯಾದಿ ದಿನಸುಗಳನ್ನು ಗುಟ್ಟೆಯ ಮುಂಭಾಗದಲ್ಲಿರಿಸಿ ತಲೆಯ ಹಿಂಭಾಗ ಸ್ವಲ್ಪ ಬೆಂಕಿಯ ಕಿಚ್ಚನ್ನು ಮಾಡಿ ನಂತರ ಅದನ್ನು ತಿರುಗಿ ನೋಡದಂತೆ ವಾಪಸ್ಸು ಬರುವರು.(ಛಾ:ಶಿ.೧೫) ಇಂತಹ ಪದ್ಧತಿಯನ್ನು ಈ ಸಮುದಾಯದ ಎಲ್ಲಾ ಮನೆತನದವರಲ್ಲಿ ಇವತ್ತೀಗೂ ಸಂಪ್ರದಾಯಬದ್ಧವಾಗಿ ಮಾಡುತ್ತಾರೆ. ಇಲ್ಲದಿದ್ದರೆ ಸತ್ತ ವ್ಯಕ್ತಿ ಭೂತ-ಪ್ರೇತವಾಗಿ ಕಾಡುತ್ತಾನೆ ಎಂಬ ನಂಬಿಕೆ ಈ ಸಮುದಾಯದವರಲ್ಲಿರುತ್ತದೆ.

ಒಂಭತ್ತು ದಿನದ ಕಾರ್ಯ

ವ್ಯಕ್ತಿ ಪ್ರಾಣಬಿಟ್ಟ ಜಾಗವನ್ನು ಆಕಳ ಸಗಣಿಯಿಂದ ಚೌಕಾಕಾರದಲ್ಲಿ ಸಾರಿಸಲಾಗುತ್ತದೆ. ವ್ಯಕ್ತಿ ಪ್ರಾಣಬಿಟ್ಟ ಜಾಗದ ಮಧ್ಯಭಾಗದಲ್ಲಿ ಒಂದು ನೀರು ತುಂಬಿದ ತಂಬಿಗೆ ಇಡಲಾಗುತ್ತದೆ. ಆ ನೀರಿಗೆ ಕುಂಕುಮ ಅರಿಶಿಣ ಹಾಕಿ ಪೂಜೆ ಮಾಡಲಾಗುತ್ತವೆ. ತಂಬಿಗೆಯ ಮುಂಭಾಗಕ್ಕೆ ಹಾಗೂ ಹಿಂಭಾಗಕ್ಕೆ ಬಿಳಿಯ ಬಟ್ಟೆಯನ್ನು ಹಾಸಿ ಮುಂಭಾಗಕ್ಕೊಂದು ಹಾಗೂ ಹಿಂಭಾಗಕ್ಕೊಂದು ಎರಡು ಮುತ್ತುಗದ

ಎಲೆಯಲ್ಲಿ ನೈವೇದ್ಯ ಇಡಲಾಗುತ್ತದೆ. ಎರಡು ಸಮೇವುಗಳನ್ನು ಹಚ್ಚಿ ತಂಬಿಗೆಯ ಮುಂಭಾಗದಲ್ಲಿ ಇಟ್ಟಿರುತ್ತಾರೆ. ಇದೆಲ್ಲವೂ ಸಂಜೆ ಮಾಡುವರು. ಈ ಕಾರ್ಯ ಮನೆಯಲ್ಲಿ ಮಾಡುತ್ತಿರುವಾಗಲೇ ಒಂದಿಬ್ಬರು ಹಿರಿಯರು ಯಾರೂ ಓಡಾಡದ ಊರ ಹೊರಭಾಗದ ಸ್ಥಳದಲ್ಲಿರುವ ಹೂನ್ನಂಬರಿಕೆ ಗಿಡದ ಸುತ್ತ ಸ್ವಚ್ಛ ಮಾಡಿ ಬರುವರು. ಮನೆಯೊಳಗಿನ ಪೂಜೆ ಆದ ತರುವಾಯ ಒಬ್ಬ ವ್ಯಕ್ತಿ ತಲೆ ಹಿಂಭಾಗದಲ್ಲಿರಿಸಿದ ನೈವೇಧ್ಯವನ್ನು ತೆಗೆದುಕೊಳ್ಳುವನು. ಮತ್ತೊಬ್ಬ ವ್ಯಕ್ತಿಯು ಕೈಯ್ಯಲ್ಲಿ ಕಿರಿದಾದ ಗಂಟೆಯನ್ನು ಹಿಡಿಯುತ್ತಾನೆ. ಮೂರನೇ ವ್ಯಕ್ತಿ ಸಮ್ಮಾಳವನ್ನು ಹೆಗಲಿಗೆ ಹಾಕಿಕೊಳ್ಳುವನು. ಮುಂದೆ ಆ ವ್ಯಕ್ತಿಯು ನಿಧಾನಕ್ಕೆ ಸಮ್ಮಾಳವನ್ನು ಕೈಯಿಂದ ಬಾರಿಸುತ್ತಾ ಹೋಗುವನು. ಅವನ ಹಿಂಭಾಗದಲ್ಲಿ ಗಂಟೆ ಹಿಡಿದ ವ್ಯಕ್ತಿಯು ನಿಧಾನಕ್ಕೆ ಗಂಟೆ ಬಾರಿಸುತ್ತಾ ಸಾಗುವನು. ಅವನ ಹಿಂಬದಿಯಲ್ಲಿ ನೈವೇಧ್ಯವನ್ನು ಹಿಡಿದ ವ್ಯಕ್ತಿ ಸಾಗುವನು. ಅವನ ಹಿಂಭಾಗದಲ್ಲಿ ದೈವಸ್ಥರು ಹೋಗುವರು. ಹೊನ್ನಂಬರಿಕೆ ಗಿಡದ ಬಳಿ ಹೋದ ತರುವಾಯ ಹೊನ್ನಂಬರಿಕೆ ಗಿಡದ ಮುಂಭಾಗಕ್ಕೆ ನೈವೇಧ್ಯ ಇರಿಸುವರು.(ಛಾ: ೩.೧೬) ಹೊನ್ನಂಬರಿಕೆ ಗಿಡಕ್ಕೆ ಪೂಜೆ ಮಾಡಿ ನೈವೇಧ್ಯ ಇರಿಸಿ ತಿರುಗಿ ಮನೆಗೆ ಬರುವರು. ಇವರು ಕಾಡಿಗೆ ಹೋಗಿಬಂದ ನಂತರ ದೈವದವರೆಲ್ಲಾ ಹೆಂಡ ಕುಡಿದು ಊಟ ಮಾಡುವರು. ಹೆಂಡ ಕುಡಿಯಲಾರದ ವ್ಯಕ್ತಿ ಇದ್ದರೆ ಅವನ ಬಾಬತ್ತಿಗೆ ಬರುವ ಹೆಂಡದ ಖರ್ಚಿನ ಹಣವನ್ನು ಅವನಿಗೆ ಸಲ್ಲಿಸುವರು. ರಾತ್ರಿ ಊಟ ಮಾಡಿ ಮಲಗಿದ ಸತ್ತ ವ್ಯಕ್ತಿಯ ಕುಟುಂಬದ ಹಿರಿಯರು, ದೈವದವರು ಬೆಳಿಗ್ಗೆ ನಸುಕಿನಲ್ಲಿ ಸರಿಸುಮಾರು ನಾಲ್ಕು ಗಂಟೆಯ ಸುಮಾರಿಕೆ ಪೂಜೆ ಮಾಡಿದ ಹೊನ್ನಂಬರಿಕೆ ಗಿಡದ ಬಳಿಗೆ ಹೋಗುವರು. ರಾತ್ರಿ ಇರಿಸಿದ ನೈವೇಧ್ಯವನ್ನು ಯಾವುದಾದರೂ ಪ್ರಾಣಿ ತಿಂದಿದೆಯೆ ಎಂದು ಪರೀಕ್ಷಿಸುವರು. ಅಕಸ್ಮಾತ್ ಪ್ರಾಣಿ ನೈವೇಧ್ಯವನ್ನು ಮುಟ್ಟಿಹೋಗಿದ್ದರೆ ಸತ್ತ ವ್ಯಕ್ತಿಯ ಆತ್ಮ ಬಂದು ನೈವೇಧ್ಯವನ್ನು ಸಂತೃಪ್ತಿಯಿಂದ ಸ್ವೀಕರಿಸಿದೆ ಎಂದು ತಿಳಿಯುವರು. ಯಾವುದೇ ಪ್ರಾಣಿ ನೈವೇಧ್ಯವನ್ನು ಮುಟ್ಟದೇ ಇದ್ದರೆ ಸತ್ತವನ ಆತ್ಮಕ್ಕೆ ತೃಪ್ತಿಯಾಗಿಲ್ಲ. ಇನ್ನೂ ಜೀವಿಸಬೇಕಾಗಿದ್ದ ವ್ಯಕ್ತಿ ಮಧ್ಯಂತರದಲ್ಲಿಯೇ ತೀರಿಕೊಂಡಿರುವನು ಎಂದು ಭಾವಿಸುವರು. ಹೋದ ವ್ಯಕ್ತಿಗಳೆಲ್ಲಾ ಆ ನೈವೇಧ್ಯವನ್ನು ಹೊನ್ನಂಬರಿಕೆ ಗಿಡದ ಸುತ್ತಲೂ ಕುಳಿತು ತಿಂದು ಬೆಳಕು ಹರಿಯುವುದರೊಳಗೆ ಮನೆ ಸೇರುವರು. ಇಷ್ಟು ಮಾಡಿದರೆ ಸತ್ತ ವ್ಯಕ್ತಿಯ ಕ್ರಿಯಾವಿಧಿಗಳೆಲ್ಲವೂ ಮುಗಿದಂತೆ ಎಂದು ಮಾಲ ಸಮುದಾಯದವರು ತಿಳಿಸುವರು. ಈ ಸಂಪ್ರದಾಯವನ್ನು ಮಾಲ ಸಮುದಾಯದ ಎಲ್ಲಾ ಮನೆತನದವರು ಕಡ್ಡಾಯವಾಗಿ ನಿಯಮಬದ್ಧವಾಗಿ ತಪ್ಪದೆ ನಡೆಸುತ್ತಾರೆ. ಇದನ್ನು ಆಚರಿಸದಿದ್ದರೆ ಮುಂದೆ ಅವರ ಮನೆತನದಲ್ಲಿ ನಡೆಯುವ ಕಾರ್ಯಕ್ರಮಗಳೆಲ್ಲವು ವಿಫಲವಾಗುತ್ತವೆ ಎಂಬ ನಂಬಿಕೆ ಇವರಲ್ಲಿ ಇರುತ್ತದೆ.

ಈ ಎಲ್ಲಾ ಆಚರಣೆಗಳು ಶಿವಮೊಗ್ಗ ಜಿಲ್ಲೆಯಲ್ಲಿಯ ಮಾಲ ಸಮುದಾಯದಲ್ಲಿದ್ದರೂ ಹೆಣವನ್ನು ಮಣ್ಣು ಮಾಡುವುದಿಲ್ಲ. ಸ್ಥಳೀಯರಂತೆ ಹೆಣವನ್ನು ಸುಡುವರು. ಹೆಣ ಸುಟ್ಟ ಬೂದಿಯನ್ನು ನೀರಿಗೆ ಚೆಲ್ಲುವುದಿಲ್ಲ.

- ವ್ಯಕ್ತಿಯನ್ನು ಸುಟ್ಟ ಮೂರನೇ ದಿನಕ್ಕೆ ಬೂದಿ ಗುಪ್ಪೆ ಮಾಡಲಾಗುತ್ತದೆ.
- ಹೆಣವನ್ನು ಕೂಡಿಸುತ್ತಾರೆ ಯಾದರೂ ಸುಡುವಾಗ ಮಲಗಿಸುತ್ತಾರೆ.

♦ ನೀರಿನ ಪಕ್ಕದ ಬಯಲಿನಲ್ಲಿ ಹೆಣ ಸುಡಲಾಗುತ್ತದೆ.

"ಸಾವು ಒಂದು ನೈಜ ಘಟನೆ. ಸತ್ತ ವ್ಯಕ್ತಿಯು ನೈಜ ಲೋಕದೊಂದಿಗಿನ ತನ್ನ ಎಲ್ಲಾ ಸಂಬಂಧಗಳನ್ನು ಮತ್ತೆಂದೂ ಸ್ಥಾಪಿಸಿಕೊಳ್ಳಲಾರದ ರೀತಿಯಲ್ಲಿ ಕಡಿದುಕೊಂಡಿರುತ್ತಾನೆ. ಇದರಿಂದಾಗಿ ಆತ ಬದುಕಿದ್ದಾಗ ಏರ್ಪಡಿಸಿಕೊಂಡಿದ್ದ ಸಂಬಂಧಗಳೆಲ್ಲ ಸಾವಿನಲ್ಲಿ ಅಸ್ತವ್ಯಸ್ತಗೊಳ್ಳುತ್ತವೆ. ಕುಟುಂಬದ ನಿಯಾಮಕತೆಗಳಲ್ಲಿ ವಿಚಿತ್ರವಾದ ಏರು ಪೇರುವುಂಟಾಗುತ್ತದೆ. ಇಂಥ ಬಿಕ್ಕಟ್ಟಿನ ಗಳಿಗೆಯಲ್ಲಿ ನೈಜ ಲೋಕ ಕಳೆದುಕೊಂಡಿದ್ದನ್ನು, ಸೈದ್ಧಾಂತಿಕವಾಗಿ ಪುನರ್ ನಿರ್ಮಿಸಿಕೊಂಡು, ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಸಂಸ್ಕೃತಿಯೊಂದಕ್ಕೆ ಸಾವಿನ ಸಂದರ್ಭದಲ್ಲಿ ಮಧ್ಯಂತರ ಜಗತ್ತು ಬೇಕಾಗುವುದೇ ಈ ಪುನರ್ ಹೊಂದಾಣಿಕೆಗಾಗಿ (ಪುರುಷೋತ್ತಮ ಬಿಳಿಮಲೆ, ೧೯೯೭, ೫೧) ತಳಸಮುದಾಯಗಳ ವ್ಯವಸ್ಥೆಯಲ್ಲಿ ಹುಟ್ಟಿನಷ್ಟೇ ಸಾವಿಗೂ ಮಹತ್ವದ ಸ್ಥಾನ ಸಿಕ್ಕಿರುವುದನ್ನು ನೋಡಬಹುದಾಗಿದೆ. ಪ್ರಾಯಶಃ ಎಲ್ಲಾ ಸಂಸ್ಕೃತಿಯಲ್ಲೂ ಇದನ್ನು ಕಾಣಬಹುದಾಗಿದೆ. ಈ ರೀತಿಯ ಆಚರಣೆ ಮಾಲ ಸಮುದಾಯದಲ್ಲಿಯೂ ಇದೆ. ಮಾಲ ಸಮುದಾಯದ ವ್ಯಕ್ತಿಯ ಅತೃಪ್ತ ಆತ್ಮ ತಮಗೆಲ್ಲಿ ಕೇಡು ಉಂಟುಮಾಡುತ್ತದೋ ಎಂಬ ಆತಂಕ ಸತ್ತವರ ಕುಟುಂಬವನ್ನು ಕಾಡುತ್ತದೇನೊ. ಹೀಗಾಗಿಯೇ ಸತ್ತವನ ಪ್ರೇತಾತ್ಮ ಕುಟುಂಬದ ಸದಸ್ಯರಲ್ಲಿ ಯಾರಾದರೂ ಒಬ್ಬರಿಗೆ ಬಂದು ತನ್ನ ಸಾವು ಹೇಗಾಯಿತು, ಅದಕ್ಕೆ ಕಾರಣಗಳೇನು, ತಾನು ಸಂತೃಪ್ತಿಯಿಂದ ಇರಲು ಕುಟುಂಬದವರು ಏನೇನು ಕಾರ್ಯಗಳನ್ನು ಮಾಡಬೇಕೆಂದು ನಿರ್ದೇಶಿಸುತ್ತದೆ. ಮೈಮೇಲೆ ಬಂದ ಪ್ರೇತಾತ್ಮದ ಹೇಳಿಕೆಯಂತೆ ವರ್ಷಕ್ಕೊಮ್ಮೆ ಕುರಿಬಲಿ ಕೊಟ್ಟೋ, ಕೋಳಿ ಬಲಿ ಕೊಟ್ಟೋ ಇಲ್ಲವೆ ಸಿಹಿ ಅಡುಗೆ ಮಾಡಿಯೋ ಪ್ರೇತಾತ್ಮವನ್ನು ಸಂತೃಪ್ತಿಗೊಳಿಸುವರು. ಈ ರೀತಿ ಮಾಡುವುದರಿಂದ ತಮಗೆ ಉಂಟಾಗಬಹುದಾದ ಕೇಡುಗಳು ನಿವಾರಣೆಯಾಗುತ್ತವೆ, ತಮ್ಮನ್ನು ತಮ್ಮ ಹಿರಿಯರು ಕಾಪಾಡುತ್ತಾರೆ ಎಂಬ ನಂಬಿಕೆ ಮಾಲ ಸಮುದಾಯದಲ್ಲಿದೆ.

೩.೩ ವಾರ್ಷಿಕಾವರ್ತನ ಆಚರಣೆಗಳು

ಮಾಲ ಸಮುದಾಯದವರು ತಾವು ನಲ್ಲಮಲೆ ಕಾಡಿನಿಂದ ಬಂದವರು, ತಮ್ಮ ಆರಾಧ್ಯ ದೈವ ಶ್ರೀಶೈಲ ಮಲ್ಲಿಕಾರ್ಜುನ, ಹೀಗಾಗಿಯೇ ತಮಗೆ ಪರ್ವತ ಮಲ್ಲಯ್ಯ ಎಂದು ಕರೆಯುವರು ಎಂದು ಹೇಳುವರಾದರೂ ಇವರ ಆರಾಧನಾ ದೈವಗಳು ಮಾತೃಮೂಲದ ಗಾಳೆಮ್ಮ, ಹುಲಿಗೆಮ್ಮ, ಸುಂಕಲಮ್ಮ ಇತ್ಯಾದಿ ಶಕ್ತಿ ದೈವಗಳೇ ಆಗಿವೆ

ಯಾವುದೇ ಒಂದು ಸಮುದಾಯಕ್ಕೆ ತನ್ನದೇ ಆದ ದೈವಗಳ ಆಚರಣೆ ಇರುತ್ತದೆ. ಅಂತಹ ದೈವಗಳನ್ನು ಅವರು ತಮ್ಮದೇ ಆದ ಕ್ರಮದಲ್ಲಿ ಪೂಜಿಸುವುದು, ಸ್ಥಾಪಿಸುವುದು ಅವುಗಳ ಕುರಿತು ನಂಬುಗೆಗಳನ್ನು ಇಟ್ಟುಕೊಳ್ಳುವುದು, ವಿಧಿ ನಿಷೇಧಗಳು ಇದ್ದೇ ಇರುತ್ತದೆ.

ಕರ್ನಾಟಕದ ಅಲೆಮಾರಿ ಮಾಲ ಸಮುದಾಯದವರು ಮೂಲತಃ ಸ್ತ್ರೀ ಪ್ರಧಾನ ಸಂಸ್ಕೃತಿಯಲ್ಲಿ ಬೆಳೆದ ದ್ರಾವಿಡ ಮೂಲದ ಸಮುದಾಯವಾಗಿದೆ. ಇವರಿಗೆ ಸ್ತ್ರೀ ದೈವಗಳೇ ಪ್ರಧಾನ. ಪುರುಷ ದೈವಗಳೂ ಸಹ ಇವರಲ್ಲಿ ಪ್ರಾಮುಖ್ಯತೆ ಗಳಿಸಿದಾಗ್ಯೂ ಅವುಗಳಿಗೆ ಮಾಲ ಸಮುದಾಯದಲ್ಲಿ

ಎರಡನೇ ಸ್ಥಾನದ ಕಲ್ಪನೆ ಇದೆ. ಮಾಲ ಸಮುದಾಯದ ಮೂಲ ಆರಾಧನ ದೈವ ಗಾಳಿದುರುಗಮ್ಮ. ತರುವಾಯ ಹುಲಿಗೆಮ್ಮ, ಯಲ್ಲಮ್ಮ, ಗುತ್ತೆಮ್ಮ, ಮುಂತಾದ ದೈವಗಳನ್ನು ಆರಾಧಿಸುವ ಪರಿಪಾಠವಿದೆ.

ಇವರ ಧಾರ್ಮಿಕ ಆಚರಣೆಗಳೆಲ್ಲಾ ಸಾಮಾನ್ಯವಾಗಿ ಮಾತೃದೇವತೆಯರ ಸುತ್ತ ನಡೆಯುತ್ತಿರುತ್ತವೆ.

ಮಾಲ ಸಮುದಾಯದ ಆರಾಧನಾ ಶಕ್ತಿ ದೈವವಾದ ಗಾಳಿದುರುಗಮ್ಮನನ್ನು ಹಲವು ವಿಧಗಗಳಲ್ಲಿ ಇವರು ಆರಾಧಿಸುತ್ತಾರೆ. ಇವರಿಗೆ ಮಾತೃದೈವದ ಹಬ್ಬವಾದ ದಸರೆ ಪ್ರಮುಖವಾದುದು.

೩.೩.೧ ಗಾಳಿದುರುಗಮ್ಮನ ಆರಾಧನೆ, ಆಚರಣೆ, ಪೂಜಾಕ್ರಮ ಮತ್ತು ಸ್ಥಾಪನೆ

ಗಾಳಿದುರುಗಮ್ಮ ತಮ್ಮ ಸಮುದಾಯದ ಪ್ರಧಾನವಾದ ಮಾತೃದೇವತೆ ಎಂದು ಭಾವಿಸುವ ಮಾಲ ಸಮುದಾಯದವರು, ಆಕೆ ತಮ್ಮನ್ನು ನಿರಂತರವಾಗಿ ಸಲಹುವ ದೈವವೆಂದು ಭಾವಿಸಿದ್ದಾರೆ. ಗಾಳಿದುರುಗಮ್ಮ ತಮ್ಮೊಂದಿಗೆ ನಿರಂತರವಾಗಿ ಗಾಳಿಯ ರೂಪದಲ್ಲಿ ಅಲೆದಾಡುವಳು ಎಂಬ ನಂಬಿಕೆ ಇವರದು. ಇವತ್ತಿನವರೆಗೂ ದೇವರಿನ ಮೇಲಿನ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ.

ಕರ್ನಾಟಕದ ಅಲೆಮಾರಿ ಮಾಲ ಸಮುದಾಯದ ಸಾಂಸ್ಕೃತಿಕ ಕೇಂದ್ರ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನ ಚಿಲಕಮುಖಿ ಗ್ರಾಮ. ತಾವು ಆಂಧ್ರ ಬಿಟ್ಟುಬಂದು ಮೊದಲಿಗೆ ನೆಲೆಸಿದ ಸ್ಥಳ ಚಿಲಕಮುಖಿ ಎಂದು ಮಾಲ ಸಮುದಾಯದವರು ಹೇಳುತ್ತಾರೆ. ದಸರಾ ಅಮವಾಸ್ಯೆಯ ದಿನ ಕರ್ನಾಟಕದಲ್ಲಿರುವ ಅಲೆಮಾರಿ ಮಾಲ ಸಮುದಾಯದ ಎಲ್ಲಾ ಕುಟುಂಬಗಳೂ ಚಿಲಕಮುಖಿಗೆ ಬಂದು ಸೇರುವರು. ಅಕಸ್ಮಾತ್ತಾಗಿ ಯಾವುದಾದರೂ ಒಂದು ಕುಟುಂಬ ಬಾರದಿದ್ದಲ್ಲಿ ಆ ಕುಟುಂಬಕ್ಕೆ ದೈವದವರು ಹಿಂದೆ ಎರಡುವರೆ ರೂಪಾಯಿ ದಂಡ ಹಾಕುತ್ತಿದ್ದಿತು. ಆದರೆ ಈಗ ಆ ದಂಡದ ಪ್ರಮಾಣ ಒಂದು ನೂರು ರೂಪಾಯಿಗೆ ಹೆಚ್ಚಳವಾಗಿದೆ. ಆದರೆ ಇತ್ತೀಚೆಗೆ ದುರ್ಗಾದೇವಿಯ ಜಾತ್ರೆಗೆ ಎಲ್ಲಾ ಸದಸ್ಯರು ಬರಲೇಬೇಕೆಂಬ ನಿಯಮ ವಿನಾಕಾರಣದಿಂದ ತಪ್ಪಿ ಹೋಗಿದೆ ಎಂಬ ವಿಚಾರ ಕ್ಷೇತ್ರಕಾರ್ಯದ ಮುಖಾಂತರ ತಿಳಿದು ಬಂದಿತು.

೩.೩.೨ ಕಂಬಿ ಪೂಜೆ

ವಿಜಯದಶಮಿಯ ಹಿಂದಿನ ದಿನ ಗುಡಾರದ ಮುಂದೆ ಚಿಕ್ಕ ಗುಡಾರ ರಚಿಸಿ ಅದರೊಳಗೆ ಸೆಗಣಿಯಿಂದ ಸಾರಿಸುವರು. ತರುವಾಯ ತಮ್ಮ ಕಹಳೆ, ಸಮ್ಮಾಳ, ಈಟಿ, ಭರ್ಚಿ, ಬೇಟೆಯಾಡುವ ಪರಿಕರಗಳು ಹಾಗೂ ತಾವು ಭಿಕ್ಷೆಗೆ ಒಯ್ಯುವ ಕಂಬಿ ಇರಿಸಿ ಪೂಜಿಸುವರು.(ಛಾ:೩.೧೭) ಇವತ್ತಿಗೂ ಈ ಸಂಪ್ರದಾಯ ಮಾಲ ಸಮುದಾಯದವರಲ್ಲಿ ಕಡ್ಡಾಯವಾಗಿ ಇರುತ್ತದೆ.

೩.೩.೩ ಗಾಳಿಮಾರಮ್ಮನ ಹಬ್ಬ

ವಿಜಯದಶಮಿಯ ಮುಂದೆ ಇರುವಾಗ ದೇವಿಯ ವಾರವಾದ ಮಂಗಳವಾರ ಅಥವಾ ಶುಕ್ರವಾರದ ದಿನ ಬೆಳಿಗ್ಗೆ ಮಾಲ ಸಮುದಾಯದವರು ಊರಹೊರಭಾಗಕ್ಕೆ ತೆರಳಿ ಬೇವಿನ ಮರದ ಕೆಳಗೆ ಕಲ್ಲಿರಿಸಿ ಗಾಳಿದುರ್ಗಮ್ಮನನ್ನು ಪ್ರತಿಷ್ಠಾಪಿಸುವರು.(ಛಾ:೩.೧೮) ತರುವಾಯ ವಿಜಯದಶಮಿ ದಿನ ದುರ್ಗಾಪರಮೇಶ್ವರಿಯ ಜಾತ್ರೆಯನ್ನು ಮಾಡುತ್ತಾರೆ ಅಂದು ಮನೆಯಲ್ಲಿ ಮಾಡಿದ ಹೋಳಿಗೆ,

ಹುಗ್ಗಿ ಮುಂತಾದ ಸಿಹಿ ಪದಾರ್ಥದ ನೈವೇಧ್ಯವನ್ನು ಗಾಳಿ ದುರ್ಗಮ್ಮನಿಗೆ ಸಲ್ಲಿಸುವರು. ಅಂದು ಕಟ್ಟೆಮನೆ ಯಜಮಾನ ಇಲ್ಲವೇ ಯಾರಾದರೂ ಹಿರಿಯ ಮಹಿಳೆಗೆ ದೈವಾವೇಶವಾಗಿ ಮಾಲ ಸಮುದಾಯದ ಮುಂದಿನ ನಡೆಗಳ ಕುರಿತು ನಿರ್ದೇಶನ ಮಾಡುವರು. ಆ ನಿರ್ದೇಶನದ ಪ್ರಕಾರವೇ ಮಾಲ ಸಮುದಾಯದವರು ನಡೆದುಕೊಳ್ಳುವರು. ದೇವರಿಗೆ ಹರಕೆ ಹೊತ್ತುಕೊಂಡವರು ದೇವರಿಗೆ ಪ್ರದಕ್ಷಿಣೆ ಹಾಕುವರು.(ಛಾ:೩.೧೯) ಈ ಆಚರಣೆ ಬಹುತೇಕ ಬೆಳಿಗ್ಗೆ ೧೦.೦೦ರಿಂದ ೧೧.೦೦ಗಂಟೆಯೊಳಗೆ ಮುಗಿದುಹೋಗುತ್ತದೆ. ಅಂದು ಇಡೀ ದಿನ ಹಗಲೆಲ್ಲ ಸಿಹಿ ಊಟ ಮಾಡುವರು. ಈ ಹಬ್ಬವನ್ನು ಮಾಲ ಸಮುದಾಯದವರು ಇಂದಿಗೂ ಸಂಪ್ರದಾಯಬದ್ಧವಾಗಿ ಆಚರಿಸುತ್ತಲೆ ಬರುತ್ತಿದ್ದಾರೆ.

೩.೩.೪ ಕೋಳಿ ಹಬ್ಬ

ಗಾಳಿ ಮಾರಮ್ಮನ ಹಬ್ಬ ಮಾಡಿದ ತರುವಾಯ ಅಂದೇ ಸೂರ್ಯ ಮುಳುಗಿ ಸಂಜೆಯಾಗುತ್ತಲೇ ಮಾಲ ಸಮುದಾಯದ ಎಲ್ಲಾ ಕುಟುಂಬಗಳು ಕೋಳಿ ಹಬ್ಬವನ್ನು ಆಚರಿಸುವರು. ಸಂಜೆಯಾಗುತ್ತಲೇ ಪ್ರತಿ ಕುಟುಂಬವೂ ತಮ್ಮ ಮನೆಯ ಮುಂಭಾಗದಲ್ಲಿ ಕೋಳಿಯನ್ನು ಬಲಿಕೊಡುವರು.(ಛಾ:೩.೨೦) ಅದನ್ನು ಮನೆಯ ಮುಂಭಾಗ ಅಡುಗೆ ಮಾಡಿ ದೇವರಿಗೆ ನೈವೇಧ್ಯವಿರಿಸಿ ಕುಟುಂಬದವರೆಲ್ಲಾ ಸೇರಿ ಊಟ ಮಾಡುವರು.(ಛಾ:೩.೨೨)! ಈ ಸಂಪ್ರದಾಯವನ್ನು ಮಾಲ ಸಮುದಾಯದ ಎಲ್ಲಾ ಮನೆತನದವರು ಕಡ್ಡಾಯವಾಗಿ ಆಚರಿಸುತ್ತಾರೆ. ಒಂದು ವೇಳೆ ಆಚರಿಸದಿದ್ದರೆ ಹಲವಾರು ರೀತಿಯಾದಂತಹ ಸಮಸ್ಯಗಳು ಇವರಿಗೆ ದುಡಿಯಲು ಹೊದಾಗ ಕಾಡುತ್ತವೆ ಎಂದು ಭಾವಿಸಿಕೊಳ್ಳುತ್ತಾರೆ. ಆದ್ದರಿಂದ ದೇವರನ್ನು ಶಾಂತಿ ಮಾಡಲೇಂದು ಕೊಳಿ ಹಬ್ಬವನ್ನು ಮಾಲ ಸಮುದಾಯದವರು ಮಾಡುತ್ತಾರೆ.

೩.೩.೫ ಹಿರೇರ ಹಬ್ಬ/ದೈವದ ಹಬ್ಬ

ವಿಜಯದಶಮಿ ಇರುವದಕ್ಕಿಂತ ಪೊರ್ವದಲ್ಲಿ ದೆವಿಯ ವಾರವಾದ ಮಂಗಳವಾರ ಅಥವಾ ಶುಕ್ರವಾರ ಯಾವ ವಾರ ಮೋದಲು ಬರುತ್ತದೆಯೋ ಆ ವಾರದಂದು ಚಿಲಕಮುಖಿ ಗ್ರಾಮದ ಊರ ಹೊರಗೆ ಇರುವ ಹುಲಿಗೆಮ್ಮ ಗಾಳೆಮ್ಮದೇವಿಗೆ ಉಡಿ ತುಂಬುವ ಕಾರ್ಯಕ್ರಮ ಮಾಡುತ್ತಾರೆ. ಅದು ಆದ ನಂತರ ಐದಾರು ದಿನಕ್ಕೆ ಹಿರಿಯರ ಹಬ್ಬ ಮಾಡುವರು. ಇದನ್ನು ದೈವದ ಹಬ್ಬ ಎಂದೂ ಕರೆಯುವರು. ಮಾಲ ಸಮುದಾಯದ ಎಲ್ಲಾ ದೈವದವರು ಸೇರಿ ಮಾಡುವುದರಿಂದ ದೈವದ ಹಬ್ಬ ಎನ್ನುವರು. ತಮ್ಮ ಗುಡಾರಗಳ ಮುಂಭಾಗದಲ್ಲಿ ನಾಲ್ಕು ಗಳಗಳನ್ನೂ ನೆಟ್ಟು ಅದರ ಮೇಲೆ ಬಿಳಿಯ ಬಟ್ಟೆ ಹಾಕಿ ಗುಡಾರ ರಚಿಸುವರು. ಅಂದು ಬೆಳಿಗ್ಗೆ ದೈವದವರೆಲ್ಲಾ ಸೇರಿ ಹಣ ಒಟ್ಟುಗೂಡಿಸಿ ಎರಡು ಓತ ಇಲ್ಲವೆ ಕುರಿಯನ್ನು ತರುವರು. ಎರಡೂ ಓತಗಳನ್ನು ಗುಡಾರದ ಕೆಳಭಾಗದಲ್ಲಿ ನಿಲ್ಲಿಸಿ ಅವುಗಳ ಮೈ, ತಲೆಗೆ ನೀರನ್ನು ಹಾಕಿ ತರುವಾಯ ಅವುಗಳ ಬಾಯಿಗೆ ನೀರನ್ನು ಹಾಕುವರು. ಕುರಿಗಳು ಒಂದೇ ಬಾರಿಗೆ ಮೈಜಾಡಿಸಿದರೆ ಹಿರಿಯರು ಸಂತೃಪ್ತಿಗೊಂಡರೆಂದು ತಿಳಿಯುವರು. ನೀರು ಹಾಕಿದಾಗ ಮೈ ಜಾಡಿಸದಿದ್ದರೆ ಹಿರಿಯರಿಗೆ ಸಂತೃಪ್ತಿಯಾಗಿಲ್ಲ ಎಂದು ತಿಳಿಯುವರು. ಅಂತಹ ಸಂದರ್ಭದಲ್ಲಿ ಸಮುದಾಯದೊಳಗೆ ಯಾರಾದರೊಬ್ಬರಿಗೆ ದೈವಾವೇಶವಾಗಿ

ದೈವದೊಳಗಿನ ಯಾವ ಕುಟುಂಬ, ಯಾವ ವ್ಯಕ್ತಿ ತಪ್ಪು ಮಾಡಿರುವರು ಎಂಬುದನ್ನು ಹೇಳುವರು. ಅವರು ತಪ್ಪನ್ನು ಒಪ್ಪಿಕೊಂಡು ದೈವಕ್ಕೆ ತಪ್ಪುದಂಡ ಒಪ್ಪಿಸಿದ ತರುವಾಯ ಎರಡೂ ಕುರಿಗಳನ್ನು ಬಲಿಕೊಟ್ಟು*(ಛಾ:೩.೨೨)* ಸಾಮೂಹಿಕವಾಗಿ ಅಡುಗೆ ಮಾಡುವರು. ಅಡುಗೆ ಮಾಡಿದ ತರುವಾಯ ಬಲಿಕೊಟ್ಟ ಗುಡಾರದೊಳಗೆ ಹಿರಿಯರಿಗೆ ನೈವೇಧ್ಯವಿರಿಸಿ ಸಾವಮೂಹಿಕವಾಗಿ ಊಟ ಮಾಡುವರು.*(ಛಾ೩.೨೩)* ಈ ಪದ್ದತಿ ಮಾಲ ಸಮುದಾಯದವರಲ್ಲಿ ಇವತ್ತೀನವರೆಗೂ ಇರುತ್ತದೆ. ಆದರೆ ಇತ್ತೀಚೆಗೆ ಸಾಮೂಹಿಕ ಅಡುಗೆಗೆ ಕೆಲವರು ಒಪ್ಪದೇ ಇರುವುದರಿಂದ ಎರಡೂ ಕುರಿಗಳ ಮಾಂಸವನ್ನು ಎಷ್ಟು ಕುಟುಂಬಗಳಿವೆಯೋ ಅಷ್ಟು ಪಾಲನ್ನು ಹಾಕಿ ಪ್ರತಿ ಕುಟುಂಬಕ್ಕೂ ಹಂಚಿಬಿಡುವರು. ಆಯಾ ಕುಟುಂಬದವರು ಪ್ರತ್ಯೇಕ ಅಡುಗೆ ಮಾಡಿ ದೈವಕ್ಕೆ ನೈವೇಧ್ಯ ಮಾಡಿ ತಮ್ಮ ತಮ್ಮ ಮನೆಯೊಳಗೇ ಊಟಮಾಡುವರು. ಈ ರೀತಿಯಾಗಿ ಮಾಲ ಸಮುದಾಯದ ಎಲ್ಲಾ ಸದಸ್ಯರು ಕೂಡಿಕೊಂಡು ದಸರಾದಲ್ಲಿ ದುರ್ಗಾದೇವಿಯ ಹಬ್ಬವನ್ನು ಕಡ್ಡಾಯವಾಗಿ ಇವತ್ತಿನವರೆಗೂ ಮಾಡುತ್ತಲೇ ಬರುತ್ತಿದ್ದಾರೆ.

ಈ ಹಬ್ಬಗಳ ಹೊರತಾಗಿ ಬೇರೆ ಹಬ್ಬಗಳ ಆಚರಣೆ ಮಾಡುವುದಿಲ್ಲ. ಆದರೆ ಹುಲಿಗೆಮ್ಮನ ಹಬ್ಬ ಇತ್ಯಾದಿ ಸಂದರ್ಭದಲ್ಲಿ ಬೇಡಿಕೊಂಡವರು ದೇವರಿಗೆ ಬಲಿಕೊಟ್ಟು ದೇವರು ಮಾಡುವುದುಂಟು.

ಶಿವರಾತ್ರಿ ಸಂದರ್ಭದಲ್ಲಿ ಕೆಲವರು ಶ್ರೀಶೈಲ ಮಲ್ಲಿಕಾರ್ಜುನನಿಗೆ ಹರಕೆ ತೀರಿಸುವರು. ಶ್ರೀಶೈಲ ಮಲ್ಲಿಕಾರ್ಜುನನ ಹೆಸರು ಹೇಳಿ ಭಿಕ್ಷೆ ಬೇಡುತ್ತೇವೆ, ಕನಿಷ್ಠ ಅಷ್ಟಾದರೂ ಆತನಿಗೆ ನಿಷ್ಠೆ ತೋರಿಸೋಣ ಎಂಬುದು ಅವರ ನಂಬಿಕೆ. ಹೀಗಾಗಿ ಬೇಡಿಕೊಂಡವರು ಶಿವರಾತ್ರಿ ಹತ್ತು ಹದಿನೈದು ದಿನ ಮುಂದಿರುವಾಗಲೇ ಕಾಲ್ನಡಿಗೆಯಲ್ಲಿ ಶ್ರೀಶೈಲಕ್ಕೆ ಹೋಗಿ ಶಿವರಾತ್ರಿಯಂದು ಮಲ್ಲಯ್ಯನ ದರ್ಶನ ಪಡೆದು ಮರಳಿ ಊರಿಗೆ ಬರುವರು. ಮಾಲ ಸಮುದಾಯದವರು ಶಿವರಾತ್ರಿ ಹಬ್ಬಕ್ಕೆಂದು ಶ್ರೀಶೈಲ ಮಲ್ಲಯ್ಯನಿಗೆ ಪಾದಯಾತ್ರೆಯನ್ನು ಇವತ್ತಿನವರೆಗೂ ಮಾಡುತ್ತಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಮಾಲ ಸಮುದಾಯವು ಬಲಗೈ ಘಣ ಸಂಸ್ಕೃತಿಗೆ ಸೇರಿದ ಕರ್ನಾಟಕ ಹೊಲೆಯ ಅಥವಾ ಚಲವಾದಿ ಸಮುದಾಯಕ್ಕೆ ತೀರ ಹತ್ತಿರದಲ್ಲಿರುವ ಸಮುದಾಯವಾಗಿದೆ. ಕರ್ನಾಟಕದ ಚಲುವಾದಿ ಸಮುದಾಯದಲ್ಲಿ ಹಲವು ಬೆಡಗುಗಳಿವೆಯಾದರೂ ವಿವಿಧ ಪಂಗಡಗಳಿಲ್ಲ. ಆದರೆ ಮಾಲ ಸಮುದಾಯದೊಳಗೆ ವಿವಿಧ ಒಳಪಂಗಡಗಳು ಕಂಡುಬರುವವು.

ಮಾಲ ಸಮುದಾಯದ ಆಚರಣೆ ಬಹುತೇಕ ಕರ್ನಾಟಕದ ಚಲವಾದಿ ಸಮುದಾಯಕ್ಕೆ ಹೋಲಿಕೆಯಾಗುವುದು ಹಾಗೂ ಎಷ್ಟೋ ಬೆಡಗುಗಳು ಕರ್ನಾಟಕದ ಚಲವಾದಿ ಸಮುದಾಯಕ್ಕೆ ಹೊಂದಿಕೆಯಾಗುವವು. ಆಂಧ್ರ ಪ್ರದೇಶದ ಮಾಲ ಹಾಗೂ ಕರ್ನಾಟಕದ ಚಲವಾದಿ ಸಮುದಾಯಗಳು ಹೆಣ್ಣನ್ನು ದೇವರಿಗೆ ಬಿಡುವ ಪದ್ಧತಿ ರೂಢಿಯಲ್ಲಿದ್ದಿತೆಂಬುದು ತಿಳಿದುಬರುವದಾದರೂ ಕರ್ನಾಟಕದೊಳಗೆ ನೆಲೆಸಿರುವ ಅಲೆಮಾರಿ ಮಾಲ ಸಮುದಾಯದವರು ಹೆಣ್ಣನ್ನು ದೇವರಿಗೆ ಬಿಡುವುದನ್ನು ನಿರಾಕರಿಸಿದೆ. ಮಾಲ ಸಮುದಾಯದ ಹಿರಿಯ ವಕ್ತೃಗಳನ್ನು ಕೇಳಿದಾಗ ತಮ್ಮಲ್ಲಿಯೂ ಹೆಣ್ಣುಗಳನ್ನು ದೇವರಿಗೆ ಬಿಡುವ ಪದ್ಧತಿ ಹಿಂದೆ ಇದ್ದಿತೆಂದೂ ಇತ್ತೀಚೆಗೆ ಅದನ್ನು ಕೈಬಿಟ್ಟಿರುವುದನ್ನು ತಿಳಿಸುವರು. ಮಾಲ ಸಮುದಾಯದವರಲ್ಲಿ ದೇವರಿಗೆ ಹೆಣ್ಣು ಬಿಡುವುದನ್ನು ಇಂದು ಎಲ್ಲಿಯೂ ಕಂಡುಬಂದಿಲ್ಲ.

೩.೪ ವಿಧಿ ನಿಷೇಧಗಳು

ಮಾಲ ಸಮುದಾಯದಲ್ಲಿ ಗೌಡ, ಶಾನುಭೋಗ, ವಾಲಿಕಾರ ಮೂವರು ಪ್ರತಿಯೊಂದು ಕಟ್ಟೆಮನೆಯಲ್ಲಿಯೂ ಇರುವರು. ಈ ಮೂರು ಹೆಸರಿನವರೆ ಮಾಲ ಸಮುದಾಯದ ಪ್ರಮುಖ ಹಿರಿಯರಾಗಿರುತ್ತಾರೆ.

ಹೆರಿಗೆಯಾದಾಗ, ಹುಡುಗಿ ಮೈನೆರೆದಾಗ ಆ ಮನೆಯನ್ನು ಮೈಲಿಗೆ ಮನೆಯೆಂದು ಪರಿಗಣಿಸಲಾಗುವುದು. ಹೆರಿಗೆಯಾದಾಗ ಮೂರು ದಿನ ಮೈಲಿಗೆಯೆಂದು ಪರಿಗಣಿಸಲಾಗುತ್ತದೆ. ಮೂರು ದಿನದಲ್ಲಿ ತೊಟ್ಟಿಲು ಕಾರ್ಯ ಮಾಡಿದ ತರುವಾಯ ಬಾಣಂತಿ ಹಾಗೂ ಮಗುವನ್ನು ಮಾಲ ಮನೆಯ ಒಳಗೆ ಕರೆದುಕೊಳ್ಳುವರು. ಅಲ್ಲಿಯವರೆಗೂ ಅವರು ಪ್ರತ್ಯೇಕ ಗುಡಾರದಲ್ಲಿ ನೆಲೆಸಬೇಕಾಗುವುದು. ಅದೇ ರೀತಿ ಹುಡುಗಿ ಮೇನೆರೆದಾಗಲೂ ಮೈನೆರೆದ ಹುಡುಗಿಯನ್ನು ಪ್ರತ್ಯೇಕವಾದ ಗುಡಾರದಲ್ಲಿ ಐದು ದಿನ ಕೂರಿಸುವರು. ಆ ಐದು ದಿನಗಳೂ ಮೈಲಿಗೆಯ ದಿನಗಳೆಂದೇ ಪರಿಗಣಿಸಲಾಗುವುದು. ಐದು ದಿನ ಪ್ರತ್ಯೇಕ ಗುಡಾರದಲ್ಲಿ ಉಳಿಯುವ ಹುಡುಗಿಯು ತನ್ನ ಉಸ್ತುವಾರಿ ನೋಡಿಕೊಳ್ಳುವ ಹಿರಿಯ ಹೆಂಗಸಿನ ಹೊರತಾಗಿ ಬೇರೆ ಯಾರಿಗೂ ಮುಖವನ್ನು ತೋರಿಸುವಂತಿಲ್ಲ ಎಂಬ ನಿಷೇಧವು ಈ ಸಮುದಾಯದವರಲ್ಲಿ ಹಿಂದಿನ ಕಾಲದಿಂದ ಹಿಡಿದು ಇವತ್ತಿನವರೆಗೂ ಇವರಲ್ಲಿದೆ. ಆದರೆ ಈ ಪದ್ಧತಿ ಆಧುನಿಕರಣಕ್ಕೊಳಪಟ್ಟಿರುವುದಿಲ್ಲ.

ಮದುವೆಯಾಗುವ ಪುರುಷನು ಮೊದಲಿಗೆ ಒಂದು ರುದ್ರಾಕ್ಷಿಯನ್ನು ಕೊರಳೊಳಗೆ ಹಾಕಿಕೊಳ್ಳಬೇಕೆಂಬ ನಿಯಮವಿದೆ. ಹಾಗೆಯೇ ಸತ್ತಾಗಲೂ ವ್ಯಕ್ತಿಯ ಬಾಯಿಯೊಳಗೆ ಒಂದು ರುದ್ರಾಕ್ಷಿಯನ್ನು ಇಡುವರು. ರುದ್ರಾಕ್ಷಿಯನ್ನು ಬಾಯೊಳಗೆ ಇಡದಿದ್ದರೆ ಸತ್ತ ವ್ಯಕ್ತಿಗೆ ಮೋಕ್ಷವಾಗದು ಎಂಬ ನಂಬಿಕೆ ಇವರಲ್ಲಿದೆ. ಅಕಸ್ಮಾತ್ ವ್ಯಕ್ತಿ ಸತ್ತಾಗ ರುದ್ರಾಕ್ಷಿ ದೊರೆಯದಿದ್ದರೆ ಒಂದು ಸ್ಪಟಿಕದ ಮಣಿಯನ್ನಾದರೂ ಬಾಯಿಯ ಒಳಗೆ ಕಡ್ಡಾಯವಾಗಿ ಇಡಬೇಕೆಂಬ ನಿಯಮ ಮಾಲ ಸಮುದಾಯದೊಳಗಿದೆ.

ಹಲವಾರು ಕಾರ್ಯಕ್ರಮಗಳನ್ನು ಮಾಡುವಾಗ ಇರಬೇಕಾದ ಇನ್ನಿತರ ವಿಧಿ ನಿಷೇಧಗಳು

೧) ಮಾಲ ಸಮುದಾಯದವರು ಒಳ್ಳೆಯ ಕೆಲಸ ಕಾರ್ಯಗಳಿಗೆ ಹೋಗುವಾಗ ಅಂದರೆ ಕನ್ಯೆಯನ್ನು ನೋಡಲು ಅಥವಾ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವ ಸಮಯದಲ್ಲಿ ಅಥವಾ ಹುಡುಗಿಗೆ ವರ ನೋಡಲು ಮತ್ತು ಇನ್ನಿತರ ಯಾವುದೇ ಒಳ್ಳೆಯ ಕೆಲಸಗಳಿಗೆಂದು ಹೋಗುವಾಗ ಕುಂಬಾರರು ಬರಿದಾದ ಮಣ್ಣಿನ ಗಡಿಗೆಯನ್ನು ಹೊತ್ತುಕೊಂಡು ಎದುರಿಗೆ ಬಂದರೆ ಅದು ಕೆಟ್ಟ ಸೂಚನೆ. ಮುಂದೆ ಕೆಡಕು ಉಂಟಾಗುತ್ತದೆ, ಅಂದುಕೊಂಡ ಕೆಲಸಗಳು ಈಡೇರುವುದಿಲ್ಲ ಎಂದು ಈ ಸಮುದಾಯದವರು ನಂಬಿದ್ದಾರೆ.

೨) ಅದೇ ರೀತಿ ಕನ್ಯೆಯನ್ನು ನೋಡುವುದಕ್ಕೆ ಹೋಗುವಾಗ ಅಥವಾ ಇನ್ನಿತರ ಒಳ್ಳೆಯ ಕೆಲಸ ಕಾರ್ಯಗಳಿಗಾಗಿ ಹೋಗುವಾಗ ಕ್ಷೌರಿಕನು ದಾರಿಯಲ್ಲಿ ಎದುರಿಗೆ ಬಂದರೆ ಅದು ಸಹ ಕೆಟ್ಟ ಸೂಚನೆ ಆದ್ದರಿಂದ ಯಾವುದೇ ಕೆಲಸಗಳು ಆಗುವದಿಲ್ಲವೆಂದು ನಂಬಿಕೊಂಡು ಮಾಲ

ಸಮುದಾಯದವರು ತಮ್ಮ ಗುಡಾರಕ್ಕೆ ವಾಪಸ್ಸು ತಿರುಗುತ್ತರೆ. ಯಾರಾದರು ಯಾಕೆ ಹೊಗಲಿಲ್ಲ ಎಂದು ಕೇಳಿದರೆ ಇಂದು ನಮಗೆ ದಾರಿ ಸಾಗಲಿಲ್ಲ ಎಂದು ಹೆಳುತ್ತೆವೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು.

೩) ಮಾಲ ಸಮುದಾಯದವರು ಯಾವುದೇ ಒಳ್ಳೆಯ ಕೆಲಸಗಳಿಗೆ ಹೋಗುವಾಗ ಯಾರಾದರು ಕಟ್ಟಿಗೆಯ ಹೊರೆಯನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗುವವರು ಎದುರಿಗೆ ಬಂದರೆ ಅದು ಸಹ ಕೆಟ್ಟ ಸೂಚನೆ ಎಂದು ಭಾವಿಸುತ್ತಾರೆ. ತಾವು ಮನಸ್ಸಿನಲ್ಲಿ ಅಂದುಕೊಂಡು ಹೊರಟಂತಹ ಕೆಲಸಗಳು ಯಾವವು ಈಡೇರುವುದಿಲ್ಲ ಎಂದರ್ಥ ಒಂದು ವೇಳೆ ಕೆಲಸಗಳು ಈಡೇರಿದರು ಕೂಡ ಮುಂದಿನ ದಿನಮಾನಗಳಲ್ಲಿ ಒಳ್ಳೆಯದಾಗುವುದಿಲ್ಲವೆಂಬ ನಂಬಿಕೆ ಮಾಲ ಸಮುದಾಯದವರಲ್ಲಿದೆ.

೪) ಮಾಲ ಸಮುದಾಯದವರು ಒಂದು ಊರಿನಿಂದ ಇನ್ನೊಂದು ಊರಿಗೆ ಒಳ್ಳೆಯ ಕೆಲಸ ಕಾರ್ಯಗಳಿಗಾಗಿ ಹೋಗುವಾಗ ನಡು ದಾರಿಯಲ್ಲಿ ಸತ್ತ ಹಾವು ಬಿದಿದ್ದರೆ ಅಂದುಕೊಂಡು ಹೊರಟಂತಹ ಕೆಲಸ ಕಾರ್ಯಗಳು ಒಳ್ಳೆಯದಾಗುವದಿಲ್ಲವೆಂಬ ನಂಬಿಕೆ ಈ ಸಮುದಾಯದವರಲ್ಲಿದೆ.

೫) ಯಾವುದಾದರು ಒಳ್ಳೆಯ ಕೆಲಸ ಕಾರ್ಯಗಳಿಗೆ ಹೋಗುವಾಗ ಸತ್ತ ಹೆಣವನ್ನು ಶವಸಂಸ್ಕಾರ ಮಾಡಿ ಅಥವಾ ಸುಟ್ಟು ಸಲಕೆ, ಗುದ್ದಲಿ, ಪುಟ್ಟಿ ಇನ್ನಿತರ ಪರಿಕರಗಳನ್ನು ಹೊತ್ತುಕೊಂಡು ಒಳ್ಳೆಯ ಕೆಲಸಕ್ಕೆ ಹೋಗುತ್ತಿರುವವರ ಎದುರಿಗೆ ಬರಬಾರದು ಒಂದು ವೇಳೆ ಬಂದರೆ ಅದು ಅಪನಂಬಿಕೆಗೆ ಕಾರಣವಾಗುತ್ತದೆ ಎಂದು ನಂಬಿಕೊಂಡಿದ್ದಾರೆ.

೬) ಯಾವುದಾದರು ಒಳ್ಳೆಯ ವಿಚಾರದ ಬಗ್ಗೆ ಮನೆಯಲ್ಲಿ ನಾಲ್ಕಾರು ಹಿರಿಯರು ಕುಳಿತುಕೊಂಡು ಮಾತನಾಡುವಾಗ ಮನೆಯಲ್ಲಿರುವ ಚಿಕ್ಕಮಕ್ಕಳಾಗಲಿ, ಹೆಣ್ಣುಮಕ್ಕಳಾಗಲಿ ಮಾತನಾಡುವವರ ಎಡಗಡೆ ಭಾಗದಲ್ಲಿ ಸಿನಿದರೆ ಯಾವ ಕೆಲಸವು ಸುಮಗವಾಗಿ ಆಗುವುದಿಲ್ಲವೆಂದು, ಒಂದೇ ಸೀನು ಸೀನಿದರೆ ಅದು ಕೂಡ ಯಾವ ಕೆಲಸವು ಸುಗಮವಾಗಿ ಆಗುವುದಿಲ್ಲವೆಂದು, ಮಾತನಾಡುವವರ ಬೆನ್ನಿನ ಹಿಂದೆ ಎರಡು ಸೀನಿದರೆ ಯಾವ ವಿಷಯದ ಬಗ್ಗೆ ಮಾತನಾಡುತ್ತಿರುತ್ತಾರೋ ಆ ವಿಷಯವನ್ನು ಕುಲಂಕುಷವಾಗಿ ವಿಚಾರಿಸಬೇಕಾಗುತ್ತದೆ. ಹೆಣ್ಣುಮಕ್ಕಳು ಬಲಗಡೆ ಸೀನಿದರೆ ಮಾತನಾಡುತ್ತಿರುವ ವಿಷಯ ಒಳ್ಳೆಯದಾಗುತ್ತದೆಂದರ್ಥ ಎಡಗಡೆ ಸೀನಿದರೆ ಒಳ್ಳೆಯದು ಆಗುವುದಿಲ್ಲ ಎಂದು ಈ ಸಮುದಾಯದವರು ನಂಬಿಕೊಂಡಿದ್ದಾರೆ.

೭) ಒಳ್ಳೆಯ ಕೆಲಸ ಕಾರ್ಯಗಳಿಗಾಗಿ ಮನೆಯಿಂದ ಹೊರಗೆ ಹೋಗುವಾಗ ದಾರಿಯಲ್ಲಿ ಬೆಕ್ಕು ಅಡ್ಡಬಂದರೆ ಅದು ಸಹ ಕೆಟ್ಟ ಸೂಚನೆ ಇದರಿಂದನು ಸಹ ಅಂದುಕೊಂಡ ಕೆಲಸಗಳು ಈಡೇರುವುದಿಲ್ಲ.

೮) ಯಾವುದಾದರು ಒಳ್ಳೆಯ ಕಾರ್ಯಕ್ಕೆ ಅಥವಾ ಮದುವೆಗೆ ಕನ್ಯೆ ನೋಡಲು ಪ್ರವಾಸ ಮಾಡಲೆಂದು ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವಾಗ ಬರಿದಾದ ನೀರಿನ ಬಿಂದಿಗೆಯನ್ನು ಹೊತ್ತುಕೊಂಡು ಬಂದರೆ ಒಳ್ಳೆಯದಾಗುವದಿಲ್ಲ ಎಂದು ನಂಬುತ್ತಾರೆ. ಇಂತಹ ನಂಬಿಕೆಗಳನ್ನು ಮಾಲ ಸಮುದಾಯದವರು ಇವತ್ತಿನವರೆಗೂ ಪಾಲಿಸುತ್ತಾರೆ.

ಮಾಲ ಸಮುದಾಯದವರ ಒಳ್ಳೆಯ ನಂಬಿಕೆಗಳು

೧) ಯಾವುದಾದರು ಒಳ್ಳೆಯ ಕೆಲಸ ಕಾರ್ಯಗಳಿಗೆ ಹೋಗುವಾಗ ಅಂದರೆ ಕನ್ಯೆ ನೋಡುವುದು, ನಿಶ್ಚಯ ಕಾರಣ ಮಾಡುವುದು, ಒಂದು ಊರಿನಿಂದ ಇನ್ನೊಂದು ಊರಿಗೆ ಭಿಕ್ಷೆ ಬೇಡಲು ಪ್ರಯಾಣಿಸುವುದು ಇನ್ನಿತರ ಕೆಲಸ ಕಾರ್ಯಗಳಿಗೆ ಹೋಗುವಾಗ ಸ್ತ್ರೀಯರಿರಲಿ ಪುರುಷರಿರಲಿ ನೀರು ತುಂಬಿದ ಬಿಂದಿಗೆಯನ್ನು ಹೊತ್ತುಕೊಂಡು ಬಂದರೆ ಅಂದುಕೊಂಡು ಹೊರಟಿರುವ ಕೆಲಸಗಳು ಈಡೇರುತ್ತವೆ ಎಂದು ನಂಬಿಕೊಂಡಿದ್ದಾರೆ.

೨) ಒಳ್ಳೆಯ ಕೆಲಸ ಕಾರ್ಯಗಳಿಗೆ ಹೋಗುವಾಗ ಎದುರಿಗೆ ಸ್ವಾಮೀಜಿಯವರು ಬಂದರೆ ಅಂದುಕೊಂಡ ಕೆಲಸಗಳು ಈಡೇರುತ್ತವೆ ಎಂದು ನಂಬಿಕೊಂಡಿದ್ದಾರೆ.

೩) ಮಾಲ ಸಮುದಾಯದವರು ಕನ್ಯೆ ನೋಡುವುದು, ಮದುವೆ ಸಮಾರಂಭಕ್ಕೆ, ನಿಶ್ಚಿತಾರ್ಥ ಇನ್ನಿತರ ಒಳ್ಳೆಯ ಕೆಲಸ ಕಾರ್ಯಗಳಿಗಾಗಿ ಹೋಗುವಾಗ ದಾರಿಯಲ್ಲಿ ನಂಟರು (ಬೀಗರು) ಎದುರಾದರೆ ಒಳ್ಳೆಯದಾಗುತ್ತದೆಂಬ ನಂಬಿಕೆ ಈ ಸಮುದಾಯದವರಲ್ಲಿ ಇದೆ.

೪) ಒಳ್ಳೆಯ ಕೆಲಸ ಕಾರ್ಯಗಳಿಗಾಗಿ ಹೋಗುವಾಗ ಎದುರಿಗೆ ರೊಟ್ಟಿ ಬುತ್ತಿಗಂಟನ್ನು ಹೊತ್ತುಕೊಂಡು ಬಂದರೆ ಒಳ್ಳೆಯದಾಗುತ್ತದೆ. ಅಂದುಕೊಂಡ ಕೆಲಸಗಳು ಈಡೆರುತ್ತದೆಂದು ಅರ್ಥೈಸಿಕೊಳ್ಳುತ್ತಾರೆ.

೫) ಅದೇ ರೀತಿ ಒಳ್ಳೆಯ ಕೆಲಸಗಳಿಗಾಗಿ ಮನಸ್ಸಿನಲ್ಲಿ ಅಂದುಕೊಂಡು ಹೊಗುವಾಗ ಹೂ ಮಾರುವವರು ಎದುರಿಗೆ ಬಂದರೆ ಒಳ್ಳೆಯದಾಗುತ್ತದೆ ಎಂದು ಈ ಸಮುದಾಯದವರು ನಂಬಿಕೊಂಡಿದ್ದಾರೆ.

೬) ಯಾವುದೇ ಒಳ್ಳೆಯ ಕೆಲಸಕ್ಕೆಂದು ಹೋಗುವಾಗ ದೇವಸ್ಥಾನಕ್ಕೆ ಹೋಗುವ ಜನರು ಎದುರಿಗೆ ಬಂದರೆ ಒಳ್ಳೆಯದು ಆಗುತ್ತದೆ ಎಂದರ್ಥ. ಅಂದುಕೊಂಡ ಕೆಲಸಗಳು ಈಡೇರುತ್ತವೆ ಎಂದು ಈ ಸಮುದಾಯದವರು ನಂಬಿಕೊಂಡಿದ್ದಾರೆ.

೭) ಅದೇ ರೀತಿ ಏನಾದರು ತುಂಬಿಕೊಂಡಿರುವ ಚಕ್ಕಡಿ ಎದುರಿಗೆ ಬಂದರೆ ಒಳ್ಳೆಯದು.

೮) ಒಳ್ಳೆಯ ಕೆಲಸ ಕಾರ್ಯಗಳಿಗೆಂದು ಹೋಗುವಾಗ ಸತ್ತ ಹೆಣವನ್ನು ಹೊತ್ತುಕೊಂಡು ಶವಸಂಸ್ಕಾರ ಮಾಡಲು ಮುಂದೆ ಹೊರಟಿದ್ದರೆ ಒಳ್ಳೆಯದಾಗುತ್ತದೆಂದು ಅರ್ಥ. ಏಕೆಂದರೆ ಅದಕ್ಕೆ ತುಂಬಿದ ರಾಶಿ ಎಂದು ಭಾವಿಸಿ ಅಂದುಕೊಂಡು ಹೊರಟ ಕೆಲಸಗಳು ಆಗುತ್ತವೆ ಎಂದು ಈ ಸಮುದಾಯದವರು ನಂಬಿಕೊಂಡಿದ್ದಾರೆ.

೯) ಎಲ್ಲಿಗಾದರು ಹೊರಡುವಾಗ ಮುತ್ತೈದೆ ಸ್ತ್ರೀ ಪುರುಷರು ಎದುರಿಗೆ ಬಂದರೆ ಬದುಕಿದ ಹಾವು ಎದುರಿಗೆ ಬಂದರೆ ಆಕಳು ಎದುರಿಗೆ ಬಂದರೆ ಜೋಡು ಪಕ್ಷಿಗಳು ಹಾರಾಡುತ್ತಾ ಎದುರಿಗೆ ಬಂದರೆ ಒಳ್ಳೆಯದು ಆಗುತ್ತದೆ ಎಂದು ಅರ್ಥ. ಅದೇ ರೀತಿ ಏನಾದರು ಮಾತನಾಡುವಾಗ ಬಲಗಡೆ ಹಲ್ಲಿ ನುಡಿದರೆ ಒಳ್ಳೆಯದು ಆಗುತ್ತದೆಂದು ಎಡಗಡೆ ನುಡಿದರೆ ಕೆಟ್ಟದಾಗುತ್ತದೆಂದು ಈ ಸಮುದಾಯದವರು ನಂಬಿಕೊಂಡಿದ್ದಾರೆ. ಮಾಲ ಸಮುದಾಯದವರು ಇಂತಹ ನಂಬಿಕೆಗಳನ್ನು ಪಾಲಿಸಿಕೊಂಡು ಬರುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದು ಬಂದಿತು.

೩.೪.೧ ಜಾತಿಯ ಹೊರತಾದ ವ್ಯಕ್ತಿಯನ್ನು ವಿವಾಹವಾದರೆ

ಮಾಲ ಸಮುದಾಯದ ಪುರುಷನು ತನ್ನ ಜಾತಿಗೆ ಸೇರದ ಹುಡುಗಿಯನ್ನು ವಿವಾಹ ಮಾಡಿಕೊಂಡಿದ್ದರೆ ಅವನಿಗೆ ಮತ್ತು ಅವನ ಕುಟುಂಬಸ್ಥರಿಗೆ ಜಾತಿ ಬಹಿಷ್ಕಾರವನ್ನು ಹಾಕಲಾಗುತ್ತದೆ. ಅಕಸ್ಮಾತ್ ಆ ವ್ಯಕ್ತಿ ಜಾತಿಗೆ ಸೇರಿಕೊಳ್ಳಲು ಆಪೇಕ್ಷಿಸಿದರೆ ದೈವದವರೆಲ್ಲಾ ಸೇರಿ ಪಂಚಾಯತಿ ಮಾಡುವರು. ಈ ಪಂಚಾಯತಿಗೆ ಎಲ್ಲಾ ಕಟ್ಟೆಮನೆಯ ಮುಖಂಡರೂ ಕಡ್ಡಾಯವಾಗಿ ಸೇರುತ್ತಾರೆ. ಪಂಚಾಯತಿಯ ತೀರ್ಮಾನದಂತೆ ಪರಜಾತಿಯ ಹೆಣ್ಣನ್ನು ಮದುವೆಯಾದವನಿಗೆ ಸಾರ್ವಜನಿಕವಾಗಿ ತಲೆಬೋಳಿಸುವರು. ತರುವಾಯ ಅವನಿಗೆ ಬರಿಮೈಯ್ಯಲ್ಲಿ ಮೆರವಣಿಗೆ ಮಾಡುವರು. ಇದಾದ ತರುವಾಯ ಅವನಿಗೆ ಮೈತೊಳೆದು ಬಂಗಾರ ಅಥವಾ ಪಂಚಲೋಹದ ಕಡ್ಡಿಯಿಂದ ನಾಲಿಗೆಯನ್ನು ಸುಡುವರು. ಮದುವೆಯಾದ ವ್ಯಕ್ತಿಯು ತನ್ನಿಂದ ತಪ್ಪಾಗಿದೆ, ತನ್ನನ್ನು ಹಾಗೂ ತನ್ನನ್ನು ನಂಬಿ ಬಂದ ಹೆಣ್ಣನ್ನು ನಿಮ್ಮ ಜಾತಿಯೊಳಗೆ ಸೇರಿಸಿಕೊಳ್ಳಿ ಎಂದು ದೈವದವರಿಗೆ ಅಡ್ಡಬೀಳಬೇಕು. ಆಗ ದೈವದವರ ತೀರ್ಮಾನದಂತೆ ಮದುವೆಯಾದ ಹುಡುಗನನ್ನೂ ಅವನನ್ನು ಕೈಹಿಡಿದ ಹೆಣ್ಣನ್ನೂ ಜಾತಿಗೆ ಸೇರಿಸಿಕೊಳ್ಳುವರು. ಆ ಹೆಣ್ಣು ಯಾವುದೇ ಜಾತಿಗೆ ಸೇರಿರಲಿ, ದೈವದ ತೀರ್ಮಾನದಂತೆ ಅವಳು ಅಂದಿನಿಂದ ಮಾಲ ಸಮುದಾಯಕ್ಕೆ ಸೇರಿದವಳಾಗುತ್ತಾಳೆ. ಮಾಲ ಸಮುದಾಯದ ಕಟ್ಟುಪಾಡುಗಳನ್ನು ಒಪ್ಪಿ ಈ ಸಮುದಾಯಕ್ಕೆ ಬಂದ ಹೆಣ್ಣು ತರುವಾಯ ತನ್ನ ಮೂಲ ಸಮುದಾಯದ ಸಂಪರ್ಕವನ್ನು ಕಳೆದುಕೊಳ್ಳಬೇಕು ಹಾಗೆಯೇ ತನ್ನ ತವರನ್ನೂ ಮರೆಯಬೇಕು ತನ್ನ ತವರಿಗೆ ಆ ಹೆಣ್ಣುಮಗಳು ಯಾವುದೆ ಕಾರ್ಯಕ್ರಮಗಳಿಗೆ ಹೂಗುವಂತಿಲ್ಲ ಎಂಬ ನಿಷೇಧ ಇವರಲ್ಲಿದೆ. ಒಂದು ವೇಳೆ ಆ ಹೆಣ್ಣು ಮಗಳು ತನ್ನ ತವರಿಗೆ ಹೂಗಿದ್ದೆ ಆದಲ್ಲಿ ಆ ಮನೆತನದವರನ್ನ ಮಾಲ ಸಮುದಾಯದವರು ಯಾವುದೆ ಕಾರ್ಯಕ್ರಮಗಳಿಗೆ ಬೇರೆ-ಬೇರೆ ಕ್ರೀಯಾವಿಧಿಗಳಿಗೆ ಕರೆಯುವಂತಿಲ್ಲ ಎಂಬ ನಿಷೇಧ ಮಾಲ ಸಮುದಾಯದವರಲ್ಲಿರುತ್ತದೆ. ಈ ಪದ್ಧತಿ ಮಾಲ ಸಮುದಾಯದವರಲ್ಲಿ ಇವತ್ತಿನವರೆಗೂ ಇರುತ್ತದೆ. ಆದರೆ ಮದುವೆಯಾದ ಹೆಣ್ಣನ್ನು ಇತ್ತೀಚೆಗೆ ಸಾರ್ವಜನಿಕವಾಗಿ ತಲೆಬೋಳಿಸುವ ಪದ್ಧತಿಯನ್ನು ಕೈಬಿಟ್ಟಿದ್ದಾರೆ. ಇನ್ನುಳಿದ ಎಲ್ಲಾ ಪದ್ಧತಿಗಳನ್ನು ಮಾಡುತ್ತಾರೆ.

ಅಕಸ್ಮಾತ್ ಮಾಲ ಸಮುದಾಯದ ಮಹಿಳೆ ಬೇರೆ ಸಮುದಾಯದ ಗಂಡನ್ನು ಮದುವೆಯಾದಲ್ಲಿ ಅವಳಿಗೆ ಮರಳಿ ಸಮುದಾಯದೊಳಗೆ ಪ್ರವೇಶವಿರುವುದಿಲ್ಲ. ಅಂತಹ ಹೆಣ್ಣನ್ನು ಹೆತ್ತ ತಪ್ಪಿಗಾಗಿ ಅವಳ ಮನೆಯವರಿಗೆ ದೈವದವರು ತಪ್ಪುದಂಡ ಹಾಕುವ ಪದ್ಧತಿ ಮಾಲ ಸಮುದಾಯದವರಲ್ಲಿ ಇರುತ್ತದೆ. ಈ ರೀತಿಯ ಶಿಕ್ಷೆಗೆ ಹೆದರಿಯೇ ಬಹುತೇಕ ಪರಸಮುದಾಯಗಳೊಂದಿಗೆ ವಿವಾಹವಾಗಲು ಈ ಸಮುದಾಯದ ಜನ ಹೆದರುವರು.

ಅವಾಚ್ಯ ಶಬ್ಧ ನುಡಿದರೆ ಮತ್ತು ಚಪ್ಪಲಿಯಿಂದ ಹೊಡೆದಾಡಿದ ವ್ಯಕ್ತಿಗಳಿಗೆ ಶಿಕ್ಷೆ ವಿಧಿಸಲಾಗುವುದು. ತಲೆಬೋಳಿಸುವುದರ ಹೊರತಾಗಿ ಅನ್ಯ ಜಾತಿಯ ಹೆಣ್ಣನ್ನು ಮದುವೆಯಾಗುವವರಿಗೆ ವಿಧಿಸುವ ಶಿಕ್ಷೆಯನ್ನೇ ಇವರಿಗೂ ವಿಧಿಸಲಾಗುವುದು.

೩.೪.೨ ದೈವದ ಮಾತಿಗೆ ವಿರುದ್ಧವಾಗಿ ನಡೆದುಕೊಂಡರೆ

ದೈವದ ಮಾತಿಗೆ ವಿರುದ್ಧವಾಗಿ ನಡೆದುಕೊಂಡರೆ ಜಾತಿ ಪಂಚಾಯತಿ ಮಾಡಿ ಅಂತಹ ವ್ಯಕ್ತಿ, ಕುಟುಂಬಗಳನ್ನು ಜಾತಿ ಬಹಿಷ್ಕಾರ ಹಾಕುವ ಮೂಲಕ ಶಿಕ್ಷೆಗೆ ಗುರಿಪಡಿಸಲಾಗುವುದು. ಈ ಪದ್ಧತಿ ಇತ್ತೀಚೆಗೆ ಸಡಿಲಗೊಂಡಿದ್ದು ಸ್ವಲ್ಪ ದಿನಗಳವರೆಗೆ ಮಾತ್ರ ಜಾತಿಯ ಹೊರಗೆ ಇರುತ್ತಾರೆ. ನಂತರ ಆ ಜಾತಿಯವರೊಂದಿಗೆ ಸೇರಿಕೊಳ್ಳುತ್ತಾರೆ.(ಭಾ:೩.೨೪)

೩.೪.೩ ವಿವಾಹ ಪೂರ್ವ ವ್ಯಕ್ತಿ ತೀರಿಕೊಂಡಲ್ಲಿ

ವಿವಾಹ ಆಗದ ವ್ಯಕ್ತಿ ಸತ್ತಲ್ಲಿ ಹೆಣವನ್ನು ಗೋಣಿ ಚೀಲದಲ್ಲಿ ಬೋರಲು ಹಾಕಿಕೊಂಡು ಒಯ್ಯಲಾಗುತ್ತದೆ. ಮೊದಲಿಗೆ ಒಂದು ಗಳುವಿಗೆ ಎರಡು ಕೈಕಾಲುಗಳನ್ನು ಕಟ್ಟಿ ಇಬ್ಬರೇ ಇಂತಹ ಹೆಣವನ್ನು ಒಯ್ಯುತ್ತಿದ್ದರಂತೆ. ಆದರೆ ಇತ್ತೀಚೆಗೆ ಗೋಣಿಚೀಲದಲ್ಲಿ ಇಂತಹ ಹೆಣವನ್ನು ಒಯ್ಯಲಾಗುತ್ತದೆ.

♦ ಇವರಿಗೆ ಯಾವುದೇ ರೀತಿಯ ಅಪರ ಕರ್ಮಗಳು ನಡೆಸಲಾಗುವುದಿಲ್ಲ.

♦ ಮದುವೆಯಾದ ವ್ಯಕ್ತಿಯನ್ನು ಪೂರ್ವಾಭಿಮುಖವಾಗಿ ಗುಟಿಗೆ ಬಡಿದು ಕೂರಿಸುವರು ಹಾಗೆಯೇ ಕುಣಿಯಲ್ಲಿ ಕೂರಿಸಿ ಶವಸಂಸ್ಕಾರ ಮಾಡುವ ಪದ್ಧತಿ ಇವರಲ್ಲಿದೆ. ಆದರೆ ಮದುವೆಯಾಗದ ವ್ಯಕ್ತಿ ಸತ್ತರೆ ಹೆಣವನ್ನು ಮಲಗಿಸುವರು ಮತ್ತು ಹೆಣವನ್ನು ಮಲಗಿದ ಸ್ಥಿತಿಯಲ್ಲಿ ಬೋರಲು ಹಾಕಿಯೇ ಕುಳಿಯಲ್ಲಿ ಇರಿಸಿ ಶವಸಂಸ್ಕಾರ ಮಾಡುವರು. ಬಹುಶಃ ಮದುವೆಯಾಗದೇ ಇರುವವರು ಪೂರ್ಣವಾಗಿ ಜಾತಿ ಸಂಸ್ಕಾರಕ್ಕೆ ಒಳಗಾಗಿರಲಾರ ಎಂಬ ನಂಬುಗೆ ಈ ಪದ್ಧತಿಯಲ್ಲಿ ಕಾರ್ಯವೆಸಗಿರಬೇಕು. ಈ ಸಂಪ್ರದಾಯ ಮಾಲ ಸಮುದಾಯದವರಲ್ಲಿ ಇಂದಿಗೂ ಪ್ರಚಲಿತವಿದೆ.

♦ ಮಾಲ ಸಮುದಾಯದ ಶವ ಸಂಸ್ಕಾರ ಮತ್ತು ಅದಕ್ಕೆ ಸಮಬಂಧಿಸಿದ ಆಚರಣೆಗಳನ್ನು ಗಮನಿಸಿದಾಗ ಇವರು ಸಾವಿಗೆ ಹೆದರುವವರು ಮತ್ತು ತನ್ನೊಳಗಿನ ಒಬ್ಬ ವ್ಯಕ್ತಿ ಇಲ್ಲವಾದನಲ್ಲ ಎನ್ನುವ ಕಟುವಾಸ್ತವಕ್ಕೆ ಆತಂಕಗೊಳ್ಳುವವರೂ ಆದುದನ್ನು ಗಮನಿಸಬಹುದು.

ವ್ಯಕ್ತಿ ಸತ್ತ ನಂತರದ ಹದಿನಾರು ದಿನಗಳು ಸತ್ತ ವ್ಯಕ್ತಿ ಮಧ್ಯಂತರ ಸ್ಥಿತಿಯಲ್ಲಿರುವನೆಂಬ ನಂಬುಗೆ ಇವರಲ್ಲಿರುವುದನ್ನು ಮಾಲ ಸಮುದಾಯದ ಸಾವಿಗೆ ಸಂಬಂಧಿಸಿದ ಆಚರಣೆಗಳೇ ತಿಳಿಸಿಕೊಡುತ್ತವೆ. "ಸಾವು ಒಂದು ನೈಜ ಘಟನೆ. ಸತ್ತ ವ್ಯಕ್ತಿಯು ನೈಜ ಲೋಕದೊಂದಿಗಿನ ತನ್ನ ಎಲ್ಲಾ ಸಂಬಂಧಗಳನ್ನು ಮತ್ತೆಂದೂ ಸ್ಥಾಪಿಸಿಕೊಳ್ಳಲಾರದ ರೀತಿಯಲ್ಲಿ ಕಡಿದುಕೊಂಡಿರುತ್ತಾನೆ. ಇದರಿಂದಾಗಿ ಆತ ಬದುಕಿದ್ದಾಗ ಏರ್ಪಡಿಸಿಕೊಂಡಿದ್ದ ಸಂಬಂಧಗಳೆಲ್ಲ ಸಾವಿನಲ್ಲಿ ಅಸ್ತವ್ಯಸ್ತಗೊಳ್ಳುತ್ತವೆ. ಕುಟುಂಬದ ನಿಯಾಮಕತೆಗಳೆಲ್ಲ ಸಡಲಿ ಅಲ್ಲಿ ವಿಚಿತ್ರವಾದ ಏರು ಪೇರುವುಂಟಾಗುತ್ತದೆ. ಇಂಥ ಬಿಕ್ಕಟ್ಟಿನ ಗಳಿಗೆಯಲ್ಲಿ ನೈಜ ಲೋಕ ಕಳೆದುಕೊಂಡಿದ್ದನ್ನು, ಸೈದ್ಧಾಂತಿಕವಾಗಿ ಪುನರ್ ನಿರ್ಮಿಸಿಕೊಂಡು, ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಸಂಸ್ಕೃತಿಯೊಂದಕ್ಕೆ ಸಾವಿನ ಸಂದರ್ಭದಲ್ಲಿ ಮಧ್ಯಂತರ ಜಗತ್ತು ಬೇಕಾಗುವುದೇ ಈ ಪುನರ್ ಹೊಂದಾಣಿಕೆಗಾಗಿ."೪ ಅಲೆಮಾರಿ ತಳ ಸಮುದಾಯಗಳ ವ್ಯವಸ್ಥೆಯಲ್ಲಿ ಹುಟ್ಟಿನಷ್ಟೇ ಸಾವಿಗೂ ಮಹತ್ವದ ಸ್ಥಾನ ಸಿಕ್ಕಿರುವುದನ್ನು ನೋಡಬಹುದಾಗಿದೆ. ಪ್ರಾಯಶಃ ಎಲ್ಲಾ ತಳಸಮುದಾಯಗಳ ಸಂಸ್ಕೃತಿಯಲ್ಲೂ ಈ ರೀತಿಯ ವ್ಯವಸ್ಥೆಯನ್ನು ಕಾಣಬಹುದಾಗಿದೆ.

ಮಕ್ಕಳಾಗದ ಹೆಣ್ಣುಮಕ್ಕಳು ಭಿಕ್ಷಾಟನೆಗಾಗಿ ಬಳಸುವ ಕಂಬಿಯನ್ನು ಮೂರು ಸುತ್ತು ಸುತ್ತಿ ತಿರುಗಿ ನೋಡದೆ ಹೋದರೆ ಅವರಿಗೆ ಮಕ್ಕಳು ಆಗಿಯೇ ತೀರುತ್ತವೆ ಎನ್ನುವ ನಂಬುಗೆಯೂ ಉಂಟು.

ಮದುವೆಯಾದ ಹೊಸ ಮದುಮಕ್ಕಳು ಮದುವೆಯಾದ ತಿಂಗಳವರೆಗೂ ಕಂಬಿಯನ್ನು ಮುಟ್ಟಬಾರದು ಎಂಬ ನಿಷೇಧ ಇವರಲ್ಲಿ ಪ್ರಚಲಿತವಿದೆ. ಕಂಬಿಯನ್ನು ಹೊತ್ತಾತ ಕಾಲೊಳಗೆ ಚಪ್ಪಲಿಯನ್ನು ಹಾಕಬಾರದು ಎಂಬ ನಂಬಿಕೆ ಇವರಲ್ಲಿದೆ. ಮಾಲ ಸಮುದಾಯದಲ್ಲಿ ಇಂತಹ ಹತ್ತು ಹಲವು ನಂಬುಗೆಯ ನಿಧಿ ನಿಷೇಧಗಳು ಇರುವುದು ಸಹಜ. ಹಾಗೆಯೇ ಅವುಗಳ ಕುರಿತು ಆಚರಣೆಯನ್ನು ಅವರು ನಡೆಸುತ್ತಾ ಬರುತ್ತಿದ್ದಾರೆ. ಹೊಸ ಜಗತ್ತಿಗೆ ಮುಖ ಮಾಡಿರುವ ಮಾಲ ಸಮುದಾಯದವರು ಇಂದಿಗೂ ತಮ್ಮ ಆಚರಣೆ ನಂಬುಗೆ, ವಿಧಿ ನಿಷೇಧಗಳ ಕುರಿತಾದ ಭಾವನೆಗಳು ಇವರಿಂದ ಮಾಯವಾಗಿಲ್ಲ. ಪ್ರಾಯಶಃ ತಳಸಮುದಾಯಗಳೆಲ್ಲವೂ ತಮ್ಮ ವಿಚಿತ್ರವಾದ ನಂಬುಗೆ, ಆಚರಣೆಗಳನ್ನು ಕಾಯ್ದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಅದಕ್ಕೆ ಮಾಲ ಸಮುದಾಯವೂ ಹೊರತಾಗಿಲ್ಲ.

೩.೫ ಸಾಂಸ್ಕೃತಿಕ ಆಟ

ಸಾಂಸ್ಕೃತಿಕವಾಗಿ ತುಂಬಾ ಪ್ರಭಲವಾಗಿರುವ ಮಾಲ ಸಮುದಾಯದ ಜನ ಜನಪದೀಯವಾದ ಸಾಂಸ್ಕೃತಿಕ ಆಟದಲ್ಲಿ ತೊಡಗುವರು. ದಿನನಿತ್ಯದ ಭಿಕ್ಷಾಟನೆ, ಶ್ರಮಿಕ ಕೂಲಿ ಕೆಲಸಗಳಿಂದ ಬಿಡುಗಡೆಗೊಳ್ಳಲು ಇವರು ಆಶ್ರಯಿಸುವುದು ಇಂತಹ ಸಾಂಸ್ಕೃತಿಕವಾದ ಆಟಗಳಲ್ಲಿಯೆ. ಗುಂಪು ಗುಂಪಾಗಿ ಗುಡಾರಗಳನ್ನು ನಿರ್ಮಿಸಿಕೊಂಡು ವಾಸಿಸುವ ಈ ಸಮುದಾಯದವರು ವಿಶೇಷವಾಗಿ ಹುಲಿ–ಕುರಿ ಆಟ, ಕೃಷಿಗೆ ಪೂರಕವಾಗಿ ಕೂಲಿ ಕೆಲಸ ಮಾಡುವ ಕಾಯಕದ ಮಾಲ ಸಮುದಾಯಕ್ಕೆ ಕೃಷಿ ಸಂಬಂಧಿ ಆಟವೆಂದೇ ಪರಿಗಣಿತವಾದ ಗೋಟುಗುಣಿ (ಚೆನ್ನೆಮಣೆ) ಆಟ ಹೆಚ್ಚು ಆಪ್ತವಾಗಿದೆ. ಮಹಿಳೆಯರು ಚೆನ್ನೆಮಣೆ, ಚೌಕಾಬಾರ ಆಟಗಳನ್ನು ಆಡಿದರೆ ಪುರುಷರು ಹುಲಿ–ಕುರಿ ಆಟವನ್ನು ಆಡುವರು.

ತಮ್ಮ ಪೂರ್ವಜರು ಹಿಂದೆ ಯುದ್ಧಕಾಲದಲ್ಲಿ ಸೈನ್ಯದೊಳಗೆ ವಾಧ್ಯಪರಿಕರಗಗಳನ್ನು ನುಡಿಸಲು ನಿಯೋಜಿತರಾಗಿದ್ದರೆಂದು ಹೇಳುವರು. ಹಾಗೆಯೇ ಯೋಧರೂ ಆಗಿದ್ದರೆಂದೂ ತಿಳಿಸುವರು. ಮಾಲಾ ಸಮುದಾಯದವರು ಕಾಕತೀಯರ ಆಳ್ವಿಕೆಯ ಸಂದರ್ಭದಲ್ಲಿ ಯುದ್ಧ ಪ್ರಿಯರಾಗಿ ಪ್ರಮುಖ ಪಾತ್ರವಹಿಸಿದ್ದರಂತೆ. ಕಾಕತೀಯರು ಸುಮಾರು ೨೦೦ ವರ್ಷಗಳ ಕಾಲ ಆಂದ್ರದಲ್ಲಿ ಆಳ್ವಿಕೆ ಮಾಡಿದ ಕುರಿತು ಚರಿತ್ರೆಯಿಂದ ತಿಳಿದುಬರುತ್ತದೆ. ಕಾಕತೀಯರ ಆಡಳಿತದಲ್ಲಿ ಮಾಲಾ ಸಮುದಾಯದವರು ಯೋಧರಾಗಿ ಕಾರ್ಯನಿರ್ವಹಿಸುತ್ತಿದ್ದರಂತೆ.

ಕಾಕಾತೀಯ ಕೊನೆಯ ಅರಸನಾದ ಪ್ರತಾಪರುದ್ರನ ಮರಣದೊಂದಿಗೆ ಕಾಕತೀಯರ ಆಳ್ವಿಕೆ ಕೊನೆಗೊಳ್ಳುತ್ತದೆ. ಇದರಿಂದ ರಾಜಾಶ್ರಯದಲ್ಲಿದ್ದ ಮಾಲ ಸಮುದಾಯದವರು ದಿಕ್ಕೇಡಿಗಳಾಗಿ ಬೇರೆ ಅರಸರ ಆಶ್ರಯವನ್ನರಸಿ ಕರ್ನಾಟಕಕ್ಕೆ ವಲಸೆ ಬಂದರು ಎಂದು ಹೇಳಲಾಗುವುದು. ಅದೇನೆ ಇರಲಿ ಪ್ರಸ್ತುತ ಇಂದು ರಾಜನ ಆಡಳಿತವೂ ಇಲ್ಲ, ರಾಜಾಶ್ರವಯವೂ ಇಲ್ಲ. ಆದರೆ ಇವರು ಯೋಧರಾಗಿದ್ದರೆಂಬುದಕ್ಕೆ ಪೂರಕವಾಗಿ ಯುದ್ಧದ ಚಮತ್ಕಾರಿಕ ತಂತ್ರಗಳು ಇನ್ನೂ

ಉಳಿದುಕೊಂಡುಬಂದಿವೆ. ಆ ತಂತ್ರಗಳನ್ನೇ ಇಂದು ಪ್ರದರ್ಶನ ಕಲೆಯಾಗಿಸಿಕೊಂಡ ಜಾಣ್ಮೆ ಮಾಲ ಸಮುದಾಯದ್ದಾಗಿದೆ. ಪ್ರದರ್ಶನ ಕಲೆಗಳನ್ನು ಮಾಲ ಸಮುದಾಯದವರು ಆಟವೆಂದು ಕರೆಯುತ್ತಾರೆ. ಅಲೆಮಾರಿಗಳಾಗಿ ಊರೂರು ಅಲೆಯುವ ಇವರು ತಾವು ಯಾವ ಊರಿಗೆ ಹೋಗುವರೋ ಆ ಊರಿನ ಬಯಲಿನಲ್ಲಿ ದೊಂಬರಂತೆ ಇವರು ತಮ್ಮ ಆಟದ ಪ್ರದರ್ಶನ ಮಾಡುತ್ತಾರೆ. ಜನರನ್ನು ಒಂದೆಡೆ ಆಕರ್ಷಿಸಲು ತಮ್ಮ ವಾದ್ಯ ಪರಿಕರಗಳಾದ ಕಹಳೆ, ಸಮ್ಮಾಳ, ನಗಾರಿ ಮುಂತಾದ ವಾದ್ಯಗಳನ್ನು ನುಡಿಸುವರು. ಜನರು ಸೇರಿದ ತರುವಾಯ ತಮ್ಮ ಆಟಗಳನ್ನು ಪ್ರದರ್ಶನ ಮಾಡುವರು. ಪ್ರದರ್ಶನ ನೋಡಿದ ಪ್ರೇಕ್ಷಕರು ನೀಡಿದ ಚಿಲ್ಲರೆ ಕಾಸನ್ನು ತಮ್ಮ ಹೊಟ್ಟೆಪಾಡಿಗೆ ಬಳಸಿಕೊಳ್ಳುತ್ತಾರೆ. ಆ ಆಟಗಳ ವಿವರ ಈ ಕೆಳಗಿನಂತಿದೆ.

ಮಾಲ ಸಮುದಾಯದವರು ಮಲ್ಲಯ್ಯನ ಕಂಬಿಯನ್ನು ಹೊತ್ತುಕೊಂಡು ತಿರುಗುತ್ತಾರೆ. ಆಟದ ಮುಖ್ಯ ಆಕರ್ಷಣೆ ಈ ಕಂಬಿಯಾಗಿದೆ. ತಾವು ಎಲ್ಲಿ ಆಟ ಪ್ರದರ್ಶನ ಮಾಡುವರೋ ಅಲ್ಲಿ ಕಂಬಿಯನ್ನು ನಾಲ್ಕು ಬಿದಿರು ಗಳಗಳ ಮೇಲೆ ಕೂರಿಸಿರುತ್ತಾರೆ. ಕಂಬಿಯ ಒಳಗೆ ಮಲ್ಲಯ್ಯನದೆಂದು ಹೇಳುವ ಹಿತ್ತಾಳೆಯ ಚಿಕ್ಕ ಮೂರ್ತಿ ಇರುತ್ತದೆ. ಮೂರ್ತಿಯ ಮುಂಭಾಗದಲ್ಲಿ ದೀಪಹಚ್ಚಿ ಇರಿಸಿರುತ್ತಾರೆ. ಊದುಬತ್ತಿಯನ್ನೂ ಹಚ್ಚಿರುತ್ತಾರೆ.

ಮಾಲ ಸಮುದಾಯದವರು ಸುಮಾರು ಒಂಬತ್ತು ಸಂಘಗಳನ್ನು ಚಾಲನೆಗೆ ತಂದಿದ್ದಾರೆ. ಈ ಸಮುದಾಯದವರು ಅತ್ಯಂತ ಸುಂದರವಾದ ಜನರಿಗೆ ಆಕರ್ಷಕವಾಗಿ ಕಾಣುವ ವಂಶಪಾರಂಪರ್ಯ ಆಟಗಳನ್ನು, ಪ್ರದರ್ಶನ ಕಲೆಗಳನ್ನು ಪೂರ್ವಜರ ಕಾಲದಿಂದಲೂ ಆಡುತ್ತಾ ಇಂದಿನವರೆಗೂ ತಮ್ಮ ಪ್ರದರ್ಶನ ಜಾನಪದೀಯ ಕಲೆಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಮಾಲ ಸಮುದಾಯದವರು ಆಡುವಂತಹ ಪ್ರದರ್ಶನ ಕಲೆಗಳು, ಪ್ರಾಚೀನ ಕಾಲದಲ್ಲಿ. ರಾಜಮಹಾರಾಜರ ಕಾಲದಲ್ಲಿ ಅಸ್ತಿತ್ವದಲ್ಲಿದ್ದಂತಹ ಮತ್ತು ಯುದ್ಧದ ಸಂದರ್ಭದಲ್ಲಿ ಎದುರಾಳಿಗಳ ವಿರುದ್ಧ ಆಡುವಂತಹ ಯುದ್ಧಕಲೆಗಳು ಇಂದು ಮಾಲ ಸಮುದಾಯದವರ ಜೀವನಾಧಾರಕ್ಕೆ ಆರ್ಥಿಕ ಬೆನ್ನೆಲುಬುಗಳಾಗಿವೆ. ಇಂತಹ ಆಟಗಳನ್ನು ಈ ಸಮುದಾಯದವರು ಮುಂದುವರಿಸಿಕೊಂಡು ಬಂದಿದ್ದಾರೆ. ಮಾಲ ಸಮುದಾಯದವರು ಆಡುವ ಪ್ರದರ್ಶನ ಕಲೆಗಳಿಗೆ ಉಪಯೋಗಿಸುವ ಪರಿಕರಗಳು ಅತ್ಯಂತ ಬೆಲೆಬಾಳುವಂತಹವುಗಳಾಗಿದ್ದು ಅತ್ಯಂತ ಗಟ್ಟಿಮುಟ್ಟಾಗಿರುತ್ತವೆ. ಮಾಲ ಸಮುದಾಯದವರು ಆಡುವ ಪ್ರದರ್ಶನ ಕಲೆಗಳು ತಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸಲು ಸ್ವಲ್ಪಮಟ್ಟಿಗೆ ಜೀವನ ನಡೆಸಿಕೊಂಡು ಹೋಗಲು ಅತ್ಯಂತ ಪ್ರಮುಖ ಪಾತ್ರಧಾರಿಯಾಗಿದೆ.

ಮಾಲ ಸಮುದಾಯದವರು ತಮ್ಮ ಪಾರಂಪರಿಕ ಜಾನಪದ ಪ್ರದರ್ಶನ ಕಲೆಯ ಜೊತೆಗೆ ಇನ್ನು ಹಲವಾರು ಹೊಸ ಪ್ರದರ್ಶನ ಕಲೆಗಳನ್ನು ಅಳವಡಿಸಿಕೊಂಡಿರುವರು.

ಮಾಲ ಸಮುದಾಯದವರು ಪ್ರದರ್ಶಿಸುವ ಪ್ರಮುಖ ಕಲೆಗಳು ನಾಲ್ಕು ವಿಧಗಳಲ್ಲಿ ಇರುತ್ತವೆ ಅವುಗಳ ವಿವರ ಈ ಕೆಳಗಿನಂತಿದೆ

೧. **ಚಕ್ರದಾಟಗಳು**

೧. ಸಮರ ಕಲೆಗಳು

೩. ಕೋಲಿನಾಟಗಳು

೪. ಸಾಂಸ್ಕೃತಿಕ ಆಟಗಳು

೧. **ಚಕ್ರದಾಟಗಳು**

೧ ಮುಳ್ಳಿನ ಚಕ್ರ ತಿರುಗಿಸುವ ಆಟ

೨. ನಾಗರ ಫಣಿ ಆಟ

೩. ಬೆಂಕಿ ನಾಗರ ಫಣಿ ಆಟ

೪. ಬೆಂಕಿ ಚಕ್ರದಾಟ

೫. ಬೆಂಕಿ ಚಕ್ರವನ್ನು ತಿರುಗಿಸುತ್ತಾ ಹಣೆಯಿಂದ ನಿಂಬೆಹಣ್ಣು ತುಂಡಾಗುವಂತೆ ಹೊಡೆಯುವ ಆಟ.

೬. ಒಂದೇ ಕೈ ಬೆರಳಿನಿಂದ ಚೆಂಡಿನ ಚಕ್ರ ತಿರುಗಿಸುವ ಆಟ.

೨. **ಕೋಲಿನಾಟಗಳು**

೧. ಒಂದೇ ಕೈಯಿಂದ ಕಟ್ಟಿಗೆಯ ಕೋಲನ್ನು ತಿರುಗಿಸುವ ಆಟ.

೨. ಎರಡು ಕೈಯಲ್ಲಿ ಎರಡು ಬೆತ್ತದ ಕಟ್ಟಿಗೆಯನ್ನು ತಿರುಗಿಸುವ ಆಟ.

೩. ಒಂದು ಕಟ್ಟಿಗೆಯ ಎರಡು ತುದಿಗೆ ಬೆಂಕಿ ಹಚ್ಚಿ ಗರಗರನೆ ತಿರುಗಿಸುವ ಆಟ.

೪. ಒಂದು ಉದ್ದವಾದ ಕೋಲನ್ನು ಬರಿ ಕಾಲ್ ಕೆಳಗೆ ತಿರುಗಿಸುವ ಆಟ.

೩. **ಸಮರ ಕಲೆಗಳು**

೧ ದಾಲ್ ಪಟದ ಆಟ.

೨. ಒಬ್ಬ ವ್ಯಕ್ತಿಯ ತಲೆಯ ಮೇಲೆ ತೆಂಗಿನಕಾಯಿ ಇಟ್ಟು ಒಂದೇ ಏಟಿಗೆ ಎರಡು ತುಂಡಾಗುವಂತೆ ಬೆತ್ತದಿಂದ ಹೊಡೆಯುವ ಆಟ.

೩. ಕತ್ತಿವರಸೆ

೪. ಬಾಯಿಯಲ್ಲಿ ಸೀಮೆಎಣ್ಣೆ ಹಾಕಿಕೊಂಡು ಬೆಂಕಿ ಹಚ್ಚಿ, ಬಾಯಿಯಿಂದ ಬೆಂಕಿ ಪ್ರದರ್ಶನದ ಆಟ.

೫. ರಾಜ ಮಹಾರಾಜರ ಕಾಲದಲ್ಲಿ ಆಡುವ ದಾಲ್‌ಪಟದ ಆಟ.

೨೨. ಒಬ್ಬ ವ್ಯಕ್ತಿಯ ಕಾಲಿನ ಇಮ್ಮಡಿಯ ಕೆಳಗೆ ಉಳ್ಳಾಗಡ್ಡಿ(ಇರುಳ್ಳಿ)ಇಟ್ಟು ಇನ್ನೊಬ್ಬ ವ್ಯಕ್ತಿ ಕತ್ತಿಯಿಂದ ಆಟ ಆಡುತ್ತಲೇ ಉಳ್ಳಾಗಡಿ ಎರಡು ತುಂಡಾಗುವಂತೆ ಕತ್ತರಿಸುವ ಆಟ

೪. ಸಾಂಸ್ಕೃತಿಕ ಆಟಗಳು

೧. ಕೀಲು ಕುದುರೆ ಆಟ.

೨. ಗೊಂಬೆಯಾಟ.

೩. (ನಿಚ್ಚಣಿಕೆ ಏರುವ ಆಟ) ಬೆಂಕಿ ಚಕ್ರವನ್ನು ತಿರುಗಿಸುತ್ತ ನಿಚ್ಚಣಿಕೆ(ಏಣಿ)ಏರುವ ಆಟ

೪. ಸಂಬಾಳ ಬಾರಿಸುವ ವಾಧ್ಯ.

೫. ಕರಡಿ ಕುಣಿತದಾಟ

೨೩. ಆರು ಚಿಕ್ಕ ಪ್ಲೆಟ್ ಜೋಡಿಸಿರುವ ತಕ್ಕಡಿಯಲ್ಲಿ ಪ್ರತಿಯೊಂದು ಪ್ಲೇಟಿಗೂ ಒಂದೊಂದರಂತೆ ಆರು ಲಿಂಬೆಹಣ್ಣು ತಕ್ಕಡಿಯಲ್ಲಿಟ್ಟು ಲಿಂಬೆಹಣ್ಣು ಕೆಳಗೆ ಬೀಳದಂತೆ ತಕ್ಕಡಿಯನ್ನು ಗರಗರನೆ ತಿರುಗಿಸುವ ಆಟ.

೨೪. ೧೨ ಡ್ರಮ್‌ಸೆಟ್‌ಗಳನ್ನು ಬಾರಿಸುವ ಆಟ(ಸಂಬಾಳ)

ಇವು ಮಾಲ ಸಮುದಾಯವರ ಮುಖ್ಯವಾಗಿ ಈ ಕಲೆಯನ್ನು ಒಂದು ಪರಂಪರೆಯೆಂಬುವಂತೆ ಪೋಷಿಸಿಕೊಂಡು ಬಂದಿರುವರು. ಮಾಲಾ ಸಮುದಾಯದವರ ಪ್ರದರ್ಶನ ಕಲೆಗಳು ವಿಶೇಷವಾಗಿದ್ದು ತುಂಬಾ ಆಡಲಿಕ್ಕೆ ತುಂಬಾ ಕಠಿಣವಾಗಿರುತ್ತದೆ ಆದರೂ ಅವರು ತಮ್ಮ ಕಲಿಕೆಯ ಅಭ್ಯಾಸದಿಂದ ಅವುಗಳನ್ನು ಸುಲಭವಾಗಿ ಆಡುತ್ತಾರೆ ಈ ಎಲ್ಲಾ ಅಟದಿಂದಲೂ ಕೂಡ ತಮ್ಮ ಜೀವನ ನಿರ್ವಹಣೆ ಮಾಡಿಕೊಳ್ಳುತ್ತಾರೆ. ತಮ್ಮ ಪ್ರದರ್ಶನ ಕಲೆಗಳನ್ನು ರಾಜ್ಯ– ರಾಷ್ಟ್ರಮಟ್ಟದಲ್ಲಿಯೂ ಆಡುತ್ತಾರೆ ಮತ್ತು ಬೇರೆ ರಾಜ್ಯಗಳಿಗೂ ಪ್ರದರ್ಶನ ಕಲೆಗಳನ್ನು ಆಡಲು ಹೋಗುತ್ತಾರೆ ಕರ್ನಾಟಕ ರಾಜ್ಯದಲ್ಲಿ ಯಾವುದೇ ದೊಡ್ಡ ಜಾತ್ರೆಗಳಿರಲಿ ಆ ಜಾತ್ರೆಗಳಿಗೆ ಸಂಘದ ತಂಡದವರೆಲ್ಲಾ ಆಗಮಿಸಿ ತಮ್ಮ ಪ್ರದರ್ಶನ ಕಲೆಗಳನ್ನು ಆಡುತ್ತಾರೆ ಅಥವಾ ಪ್ರದರ್ಶಿಸುತ್ತಾರೆ. ಇವರಿಗೆ ತಮ್ಮ ಪ್ರದರ್ಶನ ಕಲೆಗಳಿಂದಾಗಿ ಸಾಕಷ್ಟು ಪ್ರಶಸ್ತಿ ಗರಿಗಳು ಕೂಡ ಬಂದಿರುತ್ತವೆ. ಪ್ರಮುಖವಾಗಿ ಮಾಲ ಸಮುದಾಯದವರ ಪ್ರದರ್ಶನ ಕಲೆಯ ಪ್ರದರ್ಶನದ ರೀತಿ ಈ ಕೆಳಗಿನಂತಿವೆ.

೧. ಚಕ್ರದಾಟಗಳು

೧) ಸಾದಾ ಚಂಡಿನ ಚಕ್ರ ತಿರುಗಿಸುವುದು

ವೃತ್ತಾಕಾರವಾಗಿ ಇರುವ ಕಬ್ಬಿಣದ ಚಕ್ರದ ನಡುವೆ ಕೈಯಿಂದ ಹಿಡಿದುಕೊಳ್ಳಲು ಉದ್ದನೆಯ ಕೋಲಿನಂತೆ ಇರುತ್ತದೆ. ಕಬ್ಬಿಣದ ಚಕ್ರದ ಸುತ್ತಲು ಎರಡರಿಂದ ಎರಡುವರೆ ಫೂಟ್ ಉದ್ದವಾಗಿ ಬಣ್ಣಬಣ್ಣದಿಂದ ಕೂಡಿದ ವಯರಿನ ದಾರದಿಂದ ಚಕ್ರಕ್ಕೆ ಇಳೆ ಬಿಟ್ಟು ಕಟ್ಟಿ ಬಿಗಿಯಾಗಿ ಹೆಣೆದಿರುತ್ತಾರೆ ವಯರಿನ ಸಹಾಯದಿಂದ ಹೆಣೆಯುವಾಗ ನಡುವೆ ಕಬ್ಬಿಣವನ್ನು ತುಂಬಿದ ಪ್ಲಾಸ್ಟಿಕ್ ಬಾಲ್ (ಚಂಡು) ನ್ನು ಹಾಕುತ್ತಾ ಮತ್ತು ಉಲಾಣದಿಂದ ತಯಾರಿಸಿದ ಪ್ಲಾಸ್ಟಿಕ್ ಹೂಗಳು ಇವೆಲ್ಲವುಗಳನ್ನು ಮೇಲಿನಿಂದ ಕೆಳಗಡೆವರೆಗೂ ಹಾಕುತ್ತಾ ಹೆಣೆದಿರುತ್ತಾರೆ. ತುತ್ತ ತುದಿಗೂ ಬಾಲ್‌ಗಳನ್ನು ಹಾಕಿ ಹೆಣೆದು ಇಳೆಬಿಟ್ಟಿರುತ್ತಾರೆ. ಬಾಲ್‌ಗಳು ಹೂಗಳು ಬಣ್ಣ–ಬಣ್ಣದಿಂದ ಕೂಡಿದ್ದು ಚಂಡಿನ ಚಕ್ರವು ನೋಡಲು

ಬಹಳ ಸುಂದರವಾಗಿ ಕಾಣುತ್ತದೆ. ಆ ಚಕ್ರಕ್ಕೆ ಸುಮಾರು ೪೨ ಬಾಲ್‌ಗಳನ್ನು ಹಾಕಿ ಹೆಣೆದಿರುತ್ತಾರೆ ಅದ್ದರಿಂದ ಚಂಡಿನ ಚಕ್ರವು ೨೫. ಕೆ.ಜಿ ತೂಕವನ್ನೊಳ್ಳಗೊಂಡಿರುತ್ತದೆ.

ಸಂಬಾಳ ಬಾರಿಸುವ ತಂಡ ಸಂಬಾಳ ಬಾರಿಸಲು ಪ್ರಾರಂಭಿಸಿದ ಮೇಲೆ ಎಲ್ಲಾ ಆಟಗಳನ್ನು ಪ್ರಾರಂಭಿಸುತ್ತಾರೆ. ಒಬ್ಬನೆ ವ್ಯಕ್ತಿಯ ಈ ಆಟವನ್ನು ಆಡುತ್ತಾನೆ. ಆ ವ್ಯಕ್ತಿಯ ಚಂಡಿನ ಚಕ್ರವನ್ನು ತೆಗೆದುಕೊಂಡು ಚಕ್ರಕ್ಕೆ ಉದ್ದವಾಗಿ ಅಂಟಕೊಂಡಿರುವ ಛಡಿಯನ್ನು ಹಿಡಿದುಕೊಂಡು ಅದನ್ನು ತಲೆಯ ಮೇಲಿನಿಂದ ಕೆಳಗೆ ಬಿಟ್ಟು ಹಿಡಿದಿರುತ್ತಾನೆ. ಆಗ ಆ ವ್ಯಕ್ತಿಯ ಚಕ್ರದ ನಡುವೆ(ಮದ್ಯ)ಆಗುತ್ತಾನೆ. ಸಂಬಾಳ ಬಾರಿಸಲು ಪ್ರಾರಂಭಿಸಿದ ಕೂಡಲೇ ಆಟವನ್ನು ಪ್ರಾರಂಭಿಸುತ್ತಾನೆ.

ಸಾಥಾ ಚೆಂಡಿನ ಚಕ್ರದಾಟದ ಹಂತಗಳು

೧) **ಮೊದಲನೆಯ ಸುತ್ತು:** ಆ ವ್ಯಕ್ತಿ ಚಂಡಿನ ಚಕ್ರದ ಛಡಿಯನ್ನು ಹಿಡಿದುಕೊಂಡು ತನ್ನ ತಲೆಯ ಮೇಲ್ಭಾಗದಲ್ಲಿ ಅದನ್ನು ರೌಂಡಾಗಿ ೧೦-೧೨ ಸುತ್ತು ಆ ಚಕ್ರವನ್ನು ನಿಲ್ಲಿಸದೆ ತಿರುಗಿಸುತ್ತಾನೆ. ತಿರುಗಿಸುವಾಗ ಚಂಡಿನ ಚಕ್ರವು ವೃತ್ತಾಕಾರವಾಗಿ ಕಾಣುತ್ತದೆ.***(ಛಾ:೩.೨೫)*** ನೋಡಲು ತುಂಬಾ ಸುಂದರವಾಗಿ ಬಣ್ಣದಿಂದ ಕೂಡಿದ್ದು ಸುಂದರವಾಗಿ ಕಾಣುತ್ತದೆ.

೨) **ಎರಡನೆಯ ಸುತ್ತು:** ಹಾಗೆಯೇ ಮೊದಲಿನ ಸುತ್ತಿನಲ್ಲಿದ್ದ ಚಕ್ರವನ್ನು ನಿಲ್ಲಿಸದೆ ಅದೇ ವ್ಯಕ್ತಿ ಆ ಚಕ್ರ ತಿರುಗಿಸುತ್ತಾನೆ ತನ್ನ ಎರಡು ಮೊಂಡೆಗಳನ್ನು ನೆಲಕ್ಕೆ ಊರಿ ಕುಳಿತು ಮುಂದಕ್ಕೆ ಬಾಗಿ ತನ್ನ ಎರಡು ಕೈಗಳ ಜೊತೆಗೆ ಚಕ್ರವನ್ನು ತಿರುಗಿಸುತ್ತಾ ತನ್ನ ಬೆನ್ನಿನ ಹಿಂದಕ್ಕೆ ಆ ಚಂಡಿನ ಚಕ್ರವನ್ನು ಎತ್ತಿ ತನ್ನ ಬೆನ್ನಿನ ಮೇಲ್ಬಾಗದಲ್ಲಿ ೧೦-೧೨ ಸುತ್ತು ಚಕ್ರವನ್ನು ತಿರುಗಿಸುತ್ತಾನೆ.***(ಛಾ:೩.೨೬)***

೩) **ಮೂರನೆಯ ಸುತ್ತು:** ಹಾಗೆಯೇ ಎರಡನೆಯ ಸುತ್ತಿನಲ್ಲಿದ್ದ ಚಕ್ರವನ್ನು ನಿಲ್ಲಿಸದೆ ಅದೇ ವ್ಯಕ್ತಿ ತನ್ನ ಮೊಂಡೆಗಳನ್ನು ನೆಲಕ್ಕೆ ಊರಿ ಹಿಂದಕ್ಕೆ ಬಾಗಿ ತನ್ನ ಹೊಟ್ಟೆಯ ಮೇಲ್ಭಾಗದಲ್ಲಿ ೧೦-೧೨ ಸುತ್ತು ಚಂಡಿನ ಚಕ್ರವನ್ನು ತಿರುಗಿಸುತ್ತಾನೆ.***(ಛಾ:೩.೨೭)***

೪) **ನಾಲ್ಕನೆಯ ಸುತ್ತು:** ಹಾಗಯೇ ಮೂರನೆಯ ಸುತ್ತಿನಲ್ಲಿದ್ದ ಚಕ್ರವನ್ನು ನಿಲ್ಲಿಸದೇ ತನ್ನ ಎರಡು ಮೊಂಡೆಯೂರಿ ತನ್ನ ಮೊಂಡೆಯಿಂದ ವೃತ್ತಾಕಾರವಾಗಿ ತಿರುಗುತ್ತಾ ಆ ಚಕ್ರವನ್ನು ಮೇಲಕ್ಕೆತ್ತಿ ತಿರುಗಿಸುತ್ತಾನೆ ತಿರುಗಿಸುವಾಗ ನೆಲದ ಮೇಲಿದ್ದ ೧೦ ರೂ ದುಡ್ಡನ್ನು ಬಾಗಿ ತನ್ನ ಬಾಯಿಯಿಂದ ಅಥವಾ ಹಲ್ಲಿನಿಂದ ತೆಗೆದುಕೊಳ್ಳುತ್ತಾ ಮತ್ತೆ ಆಟವನ್ನು ಮುಂದುವರೆಸುತ್ತಾನೆ.***(ಛಾ:೩.೨೮)***

೫) **ಐದನೆಯ ಸುತ್ತು:** ತಿರುಗಿಸುತ್ತಿರುವ ಚಕ್ರವನ್ನು ಹಾಗೇ ನಿಲ್ಲಿಸದೇ ನೆಲದ ಮೇಲೆ ಕುಳಿತುಕೊಂಡಿರುವ ಬೇರೆ ವ್ಯಕ್ತಿಯ ಎರಡು ಬುಜದ ಮೇಲೆ ಹತ್ತಿ ನಿಂತು ಚಂಡಿನ ಚಕ್ರ ತಿರುಗಿಸುತ್ತಾನೆ ಮತ್ತು ಎದ್ದು ನಿಂತು ಆ ಚಕ್ರವನ್ನು ಹನ್ನೆರಡು ಸುತ್ತು ತಿರುಗಿಸುತ್ತಾನೆ.

೬) **ಆರನೆಯ ಸುತ್ತು:** ಹಾಗೆಯೇ ಅದೆ ಚಂಡಿನ ಚಕ್ರವನ್ನು ತಿರುಗಿಸುತ್ತಾ ಆ ಚಕ್ರವನ್ನು ಮತ್ತೊಬ್ಬ ವ್ಯಕ್ತಿಯ ಕೈಯಲ್ಲಿ ಕೊಡುತ್ತಾನೆ .ಆ ವ್ಯಕ್ತಿಯ ತಿರುಗುತ್ತಿರುವ ಅದೇ ಚಂಡಿನ ಚಕ್ರವನ್ನು ತೆಗೆದುಕೊಂಡು ಅದನ್ನು ತಿರುಗಿಸುತ್ತಲೇ ಅಂಗಾತ ಉದ್ದವಾಗಿ ಮಲಗಿ ಆ ಚಂಡನ್ನು ತಿರುಗಿಸುವುದು, ತಿರುವುತ್ತಲೇ

ಹಿಂದಕ್ಕೆ ಮತ್ತು ಮುಂದಕ್ಕೆ ಉರುಳುವುದನ್ನು ಮಾಡುತ್ತಾನೆ. ಈ ಎಲ್ಲಾ ವಿಧಗಳನ್ನು ಆಡುವಾಗ ಆ ಚಕ್ರವನ್ನು ತಮ್ಮ ದೇಹದ ಯಾವುದೇ ಭಾಗಕ್ಕೆ ಬಡಿಸಿಕೊಳ್ಳುವುದಿಲ್ಲ.(ಛಾ:೩.೨೯)

೨) ಮುಳ್ಳಿನ ಚಕ್ರ ತಿರುಗಿಸುವ ಆಟ

ಒಂದು ಕಬ್ಬಿಣದ ಚಕ್ರಕ್ಕೆ ಸುತ್ತಲೂ ಆರು ರಂದ್ರಗಳನ್ನು ಹಾಕಿ ಪ್ರತಿಯೊಂದು ರಂದ್ರಕ್ಕೂ ದಪ್ಪನೆಯ ವೈಯರಿನ ದಾರವನ್ನು ಇಳೆಬಿಟ್ಟು ಪ್ರತಿಯೊಂದು ಹಗ್ಗದ ತುದಿಗೂ ಅಡವಿಯಲ್ಲಿ ಸಿಗುವ ದಪ್ಪನೆಯ ಮುಳ್ಳು ಅದಕ್ಕೆ ಡೊಣ್ಣೆ ಮುಳ್ಳು ಎನ್ನುತ್ತಾರೆ. ಆ ಡೊಣ್ಣೆ ಮುಳ್ಳುಗಳನ್ನು ಪ್ರತಿಯೊಂದು ವಯರಿನ ತುದಿಗೆ ಬಿಗಿಯಾಗಿ ಕಟ್ಟಿ ನಾಲ್ಕು ಮುಳ್ಳುಗಳನ್ನು ಹೊಂದಿರುವ ಎರಡು ಮುಳ್ಳನ್ನು ಇಟ್ಟು ಹೆಣೆಯುತ್ತಾರೆ. ಒಂದೊಂದು ದಾರದ ಎಳೆಯ ತುದಿಗೆ ಎಂಟು ಮುಳ್ಳುಗಳು ಇರುತ್ತವೆ ಒಟ್ಟಿನಲ್ಲಿ ಐವತ್ತು ಮುಳ್ಳುಗಳನ್ನು ಮುಳ್ಳಿನ ಚಕ್ರವು ಹೊಂದಿರುತ್ತದೆ ಅದು ಸುಮಾರು ಹನ್ನೆರಡು ಕೆ.ಜಿ ಇರುತ್ತದೆ.

♦ ಸಂಬಾಳ ಬಾರಿಸುವ ತಂಡ ಸಂಬಾಳ ಬಾರಿಸಲು ಪ್ರಾರಂಭಿಸಿದ ಮೇಲೆ ಮುಳ್ಳಿನ ಚಕ್ರದಾಟವನ್ನು ಒಬ್ಬನೇ ವ್ಯಕ್ತಿಯು ಆ ಆಟವನ್ನು ಆಡಲು ಪ್ರಾರಂಭಿಸುತ್ತಾನೆ. ಆ ಚಕ್ರಕ್ಕೆ ಅಂಟಿರುವ ಛಡಿಯನ್ನು ಹಿಡಿದುಕೊಂಡು ತನ್ನ ತಲೆಯ ಮೇಲೆ ಹಿಡಿದಾಗ ಆ ವ್ಯಕ್ತಿ ಚಕ್ರದ ನಡುವೆ ಆಗುತ್ತಾನೆ.

ಮುಳ್ಳಿನ ಚಕ್ರದ ಆಟದ ಹಂತಗಳು

೧. **ಮೊದಲನೆಯ ಸುತ್ತು:** ಆ ವ್ಯಕ್ತಿಯು ಮುಳ್ಳಿನ ಚಕ್ರವನ್ನು ಹಿಡಿದುಕೊಂಡು ತನ್ನ ಎರಡು ಕೈಯಿಂದ ತನ್ನ ತಲೆಯ ಮೇಲ್ಭಾಗಕ್ಕೆ ಎತ್ತಿ ಅದನ್ನು ರೌಂಡಾಗಿ ಹನ್ನೆರಡು ಸುತ್ತು ಮುಳ್ಳಿನ ಚಕ್ರವನ್ನು ತಿರುಗಿಸುತ್ತಾನೆ. ತಿರುಗಿಸುವಾಗ ಆ ಮುಳ್ಳುಗಳನ್ನು ತಮ್ಮ ದೇಹದ ಯವುದೇ ಭಾಗಕ್ಕೆ ಬಡಿಯಲಾರದೆ ಆಡುತ್ತಾರೆ.

೨. **ಎರಡನೆಯ ಸುತ್ತು:** ಹಾಗಯೇ ಮೊದಲನೆಯ ಸುತ್ತಿನಲ್ಲಿದ್ದ ಮುಳ್ಳಿನ ಚಕ್ರವನ್ನು ನಿಲ್ಲಿಸದೆ ಅದೇ ವ್ಯಕ್ತಿ ಮುಳ್ಳಿನ ಚಕ್ರವನ್ನು ತಿರುಗಿಸುತ್ತಾ ತನ್ನ ಎರಡು ಮೊಂಡೆಯೂರಿ ನೆಲಕ್ಕೆ ಕುಳಿತು ಮುಂದಕ್ಕೆ ಬಾಗಿ ತನ್ನ ಎರಡು ಕೈಗಳ ಜೊತೆಗೆ ಚಕ್ರವನ್ನು ತಿರುಗಿಸುತ್ತಾ ತನ್ನ ಬೆನ್ನಿನ ಹಿಂದಕ್ಕೆ ಆ ಚಕ್ರವನ್ನು ಎತ್ತಿ ಬೆನ್ನಿನ ಮೇಲ್ಭಾಗದಲ್ಲಿ ಹನ್ನೆರಡು ಸುತ್ತು ಮುಳ್ಳಿನ ಚಕ್ರವನ್ನು ತಿರುಗಿಸುತ್ತಾನೆ.

೩. **ಮೂರನೆಯ ಸುತ್ತು:** ಹಾಗೆಯೇ ಎರಡನೆಯ ಸುತ್ತಿನಲ್ಲಿದ್ದ ಚಕ್ರವನ್ನು ನಿಲ್ಲಿಸದೇ ಅದೇ ವ್ಯಕ್ತಿ ತನ್ನ ಎರಡು ಮೊಂಡೆಗಳನ್ನು ನೆಲಕ್ಕೆ ಊರಿ ಹಿಂದಕ್ಕೆ ಬಾಗಿ ತನ್ನ ಹೊಟ್ಟೆಯ ಮೇಲ್ಭಾಗದಲ್ಲಿ ತನ್ನ ಎರಡು ಕೈಗಳನ್ನು ತಂದು ಹತ್ತು ಸುತ್ತು ಮುಳ್ಳಿನ ಚಕ್ರವನ್ನು ತಿರುಗಿಸುತ್ತಾನೆ.

೪. **ನಾಲ್ಕನೆಯ ಸುತ್ತು:** ಹಾಗೆಯೇ ಮೂರನೇ ಸುತ್ತಿನಲ್ಲಿದ್ದ ಚಕ್ರವನ್ನು ನಿಲ್ಲಿಸದೆ ನೆಲಕ್ಕೆ ತನ್ನ ಎರಡು ಮೊಂಡೆಯೂರಿ ತನ್ನ ಮೊಂಡೆಯಿಂದ ವೃತ್ತಾಕಾರವಾಗಿ ತಿರುಗುತ್ತಾ ಆ ಮುಳ್ಳಿನ ಚಕ್ರವನ್ನು ಮೇಲಕ್ಕೆತ್ತಿ ತಿರುಗಿಸುತ್ತಾನೆ. ತಿರುಗಿಸುವಾಗ ನೆಲದ ಮೇಲಿದ್ದ ೧೦ ರೂ ದುಡ್ಡನ್ನು ಬಗ್ಗಿ ತನ್ನ ಬಾಯಿ ಅಥವಾ ಹಲ್ಲಿನಿಂದ ತೆಗೆದುಕೊಳ್ಳುತ್ತಾನೆ.

೫. ಐದನೆಯ ಸುತ್ತು: ತಿರುಗುತ್ತಿರುವ ಚಕ್ರವನ್ನು ಹಾಗೆಯೇ ನಿಲ್ಲಿಸದೇ ನೆಲದ ಮೇಲೆ ಕುಳಿತುಕೊಂಡಿರುವ ಬೇರೆ ವ್ಯಕ್ತಿಯ ಎರಡು ಬುಜದ ಮೇಲೆ ಮುಳ್ಳಿನ ಚಕ್ರ ತಿರುಗಿಸುತ್ತಲೆ ಎರಡು ಕಾಲುಗಳನ್ನಿಟ್ಟು ಎದ್ದು ನಿಂತು ಆ ಚಕ್ರವನ್ನು ಹನ್ನೊಂದು ಸುತ್ತು ತಿರುಗಿಸುತ್ತಾನೆ.

೬. ಆರನೆಯ ಸುತ್ತು: ಹಾಗಯೇ ಮುಳ್ಳಿನ ಚಕ್ರವನ್ನು ತಿರುಗಿಸುತ್ತಾ ಆ ಚಕ್ರವನ್ನು ಮತ್ತೊಬ್ಬ ವ್ಯಕ್ತಿಯ ಕೈಯಲ್ಲಿ ಮುಳ್ಳಿನ ಚಕ್ರವನ್ನು ಕೊಡುತ್ತಾನೆ. ಆ ವ್ಯಕ್ತಿ ತಿರುಗುತ್ತಿರುವ ಮುಳ್ಳಿನ ಚಕ್ರವನ್ನು ತೆಗೆದುಕೊಂಡು ಅದನ್ನು ತಿರುಗಿಸುತ್ತಾ ಅಂಗಾತ ಮತ್ತು ಉದ್ದವಾಗಿ ಮಲಗಿ ತಿರುಗಿಸುವುದು ತಿರುವುತ್ತಲೇ ಹಿಂದಕ್ಕೆ ಮತ್ತು ಮುಂದಕ್ಕೆ ಉರಳುವುದನ್ನು ಮಾಡುತ್ತಾನೆ.

೩. ನಾಗರಫಣಿ ಆಟ

ನಾಗರ ಫಣಿ ತಯಾರಿಸುವ ವಿಧಾನ

ತುಂಡು ತುಂಡಾದ ಆರು ಬೆತ್ತದ ಕಟ್ಟಿಗೆಯನ್ನು ತೆಗೆದುಕೊಂಡು ನಾಲ್ಕು ಕಟ್ಟಿಗೆಯ ತುಂಡುಗಳಿಂದ ಚೌಕಾಕಾರವಾದ ಒಂದು ಸಾಧನವನ್ನು ಜೋಡಿಸುತ್ತಾರೆ. ನಂತರ ಚೌಕಾಕಾರವಾಗಿ ಜೋಡಿಸಿದ ಸಾಧನದ ಒಳಗೆ ಮೂಲಿ ಮೂಲಿಗೂ ಕತ್ರಿಬತ್ರಿಯಾಗಿ ಅಥವಾ ಇಂಟು ಆಕಾರವಾಗಿ ಎರಡು ಕಟ್ಟಿಗೆಯನ್ನು ಇಟ್ಟು ಜೋಡಿಸುತ್ತಾರೆ. ನಂತರ ಚೌಕಾಕಾರದ ಸಾಧನದ ನಾಲ್ಕು ಮೂಲಿ ಮೂಲಿಗೂ ರಂದ್ರಗಳನ್ನು ಹಾಕಿ ಉಲಾಣದಿಂದ ದಪ್ಪವಾಗಿ ಹೆಣೆದ ದಾರವನ್ನ ಎರಡು ಮೂಟಿನಷ್ಟು ಇಳೆ(ಜೋತು) ಬಿಡುತ್ತಾರೆ. ಪ್ರತಿಯೊಂದು ದಾರದ ತುದಿ ತುದಿಗೂ ತಿರುಗಿಸುವ ಬುಗುರಿಯನ್ನು ಕಟ್ಟುತ್ತಾರೆ. ಒಂದೊಂದು ಬುಗುರಿಯ ಸುತ್ತಲೂ ಒಂದು ಇಂಚಿನ ಎಂಟು ಮಳೆಗಳನ್ನು ಬಡಿದಿರುತ್ತಾರೆ.

ಆಡುವ ವಿಧಾನ

ಆ ನಾಲ್ಕು ಬುಗುರಿಗಳಿಗೂ ಇದ್ದ ಇಂಚು ಮಳೆಗಳ ಸಂಖ್ಯೆ ೩೨ ಒಟ್ಟಿನಲ್ಲಿ ಆ ನಾಗರ ಪಣಿ ೧೫ ಕೆ.ಜಿ ತೂಕವಿರುತ್ತದೆ. ಸಂಬಾಳ ಬಾರಿಸುವ ತಂಡವು ಸಂಬಾಳ ಬಾರಿಸಲು ಪ್ರಾರಂಭಿಸಿದ ಮೇಲೆ ನಾಗರ ಫಣಿ ಆಟವನ್ನು ಒಬ್ಬನೆ ವ್ಯಕ್ತಿಯು ಆಡಲು ಪ್ರಾರಂಭಿಸುತ್ತಾನೆ. ನಾಗರ ಫಣಿಯನ್ನು ವ್ಯಕ್ತಿಯು ತನ್ನ ತಲೆಯ ಮೇಲೆ ಏರಿಸಿಕೊಂಡು ವೃತ್ತಾಕಾರವಾಗಿ ಸುತ್ತುವನು. ಅವನು ವೃತ್ತಾಕಾರವಾಗಿ ಕೈಬಿಟ್ಟು ಸುತ್ತಿದಂತೆಲ್ಲಾ ಜಡೆಯಾಕಾರದಲ್ಲಿದ್ದ ನಾಗರದಂತೆ ಅಗಲಕ್ಕೆ ಬಿಚ್ಚಿಕೊಂಡು ನೋಡುಗರಿಗೆ ಕುತೂಹಲವುಂಟುಮಾಡುವುದು.

೧. ಮೊದಲನೆಯ ಹಂತ: ಒಬ್ಬ ವ್ಯಕ್ತಿಯು ನಾಗರಫಣಿಯನ್ನು ಹಿಡಿದುಕೊಂಡು ತನ್ನ ಎರಡು ಕೈಯಿಂದ ತಲೆಯ ಮೆಲ್ಬಾಗಕ್ಕೆ ಎತ್ತಿಕೊಂಡು ಹತ್ತರಿಂದ ಹನ್ನೆರಡು ಸುತ್ತು ಸುತ್ತತೊಡಗುತ್ತಾನೆ. ನಾಗರ ಫಣಿಗಳು ಅವನ ದೇಹಕ್ಕೆ ತಾಗದೆ ವೃತ್ತಾಕಾರವಾಗಿ ತಿರುಗುತ್ತವೆ.

೨. ಎರಡನೆಯ ಹಂತ: ಎರಡನೆಯ ಹಂತದಲ್ಲಿ ನಾಗರ ಫಣಿಯನ್ನು ನಿಲ್ಲಿಸದೆ ವೃತ್ತಾಕಾರವಾಗಿ ಸುತ್ತುತ್ತಲೇ ನಿಧಾನವಾಗಿ ನೆಲದ ಮೇಲೆ ತನ್ನ ಮೊಂಡೆಯೂರಿ ಕುಳಿತುಕೊಳ್ಳುತ್ತಾನೆ. ಅವನು ಕುಳಿತರೂ ಕೂಡ ತಲೆಯ ಮೇಲಿನ ನಾಗರ ಫಣಿಯ ಚಕ್ರವನ್ನು ತಿರುಗಿಸುತ್ತಲೇ ಇರುತ್ತಾನೆ. ನಾಗರ ಫಣಿ

ತಿರುಗುವುದು ನಿಧಾನವಾದ ನಂತರ ತನ್ನ ಕೈಗಳಿಂದ ಚಕ್ರವನ್ನು ಜೋರಾಗಿ ತಿರುಗಿಸತೊಡಗುತ್ತಾನೆ. ಹೀಗೆ ನಾಗರ ಪಣಿಯನ್ನು ತಿರುಗಿಸುತ್ತಾ ತನ್ನ ಬೆನ್ನಿನ ಹಿಂದಕ್ಕೆ ಆ ಚಕ್ರವನ್ನು ಜಾರಿಸಿ ತನ್ನ ಬೆನ್ನಿನ ಮೇಲ್ಭಾಗದಲ್ಲಿಯೂ ಸಹ ಆ ಚಕ್ರವನ್ನು ತಿರುಗಿಸುತ್ತಾನೆ.

೩. **ಮೂರನೆಯ ಹಂತದಲ್ಲಿ:** ಬೆನ್ನಿನ ಮೇಲೆ ತಿರುಗುತ್ತಿರುನ ನಾಗರ ಫಣಿಯನ್ನು ತಿರುಗುವ ಹಂತದಲ್ಲಿಯೇ ತನ್ನ ಎದೆಯ ಭಾಗಕ್ಕೆ ಜಾರಿಸಿಕೊಳ್ಳುವನು. ತನ್ನ ಕಾಲು ಮತ್ತು ಕೈಗಳನ್ನು ನೆಲದ ಮೇಲೆ ಊರಿ ಅಂಗಾತ ಮಲಗಿಕೊಂಡು ನಾಗರಫಣಿ ತಿರುಗಲು ಅನುವುಮಾಡಿಕೊಡುವನು ಮತ್ತು ಅಂಗಾತ ಮಲಗಿ ನಾಗರ ಫಣಿಯನ್ನು ಹತ್ತರಿಂದ ಹನ್ನೆರಡು ಸುತ್ತು ಅದನ್ನು ತಿರುಗಿಸುತ್ತಾನೆ.

೪. **ನಾಲ್ಕನೆಯ ಹಂತದಲ್ಲಿ:** ಎದೆಯ ಮೇಲೆ ತಿರುಗುತ್ತಿರುವ ನಾಗರ ಫಣಿಯನ್ನು ನಿಲ್ಲಿಸದೆ ತನ್ನ ಎರಡು ಮೊಂಡೆಗಳನ್ನು ನೆಲಕ್ಕೆ ಊರಿ ವೃತ್ತಾಕಾರವಾಗಿ ತಿರುಗುತ್ತಾ ತಿರುಗಿಸುವಾಗ ನೆಲದ ಮೇಲೆ ಹಾಕಿದ್ದ ಹತ್ತು ರೂಪಾಯಿ ಹಣವನ್ನ ಕೆಳಗೆ ಬಾಗಿ ತನ್ನ ಹಲ್ಲಿನಿಂದ ತೆಗೆದುಕೊಳ್ಳುತ್ತಾ ನಾಗರ ಫಣಿಯನ್ನು ತಿರುಗಿಸುತ್ತಾನೆ.

೫. **ಐದನೆಯ ಹಂತ:** ತಿರುಗುತ್ತಿರುವ ನಾಗರ ಫಣಿಯನ್ನು ಹಾಗೆಯೇ ನಿಲ್ಲಿಸದೆ ನೆಲದ ಮೇಲೆ ಕುಳಿತುಕೊಂಡಿರುವ ಇನ್ನೊಬ್ಬ ವ್ಯಕ್ತಿಯ ಬುಜದ ಮೇಲೆ ತನ್ನ ಎರಡು ಕಾಲುಗಳನ್ನು ಇಟ್ಟು ಎದ್ದು ನಿಂತು ಮತ್ತೆ ನಾಗರಫಣಿಯನ್ನು ತನ್ನ ತಲೆಯ ಮೇಲ್ಭಾಗದಲ್ಲಿ ತಿರುಗಿಸುತ್ತಾನೆ.

೬. **ಆರನೆಯ ಹಂತದಲ್ಲಿ:** ಆ ವ್ಯಕ್ತಿಯು ನಾಗರ ಫಣಿಯನ್ನು ತಿರುಗಿಸುತ್ತಲೆ ಅದನ್ನು ಮತ್ತೊಬ್ಬನ ಕೈಗೆ ಕೊಡುವನು. ಇನ್ನೊಬ್ಬ ವ್ಯಕ್ತಿ ಆ ಆಟವನ್ನು ಮುಂದುವರೆಸುವನು. ಅವನು ತಿರುಗುತ್ತಿರುವ ನಾಗರ ಫಣಿಯನ್ನು ತಗೆದುಕೊಂಡು ಅದನ್ನು ತಿರುಗಿಸುತ್ತಲೆ ಅಂಗಾತ ಮತ್ತು ಉದ್ದವಾಗಿ ಮಲಗಿ ತನ್ನ ಹೊಟ್ಟೆಯ ಮೇಲ್ಭಾಗದಲ್ಲಿ ನಾಗರಫಣಿಯನ್ನು ತಿರುಗಿಸುವುದು ಮತ್ತು ತಿರುಗಿಸುತ್ತಲೆ ಹಿಂದಕ್ಕೆ ಉರುಳುವುದು ಮತ್ತು ಮುಂದಕ್ಕೆ ಉರುಳುವುದನ್ನು ಮಾಡುತ್ತಾ ನಾಗರ ಫಣಿಯನ್ನು ತಿರುಗಿಸುತ್ತಾನೆ.

೪. **ಬೆಂಕಿ ನಾಗರಫಣಿ ಆಟ:** ಅಡವಿಯಲ್ಲಿ ಎರಡು ಬೆತ್ತದ ಕಟ್ಟಿಗೆಯನ್ನು ಕಡಿದುಕೊಂಡು ತಂದು ಅವುಗಳನ್ನು ಕತ್ರಿ-ಬತ್ರಿಯಾಗಿ ಮತ್ತು ಇಂಟು ಆಕಾರವಾಗಿ ಜೊಡಿಸಿ ಕಟ್ಟಿಗೆಯ ನಾಲ್ಕು ಮೂಲಿಮೂಲಿಗೂ ಒಂದೊಂದು ರಂದ್ರವನ್ನು ಹಾಕಿ ಪ್ರತಿಯೊಂದು ಮೂಲಿಗೂ ಎರಡು ಫೂಟ್ ಉದ್ದವಾಗಿರುವ ಕಬ್ಬಿಣದ ಸರಪಣಿಯನ್ನು ಉದ್ದವಾಗಿ ಜೊತು ಬಿಡುತ್ತಾರೆ. ಪ್ರತಿಯೊಂದು ಸರಪಳಿಯ ತುದಿಗೆ ಒಂದೊಂದು ಕಬ್ಬಿಣದ ರಿಂಗನ್ನು ಹಾಕಿ ಆ ಕಬ್ಬಿಣದ ರಿಂಗಿನ ತುಂಬ ಕಾಟನ್ ಬಟ್ಟೆಯನ್ನು ಸುತ್ತಿರುತ್ತಾರೆ. ಆ ಬಟ್ಟೆ ಸುತ್ತಿದ ನಾಲ್ಕು ಮೂಲಿ ಮೂಲಿಯ ರಿಂಗಿಗು ಸಿಮೆಎಣ್ಣೆಯನ್ನು ಉಣಿಸಿ ನಾಲ್ಕು ಕಡೆ ಬೆಂಕಿ ಹಚ್ಚಿ ಅದು ಉರಿಯುವಾಗಲೆ ಬೆಂಕಿ ನಾಗರ ಫಣಿ ಆಟವನ್ನು ಆಡುತ್ತಾನೆ.

ಬೆಂಕಿ ನಾಗರ ಫಣಿ ಆಟದ ಹಂತಗಳು

೧. **ಮೊದಲನೆಯ ಹಂತ:** ಒಬ್ಬ ವ್ಯಕ್ತಿ ಉರಿಯುತ್ತಿರುವ ಬೆಂಕಿ ನಾಗರ ಫಣಿಯನ್ನು ಹಿಡಿದುಕೊಂಡು ತನ್ನ ಎರಡು ಕೈಯಿಂದ ಅದನ್ನು ಎತ್ತಿಕೊಂಡು ತನ್ನ ತಲೆಯ ಮೇಲ್ಭಾಗದಲ್ಲಿ ಅದನ್ನು ಎತ್ತಿಕೊಂಡು ಹತ್ತರಿಂದ ಹನ್ನೆರಡು ಸುತ್ತು ಬೆಂಕಿ ನಾಗರ ಫಣಿಯನ್ನು ತಿರುಗಿಸುತ್ತಾನೆ.*(ಛಾ:೩.೨೯)*

೨. ಹಾಗೆಯೇ ತಿರುಗುತ್ತಿರುವ ಬೆಂಕಿ ನಾಗರಫಣಿಯನ್ನು ನಿಲ್ಲಿಸದೆ ಅದೇ ವ್ಯಕ್ತಿ ತನ್ನ ಎರಡು ಮೊಂಡೆಗಳನ್ನ ನೆಲಕ್ಕೆ ಊರಿ ಹಿಂದಕ್ಕೆ ಬಾಗಿ ತನ್ನ ಹೊಟ್ಟೆಯ ಮೇಲ್ಬಾಗದಲ್ಲಿ ಮತ್ತು ಬೆನ್ನಿನ ಮೇಲೆ ಬೆಂಕಿ ನಾಗರಫಣಿಯನ್ನು ತಿರುಗಿಸುತ್ತಾನೆ ಮತ್ತು ತನ್ನ ಮೊಂಡೆಯಿಂದ ವೃತ್ತಾಕಾರವಾಗಿ ತಿರುಗುತ್ತ ಬೆಂಕಿ ನಾಗರಫಣಿಯನ್ನು ತಿರಗಿಸುತ್ತಾನೆ ಮತ್ತು ಅದನ್ನು ತಿರುಗಿಸುತ್ತಲೆ ನೆಲದ ಮೇಲಿನ ಹಣವನ್ನು ತನ್ನ ಹಲ್ಲಿನಿಂದ ಕೆಳಗೆ ಬಾಗಿ ತಗೆದುಕೊಳ್ಳುತ್ತಾ ಆ ಆಟವನ್ನು ಮುಂದುವರೆಸುತ್ತಾನೆ.

೩. ತಿರುಗುತ್ತಿರುವ ಬೆಂಕಿ ನಾಗರ ಫಣಿಯನ್ನು ಹಾಗೆಯೇ ನಿಲ್ಲಿಸದೆ ನೆಲದ ಮೇಲೆ ಕುಳಿತುಕೊಂಡಿರುವ ಇನ್ನೊಬ್ಬ ವ್ಯಕ್ತಿಯ ಎರಡು ಬುಜದ ಮೇಲೆ ನಾಗರಫಣಿಯನ್ನು ತಿರುಗಿಸುತ್ತಲೆ ತನ್ನ ಎರಡು ಕಾಲುಗಳನ್ನು ಇಟ್ಟು ಎದ್ದು ನಿಂತು ಉರಿಯುತ್ತಿರುವ ಬೆಂಕಿ ನಾಗರಫಣಿಯನ್ನು ಹಿಡಿದುಕೊಂಡು ಹತ್ತರಿಂದ ಹನ್ನೆರಡು ಸುತ್ತು ತನ್ನ ತಲೆಯ ಮೇಲ್ಬಾಗದಲ್ಲಿ ಅದನ್ನು ತಿರುಗಿಸುತ್ತಾನೆ.

೪. ಹಾಗೆಯೇ ಉರಿಯುತ್ತಿರುವ ಬೆಂಕಿ ನಾಗರಫಣಿಯನ್ನು ತಿರುಗಿಸುತ್ತಾ ಆ ಬೆಂಕಿ ನಾಗರಫಣಿಯನ್ನು ಮತ್ತೊಬ್ಬ ವ್ಯಕ್ತಿಯ ಕೈಯಲ್ಲಿ ಅದನ್ನು ತಿರುಗಿಸುತ್ತಲೆ ಕೊಡುತ್ತಾನೆ ಅದನ್ನು ತಗೆದುಕೊಂಡ ವ್ಯಕ್ತಿಯು ಉದ್ದವಾಗಿ ಅಂಗಾತ ಮಲಗಿ ತನ್ನ ಹೊಟ್ಟೆಯ ಮೇಲ್ಬಾಗದಲ್ಲಿ ಬೆಂಕಿ ನಾಗರಫಣಿಯನ್ನು ತಿರುಗಿಸುತ್ತಾನೆ. ಅದನ್ನು ತಿರುಗಿಸುತ್ತಲೆ ನೆಲದ ಮೇಲೆ ಹೊರಳಾಡುತ್ತಾನೆ. ಆಟದ ಎಲ್ಲಾ ಹಂತಗಳು ಮುಗಿದ ಮೇಲೆ ಬೆಂಕಿಯನ್ನು ಆರಿಸುತ್ತಾನೆ.

೫ ಬೆಂಕಿ ಚಕ್ರದ ಆಟ: ಅಡವಿಯಲ್ಲಿ ಸಿಗುವ ಬೆತ್ತದ ಕಟ್ಟಿಗೆಯನ್ನು ಕಡಿದುಕೊಂಡು ಬಂದು ಆ ಕಟ್ಟಿಗೆಯನ್ನು ಒಂದು ದಿವಸ ಪೂರ್ತಿಯಾಗಿ ನೀರಿನಲ್ಲಿ ಹಾಕಿ ಆದನ್ನು ನೆನೆಯಲು ಬಿಡುತ್ತಾರೆ ಅದು ನೆನೆದ ಮೇಲೆ ಎರಡನೆ ದಿವಸ ಆ ಕಟ್ಟಿಗೆಯನ್ನು ತೆಗೆದುಕೊಂಡು ಆ ನೆನೆದ ಕಟ್ಟಿಗೆಯ ತುಂಬ ಒಳ್ಳೆಣ್ಣಿಯನ್ನು ಹಚ್ಚಿ ಆ ಕಟ್ಟಿಗೆಯನ್ನು ಬೆಂಕಿಯ ಹೊಗೆಗೆ ಕಾಯಿಸುತ್ತಾರೆ ಆಗ ಆ ಕಟ್ಟಿಗೆ ಮೃದುವಾಗುತ್ತದೆ. ನಂತರ ಅದನ್ನು ರೌಂಡಾಗಿ ಚಕ್ರಾಕಾರವಾಗಿ ಮಾರ್ಪಡಿಸಿಕೊಳ್ಳುತ್ತಾರೆ. ನಂತರ ಆ ಚಕ್ರಕ್ಕೆ ಸುತ್ತಲು ಆರು ರಂದ್ರಗಳನ್ನು ಹಾಕಿ ಪ್ರತಿಯೊಂದು ರಂದ್ರಕ್ಕೂ ಎರಡು ಪೋಟ್ ಉದ್ದವಾಗಿ ಕಬ್ಬಿಣದ ಸರಪಣಿಯನ್ನು ಜೊತು ಬಿಟ್ಟು ಪ್ರತಿಯೊಂದು ಸರಪಳಿಯ ತುದಿಗೆ ಅಗಲವಾಗಿರುವ ವೃತ್ತಾಕಾರವಾಗಿರುವ ಕಬ್ಬಿಣದ ರಿಂಗನ್ನು ಹಾಕಿ ಆ ರಿಂಗಿನ ಸುತ್ತಲು ದಪ್ಪವಾಗಿರುವ ಕಾಟನ್ ಅರಬಿ(ಬಟ್ಟೆ)ಯನ್ನು ಸುತ್ತುತ್ತಾರೆ. ಆ ಕಾಟನ್ ಅರಬಿ ಸುತ್ತಿದ ಆರು ರಿಂಗಿಗು ಸಿಮೆಎಣ್ಣೆಯನ್ನು ಹಾಕಿ ಬೆಂಕಿ ಹಚ್ಚಿ ಅದು ಉರಿಯಲು ಪ್ರಾರಂಭಿಸಿದ ಕೂಡಲೇ ಒಬ್ಬ ವ್ಯಕ್ತಿಯು ಬೆಂಕಿ ಚಕ್ರದ ಆಟವನ್ನು ಆಡಲು ಪ್ರಾರಂಭಿಸುತ್ತಾನೆ.

ಬೆಂಕಿ ಚಕ್ರದಾಟದ ಹಂತಗಳು

೧. **ಮೊದಲನೆಯ ಹಂತ:** ಒಬ್ಬ ವ್ಯಕ್ತಿಯು ಉರಿಯುತ್ತಿರುವ ಬೆಂಕಿ ಚಕ್ರವನ್ನು ಹಿಡಿದುಕೊಂಡು ತನ್ನ ಎರಡು ಕೈಯಿಂದ ತನ್ನ ತಲೆಯ ಮೇಲ್ಬಾಗಕ್ಕೆ ಎತ್ತಿ ಹಿಡಿದುಕೊಂಡು ಬೆಂಕಿ ಚಕ್ರವನ್ನು ಹತ್ತರಿಂದ ಹದಿನೈದು ಸುತ್ತು ತಿರುಗಿಸುತ್ತಾನೆ. ಅದನ್ನು ತಿರುಗಿಸುವಾಗ ಆ ವ್ಯಕ್ತಿ ತನ್ನ ದೇಹದ ಯಾವುದೇ ಭಾಗಕ್ಕೆ ಬೆಂಕಿ ಚಕ್ರವನ್ನು ಬಡಿಸಿಕೊಳ್ಳುವದಿಲ್ಲ.*(ಭಾ:೩.೩೦)*

೨. **ಎರಡನೆಯ ಹಂತ:** ಹಾಗೆಯೇ ತಿರುಗಿಸುತ್ತಿರುವ ಬೆಂಕಿ ಚಕ್ರವನ್ನು ನಿಲ್ಲಿಸದೆ ಆ ವ್ಯಕ್ತಿಯು ಬೆಂಕಿ ಚಕ್ರವನ್ನು ತಿರುಗಿಸುತ್ತಾ ನೆಲದ ಮೇಲೆ ತನ್ನ ಎರಡು ಮೊಂಡೆಗಳನ್ನು ಊರಿ ಕುಳಿತು ಮುಂದಕ್ಕೆ ಬಾಗಿ ತನ್ನ ಎರಡು ಕೈಯಿಂದ ಉರಿಯುತ್ತಿರುವ ಬೆಂಕಿ ಚಕ್ರವನ್ನು ತಿರುಗಿಸುತ್ತಾ ತನ್ನ ಬೆನ್ನಿನ ಹಿಂದೆ ಬೆಂಕಿ ಚಕ್ರವನ್ನು ತೆಗೆದುಕೊಂಡು ಹತ್ತರಿಂದ ಹನ್ನೆರಡು ಬಾರಿ ಬೆಂಕಿ ಚಕ್ರವನ್ನು ತಿರುಗಿಸುತ್ತಾನೆ.

೩. ಹಾಗೆಯೆ ತಿರುಗುತ್ತಿರುವ ಬೆಂಕಿ ಚಕ್ರವನ್ನು ನಿಲ್ಲಿಸದೆ ತನ್ನ ಎರಡು ಮೊಂಡೆಗಳನ್ನು ನೆಲಕ್ಕೆ ಊರಿ ಹಿಂದಕ್ಕೆ ಬಾಗಿ ತನ್ನ ಹೊಟ್ಟೆಯ ಮೇಲ್ಭಾಗದಲ್ಲಿ ಉರಿಯುತ್ತಿರುವ ಬೆಂಕಿ ಚಕ್ರವನ್ನು ಗರಗರನೆ ತಿರುಗಿಸುತ್ತಾನೆ.

೪. ಹಾಗೆಯೆ ತಿರುಗುತ್ತಿರುವ ಬೆಂಕಿ ಚಕ್ರವನ್ನು ನಿಲ್ಲಿಸದೆ ತನ್ನ ಎರಡು ಕಾಲಿನ ಮೊಂಡೆಗಳನ್ನು ನೆಲಕ್ಕೆ ಊರಿ ವೃತ್ತಾಕಾರವಾಗಿ ತಿರುಗುತ್ತಾ ಉರಿಯುತ್ತಿರುವ ಬೆಂಕಿ ಚಕ್ರವನ್ನು ತಿರುಗಿಸುತ್ತಾನೆ. ತಿರುಗಿಸುತ್ತಲೆ ನೆಲದ ಮೇಲೆ ಇದ್ದಂತಹ ಹತ್ತು ರೂಪಾಯಿ ನೋಟನ್ನು ಬಾಗಿ ತನ್ನ ಹಲ್ಲಿನಿಂದ ತೆಗೆದುಕೊಂಡು ಆ ಚಕ್ರ ತಿರುಗಿಸುತ್ತಲೆ ಮೇಲಕ್ಕೆ ಏದ್ದೇಳುತ್ತಾನೆ.

೫. ತಿರುಗುತ್ತಿರುವ ಬೆಂಕಿ ಚಕ್ರವನ್ನು ಹಾಗೆಯೇ ನಿಲ್ಲಿಸದೆ ನೆಲದ ಮೇಲೆ ಕುಳಿತುಕೊಂಡಿರುವ ವ್ಯಕ್ತಿಯ ಬುಜದ ಮೇಲೆ ತನ್ನ ಎರಡು ಕಾಲುಗಳನ್ನು ಇಟ್ಟು ಎದ್ದು ನಿಂತು ಹತ್ತರಿಂದ ಹನ್ನೆರಡು ಸುತ್ತು ಉರಿಯುತ್ತಿರುವ ಬೆಂಕಿ ಚಕ್ರವನ್ನು ತನ್ನ ತಲೆಯ ಮೇಲ್ಭಾಗದಲ್ಲಿ ತಿರುಗಿಸುತ್ತಾನೆ.

೬. ಹಾಗೆಯೇ ಉರಿಯುತ್ತಿರುವ ಬೆಂಕಿ ಚಕ್ರವನ್ನು ತಿರುಗಿಸುತ್ತ ಆ ಬೆಂಕಿ ಚಕ್ರವನ್ನು ಮತ್ತೊಬ್ಬ ವ್ಯಕ್ತಿಯ ಕೈಯಲ್ಲಿ ಕೊಡುತ್ತಾನೆ. ನಂತರ ಇನ್ನೊಬ್ಬ ವ್ಯಕ್ತಿ ಆ ಬೆಂಕಿ ಚಕ್ರವನ್ನು ವಿಧ-ವಿಧವಾದ ರೀತಿಯಲ್ಲಿ ತಿರುಗಿಸಲು ಪ್ರಾರಂಭಿಸುತ್ತಾನೆ.

೬. ಸಾದಾ ಚಂಡಿನ ಚಕ್ರ ತಿರುಗಿಸುತ್ತಲೆ ಹಣೆಯಿಂದ ಲಿಂಬೆಹಣ್ಣನ್ನು ಎರಡು ತುಂಡಾಗಿಸುವ ಆಟ: ಸಾದಾ ಚೆಂಡಿನ ಚಕ್ರವನ್ನು ತಿರುಗಿಸುವ ಪೂರ್ವದಲ್ಲಿ ನೆಲದ ಮೇಲೆ ಚೌಕಾಕಾರವಾಗಿ ನಾಲ್ಕು ಲಿಂಬೆಹಣ್ಣು ಮತ್ತು ಅವುಗಳ ನಡುವೆ ಇನ್ನೊಂದು ಲಿಂಬೆಹಣ್ಣು ಒಟ್ಟು ಐದು ಲಿಂಬೆ ಹಣ್ಣುಗಳನ್ನು ಇಟ್ಟಿರುತ್ತಾರೆ. ಆ ವ್ಯಕ್ತಿಯು ಸಾಧಾ ಚೆಂಡಿನ ಚಕ್ರವನ್ನು ತನ್ನ ತಲೆಯ ಮೇಲ್ಭಾಗದಲ್ಲಿ ತಿರುಗಿಸುತ್ತಲೆ ತನ್ನ ಎರಡು ಮೊಂಡೆಗಳನ್ನು ನೆಲಕ್ಕೆ ಹಚ್ಚಿ ತನ್ನ ಮೊಂಡೆಯಿಂದ ರೌಂಡಾಗಿ ತಿರುಗುತ್ತಾ ಸಾದಾ ಚೆಂಡಿನ ಚಕ್ರವನ್ನು ತಿರುಗಿಸುತ್ತ ಕೆಳಗೆ ಬಾಗಿ ನೆಲದ ಮೇಲಿನ ಲಿಂಬೆಹಣ್ಣನ್ನು ಒಂದೊಂದಾಗಿ ತನ್ನ ಹಣೆಯಿಂದ ಆ ಲಿಂಬೆಹಣ್ಣುಗಳು ಒಂದೇ ಏಟಿನಲ್ಲಿ ಎರಡು ತುಂಡಾಗುವಂತೆ ಹೊಡೆಯುತ್ತಾ ಸಾದಾ ಚೆಂಡಿನ ಚಕ್ರವನ್ನು ಆಡುತ್ತಾನೆ*(ಛಾ:೩.೩೧)*

೭. ಒಂದೇ ಕೈ ಬೇರಳಿನಿಂದ ಸಾಧಾ ಚೆಂಡಿನ ಚಕ್ರ ತಿರುಗಿಸುವ ಆಟ.

ಸಂಬಾಳ ಬಾರಿಸುವ ತಂಡ ಸಂಬಾಳ ಬಾರಿಸಲು ಪ್ರಾರಂಭಿಸಿದ ಕೂಡಲೇ ಒಬ್ಬ ವ್ಯಕ್ತಿಯು ಸಾದಾ ಚೆಂಡಿನ ಚಕ್ರವನ್ನು ತೆಗೆದುಕೊಂಡು ತನ್ನ ತಲೆಯ ಮೇಲೆ ಎತ್ತಿಕೊಂಡು ಆ ಚಕ್ರವನ್ನು ತನ್ನ ಬಲಗೈ ತೊಳ್ಬೆರಳಿನಲ್ಲಿ ಹಿಡಿದು ಎದ್ದು ನಿಂತು ತನ್ನ ದೇಹದ ಯಾವುದೇ ಭಾಗಕ್ಕೆ ಬಡಿಸಿಕೊಳ್ಳಲಾರದೆ ಹತ್ತರಿಂದ ಹನ್ನೆರಡು ಸುತ್ತು ಸಾದಾ ಚೆಂಡಿನ ಚಕ್ರವನ್ನು ತಿರುಗಿಸುತ್ತಾನೆ.*(ಛಾ:೩.೩೨)*

೩. ಕೋಲಿನ ಆಟಗಳು

೧. ಎರಡು ಮಾರಿನಷ್ಟು ಉದ್ದವಿರುವ ಕಟ್ಟಿಗೆಯನ್ನ ಒಂದೇ ಕೈಯಲ್ಲಿ ಹಿಡಿದು ತಿರುಗಿಸುವ ಆಟ.

ಒಂದು ಮಾರಿನಷ್ಟು ಉದ್ದ ನೇರವಾಗಿ ಬೆಳೆದಿರುವ ಕಟ್ಟಿಗೆಯನ್ನು ಅಡವಿಯಲ್ಲಿ ಹುಡುಕಿ ಆ ಕಟ್ಟಿಗೆಯನ್ನು ಕಡಿದುಕೊಂಡು ತಮ್ಮ ಮನೆಗೆ ತಂದು ಆ ಕಟ್ಟಿಗೆಯ ಕೋಲನ್ನು ರೌಂಡ್ ಸೆಫ್ ಬರುವ ಹಾಗೆ ಸಾಫಾಗುವಂತೆ ಕೆತ್ತಿ ಆ ಕೋಲಿಗೆ ಅಗಸೆ ಎಣ್ಣೆಯನ್ನು ಹಚ್ಚುತ್ತಾರೆ. ಆ ಎಣ್ಣೆ ಒಣಗಿದ ಮೇಲೆ ಆ ಕೋಲುಗಳಿಗೆ ಕತ್ರಿ-ಬತ್ರಿಯಾಗಿರುವಂತೆ ಕಂದುಬಣ್ಣದಿಂದ ಚಿತ್ರವನ್ನು ಬಿಡಿಸಿರುತ್ತಾರೆ.

ಆಟ ಆಡುವ ವಿಧಾನ.

ಒಬ್ಬನೆ ವ್ಯಕ್ತಿಯು ಈ ಆಟವನ್ನು ಆಡುತ್ತಾನೆ ಸಂಬಾಳ ಬಾರಿಸುವ ತಂಡ ಸಂಬಾಳ ಬಾರಿಸಲು ಪ್ರಾರಂಭಿಸಿದ ಕೂಡಲೆ ಈ ಆಟವನ್ನು ಆಡಲು ಪ್ರಾರಂಭಿಸುತ್ತಾನೆ. ಒಂದು ಮಾರು ಉದ್ದವಾಗಿರುವ ಕೋಲನ್ನು ತನ್ನ ಬಲಗೈಗೆ ತಗೆದುಕೊಂಡು ತನ್ನ ದೇಹದ ಯಾವುದೇ ಭಾಗಕ್ಕೆ ಬಡಿಸಿಕೊಳ್ಳಲಾರದೆ ತನ್ನ ಬಲಗೈಯಿಂದ ಆ ಕೋಲನ್ನು ಗಿರಗಿರನೆ ಚಕ್ರಾಕಾರವಾಗಿ ಕಾಣುವಂತೆ ತಿರುಗಿಸುತ್ತಾನೆ. ತನ್ನ ಬೆನ್ನಿನ ಹಿಂದೆ ತಿರುಗಿಸುವುದು. ತನ್ನ ಪಕ್ಕಡಿಯ ಭಾಗದ ಕಡೆಗೆ ತಿರುಗಿಸುವುದು. ಹಾಗೆ ನಿಲ್ಲಿಸದೆ ಆ ಕೋಲನ್ನು ತನ್ನ ಎಡಗೈಗೆ ತಗೆದುಕೊಂಡು ಎಡಗೈಯಿಂದಲು ಸಹ ಆ ಕೋಲನ್ನು ಚಕ್ರಾಕಾರವಾಗಿ ಕಾಣುವಂತೆ ತನ್ನ ದೇಹದ ಎಲ್ಲಾ ಭಾಗದ ಕಡೆ, ತನ್ನ ಬೆನ್ನಿನ ಹಿಂದೆ, ತನ್ನ ಎರಡು ಪಕ್ಕಡಿಯ ಭಾಗದ ಕಡೆಗೆ ಮತ್ತು ತನ್ನ ತೊಡೆಯ ಕೆಳಗಡೆಯಿಂದ ತಿರುಗುತ್ತಿರುವ ಕೋಲನ್ನು ತಂದು ಆ ಕೋಲಿನ ತುದಿಯನ್ನು ತಂದು ನೆಲಕ್ಕೆ ಬಡಿಸುತ್ತಾನೆ.(ಛಾ:೩.೩೩)

೨. ಎರಡು ಕೋಲನ್ನು ಹಿಡಿದುಕೊಂಡು ಒಮ್ಮೆಲೆ ತಿರುಗಿಸುವ ಆಟ:

ಒಬ್ಬನೆ ವ್ಯಕ್ತಿಯು ಎಡಗೈಲೊಂದು ಬಲಗೈಲೊಂದು ಕೋಲನ್ನು ಹಿಡಿದುಕೊಂಡು ಆ ಎರಡು ಕೋಲನ್ನು ತನ್ನ ಎರಡು ಬುಜದ ಮೇಲೆ ಎತ್ತಿಕೊಂಡು ಆ ಎರಡು ಕೋಲುಗಳನ್ನ ಚಕ್ರಾಕಾರವಾಗಿ ಕಾಣುವಂತೆ ತಿರುಗಿಸುತ್ತಾನೆ ಮತ್ತು ಆ ಕೋಲುಗಳನ್ನು ತನ್ನ ದೇಹದ ಎಲ್ಲಾ ಭಾಗದ ಕಡೆ ಬಡಿಸಿಕೊಳ್ಳಲಾರದೆ ಗರಗರನೆ ತಿರುಗಿಸುತ್ತಾನೆ.*(ಛಾ:೩.೩೪)*

೩. ಒಂದು ಕೋಲಿನ ಎರಡು ತುದಿಗೆ ಬೆಂಕಿ ಹಚ್ಚಿ ತಿರುಗಿಸುವ ಆಟ

ಒಂದು ಉದ್ದವಿರುವ ಒಂದು ಕೋಲಿನ ಎರಡು ತುದಿ-ತುದಿಗೂ ಒಂದೊಂದು ರಂದ್ರವನ್ನು ಹಾಕಿ ಆ ತುದಿಗೆ ಕಬ್ಬಿಣದ ರಿಂಗನ್ನು ಹಾಕಿ ಆ ರಿಂಗಿನ ತುಂಬ ಕಾಟನ್ ಅರಬಿಯನ್ನು ಸುತ್ತಿ ಆ ಅರಬಿಗೆ ಸಿಮೆಎಣ್ಣೆಯನ್ನು ಹಾಕಿ ಬೆಂಕಿಯನ್ನು ಹಚ್ಚಿದ ಮೇಲೆ ಉರಿಯುತ್ತಿರುವ ಕೋಲನ್ನು ತೆಗೆದುಕೊಂಡು ಆಟವನ್ನು ಪ್ರಾರಂಭಿಸುತ್ತಾನೆ.

ಆಡುವ ವಿಧಾನ

ಉರಿಯುತ್ತಿರುವ ಕೋಲನ್ನು ತನ್ನ ಬಲಗೈಯಲ್ಲಿ ಹಿಡಿದುಕೊಂಡು ತನ್ನ ದೇಹದ ಯಾವುದೇ ಭಾಗಕ್ಕೆ ಬಡಿಸಿಕೊಳ್ಳಲಾರದೆ ತನ್ನ ಬಲಗೈಯಿಂದ ತನ್ನ ಬುಜದ ಮೇಲ್ಗಡೆ ಕೋಲನ್ನು ಎತ್ತಿಕೊಂಡು

ಆ ಕೋಲು ಚಕ್ರಾಕಾರವಾಗಿ ಕಾಣುವಂತೆ ಗಿರಗಿರನೆ ತಿರುಗಿಸುತ್ತಾನೆ. ಬೆಂಕಿ ಹತ್ತಿ ಉರಿಯುತ್ತಿರುವ ಕೋಲನ್ನು ತನ್ನ ಬೆನ್ನಿನ ಮೇಲ್ಭಾಗದಲ್ಲಿ ತಿರುಗಿಸುವುದು ತನ್ನ ಪಕ್ಕಡಿಯ ಭಾಗದ ಕಡೆ ತಿರುಗಿಸುವುದು ಹಾಗೆಯೇ ನಿಲ್ಲಿಸದೆ ಉರಿಯುತ್ತಿರುವ ಕೋಲನ್ನು ತನ್ನ ಎಡಗೈಗೆ ತೆಗೆದುಕೊಂಡು ಎಡಗೈಯಿಂದಲು ಸಹ ತನ್ನ ಬುಜದ ಮೇಲೆ ತನ್ನ ಪಕ್ಕಡಿಯ ಭಾಗದ ಕಡೆಗೆ ತನ್ನ ದೇಹದ ಸುತ್ತಲು ಗಿರಗಿರನೆ ಬೆಂಕಿ ಕೋಲನ್ನ ತಿರುಗಿಸುತ್ತಾನೆ.*(ಭಾ:೩.೩೫)*

೪. ಕಾಲಿನ ಅಥವಾ ತೊಡೆಯ ಕೆಳಗಡೆ ಕೋಲನ್ನು ತಿರುಗಿಸುವ ಆಟ

ಒಂದು ಮಾರು ಉದ್ದವಿರುವ ಕೋಲನ್ನು ತೆಗೆದುಕೊಂದು ಆ ವ್ಯಕ್ತಿಯು ಗರಗರನೆ ತಿರುಗಿಸುತ್ತಾ ತನ್ನ ತೊಡೆಯ ಕೆಳಗಡೆ ಕೋಲನ್ನು ತೆಗೆದುಕೊಂಡು ಮತ್ತೆ ಆ ಕೋಲನ್ನು ವೃತ್ತಾಕಾರವಾಗಿ ತಿರುಗುತ್ತಾ ಗಿರಗಿರನೆ ತಿರುಗಿಸುತ್ತಾನೆ.*(ಭಾ:೩.೩೬)*

೫. ಕೊಲಿನ ಚಕ್ರ ತಿರುಗಿಸುವ ಆಟ.

ಕೊಲಿನ ಚಕ್ರವನ್ನು ಒಬ್ಬ ವ್ಯಕ್ತಿ ತೆಗೆದುಕೊಂಡು ಎರಡು ಕೈಯಿಂದ ಹಿಡಿದುಕೊಂಡು ಅದನ್ನು ಎದ್ದು ನಿಂತು ಗರಗರನೆ ತಿರುಗುತ್ತ ಆ ಕಟ್ಟಿಗೆಯ ಚಕ್ರವನ್ನು ತಿರುಗಿಸುತ್ತಾನೆ.*(ಭಾ:೩.೩೭)*

ಮತ್ತು ಕಟ್ಟಿಗೆಯ ಚಕ್ರವನ್ನು ತಿರುಗಿಸುತ್ತಾ ನೆಲಕ್ಕೆ ಬಾಗಿ ತನ್ನ ಬೆನ್ನಿನ ಮೇಲೆ ಆ ಕೋಲಿನ ಚಕ್ರವನ್ನು ತಿರುಗಿಸುತ್ತಾನೆ.*(ಭಾ:೩.೩೮)*

೪. ಸಮರ ಕಲೆಗಳು

ಮಾಲ ಸಮುದಾಯದವರು ಆಡುವ ತಮ್ಮ ವಂಶಪಾರಂಪರಿಕ ಕಲೆಗಳಲ್ಲಿ ಅಥವಾ ಆಟಗಳಲ್ಲಿ ಕೆಲವು ಆಟಗಳು ಬಹಳ ಅಪಾಯಕಾರಿಯಾಗಿರುತ್ತವೆ. ಅಂತಹ ಕಲೆಗಳಿಗೆ ಸಮರ ಕಲೆಗಳು ಎಂದು ಕರೆಯುತ್ತಾರೆ. ಅವುಗಳೆಂದರೆ ಕತ್ತಿಯಿಂದ ಆಡುವಂತಹ ವಿವಿಧ ರೀತಿಯ ಆಟಗಳು ಈ ಕೆಳಗಿರುತ್ತವೆ.

೧ .ಒಬ್ಬ ವ್ಯಕ್ತಿಯು ಕತ್ತಿಯನ್ನು ಹಿಡಿದುಕೊಂಡು ಗಿರಗಿರನೆ ತಿರುಗಿಸುತ್ತಾ ಆಡುತ್ತಲೆ ನೆಲದ ಮೇಲಿನ ಐದು ಬದನೆಕಾಯಿಗಳನ್ನು ಒಂದೇ ಏಟಿಗೆ ಕತ್ತಿಯಿಂದ ಎರಡು ತುಂಡಾಗುವಂತೆ ಕತ್ತರಿಸುವ ಆಟ.*(ಭಾ:೩.೩೯)*

೨. ಒಬ್ಬ ಕುಳಿತ ವ್ಯಕ್ತಿಯ ಹೆಗಲಿನ ಮೇಲೆ ಸೌತೆಕಾಯಿಯನ್ನು ಇಟ್ಟು ಇನ್ನೊಬ್ಬ ವ್ಯಕ್ತಿ ಕತ್ತಿಯನ್ನು ಹಿಡಿದುಕೊಂಡು ಗಿರಗಿರನೆ ತಿರುಗುಸುತ್ತಾ ಆಟ ಆಡುತ್ತಲೇ ಭುಜದ ಮೇಲಿನ ಸೌತೆಕಾಯಿಯನ್ನು ಎರಡು ತುಂಡಾಗುವಂತೆ ಕತ್ತರಿಸುವ ಆಟ.*(ಭಾ:೩.೪೦)*

೩. ಒಬ್ಬ ವ್ಯಕ್ತಿಯನ್ನು ಅಂಗಾತ ಮಲಗಿಸಿ ಆತನ ಹೊಟ್ಟೆಯ ಮೇಲೆ ಸೌತೆಕಾಯಿಯನ್ನು ಇಟ್ಟು ಇನ್ನೊಬ್ಬ ವ್ಯಕ್ತಿ ಕತ್ತಿಯನ್ನು ಹಿಡಿದುಕೊಂಡು ಗಿರಗಿರನೆ ತಿರುಗುಸುತ್ತಾ ಆಟ ಆಡುತ್ತಲೇ ಹೊಟ್ಟೆಯ ಮೇಲಿನ ಸೌತೆಕಾಯಿಯನ್ನು ಎರಡು ತುಂಡಾಗುವಂತೆ ಕತ್ತರಿಸುವ ಆಟ.*(ಭಾ:೩.೪೧)*

೪. ಮೂರು ಕತ್ತಿಯನ್ನು ಕತ್ರಿಬತ್ರಿಯಾಗಿ ಹಿಡಿದುಕೊಂಡು ಆಡುವ ಆಟ, ತಲೆಯ ಮೇಲಿನ ತೆಂಗಿನಕಾಯಿಯನ್ನು ಕೋಲಿನಿಂದ ತುಂಡಾಗುವಂತೆ ಹೊಡೆಯುವ ಆಟ.

೫. ಬೆಂಕಿ ಪ್ರದರ್ಶನ ಆಟ, ಕತ್ತಿವರಸೆಯ ಆಟ, ಕಿತ್ತೂರು ಚನ್ನಮ್ಮನ ಆಟ ಇವು ಮಾಲ ಸಮುದಾಯದವರು ಆಡುವಂತಹ ಸಮರ ಕಲೆಗಳಾಗಿರುತ್ತವೆ.

೬. ಒಬ್ಬ ವ್ಯಕ್ತಿಯ ಕಾಲಿನ ಇಮ್ಮುಡಿಯ ಕೆಳಗೆ (ಉಳ್ಳಾಗಡ್ಡಿ) ಈರುಳ್ಳಿಯನ್ನು ಇಟ್ಟು, ಇನ್ನೊಬ್ಬ ವ್ಯಕ್ತಿಯು ಕತ್ತಿಯಿಂದ ಆಟ ಆಡುತ್ತಲೆ ಇಮ್ಮುಡಿಯ ಕೆಳಗಿನ ಉಳ್ಳಾಗಡ್ಡಿ ಎರಡು ತುಂಡಾಗುವಂತೆ ಕತ್ತಿಯಿಂದ ಕತ್ತರಿಸುವ ಆಟ.

೭. ಒಬ್ಬ ಮನುಷ್ಯನನ್ನು ಒಂದು ದೊಡ್ಡ ಮೈದಾನ ಅಥವಾ ಗ್ರೌಂಡಿನಲ್ಲಿ ನಿಲ್ಲಿಸಿ ಆ ಮನುಷ್ಯನ ಇಮ್ಮಡಿಯ ಕೆಳಗೆ ಉಳ್ಳಾಗಡ್ಡಿ (ಈರುಳ್ಳಿ) ಯನ್ನು ಇಟ್ಟಿರುತ್ತಾರೆ. ಇನ್ನೂಬ್ಬ ವ್ಯಕ್ತಿಯು ಉದ್ದವಾದ ಅರಿತವಾದ ಕತ್ತಿಯನ್ನು ಹಿಡಿದುಕೊಂಡು ಗಿರಗಿರನೆ ತಿರುಗಿಸುತ್ತಾ ತನ್ನ ಕಾಲಿನ ಕೆಳಗೆ ತನ್ನ ಬೆನ್ನಿನ ಮೇಲೆ ತನ್ನ ಮೈ ಸುತ್ತಲು ದೂರದಿಂದ ತಿರುಗಿಸುತ್ತಾ ಬರುತ್ತಲೆ ಇನ್ನೊಬ್ಬ ಮನುಷ್ಯನ ಇಮ್ಮಡಿಯ ಕೆಳಗಿರುವ ಉಳ್ಳಾಗಡ್ಡಿಯನ್ನು ಒಂದೇ ಹೊಡೆತಕ್ಕೆ ಎರಡು ತುಂಡುಗಳಾಗುವಂತೆ ಕತ್ತಿಯಿಂದ ಹೊಡೆಯುತ್ತಾನೆ. ಈ ಆಟವನ್ನು ಪ್ರಮುಖ ಜಾತ್ರೆ ಉತ್ಸವಗಳಲ್ಲಿ ಆಡುತ್ತಾರೆ.

೮. ದಾಲ್ಪಟದ ಆಟ

ಒಂದು ಮಾರು ಉದ್ದವಿರುವ ಕತ್ತಿಯನ್ನು ಹಿಡಿದು ಆಡುವ ಆಟ ಇದಾಗಿದೆ. ಮಧ್ಯಯುಗಿನ ಕಾಲದಲ್ಲಿ ಎದುರಾಳಿಗಳನ್ನು ಸೆದೆಬಡಿಯಲು ಉಪಯೋಗಿಸುವ ತಂತ್ರಗಳನ್ನು ಹಿಡಿದುಕೊಂಡು ಆಡುವ ಆಟ ಇದಾಗಿದೆ.*(ಭಾ:೩.೪೨)*

ಆಡುವ ವಿಧಾನ

ಒಬ್ಬನೆ ವ್ಯಕ್ತಿಯು ಈ ಆಟವನ್ನು ಆಡುತ್ತಾನೆ ಸಂಬಾಳ ಬಾರಿಸುವ ತಂಡವು ಸಂಬಾಳ ಬಾರಿಸಲು ಪ್ರಾರಂಭಿಸಿದ ಕೂಡಲೆ ಈ ಆಟವನ್ನು ಪ್ರಾರಂಭಿಸುತ್ತಾನೆ. ಒಂದು ಮಾರು ಉದ್ದವಿರುವ ಕತ್ತಿಯನ್ನು ತನ್ನ ಬಲಗೈಯಲ್ಲಿ ಹಿಡಿದುಕೊಂಡು ತನ್ನ ಬುಜದ ಮೇಲೆ ತನ್ನ ಬೆನ್ನಿನ ಹಿಂಭಾಗದಲ್ಲಿ ತನ್ನ ಪಕ್ಕಡಿಯ ಭಾಗದ ಕಡೆ ಕತ್ತಿಯನ್ನು ಹಿಡಿದುಕೊಂಡು ತಿರುಗಿಸುತ್ತಾನೆ. ಅದನ್ನು ತಿರುಗಿಸುತ್ತಾ ತಾನು ರೌಂಡಾಗಿ ತಿರುಗುತ್ತಾನೆ.*(ಭಾ:೩.೪೩)*

ದಾಲ್ ಪಟದ ಆಟವನ್ನು ಆಡುವದಕ್ಕಿಂತ ಪೂರ್ವದಲ್ಲಿ ನೆಲದ ಮೇಲೆ ಈರುಳ್ಳಿ (ಉಳ್ಳಾಗಡ್ಡಿ) ಅಥವಾ ಐದು ಬದನೆಕಾಯಿಯನ್ನು ನೆಲದ ಮೇಲೆ ಇಟ್ಟಿರುತ್ತಾರೆ. ಆ ವ್ಯಕ್ತಿಯು ಕತ್ತಿಯನ್ನು ಹಿಡಿದುಕೊಂಡು ತನ್ನ ಬುಜದ ಮೇಲೆ, ಬೆನ್ನಿನ ಮೇಲೆ, ತನ್ನ ಮೈ ಸುತ್ತಲು ಕತ್ತಿಯನ್ನು ತಿರುಗಿಸುತ್ತಲೆ ನೆಲದ ಮೇಲೆ ಇರುವ ಇರುಳ್ಳಿ ಅಥವಾ ಬದನೆಕಾಯಿಯನ್ನು ಕತ್ತಿಯಿಂದ ಒಂದೇ ಹೊಡೆತಕ್ಕೆ ಎರಡು ತುಂಡಾಗುವಂತೆ ಹೊಡೆಯುತ್ತಾನೆ.*(ಭಾ:೩.೪೪)*

೯. ದಾಲ್ ಪಟದ ಇನ್ನೊಂದು ಆಟವೆಂದರೆ ಒಂದು ಮಾರು ಉದ್ದವಿರುವ ಮೂರು ಕತ್ತಿಯನ್ನು ಒಮ್ಮೆಲೆ ಕೈಯಲ್ಲಿ ಹಿಡಿದುಕೊಂಡು ಆಟವಾಡುತ್ತಾರೆ. ಅಂದರೆ ಬಲಗೈಯಲ್ಲಿ ಎರಡು ಕತ್ತಿಯನ್ನು ಕತ್ರಿಬತ್ರಿಯಾಗಿ ಹಿಡಿದುಕೊಂಡು ಎಡಗೈಯಲ್ಲಿ ಒಂದು ಕತ್ತಿಯನ್ನು ಹಿಡಿದುಕೊಂಡು ಆ ಎರಡು

ಕತ್ತಿಗಳನ್ನು ತನ್ನ ಸುತ್ತಲು ಗಿರಗಿರನೆ ತಿರುಗಿಸುತ್ತಾ ನೆಲದ ಮೇಲಿದ್ದ ಬದನೆಕಾಯಿಯನ್ನು ಒಂದೊಂದಾಗಿ ಕತ್ತಿಯಿಂದ ಒಂದೇ ಹೊಡೆತಕ್ಕೆ ಎರಡು ತುಂಡಾಗುವಂತೆ ಕತ್ತಿಯಿಂದ ಹೊಡೆಯುತ್ತಾನೆ.*(ಛಾ:೩.೪೫)*

೧೦. ತಲೆಯ ಮೇಲೆ ತೆಂಗಿನಕಾಯಿ ಇಟ್ಟು ಒಂದೇ ಹೊಡೆತಕ್ಕೆ ಎರಡು ತುಂಡಾಗುವಂತೆ ಹೊಡೆಯುವ ಆಟ: ನೆಲದ ಮೇಲೆ ಕುಳಿತುಕೊಂಡಿರುವ ಒಬ್ಬ ಮನುಷ್ಯನ ತಲೆಯ ಮೇಲೆ ಒಂದು ವೃತ್ತಾಕಾರದ ಸಿಂಬೆಯನ್ನು ಇಟ್ಟು ಅದರ ನಡುವೆ(ಮದ್ಯ) ಒಂದು ಸುಲಿದ ತೆಂಗಿನಕಾಯಿಯನ್ನು ತಲೆಯ ಮೇಲೆ ನೇರವಾಗಿ ನೀಲ ಇಟ್ಟಿರುತ್ತಾರೆ. ಆ ಆಟವನ್ನು ಆಡುವ ಒಬ್ಬ ವ್ಯಕ್ತಿಯು ಒಂದು ಮಾರು ಉದ್ದವಿರುವ ಕೋಲನ್ನು ಗಿರಗರನೆ ಕತ್ರಿಬತ್ರಿಯಾಗಿ ಹಿಡಿದುಕೊಂಡು ಚಕ್ರಾಕಾರವಾಗುವಂತೆ ಆ ಕೋಲನ್ನು ಪಟಪಟನೆ ತಿರುಗಿಸುತ್ತ ಆಡುತ್ತಲೇ ಆ ಕೋಲಿನಿಂದ ಕುಳಿತಿರುವ ಮನುಷ್ಯನ ತಲೆಯ ಮೇಲಿನ ತೆಂಗಿನಕಾಯಿಯನ್ನು ಒಂದೇ ಹೊಡೆತಕ್ಕೆ ಚೂರುಚೂರು ಆಗುವಂತೆ ಕೋಲಿನಿಂದ ಹೊಡೆಯುತ್ತಾನೆ*(ಛಾ:೩.೪೬)*

೧೧. ಬಾಯಿಯಿಂದ ಬೆಂಕಿ ಪ್ರದರ್ಶನದ ಆಟ

ಒಬ್ಬ ವ್ಯಕ್ತಿಯು ತನ್ನ ಬಾಯಿಯ ತುಂಬಾ ಸೀಮೆಎಣ್ಣೆಯನ್ನು ಹಾಕಿಕೊಂಡು ಬೆಂಕಿ ಕಡ್ಡಿ ಕೊರೆದು ತನ್ನ ಬಾಯಿಯ ಮೇಲ್ಭಾಗಕ್ಕೆ ತಂದಾಗ ಆ ವ್ಯಕ್ತಿಯು ಜೋರಾಗಿ ತನ್ನ ಉಸಿರು ಮೇಲಕ್ಕೆ ಬಿಟ್ಟು ಊದುತ್ತಾನೆ ಆಗ ಆತನ ಬಾಯಿಯಿಂದ ಉರಿ (ಬೆಂಕಿ) ಪ್ರದರ್ಶನವಾಗುತ್ತದೆ. ಈ ರೀತಿಯಾಗಿ ಆ ವ್ಯಕ್ತಿ ಮೂರು ಸಲ ಸೀಮೆಎಣ್ಣೆಯನ್ನು ತನ್ನ ಬಾಯಿಯಲ್ಲಿ ಹಾಕಿಕೊಂಡು ಬೆಂಕಿ ಪ್ರದರ್ಶನ ಮಾಡುತ್ತಾನೆ.

೧೨. ಕಿತ್ತೂರ ಚೆನ್ನಮ್ಮನ ಯುದ್ದದಾಟ

ದಾಲ್ ಮತ್ತು ಪಟ ಇವೆರಡನ್ನು ಹಿಡಿದುಕೊಂಡು ಆಡುವ ಆಟ ಇದಾಗಿರುತ್ತದೆ. ಯುದ್ದಕ್ಕೆ ಬಳಸುವ ಪರಿಕರಗಳನ್ನು ಹಿಡಿದುಕೊಂಡು ಈ ಆಟವನ್ನು ಆಡುತ್ತಾರೆ. ಇದನ್ನು ಕೂಡ ತಮ್ಮ ಪ್ರದರ್ಶನ ಕಲೆಗಳಲ್ಲಿ ಒಂದಾಗಿಸಿಕೊಂಡಿದ್ದಾರೆ. ಈ ಆಟವನ್ನು ಕಿತ್ತೂರ ರಾಣಿ ಚೆನ್ನಮ್ಮನು ಯುದ್ದವಾಡುವ ಶೈಲಿಯಲ್ಲಿ ಆಡುತ್ತಾರೆ. ಆನೆ ಚರ್ಮದಿಂದ ತಯಾರಿಸಿದ ಪಟವು ಎರಡು ಪೂಟ್ ಅಗಲವಾಗಿದ್ದು ರೌಂಡಾಗಿ ಇರುತ್ತದೆ. ಆ ಪಟವನ್ನು ಎಡಗೈಯಲ್ಲಿ ಹಿಡಿದುಕೊಂಡು ಯುದ್ದವನ್ನಾಡುವ ಶೈಲಿಯಲ್ಲಿ ಕತ್ತಿಯನ್ನು ಬಲಗೈಯಲ್ಲಿ ಹಿಡಿದುಕೊಂಡು ಈ ಆಟವನ್ನು ಆಡುತ್ತಾರೆ ಈ ಆಟವನ್ನು ಆಡುವಾಗ ದೂರದಲ್ಲಿದ್ದವರು ಯಾರಾದರು ಕಲ್ಲುಗಳನ್ನು ಎಸೆದರೂ ಕೂಡ ಆ ಕಲ್ಲು ಆಟವಾಡುವ ಮನುಷ್ಯನಿಗೆ ಬಿಳುವದಿಲ್ಲ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು.

ಸಾಂಸ್ಕೃತಿಕ ಆಟಗಳು.

೧. ಮರಗಾಲು ಕೀಲು ಕುದುರೆ ಆಟ

ಮಾಲ ಸಮುದಯದವರು ಮರಗಾಲುಕುದುರೆ ಆಟವನ್ನು ಆಡುತ್ತಾರೆ ಮರದ ಕಾಲಿನ ಸಹಾಯದಿಂದ ಆಟವನ್ನು ಆಡುತ್ತಾರೆ.

ಮರಗಾಲು ತಯಾರಿಸುವ ವಿಧಾನ

ಎರಡು ಜಾಲಿಯ ಮರದ ಕಟ್ಟಿಗೆಯನ್ನು ತೆಗೆದುಕೊಂಡು ಆ ಕಟ್ಟಿಗೆಗಳನ್ನು ಉಳಿಯ ಸಹಾಯದಿಂದ ನೀಟಾಗಿ ಕೆತ್ತಿ ಎರಡು ಪೂಟಿನಷ್ಟು ಉದ್ದವಿರುವ ಕಟ್ಟಿಗೆಗಳನ್ನು ಕತ್ತರಿಸಿಕೊಂಡು ಆ ಕಟ್ಟಿಗೆಯ

ಮೇಲ್ಭಾಗದಲ್ಲಿ ಮತ್ತು ಕೆಳಭಾಗದಲ್ಲಿ ಅಂಗಾಲಿನಂತೆ ಅಗಲ ಮತ್ತು ಉದ್ದವಾಗಿರುವ ಕಟ್ಟಿಗೆಯಿಂದ ತಯಾರಿಸಿದ ಮನುಷ್ಯರ ಅಂಗಾಲು ರೂಪದಂತೆ ಇರುವ ಮರದ ಅಂಗಾಲನ್ನು ಇಟ್ಟು ಸಣ್ಣ ಮಳೆಗಳನ್ನು ಆ ಕಟ್ಟಿಗೆಯ ಮೇಲ್ಭಾಕ್ಕೊಂದು ಕೆಳಭಾಗಕ್ಕೊಂದು ಅಂಗಾಲನ್ನು ಇಟ್ಟು ಮಳೆಗಳನ್ನು ಬಡಿಯುತ್ತಾರೆ. ಮತ್ತು ಕಟ್ಟಿಗೆಯ ಅಂಗಾಲಿನ ಕೆಳಗೆ ಕಬ್ಬಿಣದ ಅಣಸನ್ನು (ನಾಲು) ಬಡಿದಿರುತ್ತಾರೆ. ಕಟ್ಟಿಗೆಯ ಮೇಲ್ಭಾಗದ ಅಂಗಾಲಿನಲ್ಲಿ ಮನುಷ್ಯ ನಿಂತುಕೊಂಡ ಮೇಲೆ ಹಿಡಿತ ಹಾಕಲು ಕಬ್ಬಿಣದ ಕೀಲನ್ನು ಜೋಡಿಸುತ್ತಾರೆ ಅಥವಾ ಕಾಲಿಗೆ ಹಾಕಲು ಕಬ್ಬಿಣದ ಬಟನ್‌ನ್ನು ಜೋಡಿಸುತ್ತಾರೆ. ಮನುಷ್ಯ ಆ ಮರಗಾಲಿನ ಮೇಲೆ ನಿಂತುಕೊಂಡರೆ ಎರಡು ಪೂಟಿನಷ್ಟು ಎತ್ತರ ಕಾಣುತ್ತಾನೆ. ಆ ಕಟ್ಟಿಗೆಯ ಮೇಲ್ಭಾಗದ ಅಂಗಾಲಿನ ಮೇಲೆ ನಿಂತುಕೊಂಡು ಕಬ್ಬಿಣದ ಕೀಲನ್ನು ಬಿಚ್ಚದಂತೆ ಹಾಕಿಕೊಳ್ಳುತ್ತಾರೆ.

ಕೀಲು ಕುದುರೆ ಆಟ ಆಡುವ ವಿಧಾನ:–ಮಾಲ ಸಮುದಾಯದವರು ಹಣವನ್ನು ಕೊಟ್ಟು ಫೈಬರಿನಿಂದ ತಯಾರಿಸಿದ ೮ ಕೆಜಿ ಯಷ್ಟು ತೂಕವಿರುವ ಕುದುರೆಯನ್ನು ತಂದಿರುತ್ತಾರೆ ಮತ್ತು ಕುದುರೆಯ ಮೈಮೇಲೆ ಹಾಕುವ ಬಣ್ಣಬಣ್ಣದಿಂದ ತಯಾರಿಸಿದ ಹೊದಿಕೆ ಅಥವಾ ಬಟ್ಟೆಯನ್ನು ಮಾರುಕಟ್ಟೆಯಲ್ಲಿ ತಂದಿರುತ್ತಾರೆ. ಕುದುರೆಯ ಆಟವನ್ನು ಆಡುವ ಮಾಲ ಸಮುದಾಯದ ವ್ಯಕ್ತಿಗಳು ತಮ್ಮ ತಲೆಗೆ ರೂಮಾಲು ಅಥವಾ ಪೇಟಾ ಸುತ್ತಿಕೊಂಡು ಜಾಲಿಮರದ ಕಟ್ಟಿಗೆಯಿಂದ ತಯಾರಿಸಿದ ಎರಡು ಪೂಟಿನಷ್ಟು ಎತ್ತರವಿರುವ ಮರದ ಕಾಲಿನ ಮೇಲೆ ನಿಂತು ಯಾವುದಾದರು ಜಯಂತೋತ್ಸವದ ಪ್ರಮುಖ ಕಾರ್ಯಕ್ರಮಗಳಲ್ಲಿ ತಮ್ಮ ಹೆಗಲಿಗೆ ಹಿಡಿತದಂತಿರುವ ಕುದುರೆಯನ್ನು ಹಾಕಿಕೊಂಡಾಗ ಕುದುರೆಯ ಮಧ್ಯದಲ್ಲಿ ಅಥವಾ ನಡುವೆ ಮನುಷ್ಯನ ದೇಹವಿರುತ್ತದೆ. ಅಂತಹ ಕುದುರೆಯನ್ನು ಹಾಕಿಕೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಮಾಲ ಸಮುದಾಯದವರು ಕೀಲು ಕುದುರೆಯ ಆಟವನ್ನು ಆಡುತ್ತಾರೆ.*(ಭಾ:೩.೪೭)*

೨. ಬೆಂಕಿ ಚಕ್ರವನ್ನು ತಿರುಗಿಸುತ್ತಾ ನಿಚ್ಚಣಿಕೆ (ಏಣಿ) ಏರುವ ಆಟ

ಮಾಲ ಸಮುದಾಯದ ವಂಶಪಾರಂಪರಿಕ ಆಟಗಳಲ್ಲಿ ಬೆಂಕಿ ಚಕ್ರವನ್ನು ತಿರುಗಿಸುತ್ತಾ ನಿಚ್ಚಣಿಕೆ ಏರುವ ಆಟವು ಒಂದಾಗಿರುತ್ತದೆ.

ಬೆಂಕಿ ಚಕ್ರವನ್ನಾಡಲು ತೆಗೆದುಕೊಳ್ಳುವ ಸಾಧನಗಳು ಅಥವಾ ಪರಿಕರಗಳೆಂದರೆ.

ಬೆಂಕಿ ಚಕ್ರವನ್ನು ತಿರುಗಿಸುವ ವಿಧಾನ:– ಎರಡು ಮೊಳದಷ್ಟು ಉದ್ದವಿರುವ ಬೆತ್ತದ ಕಟ್ಟಿಗೆಯನ್ನು ತೆಗೆದುಕೊಂಡು ಒಂದು ದಿವಸ ಪೂರ್ತಿಯಾಗಿ ನೀರಿನಲ್ಲಿ ಬೆತ್ತದ ಕಟ್ಟಿಗೆಯನ್ನು ನೆನೆಸಿ ಆ ಕಟ್ಟಿಗೆಗೆ ಒಳ್ಳೆಣ್ಣೆಯನ್ನು ಹಚ್ಚಿ ಬೆಂಕಿಯ ಹೊಗೆಗೆ ಕಾಯಿಸಿ ಆ ಕಟ್ಟಿಗೆಯನ್ನು ಮೃದು ಮಾಡಿ ರೌಂಡಾಗಿ ಸುತ್ತಿ ಚಕ್ರಾಕಾರವಾಗಿ ಮಾಡುತ್ತಾರೆ. ಆ ಚಕ್ರದ ಒಳಗೆ ಎರಡು ಕಟ್ಟಿಗೆಯ ಕೋಲನ್ನು ಇಂಟು ಆಕಾರವಾಗಿ ಜೋಡಿಸುತ್ತಾರೆ. ನಂತರ ಆ ಚಕ್ರಕ್ಕೆ ಸುತ್ತಲು ನಾಲ್ಕು ತುಂಡುಗಳನ್ನು ಹಾಕಿ ಪ್ರತಿಯೊಂದು ತುದಿಗೂ ಒಂದುವರೆ ಅಂಗುಲ ಉದ್ದವಿರುವ ಕಬ್ಬಿಣದ ಸರಪಳಿಯನ್ನು ಜೋತುಬಿಟ್ಟು ಪ್ರತಿಯೊಂದು ಸರಪಳಿ ತುದಿಗೆ ಕಬ್ಬಿಣದ ರಿಂಗನ್ನು ಜೋಡಿಸಿ ಆ ರಿಂಗಿಗೆ ದಪ್ಪವಾಗಿ ಕಾಟನ್ ಬಟ್ಟೆಯನ್ನು ಸುತ್ತಿ ಸೀಮೆ ಎಣ್ಣೆಯನ್ನು ಕಾಟನ್ ಬಟ್ಟೆಗೆ ಹುಣಿಸಿ ಬೆಂಕಿಯನ್ನು ಹಚ್ಚುತ್ತಾರೆ.

ಬೆಂಕಿ ಚಕ್ರವನ್ನು ಆಡುವ ವಿಧಾನ:- ಬೆಂಕಿ ಚಕ್ರವನ್ನು ಆಡುವ ವ್ಯಕ್ತಿಯು ಬೆಂಕಿ ಚಕ್ರದ ನಾಲ್ಕು ರಿಂಗಿಗೂ ಬೆಂಕಿಯನ್ನು ಹಚ್ಚಿ ಬೆಂಕಿ ಚಕ್ರವನ್ನು ತನ್ನ ಬಲಗೈಯಲ್ಲಿ ಹಿಡಿದುಕೊಂಡು ತನ್ನ ದೇಹದ ಯಾವುದೇ ಭಾಗಕ್ಕೆ ತಟ್ಟಿಸಿಕೊಳ್ಳಲಾರದೆ ಬೆಂಕಿ ಚಕ್ರವನ್ನು ಗರಗರನೆ ತಿರುಗಿಸುತ್ತ ನಿಚ್ಚಣಿಕೆ(ಏಣಿ)ಯನ್ನು ಪೂರ್ತಿಯಾಗಿ ಕೊನೆಯ ಮಣಿಯವರೆಗೂ ಏರುತ್ತಾನೆ. ಅದೇ ರೀತಿ ಬೆಂಕಿ ಚಕ್ರವನ್ನು ತಿರುಗಿಸುವ ಮನುಷ್ಯನು ಆ ಬೆಂಕಿ ಚಕ್ರವನ್ನು ತಿರುಗಿಸುತ್ತಾ ಉಲ್ಟಾ ನಿಚ್ಚಣಿಕೆಯಿಂದ ಕೆಳಗೆ ಇಳಿಯುತ್ತಾನೆ.(ಭಾ:೩.೪೮) ಕೆಳಗೆ ಇಳಿದ ನಂತರವೂ ಬೆಂಕಿ ಉರಿಯುತ್ತಿದ್ದರೆ ಆ ಬೆಂಕಿ ಆರುವವರೆಗೂ ನೆಲದ ಮೇಲೆ ನಿಂತು ಬೆಂಕಿ ಚಕ್ರವನ್ನು ಎಡಗೈಲೊಮ್ಮೆ ಮತ್ತು ಬಲಗೈಲೊಮ್ಮೆ ಹಿಡಿದು ತಿರುಗಿಸುವುದನ್ನು ಮಾಡುತ್ತಾನೆ. ಈ ಆಟವು ಬಹಳ ಅಪಾಯಕಾರಿಯಾದಂತಹ ಆಟವಾಗಿದೆ ಎಂಬುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವೀಕ್ಷಿಸಲಾಯಿತು. ಇಂತಹ ಆಟಗಳನ್ನು ಮಾಲ ಸಮುದಾಯದವರು ತಮ್ಮ ಮಕ್ಕಳಿಗೂ ಕಲಿಸಿಕೊಡುತ್ತಾರೆ.

೩. ನಿಂಬೆ ಹಣ್ಣಿನ ಆಟ: ಆರು ಚಿಕ್ಕ ಪ್ಲೇಟ್ ಜೋಡಿಸಿರುವ ತಕ್ಕಡಿಯಲ್ಲಿ ಪ್ರತಿಯೊಂದು ಪ್ಲೇಟಿಗೂ ಒಂದೊಂದರಂತೆ ಆರು ನಿಂಬೆಯ ಹಣ್ಣುಗಳನ್ನು ತಕ್ಕಡಿಯ ಪ್ಲೇಟಿನಲ್ಲಿ ಇಟ್ಟು ನಿಂಬೆಹಣ್ಣುಗಳು ಕೆಳಗೆ ಬೀಳದಂತೆ ತಕ್ಕಡಿಯನ್ನು ಆ ವ್ಯಕ್ತಿಯು ಗರಗರನೆ ತಿರುಗಿಸುತ್ತಾ ಏಣಿಯನ್ನು ಏರುವ ಆಟ.

ತಕ್ಕಡಿಯನ್ನು ತಯಾರಿಸುವ ವಿಧಾನ: ಮಾಲ ಸಮುದಾಯದವರು ತಕ್ಕಡಿಯನ್ನು ತಯಾರಿಸಲು ಬೇಕಾಗುವ ವಿವಿಧ ಪರಿಕರಗಳನ್ನು ಮಾರುಕಟ್ಟೆಯಲ್ಲಿ ತರುತ್ತಾರೆ. ಆ ಪರಿಕರಗಳೆಂದರೆ ಆರು ಉದ್ದವಾದ ಸರಪಳಿಗಳು, ಆರು ಚಿಕ್ಕ-ಚಿಕ್ಕ ಪ್ಲೇಟುಗಳು, ಒಂದು ಚಕ್ರಾಕಾರವಾಗಿರುವ ರಿಂಗು, ಆ ರಿಂಗಿಗು ಹಿಡಿದುಕೊಳ್ಳಲು ಒಂದು ಕಬ್ಬಿಣದ ಕೋಲನ್ನು ಜೋಡಿಸಿರುವಂತಹ ರಿಂಗು. ಇವುಗಳನ್ನೆಲ್ಲಾ ಮಾರುಕಟ್ಟೆಯಲ್ಲಿ ಹಣವನ್ನು ಕೊಟ್ಟು ತಂದಿರುತ್ತಾರೆ. ಕಬ್ಬಿಣದ ರಿಂಗಿಗೆ ಸುತ್ತಲೂ ಆರು ರಂದ್ರಗಳನ್ನು ಹಾಕಿರುತ್ತಾರೆ. ಪ್ರತಿಯೊಂದು ರಂದ್ರಕ್ಕೂ ಒಂದೊಂದು ಉದ್ದವಾಗಿರುವ ಸರಪಳಿಗಳನ್ನು ಕೆಳಗಿನವರೆಗೂ ಇಳೆಬಿಟ್ಟು ಆ ಉದ್ದವಾಗಿರುವ ಆರು ಸರಪಳಿಗಳ ತುದಿಗೆ ಒಂದೊಂದು ಸಣ್ಣ ಸಣ್ಣ ರಿಂಗನ್ನು ಹಾಕಿ ಒಂದು ಪೂಟಿನಷ್ಟು ಉದ್ದವಾಗಿರುವ ತುಂಡನ್ನು ಸರಪಳಿ ತುದಿಗಿರುವ ರಿಂಗಿಗೂ ಹಾಕಿ ಜೋತು ಬಿಡುತ್ತಾರೆ. ನಂತರ ಚಿಕ್ಕ-ಚಿಕ್ಕ ಪ್ಲೇಟುಗಳ ತುದಿಗೆ ಆರು ರಂದ್ರಗಳನ್ನು ಹಾಕುತ್ತಾರೆ. ನಂತರ ಚಿಕ್ಕ ರಿಂಗಿಗೆ ಹಾಕಿರುವ ಸರಪಳಿಗಳನ್ನು ಪ್ಲೇಟಿನ ರಂದ್ರಗಳಿಗೆ ಜೋಡಿಸುತ್ತಾರೆ ಈ ರೀತಿ ಪ್ರತಿಯೊಂದು ಪ್ಲೇಟನ್ನು ಜೋಡಿಸುತ್ತಾ ಹೋಗುತ್ತಾರೆ. ಆಗ ಆರು ಪ್ಲೇಟಿರುವ ತಕ್ಕಡಿ ತಯಾರಾಗಿರುತ್ತದೆ.

ಲಿಂಬೆಹಣ್ಣಿನ ಆಟ ಆಡುವ ವಿಧಾನ: ಮಾಲ ಸಮುದಾಯದವರು ಆಡುವ ವಂಶಪಾರಂಪರಿಕ ಆಟಗಳಲ್ಲಿ ಲಿಂಬೆಹಣ್ಣಿನ ಆಟವು ಒಂದಾಗಿರುತ್ತದೆ. ಆರು ಪ್ಲೇಟಿರುವ ತಕ್ಕಡಿಯೊಳಗೆ ಒಂದೊಂದು ಪ್ಲೇಟಿಗೂ ಒಂದೊಂದರಂತೆ ಆರು ಪ್ಲೇಟಿಗೂ ನಿಂಬೆಹಣ್ಣನ್ನು ಇಟ್ಟು ಏಣಿಯನ್ನು ಎಡಗೈಲಿಡಿಯುತ್ತಾ ಬಲಗೈಯಿಂದ ನಿಂಬೆಹಣ್ಣಾಕಿರುವ ತಕ್ಕಡಿಯನ್ನು ಹಿಡಿದು ಗರಗರನೆ ತಿರುಗಿಸುತ್ತ ಏಣಿಯನ್ನು ತುದಿಯವರೆಗೂ ಏರುತ್ತಾನೆ. ಅದೇ ರೀತಿ ನಿಂಬೆಹಣ್ಣಾಕಿರುವ ತಕ್ಕಡಿಯನ್ನು ತಿರುಗಿಸುವವನು ಉಲ್ಟಾ ನಿಚ್ಚಣಿಕೆಯಿಂದ ಕೆಳಗೆ ಇಳಿಯುತ್ತಲೆ. ಒಂದೇ ಕೈಯಿಂದ ತಿರುಗಿಸುತ್ತಾ ನಿಂಬೆಹಣ್ಣು ಕೆಳಗೆ

ಬೀಳದಂತೆ ತಕ್ಕಡಿಯನ್ನು ತಿರುಗಿಸುತ್ತ ಕೆಳಗೆ ಇಳಿಯುತ್ತಾನೆ. ಕೆಳಗೆ ಇಳಿದ ವ್ಯಕ್ತಿಯು ನೆಲದ ಮೇಲೆ ನಿಂತು ಐದರಿಂದ ಹತ್ತು ನಿಮಿಷದವರೆಗೂ ಎರಡು ಕೈಯಿಂದ, ಎಡಗೈಯಿಂದ ಮತ್ತು ಬಲಗೈಯಿಂದ ಈ ರೀತಿ ನಿಂಬೆಹಣ್ಣು ಒಂದೊಂದು ಕೆಳಗೆ ಬೀಳದಂತೆ ಆ ತಕ್ಕಡಿಯನ್ನು ಗರಗರನೆ ತಿರುಗಿಸುತ್ತಾನೆ. ತಕ್ಕಡಿಯನ್ನು ತಿರುಗಿಸುವಾಗ ಆ ತಕ್ಕಡಿಯ ಭಾಗಗಳನ್ನು ತನ್ನ ದೇಹದ ಯಾವ ಭಾಗಕ್ಕೂ ಬಡಿಸಿಕೊಳ್ಳುವುದಿಲ್ಲ. ತಮ್ಮ ದೇಹಕ್ಕೆ ಗಾಯಗಳಾಗದಂತೆ ಆಟವನ್ನು ಆಡುತ್ತಾರೆ.

೪. **ಗೊಂಬೆಯಾಟ:** ಮಾಲ ಸಮುದಾಯದವರು ಆಡುವ ಏಕೈಕ ನೃತ್ಯವೆಂದರೆ ಗೊಂಬೆಯಾಟ ಇದನ್ನು ಗಂಡು ಮಕ್ಕಳು ವಿಧವಿಧವಾದ ಗೊಂಬೆಗಳನ್ನ ಹಾಕಿಕೊಂಡು ನೃತ್ಯವನ್ನು ಮಾಡುತ್ತಾರೆ.

ಕರಡಿ ಕುಣಿತದ ಆಟ ಮತ್ತು ಗೊಂಬೆಗಳ ಕುಣಿತದ ಆಟ: ಮಾಲ ಸಮುದಾಯದವರ ಸಾಂಸ್ಕೃತಿಕ ಆಟಗಳಾದ ಕರಡಿ ಕುಣಿತದ ಆಟ ಮತ್ತು ಗೊಂಬೆಗಳ ಆಟವು ಅತ್ಯಂತ ಪ್ರಮುಖವಾದವುಗಳಾಗಿದ್ದು ಮತ್ತು ಅತ್ಯಂತ ಪ್ರಮುಖವಾದಂತಹ ಮನರಂಜಕರವಾದವುಗಳಾಗಿರುತ್ತವೆ. ಮಾಲ ಸಮುದಾಯದವರು ಆಡುವಂತಹ ವಿವಿಧ ಗೊಂಬೆಗಳ ಆಟಗಳು ನೋಡುಗರಿಗೆ ಆಕರ್ಷಣಿಯವಾಗಿದ್ದು, ನೋಡುಗರ ಮನಸ್ಸನ್ನು ಮನರಂಜನೆಗೊಳಿಸಲು ಪ್ರಮುಖವಾದವುಗಳಾಗಿರುತ್ತವೆ. ಮತ್ತು ಎಲ್ಲರ ಕಣ್ಮನ ಸೆಳೆಯುವಂತಹ ಆಟಗಳಾಗಿರುತ್ತವೆ. ಮಾಲ ಸಮುದಾಯದವರು ತಮ್ಮ ವಂಶಪಾರಂಪರಿಕ ಆಟಗಳ ಜೊತೆಗೆ ಮನೆರಂಜನೆಗಾಗಿ ಇತ್ತೀಚೆಗೆ ಜಾರಿಗೆ ತಂದಂತಹ ಆಟಗಳಾಗಿರುತ್ತವೆ. ಎರಡು ಗೊಂಬೆಗಳು, ಎರಡು ಕರಡಿಗಳು, ಒಂದು ರಾಕ್ಷಸ, ಒಂದು ಮಹಿಷಾಸುರ, ಒಂದು ಎತ್ತಿನಾಕಾರದ ಗೊಂಬೆ ಒಟ್ಟು ಏಳು ಗೊಂಬೆಗಳಿರುತ್ತವೆ.*(ಛಾ:ಚಿ.೪೯)*

ಬೇಕಾಗುವ ಪರಿಕರಗಳು ಅಥವಾ ತಯಾರಿಸುವ ವಿಧಾನ: ಮಾಲ ಸಮುದಾಯದವರು ಹಲವಾರು ಬೆತ್ತದ ಕಟ್ಟಿಗೆಗಳನ್ನು ಅಡವಿಯಲ್ಲಿ ಕಡಿದುಕೊಂಡು ತಂದು ಆ ಎಲ್ಲಾ ಬೆತ್ತದ ಕಟ್ಟಿಗೆಗಳನ್ನು ಒಂದು ದಿವಸ ಪೂರ್ತಿಯಾಗಿ ನೀರಿನಲ್ಲಿ ನೆನೆಸಿ ಮರುದಿವಸ ನೀರಿನಿಂದ ತೆಗೆದು ಹೊಗೆಯ ಸಹಾಯದಿಂದ ಕಾಯಿಸಿ ಎಲ್ಲಾ ಬೆತ್ತದ ಕೋಲುಗಳನ್ನು ಮೃದುವಾಗಿ ಮಾಡುತ್ತಾರೆ. ಮೃದು ಮಾಡಿದ ನಂತರ ಎರಡು ಮಾರು ಉದ್ದವಿರುವ ಒಂದೊಂದು ಕೋಲನ್ನು ತೆಗೆದುಕೊಂಡು ರೌಂಡಾಗಿ ಚಕ್ರಾಕಾರವಾಗಿ ಮಾಡಿ ತುದಿ-ತುದಿಗೆ ಜೋಡಿಸಿ ದಾರದಿಂದ ಬಿಗಿಯಾಗಿ ಕಟ್ಟುತ್ತಾರೆ. ಈ ರೀತಿ ಆರು ಚಕ್ರಗಳನ್ನು ಮಾಡುತ್ತಾರೆ. ನಂತರ ಉದ್ದವಾದ ಹನ್ನೊಂದು ಕೋಲುಗಳನ್ನು ತೆಗೆದುಕೊಂಡು ಬೆಂಕಿಯ ಹೊಗೆಯ ಸಹಾಯದಿಂದ ಮೃದುಮಾಡಿ ಕೋಲಿನ ಚಕ್ರದ ಒಳಗೆ ಒಂದು ಪೂಟಿಗೊಂದರಂತೆ ಉದ್ದವಾಗಿ ನಿಲ್ಲಿಸಿ ದಾರದ ಸಹಾಯದಿಂದ ಗಟ್ಟಿಯಾಗಿ ಕಟ್ಟುತ್ತಾರೆ. ಗೊಂಬೆ ಒಳಗೆ ಮನುಷ್ಯ ನಿಲ್ಲಲು ಜಾಗವಿರುತ್ತದೆ. ಆ ಗೊಂಬೆಗಳನ್ನು ಮನುಷ್ಯ ಹಾಕಿಕೊಂಡಾಗ ತಲೆಯ ಮೇಲೆ ಗೋಪುರದಂತೆ ಕಾಣಲು ಎರಡು ಪೂಟಿನಷ್ಟು ಉದ್ದವಿರುವ ಎಂಟು ಕೋಲುಗಳನ್ನು ಗೊಂಬೆಯ ತಲೆಯ ಮೇಲ್ಭಾಗದಲ್ಲಿ ಕೋಲುಗಳನ್ನು ರೌಂಡಾಗಿ ಇಟ್ಟು ಮೇಲೆ ಒಂದು ಕೋಲಿನ ವೃತ್ತವನ್ನು ಇಟ್ಟು ದಾರದಿಂದ ಬಿಗಿಯಾಗಿ ಬಿಚ್ಚದಂತೆ ಕಟ್ಟುತ್ತಾರೆ. ಮತ್ತು ಕಟ್ಟಿಗೆಯ ಕೋಲಿನಿಂದ ತಯಾರಿಸಿದ ಗೊಂಬೆಯನ್ನು ತಮ್ಮ ಮೈಯೊಳಗೆ ಹಾಕಿಕೊಂಡಾಗ ಎರಡು ಕೈಸೇರಿಸಲು ಜಾಗ(ಪೂಲ್ಪ) ವಿರುವಂತೆ ತಯಾರಿಸುತ್ತಾರೆ. ಈ ರೀತಿಯಾಗಿ ಕಟ್ಟಿಗೆಯ ಸಹಾಯದಿಂದ ಏಳು ಗೊಂಬೆಗಳನ್ನು ತಯಾರಿಸುತ್ತಾರೆ. ಮುಖಕ್ಕೆ ಹಾಕಿಕೊಳ್ಳಲು ವಿವಿಧ

ವೇಷದ ಮುಖವಾಡವನ್ನು ಕಿರೀಟಗಳನ್ನು ಮತ್ತು ವಿವಿಧ ಗೊಂಬೆಗಳ ವೇಷದ ಬಟ್ಟೆಗಳನ್ನು ಮಾರುಕಟ್ಟೆಯಲ್ಲಿ ಖರೀದಿಸಿಕೊಂಡು ಬರುತ್ತಾರೆ.

ಗೊಂಬೆಯಾಟವಾಡುವ ವಿಧಾನ; ಮಾಲ ಸಮುದಾಯದವರು ಗೊಂಬೆಗಳ ಆಟವನ್ನು ಆಡುವವರು ಕಟ್ಟಿಗೆಯ ಕೋಲಿನಿಂದ ತಯಾರಿಸಿದ ಗೊಂಬೆಯನ್ನು ತಮ್ಮ ಮೈಯೊಳಗೆ ಹಾಕಿಕೊಂಡಾಗ ಮನುಷ್ಯ ಗೊಂಬೆಗಳ ನಡುವೆ ಆಗುತ್ತಾನೆ. ಅದನ್ನು ಹಾಕಿಕೊಂಡ ನಂತರ ವಿವಿಧ ವೇಷದ ಪಾತ್ರಧಾರಿಗಳು ತಮ್ಮ ತಮ್ಮ ವೇಷದ ಬಟ್ಟೆಗಳನ್ನು ಹಾಕಿಕೊಳ್ಳುತ್ತಾರೆ. ಅಂದರೆ ಒಬ್ಬರು ಮಹಿಷಸುರನ ಬಟ್ಟೆ ಕಿರೀಟ ಮತ್ತು ಮಹಿಷಸುರನ ಮುಖವಾಡವನ್ನು ಹಾಕಿಕೊಂಡಾಗ ಅವರು ಮಹಿಷಸುರನಂತೆ ಕಾಣುತ್ತಾನೆ. ಇಬ್ಬರು ಬೇರೆ ರೀತಿಯ ಗೊಂಬೆಯ ಬಟ್ಟೆ ಮತ್ತು ಗೊಂಬೆಯ ಕಿರೀಟ ಮುಖವಾಡವನ್ನು ಹಾಕಿಕೊಂಡಾಗ ಗೊಂಬೆಗಳಂತೆ ಕಾಣುತ್ತಾರೆ. ಇಬ್ಬರು ಕರಡಿ ವೇಷದ ಬಟ್ಟೆಗಳನ್ನು ಕರಡಿ ವೇಷದ ಮುಖವಾಡವನ್ನು ಕರಡಿ ವೇಷದ ತಲೆಯನ್ನು ಹಾಕಿಕೊಂಡಾಗ ಕರಡಿಯಂತೆ ಕಾಣುತ್ತಾರೆ. ಒಬ್ಬ ವ್ಯಕ್ತಿಯು ರಾಕ್ಷಸ ವೇಷದ ಮತ್ತು ರಾಕ್ಷಸನ ತಲೆಯನ್ನು ಹಾಕಿಕೊಂಡಾಗ ಅವನು ರಾಕ್ಷಸನಂತೆ ಕಾಣುತ್ತಾನೆ. ಇನ್ನೊಬ್ಬ ವ್ಯಕ್ತಿಯು ಎತ್ತಿನ ಆಕಾರದ ಬಟ್ಟೆಗಳನ್ನು, ಎತ್ತಿನ ಆಕಾರದ ಮುಖವಾಡವನ್ನು, ಎತ್ತಿನಾಕಾರ ತಲೆಯನ್ನು ಹಾಕಿಕೊಂಡಾಗ ಎತ್ತಿನಂತೆ ಕಾಣುತ್ತಾನೆ. ಈ ರೀತಿ ಕಟ್ಟಿಗೆಯಾಕಾರದ ಗೊಂಬೆಯ ಮೇಲೆ ಈ ಎಲ್ಲಾ ವೇಷಗಳನ್ನು ಹಾಕಿಕೊಂಡಾಗ ವಿವಿಧ ರೀತಿಯ ವೇಷದಾರಿಗಳ ಗೊಂಬೆಗಳು ಕಾಣುತ್ತಾರೆ. ಮಾಲ ಸಮುದಾಯದವರು ವಿವಿಧ ರೀತಿಯ ಗೊಂಬೆಗಳ ಆಟವನ್ನು ಬಹಳ ಚನ್ನಾಗಿ ಆಡುತ್ತಾರೆ. ಗೊಂಬೆಗಳ ಆಟ ಆಡುತ್ತ ಕುಣಿಯುತ್ತಾರೆ. ಆ ಆಟಗಳನ್ನು ಪ್ರಸಿದ್ಧ ದೇವರುಗಳ ಜಾತ್ರೆಯಲ್ಲಿ, ಸ್ಥಳಿಯ ಜಾತ್ರಾಮಹೋತ್ಸವದಲ್ಲಿ, ಆಹ್ವಾನಿತ ಮದುವೆ ಸಮಾರಂಭಗಳಲ್ಲಿ, ದೇವರ ಮೂರ್ತಿಯ ಪ್ರತಿಷ್ಠಾಪನೆಯ ಮೆರವಣಿಗೆಯ ಸಂದರ್ಭದಲ್ಲಿ ಜಾತ್ರಾಮಹೋತ್ಸವ, ಕುಂಭಮೇಳಗಳಲ್ಲಿ, ರಾಜಕೀಯ ಧುರಿಣರ ಕಾರ್ಯಕ್ರಮಗಳಲ್ಲಿ, ಜಾನಪದ ಉತ್ಸವಗಳಲ್ಲಿ, ಪ್ರಸಿದ್ಧ ಮಹಾನ್ ವ್ಯಕ್ತಿಗಳ ಜಯಂತಿಗಳ ಮಹೋತ್ಸವಗಳಲ್ಲಿ, ಬೇರೆ ಬೇರೆ ರಾಜ್ಯಗಳ ಪ್ರಸಿದ್ಧ ಅವ್ವಾನಿತ ಕಾರ್ಯಕ್ರಮ ಹಾಗೂ ಇನ್ನಿತರ ಕಾರ್ಯಕ್ರಮಗಳಲ್ಲಿ ಮನರಂಜನಾತ್ಮಕ ಗೊಂಬೆಗಳ ಕುಣಿತದ ಆಟಗಳನ್ನು ಮಾಲ ಸಮುದಾಯದವರು ಆಡುತ್ತಾರೆ. ಒಂದೊಂದು ಗೊಂಬೆಗಳ ತೂಕ ೨೦–೨೫ ಕೆ.ಜಿ. ಯಷ್ಟು ಇರುತ್ತವೆ. ಅಷ್ಟೇ ತೂಕವಿರುವ ಕೋಲಿನ ಗೊಂಬೆಗಳನ್ನು ಗೊಂಬೆಗಳಿಗೆ ತಕ್ಕಂತಹ ಬಟ್ಟೆಗಳ ವೇಷಗಳನ್ನು ಹಾಕಿಕೊಂಡು ಮಾಲ ಸಮುದಾಯದವರು ಆಟವಾಡುತ್ತಾರೆ.

ಮಾಲ ಸಮುದಾಯದವರು ತಾವು ಆಡುವ ವಂಶಪರಾಂಪರಿಕ ಆಟಗಳನ್ನು ಆಡಲು ಮೊದಲು ಅಡವಿಯಲ್ಲಿ ಸಿಗುವ ಕೆಲವು ವಸ್ತುಗಳನ್ನು ತಂದು ಆ ವಸ್ತುಗಳಿಂದ ತಮ್ಮ ವಾಧ್ಯಪರಿಕರಗಳನ್ನು ಸ್ವತಃ ತಾವೇ ತಮ್ಮ ಕೈಯಿಂದ ತಯಾರಿಸಿಕೊಳ್ಳುತ್ತಿದ್ದರು. ಆದರೆ ಇತ್ತೀಚೆಗೆ ಆಟಗಳನ್ನಾಡಲು ಕೆಲವು ವಸ್ತುಗಳನ್ನು ಮತ್ತು ಪರಿಕರಗಳನ್ನು ಮಾರುಕಟ್ಟೆಯಲ್ಲಿ ಕೊಳ್ಳುತ್ತಾರೆ. ಎಲ್ಲಾ ವಸ್ತುಗಳನ್ನು ಕೈಯಿಂದ ತಯಾರಿಸಿಕೊಳ್ಳುವದಿಲ್ಲ.

ವಾದ್ಯ ಪರಿಕರ

ಸಾಂಸ್ಕೃತಿಕ ಆಟವಾಡಲು ಉಪಯೋಗಿಸುವ ಸಾಮಗ್ರಿಗಳು ಮತ್ತು ವಾದ್ಯ ಪರಿಕರಗಳು

ಮಾಲ ಸಮುದಾಯದವರು ತಮ್ಮ ಸಾಂಸ್ಕೃತಿಕ ಆಟಕ್ಕೆ ಬೇಕಾಗುವ ಸಾಮಗ್ರಿಗಳನ್ನು ಸ್ವತಃ ತಾವೇ ತಮ್ಮ ಕೈಯಿಂದ ಕಷ್ಟಪಟ್ಟು ತಯಾರಿಸುತ್ತಾರೆ. ಹಲವಾರು ವಸ್ತುಗಳನ್ನು ಕಾಡಿನಲ್ಲಿ ಮತ್ತು ಅಡವಿಯಲ್ಲಿ ಅಲೆದಾಡಿ ಹುಡಿಕಿಕೊಂಡು ತರುತ್ತಾರೆ. ಇನ್ನು ಕೆಲವು ವಸ್ತುಗಳನ್ನು ಮಾರುಕಟ್ಟೆಯಲ್ಲಿ ಹಣವನ್ನು ಕೊಟ್ಟು ಖರೀದಿಸಿಕೊಂಡು ತಂದು ಎಷ್ಟೇ ಕಷ್ಟವಾದರು ತಾವೇ ಸ್ವತಃ ಕೈಯಿಂದ ತಮ್ಮ ವಾದ್ಯ ಪರಿಕರಗಳನ್ನು ತಯಾರಿಸಿಕೊಳ್ಳುತ್ತಾರೆ.

ಸಾದಾ ಚೆಂಡಿನ ಚಕ್ರ ತಿರುಗಿಸುವ ಆಟಕ್ಕೆ ಕಬ್ಬಿಣದ ಚಕ್ರ ಬಣ್ಣ ಬಣ್ಣದ ವೈರಿನ ದಾರ, ಪ್ಲಾಸ್ಟಿಕ್ ಬಾಲುಗಳು, ಉಲ್ಲನ್ ದಾರ ಮತ್ತು ಪ್ಲಾಸ್ಟಿಕ್ ಹೂವುಗಳು ಇವುಗಳ ಸಹಾಯದಿಂದ ಅಥವಾ ಈ ಎಲ್ಲಾ ಸಾಮಾಗ್ರಿಗಳನ್ನು ಉಪಯೋಗಿಸಿ ಸಾದಾ ಚೆಂಡಿನ ಚಕ್ರವನ್ನು ಸ್ವತಃ ತಮ್ಮ ಕೈಯಿಂದಲೇ ತಯಾರಿಸಿಕೂಳ್ಳುತ್ತಾರೆ.

ಮುಳ್ಳಿನ ಚಕ್ರ ತಿರುಗಿಸುವ ಆಟಕ್ಕೆ ಕಬ್ಬಿಣದ ಚಕ್ರವನ್ನು ಮತ್ತು ಮಾರುಕಟ್ಟೆಯಲ್ಲಿ ಸಿಗುವ ದಪ್ಪನೆಯ ವೈರಿನ ಹಗ್ಗವನ್ನು ಅಡವಿಯಲ್ಲಿ ಅಥವಾ ಕಾಡಿನಲ್ಲಿ ಸಿಗುವ ನಾಲ್ಕು ಮುಖದ ಡೊಣ್ಣೆ ಮುಳ್ಳುಗಳು. ಇವುಗಳನ್ನು ತಂದು ಇವುಗಳ ಸಾಹಾಯದಿಂದ ಮುಳ್ಳಿನ ಚಕ್ರವನ್ನು ತಮ್ಮ ಕೈಯಿಂದ ತಾವೇ ತಯಾರಿಸಿಕೂಳ್ಳುತ್ತಾರೆ.

ನಾಗರಫಣಿ ಆಟಕ್ಕೆ ಮತ್ತು ಇನ್ನು ಕೆಲವು ಆಟಗಳಿಗೆ ಕಾಡಿನಲ್ಲಿ ಸಿಗುವ ಬೆತ್ತದ ಕಟ್ಟಿಗೆಗಳು, ಪ್ಲಾಸ್ಟಿಕ್ ದಾರ ಮತ್ತು ಕಟ್ಟಿಗೆಯಿಂದ ತಯಾರಿಸಿದ ಬೋಲ್ ಬುಗುರಿಗಳು ಕಬ್ಬಿಣದ ಇಂಚು ಮೊಳೆಗಳು. ಇವುಗಳ ಸಹಾಯದಿಂದ ನಾಗರಫಣಿಯನ್ನು ಮಾಲ ಸಮುದಾಯದವರು ತಮ್ಮ ಕೈಯಿಂದ ತಯಾರಿಸಿಕೂಳ್ಳುತ್ತಾರೆ.

ಬೆಂಕಿ ನಾಗರಫಣಿ ಆಟಕ್ಕೆ ಕಾಡಿನಲ್ಲಿ ಸಿಗುವ ಕಟ್ಟಿಗೆಗಳು ಕಬ್ಬಿಣದ ಸರಪಳಿ, ಕಬ್ಬಿಣ ಅಥವಾ ತಗಡಿನ ರಿಂಗು, ಕಾಟನ್ ಅರಿಬೆಗೆ ಸೀಮೆ ಎಣ್ಣೆ ಹಾಕಿ ಬೆಂಕಿ ಪೊಟ್ಟಣದ ಸಹಾಯದಿಂದ ಬೆಂಕಿ ಹಚ್ಚಿ ಬೆಂಕಿ ಚಕ್ರದ ಆಟವನ್ನು ಆಡುತ್ತಾರೆ. ಅದೇ ರೀತಿ ಅಡವಿಯಲ್ಲಿ ಅಥವಾ ಕಾಡಿನಲ್ಲಿ ಸಿಗುವ ಬೆತ್ತದ ಕಟ್ಟಗೆಯ ಸಹಾಯದಿಂದ ಹಲವಾರು ಆಟದ ಪರಿಕರಗಳನ್ನು ತಯಾರಿಸಿ ವಿಧ-ವಿಧವಾದ ಸಾಂಸ್ಕೃತಿಕ ಆಟಗಳನ್ನು ಆಡುತ್ತಾರೆ. ತೆಂಗಿನ ಕಾಯಿಯನ್ನು ಉಪಯೋಗಿಸಿ ತಮ್ಮ ಸಾಂಸ್ಕೃತಿಕ ಆಟವನ್ನು ಆಡುತ್ತಾರೆ.

ಸಮರ ಕಲೆಗಳಿಗೆ ಮಧ್ಯಯುಗಿನ ರಾಜ-ಮಹಾರಾಜರ ಕಾಲದಲ್ಲಿ ಯುದ್ಧ ಸಮಯದಲ್ಲಿ ಉಪಯೋಗಿಸುವ ಉದ್ದವಾದ ಹರಿತವಾದ ಕತ್ತಿ (ದಾಲ್) ಯನ್ನು ಉಪಯೋಗಿಸಿ ಅತ್ಯಂತ ಅಪಾಯಕಾರಿಯಾದ ಹಲವಾರು ಆಟಗಳನ್ನು ಆಡುತ್ತಾರೆ. ಕತ್ತಿಯಿಂದ ಆಟವಾಡುತ್ತಲೇ ನೆಲದ ಮೇಲಿನ ಉಳ್ಳಾಗಡ್ಡಿ ಸೌತೆಕಾಯಿ, ಬದನೆಕಾಯಿ, ವೀಳ್ಯದೆಲೆ, ನಿಂಬೆಹಣ್ಣು ಇವುಗಳನ್ನು ಎರಡು

ತುಂಡಾಗುವಂತೆ ಕತ್ತಿಯಿಂದ ಕತ್ತರಿಸುತ್ತಾರೆ. ನಿಂಬೆ ಹಣ್ಣಿನ ಆಟವನ್ನು ಆಡಲು ಜರ್ಮನ್ ಪ್ಲೇಟುಗಳನ್ನು ಉಪಯೋಗಿಸಿ ಸರಪಳಿಯ ಸಹಾಯದಿಂದ ತಕ್ಕಡಿ ತಯಾರಿಸಿ ನಿಂಬೆ ಹಣ್ಣಿನ ಆಟವನ್ನು ಆಡುತ್ತಾರೆ. ಬೆಂಕಿ ಚಕ್ರವನ್ನು ತಿರುಗಿಸುತ್ತಲೇ ಏಣಿಯನ್ನು ಏರಿ ಕೆಳಗೆ ಇಳಿಯುತ್ತಾರೆ. ಕೀಲು ಕುದುರೆ ಮತ್ತು ಗೊಂಬೆಗಳ ಆಟಕ್ಕೆ ಜಾಲಿ ಮರದ ಕಟ್ಟಿಗೆ ಮತ್ತು ಕಾಡಿನಲ್ಲಿರುವ ಬಿದಿರು ಮತ್ತು ಬೆತ್ತದ ಕಟ್ಟಿಗೆಯನ್ನು ಉಪಯೋಗಿಸಿ ಗೊಂಬೆಗಳನ್ನು ತಯಾರಿಸುತ್ತಾರೆ. ಗೊಂಬೆಗಳ ನೃತ್ಯಕ್ಕೆ ಪ್ಲಾಸ್ಟಕ್‌ನಿಂದ ತಯಾರಿಸಿದ ಮುಖವಾಡವನ್ನು ಉಪಯೋಗಿಸುತ್ತಾರೆ. ಮತ್ತು ವಿವಿಧ ವೇಷದ ಕುತನಿ ಬಟ್ಟೆಗಳನ್ನು ಮಾರುಕಟ್ಟೆಯಲ್ಲಿ ಖರೀದಿಸಿಕೊಂಡು ತರುತ್ತಾರೆ. ಈ ಎಲ್ಲಾ ಸಾಮಾಗ್ರಿಗಳನ್ನು ಉಪಯೋಗಿಸಿ ಸಾಂಸ್ಕೃತಿಕ ಆಟಗಳನ್ನು ಆಡುತ್ತಾರೆ.*(ಛಾ:೩.೫೦)*

ಸಂಬಾಳ ಕಹಳೆ: ಸಂಬಾಳ, ಕಹಳೆಗಳನ್ನು ಪ್ರಮುಖವಾಗಿ ಇವರ ಆಚರಣೆಗಳು, ಪ್ರದರ್ಶನ ಕಲೆಗಳನ್ನು ಪ್ರದರ್ಶಿಸುವಾಗ ನುಡಿಸುವರು.

ಸಂಬಾಳ ಎಂಬುದು ಚರ್ಮವಾದ್ಯ. ಇದು ಬಹುತೇಕ ಗೊಂದಲಿಗರು ಬಾರಿಸುವ ಸಮ್ಮಾಳದ ರೀತಿಯಲ್ಲಿರುವುದಾದರೂ ಅದಕ್ಕಿಂತ ಗಾತ್ರದಲ್ಲಿ ದೊಡ್ಡದು. ಇದನ್ನು ಎರಡು ವಿಶಿಷ್ಟವಾದ ಬಿದಿರುಕಡ್ಡಿಯಿಂದ ನುಡಿಸುವರು. ಇವರ ಸಂಬಾಳಗಳು ಹನ್ನೆರಡು ಇರುತ್ತವೆ. ಇತ್ತೀಚೆಗೆ ಒಂಬತ್ತು ಸಂಘಗಳನ್ನು ಜಾರಿಗೆ ತಂದಂತಹ ಎಲ್ಲಾ ತಂಡದವರಲ್ಲಿ ಸಂಬಾಳಗಳು ಇರುತ್ತವೆ.

ಮಾಲಾ ಸಮುದಾಯದವರು ಯಾವುದೇ ಕಲೆ ಪ್ರದರ್ಶನ ಮಾಡಬೇಕಾದರೆ ಸಂಬಾಳ ಬಾರಿಸಲೇಬೇಕು ಎಲ್ಲಾ ಪ್ರದರ್ಶನ ಕಲೆಗಳಿಗೂ ಸಂಬಾಳ ಬಾರಿಸಿದಾಗ ಮಾತ್ರ ಪ್ರದರ್ಶನ ಕಲೆಗಳಿಗೆ ಒಂದು ರೂಪ ಬರುತ್ತದೆ. ಮಾಲ ಸಮುದಾಯದವರಿಗೆ ಸಂಬಾಳ ಬಾರಿಸದಿದ್ದರೆ ಪ್ರದರ್ಶನ ಕಲೆಗಳನ್ನು ಆಡುವುದು ಕಷ್ಟವೆನಿಸುತ್ತದೆ.

ಕಹಳೆ: ಕಹಳೆಯು ಹಿತ್ತಾಳೆ ಅಥವಾ ಕಬ್ಬಿಣದ ತಗಡಿನಿಂದ ಕೊಂಬಿನಾಕಾರದಲ್ಲಿ ಮಾಡಿರುವರು. ಇದನ್ನು ಬಾಯಲ್ಲಿರಿಸಿಕೊಂಡು ಊದುವರು. ಕಹಳೆಯನ್ನು ಈ ಸಮುದಾಯದವರು ಮದುವೆ ಸಮಾರಂಭಗಳಲ್ಲಿ, ಸಿಮಂತ ಕಾರ್ಯಕ್ರಮಗಳಲ್ಲಿ, ಜವಳಿ ಕಾರ್ಯಕ್ರಮಗಳಲ್ಲಿ, ಶವಸಂಸ್ಕಾರದ ಸಂದರ್ಭದಲ್ಲಿ ಸಂಬಾಳ ಬಾರಿಸುವದರ ಜೊತೆಗೆ ಕಹಳೆಯನ್ನು ಊದುತ್ತಾರೆ.

೩.೬.ಇತರ ವೃತ್ತಿಯವರು ಮತ್ತು ಸಮಾಜಗಳೊಂದಿಗಿನ ಸಂಬಂಧಗಳು

ಸಾಮಾಜಿಕ ಅಸಮಾನತೆಗೆ ಬಲಿಯಾದ ಈ ಸಮುದಾಯದ ಜನರು ಸಮಾಜದಲ್ಲಿ ಇನ್ನು ಅನೇಕ ಬಗೆಯ ಸಮಸ್ಯಗಳನ್ನು ಎದುರಿಸುತ್ತಿದ್ದಾರೆ. ಈಗಲೂ ಸಹ ಇವರು ಗ್ರಾಮದ ಹೊರವಲಯದಲ್ಲಿ ವಾಸಿಸುತ್ತಿದ್ದಾರೆ. ಮಾಲ ಸಮುದಾಯ ಸಾಮಾಜಿಕವಾಗಿ ತುಳಿತಕ್ಕೊಳಪಟ್ಟಂತಹ ಸಮುದಾಯವಾಗಿದೆ. ಸಾಮಾಜಿಕ ಸ್ಥಾನಮಾನದಲ್ಲಿ ಹಿಂದುಳಿದವರಾಗಿದ್ದಾರೆ. ಸಮಾಜದಲ್ಲಿ ಇವರನ್ನು ದೇವಸ್ಥಾನಗಳಿಗೆ, ಕೆರೆ ಬಾವಿಗಳಿಗೆ, ಸಾರ್ವಜನಿಕ ಸ್ಥಳಗಳಿಗೆ ಹೊಗಲು ಬಿಡುತ್ತಿರಲಿಲ್ಲ. ಹೀಗೆ ಮೂಲಭೂತ ಸೌಕರ್ಯಗಳನ್ನು ಕಿತ್ತುಕೊಂಡಿದ್ದರು. ಇವರು ನಿರಂತರವಾಗಿ ಅಲೆಮಾರಿಯಾಗಿ ಬಡತನದಲ್ಲಿ ಜೀವನವನ್ನು ಸಾಗಿಸಬೇಕಾಗಿತ್ತು.

ಆದರೆ ಇತ್ತೀಚೆಗೆ ಮಾಲ ಸಮುದಾಯದ ಕೆಲವು ಕುಟುಂಬಗಳು ನೆಲೆ ಕಂಡುಕೊಂಡ ಗ್ರಾಮದಲ್ಲಿ ಮೇಲ್ ಜಾತಿ ಮತ್ತು ಕೆಳಜಾತಿ ಸಮುದಾಯದವರು ವಾಸಮಾಡುತ್ತಾರೆ. ಮಾಲ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಕೊಪ್ಪಳ ಜಿಲ್ಲೆಯ ಚಿಲಕಮುಖಿ ಗ್ರಾಮದಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡಿದ್ದಾರೆ. ಚಿಲಖಮುಖಿ ಎಂಬ ಗ್ರಾಮದಲ್ಲಿ ಹಲವಾರು ಜಾತಿ ಸಮುದಾಯಗಳಾದ ಮಾದಿಗರು, ಲಿಂಗಾಯತರು, ಗೌಡರು, ಕುರುಬರು, ಶಟ್ಟರು, ಬಣಜಿಗರು ವಾಸಿಸಿದ್ದಾರೆ. ಸದಾ ಅಲೆಮಾರಿಯಾದ ಮಾಲ ಸಮುದಾಯದವರು ಮೂರು ವರ್ಷಕ್ಕೊಮ್ಮೆ ಊರಿಗೆ ಬಂದರೆ ತಮ್ಮ ತಮ್ಮ ಕೆಲಸಕಾರ್ಯಗಳನ್ನು ಮುಗಿಸಿದ ತರುವಾಯ ನಂತರ ಜೀವನ ನಿರ್ವಹಣೆಗಾಗಿ ಹೊರಡುತ್ತಿದ್ದರು. ಇತ್ತೀಚೆಗೆ ಕೆಲವು ಕುಟುಂಬಗಳು ನೆಲೆ ನಿಂತಿವೆ ಅಂಥವರು ಸಮಾಜದಲ್ಲಿರುವ ಇತರೆ ವೃತ್ತಿಯವರ ಜೊತೆಗೆ ಒಡನಾಟದಿಂದ ಇರುತ್ತಾರೆ. ಮಾಲ ಸಮುದಾಯದವರು ಸಮಾಜದಲ್ಲಿ ಸರಳ ಜೀವಿಗಳು ಮತ್ತು ಬಹಳ ಮುಗ್ದ ಸ್ವಭಾವದವರಾಗಿದ್ದಾರೆ. ಪ್ರತಿಯೊಂದು ಜಾತಿ ಸಮುದಾಯ ಮತ್ತು ಅಕ್ಕಪಕ್ಕದಲ್ಲಿನ ಊರಿನಲ್ಲಿರುವ ಇತರೆ ಬುಡಕಟ್ಟು ಸಮುದಾಯದೊಂದಿಗೆ ಒಳ್ಳೆಯ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ಮಾಲ ಸಮುದಾಯದವರು ಯಾವುದೇ ಕೆಟ್ಟ ಅಪರಾಧಗಳಾದ ಕೊಲೆ, ಸುಲಿಗೆ, ಕಳ್ಳತನ, ಇನ್ನಿತರ ಅಪರಾಧಿ ಕೃತ್ಯಗಳಲ್ಲಿ ತೊಡಗಿದವರಲ್ಲ ಮತ್ತು ಬೇರೆಯವರ ಸಂಪತ್ತಿಗೆ ಆಸೆಪಟ್ಟವರಲ್ಲ ಈ ಸಮುದಾಯದವರು ನೀತಿ ನಿಯಮದ ಪ್ರಕಾರ ಭಿಕ್ಷೆ ಬೇಡಿ ಜೀವನ ಸಾಗಿಸುವುದು ಮತ್ತು ವಂಶಪಾರಂಪರಿಕ ಪ್ರದರ್ಶನ ಕಲೆಗಳನ್ನಾಡಿ, ಕೃಷಿ ಕೂಲಿ ಮಾಡಿ ಜೀವನ ಸಾಗಿಸುವವರಾಗಿದ್ದಾರೆ. ಸ್ವಂತ ಜಾಗ, ಭೂಮಿ ಇರದ ಮಾಲ ಸಮುದಾಯದವರು ವಾಸವಿದ್ದ ಊರಿನಲ್ಲಿ ಈ ಸಮುದಾಯದ ಸದಸ್ಯರು ಯಾರಾದರು ತೀರಿ ಹೊಗಿದ್ದರೆ ಸತ್ತ ಹೆಣವನ್ನು ಊಳಲಿಕ್ಕೆ ಊರಿನ ಹಿರಿಯರು ಮತ್ತು ಆ ಊರಿನ ಗೌಡರನ್ನು ಸ್ವಲ್ಪ ಜಾಗವನ್ನು ಅನುಮತಿ ಪಡೆದು ಶವಸಂಸ್ಕಾರ ಮಾಡಲಿಕ್ಕೆ ಅನುಮತಿ ಕೊಟ್ಟವರ ಭೂಮಿಯಲ್ಲಿ ಶವಸಂಸ್ಕಾರ ಮಾಡುತ್ತಿದ್ದರು.

ಮಾಲ ಸಮುದಾಯದವರು ವಾಸವಿದ್ದ ಗ್ರಾಮದಲ್ಲಿ ಬೇರೆ ಜಾತಿ ಸಮುದಾಯಗಳವರ ಮನೆಗಳಲ್ಲಿ ಮದುವೆ ಕಾರ್ಯಕ್ರಮಗಳು, ಋತುಮತಿಯಾದ ಕಾರ್ಯಕ್ರಮಗಳು, ಸಿಮಂತ ಕಾರ್ಯಕ್ರಮಗಳು ಮತ್ತು ಯಾವುದೇ ಶುಭ ಕಾರ್ಯಕ್ರಮಗಳು ಜರುಗಿದರೆ ಮಾಲ ಸಮುದಾಯದ ಕಲಾವಿದರು ಆ ಕಾರ್ಯಕ್ರಮಗಳಲ್ಲಿ ಬಾಗಿಯಾಗಿ ಆ ಕಾರ್ಯಕ್ರಮಗಳು ಮುಗಿಯುವವರೆಗು ಸಂಬಾಳ ಬಾರಿಸುತ್ತಾ ನಮೊರಿ ಊದುತ್ತಾ ತಮ್ಮ ಪ್ರದರ್ಶನ ಕಲೆಗಳನ್ನು ಪ್ರದರ್ಶಿಸುತ್ತಾರೆ. ಸಾಯಂಕಾಲದ ಮದುವೆ ಮೆರವಣಿಗೆಯ ಸಂದರ್ಭದಲ್ಲಿ, ತಮ್ಮ ಕಲೆಗಳನ್ನು ಪ್ರದರ್ಶಿಸಿ ನೆರೆದ ಜನರೆಲ್ಲರನ್ನು ಮನರಂಜಿಸುತ್ತಾರೆ. ಮಾಲ ಸಮುದಾಯದವರಿಗೆ ಮದುವೆ ಮನೆಯ ಹಿರಿಯರು ಕೊಟ್ಟಂತಹ ಹಣ, ಊಟ, ದವಸ ಧಾನ್ಯಗಳನ್ನು ತೆಗೆದುಕೊಂಡು ಸಂತೊಷದಿಂದ ಸ್ವೀಕರಿಸುತ್ತಿದ್ದರು. ಮಾಲ ಸಮುದಾಯದವರು ವಾಸವಿದ್ದ ಗ್ರಾಮದಲ್ಲಿ ಬೇರೆ ಜಾತಿ ಸಮುದಾಯದ ಹೀರಿಯ ಹೆಣ್ಣುಮಕ್ಕಳು, ಗಂಡುಮಕ್ಕಳು ಮರಣ ಹೊಂದಿದ್ದರೆ ಆ ಮರಣ ಹೊಂದಿದವರನ್ನು ಸ್ಮಶಾಣಕ್ಕೆ ಒಯ್ಯುವ ಸಂದರ್ಭದಲ್ಲಿ ಮಾಲ ಸಮುದಾಯದ ಕಲಾತಂಡಗಳು ಸಂಬಾಳ ಬಾರಿಸುತ್ತಾ, ನಮೊರಿ ಊದುತ್ತಾ, ತಾಳ ಬಾರಿಸುತ್ತಾ ಸ್ಮಶಾಣಕ್ಕೆ ಹೋಗಿ ಶವಸಂಸ್ಕಾರ ಮಾಡಿ ಮನೆಗೆ ಬಂದ ನಂತರ ಮರಣ ಹೊಂದಿದವರ ಮನೆಯ

ಹಿರಿಯರು ಕೊಟ್ಟಂತಹ ಧಕ್ಷಿಣೆಯನ್ನು, ದವಸ ಧಾನ್ಯಗಳನ್ನು ಸಂತೋಷದಿಂದ ಸ್ವೀಕರಿಸುತ್ತಾರೆ. ಅದೇ ರೀತಿ ಮಾಲ ಸಮುದಾಯದವರು ವಾಸವಿದ್ದ ಗ್ರಾಮದಲ್ಲಿ ಆ ಗ್ರಾಮದ ಆರಾಧ್ಯ ದೇವರಿನ ಉಡಿ ತುಂಬುವ ಕಾರ್ಯಕ್ರಮ, ಜಾತ್ರಾ ಕಾರ್ಯಕ್ರಮ, ಜರುಗಿದರೆ ತಮ್ಮ ಪ್ರದರ್ಶನ ಕಲೆಗಳನ್ನು ಪ್ರದರ್ಶಿಸಿ ಎಲ್ಲರ ಮನಸನ್ನು ರಂಜಿಸಿ, ಎಲ್ಲರ ಪ್ರೀತಿಗೆ ಪಾತ್ರರಾಗುತ್ತಾರೆ. ಆದರೆ ಮಾಲ ಸಮುದಾಯದವರು ಇತ್ತೀಚೆಗೆ ಕಹಳೆಯನ್ನು ಊದುವದನ್ನು ಬಿಟ್ಟಿದ್ದಾರೆ.

ಮಾಲ ಸಮುದಾಯದವರು ಕುದರಿಮೋತಿ ಗ್ರಾಮದಲ್ಲಿ ವಾಸವಾಗಿದ್ದಾರೆ ಆ ಗ್ರಾಮದಲ್ಲಿ ಬುಡುಗ ಜಂಗಮದವರು ವಾಸವಾಗಿದ್ದಾರೆ. ಮಾಲ ಸಮುದಾಯದವರು ಬುಡುಗ ಜಂಗಮರ ಜೊತೆಗೆ ಒಳ್ಳೆಯ ಸ್ನೇಹ ಸಂಬಂಧವನ್ನು ಹೊಂದಿದ್ದಾರೆ. ಮಾಲ ಸಮುದಾಯದವರು ಬುಡುಗ ಜಂಗಮರ ಮದುವೆ ಸಮಾರಂಭಗಳಿಗೆ, ಜಾತ್ರಾ ಸಮಾರಂಭಗಳಿಗೆ, ಪ್ರದರ್ಶನ ಕಲೆಗಳನ್ನು ಆಡಲು ಸಾಹಾಯ ಮಾಡಲು ಈ ರೀತಿ ಪರಸ್ಪರ ಎರಡು ಸಮುದಾಯಗಳು ಪರಸ್ಪರ ಹಲವು ಜೀವನಾವರ್ತಕ ಕಾರ್ಯಕ್ರಮಗಳಿಗೆ ಬಾಗಿಯಾಗುತ್ತರೆ. ಕುದರಿಮೋತಿ ಪ್ರಸಿದ್ಧ ಮೊಹರಂ ಹಬ್ಬದ ಆಚರಣೆಯಲ್ಲಿ ಮಾಲ ಸಮುದಾಯದವರು ಬುಡುಗ ಜಂಗಮರ ಜೋತೆ ಸೇರಿ ಹಬ್ಬ ಆಚರಣೆ ಮಾಡಿ ತಮ್ಮ ಪ್ರದರ್ಶನ ಕಲೆಗಳನ್ನು ಪ್ರದರ್ಶಿಸುತ್ತಾರೆ.

ಕೊಪ್ಪಳದ ಸಿದ್ದೇಶ್ವರ ನಗರದಲ್ಲಿ ಮಾಲ ಸಮುದಾಯದವರು ವಾಸವಾಗಿದ್ದಾರೆ. ಅದೇ ಪ್ರದೇಶದಲ್ಲಿ ಬುಡುಗ ಜಂಗಮರು ವಾಸವಾಗಿದ್ದರೆ. ಮಾಲ ಸಮುದಾಯದವರು ಮತ್ತು ಬುಡುಗ ಜಂಗಮರು ಇಲ್ಲಿ ಸ್ನೇಹಪರತೆಯಿಂದ ಇರುತ್ತಾರೆ. ಏನಾದರು ಕೆಲಸ ಕಾರ್ಯಗಳು ಇದ್ದರೆ ಮತ್ತು ಎರಡು ಸಮುದಾಯಗಳ ಕಾರ್ಯಕ್ರಮಗಳು ಇದ್ದರೆ ಎರಡು ಸಮುದಾಯಗಳವರು ಪರಸ್ಪರ ಬಾಗವಹಿಸುತ್ತಾರೆ. ಇವರೆಡು ಸಮುದಾಯಗಳವರ ಭಾಷೆ ಒಂದೇ ಆಗಿರುತ್ತದೆ. ಆದ್ದರಿಂದ ತಮ್ಮ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ ಮತ್ತು ಪ್ರತಿಯೊಂದು ಕಷ್ಟ ಸುಖಗಳಲ್ಲಿ ಬಾಗಿಗಳಾಗುತ್ತಾರೆ, ಮತ್ತು ಎರಡು ಸಮುದಾಯಗಳು ಪರಸ್ಪರ ಜೀವನಾವರ್ತಕ ಕ್ರೀಯೆಗಳಲ್ಲಿ ಬಾಗಿಗಳಾಗುತ್ತರೆ.

ಕೊಪ್ಪಳ ಜಿಲ್ಲೆಯ ಬಿಡಚಟ್ನಿಹಾಳ ಎಂಬ ಗ್ರಾಮದಲ್ಲಿ ಸುಡುಗಾಡು ಸಿದ್ದರು ವಾಸವಾಗಿದ್ದಾರೆ ಈ ಸಮುದಾಯದವರ ಜೊತೆಗೆ ಮಾಲ ಸಮುದಾಯದವರು ಸ್ನೇಹ ಸಂಬಂದದಿಂದ ಇರುತ್ತಾರೆ ಹಲವು ಜೀವನಾವರ್ತಕ ಕಾರ್ಯಕ್ರಮಗಳಲ್ಲಿ ಪರಸ್ಪರ ಎರಡು ಸಮುದಾಯಗಳು ಬಾಗಿಯಾಗುತ್ತಿರುತ್ತಾರೆ. ಮತ್ತು ತಮ್ಮ ತಮ್ಮ ಕಷ್ಟ ಸುಖಗಳನ್ನು ಹಂಚಿಕೊಳ್ಳುತ್ತಾರೆ ಎಂಬುದು ತಿಳಿದು ಬಂದಿತು. ಮಾಲ ಸಮುದಾಯದವರು ಸುಡುಗಾಡು ಸಿದ್ದರ ಜೊತೆಗೆ ಬೇಟೆ ಆಡಲು ಹೊಗುತ್ತಿದ್ದರು ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಯಿತು

ಕೊಪ್ಪಳ ಜಿಲ್ಲೆಯ ಕನಕಪುರ ಎಂಬ ಗ್ರಾಮದಲ್ಲಿ ಚೆನ್ನದಾಸರು ವಾಸವಾಗಿದ್ದಾರೆ. ಮಾಲ ಸಮುದಾಯದವರು ಚೆನ್ನದಾಸರ ಜೊತೆಗೆ ಒಳ್ಳೆಯ ಬಾಂಧವ್ಯವನ್ನು ಹೊಂದಿದ್ದಾರೆ. ಮಾಲ ಸಮುದಾಯದವರು ಚೆನ್ನದಾಸರ ಜೀವನಾವರ್ತಕ ಕ್ರೀಯಗಳಲ್ಲಿ ಮತ್ತು ಸುಖ ದುಖಃಗಳನ್ನು ಹಂಚಿಕೊಳ್ಳುವದರಲ್ಲಿ ಪರಸ್ಪರ ಎರಡು ಸಮುದಾಯಗಳು ಬಾಗಿಯಾಗುತ್ತಾರೆ. ಈ ರೀತಿ ಮಾಲ

ಸಮುದಾಯದವರು ಇನ್ನಿತರ ಬುಡಕಟ್ಟು ಸಮುದಾಯಗಳಾದ ದುರಗ ಮುರಗಿಯರು, ರಾಮಕುಂಟಡಗಳು, ಜೋಗೆರ, ಬುಡಬುಡಕೆಯರು, ಗೊಂದಲಿಗರು, ಕಿಳ್ಳಕ್ಯಾತರು ಇಂತಹ ಹಲವು ವೃತ್ತಿಯವರ ಜೊತೆಗೆ ಮಾಲ ಸಮುದಾಯದವರು ಸ್ನೇಹ ಬಾಂಧವ್ಯದಿಂದ ಇರುತ್ತಾರೆ. ಮಾಲ ಸಮುದಾಯದವರು ಈ ಎಲ್ಲಾ ಜಾತಿ ಸಮುದಾಯದವರೊಂದಿಗೆ ಸ್ನೇಹದಿಂದ ಇರುತ್ತಾರೆ ಆದರೆ ಎಲ್ಲಾ ಸಮುದಾಯದವರ ಆಚಾರ ವಿಚಾರಗಳಿಗೂ ಮತ್ತು ಮಾಲ ಸಮುದಾಯದವರ ಆಚಾರ ವಿಚಾರಗಳಲ್ಲಿ ಸಾಮ್ಯತೆ ಕಂಡುಬರುತ್ತವೆ. ಸ್ನೇಹ ಸಂಬಂಧದಿಂದ ಇರುತ್ತಾರೆ ಹೊರತು ವೈವಾಯಿಕ ಸಂಬಂಧಗಳನ್ನು ನಡೆಸುವದಿಲ್ಲ ಎಂದು ಕ್ಷೇತ್ರಕಾರ್ಯದಲ್ಲಿ ತಿಳಿಯಿತು.

ಬಲಗೈ ಫಣ ಸಂಸ್ಕೃತಿಗೆ ಸೇರಿದ ತೀರಾ ಕೆಳಸ್ಥರದ ಸಮುದಾಯಗಳಿಗೂ ಹಾಗೂ ಮಾಲ ಸಮುದಾಯಗಕ್ಕೂ ಇರುವ ಸಂಬಂಧಗಳನ್ನು ಇಲ್ಲಿ ಅನುಲಕ್ಷಿಸಲಾಗಿದೆ.

ಸಿಂಥ್ ಮಾದಿಗರ ಸಂಸ್ಕೃತಿ ಎನ್ನುವ ಕೃತಿಯಲ್ಲಿ ಕೋಟಿಗಾನಹಳ್ಳಿ ರಾಮಣ್ಣನವರು ತಿಳಿಸುವಂತೆ ಎಡಗೈ ಫಣದ ಸಮುದಾಯಗಳಿಗೂ ಬಲಗೈ ಫಣದ ಸಮುದಾಯಗಳಿಗೂ ವ್ಯತ್ಯಾಸವಿದೆ. ಬಲಗೈ ಫಣಕ್ಕೆ ಸೇರಿದ ಎಲ್ಲಾ ಸಮುದಾಯಗಳು ಒಂದೇ ಮೂಲಗಳಿಂದ ಬಂದವುಗಳು. ಮುಖ್ಯವಾಗಿ ಕೃಷಿ ಮೂಲ ಸಮುದಾಯಗಳೆಲ್ಲಾ ಬಲಗೈ ಫಣಗಳಿಂದ ಉದ್ಭವವಾದವುಗಳು ಎನ್ನುತ್ತಾರೆ.' (ರಾಮಣ್ಣ, ಕೋಟಿಗಾನಹಳ್ಳಿ, ೧೯೯೨, ಪು ೫೪) ಆದರೆ ಇಂದು ಕರ್ನಾಟಕದ ಚಲವಾದಿ ಸಮುದಾಯಕ್ಕೂ ಹಾಗೂ ಕರ್ನಾಟಕದಲ್ಲಿ ನೆಲೆಸಿರುವ ಅಲೆಮಾರಿ ಮಾಲ ಸಮುದಾಯಕ್ಕೂ ಯಾವುದೇ ಸಾಮಾಜಿಕ ಸಂಬಂಧಗಳು ಉಳಿದುಕೊಂಡು ಬಂದಿಲ್ಲ. ಆದರೆ ಆಂಧ್ರ ಪ್ರದೇಶದ ಮಾಲ ಸಮುದಾಯವು ಜೀವನಾವರ್ತಿಯಾಗಿ ಆಚರಿಸುವ ಆಚರಣೆಗಳಲ್ಲಿ ಹಾಗೂ ಮಾಲ ಸಮುದಾಯದ ಜೀವನಾವರ್ತಿ ಆಚರಣೆಗಳಲ್ಲಿ ಬಹುತೇಕವಾಗಿ ಸಾಮ್ಯತೆ ಇನ್ನೂ ಉಳಿದುಕೊಂಡು ಬಂದಿದೆ.

ಹಾಗೆ ನೋಡಿದರೆ ಮಾಲ ಸಮುದಾಯವು ಬಲಗೈ ಫಣದ ಇತರ ಅಸ್ಪೃಶ್ಯ ಸಮುದಾಯಗಳಿಗಿಂತ ಚಲವಾದಿ ಸಮುದಾಯಕ್ಕೆ ಸಾಂಸ್ಕೃತಿಕವಾಗಿ ಹೆಚ್ಚು ಹತ್ತಿರವಾಗಿದೆ.

ಅಸ್ಪೃಶ್ಯರಲ್ಲಿಯೇ ಸಾಮಾಜಿಕವಾಗಿ ಮೇಲಿನ ಸ್ತರದಲ್ಲಿ ನಿಲ್ಲುವ ಹೊಲೆಯ, ಮಾದಿಗ ಮುಂತಾದ ಸಮುದಾಯಗಳು ಮಾಲದಂತಹ ಸಮುದಾಯಗಳನ್ನು ತಮಗಿಂತ ಕೆಳಸ್ಥರದ ಸಮುದಾಯಗಳೆಂದು ಪರಿಗಣಿಸುತ್ತವೆ.

ಮಾಲ ಸಮುದಾಯದಲ್ಲಿ ಹಲವು ಒಳಪಂಗಡಗಳಿದ್ದು ಅವು ಪರಸ್ಪರ ರಕ್ತ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದಕ್ಕೆ ನಿರಾಕರಿಸುತ್ತವೆ.

ಮಾಲ ಸಮುದಾಯದ ಹುಡುಗಿ ಅಥವಾ ಹುಡುಗನು ತಮ್ಮ ಸಮುದಾಯಕ್ಕೆ ತಿಳಿಯದಂತೆ ಬೇರೆ ಸಮುದಾಯದವರೊಂದಿಗೆ ದೈಹಿಕ ಸಂಬಂಧಗಳನ್ನು ಬೆಸೆದುಕೊಂಡಿದ್ದರೆ ಅಥವಾ ವಿವಾಹವಾಗಿದ್ದರೆ ಅಂಥವರನ್ನು ಜಾತಿ ಪಂಚಾಯತಿಯ ನಿರ್ಣಯದಂತೆ ಜಾತಿಯಿಂದ ಹೊರಹಾಕುತ್ತಾರೆ. ಜಾತಿ ಭ್ರಷ್ಟನಾದ ಪುರುಷನು ಜಾತಿಯೊಳಗೆ ಬರಲು ಆಪೇಕ್ಷಿಸಿದರೆ ಆಗಲೂ

ಸಹ ದೈವದವರ ಅನುಮತಿ ಮೇರೆಗೆ ಜಾತಿಯೊಳಗೆ ಸೇರಿಸಿಕೊಳ್ಳಲಾಗುತ್ತದೆ. ಆದರೆ ಮಹಿಳೆಯಾಗಿದ್ದು ಅದೇ ಅಪರಾಧವನ್ನು ಮಾಡಿದವರೆ ಅಂತಹ ಮಹಿಳೆಯನ್ನು ದೈವದವರು ಜಾತಿಯೊಳಗೆ ಕರೆದುಕೊಳ್ಳದೆ ಖಾಯಂಮ್ಮಾಗಿ ಜಾತಿಯಿಂದ ಹೊರಹಾಕುವರು.

ಇತರ ಸಮಾಜಗಳೊಂದಿಗೆ ಮಾಲ ಸಮುದಾಯದ ಸಂಬಂಧ ಕೇವಲ ದುಡಿಮೆಗೆ ಸಂಬಂಧಿಸಿದ್ದಾಗಿದೆ. ಅದರಾಚೆಗೆ ಇವರನ್ನು ಅಸ್ಪೃಶ್ಯರನ್ನಾಗಿಯೇ ಇತರ ಸಮಾಜದವರು ಪರಿಗಣಿಸುತ್ತಾರೆ. ಅಸ್ಪೃಶ್ಯ ಸಮುದಾಯಗಳೂ ಸಹ ಮಾಲ ಸಮುದಾಯವನ್ನು ತಮಗಿಂತ ಕೀಳು ಎಂದು ಭಾವಿಸುತ್ತವೆ.

ಇಂದು ಆಧುನಿಕತೆಯ ಪರಿಣಾಮಗಳಿಂದಾಗಿ ಮಾಲ ಸಮುದಾಯದವರು ತಮ್ಮ ಮೂಲ ವೃತ್ತಿಯಿಂದ ದೂರವಾಗಿ ಇತರ ಬದಲೀ ವೃತ್ತಿಗಳಿಗೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮುಖ್ಯವಾಗಿ ಕೃಷಿ ಹಾಗೂ ಕೃಷಿಯೇತರ ಕೂಲಿಗಳಾಗಿ, ರದ್ದಿ ಆಯುವ, ಕೂದಲು ಆಯುವ, ಭಿಕ್ಷಾಟನೆಯನ್ನು ಮಾಡುವ ಕೆಲಸ ಮಾಡುವಂತಾಗಿದೆ. ಮಾಲ ಸಮುದಾಯವು ಇತರ ಮೇಲ್ಜಾತಿಯ ಯಾವುದೇ ಸಮುದಾಯದೊಂದಿಗೆ ಯಾವುದೇ ರೀತಿಯ ಸಂಬಂಧವನ್ನು ಏರ್ಪಡಿಸಿಕೊಂಡ ಉದಾಹರಣೆಗಳಿಲ್ಲ.

ಬ್ರಾಹ್ಮಣ, ಲಿಂಗಾಯಿತ ಮುಂತಾದ ಮೇಲ್ಜಾತಿಗಳು ಮಾಲ ಸಮುದಾಯದವರನ್ನು ತೀರಾ ಕೀಳಾಗಿ ಪರಿಗಣಿಸುತ್ತವೆ. ಇಂದು ಕಾಲ ಬದಲಾದಂತೆ ಮಾಲ ಸಮುದಾಯದವರಿಗೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶ ಮಾಡುವುದಕ್ಕೆ ಅಲ್ಪಸ್ವಲ್ಪ ಅವಕಾಶವಿದೆ. ಆದರೂ ಈ ಸಮುದಾಯವನ್ನು ಇನ್ನೂ ಅಂತ್ಯಜರಲ್ಲಿಯೇ ಅಂತ್ಯಜರು ಎಂದು ಪರಿಗಣಿಸುವ ಪರಿಪಾಠ ಉಳಿದುಕೊಂಡು ಬಂದಿದೆ.

ಮಾಲ ಸಮುದಾಯದ ಆಚರಣೆ, ವಿಧಿ ನಿಷೇಧಗಳು ಬಹುತೇಕ ಕರ್ನಾಟಕದ ಹೊಲೆಯ ಸಮುದಾಯದ ಆಚರಣೆಗಳನ್ನೇ ಹೋಲುತ್ತವೆಯಾದರು ಕೆಲವು ಆಚಾರ ವಿಚಾರಗಳಲ್ಲಿ ಬದಲಾವಣೆಗಳು ಇರುತ್ತವೆ. ಪರ್ವತ ಮಲ್ಲಯ್ಯನವರು ಮತ್ತು ಕರ್ನಾಟಕದ ಹೊಲೆಯರು ಈ ಎರಡು ಸಮುದಾಯಗಳ ನಡುವೆ ಬಿನ್ನಾಭಿಪ್ರಾಯ ಕಂಡುಬರುತ್ತದೆ. ಈ ಎರಡು ಸಮುದಾಯಗಳು ಯಾವುದೆ ಕಾರ್ಯಕ್ರಮಗಳಿಗೆ ಪ್ರತ್ಯಕ್ಷವಾಗಿ ಇರಬಹುದು ಪರೋಕ್ಷವಾಗಿ ಇರಬಹುದು ಪರಸ್ಪರ ಬಾಗಿಯಾಗುವುದಿಲ್ಲ ಮತ್ತು ಕರ್ನಾಟಕದ ಹೊಲೆಯ ಸಮುದಾಯದವರಿಗೂ ಮತ್ತು ಮಾಲ(ಪರ್ವತ ಮಲ್ಲಯ್ಯ) ಸಮುದಾಯದವರಿಗೂ ಯಾವುದೆ ವೈವಾಹಿಕ ಸಂಬಂಧಗಳು ನಡೆದಿರುವುದಿಲ್ಲ ಪರ್ವತ ಮಲ್ಲಯ್ಯ ಎಂದು ಗುರುತಿಸಿಕೊಂಡಿರುವ ಸಮುದಾಯದ ಹನ್ನೊಂದು ಮನೆತನಗಳೊಳಗಡೆ ಮಾತ್ರ ವಿವಾಹ ಸಂಬಂಧಗಳು ಏರ್ಪಟ್ಟಿರುತ್ತವೆ. ಇವರ ವೈವಾಹಿಕ ಸಂಬಂಧಗಳು ಆಂಧ್ರಪ್ರದೇಶದ ಮಾಲ ಸಮುದಾಯದವರ ಜೊತೆಗೆ ಏರ್ಪಟ್ಟಿರುತ್ತವೆ. ಕಾರಣ ಮಾಲ ಸಮುದಾಯದವರ ಮೂಲ ನೆಲೆ ಆಂಧ್ರಪ್ರದೇಶವಾಗಿರುವದರಿಂದ ತಮ್ಮ ತಯ್ನಾಡಿನವರ ಜೊತೆಗೆ ಹಲವಾರು ಆಚಾರ ವಿಚಾರಗಳಲ್ಲಿ ಬಾಗಿಯಾಗುತ್ತಾರೆ. ಆದರೆ ಪರ್ವತ ಮಲ್ಲಯ್ಯನವರ ಯಾವುದೆ ಅಧಿಕೃತ ದಾಖಲಾತಿಗಳು ಆಂಧ್ರಪ್ರದೇಶದಲ್ಲಿ ಇರುವುದಿಲ್ಲ. ಕನಾಟಕದಲ್ಲಿ ಮಾತ್ರ ಕಂಡುಬರುತ್ತವೆ. ಮಾಲ ಸಮುದಾಯ ತಮ್ಮ ಮೂಲ ವೃತ್ತಿಯ ಕುರಿತು ವಿಸ್ಮೃತಿಗೆ ಒಳಗಾಗಿದೆಯೆಂಬುದು ಮೇಲ್ನೊಟಕ್ಕೆ ತಿಳಿಯುವುದಾದರೂ

ಅವರು ತಮ್ಮ ಸಾಂಸ್ಕೃತಿಕ ಆಟಕ್ಕಾಗಿ ಉಪಯೋಗಿಸುವ ವಾದ್ಯ ಪರಿಕರಗಳು, ಅವರ ಸಾಂಸ್ಕೃತಿಕ ಆಟಗಳಾದ ಚಕ್ರದ ಆಟಗಳನ್ನು, ಕೋಲಿನ ಆಟಗಳನ್ನು, ಬೆಂಕಿ ಚಕ್ರದ ಆಟಗಳನ್ನು, ದಾಲಪಟದಿಂದ ಆಡುವ ಸಮರ ಕಲೆಯನ್ನು ನೆನಪಿಸುವ ಪ್ರದರ್ಶನ ಕಲೆಗಳು ಮಾಲ ಸಮುದಾಯವರು ಹಿಂದೆ ಯಾವ ವೃತ್ತಿಯನ್ನು ಅನುಸರಿಸಿದ್ದರು ಎಂಬುದನ್ನು ಪರೋಕ್ಷವಾಗಿ ತಿಳಿಸುತ್ತವೆ. ಮಾಲ ಸಮುದಾಯದವರು ಆಡುವ ಆಟಗಳು ಬಹಳ ಕಠಿಣಮಯವಾಗಿರುತ್ತವೆ. ಕತ್ತಿವರಸೆಯಂತಹ ಆಟಗಳು ಬಹಳ ಅಪಾಯಕಾರಿಗಳಾಗಿರುತ್ತವೆ. ಇಂದು ಆ ಆಟಗಳು ಮಾಲ ಸಮುದಾಯದವರ ಜೀವನಾಧಾರಕಗಳಾಗಿದ್ದು ಅವು ವಂಶಪರಂಪರಾಗತವಾದವುಗಳಾಗಿವೆ. ಇವರಿಗೆ ಯಾವುದೇ ಆರ್ಥಿಕ ಭದ್ರತೆ ಇರುವುದಿಲ್ಲ ತಮ್ಮ ಆಟಗಳ ವ್ಯಾಪ್ತಿಯಲ್ಲಿಯೇ ಅವರು ಬದುಕುತ್ತಿರುವುದು ಕಾಣುತ್ತದೆ. ತಮ್ಮ ಮುಂದಿನ ಜೀವನ ಕ್ರಮಕ್ಕಾಗಿ ಅವರು ತಮ್ಮ ಮಕ್ಕಳಿಗೂ ದಿನನಿತ್ಯ ಕಲಿಸಿಕೊಡುತ್ತಾರೆ ಆಟದಿಂದ ಬಂದಂತಹ ಅಲ್ಪ ಸ್ವಲ್ಪ ಹಣದಲ್ಲಿಯೇ ಅವರು ಬದುಕುತ್ತಿದ್ದಾರೆ ಬಹಳ ಅನಕ್ಷರತೆಯಿರುವ ಇವರಿಗೆ ಬದುಕಲಿಕ್ಕೆ ಪರ್ಯಾಯ ವ್ಯವಸ್ಥೆಯನ್ನು ಮತ್ತು ಬೇರೆ ಬೇರೆ ಮಾರ್ಗಗಳನ್ನು ಕಂಡುಕೊಳ್ಳಲಿಕ್ಕೆ ಸಾಧ್ಯವಾಗುತ್ತಿಲ್ಲ.

ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರ

ಮಾಲ (ಪರ್ವತ ಮಲ್ಲಯ್ಯ) ಸಮುದಾಯದವರು ಸಾಮಾಜಿಕ ಮತ್ತು ಸಾಂಸ್ಕೃತಿಕತೆಯಲ್ಲಿ ಇತ್ತೀಚೆಗೆ ಕೆಲವು ಅಂತರವನ್ನು ಕಂಡುಕೊಂಡಿದ್ದಾರೆ. ಸಾಮಾಜಿಕವಾಗಿ ಗುರುತಿಸಿಕೊಳ್ಳಲಿಕ್ಕೆ ಪ್ರಯತ್ನಿಸುತ್ತಿದ್ದಾರೆ. ಈ ಸಮುದಾಯದವರು ಮೋದಲು ತಮ್ಮ ನೆಲೆಯನ್ನು ಕಂಡುಕೊಂಡಿದ್ದಾರಾದರು ಸಹ ತಮ್ಮ ಉಪಜೀವನಕ್ಕಾಗಿ ಬೇರೆ ಬೇರೆ ಊರುಗಳಿಗೆ ಹೋದವರು ಅವಾಗವಾಗ ತಾವು ನೆಲೆ ಕಂಡುಕೊಂಡ ಊರಿಗೆ ಬರುತ್ತಿರಲಿಲ್ಲ. ನಂತರ ಬೇರೆ ಬೇರೆ ಪ್ರದೇಶಕ್ಕೆ ಹೊದಂತಹ ಈ ಸಮುದಾಯದ ಎಲ್ಲಾ ಸದಸ್ಯರು ಪ್ರತಿ ಮೂರು ವರ್ಷಕ್ಕೊಮ್ಮ ಮಾಹಾನವಮಿ ಹಬ್ಬಕ್ಕೆಂದು ಚಿಲಕಮುಖಿ ಗ್ರಾಮದ ದುರ್ಗಾದೇವಿಯ ಜಾತ್ರೆಗೆ ಮಾತ್ರ ಬರುತ್ತಿದ್ದರಂತೆ. ದುರ್ಗಾದೇವಿಯ ಜಾತ್ರೆಗೆ ಬರದೆ ಇದ್ದವರಿಗೆ ೨ ರೂಪಾಯಿ ದಂಡ ಹಾಕುತ್ತಿದ್ದರಂತೆ ನಂತರದ ದಿನಮಾನಗಳಲ್ಲಿ ೧೦೦ ರೂಪಾಯಿ ಆಯಿತು. ದುರ್ಗಾದೇವಿಯ ಜಾತ್ರಾ ಸಮಯದಲ್ಲಿ ಎಲ್ಲರೂ ಸೇರಿ ಸಾಮೂಹಿಕವಾಗಿ ಹಣವನ್ನು ಕೂಡಿಸಿ ಒಂದು ಕುರಿ ತಂದು ದುರ್ಗಾದೇವಿಯ ಹೆಸರಿನಲ್ಲಿ ಕುರಿಬ್ಯಾಟಿ ಮಾಡಿ ಈ ಸಮುದಾಯದ ಎಲ್ಲಾ ಸದಸ್ಯರು ರಾತ್ರಿ ಹೊತ್ತು ಸೇವಿಸುತ್ತಿದ್ದರು. ದಸರಾ ಆದ ಒಂದು ತಿಂಗಳಿನವರೆಗೆ ಈ ಸಮುದಾಯದ ಯವೊಬ್ಬ ಸದಸ್ಯರು ತಮ್ಮ ಸಮುದಾಯದ ಹಿರಿಯರಿಗೆ ಹೆಳದೆ ಕೆಳದೆ ಯಾವ ಊರಿಗೆ ಹೊಗುವಂತಿರಲಿಲ್ಲ. ಹಾಗೆನಾದರು ಹೋದರೆ ೧೦೦೦ ರೂಪಾಯಿ ಅಥವಾ ೧೫೦೦ ರೂಪಾಯಿ ದಂಡ ವಿಧಿಸುತ್ತಿದ್ದರು. ದಸರಾ ಹಬ್ಬ ಆದ ತಿಂಗಳಿನೊಳಗೆ ಈ ಸಮುದಾಯದವರೆಲ್ಲರು ಸೇರಿಕೊಂಡು ಜಾತಿ ಪಂಚಾಯತಿ ಮಾಡಿತ್ತಿದ್ದರು. ಆ ತಿಂಗಳಿನೊಳಗೆ ೧೧ ದಿನಗಳ ಕಾರ್ಯಕ್ರಮವನ್ನು ನಿಗದಿಪಡಿಸುತ್ತಿದ್ದರಂತೆ, ಅವುಗಳಲ್ಲಿ ಮುಖ್ಯವಾಗಿ ೫ ದಿವಸ ಮದುವೆ ಕಾರ್ಯಕ್ರಮಗಳನ್ನು ನಿಗದಿಪಡಿಸುತ್ತಿದ್ದರು, ೧ ದಿವಸ ಈ ಸಮುದಾಯದ ಎಲ್ಲಾ ಕುಟುಂಬದ ಮಕ್ಕಳ ಜವಳಿ ಕಾರ್ಯಕ್ರಮ ಮತ್ತು ಬೇರೆ ಊರುಗಳಿಗೆ ಅಲೆಮಾರಿಯಾಗಿ ಹೋದಾಗ ಈ ಸಮುದಾಯದವರು ಸತ್ತು(ಮರಣ)

ಹೋಗಿದ್ದರೆ ಅವರ ಕಾರ್ಯಕ್ರಮವನ್ನು ಹಾಗೆಯೇ ಇಟ್ಟಿರುತ್ತಿದ್ದರು ಅಂತಹ ಸತ್ತವರ (ದೈವದೊಳಗೆ ತಗೆದುಕೋಳ್ಳುವುದು)ಕಾರ್ಯಕ್ರಮವನ್ನು ೨ ದಿವಸ, ಮತ್ತು ಈ ಸಮುದಾಯದವರ ಯಾವುದೇ ಕುಟುಂಬದವರ ಒಳಜಗಳಗಳು, ವಿವಾಹ ವಿಚ್ಚೆಧನಗಳು, ಅಂತರ್ಜಾತಿಯ ವಿವಾಹದ ಸಮಸ್ಯಗಳು, ಅನೈತಿಕ ಸಂಬಂಧದ ಸಮಸ್ಯಗಳು, ಇನ್ನಿತರ ಎಲ್ಲಾ ಸಮಸ್ಯಗಳನ್ನು ಬಗೆಹರಿಸಲೆಂದು ೩ ದಿವಸ ಕಟ್ಟೆಮನೆಯ ಯಜಮಾನರ ಸಮ್ಮುಖದಲ್ಲಿ, ಕಟ್ಟೆಮನೆ ಯಜಮಾನರಲ್ಲಿ ಗೌಡ (ನರಸಲು) ನ್ಯಾಯ ಮಾಡುತ್ತಾನೆ. ಇದಕ್ಕೆ ಸಾಕ್ಷಿದಾರರಾಗಿ ಶಾನುಭೋಗ (ಗುಂಡಸರೆಡ್ಡಿ), ವಾಲಿಕಾರ (ಲದ್ದಲು) ಇರುವರು. ದೈವದ ಸಮ್ಮುಖದಲ್ಲಿ ಇಡೀ ಸಮುದಾಯದ ಎಲ್ಲಾ ಸಮಸ್ಯಗಳನ್ನು ೩ ದಿವಸಗಳವರೆಗೆ ಬಗೆಹರಿಸುತ್ತಾರೆ. ನಂತರ ಈ ಸಮುದಾಯದ ಸಮಸ್ಯಗಳು ಕಾರ್ಯಕ್ರಮಗಳು ಮುಗಿದ ಮೇಲೆ ಈ ಸಮುದಾಯದ ಎಲ್ಲಾ ಸದಸ್ಯರು ಹಣವನ್ನು ಸೇರಿಸಿ(ಕೂಡಿಸಿ) ಒಂದು ಕುರಿಯನ್ನು ತಂದು ಸಾಮೂಹಿಕವಾಗಿ ಊಟ ಮಾಡುತ್ತಾರೆ. ನಂತರ ಮತ್ತೊಮ್ಮೆ ಸಮುದಾಯದ ಸಭೆ ಮಾಡಿ, ಕಟ್ಟೆಮನೆ ಹಿರಿಯರಿಂದ ಒಂದು(ಮಾತು) ವಾಕ್ಯವಾಗುತ್ತದೆ. ಅದೇನೆಂದರೆ ಯಾರು ಎಲ್ಲಿಗೆ ಬೇಕಾದರು ದುಡಿಯಲು ಹೋಗಬಹುದು, ಎಲ್ಲರು ಮುಂದಿನ ಮೂರು ವರ್ಷದ ದುರ್ಗಾದೇವಿಯ ಜಾತ್ರೆಗೆ ಬರುವಂತಾಗಲಿ ಎಲ್ಲರಿಗೂ ಶುಭವಾಗಲಿ ಎಂದು ಅಪ್ಪಣೆಯನ್ನು ಕೊಡುತ್ತಾರೆ. ಆ ನಂತರ ಈ ಸಮುದಾಯದ ಸದಸ್ಯರು ತಮಗೆ ಬೇಕಾದ ಸ್ಥಳಗಳಿಗೆ ಹೋಗಲು ನಿರ್ಧರಿಸುವರು. ಈ ಸಮುದಾಯದವರು ತಮಗೆ ಬೇಕಾದ ಊರುಗಳಿಗೆ ಅಲೆಮಾರಿಗಳಾಗಿ ಹೋಗಬೇಕಾದರೆ, ತಾವು ನೆಲೆ ಕಂಡುಕೊಂಡ ಊರಿನಲ್ಲಿನ ಪಕ್ಕದ ಊರಿನ ಸಿಮೇಯಲ್ಲಿ ಒಂದು ದಿವಸ ರಾತ್ರಿ ಗುಡಾರ ಹಾಕಿಕೊಂಡು ಅಲ್ಲಿ ನಿದ್ದೆ ಮಾಡಿದ ನಂತರ ಮರು ದಿವಸ ತಮ್ಮ ಜೀವನ ನಿರ್ವಹಣೆಗಾಗಿ ಹೊರಡುತ್ತಿದ್ದರಂತೆ. ಆದರೆ ಇತ್ತೀಚೆಗೆ ಕುರಿಬ್ಯಾಟಿ ಮಾಡುತ್ತಾರಾದರು ಎಲ್ಲರು ಜಾತ್ರೆಗೆ ಬರಬೇಕೆಂಬ ನಿಯಮವಿಲ್ಲ. ಆದರೆ ಇಂದು ಆ ಪದ್ದತಿ ಈ ಸಮುದಾಯದವರಲ್ಲಿ ಮಾಯವಾಗಿದೆ. ಜಾತ್ರೆಗೆ ಯಾರು ಬೇಕಾದವರು ಬರಬಹುದು ಇಲ್ಲ ಬಿಡಬಹುದು. ಆ ಊರಿನಲ್ಲಿದ್ದ ಮಾಲ ಸಮುದಾಯದ ಸದಸ್ಯರು ದುರ್ಗಾದೇವಿಯ ಜಾತ್ರೆಯನ್ನು ಮಾಡುತ್ತಾರೆ. ಮತ್ತು ತಮ್ಮ ತಮ್ಮ ಮಕ್ಕಳಿಗೆ ಜವಳಿ ತೆಗೆಸುವ ಕಾರ್ಯವನ್ನು ಇತ್ತೀಚೆಗೆ ತಮಗೆ ಇಷ್ಟವಾದ ದೇವರಿಗೆ ಬೇಡಿಕೊಂಡು ಜವಳಿಯನ್ನು ತೆಗೆಸುತ್ತಾರೆ. ಆದರೆ ಇತ್ತೀಚೆಗೆ ಇಂತಹ ದಂಡ ಮಾಯವಾಗಿರುವುದು ಕ್ಷೇತ್ರಕಾರ್ಯದ ಮುಖಾಂತರ ತಿಳಿಯಿತು. ಮದುವೆ ಕಾರ್ಯಕ್ರಮದ ವಿಧಾನದಲ್ಲಿ ಬದಲಾವಣೆಯಾಗಿದೆ.

ಈ ಸಮುದಾಯದ ಜೀವನಾವರ್ತಕ ಆಚರಣೆಗಳಲ್ಲಿ ಇತ್ತಿಚೆಗೆ ಹಲವಾರು ರೀತಿಯ ಸ್ಥಿತ್ಯಂತರವನ್ನು ಕಾಣಲಾಗಿದೆ. ಈ ಸಮುದಾಯದಲ್ಲಿ ಹುಡುಗನಿಗೆ ಹುಡುಗಿಯನ್ನು ಕೊಡಬೇಕಾದರೆ ಹುಡುಗ ಕನಿಷ್ಟ ೩ ವರ್ಷ ಹುಡುಗಿಯ ತಂದೆ ತಾಯಿಯ ಮನೆಯಲ್ಲಿ ಇರಬೇಕಿತ್ತು ಅಂದಾಗ ಮಾತ್ರ ಕನ್ಯೆಯನ್ನು ಕೊಡಬೇಕೆನ್ನುವ ನಿಯಮ ಈ ಸಮುದಾಯದವರಲ್ಲಿ ಇತ್ತು. ಆದರೆ ಆ ಪದ್ಧತಿಯನ್ನು ಈ ಸಮುದಾಯದವರು ಇಂದು ಇದನ್ನು ಆಧುನಿಕರಣಕೊಳಪಡಿಸಿಕೊಂಡಿದ್ದಾರೆ. ಹುಡುಗ ಹುಡಿಗಿಯ ತಂದೆ ತಾಯಿಯ ಮನೆಯಲ್ಲಿ ಮೂರು ವರ್ಷ ಇದ್ದು ಮದುವೆ ಮಾಡಿಕೊಳ್ಳಬೇಕೆನ್ನುವ ನಿಯಮವಿಲ್ಲ. ಈ ಸಮುದಾಯದವರಲ್ಲಿ ಮದುವೆಗಳು ಮೊದಲು ೫ ದಿನಗಳವರೆಗೆ ಮನೆಯ ಮುಂದೆ ನಡೆಯುತ್ತಿದ್ದವು

ಆದರೆ ಇಂದು ಮದುವೆಗಳು ಒಂದು ದಿವಸ ಮಾತ್ರ ನಡೆಯುತ್ತವೆ. ಮತ್ತು ಮದುವೆಗಳನ್ನು ಹೆಚ್ಚಾಗಿ ದೇವಸ್ಥಾನಗಳಲ್ಲಿ ಮಾಡಿಕೊಳ್ಳುತ್ತಾರೆ. ಮೊದಲು ತರವಿನ ಪದ್ದತಿ ಈ ಸಮುದಾಯದವರಲ್ಲಿ ಇತ್ತು. ಇಂದು ಅದರ ಬದಲಾಗಿ ವರಧಕ್ಷಿಣೆ ಪದ್ಧತಿ ಚಾಲ್ತಿಯಲ್ಲಿರುತ್ತದೆ. ಈ ಸಮುದಾಯದಲ್ಲಿ ಒಳಜಗಳಗಳು ಇದ್ದರೆ ಕಟ್ಟೆಮನೆಯ ಯಜಮಾನರ ಸಮ್ಮುಖದಲ್ಲಿ ಬಗೆಹರಿಸುತ್ತಿದ್ದರು. ಆದರೆ ಇಂದು ಈ ಸಮುದಾಯದ ಕೆಲವರು ಕಾಯ್ದೆ ಕಾನೂನಿನ ಮೊರೆ ಹೊಗುತ್ತಿದ್ದಾರೆ. ಮಾಲ ಸಮುದಾಯದವರು ಯಾವುದಾದರು ಪ್ರದೇಶಕ್ಕೆ ಹೊಗಬೇಕಾದರೆ ಜಾತ್ರೆ ಮುಗಿದ ನಂತರ ಎಲ್ಲಾ ಕಾರ್ಯಕ್ರಮಗಳನ್ನು ಮುಗಿಸಿ ಹಿರಿಯರ ಒಪ್ಪಿಗೆ ಪಡೆದು ಬೇರೆ ಪ್ರದೇಶಕ್ಕೆ ದುಡಿಯಲೆಂದು ವಲಸೆ ಹೊಗುತ್ತಿದ್ದರು ಆದರೆ ಇಂದು ಈ ಪದ್ಧತಿ ಮಾಯವಾಗಿರುತ್ತದೆ. ಇವರು ಆಚರಿಸುವ ಹಬ್ಬ ಆಚರಣೆಗಳಲ್ಲಿ ಬದಲಾವಣೆಯನ್ನು ಮಾಡಿಕೊಂಡಿದ್ದಾರೆ. ಈ ರೀತಿ ಮಾಲ ಸಮುದಾಯದವರು ಹಲವಾರು ಜೀವನಾವರ್ತಕ ಕ್ರಿಯಾವೀಧಿಗಳಲ್ಲಿ ಬದಲಾಣೆ ಮಾಡಿಕೊಂಡಿದ್ದಾರೆ. ಮಾಲ ಸಮುದಾಯದವರು ಆಡುವ ಸಾಂಸ್ಕೃತಿಕ ಪ್ರದರ್ಶನ ಕಲೆಗಳಲ್ಲಿ ಬದಲಾವಣೆಯಾಗಿರುತ್ತದೆ ಮಾಲ ಸಮುದಾಯದವರು ತಮ್ಮ ಸಾಂಸ್ಕೃತಿಕ ಆಟಗಳೇ ತಮ್ಮ ಜೀವನಾಧಾರ ಎಂದುಕೊಂಡು ಅನಾದಿ ಕಾಲದಿಂದಲು ಇವರು ತಮ್ಮ ಸಾಂಸ್ಕೃತಿಕ ಪ್ರದರ್ಶನ ಕಲೆಗಳನ್ನು ೩೦ ರಿಂದ ೪೦ ವರ್ಷದ ಹಿಂದೆ ಮಾಲ ಸಮುದಾಯದವರು ತಮ್ಮ ಹೊಟ್ಟೆ ಪಾಡಿಗಾಗಿ ಊರು ಊರು ಹಳ್ಳಿ ಮತ್ತು ಪಟ್ಟಣದ ಕಡೆಗೆ ತಮ್ಮ ಜೋಪಡಿಗಳನ್ನು ತೆಗೆದುಕೊಂಡು ತಮ್ಮ ಮಕ್ಕಳನ್ನು ಕರೆದುಕೊಂಡು ಕಾಲ್ನಡಿಗೆಯಿಂದ ಸಂಚಾರ ಮಾಡುತ್ತಿದ್ದರು. ತಾವು ತಂಗಿದ್ದ ಊರಿನ ಅಗಸೆಯಲ್ಲಿ ನಿಂತು ಹಳ್ಳಿಯ ಜನರಿಗೆ ಕೇಳುವಂತೆ ಜೋರಾಗಿ ಸಂಬಾಳ ಬಾರಿಸಿ ಊರಿನ ಹಿರಿಯರನ್ನು, ಯುವಕರನ್ನು, ಮಕ್ಕಳನ್ನು ಒಂದೆಡೆ ಸೇರುವ ಹಾಗೆ ಸಂಬಾಳವನ್ನು ಡಬಡಬನೆ ಬಾರಿಸುತ್ತಿದ್ದರು. ಊರಿನ ಜನರೆಲ್ಲರು ಮಾಲ ಸಮುದಾಯದವರ ತಂಗಿದ ಕಡೆ ಹಳ್ಳಿಯ ಎಲ್ಲಾ ಜನರು ಒಂದೆಡೆ ಸೇರಿದ ನಂತರ ಮಾಲ ಸಮುದಾಯದವರು ತಮ್ಮ ವಂಶಪಾರಂಪರ್ಯ ಪ್ರದರ್ಶನ ಕಲೆಗಳನ್ನು ಸುಮಾರು ೧೫-೧೬ ಆಟಗಳನ್ನು ಊರಿನ ನೆರೆದ ಜನರ ಎದುರಿಗೆ ಪ್ರದರ್ಶಿಸುತ್ತಿದ್ದರು. ಮಾಲ ಸಮುದಾಯದವರು ತಮ್ಮ ವಂಶಪಾರಂಪರ್ಯ ಪ್ರದರ್ಶನ ಕಲೆಗಳನ್ನು ಆಡಿದ ನಂತರ ವಿಕ್ಷಿಸಿದ ಊರಿನ ಜನರು ತಮಗೆ ತಿಳಿದಷ್ಟು ಒಂದು ರೂಪಾಯಿ, ಎರಡು ರೂಪಾಯಿ, ೫-೧೦ ರೂಪಾಯಿ ಈ ರೀತಿ ಧಕ್ಷಿಣೆಯನ್ನು ಒಂದು ಪ್ಲೇಟಿನಲ್ಲಿ ಹಾಕುತ್ತಿದ್ದರು. ಊರಿನ ಮುಖಂಡರು ಹಾಕಿದ ಹಣವನ್ನು ಮಾಲ ಸಮುದಾಯದವರು ಸ್ವೀಕರಿಸಿ ತಮ್ಮ ಆರ್ಥಿಕ ಜೀವನ ಸಾಗಿಸಲು ಉಪಯೋಗಿಸುತ್ತಿದ್ದರು. ಮತ್ತು ಊರಿನ ಹಿರಿಯರು ಕೊಟ್ಟಂತಹ ರೊಟ್ಟಿ, ಅನ್ನ, ಪಲ್ಯ, ಸಾಂಬಾರನ್ನು ಮಾಲ ಸಮುದಾಯದವರು ತಮ್ಮ ಮಕ್ಕಳಿಗೆ ಕೊಟ್ಟು, ತಾವು ತಿಂದು ಮಲಗುತ್ತಿದ್ದರು. ಮುಂಜಾನೆ ಎದ್ದು ಯಥಾಸ್ಥಿತಿ ಮುಂದಿನ ಊರಿಗೆ ಅಥವಾ ಪಕ್ಕದ ಊರಿಗೆ ತಮ್ಮ ಹೊಟ್ಟೆಪಾಡಿಗಗಿ ತಮ್ಮ ಪ್ರದರ್ಶನ ಕಲೆಗಳನ್ನು ಪ್ರದರ್ಶಿಸಲು ಹೋಗುತ್ತಿದ್ದರು. ಇದೇ ರೀತಿ ವರ್ಷವಿಡೀ ಸಂಚಾರಿ ಜೀವನವನ್ನು ಮಾಡುವುದು ಇವರ ಪ್ರಮುಖ ಉದ್ಯೋಗವಾಗಿತ್ತು. ಆದರೆ ಇತ್ತೀಚೆಗೆ ಅಂದರೆ ೧೦-೧೨ ವರ್ಷದ ಹಿಂದೆ ಪ್ರದರ್ಶನ ಕಲೆಗಳನ್ನಾಡಲು ಒಂಬತ್ತು ಸಂಘಗಳನ್ನು ಹಂತ ಹಂತವಾಗಿ ಚಾಲನೆಗೆ ತಂದಿದ್ದಾರೆ. ಇತ್ತೀಚೆಗೆ ಇವರ ಆಟದ ವಿಧಗಳು ೨೪ ಆಗಿರುತ್ತವೆ ಈ ಸಂಘಗಳವರು ಪ್ರದರ್ಶನ ಕಲೆಗಳನ್ನು ಪ್ರದರ್ಶಿಸಲು ದೊಡ್ಡ ದೊಡ್ಡ ಕಾರ್ಯಕ್ರಮಗಳಿಗ,

ಆಹ್ವಾನಿತ ಕಾರ್ಯಕ್ರಕಗಳಿಗೆ, ಮದುವೆ ಕಾರ್ಯಕ್ರಮಗಳಿಗೆ, ಹೊಗುತ್ತಾರೆ ಮತ್ತು ತಮ್ಮ ವಂಶಪಾರಂಪರಿಕ ಕಲೆಯ ಜೊತೆಗೆ ಇನ್ನಿತರ ಸಾಂಸ್ಕೃತಿಕ ಆಟಗಳನ್ನು ಕಲಿತುಕೊಂಡಿದ್ದಾರೆ ಈ ರೀತಿಯ ಸಾಂಸ್ಕೃತಿಕ ಸ್ಥಿತ್ಯಂತರವನ್ನು ಕಂಡುಕೊಳ್ಳುವಲ್ಲಿ ಪ್ರಯತ್ನಿಸುತ್ತಿದ್ದಾರೆ.

ಕೊನೆ ಟಿಪ್ಪಣಿ

೧ Russul R V: 1993 The Tribes and Castes of the Central Provinces of India: 1993:189

೨ ಶಂಕರ ನಾರಾಯಣ ತೀ ನಂ: ಕಾಡುಗೊಲ್ಲರ ಆಚರಣೆ: ೧೯೮೬:೨೫

೩ ಪುರುಷೋತ್ತಮ ಬಿಳಿಮಲೆ: ಕೂಡುಕಟ್ಟು: ೧೯೯೭: ೨೭

೪ ________________ ೧೯೯೭:೫೧

ಅಧ್ಯಾಯ ನಾಲ್ಕು
ಆರ್ಥಿಕ ಜೀವನ ಮತ್ತು ಅವರ ಸಂಘಗಳು

೪.೧ ಸಾಂಪ್ರದಾಯಕ ವೃತ್ತಿ

೪.೨ ಅವಲಂಬಿತ ವೃತ್ತಿಗಳು

೪.೩ ಮಾಲ ಸಮುದಾಯದ ಕಾಯಕ ಮಾಡಲು ಅನರ್ಹರು, ಕಾಯಕಾರ್ಹರು

೪.೪ ಮಾಲ ಸಮುದಾಯದ ಅವಲಂಭಿತರು, ಕಾಯಕ ಮಾಡಲು ಅನರ್ಹರು, ಕಾಯಕಾರ್ಹರ ವಿವರ

೪.೫ ೨೦೧೧ರ ಜನಗಣತಿ ಪ್ರಕಾರಕರ್ನಾಟಕರಾಜ್ಯದಕಾಯಕ ಮಾಡಲು ಅನರ್ಹರು ಹಾಗೂ ಕಾಯಕಾರ್ಹರ ವಿವರ

೪.೬ ಮಾಲ ಸಮುದಾಯದ ಕಾಯಕಾರ್ಹರು ಹಾಗೂ ಕಾಯಕದಲ್ಲಿ ನಿರತರಾದವರ ವಿವರ

೪.೭. ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ವಿವಿಧ ವೃತ್ತಿಯಲ್ಲಿ ತೊಡಗಿದವರ ಜನಸಂಖ್ಯೆ

೪.೮ ವಿವಿಧ ವೃತ್ತಿಗಳಲ್ಲಿ ತೊಡಗಿರುವ ಮಾಲ ಸಮುದಾಯದ ಜನರ ಜಿಲ್ಲಾವಾರು ವಿವರ

೪.೯ ಕೃಷಿ ಭೂಮಿ ಹೊಂದಿದ ಮಾಲ ಸಮುದಾಯದ ಕುಟುಂಬಗಳ ಸಂಖ್ಯೆ

೪.೧೦ ವಸತಿ

೪.೧೧ ಪಶು ಸಂಪತ್ತು

೪.೧೨ ಬೇಟೆ

೪.೧೩ ಮಾಲ ಸಮುದಾಯ ಹಾಗೂ ಅವರ ಸಂಘಸಂಸ್ಥೆಗಳು

೪.೧೩.೧ ಅಲೆಮಾರಿ ಮಾಲ ಕ್ಷೇಮಾಭಿವೃದ್ದಿ ಸಂಘಟನೆ–ಹುಬ್ಬಳ್ಳಿ

೪.೧೩.೨ ಮಾಲ ಸಮುದಾಯ ಅಲೆಮಾರಿ ಅಭಿವೃದ್ಧಿ ಸಂಘ–ಕೊಪ್ಪಳ

೪.೧೩.೩ ಮಾಲ ಸಮುದಾಯದಕಲಾವಿದರ ವಿವಿಧ ಸಂಘಗಳು

ಅಧ್ಯಾಯ ನಾಲ್ಕು
ಆರ್ಥಿಕ ಜೀವನ ಮತ್ತು ಅವರ ಸಂಘಗಳು

ಮಾನವನು ಪ್ರಾಚೀನ ಕಾಲದಿಂದ ಇಂದಿನವರೆಗೂ ನಡೆದು ಬಂದ ದಾರಿಯನ್ನು ಅವಲೋಕಿಸಿದಾಗ ಕಾಲಕಾಲಕ್ಕೆ ಅವನಲ್ಲಾದ ಬದಲಾವಣೆ, ಅದಕ್ಕೆ ಕಾರಣೀಭೂತವಾದ ವೈಜ್ಞಾನಿಕ ಅನ್ವೇಷಣೆಗಳೊಂದಿಗೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಮಾನವನ ಬದುಕಿನಲ್ಲಾದ ಏರುಪೇರುಗಳ ಹತ್ತು ಹಲವು ಮುಖಗಳು ಗೋಚರಿಸುತ್ತವೆ.

ಇಡೀ ಭೂಗೋಳದಲ್ಲಿ ಯಾವುದೇ ಒಬ್ಬ ವ್ಯಕ್ತಿಯ ಅಥವಾ ಒಂದು ಸಮುದಾಯದ ಜೀವನ ಮಟ್ಟವನ್ನು ನಿರ್ಧರಿಸುವಲ್ಲಿ ಮುಖ್ಯ ಪಾತ್ರ ವಹಿಸುವುದೇ ಅವನ ಆರ್ಥಿಕ ಸ್ಥಿತಿಯಾಗಿರುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಶಿಲಾಯುಗದ ಕಾಲದಿಂದ ಇಲ್ಲಿಯವರೆಗೂ ಕಾಲ ಕಾಲಕ್ಕೆ ಮಾನವನ ಬದುಕಿನ ರೂಪುರೇಷೆಗಳು ಬದಲಾವಣೆಗೆ ಒಳಗಾದುದನ್ನು ಇತಿಹಾಸದ ಮೂಲಕ ತಿಳಿಯುತ್ತದೆ.

೪.೧ ಸಾಂಪ್ರದಾಯಕ ವೃತ್ತಿ

ಬಲಗೈ ಫಣ ಸಂಸ್ಕೃತಿಗೆ ಸೇರಿದ ಮಾಲ ಸಮುದಾಯದ ಮೂಲವೃತ್ತಿಯು ಕೃಷಿ ಸಂಬಂಧಿ ಚಟುವಟಿಕೆಯಿಂದ ಕೂಡಿದೆ. ಭೂಮಿಗೂ ಮಾಲ ಸಮುದಾಯಕ್ಕೂ ಅವಿನಾಭಾವ ಸಂಬಂಧವಿದೆ. ನಲ್ಲಮಲೈ ಕಾಡಿನ ಇಳಿಜಾರು ಪ್ರದೇಶದಲ್ಲಿ ಕುರ್ಮಿ ಬೇಸಾಯವನ್ನು ಮಾಡುತ್ತಿದ್ದ ಈ ಸಮುದಾಯ ಯಾವುದೋ ಒಂದು ಹಂತದಲ್ಲಿ ಅಸ್ಪೃಶ್ಯತೆಯ ಆರೋಪಕ್ಕೆ ಒಳಗಾಗಿರಬೇಕು. ಮಾಲ ಸಮುದಾಯದವರು ತಮ್ಮ ಮೂಲ ವೃತ್ತಿಯಾದ ಕುರ್ಮಿ ಬೇಸಾಯದಿಂದ ದೂರವಾದ ತರುವಾಯ ಭೂಮಿಯ ಒಡೆತನದಿಂದ ವಂಚಿತರಾಗಬೇಕಾಯಿತು. ತರುವಾಯ ಇವರು ಭೂಮೀಯ ಒಡೆಯರಲ್ಲಿ ಕೃಷಿಕೂಲಿಗಳಾಗಿಯೋ, ಜೀತಗಾರರಾಗಿಯೋ ಕಾಲ ಕಳೆಯಬೇಕಾಯಿತೆಂಬ ಅಳಲು ಮಾಲ ಸಮುದಾಯದವರದ್ದಾಗಿದೆ. ಕೃಷಿ ಚಟುವಟಿಕೆಗೆ ಮಾಲ ಸಮುದಾಯದ ಒಂದು ಪಂಗಡ ತೊಡಗಿಕೊಂಡರೆ ಮತ್ತೊಂದು ಪಂಗಡ ನೇಕಾರರ ಸಹಾಯಕ ಕೂಲಿಯಾಳುಗಳಾದರು. ಮತ್ತೊಂದು ಪಂಗಡ ರಾಜರ ಸೈನ್ಯದಲ್ಲಿ ವಾದ್ಯಪರಿಕರಗಳನ್ನು ನುಡಿಸುವ, ಸಂದರ್ಭ ಬಂದರೆ ಯುದ್ಧದಲ್ಲಿ ತೊಡಗಿಕೊಳ್ಳಬೇಕಾದ ಕೆಲಸದಲ್ಲಿ ತೊಡಗಿಕೊಂಡಿತು. ಒಟ್ಟಾರೆಯಾಗಿ ಮಾಲ ಸಮುದಾಯದ

ಎಲ್ಲಾ ಪಂಗಡಗಳು ಯಜಮಾನ್ಯದ ಕೆಲಸಗಳನ್ನು ಮಾಡದೆ ಕೇವಲ ತೊತ್ತಿನ ಕೆಲಸಗಳಿಗಷ್ಟೇ ಸೀಮಿತವಾಯಿತು. ಅದಕ್ಕೆ ಪೂರಕವಾಗಿ ಅವರ ಅಸ್ಪೃಶ್ಯತೆಯೂ ಜೊತೆಗೂಡಿತು.

ಹಿಂದಿನ ರಾಜರು ಹಾಗೂ ಆಸ್ಥಾನಗಳು ರಾಜ್ಯದ ರಕ್ಷಣೆ, ವಿಸ್ತರಣೆಗೆ ಮಹತ್ವ ನೀಡಿದಷ್ಟೇ ಪ್ರಮಾಣದಲ್ಲಿ ಮನೋರಂಜನೆಗೂ ನೀಡುತ್ತಿದ್ದವು. ಮನೋರಂಜನೆಯೆಂಬುದು ಕೇವಲ ರಾಜರ ಆಸ್ಥಾನಗಳಿಗಷ್ಟೇ ಸೀಮಿತವಾಗಿರಲಿಲ್ಲ. ಮನೋರಂಜನೆಯು ಜನಸಾಮಾನ್ಯರಿಗೂ ಅವಶ್ಯವಾಗಿದ್ದಿತು. ಪ್ರಾಚೀನ ಹಾಗೂ ಮಧ್ಯಕಾಲೀನ ಭಾರತೀಯರಿಗೆ ಆಧುನಿಕ ಕಾಲದಲ್ಲಿ ದೊರೆಯುತ್ತಿರುವ ಯಾವ ಮನೋರಂಜನೆಯ ಮಾಧ್ಯಮಗಳೂ ದೊರೆಯುತ್ತಿರಲಿಲ್ಲ. ಹೀಗಾಗಿ ಮನೋರಂಜನೆ ನೀಡಲಿಕ್ಕಾಗಿಯೇ ಕೆಲವು ಸಮುದಾಯಗಳು ಮೀಸಲಾಗಿದ್ದವು. ಉದಾಹರಣೆಗೆ ಭಾರತೀಯ ಪರಂಪರೆಯಲ್ಲಿ ಮನೋರಂಜನೆಯನ್ನೇ ಕಸುಬಾಗಿಸಿಕೊಂಡ ತೊಗಲುಗೊಂಬೆಯಾಟ, ಬಯಲಾಟ, ಸೂತ್ರದ ಗೊಂಬೆಯಾಟ, ಮೋಡಿ, ಗಾರುಡಿ ವಿದ್ಯೆ ಮುಂತಾದವುಗಳು ತುಂಬಾ ಪ್ರಚಲಿತವಿದ್ದವು. ಇಂತಹ ಪಾರಂಪರಿಕ ಕಲೆಗಳನ್ನು ಪ್ರದರ್ಶಿಸಿ ಜೀವನ ಸಾಗಿಸುವ ಎಷ್ಟೋ ಸಮುದಾಯಗಳು ಅಂದಿನ ರಾಜರ ಆಸ್ಥಾನಗಳನ್ನು ನಂಬಿಯೇ ಜೀವನ ಸಾಗಿಸುತ್ತಿದ್ದವು. ಅಂದರೆ ಈ ಸಮುದಾಯಗಳೆಲ್ಲಾ ಕೇವಲ ರಾಜರ ಆಸ್ಥಾನವನ್ನು ಮಾತ್ರ ತಮ್ಮ ಆಟಗಳಿಂದ ರಂಜಿಸದೆ ಜನಸಾಮಾನ್ಯರನ್ನೂ ರಂಜನೆಗೊಳಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದವು. ಮುಖ್ಯವಾಗಿ ಮಾಲ ಸಮುದಾಯವು ರಾಜ ಪರಿವಾರಕ್ಕೆ ಸಹಾಯ ಮಾಡುವಷ್ಟಕ್ಕೇ ಸೀಮಿತವಾಗಿರಲಿಲ್ಲ. ಯುದ್ಧವಿಲ್ಲದ ಕಾಲದಲ್ಲಿ ಕೃಷಿಕೂಲಿಯಾಗಿಯೋ ಇಲ್ಲವೆ ಯುದ್ಧಕ್ಕೆ ಪೂರಕವಾದ ಕಸರತ್ತಿನ ಕಲೆಯನ್ನು ಪ್ರದರ್ಶನ ಮಾಡಿ ಜೀವನ ಸಾಗಿಸಬೇಕಾಗಿತ್ತು. ರಾಜರಿಗೆ ನಿಷ್ಠೆಯ ಬಂಟರಾಗಿದ್ದ ಈ ಸಮುದಾಯದವರು ಮುಖ್ಯವಾಗಿ ರಾಜರ ಸೈನ್ಯದಲ್ಲಿ ವಾದ್ಯಗಳನ್ನು ನುಡಿಸುವ ಕಾಯಕವನ್ನು ಮಾಡುತ್ತಿದ್ದರು. ರಾಜರ ಆಸ್ಥಾನ ಮಾತ್ರವಲ್ಲದೆ ಸಾಮಾನ್ಯ ಜನರನ್ನು ಮನೋರಂಜನೆಗೊಳಿಸಿ ಅವರಿಂದ ದೊರೆತ ಅಲ್ಪ ಸ್ವಲ್ಪ ಹಣದಿಂದ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಕೆನಡಿಯವರು ಮಾಲ ಸಮುದಾಯದ ಒಂದು ಪಂಗಡ ರಾಜಾಶ್ರಯ ತಪ್ಪಿದ ತರುವಾಯ ಕೆಲಸವನ್ನು ಹುಡುಕಿಕೊಂಡು ಕರ್ನಾಟಕ ಮುಂತಾದ ರಾಜ್ಯಗಳಿಗೆ ಬಂದು ದಿಕ್ಕೇಡಿಗಳಾಗಿ ಅಲೆಮಾರಿತನವನ್ನು ಆತುಕೊಂಡು ಜೀವನ ನಡೆಸುವಂತಾಯಿತು. ಊರಿಂದೂರಿಗೆ, ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ತಮ್ಮ ಕುಟುಂಬಗಳೊಂದಿಗೆ ಅಲೆಮಾರಿಗಳಾಗಿ ಸಂಚರಿಸುತ್ತ ದೊಂಬರಾಟದವರಂತೆ ಸಾಹಸದ ಕಲೆಯೊಂದನ್ನು ಪ್ರದರ್ಶಿಸುವಂತಾಯಿತು. ಒಟ್ಟಾರೆಯಾಗಿ ರಾಜನಿಗೆ ನಂಬಿಕೆಯ ಬಂಟರಾಗಿ ಕಾರ್ಯನಿರ್ವಹಿಸುತ್ತಿದ್ದರು. ರಾಜನಿಗೆ ಎಷ್ಟೇ ನಿಷ್ಠೆಯನ್ನು ತೋರಿಸಿದರೂ ಈ ಸಮುದಾಯ ಅಸ್ಪೃಶ್ಯತೆಯ ಕಳಂಕದಿಂದ ಮಾತ್ರ ದೂರ ಸರಿಯದಂತಾಯಿತು. ಒಟ್ಟಾರೆಯಾಗಿ ಇವರ ಮೂಲ ಕಸುಬು ಕೃಷಿಯಾಗಿತ್ತು. ತರುವಾಯ ರಾಜರ ಸೈನ್ಯದೊಳಗೆ ವಾದ್ಯಪರಿಕರಗಳನ್ನು ನುಡಿಸುವವರಾಗಿ ಮಾರ್ಪಾಡು ಹೊಂದಿದರು.

ಮಧ್ಯಕಾಲಿನ ತೆಲುಗು ಅರಸರ ಆಸ್ಥಾನದ ಆಶ್ರಯವನ್ನು ಹೊಂದಿದ್ದ ಮಾಲ ಸಮುದಾಯವು ತೆಲುಗು ಅರಸರ ಅವನತಿಯ ತರುವಾಯ ರಾಜಾಶ್ರವಿಲ್ಲದೆ ದಿಕ್ಕೇಡಿಯಾಯಿತು. ರಾಜಾಶ್ರಯವನ್ನು ನಂಬಿ ಜೀವನ ಸಾಗಿಸುತ್ತಿದ್ದ ಚಪ್ಪರಬಂದ್, ಪಾರ್ಧಿ, ಕಂಜರಭಾಟನಂತಹ ಸಮುದಾಯಗಳಿಗೆಲ್ಲಾ

ಇದೇ ಅವಸ್ಥೆಯೊದಗಿತು. ಒಂದರ್ಥದಲ್ಲಿ ಈ ಸಮುದಾಯಗಳು ರಾಜಾಶ್ರಯವನ್ನು ಕಳೆದುಕೊಂಡು ಬೀದಿಗೆ ಬಿದ್ದವು. ಹೀಗಾಗಿ ಈ ಸಮುದಾಯ ಅನ್ಯ ಮಾರ್ಗವಿಲ್ಲದೆ ಜೀವನ ನಿರ್ವಹಣೆಗಾಗಿ ಪರ್ವತ ಶ್ರೇಣಿಯ ಕಾಡನ್ನು ಆಶ್ರಯಿಸಬೇಕಾಯಿತು. ಮಾಲ ಎಂದರೆ ಪರ್ವತ ಎಂದು ಅರ್ಥ. ಹೀಗಾಗಿಯೇ ಕರ್ನಾಟಕದ ಮಾಲ ಸಮುದಾಯಕ್ಕೆ ಪರ್ವತ ಮಾಲ>ಪರ್ವತ ಮಲ್ಲಯ್ಯ ಎಂದು ಕರೆಯುವರು.

ಮಾಲ ಸಮುದಾಯಕ್ಕೂ ಭೂಮಿಗೂ ಅವಿನಾಭಾವ ಸಂಬಂಧ ಎಂದು ಈ ಹಿಂದೆಯೇ ಹೇಳಲಾಗಿದೆ. ಭೂಮಿಯ ಜೊತೆಗಿನ ಸಂಬಂಧವೆಂದರೆ ಮಾಲ ಸಮುದಾಯದವರು ಭೂಮಿಯ ಒಡೆಯರೆಂದಲ್ಲ. ಭೂ ಒಡೆಯರಲ್ಲಿ ಕೂಲಿಕಾರ್ಮಿಕ ಜೀತಗಾರನಿಗೆ ದುಡಿಯುವುದಕ್ಕೆ ಮಾತ್ರ ಸೀಮಿತವಾದವನು ಎಂಬರ್ಥವನ್ನು ಮೇಲ್ವರ್ಗ ಇವರಿಗೆ ಆರೋಪಿಸಿ ನಂಬಿಸಿದೆ. ಭೂಮಿಗೂ ಮಾಲ ಸಮುದಾಯಕ್ಕೂ ಸಂಬಂಧವಿದೆ ಎಂಬುದನ್ನು ಅವರು ಸತ್ತ ವ್ಯಕ್ತಿಗೆ ಕುಣಿ ತೋಡುವ ಕನಿಷ್ಠವಾದ ಕಾಯಕದ ಮೂಲಕ ಗುರುತಿಸಬಹುದು.

ಆಂಧ್ರಪ್ರದೇಶ, ತೆಲಂಗಾಣ ಹಾಗೂ ಕರ್ನಾಟಕದ ಕೆಲವು ಕಡೆ ಮಾಲ ಸಮುದಾಯವು ಸತ್ತ ವ್ಯಕ್ತಿಯ ಶವಸಂಸ್ಕಾರಕ್ಕೆ ಕುಣಿ ತೆಗೆಯುವ ಕಾಯಕ, ಹೆಣ ಸುಡುವ ಸಮುದಾಯಗಳಾಗಿದ್ದರೆ ಅಂತಹ ಸಮುದಾಯದ ಹೆಣ ಸುಡುವ ಕಾಯಕ ಮಾಡುವರು. ಹಾಗೆಯೇ ಬೇರೆ ಊರಿನ ನೆಂಟರಿಗೆ ಸಾವಿನ ಸುದ್ದಿಯನ್ನು ಮುಟ್ಟಿಸುವುದು, ಶವದ ಮುಂದೆ ಕಹಳೆ, ಹಲಗೆ ನುಡಿಸುವ ಕಾಯಕವನ್ನು ಮಾಲ ಸಮುದಾಯದಲ್ಲಿ ರೂಢಿಯಾಗಿರುವುದನ್ನು ಕಾಣುತ್ತೇವೆ. ಪ್ರತಿಯೊಂದು ನಗರ ಮತ್ತು ಗ್ರಾಮೀಣ ಭಾಗದಲ್ಲಿ ಈ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಶವಸಂಸ್ಕಾರದ ತರುವಾಯ ಸ್ಮಶಾನದ ಹಾದಿಗೆ ಅಡ್ಡವಾಗಿ ತಮ್ಮ ತಲೆಗೆ ಸುತ್ತುವ ಮುಂಡಾಸನ್ನು ನೆಲದ ಮೇಲೆ ಹಾಸುವರು. ಶವಸಂಸ್ಕಾರಕ್ಕೆ ಬಂದಿರುವ ಜನರು ಅವರಿಗೆ ತಿಳಿದ ರೀತಿಯಲ್ಲಿ ಚಿಲ್ಲರೆ ಕಾಸು, ಹತ್ತೋ, ಐದೋ ರೂಪಾಯಿಯನ್ನು ಮುಂಡಾಸದೊಳಗೆ ಹಾಕುವರು. ಇದನ್ನು 'ಜಕಾತಿ' ಎತ್ತುವುದು ಎಂದು ಕರೆಯುವರು. ಶವಸಂಸ್ಕಾರಕ್ಕೆ ಕುಣಿ ತೆಗೆಯಲು ಅಥವಾ ಹಣವನ್ನು ಸುಡುವ ಕಾರ್ಯದಲ್ಲಿ ಯಾರು ತೊಡಗುವರೋ ಅಂಥ ಮಾಲ ಸಮುದಾಯದ ಜನರು ಸಮಾನವಾಗಿ ಹಂಚಿಕೊಳ್ಳುವರು. ಈ ಹಣವನ್ನು ಸಾರಾಯಿ ಅಥವಾ ಸೇಂದಿ ಕುಡಿಯಲು ಖರ್ಚು ಮಾಡುವರು. ಆ ಹಣವನ್ನು ಮನೆಗೆ ತೆಗೆದುಕೊಂಡು ಹೋಗುವುದಿಲ್ಲ. ಈ ರೀತಿಯಾದ ಅನೇಕ ಕೆಲಸಗಳನ್ನು ತಮ್ಮ ಕುಲ ಕಸುಬಾಗಿಸಿಕೊಂಡವರು ಮಾಲ ಸಮುದಾಯದವರಾಗಿದ್ದಾರೆ. ಆದರೆ ಮಾಲ ಸಮುದಾಯದವರಲ್ಲಿ ಕೆಲವು ಆಚರಣೆಗಳು ಮತ್ತು ಪದ್ದತಿಗಳು ಆಚರಣೆಯಲ್ಲಿ ಇವೆ. ಆದರೆ ಕೆಲವು ಪದ್ಧತಿಗಳು ಆಚರಣೆಯಲ್ಲಿ ಇರುವುದಿಲ್ಲ ಮಾಲ ಸಮುದಾಯದವರು ಮೊದಲು ತಾವಿದ್ದ ಗ್ರಾಮದಲ್ಲಿ ಕುಣಿ ತೆಗೆಯುವ ಕೆಲಸ ಮಾಡುತ್ತಿದ್ದೆವೆಂದು ಹೆಳುತ್ತಾರೆ, ಆದರೆ ಇತ್ತೀಚೆಗೆ ಕುಣಿ ತೆಗೆಯುವದನ್ನು ಬಿಟ್ಟಿದ್ದೆವೆ ಎಂದು ಹೆಳುತ್ತಾರೆ. ಮತ್ತು ಇವರು ಕುಣಿ ತೆಗೆಯುವ ಕೆಲಸ ಮಾಡುತ್ತಿದ್ದರೆಂದು ಹಲವು ಕೃತಿಗಳು ಗೋಚರಿಸುತ್ತವೆ.

ಮಾಲ ಸಮುದಾಯದವರು ಹಿಂದೆ ಕಹಳೆಯನ್ನು ಊದುತ್ತಿದ್ದರು ಆದರೆ ಇತ್ತೀಚೆಗೆ ಕಹಳೆಯನ್ನು ಊದುವದನ್ನು ಬಿಟ್ಟಿದ್ದೇವೆ ಎಂದು ಮಾಹಿತಿಯನ್ನು ನೀಡಿದರು.

ಯಾವುದೇ ಒಂದು ಜೀವಿ ಬದುಕಲು ಆಹಾರ ಅತೀ ಮುಖ್ಯವಾಗಿ ಬೇಕು. ಪ್ರಾಣಿಗಳು ಸಹಜವಾಗಿ ಬೆಳೆದ ಗಿಡಮರದ ಕಾಂಡ, ಎಲೆ, ಬೇರುಗಳನ್ನು ಹಾಗೂ ಕಾಡಿನಲ್ಲಿ ದೊರೆಯುವ ಪ್ರಾಣಿ ಪಕ್ಷಿಗಳನ್ನು ಆಹಾರವಾಗಿ ಬಳಸಿಕೊಳ್ಳುತ್ತವೆ. ಆದರೆ ಮಾನವನು ಪ್ರಾಣಿಗಳಂತೆ ಜೀವಿಸುವುದನ್ನು ಬಿಟ್ಟುಬಿಟ್ಟಿದ್ದಾನೆ. ಆಧುನಿಕ ಪ್ರಪಂಚದಲ್ಲಿ ಮಾನವನು ಕೇವಲ ಹಣದ ಮೂಲಕ ವ್ಯವಹರಿಸುವುದನ್ನು ಕಲಿತಿದ್ದಾನೆ ಮತ್ತು ಅನಿವಾರ್ಯವಾಗಿ ಹಣಕ್ಕೆ ಜೋತುಬಿದ್ದಿದ್ದಾನೆ. ಈ ವ್ಯವಸ್ಥೆಗೆ ಮಾಲ ಸಮುದಾಯವು ಹೊರತಾಗಿಲ್ಲ. ದಿನದ ಬದುಕಿನ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಹಣ ಅವಶ್ಯಕವಾಗಿದೆ. ಬದುಕಿಗೆ ಅವಶ್ಯವಾದವುಗಳನ್ನು ಪಡೆಯಲು ಹಣವನ್ನು ಹೊಂದಿಸಿಕೊಳ್ಳಬೇಕಾದ ಅನಿವಾರ್ಯತೆ ಮಾಲ ಸಮುದಾಯಕ್ಕೂ ಇದೆ. ಹೀಗಾಗಿ ಜೀವನಾವಶ್ಯಕತೆಗಳನ್ನು ಪೂರೈಸಿಕೊಳ್ಳಲು ಮಾಲ ಸಮುದಾಯದವರು ಯಾವುದಾದರೊಂದು ದುಡುಮೆಯಲ್ಲಿ ತೊಡಗಿರುವುದನ್ನು ಕಾಣುತ್ತೇವೆ.

ಆದರೆ ಅಲೆಮಾರಿತವನ್ನು ಮೈಗೂಡಿಸಿಕೊಂಡಿರುವ ಮಾಲ ಸಮುದಾಯವು ಹಣಕ್ಕೆ ಹೆಚ್ಚು ಮಹತ್ವ ಕೊಡುವುದಿಲ್ಲ. ಸಂಗ್ರಹಣ ಗುಣ ಮಾಲ ಸಮುದಾಯದಂತಹ ಅಲೆಮಾರಿ ಸಮುದಾಯಗಳಿಗೆ ಇಲ್ಲ. ತಮ್ಮ ಬದುಕಿಗೆ ಎಷ್ಟು ಅವಶ್ಯಕವೋ ಅಷ್ಟನ್ನು ಮಾತ್ರ ಅವು ಸಂಪಾದಿಸಲು ಆಪೇಕ್ಷಿಸುತ್ತವೆ. ಹೀಗಾಗಿಯೇ ಈ ಸಮುದಾಯಗಳಲ್ಲಿ ತುಂಬಾ ಬಡತನವನ್ನು ಅನುಭವಿಸುವ ಕುಟುಂಬಗಳನ್ನು ಕಾಣುತ್ತೇವೆ.

ಮಾಲ ಸಮುದಾಯದ ಜನರು ತಿಳಿಸುವಂತೆ ಇವರು ಆಂದ್ರಪ್ರದೇಶದ ಪ್ರತಾಪರುದ್ರ ಹಾಗೂ ವಿಜಯನಗರ ಅರಸರ ರಾಜ್ಯಗಳಲ್ಲಿ ಯುದ್ಧ ಸಂದರ್ಭದಲ್ಲಿ ವಾದ್ಯಪರಿಕರಗಳನ್ನು ನುಡಿಸುವ ವೃತ್ತಿಯನ್ನು ಮಾಡುವವರಾಗಿದ್ದರಂತೆ. ರಾಜರ ಅವಸಾನದೊಂದಿಗೆ ತಮ್ಮ ವೃತ್ತಿಯ ಅಸ್ತಿತ್ವವನ್ನು ಕಳೆದುಕೊಂಡು ದಿಕ್ಕೇಡಿಗಳಾದ ಮಾಲ ಸಮುದಾಯವು ರಾಜಾಶ್ರಯ ತಪ್ಪಿದ್ದುದರಿಂದಾಗಿ ಪಕ್ಕದ ಕಾಡುಗಳನ್ನುಳ್ಳ ಪರ್ವತ ಪ್ರದೇಶಗಳನ್ನೇ ತಮ್ಮ ನೆಲೆಯಾಗಿಸಿಕೊಂಡವು. ಕಾಡಿನಲ್ಲಿ ಸಿಗುವ ಗೆಡ್ಡೆ ಗೆಣಸುಗಳು ಹಾಗೂ ಕಾಡು ಪ್ರಾಣಿಗಳನ್ನು ಆಹಾರಕ್ಕಾಗಿ ಆಶ್ರಯಿಸಿಕೊಂಡವು. ರಾಜಾಶ್ರಯ ಕಳೆದುಕೊಂಡ ಈ ಸಮುದಾಯ ತಮ್ಮ ಮೂಲ ದುಡಿಮೆಯಿಂದ ವಂಚಿತಗೊಂಡಿತು.

ಜಾಗತಿಕ ದಿನಮಾನಗಳಲ್ಲಿ ಜಾತಿಗಳ ಬಂಧ ಸಡಿಲಾಗುತ್ತಿದೆ ಎನ್ನುವ ವಾದ ಕೇಳಿಬರುತ್ತಿದೆಯಾದರೂ ಅದು ಮಾಲದಂತಹ ತಳ ಸಮುದಾಯಗಳಿಗೆ ಸಂಬಂಧಿಸದ ವಾದವೆನಿಸುತ್ತದೆ. ಇಂದಿಗೂ ಅಸ್ಪೃಶ್ಯರಾಗಿಯೇ ಈ ಸಮುದಾಯಗಳನ್ನು ನೋಡುತ್ತಿರುವುದು ಶೋಚನೀಯ ವಿಷಯವಾಗಿದೆ. ಮಾಲ ಸಮುದಾಯದವರು ಕೃಷಿ ಸಂಸ್ಕೃತಿಗೆ ಸೇರಿದವರು ಎಂದು ಹೇಳಲಾಗುತ್ತದೆ. ಆದರೆ ಬಹುಪಾಲು ಮಾಲ ಸಮುದಾಯದವರಿಗೆ ಕೃಷಿ ಮಾಡಲು ಕೃಷಿಭೂಮಿಯೂ ಇವರ ಬಳಿ ಇಲ್ಲ. ಹೀಗಾಗಿ ಇವರಾರೂ ಕೃಷಿಕರಾಗಲು ಸಾಧ್ಯವಿಲ್ಲವಾಯಿತು. ಆಂದ್ರದಲ್ಲಿ

ಕೃಷಿಕೂಲಿಗಳಾಗಿ ದುಡುಮೆ ಮಾಡುವರು. ಆದರೆ ಕರ್ನಾಟಕದ ಮಾಲರು ಅಲೆಮಾರಿಗಳಾಗಿರುವರು. ಅಲೆಮಾರಿತನದಿಂದಾಗಿ ಇವರು ಕೃಷಿಕೂಲಿ ಮಾಡಲೂ ಸಾಧ್ಯವಾಗದ ಸ್ಥಿತಿ ಇದೆ. ಕರ್ನಾಟಕದ ಚಿಲಕಮುಖಿ ಮುಂತಾದ ಒಂದೆರಡು ಹಳ್ಳಿಗಳಲ್ಲಿ ಕೆಲವು ಕುಟುಂಬಗಳು ನೆಲೆಸಿದ್ದು ಅಲ್ಲಿಯ ಮಾಲ ಸಮುದಾಯದ ಕೆಲವು ಕುಟುಂಬಗಳಿಗೆ ಇನಾಮಾಗಿ ದೊರೆತ ತುಂಡು ಭೂಮಿಗಳಿವೆ. ಅವು ಯಾವುದೇ ಕೃಷಿ ಚಟುವಟಿಕೆಗೆ ಯೋಗ್ಯವಲ್ಲದ ಭೂಮಿಗಳಾಗಿವೆ. ಮಾಲ ಸಮುದಾಯವು ಅಸ್ಪೃಶ್ಯತೆ, ಅಲೆಮಾರಿಯತನದಿಂದಾಗಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಅತಂತ್ರವಾಗಿಯೇ ಉಳಿಯಿತು. ಇಂದಿಗೂ ಈ ಸಮುದಾಯ ಸಾಮಾಜಿಕವಾಗಿ ತುಳಿತಕ್ಕೆ ಒಳಗಾಗಿರುವಂತೆಯೇ ಆರ್ಥಿಕವಾಗಿಯೂ ಒಂದು ನಿರ್ಧಿಷ್ಟ ನೆಲೆಯನ್ನು ಕಾಣಲು ಸಾಧ್ಯವಾಗಿಲ್ಲ. ವಾಸ್ತವವಾಗಿ ಮೂಲವೃತ್ತಿಗಳಿಂದ ದೂರ ಸರಿದ ಮಾಲ ಸಮುದಾಯವು ಹೊಟ್ಟೆಪಾಡಿಗಾಗಿ ಧಾರ್ಮಿಕ ಭಿಕ್ಷಾಟನೆಯನ್ನು ಮೈಗೂಡಿಸಿಕೊಂಡಿತು. ಮಲ್ಲಯ್ಯ ದೇವರ ಹೆಸರಿನಲ್ಲಿ ಧಾರ್ಮಿಕ ಭಿಕ್ಷಾಟನೆಗೆ ತೊಡಗಿಕೊಂಡಿತು. ಧಾರ್ಮಿಕ ಭಿಕ್ಷಾಟನೆಗಾಗಿ ಮಲ್ಲಯ್ಯನ ಕಂಬಿಯನ್ನು ತಲೆಯಮೇಲೆ ಹೊತ್ತುಕೊಂಡು ಹೆಗಲಿಗೆ ಸಮ್ಮಾಳವನ್ನು ಹಾಕಿಕೊಂಡು ಸಮ್ಮಾಳ ನುಡಿಸುತ್ತ ಭಿಕ್ಷೆ ನೀಡಿದವರನ್ನು ಸ್ತುತಿಸುತ್ತಾ ಊರೂರು ಅಲೆಯತೊಡಗಿತು. ಕಂಬಿ ಎಂಬುದನ್ನು ಅವರು ದೇವರ ಪೆಟ್ಟಿಗೆ ಎಂದು ಕರೆಯುವರು. ಅದನ್ನು ವಿಶಿಷ್ಟವಾಗಿ ತಯಾರಿಸುವರು. ಕಂಬಿಯನ್ನು ತಯಾರಿಸುವ ಕ್ರಮ ಈ ಕೆಳಗಿನಂತಿದೆ.

ಕಂಬಿ: (ದೇವರ ಪೆಟ್ಟಿಗೆ)

ಮಾಲ (ಪರ್ವತ ಮಲ್ಲಯ್ಯ) ಸಮುದಾಯದವರು ಶ್ರೀಶೈಲ ಮಲ್ಲಯ್ಯನ ಮೂರ್ತಿಯನ್ನು ಇಡುವ ಗುಡಿಯಾಕಾರದ ಗೋಪುರಕ್ಕೆ ಕಂಬಿ ಎಂದು ಕರೆಯುತ್ತಾರೆ. ಇದನ್ನು ತಯಾರಿಸುವ ವಿಧಾನ ಹೇಗೆಂದರೆ, ಬಿದಿರಿನ ಕಟ್ಟಿಗೆಯನ್ನು ನಾಲ್ಕು ಭಾಗಗಳಾಗಿ ಅಥವಾ ನಾಲ್ಕು ತುಂಡುಗಳಾಗಿ ಕಡಿದು ಅವುಗಳನ್ನು ಚೌಕಾಕಾರವಾಗಿ ಇಟ್ಟು ಕಬ್ಬಿಣದ ಮಳೆ ಅಥವಾ ಇಂಚು ಮಳೆಯನ್ನು ಸುತ್ತಿಗೆಯ ಸಾಹಾಯದಿಂದ ಬಡಿಯುತ್ತಾರೆ. ನಂತರ ನಾಲ್ಕು ತುಂಡುಗಳನ್ನು ಉದ್ದವಾಗಿ ಕಡಿದು ನಾಲ್ಕು ಮೂಲಿ ಮೂಲಿಗೂ ಎತ್ತರವಾಗಿ ನಿಲ್ಲಿಸಿ ಮಳೆಯನ್ನು ಬಡಿಯುತ್ತಾರೆ. ಈ ನಾಲ್ಕು ಬಿದಿರಿನ ಮೇಲೆಯು ಚೌಕಾಕಾರವಾಗಿ ಬಿದಿರು ತುಂಡುಗಳನ್ನು ಹಾಕಿ ಮಳೆಯನ್ನು ಬಡಿಯುತ್ತಾರೆ. ನಂತರ ಬಿದಿರನ್ನು ಹೊಳುಗಳಾಗಿ ಸಿಳಿ ಅರ್ಧ ಇಂಚು ಮತ್ತು ಅರ್ಧ ಇಂಚು ಸೇರಿಸಿ ಮಳೆ ಬಡಿದು ಹಿಂದೆ ಹಾಕಿ ಸೂತ್ತಲೂ ಮಳೆ ಬಡಿಯುತ್ತಾರೆ. (ಕದವನ್ನು) ಬಾಗಿಲನ್ನು ಮಾಡಲು ಕೂಡ ಬಿದಿರನ್ನು ಎರಡು ಭಾಗಗಳಾಗಿ ಸಿಳಿ ಅರ್ಧ ಇಂಚಿಂಚಿಗೂ ಸೇರಿಸಿ ಮಳೆ ಬಡಿದು ಎರಡು ಭಾಗಗಳಾಗಿ ಹಾಕಿ (ಇಟ್ಟು) ಮಳೆ ಬಡಿಯುತ್ತಾರೆ. ಎಡಕ್ಕೆ ಬಲಕ್ಕೆ ಬಿದಿರನ್ನು ಎರಡು ಭಾಗಗಳಾಗಿ ಹೋಳುಗಳಾಗಿ ಸೀಳಿ ಅರ್ಧ ಇಂಚು ಅರ್ಧ ಇಂಚು ಸೇರಿಸಿ ಅಗಲ ಮತ್ತು ಉದ್ದ ಮಾಡಿ ಎಡಕ್ಕೆ ಮತ್ತು ಬಲಕ್ಕೆ ಇಟ್ಟು ಇಂಚು ಮಳೆ ಬಡಿದು ಕೂಡಿಸುತ್ತಾರೆ. ಆ (ಕಂಬೆ) ಗುಡಿಯನ್ನು ಬಿದಿರಿನ ಮೂಲಕ ಮೇಲೆ ಗೋಪುರವನ್ನು ಮಾಡುತ್ತಾರೆ. ನಿಲ್ಲಿಸಲು ಕೆಳಗೆ ನಾಲ್ಕು ಬಿದಿರಿನ ತುಂಡುಗಳನ್ನು ಮೂಲಿ ಮೂಲಿಗೂ ನಿಲ್ಲಿಸಿ ಗಟ್ಟಿಯಾಗುವಂತೆ ಮಳೆ ಬಡಿಯುತ್ತಾರೆ. ನಂತರ ಆ (ಕಂಬೆ) ಗುಡಿಗೆ

ಲೇಪನ ಮಾಡಲು ಹುಣಸೆ ಬೀಜ ನೀರು ಹಾಕಿ ಪಾತ್ರೆಯಲ್ಲಿ ಹಾಕಿ ಒಲೆಯ ಮೇಲೆ ಇಟ್ಟು ಕುದಿಸಿ ಸರಿ(ಗಟ್ಟಿಯಾದ ಗಂಜಿ) ಮಾಡಿ ಆ ಸರಿಯನ್ನು ಈಡಿ ಎಲ್ಲಾ ಗುಡಿಗೆ ಅಥವಾ ಕಂಬಿಗೆ ಸವರುತ್ತಾರೆ. ಸವರಿ ಹನ್ನೊಂದು ಪೊದರು ಬಟ್ಟೆಯನ್ನು ಸುತ್ತುತ್ತಾರೆ. ಪ್ರತಿ ಪದರಿಗೂ ಸರಿ ಲೇಪಿಸಿ ಬಿಳಿ ಅಥವಾ ಹಸಿರು ಅಥವಾ ಹಳದಿ ಬಟ್ಟೆಯನ್ನು ಗುಡಿಗೆ ಸುತ್ತುತ್ತಾರೆ. ಆ ಗುಡಿಯಲ್ಲಿ ದುರ್ಗಾದೇವಿಯ ಮೂರ್ತಿ ಅಥವಾ ಮಲ್ಲಯ್ಯನ ಮೂರ್ತಿ ಈ ಎರಡು ಮೂರ್ತಿಗಳಲ್ಲಿ ಒಂದನ್ನು ಇಟ್ಟಿರುತ್ತಾರೆ. ಆ ದೇವರಿಗೆ ಎಲ್ಲಾ ಶೃಂಗಾರ ಮಾಡಿ ಬಂಡಾರ, ಕುಂಕುಮವನ್ನು ಗುಡಿಯ ಅಥವಾ ಕಂಬಿಯ ಒಳಗೆ ಇಟ್ಟಿರುತ್ತಾರೆ. ಬಿಕ್ಷೆ ನೀಡಿದವರಿಗೆ ಬಂಡಾರ ಮತ್ತು ಕುಂಕುಮ ಹಚ್ಚುತ್ತಾರೆ.(ಛಾ:೪.೧)

ಕಂಬಿಯನ್ನು ಹೊತ್ತುಕೊಂಡು ಭಿಕ್ಷಾಟನೆಗೆ ಹೋಗುವ ಮಾಲ ಸಮುದಾಯದವರು ಸಾಮಾನ್ಯವಾಗಿ ಈ ರೀತಿಯ ಸ್ತುತಿ ಪದಗಳನ್ನು ರಾಗಬದ್ಧವಾಗಿ ಹಾಡುತ್ತ ಅದರ ತಾಳಕ್ಕೆ ಸರಿಹೊಂದುವಂತೆ ಸಮ್ಮಾಳ ನುಡಿಸುತ್ತಾ ಹಾಡುವರು. ಅವು ಹೀಗಿರುತ್ತವೆ.

ಭಿಕ್ಷೆ ಬೇಡುವಾಗ ಗುಡಿ (ಕಂಚಿ) ಯನ್ನು ಹೊತ್ತುಕೊಂಡು ಹಾಡುವ ಹಾಡು.

೧) ಮಲ್ಲಯ್ಯನ ದ್ರಾಣಗಳು (ದಾನ - ಧರ್ಮ)

ಮಹಾಕೋಟಿ ಪುಣ್ಯಗಳು,

ಮಲ್ಲಮ್ಮನ ದ್ರಾಣಗಳು

ಶಿವಕೋಟಿ ಭಿಕ್ಷೆಗಳು

ಶ್ರೀಶೈಲ ಕಂಬೆಗಳು (ಗುಡಿ)

ಮಹಾಕೋಟಿ ಧನ್ಯಗಳು

ಶ್ರೀಶೈಲ ಮಲ್ಲಯ್ಯನ ನಾಮಸ್ಮರಣೆಗಳು

ಬೆಳ್ಳಿ ತೊಟ್ಟಿಲಾಗಲಿ ಬೆಳಕಾಗಲಿ

ಹರೂ ಹರಿಕಾಗಲಿ ಮಾಡಿದಂಥ

ಪುಣ್ಯಗಳು ನೂರುಕೋಟಿ ಧನ್ಯಗಳು.

ಭಿಕ್ಷೆ ನೀಡಿದರೆ ದಾನ ಧರ್ಮ ಮಾಡಿದರೆ ಕೋಟಿ ಕೋಟಿ ಪುಣ್ಯ ಬರುತ್ತದೆ.

ಶ್ರೀಶೈಲ ಮಲ್ಲಯ್ಯನನ್ನು ನೆನೆಸಿದರೆ ಮನೆ ಬೆಳಕಾಗುತ್ತದೆ ಮಕ್ಕಳಾಗುತ್ತದೆ ಎಂದು ಹಾರೈಸುತ್ತಾರೆ. ಭಿಕ್ಷೆ ನೀಡಿದವರಿಗೆ ನೂರುಕೋಟಿ ಪುಣ್ಯ ಬರುತ್ತದೆ ಎಂದು ಹಾರೈಸುತ್ತಾರೆ.

೨) ಕುಂಬಾರ ಗುಂಡಯ್ಯ

ಮಂಗಸೂಳಿ ಮಲ್ಲಯ್ಯ

ಏಳೇಳು ಗುಡ್ಡಕ

ವಚನ ಕೊಟ್ಟಂತ ಭಕ್ತಮಾನ ಮಲ್ಲಯ್ಯ
ಶ್ರೀಶೈಲ ಮಲ್ಲಿಕಾರ್ಜುನನಿಗೆ ಭಿಕ್ಷೆ ಕೊಡಬೇಕು
ಕಪ್ಪತ ಮಲ್ಲಯ್ಯ ಕಾರಟಗಿ ಈರಣ್ಣ,
ತಂಗಡಗಿ ನೀಲಮ್ಮ ಉಳವಿ ಚೆನ್ನಬಸವಣ್ಣ,
ನಾಗಲೂಟಿ ಈರಣ್ಣ, ನವಕೋಟಿ ಧರ್ಮಗಳು ಗೊಡಚಿ ಈರಣ್ಣ
ಕಪ್ಪತ ಮಲ್ಲಯ್ಯ ಕಳಕ ಮಲ್ಲಯ್ಯ ಕೂಡಲ ಸಂಗಮ, ಶ್ರೀಶೈಲ ಮಲ್ಲಯ್ಯ
ನಿಮಗೆ ಕೋಟಿ ಪುಣ್ಯ ಬರಲಿ ಧಾನ-ಧರ್ಮ ಮಾಡಿದಂತ ಅವರಿಗೆ
ಒಳ್ಳೆಯದು ಮಾಡಯ್ಯ ಶಿವಕೊಟ್ಟ ಕಾಲಕ್ಕೆ ನೂರೊಂದು ಕೊಡಲಯ್ಯ.

ಭಿಕ್ಷೆ ಬೇಡುವಾಗ ಈ ರೀತಿ ಎಲ್ಲಾ ದೇವರನ್ನು ಮಾಲಾ ಸಮುದಾಯದವರು ನೆನೆಯುತ್ತಾರೆ.

ನೆನೆಸಿ ಬಿಕ್ಷೆ ಬೇಡುತ್ತಾರೆ.

೩) ಹರ ಹರ ಹರಿಕಾಗಲಿ
ಹರ ಹರ ಜಯವಾಗಲಿ
ಮಲ್ಲಯ್ಯನ ಧಾನಗಳು, ಮಲ್ಲಮ್ಮನ ಭಕ್ತಿಗಳು
ಶ್ರೀಶೈಲ ಮಲ್ಲಿಕಾರ್ಜುನನ ಭಕ್ತಿಯಿಂದ
ಮುತ್ತೈದೆ ಮರದಲ್ಲಿ ಮುತ್ತೈದೆ ಮಗಳಾಗಿ
ಭಿಕ್ಷೆ ನೀಡಾಕ ಬರಬೇಕು ಮಾಡಿದ ಧಾನ-ಧರ್ಮಗಳು
ನೀಡಿದ ಕೋಟಿ - ಪುಣ್ಯಗಳು
ನಿಮ್ಮ ಕೈಯಲ್ಲಿ ಹರಕೆಯನ್ನು ಮುಟ್ಟಿಸಿರೆವ್ವ
ಶ್ರೀಶೈಲ ಮಲ್ಲಿಕಾರ್ಜುನ ಭಕ್ತಿಯನ್ನು ಮಾಡಿರೆಮ್ಮ
ನೀಡಿದ ಕೈಯಲ್ಲಿ ನಿಧಾನವಾಗಲಿ, ಬೇಡಿದ ಕೈಯಲ್ಲಿ ಭಾಗ್ಯವಾಗಲಿ
ಹಾಲು ಉಕ್ಕಿದಂಗ ನಿನಮನಿ ಹುಕ್ಕಲಿ, ಎಲಿಬಳ್ಳಿ ಹಬ್ಬಿದಂಗ ನಿನಮನಿ ಹಬ್ಬಲಿ,
ಶ್ರೀಶೈಲ ಮಲ್ಲಯ್ಯನ ಹರಕೆ ಮುಟ್ಟಿಸಿರಮ್ಮ
ಎಂದು ಹರಕೆ ಹಾಡನ್ನು ಹಾಡುತ್ತಾರೆ.

ಹರಹರ ಹರಿಕಾಗಲಿ ಬಾರಮ್ಮ ಮಲ್ಲಮ್ಮ ಭಿಕ್ಷೆ ಮಾಡು ಎನ್ನುತ್ತಾರೆ.

ಭಿಕ್ಷಾ ನೀಷೆಧ ಕಾಯ್ದೆ ಜಾರಿಗೆ ಬಂದಾಗಿನಿಂದ ಮಾಲ ಸಮುದಾಯದವರು ಭಿಕ್ಷೆ ಬೇಡುವದನ್ನು ಕೈಬಿಟ್ಟಿದ್ದಾರೆ. ಆದರೆ ಮಾಲ ಸಮುದಾಯದ ಕೆಲವು ವೃದ್ಧರು ಮತ್ತು ಅಂಗವಿಕಲರು ಇತ್ತೀಚೆಗೆ

ಧಾರ್ಮಿಕ ಭಿಕ್ಷಾಟನೆಯನ್ನು ಅವಲಂಬಿಸಿದ್ದಾರಾದರು ಇವರು ಭಿಕ್ಷೆ ಬೇಡುವ ಪದ್ಧತಿಯಲ್ಲಿ ಬದಲಾವಣೆಯನ್ನು ಮಾಡಿಕೊಂಡಿದ್ದಾರೆ. ಇತ್ತೀಚೆಗೆ ಭಿಕ್ಷೆ ಬೇಡಲು ಶ್ರೀಶೈಲ ಮಲ್ಲಯ್ಯ ಇರುವ ಗುಡಿಯಾಕಾರದ ಕಂಬಿಯನ್ನು ಇವರು ತಲೆಯ ಮೇಲೆ ಹೊತ್ತುಕೊಂಡು ಹೊಗುವದಿಲ್ಲ. ಕೇವಲ ಒಂದು ತಾಟನ್ನು ಮಾತ್ರ ತೆಗೆದುಕೊಂಡು ಹೊಗುತ್ತಾರೆ. ಮತ್ತು ಮೋದಲಿನ ಹಾಗೆ ಊರುರು ಭಿಕ್ಷೆ ಬೇಡಲು ಹೊಗುವದಿಲ್ಲ.

ಪೂರ್ವದಲ್ಲಿ ಕುಮ್ರಿ ಬೇಸಾಯವನ್ನು ಅನುಸರಿಸಿ ಜೀವನ ನಡೆಸುತ್ತಿದ್ದ ಇವರು ತರುವಾಯ ರಾಜನ ಆಶ್ರಯದಲ್ಲಿ ಸೇವಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಮಹಾರಾಜರ ಸೈನ್ಯದಲ್ಲಿ ವಾದ್ಯಗಳನ್ನು ನುಡಿಸುವ, ಸಾಂದಾರ್ಭಿಕವಾಗಿ ಯೋಧರಾಗಿ ಈ ಸಮುದಾಯದ ಜನ ಕಾರ್ಯನಿರ್ವಹಿಸುತ್ತಿದ್ದರಂತೆ. ಮಾಲ ಸಮುದಾಯದವರು ನೋಡಲು ಮಧ್ಯಮ ಗಾತ್ರದ ಸಣಕಲು ದೇಹಿಗಳಂತೆ ಕಂಡರೂ ಶ್ರಮ ಜೀವಿಗಳಾಗಿರುವರು. ದನಗಳ ವ್ಯಾಪಾರ ಮಾಡುವುದು, ಸತ್ತ ದನಗಳನ್ನು ಒಯ್ದು ಆಹಾರವಾಗಿ ಬಳಸುವ ಕಾಯಕವನ್ನು ಹಿಂದೆ ಮಾಡುತ್ತಿದ್ದರಂತೆ. ಆದರೆ ಈಗ ದನದ ವ್ಯಾಪಾರ ಹಾಗೂ ದನ ತಿನ್ನುವುದರಿಂದ ದೂರ ಉಳಿದಿರುವರು.

೪.೨ ಅವಲಂಭಿತ ವೃತ್ತಿಗಳು

ಪ್ರಸ್ತುತ ಕರ್ನಾಟಕದಲ್ಲಿ ನೆಲೆಸಿರುವ ಮಾಲ ಸಮುದಾಯದವರು ಹೊಟ್ಟೆಪಾಡಿಗಾಗಿ ಮೂಲ ವೃತ್ತಿಯಿಂದ ದೂರವಾಗಿ ಬೇರೆ ಬೇರೆ ವೃತ್ತಿಗಳನ್ನು ಅವಲಂಭಿಸಿರುವರು. ಅವರ ಅವಲಂಭಿತ ವೃತ್ತಿಗಳು ಯಾವುವು, ವೃತ್ತಿಗೆ ಅರ್ಹವಾದವರೆಷ್ಟು, ಅರ್ಹವಾಗದವರೆಷ್ಟು, ಎಷ್ಟು ಜನ ಪುರುಷರು ಹಾಗೂ ಮಹಿಳೆಯರು ಯಾವ ಯಾವ ವೃತ್ತಿಗಳನ್ನು ಅವಲಂಭಿಸಿ ಜೀವನ ನಿರ್ವಹಣೆ ಮಾಡುತ್ತಿರುವರು ಎಂಬುದನ್ನು ಈ ಕೆಳಗೆ ನೀಡಲಾಗಿದೆ.

ಭಾರತೀಯ ಮೇಲ್ಜಾತಿಗಳು ಮಾಲ ಸಮುದಾಯವನ್ನು ಅಸ್ಪೃಶ್ಯತೆಯ ಹಣೆಪಟ್ಟಿಯನ್ನು ಹಚ್ಚಿ ಅವರನ್ನು ತಮ್ಮಿಂದ ದೂರವಿರಿಸಿರುವರು. ಹಾಗೆಯೇ ಕರ್ನಾಟಕದ ಅಸ್ಪೃಶ್ಯರೂ ಇವರು ಅಲೆಮಾರಿಗಳೆಂಬ ಕಾರಣಕ್ಕೆ ಮಾಲ ಸಮುದಾಯದವರನ್ನು ಹತ್ತಿರ ಬಿಟ್ಟುಕೊಳ್ಳಲು ಹಿಂಜರಿಯುವರು. ಹೀಗಾಗಿ ಅತ್ತಲೂ ಇಲ್ಲದೆ ಇತ್ತಲೂ ಇಲ್ಲದೆ ತ್ರಿಶಂಖು ಸ್ವರ್ಗದಲ್ಲಿ ಎಂಬಂತಹ ಸ್ಥಿತಿ ಮಾಲ ಸಮುದಾಯದವರದ್ದಾಗಿದೆ.

ಸ್ಥಳೀಯವಾಗಿ ದೊರೆಯುವ ಲೆಕ್ಕೆ ಗಿಡದ ಬರಲು, ಕಾಡಿನಲ್ಲಿ ದೊರೆಯುವ ಕೆಲವು ಬಳ್ಳಿಗಳ ಕಾಂಡಗಳನ್ನು ಬಳಸಿ ಪುಟ್ಟಿ ಹೆಣೆಯುವುದು, ಕಸಬರಿಗೆ ಕಟ್ಟುವ ಕಾಯಕವನ್ನೂ ಸಹ ಮಾಲ ಸಮುದಾಯದವರು ಮಾಡುತ್ತಿದ್ದರಾದರೂ ಅದೇ ಕಸುಬನ್ನು ಮಾಡುವ ಕೊರಮ, ಮೇದ ಮುಂತಾದ ಸಮುದಾಯಗಳ ಜೊತೆಗೆ ಪೈಪೋಟಿ ಮಾಡಿ ತಮ್ಮ ಪರಿಕರಗಳನ್ನು ಮಾರುವುದು ಕಷ್ಟಸಾಧ್ಯವಾಗಿತ್ತು. ಹೀಗಾಗಿ ಆ ವೃತ್ತಿಯಿಂದ ತಾವು ದೂರ ಸರಿದುದಾಗಿ ಮಾಲ ಸಮುದಾಯದ ವಕ್ತೃವೊಬ್ಬರು ತಿಳಿಸಿದರು. ಕೊಪ್ಪಳ ಪ್ರದೇಶದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿರುವ ಈ ಸಮುದಾಯದವರು ಭಿಕ್ಷಾಟನೆಯ ಜೊತೆಗೆ ರದ್ದಿ ಆಯುವ ಕಾಯಕವನ್ನೂ ಮಾಡುವರು.*(ಛಾ:೪.೨)*

೪.೩ ಮಾಲ ಸಮುದಾಯದ ಅವಲಂಭಿತರು, ಕಾಯಕ ಮಾಡಲು ಅನರ್ಹರು, ಕಾಯಕಾರ್ಹರು

ಮಾಲ ಸಮುದಾಯದ ಅವಲಂಭಿತರು, ಕಾಯಕ ಮಾಡಲು ಅನರ್ಹರು, ಕಾಯಕಾರ್ಹರ ಜಿಲ್ಲಾವಾರು ವಿವರ

ಸಾಮಾನ್ಯವಾಗಿ ಒಟ್ಟು ಜನಸಂಖ್ಯೆಯಲ್ಲಿ ೦-೬ರ ಒಳಗಿನ ಮಕ್ಕಳನ್ನು ಅವಲಂಭಿತರೆಂದು ಪರಿಗಣಿಸಲಾಗುವುದು. ಭಾರತ ಸರ್ಕಾರದ ನಿಯಮಗಳ ಪ್ರಕಾರ ೬-೧೮ವಯೋಮಾನದ ಮಕ್ಕಳು ಅಪ್ರಾಪ್ತ ವಯಸ್ಕರೆಂದು ಪರಿಗಣಿಸಲಾಗುವುದು. ೧೮ನೇ ವಯಸ್ಸು ಪೂರ್ಣಗೊಂಡು ೧೯ನೇ ವಯಸ್ಸಿನ ನಂತರದ ಯುವಕರನ್ನು ವಯಸ್ಕರೆಂದು ಪರಿಗಣಿಸಲಾಗುವುದು ಇದರಲ್ಲಿ ೬೦ರ ವಯಸ್ಸು ಪೂರ್ಣಗೊಂಡವರನ್ನು ವಿಶ್ರಾಂತ ಜೀವನ ನಡೆಸಬೇಕಾದವರು ಎಂದು ಪರಿಗಣಿಸಲಾಗಿದೆ. ಹೀಗಾಗಿ ೦-೬ ವಯೋಮಾನದ ಮಕ್ಕಳು, ೬-೧೮ ವಯೋಮಾನದ ಹುಡುಗರು ಹಾಗೂ ೬೦ರ ಮೇಲ್ಪಟ್ಟ ವಯೋಮಾನದ ವೃದ್ಧರನ್ನು ಕಾಯಕಾರ್ಹರಲ್ಲ ಎಂದು ಪರಿಗಣಿಸಲಾಗಿದೆ. ೧೯ ರಿಂದ ೬೦ರ ಒಳಗಿನ ವಯೋಮಾನದವರನ್ನು ಕಾಯಕಾರ್ಹರೆಂದು ಪರಿಗಣಿಸಲಾಗಿರುವುದು.


ಕೋಷ್ಟಕ ೪.೧: ಮಾಲ ಸಮುದಾಯದ ಕಾಯಕ ಮಾಡಲು ಅನರ್ಹರು, ಕಾಯಕಾರ್ಹರ ವಿವರ

ಕ್ರಸಂ	ಜಿಲ್ಲೆ	ಕಾಯಕ ಮಾಡಲು ಅನರ್ಹರು (೧೮ರ ಒಳಗಿನ ಮತ್ತು ೬೦ರ ಮೇಲಿನ ವಯೋಗುಂಪಿನವರು)			ಕಾಯಕಾರ್ಹರು (೧೮-೬೦ ವಯೋಗುಂಪಿನವರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕೊಪ್ಪಳ	೨೪೨	೨೪೩	೪೮೫	೨೯೧	೨೯೩	೫೮೪
೨	ಗದಗ	೧೩	೧೫	೨೭	೧೪	೧೩	೨೭
೩	ಧಾರವಾಡ	೩೬	೩೫	೭೧	೩೬	೩೮	೭೪
೪	ಮೈಸೂರು	೧೧	೮	೧೯	೩೫	೩೫	೭೦
೫	ರಾಯಚೂರು	೦೭	೬	೧೩	೧೨	೧೫	೨೭
೬	ಶಿವಮೊಗ್ಗ	೩೪	೩೫	೬೯	೬೩	೫೯	೧೨೨
೭	ಹಾವೇರಿ	೧೪	೧೭	೩೧	೧೦	೧೦	೨೦
	ಒಟ್ಟು	೩೫೭	೩೫೯	೭೧೬	೪೬೧	೪೬೩	೯೨೪

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

(೧ ಕಾಯಕ ಮಾಡಲು ಅನರ್ಹರು, ೨ ಕಾಯಕಾರ್ಹರು)

ವೃತ್ತಚಿತ್ರ ೪.೧: ಮಾಲ ಸಮುದಾಯದ ಕಾಯಕ ಮಾಡಲು ಅನರ್ಹರು, ಕಾಯಕಾರ್ಹರ ಶೇಕಡವಾರು ವಿವರಗಳನ್ನು ಸೂಚಿಸುವ ವೃತ್ತಚಿತ್ರ



೪.೪.೧ ಕೊಪ್ಪಳ ಜಿಲ್ಲೆ

ಕೊಪ್ಪಳ ಜಿಲ್ಲೆಯಲ್ಲಿಯೇ ಮಾಲ ಸಮುದಾಯ ಹೆಚ್ಚು ಪ್ರಮಾಣದಲ್ಲಿ ನೆಲೆಸಿದೆ. ಇದರಲ್ಲಿ ಗಂಡು ೫೨ ಹಾಗೂ ಹೆಣ್ಣು ೫೫ ಇವೆ. ೬-೧೮ ಹಾಗೂ ೬೦ ವರ್ಷ ಪೂರ್ಣಗೊಂಡವರನ್ನು ಕಾಯಕಾರ್ಹರಲ್ಲವೆಂದು ಪರಿಗಣಿಸಲಾಗಿರುವುದರಿಂದ ಅವರ ಒಟ್ಟು ಸಂಖ್ಯೆಯು ೪೮೫ ಇದೆ. ಇದರಲ್ಲಿ ಪುರುಷರು ೨೪೨ ಹಾಗೂ ಮಹಿಳೆಯರು ೨೪೩ ಜನರಿರುವರು. ಈ ಎರಡೂ ಗುಂಪುಗಳ ಹೊರತುಪಡಿಸಿ ಕಾಯಕಾರ್ಹರಾದವರು ಒಟ್ಟು ೫೮೪ ಜನರಿರುವರು. ಇದರಲ್ಲಿ ೨೯೧ ಪುರುಷರು ಹಾಗೂ ೨ ಮಹಿಳೆಯರಿರುವರು.

೪.೪.೨ ಗದಗ ಜಿಲ್ಲೆ

ಗದಗ ಜಿಲ್ಲೆಯಲ್ಲಿ ಕಾಯಕಾರ್ಹರಲ್ಲದವರು ಒಟ್ಟು ೨೭ ಜನರಿರುವರು, ಇದರಲ್ಲಿ ಪುರುಷರು ೧೩ ಜನರಿರುವರು ಹಾಗೂ ಮಹಿಳೆಯರು ೧೫ ಜನರಿರುವರು. ಹಾಗೆಯೇ ಕಾಯಕಾರ್ಹರಾದವರು ಒಟ್ಟು ೨೭ ಜನರಿರುವರು. ಇದರಲ್ಲಿ ೧೪ ಜನರು ಪುರುಷರು ಹಾಗೂ, ೧೩ ಜನರು ಮಹಿಳೆಯರಿರುವರು.

೪.೪.೩ ಧಾರವಾಡ

ಧಾರವಾಡ ಜಿಲ್ಲೆಯಲ್ಲಿ ಕಾಯಕಾರ್ಹರಲ್ಲದವರು ಒಟ್ಟು ೭೧ ಜನರಿವರು, ಇದರಲ್ಲಿ ಪುರುಷರು ೩೬ ಜನರು ಇರುವರು ಹಾಗೂ ಮಹಿಳೆಯರು ೩೫ ಜನರಿರುವರು. ಹಾಗೆಯೇ ಕಾಯಕಾರ್ಹರಾದವರು



ಒಟ್ಟು ೭೪ ಜನರಿರುವರು. ಇದರಲ್ಲಿ ೩೬ ಜನರು ಪುರುಷರು ಹಾಗೂ, ೩೮ ಜನರು ಮಹಿಳೆಯರಿರುವರು.

೪.೪.೪ ಮೈಸೂರು

ಮೈಸೂರು ಜಿಲ್ಲೆಯಲ್ಲಿ ಕಾಯಕಾರ್ಹರಲ್ಲದವರು ಒಟ್ಟು ೧೯ ಜನರಿರುವರು, ಇದರಲ್ಲಿ ಪುರುಷರು ೧೧ ಜನರು ಹಾಗೂ ಮಹಿಳೆಯರು ೮ ಜನರಿರುವರು. ಹಾಗೆಯೇ ಕಾಯಕಾರ್ಹರಾದವರು ಒಟ್ಟು ೭೦ ಜನರಿರುವರು. ಇದರಲ್ಲಿ ೩೫ ಜನರು ಪುರುಷರು ಹಾಗೂ, ೩೫ ಜನರು ಮಹಿಳೆಯರಿರುವರು.

೪.೪.೫ ರಾಯಚೂರು

ರಾಯಚೂರು ಜಿಲ್ಲೆಯಲ್ಲಿ ಕಾಯಕಾರ್ಹರಲ್ಲದವರು ಒಟ್ಟು ೧೩ ಜನರಿರುವರು, ಇದರಲ್ಲಿ ಪುರುಷರು ೭ ಹಾಗೂ ಮಹಿಳೆಯರು ೬ ಜನರಿರುವರು. ಹಾಗೆಯೇ ಕಾಯಕಾರ್ಹರಾದವರು ಒಟ್ಟು ೨೭ ಜನರಿರುವರು. ಇದರಲ್ಲಿ ೧೨ ಜನರು ಪುರುಷರು ಹಾಗೂ, ೧೫ ಜನರು ಮಹಿಳೆಯರಿರುವರು.

೪.೪.೬ ಶಿವಮೊಗ್ಗ

ಶಿವಮೊಗ್ಗ ಜಿಲ್ಲೆಯಲ್ಲಿ ಕಾಯಕಾರ್ಹರಲ್ಲದವರು ಒಟ್ಟು ೬೯ ಜನರಿರುವರು, ಇದರಲ್ಲಿ ಪುರುಷರು ೩೪ ಹಾಗೂ ಮಹಿಳೆಯರು ೩೫ ಜನರಿರುವರು. ಹಾಗೆಯೇ ಕಾಯಕಾರ್ಹರಾದವರು ಒಟ್ಟು ೧೨೨ ಜನರಿರುವರು. ಇದರಲ್ಲಿ ೬೩ ಪುರುಷರು ಹಾಗೂ ೬೫ ಮಹಿಳೆಯರಿರುವರು.

೪.೪.೭ ಹಾವೇರಿ

ಹಾವೇರಿ ಜಿಲ್ಲೆಯಲ್ಲಿ ಕಾಯಕಾರ್ಹರಲ್ಲದವರು ಒಟ್ಟು ೩೧ ಜನರಿರುವರು, ಇದರಲ್ಲಿ ಪುರುಷರು ೧೪ ಹಾಗೂ ಮಹಿಳೆಯರು ೧೭ ಜನರಿರುವರು. ಹಾಗೆಯೇ ಕಾಯಕಾರ್ಹರಾದವರು ಒಟ್ಟು ೨೦ ಜನರಿರುವರು. ಇದರಲ್ಲಿ ೧೦ ಜನರು ಪುರುಷರು ಹಾಗೂ ೧೦ ಜನರು ಮಹಿಳೆಯರಿರುವರು.

ಮಾಲ ಸಮುದಾಯ ನೆಲೆಸಿದ ಎಲ್ಲಾ ಜಿಲ್ಲೆಗಳಿಂದ ಮಾಲ ಸಮುದಾಯದಲ್ಲಿ ಕಾಯಕಾರ್ಹರಲ್ಲದವರು ಒಟ್ಟು ೭೧೬ ಜನರು ಇರುವರು. ಇದರಲ್ಲಿ ಪುರುಷರು ೩೫೭ ಹಾಗೂ ಮಹಿಳೆಯರು ೩೫೯ ಜನರಿರುವರು. ಹಾಗೆಯೇ ಕಾಯಕಾರ್ಹರಾದವರು ಒಟ್ಟು ೯೨೪ ಜನರಿರುವರು. ಇದರಲ್ಲಿ ೪೬೧ ಪುರುಷರು ಹಾಗೂ ೪೬೩ ಮಹಿಳೆಯರಿರುವರು.


ಶೇಕಡವಾರುಗಳಲ್ಲಿ ಹೇಳಬಹುದಾದರೆ ಕಾಯಕಾರ್ಹರರಲ್ಲದವರು ಶೇಕಡ ೪೩.೭೩ ಹಾಗೂ ಕಾಯಕಾರ್ಹರು ಶೇಕಡ ೫೬.೨೭ ಇರುವರು

ಕೋಷ್ಟಕ ೪.೨: ೨೦೧೧ರ ಜನಗಣತಿ ಪ್ರಕಾರ ಕರ್ನಾಟಕ ರಾಜ್ಯದ ಕಾಯಕ ಮಾಡಲು ಅನರ್ಹರು ಹಾಗೂ ಕಾಯಕಾರ್ಹರ ವಿವರ

ಕ್ರಸಂ	ರಾಜ್ಯ	ಕಾಯಕ ಮಾಡಲು ಅನರ್ಹರು			ಕಾಯಕದಲ್ಲಿ ನಿರತರಾದವರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕರ್ನಾಟಕ	೧,೨೬,೯೬,೫೪೧	೨,೦೫,೨೬,೧೫೯	೩,೩೨,೨೨,೭೦೦	೧,೮೨,೭೦,೧೧೬	೯೬,೦೨,೪೮೧	೨,೭೮,೭೨,೫೯೭

ಆಧಾರ: ೨೦೧೧ರ ಜನಗಣತಿ ವರದಿ

ಲಂಬಚಿತ್ರ: ೪.೧. ೨೦೧೧ರ ಜನಗಣತಿ ಪ್ರಕಾರ ಕರ್ನಾಟಕ ರಾಜ್ಯದ ಕಾಯಕ ಮಾಡಲು ಅನರ್ಹರು ಹಾಗೂ ಕಾಯಕಾರ್ಹರ ವಿವರ



ಕರ್ನಾಟಕ ರಾಜ್ಯದಲ್ಲಿ ಕಾಯಕ ಮಾಡಲು ಅರ್ಹರಲ್ಲದವರು ಒಟ್ಟು ೩,೩೨,೨೨,೭೦೦ ಜನರಿರುವರು. ಇದರಲ್ಲಿ ಪುರುಷರು ೧,೨೬,೯೬,೫೪೧ ಹಾಗೂ ಮಹಿಳೆಯರು ೨,೦೫,೨೬,೧೫೯ ಜನರಿರುವರು.

ಕಾಯಕ ನಿರತರಲ್ಲಿ ಒಟ್ಟು ೨,೭೮,೭೨,೫೯೭ ಜನರಿರುವರು. ಇದರಲ್ಲಿ ಪುರುಷರು ೧,೮೨,೭೦,೧೧೬ ಹಾಗೂ ಮಹಿಳೆಯರು ೯೬,೦೨,೪೮೧ ಜನರಿರುವರು. ಕಾಯಕ ಮಾಡಲು ಅನರ್ಹರೆಂದು ಗುರುತಿಸಿರುವವರಲ್ಲಿ ಮಹಿಳೆಯರ ಸಂಖ್ಯೆಯೇ ಹೆಚ್ಚಿದೆ ಹಾಗೆಯೇ ಕಾಯಕ ನಿರತರಾದವರಲ್ಲಿ ಮಹಿಳೆಯರ ಪ್ರಮಾಣ ಕಡಿಮೆಯಾಗಿದೆಯೆಂದು ದಾಖಲಾಗಿರುವುದು

ಕೋಷ್ಟಕ ೪.೩: ಮಾಲ ಸಮುದಾಯದ ಕಾಯಕಾರ್ಹರು ಹಾಗೂ ಕಾಯಕದಲ್ಲಿ ನಿರತರಾದವರ ವಿವರ

ಕ್ರಸಂ	ಜಿಲ್ಲೆ	ಕಾಯಕ ಮಾಡಲು ಅನರ್ಹರು (೦–೧೮)			ಕಾಯಕಾರ್ಹರು (೧೯–೬೦)			ಕಾಯಕದಲ್ಲಿ ನಿರತರಾದವರು (೦–೬೦ರ ಮೇಲ್ಪಟ್ಟು)		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕೊಪ್ಪಳ	೧೯೦	೧೮೮	೩೭೮	೨೯೧	೨೯೩	೫೮೪	೩೪೨	೩೦೦	೬೪೨
೨	ಗದಗ	೧೦	೧೩	೨೩	೧೪	೧೩	೨೮	೧೯	೧೦	೨೯
೩	ಧಾರವಾಡ	೨೩	೨೨	೪೫	೩೬	೩೮	೭೪	೪೫	೪೦	೮೫



೪	ಮೈಸೂರು	೯	೭	೧೬	೧೨	೧೫	೨೭	೧೫	೧೩	೨೮
೫	ರಾಯಚೂರು	೫	೪	೯	೧೦	೧೦	೨೦	೧೨	೦೯	೨೧
೬	ಶಿವಮೊಗ್ಗ	೯	೭	೧೬	೩೫	೩೫	೭೦	೪೦	೨೮	೬೮
೭	ಹಾವೇರಿ	೩೧	೩೧	೬೨	೬೩	೫೯	೧೨೨	೭೮	೬೫	೧೪೩
	ಒಟ್ಟು	**೨೭೨**	**೨೭೦**	**೫೪೨**	**೪೬೧**	**೪೬೩**	**೯೨೪**	**೫೫೧**	**೪೬೫**	**೧೦೧೬**

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

೧. ಕೊಪ್ಪಳ ಜಿಲ್ಲೆಯಲ್ಲಿ ಮಾಲ ಸಮುದಾಯದವರಲ್ಲಿ ಕಾಯಕ ಮಾಡಲು ಅನರ್ಹರಾದವರ ಒಟ್ಟು ಸಂಖ್ಯೆಯು ೩೭೮ ಇದೆ. ಇದರಲ್ಲಿ ೧೯೦ ಪುರುಷರು ಹಾಗೂ ೧೮೮ ಮಹಿಳೆಯರಿರುವರು. ಇನ್ನು ಕಾಯಕಾರ್ಹರು ಒಟ್ಟು ೫೪೮ ಜನರಿರುವರು. ಇದರಲ್ಲಿ ೨೯೧ ಜನರು ಪುರುಷರು ಹಾಗೂ ೨೯೩ ಜನರು ಮಹಿಳೆಯರಿರುವರು. ಆದರೆ ಕಾಯಕದಲ್ಲಿ ನಿರತರಾದವರು ಒಟ್ಟು ೬೪೨ ಜನರಿರುವರು. ಇದರಲ್ಲಿ ೩೪೨ ಜನರು ಪುರುಷರು ಹಾಗೂ ೩೦೦ ಜನರು ಮಹಿಳೆಯರಿರುವರು. ಅಂದರೆ ಕಾಯಕಾರ್ಹರಿಗಿಂತ ಕಾಯಕದೊಳಗೆ ನಿರತರಾದವರ ಪ್ರಮಾಣ ಹೆಚ್ಚಿಗಿದೆ. ಅಂದರೆ ಕಾಯಕಾರ್ಹರಲ್ಲದವರೂ ಕಾಯಕದೊಳಗೆ ತೊಡಗಿಸಿಕೊಂಡಿರುವುದು ಸಮೀಕ್ಷೆಯಿಂದ ಸ್ಪಷ್ಟವಾಗಿ ತಿಳಿದುಬರುವುದು.

೨. ಗದಗ ಜಿಲ್ಲೆಯಲ್ಲಿಯೂ ಕಾಯಕ ಮಾಡಲು ಅನರ್ಹರಾದವರ ಒಟ್ಟು ಸಂಖ್ಯೆಯು ೨೩ ಇದೆ. ಇದರಲ್ಲಿ ೧೦ ಜನರು ಪುರುಷರು ಹಾಗೂ ೧೩ ಜನರು ಮಹಿಳೆಯರಿರುವರು. ಇನ್ನು ಕಾಯಕಾರ್ಹರು ಒಟ್ಟು ೨೮ ಜನರಿರುವರು. ಇದರಲ್ಲಿ ೧೪ ಜನರು ಪುರುಷರು ಹಾಗೂ ೧೩ ಜನರು ಮಹಿಳೆಯರಿರುವರು. ಆದರೆ ಕಾಯಕದಲ್ಲಿ ನಿರತರಾದವರು ಒಟ್ಟು ೨೯ ಜನರಿರುವರು. ಇದರಲ್ಲಿ ೧೯ ಜನರು ಪುರುಷರು ಹಾಗೂ ೧೦ ಜನರು ಮಹಿಳೆಯರಿರುವರು. ಇಲ್ಲಿ ಕಾಯಕಾರ್ಹರಿಗಿಂತ ಕಾಯಕದೊಳಗೆ ನಿರತರಾದವರ ಪ್ರಮಾಣ ಹೆಚ್ಚಿಗಿದೆ.

೩. ಧಾರವಾಡ ಜಿಲ್ಲೆಯಲ್ಲಿ ಕಾಯಕ ಮಾಡಲು ಅನರ್ಹರಾದವರ ಒಟ್ಟು ಸಂಖ್ಯೆಯು ೪೫ ಇದೆ. ಇದರಲ್ಲಿ ೨೩ ಜನರು ಪುರುಷರು, ಹಾಗೂ ೨೨ ಜನರು ಮಹಿಳೆಯರಿರುವರು. ಇನ್ನು ಕಾಯಕಾರ್ಹರು ಒಟ್ಟು ೭೪ ಜನರಿರುವರು. ಇದರಲ್ಲಿ ೩೬ ಜನರು ಪುರುಷರು ಹಾಗೂ ೩೮ ಜನರು ಮಹಿಳೆಯರಿರುವರು. ಆದರೆ ಕಾಯಕದಲ್ಲಿ ನಿರತರಾದವರು ೮೫ ಜನರಿರುವರು. ಇದರಲ್ಲಿ ೪೫ ಜನರು ಪುರುಷರು ಹಾಗೂ ೪೦ ಜನರು ಮಹಿಳೆಯರಿರುವರು. ಇಲ್ಲಿ ಕಾಯಕಾರ್ಹರಿಗಿಂತ ಕಾಯಕದೊಳಗೆ ನಿರತರಾದವರ ಪ್ರಮಾಣ ಹೆಚ್ಚಿಗಿದೆ.

೪. ಮೈಸೂರು ಜಿಲ್ಲೆಯಲ್ಲಿ ಕಾಯಕ ಮಾಡಲು ಅನರ್ಹರಾದವರ ಒಟ್ಟು ಸಂಖ್ಯೆಯು ೧೬ ಇದೆ. ಇದರಲ್ಲಿ ೯ ಜನರು ಪುರುಷರು ಹಾಗೂ ೭ ಜನರು ಮಹಿಳೆಯರಿರುವರು. ಇನ್ನು ಕಾಯಕಾರ್ಹರು

ಒಟ್ಟು ೨೭ ಜನರಿರುವರು. ಇದರಲ್ಲಿ ೧೨ ಜನರು ಪುರುಷರು ಹಾಗೂ ೧೫ ಜನರು ಮಹಿಳೆಯರಿರುವರು. ಆದರೆ ಕಾಯಕದಲ್ಲಿ ನಿರತರಾದವರು ಒಟ್ಟು ೨೮ ಜನರಿರುವರು. ಇದರಲ್ಲಿ ೧೫ ಜನರು ಪುರುಷರು ಹಾಗೂ ೧೩ ಜನರು ಮಹಿಳೆಯರಿರುವರು. ಇಲ್ಲಿಯೂ ಕಾಯಕಾರ್ಹರಿಗಿಂತ ಕಾಯಕದೊಳಗೆ ನಿರತರಾದವರ ಪ್ರಮಾಣ ಹೆಚ್ಚಿಗಿದೆ.


೫. ರಾಯಚೂರು ಜಿಲ್ಲೆಯಲ್ಲಿ ಕಾಯಕ ಮಾಡಲು ಅನರ್ಹರಾದವರ ಒಟ್ಟು ಸಂಖ್ಯೆಯು ೯ ಇದೆ. ಇದರಲ್ಲಿ ೫ ಜನರು ಪುರುಷರು ಹಾಗೂ ೪ ಜನರು ಮಹಿಳೆಯರಿರುವರು. ಇನ್ನು ಕಾಯಕಾರ್ಹರು ಒಟ್ಟು ೨೦ ಜನರಿರುವರು. ಇದರಲ್ಲಿ ೧೦ ಜನರು ಪುರುಷರು ಹಾಗೂ ೧೦ ಜನರು ಮಹಿಳೆಯರಿರುವರು. ಆದರೆ ಕಾಯಕದಲ್ಲಿ ನಿರತರಾದವರು ಒಟ್ಟು ೨೧ ಜನರಿರುವರು. ಇದರಲ್ಲಿ ೧೨ ಜನರು ಪುರುಷರು ಹಾಗೂ ೯ ಜನರು ಮಹಿಳೆಯರಿರುವರು. ಇಲ್ಲಿಯೂ ಕಾಯಕಾರ್ಹರಿಗಿಂತ ಕಾಯಕದೊಳಗೆ ನಿರತರಾದವರ ಪ್ರಮಾಣ ಹೆಚ್ಚಿಗಿದೆ.

೬. ಶಿವಮೊಗ್ಗ ಜಿಲ್ಲೆಯಲ್ಲಿ ಕಾಯಕ ಮಾಡಲು ಅನರ್ಹರಾದವರ ಒಟ್ಟು ಸಂಖ್ಯೆಯು ೧೬ ಇದೆ. ಇದರಲ್ಲಿ ೯ ಜನರು ಪುರುಷರು ಹಾಗೂ ೭ ಜನರು ಮಹಿಳೆಯರಿರುವರು. ಇನ್ನು ಕಾಯಕಾರ್ಹರು ಒಟ್ಟು ೭೦ ಜನರಿರುವರು. ಇದರಲ್ಲಿ ೩೫ ಜನರು ಪುರುಷರು ಹಾಗೂ ೩೫ ಜನರು ಮಹಿಳೆಯರಿರುವರು. ಆದರೆ ಕಾಯಕದಲ್ಲಿ ನಿರತರಾದವರು ಒಟ್ಟು ೭೮ ಜನರಿರುವರು. ಇದರಲ್ಲಿ ೪೦ ಜನರು ಪುರುಷರು ಹಾಗೂ ೩೮ ಜನರು ಮಹಿಳೆಯರಿರುವರು. ಇಲ್ಲಿಯೂ ಕಾಯಕಾರ್ಹರಿಗಿಂತ ಕಾಯಕದೊಳಗೆ ನಿರತರಾದವರ ಪ್ರಮಾಣ ಹೆಚ್ಚಿಗಿದೆ.

೭. ಹಾವೇರಿ ಜಿಲ್ಲೆಯಲ್ಲಿ ಕಾಯಕ ಮಾಡಲು ಅನರ್ಹರಾದವರ ಒಟ್ಟು ಸಂಖ್ಯೆಯು ೬೨ ಇದೆ. ಇದರಲ್ಲಿ ೩೧ ಜನರು ಪುರುಷರು, ಹಾಗೂ ೩೧ ಜನರು ಮಹಿಳೆಯರಿರುವರು. ಇನ್ನು ಕಾಯಕಾರ್ಹರು ಒಟ್ಟು ೧೪೩ ಜನರಿರುವರು. ಇದರಲ್ಲಿ ೭೮ ಜನರು ಪುರುಷರು ಹಾಗೂ ೬೫ ಜನರು ಮಹಿಳೆಯರಿರುವರು. ಆದರೆ ಕಾಯಕದಲ್ಲಿ ನಿರತರಾದವರು ಒಟ್ಟು ೧೪೩ ಜನರಿರುವರು. ಇದರಲ್ಲಿ ೭೮ ಜನರು ಪುರುಷರು ಹಾಗೂ ೬೫ ಜನರು ಮಹಿಳೆಯರಿರುವರು. ಇಲ್ಲಿಯೂ ಕಾಯಕಾರ್ಹರಿಗಿಂತ ಕಾಯಕದೊಳಗೆ ನಿರತರಾದವರ ಪ್ರಮಾಣ ಹೆಚ್ಚಿಗಿದೆ.

ಮಾಲ ಸಮುದಾಯದಲ್ಲಿ ಕಾಯಕ ಮಾಡಲು ಅರ್ಹವಾದವರು ಹಾಗೂ ಕಾಯಕನಿರತರ ಪ್ರಮಾಣವನ್ನು ನೋಡಿದಾಗ ಕಾಯಕ ಮಾಡಲು ಅನರ್ಹವಾದವರು ಒಟ್ಟು ೫೪೨ ಜನರಿರುವರು. ಇದರಲ್ಲಿ ಪುರುಷರು ೨೭೨ ಹಾಗೂ ಮಹಿಳೆಯರು ೨೭೦ ಜನರಿರುವರು. ಕಾಯಕಾರ್ಹರಾದವರು ಒಟ್ಟು ೯೨೪ ಜನರಿರುವರು. ಇದರಲ್ಲಿ ಪುರುಷರು ೪೬೧ ಹಾಗೂ ಮಹಿಳೆಯರು ೪೬೩ ಜನರಿರುವರು. ಕಾಯಕದಲ್ಲಿ ನಿರತರಾದವರು ಒಟ್ಟು ೧೦೧೬ ಜನರಿರುವರು. ಇದರಲ್ಲಿ ಪುರುಷರು ೫೫೧ ಹಾಗೂ ಮಹಿಳೆಯರು ೪೬೫ ಜನರಿರುವರು.

ಲಂಬಚಿತ್ರ ೪.೨: ಮಾಲ ಸಮುದಾಯದ ಕಾಯಕಾರ್ಹರು ಹಾಗೂ ಕಾಯಕದಲ್ಲಿ ನಿರತರಾದವರು (ಶೇಕಡವಾರುಗಳಲ್ಲಿ)



ಅವಲಂಭಿತ ಗುಂಪಿನ ೧೭೪ ಮಕ್ಕಳನ್ನು ಹೊರತುಪಡಿಸಿದರೆ ಒಟ್ಟು ೧೪೬೬ ಜನರಿರುವರು. ಶೇಕಡವಾರುಗಳಲ್ಲಿ ಹೇಳುವುದಾದರೆ ಒಟ್ಟು ಜನಸಂಖ್ಯೆಯಲ್ಲಿ ಕಾಯಕರಾಗಿರಲು ಅನರ್ಹವಾದವರು ಶೇಕಡ ೫೬.೩೪ ಜನರಿರುವರು. ಆದರೆ ಕಾಯಕ ನಿರತರಾದವರು ಶೇಕಡ ೬೧.೯೬ ಜನರಿರುವರು. ಅಂದರೆ ಶೇಕಡ ೫.೬೨ರಷ್ಟು ಕಾಯಕಾರ್ಹರಲ್ಲದವರು ಕಾಯಕದಲ್ಲಿ ನಿರತವಾಗಿರುವುದು ಕಂಡುಬಂದಿದೆ.

ಕೋಷ್ಟಕ ೪.೪: ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ವಿವಿಧ ವೃತ್ತಿಯಲ್ಲಿ ತೊಡಗಿದವರ ಜನಸಂಖ್ಯೆ


ಕ್ರಸಂ	ವಿವರ	ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು
೧	ಕೃಷಿಕರು	೪೭,೫೩,೭೦೮	೧೮,೨೬,೯೪೧	೬೫,೮೦,೬೪೯
೨	ಕೃಷಿ ಕೂಲಿ	೩೨,೮೩,೨೭೯	೩೮,೭೨,೬೮೪	೭೧,೫೫,೯೬೩
೩	ಕೃಷಿಯೇತರ ಕೂಲಿ	೯೭,೯೪,೧೪೬	೩೪,೨೮,೬೧೨	೧,೩೨,೨೨,೭೫೮
೪	ಗೃಹಕೈಗಾರಿಕೆಯಲ್ಲಿ ತೊಡಗಿದವರು	೪,೩೮,೯೮೩	೪,೭೪,೨೪೪	೯,೧೩,೨೨೭

ಕೃಪೆ:೨೦೧೧ರ ಜನಗಣತಿ ವರದಿ





ಲಂಬಚಿತ್ರ: ೪.೩. ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ವಿವಿಧ ವೃತ್ತಿಯಲ್ಲಿ ತೊಡಗಿದವರ ಜನಸಂಖ್ಯೆ




ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಕೃಷಿಕರು ಒಟ್ಟು ೬೫,೮೦,೬೪೯ ಜನರಿರುವರು. ಇದರಲ್ಲಿ ಪುರುಷರು ೪೭,೫೩,೭೦೮ ಹಾಗೂ ೧೮,೨೬,೯೪೧ ಮಹಿಳೆಯರಿರುವರು. ಕೃಷಿಕೂಲಿ ಮಾಡುವವರು ಒಟ್ಟು ೭೧,೫೫,೯೬೩ ಜನರಿರುವರು. ಇದರಲ್ಲಿ ಪುರುಷರು ೩೨,೮೩,೨೬೯ ಹಾಗೂ ೩೮,೭೨,೬೮೪ ಮಹಿಳೆಯರಿರುವರು. ಕೃಷಿಯೇತರ ಕೂಲಿ ಮಾಡುವವರು ಒಟ್ಟು ೧,೩೨,೨೨,೭೫೮ ಜನರಿರುವರು. ಇದರಲ್ಲಿ ಪುರುಷರು ೯೭,೯೪,೧೪೬ ರಷ್ಟುಹಾಗೂ ೩೪,೨೮,೬೧೨ ರಷ್ಟು ಮಹಿಳೆಯರಿರುವರು. ಗೃಹಕೈಗಾರಿಕೆಗಳಲ್ಲಿ ತೊಡಗಿದವರು ಒಟ್ಟು ೯,೧೩,೨೨೭ ರಷ್ಟು ಜನರಿರುವರು. ಇದರಲ್ಲಿ ಪುರುಷರು ೪,೩೮,೯೮೩ ರಷ್ಟು ಹಾಗೂ ೪,೭೪,೨೪೪ ರಷ್ಟು ಮಹಿಳೆಯರಿರುವರು.



ಕೋಷ್ಟಕ ೪.೫: ವಿವಿಧ ವೃತ್ತಿಗಳಲ್ಲಿ ತೊಡಗಿರುವ ಮಾಲ ಸಮುದಾಯದ ಜನರ ಜಿಲ್ಲಾವಾರು ವಿವರ																								
ವಿವರ	ಕೊಪ್ಪಳ			ಗದಗ			ಧಾರವಾಡ			ಮೈಸೂರು			ರಾಯಚೂರು			ಶಿವಮೊಗ್ಗ			ಹಾವೇರಿ			ಒಟ್ಟು		
	ಗ	ಹೆ	ಒ	ಗ	ಹೆ	ಒ	ಗ	ಹೆ	ಒ	ಗ	ಹೆ	ಒ	ಗ	ಹೆ	ಒ	ಗ	ಹೆ	ಒ	ಗ	ಹೆ	ಒ	ಗ	ಹೆ	ಒ
ಕೃಷಿ	೪೫	೦೨	೪೭	–	–	–	–	–	–	–	–	–	–	–		–	–	–	–	–	–	೪೫	೨	೪೭
ಕೃಷಿಕೂಲಿ	೧೫೦	೧೬೦	೩೧೦	–	–	–	–	–	–	–	–	–	೪	೨	೬	೧೨	೫	೧೭	೬	೫	೧೧	೧೭೨	೧೭೨	೩೪೪
ಕೃಷಿಯೇತರ ಕೂಲಿ	೮೫	೧೦	೯೫	೦೮	–	೮	೧೫	೯	೨೪	೭	೪	೧೧	೨	–	೨	೧೧	೨	೧೩	೨೬	೬	೩೨	೧೫೪	೩೧	೧೮೫
ರದ್ದಿ ಆಯುವುದು	೦೬	೩೦	೩೬	೦೮	೬	೧೪	೦೮	೧೧	೧೯	೪	೪	೮	೪	೫	೯	೬	೧೦	೧೬	೧೧	೨೪	೩೫	೪೭	೯೦	೧೩೭
ರಿಕ್ಷಾ	೧೦	–	೧೦	–	–	–	೮	–	೮	೧	–	೧	–	–	–	–	–	–	೭	–	೭	೨೬		೨೬
ಸಣ್ಣ ವ್ಯಾಪಾರ	–	೨೩	೨೩	–	–	–		೮	೮	೧	೨	೩	–	–	–	೨	೩	೫	೧೧	೧೩	೨೪	೧೪	೪೯	೬೩
ಧಾರ್ಮಿಕ ಭಿಕ್ಷಾಟನೆ	೪೧	೫೦	೯೧	೩	೪	೭	೧೨	೮	೨೦	೨	೩	೫	೨	೨	೪	೮	೬	೧೪	೯	೮	೧೭	೭೭	೮೧	೧೫೮
ಇತರೆ	೦೫	೨೫	೩೦	–	–	–	೨	೪	೬	–	–	–	–	–	–	೧	೨	೩	೮	೯	೧೭	೧೬	೪೦	೫೬
ಒಟ್ಟು	೩೪೨	೩೦೦	೬೪೨	೧೯	೧೦	೨೯	೪೫	೪೦	೮೫	೧೫	೧೩	೨೮	೧೨	೯	೨೧	೪೦	೨೮	೬೮	೭೮	೬೫	೧೪೩	೫೫೧	೪೬೫	೧೦೧೬

ಆಧಾರ–ಕ್ಷೇತ್ರಕಾರ್ಯ ಸಮೀಕ್ಷೆ

ಲಂಬಚಿತ್ರ ೪.೪ ವಿವಿಧ ವೃತ್ತಿಗಳಲ್ಲಿ ತೊಡಗಿರುವ ಮಾಲ ಸಮುದಾಯದ ಜನರ ಜಿಲ್ಲಾವಾರು ವಿವರ



ಮಾಲ ಸಮುದಾಯದವರು ಹೊಟ್ಟೆಪಾಡಿಗಾಗಿ ಪ್ರಸ್ತುತ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿದ್ದಾರೆ. ಅಲೆಮಾರಿ ಮಾಲ ಸಮುದಾಯದವರು ಕರ್ನಾಟಕದಲ್ಲಿ ಒಟ್ಟು ೭ ಜಿಲ್ಲೆಗಳಲ್ಲಿ ನೆಲೆಸಿದ್ದಾರೆ. ಅವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

೪.೮.೧ ಕೊಪ್ಪಳ ಜಿಲ್ಲೆ

ಕೊಪ್ಪಳ ಜಿಲ್ಲೆಯಲ್ಲಿ ಚಿಲಕಮುಖಿಯಲ್ಲಿಯೇ ೪೫ ಮಾಲ ಸಮುದಾಯದ ಕುಟುಂಬಗಳಿಗೆ ಕೃಷಿ ಭೂಮಿ ಇದೆ. ಇನ್ನುಳಿದ ಅಬ್ಬಿಗೇರಿಯ ಎರಡು ಕುಟುಂಬಗಳಿಗೆ ಮಾತ್ರ ಕೃಷಿಭೂಮಿ ಇದೆ. ಇದರಲ್ಲಿ ಚಿಲಕಮುಖಿಯಲ್ಲಿ ೪೩ ಕುಟುಂಬಗಳ ಕೃಷಿ ಭೂಮಿ ಪುರುಷರ ಹೆಸರಿನಲ್ಲಿವೆ. ಇನ್ನೆರಡು ಕುಟುಂಬಗಳ ಕೃಷಿ ಭೂಮಿಯು ಮಹಿಳೆಯರ ಹೆಸರಿನಲ್ಲಿವೆ. ಅಬ್ಬಿಗೆರೆಯಲ್ಲಿ ಎರಡು ಕುಟುಂಬಗಳಿಗೆ ಇರುವ ಭೂಮಿಯೂ ಪುರುಷರ ಹೆಸರಿನಲ್ಲಿಯೇ ಇರುವುದಾಗಿ ಕ್ಷೇತ್ರಕಾರ್ಯದಲ್ಲಿ ತಿಳಿದುಬಂದಿತು.

ಕೊಪ್ಪಳ ಜಿಲ್ಲೆಯಲ್ಲಿ ಬಹುತೇಕ ಗ್ರಾಮೀಣ ಪ್ರದೇಶದಲ್ಲಿಯೇ ಮಾಲ ಸಮುದಾಯದವರು ನೆಲೆಸಿರುವರು. ಹೀಗಾಗಿ ಕೃಷಿಭೂಮಿಗಳಲ್ಲಿ ಕೃಷಿಕೂಲಿ ಕಾರ್ಮಿಕರಾಗಿ ದುಡಿಯುವವರು ಈ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವರು. ಕೃಷಿಕೂಲಿಗಳಾಗಿ ಪುರುಷರು ೧೫೦ ಜನರಿರುವರು. ಮಹಿಳೆಯರು ೧೬೦ ಜನರಿರುವರು.

ಅಲೆಮಾರಿಗಳು ಹೆಚ್ಚಾಗಿ ರದ್ದಿ ಆಯುವ ಕಾಯಕವನ್ನು ಮಾಡುವರು. ಮಾಲ ಸಮುದಾಯವೂ ಇದಕ್ಕೆ ಹೊರತಲ್ಲ. ಮಾಲ ಸಮುದಾಯದ ೬ ಜನ ಪುರುಷರು ಹಾಗೂ ೩೦ ಜನ ಮಹಿಳೆಯರು ಈ ಜಿಲ್ಲೆಯಲ್ಲಿ ರದ್ದಿ ಆಯುವ ಕಾಯಕವನ್ನು ಮಾಡುವರು.

ನಗರ ಪ್ರದೇಶದಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ೧೦ ಯುವಕರು ರಿಕ್ಷಾ ನಡೆಸುತ್ತಿರುವರು. ತಲೆಯಮೇಲೆ ಬುಟ್ಟಿಹೊತ್ತು ಊರೂರು ಅಲೆಯುತ್ತ ಚಿಕ್ಕಪುಟ್ಟ ಪ್ಲಾಸ್ಟಿಕ್ ಪರಿಕರಗಳನ್ನು ಮಾರುವ ಕಾಯಕವನ್ನು ೨೩ ಜನರು ಮಹಿಳೆಯರು ಮಾಡುತ್ತಿರುವರು.

ಮಾಲ ಸಮುದಾಯದವರು ತಲೆಯ ಮೇಲೆ ಕಂಬಿಹೊತ್ತು ಹೆಗಲಿಗೆ ಸಮ್ಮಾಳ ವಾದ್ಯವನ್ನು ಹಾಕಿಕೊಂಡು ಊರೂರು ಸುತ್ತುತ್ತ ಭಿಕ್ಷಾಟನೆ ಮಾಡುವ ಪದ್ಧತಿ ಮಾಲ ಸಮುದಾಯದೊಳಗಿದೆ. ಇವರಲ್ಲಿ ಕಂಬಿಯನ್ನು ಪುರುಷನು ಹೊತ್ತುಕೊಂಡು ಭಿಕ್ಷಾಟನೆಗೆ ಹೊರಟರೆ ಮಹಿಳೆಯು ಜೋಳಿಗೆಗಳನ್ನು ಹಾಕಿಕೊಂಡು ಅವನನ್ನು ಹಿಂಬಾಲಿಸುವಳು. ಇನ್ನೂ ಕೆಲವು ಮಹಿಳೆಯರು ದೇವರ ಸ್ತುತಿ ಮಾಡುತ್ತಾ ಒಬ್ಬಂಟಿಗರಾಗಿಯೂ ಭಿಕ್ಷಾಟನೆ ಮಾಡುವರು. ಕೊಪ್ಪಳ ಜಿಲ್ಲೆಯಲ್ಲಿ ಧಾರ್ಮಿಕ ಭಿಕ್ಷಾಟನೆ ಮಾಡುವವರಲ್ಲಿ ಪುರುಷರು ೪೧ ಜನರು ಇರುವರು. ಮಹಿಳೆಯರು ೫೦ ಜನರಿರುವರು.

ಕೊಪ್ಪಳ ಜಿಲ್ಲೆಯ ಕೊಪ್ಪಳ ನಗರವು ಕೂದಲಿನ ಉದ್ಯಮಕ್ಕೆ ತುಂಬಾ ಹೆಸರುವಾಸಿ. ಕೂದಲು ಕೊಳ್ಳುವವರು ಬಹುತೇಕ ಶ್ರೀಮಂತ ಉದ್ದಿಮೆಗಳು. ಆದರೆ ಕೂದಲನ್ನು ಸರಬರಾಜು ಮಾಡುವವರು ಬಡವರು. ಅದರಲ್ಲಿಯೂ ವಿಶೇಷವಾಗಿ ಅಲೆಮಾರಿ ಸಮುದಾಯಗಳೇ ಕೂದಲನ್ನು ಸರಬರಾಜು ಮಾಡುವವು. ಊರೂರು ಅಲೆಯುತ್ತ ಕೂದಲನ್ನು ಸಂಗ್ರಹಿಸುವ ಕಾಯಕವನ್ನು ಮಾಲ ಸಮುದಾಯದವರೂ ಮಾಡುವರು. ಈ ರೀತಿ ಕೂದಲು ಸಂಗ್ರಹಿಸುವ ಕಾಯಕದಲ್ಲಿ ೫ ಜನ ಪುರುಷರೂ, ೨೫ ಜನ ಮಹಿಳೆಯರೂ ಇರುವರು.

ಕೊಪ್ಪಳ ಜಿಲ್ಲೆಯಲ್ಲಿ ವಿವಿಧ ವೃತ್ತಿಗಳಲ್ಲಿ ತೊಡಗಿರುವವರು ಒಟ್ಟು ೬೪೨ ಜನರಿರುವರು. ಇದರಲ್ಲಿ ಪುರುಷರು ೩೪೨ ಹಾಗೂ ೩೦೦ ಮಹಿಳೆಯರಿರುವರು.

೪.೮.೨ ಗದಗ ಜಿಲ್ಲೆ

ಕೊಪ್ಪಳ ಜಿಲ್ಲೆಯಲ್ಲಿ ಮಾಲ ಸಮುದಾಯದ ಕುಟುಂಬಗಳು ಕಡಿಮೆ ಇವೆ ಹಾಗೂ ಅವು ನಗರ ಪ್ರದೇಶ ಮತ್ತು ನಗರಕ್ಕೆ ಹತ್ತಿರದ ಪ್ರದೇಶಗಳಲ್ಲಿ ನೆಲೆಸಿವೆ. ಈ ಜಿಲ್ಲೆಯಲ್ಲಿ ಕೃಷಿ ಭೂಮಿ ಹೊಂದಿದ ಮಾಲ ಸಮುದಾಯದ ಕುಟುಂಬಗಳು ಒಂದೂ ಇರುವುದಿಲ್ಲ. ಕೃಷಿ ಕೂಲಿಕಾರರಾಗಿ ತೊಡಗಿಸಿಕೊಂಡವರೂ ಕಂಡುಬರುವುದಿಲ್ಲ. ಕೃಷಿಯೇತರ ಕೂಲಿಗಳಾಗಿ ೮ ಪುರುಷರಿರುವರು. ಇವರು ನಗರದ ಎಪಿಎಂಸಿ ಯಾರ್ಡ್ ಹಾಗೂ ಇತರ ಕಡೆ ಹಮಾಲಿ ವೃತ್ತಿಯಲ್ಲಿ ತೊಡಗಿರುವರು.

ಮಾಲ ಸಮುದಾಯದ ೮ ಜನ ಪುರುಷರು ಹಾಗೂ ೬ ಜನ ಮಹಿಳೆಯರು ಈ ಜಿಲ್ಲೆಯಲ್ಲಿ ರದ್ದಿ ಆಯುವರು.

ನಗರ ಪ್ರದೇಶದಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ೧೦ ಜನ ಯುವಕರು ರಿಕ್ಷಾ ನಡೆಸುತ್ತಿರುವರು. ತಲೆಯಮೇಲೆ ಬುಟ್ಟಿಹೊತ್ತು ಊರೂರು ಅಲೆಯುತ್ತ ಚಿಕ್ಕಪುಟ್ಟ ಪ್ಲಾಸ್ಟಿಕ್ ಪರಿಕರಗಳನ್ನು ಮಾರುವ ಕಾಯಕವನ್ನು ೨೩ ಜನ ಮಹಿಳೆಯರು ಮಾಡುತ್ತಿರುವರು. ಧಾರ್ಮಿಕ ಭಿಕ್ಷಾಟನೆಯಲ್ಲಿ ೩ ಜನ ಪುರುಷರು ಹಾಗೂ ೪ ಜನ ಮಹಿಳೆಯರು ನಿರತವಾಗಿರುವರು.

ಗದಗ ಜಿಲ್ಲೆಯಲ್ಲಿ ಮಾಲ ಸಮುದಾಯದೊಳಗೆ ವಿವಿಧ ವೃತ್ತಿಗಳಲ್ಲಿ ತೊಡಗಿರುವವರು ಒಟ್ಟು ೨೯ ಜನರಿರುವರು. ಇದರಲ್ಲಿ ೧೯ ಜನ ಪುರುಷರು ಹಾಗೂ ೧೦ ಜನರು ಮಹಿಳೆಯರಿರುವರು.

೪.೮.೩. ಧಾರವಾಡ ಜಿಲ್ಲೆ

ಧಾರವಾಡ ಜಿಲ್ಲೆಯಲ್ಲಿ ಮಾಲ ಸಮುದಾಯದ ಕುಟುಂಬಗಳು ಹುಬ್ಬಳ್ಳಿ ಧಾರವಾಡಗಳ ಮಧ್ಯದಲ್ಲಿರುವ ಗೋಪನಕೊಪ್ಪ ಎಂಬ ಪ್ರದೇಶದೊಳಗೆ ಗುಡಾರಗಳನ್ನು ಹಾಕಿಕೊಂಡು ನೆಲೆಸಿವೆ. ಈ ಜಿಲ್ಲೆಯಲ್ಲಿ ಕೃಷಿ ಭೂಮಿ ಹೊಂದಿದ ಮಾಲ ಸಮುದಾಯದ ಕುಟುಂಬಗಳು ಒಂದೂ ಇರುವುದಿಲ್ಲ. ಕೃಷಿ ಕೂಲಿಕಾರರಾಗಿ ತೊಡಗಿಸಿಕೊಂಡವರೂ ಕಂಡುಬರುವುದಿಲ್ಲ.

ಕೃಷಿಯೇತರ ಕೂಲಿಗಳಾಗಿ ೧೫ ಜನರು ಪುರುಷರು ಹಾಗೂ ೯ ಜನರು ಮಹಿಳೆಯರು ಇರುವರು. ಪುರುಷರು ನಗರದಲ್ಲಿ ಹಮಾಲಿ ವೃತ್ತಿಯಲ್ಲಿ ತೊಡಗಿರುವರು. ಮಹಿಳೆಯರು ಬೇರೆಯವರ ಮನೆಗಳಲ್ಲಿ ಕಸಮುಸುರೆ ಕೆಲಸ ಮಾಡುವರು.

ಮಾಲ ಸಮುದಾಯದ ೮ ಜನರು ಪುರುಷರು ಹಾಗೂ ೧೧ ಜನರು ಮಹಿಳೆಯರು ಈ ಜಿಲ್ಲೆಯಲ್ಲಿ ರದ್ದಿ ಆಯುವರು.

ನಗರ ಪ್ರದೇಶದಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ೮ ಜನ ಯುವಕರು ರಿಕ್ಷಾ ನಡೆಸುತ್ತಿರುವರು. ತಲೆಯಮೇಲೆ ಬುಟ್ಟಿಹೊತ್ತು ಊರೂರು ಅಲೆಯುತ್ತ ಚಿಕ್ಕಪುಟ್ಟ ಪ್ಲಾಸ್ಟಿಕ್ ಪರಿಕರಗಳನ್ನು ಮಾರುವ ಕಾಯಕವನ್ನು ೨೩ ಜನ ಮಹಿಳೆಯರು ಮಾಡುತ್ತಿರುವರು. ಧಾರ್ಮಿಕ ಭಿಕ್ಷಾಟನೆಯಲ್ಲಿ ೩ ಜನ ಪುರುಷರು ಹಾಗೂ ೪ ಜನ ಮಹಿಳೆಯರು ನಿರತವಾಗಿರುವರು. ಹುಬ್ಬಳ್ಳಿಯ ರಸ್ತೆ ಬದಿ ಹಣ್ಣು ಪ್ಲಾಸ್ಟಿಕ್ ವಸ್ತುಗಳನ್ನು ಮಾರುವ ಕಾಯಕವನ್ನು ೮ ಜನ ಮಹಿಳೆಯರು ಮಾಡುವರು.

೧೨ ಜನ ಪುರುಷರು, ೮ ಜನ ಮಹಿಳೆಯರು ಧಾರ್ಮಿಕ ಭಿಕ್ಷಾಟನೆಯಲ್ಲಿ ತೊಡಗಿರುವರು. ಕೂದಲು ಸಂಗ್ರಹಣೆಯ ಕಾರ್ಯವನ್ನು ೨ ಜನ ಪುರುಷರು, ೪ ಜನ ಮಹಿಳೆಯರು ಮಾಡುವರು. ಧಾರವಾಡ ಜಿಲ್ಲೆಯಲ್ಲಿ ಒಟ್ಟು ೮೫ ಮಾಲ ಸಮುದಾಯದ ಜನ ವಿವಿಧ ವೃತ್ತಿಗಳಲ್ಲಿ ತೊಡಗಿರುವರು. ಇದರಲ್ಲಿ ೪೫ ಪುರುಷರು ಹಾಗೂ ೪೦ ಜನ ಮಹಿಳೆಯರಿರುವರು.

೪.೮.೪ ಮೈಸೂರು ಜಿಲ್ಲೆ

ಮೈಸೂರು ಜಿಲ್ಲೆಯಲ್ಲಿ ಮಾಲ ಸಮುದಾಯದ ಕುಟುಂಬಗಳು ಮೈಸೂರು ನಗರದ ಬನ್ನಿಮಂಟಪ ಪ್ರದೇಶಗಳಲ್ಲಿ ನೆಲೆಸಿವೆ. ಈ ಜಿಲ್ಲೆಯಲ್ಲಿ ಕೃಷಿ ಭೂಮಿ ಹೊಂದಿದವರಾಗಲೀ, ಕೃಷಿಕೂಲಿ ಮಾಡುವ ಮಾಲ ಸಮುದಾಯದ ಕುಟುಂಬಗಳು ಒಂದೂ ಇರುವುದಿಲ್ಲ.

ಕೃಷಿಯೇತರ ಕೂಲಿಗಳಾಗಿ ಒಟ್ಟು ೧೧ ಜನರಿರುವರು. ಇದರಲ್ಲಿ ೭ ಜನ ಪುರುಷರು ಹಾಗೂ ೪ ಜನ ಮಹಿಳೆಯರು ಇರುವರು. ಪುರುಷರು ಹಮಾಲಿ ಮುಂತಾದ ಕೃಷಿಯೇತರ ಕೂಲಿ ವೃತ್ತಿಯಲ್ಲಿ ತೊಡಗಿರುವರು. ಮಹಿಳೆಯರು ಬೇರೆಯವರ ಮನೆಗಳಲ್ಲಿ ಕಸ ಮುಸುರೆ ಕೆಲಸ ಮಾಡುವರು.

ಮಾಲ ಸಮುದಾಯದ ೪ ಜನ ಪುರುಷರು ಹಾಗೂ ೪ ಜನ ಮಹಿಳೆಯರು ಈ ಜಿಲ್ಲೆಯಲ್ಲಿ ರದ್ದಿ ಆಯುವರು. ಒಬ್ಬ ವ್ಯಕ್ತಿ ಆಟೋರಿಕ್ಷಾ ಓಡಿಸುವನು.

ಒಬ್ಬ ಪುರುಷನು ದಬ್ಬುವ ಬಂಡಿಯಲ್ಲಿ ತರಕಾರಿ ಮಾರುವನು. ೨ ಜನ ಮಹಿಳೆಯರು ಪ್ಲಾಸ್ಟಿಕ್ ವಸ್ತುಗಳ ಮಾರಾಟ ಮಾಡುವರು.

೨ ಜನ ಪುರುಷರು, ೩ ಜನ ಮಹಿಳೆಯರು ಒಟ್ಟು ೫ ಜನ ಧಾರ್ಮಿಕ ಭಿಕ್ಷಾಟನೆಯಲ್ಲಿ ತೊಡಗಿರುವರು.

ಮೈಸೂರು ಜಿಲ್ಲೆಯಲ್ಲಿ ಒಟ್ಟು ೨೮ ಮಾಲ ಸಮುದಾಯದ ಜನ ವಿವಿಧ ವೃತ್ತಿಗಳಲ್ಲಿ ತೊಡಗಿರುವರು. ಇದರಲ್ಲಿ ೧೫ ಜನ ಪುರುಷರು ಹಾಗೂ ೧೩ ಜನ ಮಹಿಳೆಯರಿರುವರು.

೪.೮.೫ ರಾಯಚೂರು ಜಿಲ್ಲೆ

ರಾಯಚೂರು ಜಿಲ್ಲೆಯಲ್ಲಿ ಮಾಲ ಸಮುದಾಯದ ಕುಟುಂಬಗಳು ಪೋತ್ನಾಳ ಎಂಬ ಗ್ರಾಮದಲ್ಲಿ ಮಾತ್ರ ನೆಲೆಸಿವೆ. ಈ ಜಿಲ್ಲೆಯಲ್ಲಿ ಕೃಷಿ ಭೂಮಿ ಹೊಂದಿದ ಕುಟುಂಬಗಳಿಲ್ಲ. ಮಾಲ ಸಮುದಾಯದ ಒಟ್ಟು ೬ ಜನ ಕೃಷಿಕೂಲಿ ಮಾಡುವರು. ಆರು ಜನರಲ್ಲಿ ೪ ಜನ ಪುರುಷರು, ೨ ಜನ ಮಹಿಳೆಯರಿರುವರು.

ಕೃಷಿಯೇತರ ಕೂಲಿಗಳಾಗಿ ಒಟ್ಟು ೨ ಜನರಿರುವರು. ಇದರಲ್ಲಿ ಇಬ್ಬರು ಪುರುಷರು ಹಮಾಲಿ ಮುಂತಾದ ಕೃಷಿಯೇತರ ಕೂಲಿ ವೃತ್ತಿಯಲ್ಲಿ ತೊಡಗಿರುವರು.

೪ ಜನ ಪುರುಷರು, ೫ ಜನ ಮಹಿಳೆಯರು ಒಟ್ಟು ೯ ಜನರು ರದ್ದಿ ಆಯುವ ಕಾಯಕವನ್ನು ಮಾಡುವರು.

೨ ಜನರು ಪುರುಷರು, ೨ ಜನರು ಮಹಿಳೆಯರು ಒಟ್ಟು ೪ ಜನರು ಧಾರ್ಮಿಕ ಭಿಕ್ಷಾಟನೆಯಲ್ಲಿ ತೊಡಗಿರುವರು.

ರಾಯಚೂರು ಜಿಲ್ಲೆಯಲ್ಲಿ ಒಟ್ಟು ೨೧ ಮಾಲ ಸಮುದಾಯದ ಜನ ವಿವಿಧ ವೃತ್ತಿಗಳಲ್ಲಿ ತೊಡಗಿರುವರು. ಇದರಲ್ಲಿ ೧೨ ಜನರು ಪುರುಷರು ಹಾಗೂ ೯ ಜನರು ಮಹಿಳೆಯರಿರುವರು.

೪.೮.೬ ಶಿವಮೊಗ್ಗ ಜಿಲ್ಲೆ

ಶಿವಮೊಗ್ಗ ಜಿಲ್ಲೆಯಲ್ಲಿ ಮಾಲ ಸಮುದಾಯದ ಕುಟುಂಬಗಳು ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿವೆ. ಈ ಜಿಲ್ಲೆಯಲ್ಲಿ ಕೃಷಿ ಭೂಮಿ ಹೊಂದಿದ ಮಾಲ ಸಮುದಾಯದ ಕುಟುಂಬಗಳು ಒಂದೂ ಇರುವುದಿಲ್ಲ.

ಕೃಷಿ ಕೂಲಿಕಾರರಾಗಿ ತೊಡಗಿಸಿಕೊಂಡವರೂ ೧೨ ಜನ ಪುರುಷರು, ೫ ಜನರು ಮಹಿಳೆಯರು ಒಟ್ಟು ೧೭ ಜನರು ಕಂಡುಬರುವರು.

ಕೃಷಿಯೇತರ ಕೂಲಿಗಳಾಗಿ ಒಟ್ಟು ೧೩ ಜನರಿರುವರು. ಇದರಲ್ಲಿ ೧೧ ಜನರು ಪುರುಷರು, ಹಾಗೂ ೨ ಜನರು ಮಹಿಳೆಯರು ಇರುವರು. ಪುರುಷರು ಹಮಾಲಿ ಮುಂತಾದ ಕೃಷಿಯೇತರ

ಕೂಲಿ ವೃತ್ತಿಯಲ್ಲಿ ತೊಡಗಿರುವರು. ಮಹಿಳೆಯರು ಬೇರೆಯವರ ಮನೆಗಳಲ್ಲಿ ಕಸಮುಸುರೆ ಕೆಲಸ ಮಾಡುವರು.

ಮಾಲ ಸಮುದಾಯದ ೬ ಜನರು ಪುರುಷರು ಹಾಗೂ ೧೦ ಜನರು ಮಹಿಳೆಯರು ಈ ಜಿಲ್ಲೆಯಲ್ಲಿ ರದ್ದಿ ಆಯುವರು.

ಇಬ್ಬರು ಪುರುಷರು ಬೀಡಿ ಅಂಗಡಿಯನ್ನೂ, ೩ ಜನರು ಮಹಿಳೆಯರು ಪ್ಲಾಸ್ಟಿಕ್ ವಸ್ತುಗಳ ಮಾರಾಟ ಮಾಡುವರು.

೮ ಜನರು ಪುರುಷರು, ೬ ಜನರು ಮಹಿಳೆಯರು ಒಟ್ಟು ೧೪ ಜನರು ಧಾರ್ಮಿಕ ಭಿಕ್ಷಾಟನೆಯಲ್ಲಿ ತೊಡಗಿರುವರು. ಕೂದಲು ಸಂಗ್ರಹಣೆಯ ಕಾರ್ಯವನ್ನು ೧ ಪುರುಷರು, ೨ ಜನರು ಮಹಿಳೆಯರು ಮಾಡುವರು. ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು ೬೮ ಮಾಲ ಸಮುದಾಯದ ಜನ ವಿವಿಧ ವೃತ್ತಿಗಳಲ್ಲಿ ತೊಡಗಿರುವರು. ಇದರಲ್ಲಿ ೪೦ ಜನರು ಪುರುಷರು ಹಾಗೂ ೨೮ ಜನರು ಮಹಿಳೆಯರಿರುವರು.

೪.೮.೬ ಹಾವೇರಿ ಜಿಲ್ಲೆ

ಹಾವೇರಿ ಜಿಲ್ಲೆಯಲ್ಲಿ ಮಾಲ ಸಮುದಾಯದ ಕುಟುಂಬಗಳು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿವೆ. ಈ ಜಿಲ್ಲೆಯಲ್ಲಿ ಕೃಷಿ ಭೂಮಿ ಹೊಂದಿದ ಮಾಲ ಸಮುದಾಯದ ಕುಟುಂಬಗಳು ಒಂದೂ ಇರುವುದಿಲ್ಲ.

ಕೃಷಿ ಕೂಲಿಕಾರರಾಗಿ ತೊಡಗಿಸಿಕೊಂಡವರೂ ೬ ಜನರು ಪುರುಷರು, ೫ ಜನರು ಮಹಿಳೆಯರು ಒಟ್ಟು ೧೧ ಜನರು ಕಂಡುಬರುವರು.

ಕೃಷಿಯೇತರ ಕೂಲಿಗಳಾಗಿ ಒಟ್ಟು ೩೨ ಜನರಿರುವರು. ಇದರಲ್ಲಿ ೨೬ ಜನರು ಪುರುಷರು, ಹಾಗೂ ೬ ಜನರು ಮಹಿಳೆಯರು ಇರುವರು. ಪುರುಷರು ನಗರದಲ್ಲಿ ಹಮಾಲಿ ವೃತ್ತಿಯಲ್ಲಿ ತೊಡಗಿರುವರು. ಮಹಿಳೆಯರು ಬೇರೆಯವರ ಮನೆಗಳಲ್ಲಿ ಕಸಮುಸುರೆ ಕೆಲಸ ಮಾಡುವರು.

ಮಾಲ ಸಮುದಾಯದ ೧೧ ಜನರು ಪುರುಷರು ಹಾಗೂ ೨೪ ಜನರು ಮಹಿಳೆಯರು ಈ ಜಿಲ್ಲೆಯಲ್ಲಿ ರದ್ದಿ ಆಯುವರು. ೭ ಜನ ಪುರುಷರು ರಿಕ್ಷಾ ನಡೆಸುವರು.

೯ ಜನರು ಪುರುಷರು, ೮ ಜನರು ಮಹಿಳೆಯರು ಧಾರ್ಮಿಕ ಭಿಕ್ಷಾಟನೆಯಲ್ಲಿ ತೊಡಗಿರುವರು. ಕೂದಲು ಸಂಗ್ರಹಣೆಯ ಕಾರ್ಯವನ್ನು ೮ ಜನರು ಪುರುಷರು, ೯ ಜನರು ಮಹಿಳೆಯರು ಮಾಡುವರು. ಹಾವೇರಿ ಜಿಲ್ಲೆಯಲ್ಲಿ ಒಟ್ಟು ೧೪೩ ಮಾಲ ಸಮುದಾಯದ ಜನ ವಿವಿಧ ವೃತ್ತಿಗಳಲ್ಲಿ ತೊಡಗಿರುವರು. ಇದರಲ್ಲಿ ೭೮ ಜನರು ಪುರುಷರು, ಹಾಗೂ ೬೫ ಜನರು ಮಹಿಳೆಯರಿರುವರು.

ಮಾಲ(ಪರ್ವತ ಮಲ್ಲಯ್ಯ) ಸಮುದಾಯದವರು ನೆಲೆಸಿದ ಏಳು ಜಿಲ್ಲೆಗಳನ್ನು ಸಮೀಕ್ಷಿಸಲಾಗಿ ಆಯಾ ಜಿಲ್ಲೆಗಳಲ್ಲಿ ವಿವಿಧ ವೃತ್ತಿಗಳಲ್ಲಿ ತೊಡಗಿರುವವರ ವಿವರ ದೊರೆಯಿತು. ಒಟ್ಟಾರೆಯಾಗಿ ಹೇಳುವುದಾದರೆ ಕೃಷಿಯಲ್ಲಿ ನಿರತವಾಗಿರುವವರು ಒಟ್ಟು ೪೭ ಜನರು ಇರುವರು. ಇದರಲ್ಲಿ ೪೫ ಜನರು ಪುರುಷರೂ, ೨ ಜನರು ಮಹಿಳೆಯರು ಮಾತ್ರ ಇರುವರು.

ಕೃಷಿಕೂಲಿಗಳಾಗಿ ಕಾರ್ಯನಿರ್ವಹಿಸುವವರು ಒಟ್ಟು ೩೪೪ ಜನರಿರುವರು. ಇದರಲ್ಲಿ ೧೭೨ ಜನರು ಪುರುಷರು, ಹಾಗೂ ೧೭೨ ಜನರು ಮಹಿಳೆಯರಿರುವರು.

ಕೃಷಿಯೇತರ ಕೂಲಿಗಳಾಗಿ ಒಟ್ಟು ೧೮೫ ಜನರಿರುವರು. ಇದರಲ್ಲಿ ೧೫೪ ಜನರು ಪುರುಷರು, ೩೧ ಜನರು ಮಹಿಳೆಯರಿರುವರು.

ರದ್ದಿ ಆಯುವವರು ಒಟ್ಟು ೧೩೭ ಜನರು ಇರುವರು. ಇದರಲ್ಲಿ ೪೭ ಜನರು ಪುರುಷರು, ೯೦ ಜನರು ಮಹಿಳೆಯರು ಇರುವರು.

ವಿವಿಧ ನಗರಗಳಲ್ಲಿ ರಿಕ್ಷಾ ಓಡಿಸುವ ಕಾಯಕ ಮಾಡುವವರು ಒಟ್ಟು ೨೬ ಜನರಿದ್ದು ಅವರೆಲ್ಲಾ ಪುರುಷರಾಗಿರುವರು.

ಸಣ್ಣ ವ್ಯಾಪಾರದಲ್ಲಿ ತೊಡಗಿರುವವರು ಒಟ್ಟು ೬೩ ಜನರಿರುವರು. ಇದರಲ್ಲಿ ೧೪ ಜನರು ಪುರುಷರು, ಹಾಗೂ ೪೯ ಜನರು ಮಹಿಳೆಯರಿರುವರು.

ಧಾರ್ಮಿಕ ಭಿಕ್ಷಾಟನೆಯಲ್ಲಿ ಒಟ್ಟು ೧೫೮ ಜನರಿರುವರು. ಇದರಲ್ಲಿ ೭೭ ಜನರು ಪುರುಷರು, ೮೧ ಜನರು ಮಹಿಳೆಯರು ಧಾರ್ಮಿಕ ಭಿಕ್ಷಾಟನೆಯಲ್ಲಿ ತೊಡಗಿರುವರು.


ಇತರೆ ಕಾಯಕದೊಳಗೆ ನಿರತರಾದವರು ಒಟ್ಟು ೫೬ ಜನರಿದ್ದು ಅದರಲ್ಲಿ ಪುರುಷರು ೧೬ ಹಾಗೂ ಮಹಿಳೆಯರು ೪೦ ಜನರಿರುವರು.

ವಿವಿಧ ವೃತ್ತಿಗಳಲ್ಲಿ ತೊಡಗಿರುವವರು ಒಟ್ಟು ೧೦೧೬ ಜನ ಇರುವರು. ಇದರಲ್ಲಿ ೫೫೧ ಪುರುಷರು ಹಾಗೂ ೪೬೫ ಮಹಿಳೆಯರು ಇರುವರು.

ಕೋಷ್ಟಕ ೪.೬: ಮಾಲ ಸಮುದಾಯದ ವಿವಿಧ ವೃತ್ತಿಗಳಲ್ಲಿ ತೊಡಗಿದ ಜನರ ಶೇಕಡವಾರು ವಿವರ

ವೃತ್ತಿ	**ಪ್ರಮಾಣ ಶೇಕಡವಾರು**
ಕೃಷಿ ಭೂಮಿ ಹೊಂದಿದವರು ಶೇಕಡ	೪.೬೨%
ಕೃಷಿಕೂಲಿಗಳಾಗಿರುವವರು	೩೩.೮೫%
ಕೃಷಿಯೇತರ ಕೂಲಿಯವರಿರುವವರು	೧೮.೨೦%
ರದ್ದಿ ಆಯುವ ಕೆಲಸವನ್ನು	೧೩.೪೮%
ರಿಕ್ಷಾ ಓಡಿಸುವುದು	೨.೫೬%
ಸಣ್ಣ ವ್ಯಾಪಾರ	೬.೨೦%
ಧಾರ್ಮಿಕ ಭಿಕ್ಷಾಟನೆ	೧೫.೫೫%
ಇತರೆ ಕೆಲಸಗಳಲ್ಲಿ ನಿರತರಾಗಿರುವವರು	೫.೫೧%

ಲಂಬಚಿತ್ರ: ೪.೫ ಮಾಲ ಸಮುದಾಯದ ವಿವಿಧ ವೃತ್ತಿಗಳಲ್ಲಿ ತೊಡಗಿದ ಜನರ ಶೇಕಡವಾರು ವಿವರ



ಶೇಕಡವಾರುಗಳಲ್ಲಿ ಹೇಳುವುದಾದರೆ ಕೃಷಿ ಭೂಮಿ ಹೊಂದಿದವರು ಶೇಕಡ ೪.೬೨ ಜನರು ಇರುವರು. ಶೇಕಡ ೩೩.೮೫ ರಷ್ಟು ಜನರು ಕೃಷಿಕೂಲಿಗಳಾಗಿರುವರು. ಶೇಕಡ ೧೮.೨೦ ಕೃಷಿಯೇತರ ಕೂಲಿಯವರಿರುವರು. ಶೇಕಡ ೧೩.೪೮ ರಷ್ಟು ರದ್ದಿ ಆಯುವ ಕೆಲಸವನ್ನು ಮಾಡುವರು. ಶೇಕಡ ೨.೫೬ ರಷ್ಟು ಜನರು ರಿಕ್ಷಾ ಓಡಿಸುವುದು, ಶೇಕಡ ೬.೨೦ ರಷ್ಟು ಜನರು ಸಣ್ಣ ವ್ಯಾಪಾರ ಮಾಡುವರು. ಶೇಕಡ ೧೫.೫೫ ರಷ್ಟು ಜನರು ಧಾರ್ಮಿಕ ಭಿಕ್ಷಾಟನೆ ಮಾಡುವರು. ಶೇಕಡ ೫.೫೧ ರಷ್ಟು ಜನರು ಇತರೆ ಕೆಲಸಗಳಲ್ಲಿ ನಿರತರಾಗಿರುವರು.

ಮಾಲ ಸಮುದಾಯದವರಲ್ಲಿ ಕೃಷಿ ಭೂಮಿ ಹೊಂದಿದವರು ೪.೬೨ರಷ್ಟು ಇರುತ್ತಾರೆ ಅದು ವಿಜಯನಗರ ಅರಸರ ಕಾಲದಲ್ಲಿ ಉಂಬಳಿಯಾಗಿ ಕೊಟ್ಟಿದ್ದಿರಬಹುದು ಎಂದು ಹೆಳುತ್ತಾರೆ. ಆದರೆ ಅಂತಹ ಯಾವುದೇ ದಾಖಲಾತಿಗಳು ಇವರ ಹತ್ತಿರ ಇರುವುದಿಲ್ಲ. ಅದಾದ ನಂತರ ಇವರು ಯಾವುದೇ ಭೂಮಿಗಳನ್ನು ಗಳಿಸಿರುವ ಉದಾಹರಣೆಗಳು ಈ ಸಮುದಾಯದವರಲ್ಲಿ ಇರುವದಿಲ್ಲ.

ಮಾಲ ಸಮುದಾಯದವರು ಇತ್ತೀಚೆಗೆ ಹೆಚ್ಚು ಜನರು ಕೃಷಿಕೂಲಿಗಳಾಗಿ ದುಡಿಯುತ್ತಾರೆ ಮೊದಲು ೩೩.೮೫ರಷ್ಟು ಜನರು ಕೃಷಿ ಕೂಲಿಯನ್ನು ಅವಲಂಬಿಸಿರುವದಿಲ್ಲ ತಾವು ಹೆಚ್ಚಾಗಿ ಧಾರ್ಮಿಕ ಭಿಕ್ಷಾಟನೆಯಲ್ಲಿ ತೊಡಗಿಕೊಂಡಿದ್ದೆವು ಎಂದು ಹೆಳುತ್ತಾರೆ ಆದರೆ ಇತ್ತೀಚೆಗೆ ಮಾಲ ಸಮುದಾಯದ ಹೆಚ್ಚಿನ ಜನರು ಕೃಷಿ ಕೂಲಿಯನ್ನು ಅವಲಂಭಿಸಿರುವುದು ನಮಗೆ ಕ್ಷೇತ್ರಕಾರ್ಯದ ಸಮೀಕ್ಷೆಯ ಮೂಲಕ ತಿಳಿದು ಬಂದಿತು.



ಮಾಲ ಸಮುದಾಯದವರು ತಮ್ಮ ಜೀವನ ನಿರ್ವಹಣೆಗಾಗಿ ಇತ್ತೀಚೀಗೆ ೧೮.೨೦ರಷ್ಟು ಜನರು ಹಮಾಲಿ ಮಾಡುವದನ್ನು ಮತ್ತು ಕಾಯಿಪಲ್ಲೆ ಮಾರುವದನ್ನು ಮಾಡುತ್ತಾರೆ. ಹೆಣ್ಣುಮಕ್ಕಳು ಬೇರೆಯವರ ಮನೆಗಳಿಗೆ ಕಸಮುಸುರೆ ಮಾಡಿ ಜೀವನವನ್ನು ಸಾಗಿಸುತ್ತಾರೆ. ಆದರೆ ಇವರನ್ನು ಮೋದಲು ಕಸಮುಸುರೆ ಮಾಡಲು ಯಾರು ಕರೆದುಕೊಳ್ಳುತ್ತಿದ್ದಿಲ್ಲ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು.


ಮಾಲ ಸಮುದಾಯದ ಸದಸ್ಯೆರು ಮೊದಲು ರದ್ದಿಯನ್ನು ಆಯುತ್ತಿರಲಿಲ್ಲ ಆದರೆ ಇತ್ತೀಚೆಗೆ ತಮ್ಮ ಆರ್ಥಿಕ ನಿರ್ವಹಣೆಗಾಗಿ ೧೩.೪೮ರಷ್ಟು ಜನರು ರದ್ದಿ ಆಯುತ್ತಿದ್ದಾರೆ. ಮತ್ತು ತಮ್ಮ ವ್ಯಪಾರಿ ಸಾಮಾನುಗಳನ್ನು ಏರಿಕೊಂಡು ಹೋಗಲು ಇತ್ತೀಚೆಗೆ ಶೇಕಡಾ ೨.೫೬ರಷ್ಟು ಜನರು ರಿಕ್ಷಾ ಒಡಿಸುತ್ತಾರೆ. ಮತ್ತು ಮಾಲ ಸಮುದಾಯದವರು ಮೊದಲು ವ್ಯಾಪಾರ ಎಂಬುದು ಅವರಿಗೆ ಗೊತ್ತಿರಲಿಲ್ಲವಂತೆ ಆದರೆ ಭೂಮಿ ಇಲ್ಲದೆ ಕೆಲಸ ಇಲ್ಲದೆ ಏನು ಮಾಡುವುದು ಎಂದುಕೊಂಡು ಇವರು ಇತ್ತೀಚೆಗೆ ೬.೨೦ರಷ್ಟು ಜನರು ತಮ್ಮ ಜೀವನ ನಿರ್ವಹಣೆಗಾಗಿ ಸಣ್ಣ ವ್ಯಾಪಾರಗಳಾದ ಸ್ಟೇಷನರಿ ಸಾಮನುಗಳನ್ನು, ಬಟ್ಟೆಗಳನ್ನು, ಚಾಪೆಗಳನ್ನು, ಪ್ಲಾಸ್ಟಿಕ್ ಸಾಮಾನುಗಳನ್ನು, ಕೊಡಗಳನ್ನು ಮಾರುವದನ್ನು ಮಾಡುವದರ ಜೊತೆಗೆ ಇನ್ನಿತರ ಕೆಲಸಗಳಲ್ಲಿ ತಮ್ಮ ಜೀವನ ನಿರ್ವಹಣೆಗಾಗಿ ಇತ್ತೀಚೆಗೆ ನಗರ ಮತ್ತು ಪಟ್ಟಣಗಳಿಗೆ ಹೋಗಿ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಾರೆ.

ಕೋಷ್ಟಕ ೪.೭: ಕೃಷಿ ಭೂಮಿ ಹೊಂದಿದ ಮಾಲ ಸಮುದಾಯದ ಕುಟುಂಬಗಳ ಸಂಖ್ಯೆ

ಕ್ರಸಂ	ತಾಲೂಕು	ಕೃಷಿಕರ ಸಂಖ್ಯೆ		
		ಗಂಡು	ಹೆಣ್ಣು	ಒಟ್ಟು
೧	ಕೊಪ್ಪಳ	೪೫	೦೨	೪೭
	ಒಟ್ಟು	೪೫	೦೨	೪೭

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ಲಂಬಚಿತ್ರ: ೪.೬. ಕೃಷಿ ಭೂಮಿ ಹೊಂದಿದ ಮಾಲ ಸಮುದಾಯದ ಕುಟುಂಬಗಳ ಸಂಖ್ಯೆ




ಮಾಲ ಸಮುದಾಯದ ಒಟ್ಟು ಜನಸಂಖ್ಯೆಯಲ್ಲಿ ಕೃಷಿ ಭೂಮಿ ಹೊಂದಿದವರು ಕೇವಲ ೪೭ ಜನರಿರುವರು. ಈ ನಲವತ್ತೇಳು ಜನರು ನಲವತ್ತೇಳು ಕುಟುಂಬಗಳನ್ನು ಪ್ರತಿನಿಧಿಸುವರು. ಇದರಲ್ಲಿ ೪೫ ಪುರುಷರಿಗೆ ಭೂಮಿಯ ಒಡೆತನ ಇದೆ. ಪುರುಷರ ಹೊರತಾಗಿ ಇಬ್ಬರು ಮಹಿಳೆಯರು ಮಾತ್ರ ಭೂ ಒಡೆತನವನ್ನು ಹೊಂದಿರುವರು. ವಿಶೇಷವಾಗಿ ಕೊಪ್ಪಳದ ಚಿಲಕಮುಖಿ ಹಾಗೂ ಅಬ್ಬಿಗೇರಿಗಳಲ್ಲಿ ಮಾತ್ರ ಮಾಲ ಸಮುದಾಯದವರು ಭೂಮಿಯನ್ನು ಹೊಂದಿರುವರು. ಚಿಲಕಮುಖಿಯಲ್ಲಿ ೪೫ ಜನರು ಭೂ ಒಡೆತನ ಹೊಂದಿದ್ದು ಅದರಲ್ಲಿ ೪೩ ಪುರುಷರು ಹಾಗೂ ಇಬ್ಬರು ವಿಧವಾ ಮಹಿಳೆಯರ ಹೆಸರಿನಲ್ಲಿ ಭೂ ಒಡೆತನವಿದೆ. ಅದರಾಚೆಗೆ ಅಬ್ಬಿಗೇರಿಯಲ್ಲಿ ಇಬ್ಬರು ಪುರುಷರಿಗೆ ಮಾತ್ರ ಭೂ ಒಡೆತನ ಹೊಂದಿರುವರು.

ಕೋಷ್ಟಕ ೪.೭.೧: ದೊಡ್ಡ ಹಿಡುವಳಿದಾರರು ಸಣ್ಣ ಹಿಡುವಳಿದಾರರು ಅತೀ ಸಣ್ಣಹಿಡುವಳಿದಾರರು

ಕ್ರಸಂ	ದೊಡ್ಡ ಹಿಡುವಳಿದಾರರು			ಸಣ್ಣ ಹಿಡುವಳಿದಾರರು		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	–	–	–	೪೫	೦೨	೪೭

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ಲಂಬಚಿತ್ರ: ೪.೭. ದೊಡ್ಡ ಹಿಡುವಳಿದಾರರು ಸಣ್ಣ ಹಿಡುವಳಿದಾರರು ಅತೀ ಸಣ್ಣಹಿಡುವಳಿದಾರರು



ಒಂದು ಕಾಲಕ್ಕೆ ಕೃಷಿಯನ್ನೇ ಆಧರಿಸಿ ಜೀವನ ಮಾಡುತ್ತಿದ್ದ ಆಂಧ್ರಪ್ರದೇಶದ ಮಾಲ ಸಮುದಾಯದವರು ಬಹುತೇಕ ಇಂದು ಕೃಷಿಕೂಲಿಗಳಾಗಿ ಮಾರ್ಪಾಡುಹೊಂದಿರುವರು. ಯಾವುದೋ ಒಂದು ಹಂತದಲ್ಲಿ ಕರ್ನಾಟಕಕ್ಕೆ ವಲಸೆ ಬಂದ ಮಾಲ ಸಮುದಾಯದವರು ಅಲೆಮಾರಿಗಳಾಗಿ ಮಾರ್ಪಾಡು ಹೊಂದಿದರು. ವಿಜಯನಗರ ಅರಸರ ಸೈನ್ಯದಲ್ಲಿ ಸೇವೆ ಮಾಡಲೆಂದು ಆಂದ್ರದ ಕಡೆಯಿಂದ ವಲಸೆ ಬಂದಿರುವುದಾಗಿ ಹೇಳುವರು. ಮಾಲ ಸಮುದಾಯದವರ ಸೇವೆಯನ್ನು ಮೆಚ್ಚಿದ ವಿಜಯನಗರದ ಅರಸರು ತಮ್ಮ ಹಿರಿಯರಿಗೆ ಚಿಲಕಮುಖಿ ಗ್ರಾಮದೊಳಗೆ ಕೃಷಿಭೂಮಿಯನ್ನು ಉಂಬಳಿಯಾಗಿ ನೀಡಿದರು ಎಂದು ತಿಳಿಸುವರು. ಆದರೆ ವಿಜಯನಗರ ಅರಸರಿಂದ ಉಂಬಳಿಯಾಗಿ ಭೂಮಿಯನ್ನು ಪಡೆದ ವಿಚಾರವು ಮೌಖಿಕವಾಗಿ ಇವರಲ್ಲಿ ಉಳಿದಿದೆಯೇ ಹೊರತು ಅದಕ್ಕೆ ಸಂಬಂಧಿಸಿದ ದಾಖಲೆಗಳೇನೂ ಇಲ್ಲ. ಹಿಂದೆ ದೊಡ್ಡ ಪ್ರಮಾಣದ ಭೂಮಿ ಇದಾಗಿದ್ದು ಜನಸಂಖ್ಯೆ ಬೆಳೆದಂತೆಲ್ಲಾ ಅಣ್ಣ ತಮ್ಮಂದಿರ ಮಧ್ಯದಲ್ಲಿ ಪಾಲುಗಾರಿಕೆಯಾಗಿ ಸಣ್ಣ ಹಿಡುವಳಿಯಾಗಿ ಮಾರ್ಪಾಡು ಹೊಂದಿರಬೇಕೆಂಬ ಅಭಿಪ್ರಾಯವು ಕೇಳಿಬರುವುದು. ಬಹುತೇಕ ಒಂದೇ ಬೆಡಗಿಗೆ ಸೇರಿದವರಿಗೇ ಈ ಭೂಮಿಯಿರುವುದನ್ನು ನೋಡಿದರೆ ಬಹುಶಃ ಇರಬಹುದೇನೋ ಎನಿಸುತ್ತದೆ. ಚಿಲಕಮುಖಿಯಲ್ಲಿಯ ಮಾಲ ಸಮುದಾಯದವರಿಗೆ ಎರಡು ಎಕರೆಯ ಮೇಲ್ಪಟ್ಟು ಯಾರಿಗೂ ಭೂಮಿ ಇರುವುದಿಲ್ಲ. ಅಬ್ಬಿಗೇರಿಯಲ್ಲಿಯೂ ಮಾಲ ಸಮುದಾಯದ ಎರಡು ಕುಟುಂಬಗಳಿಗೆ ಭೂಮಿ ಇದ್ದು ಅದೂ ಕೂಡ ಎರಡು ಎಕರೆ ಮೀರದಂತಿರುವುದು ಕಂಡುಬರುವುದು.

೪.೧೦ ವಸತಿ


ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ವಸತಿಯೂ ಒಂದು. ವಸತಿಹೀನನಾಗಿ ಮನುಷ್ಯನು ಬದುಕಬಾರದೆಂದು ತಿಳಿದ ಸರ್ಕಾರವು ವಸತಿಹೀನರಿಗಾಗಿಯೇ ವಸತಿ ಕಲ್ಪಿಸುವ ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಜನತಾ ವಸತಿ ಯೋಜನೆಯೆಂಬ ಹೆಸರಿನಿಂದ ಪ್ರಾರಂಭಗೊಂಡ ಈ ಯೋಜನೆಯು ತರುವಾಯ ಬಸವೇಶ್ವರ ವಸತಿ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ ಇತ್ಯಾದಿ ಹೆಸರುಗಳಲ್ಲಿ ಅನುಷ್ಠಾನಗೊಂಡಿದೆ ಮತ್ತು ಇಂದಿಗೂ ಅನುಷ್ಠಾನಗೊಳ್ಳುತ್ತಿದೆ. ಪ್ರಸ್ತುತ ಗ್ರಾಮೀಣ ಭಾಗದ ವಸತಿಹೀನರಿಗೆ ವಸತಿ ಕಲ್ಪಿಸಲೆಂದು ೧.೭೫ ಲಕ್ಷ ರೂಪಾಯಿಗಳನ್ನೂ, ನಗರ ಹಾಗೂ ಪಟ್ಟಣ ಪ್ರದೇಶದ ವಸತಿಹೀನರಿಗೆ ೩.೫ ಲಕ್ಷ ರೂಪಾಯಿಗಳನ್ನೂ ಮನೆಕಟ್ಟಿಕೊಳ್ಳಲೆಂದು ನೀಡುತ್ತಿದೆ. ಈ ಹಿಂದೆ ಪರರಿಂದ ಭೂಮಿಯನ್ನು ಖರೀದಿಸಿಯೋ ಇಲ್ಲವೇ ಸರ್ಕಾರಿ ಜಮೀನಿದ್ದಲ್ಲಿ ಸರ್ಕಾರಿ ಜಮೀನಿನಲ್ಲಿ ನಿವೇಶನಗಳನ್ನು ಮಾಡಿ ಬಡತನ ರೇಖೆಯ ಕೆಳಗಿರುವವರಿಗೆ ೩೦ ರಿಂದ ೪೦ ಅಡಿ ಅಳತೆಯ ನಿವೇಶನ ಹಂಚಿ ವಸತಿ ನಿರ್ಮಾಣ ಮಾಡಿಕೊಡಲಾಗುತ್ತಿತ್ತು. ಆದರೆ ಪ್ರಸ್ತುತ ನಿವೇಶನ ಹೊಂದಿದವರಿಗೆ ಮಾತ್ರ ವಸತಿ ಯೋಜನೆಯಡಿ ಮನೆ ಕಲ್ಪಿಸಿಕೊಡಲಾಗುವುದೆಂದು ಹೇಳಲಾಗುತ್ತಿದೆ. ಹೀಗಾಗಿ ವಿಶೇಷವಾಗಿ ಅಲೆಮಾರಿಗಳಾದ ಮಾಲ ಸಮುದಾಯದಂತಹ ಸಮುದಾಯಗಳೂ ವಸತಿಹೀನವಾಗಿಯೇ ಜೀವನ ನಡೆಸಬೇಕಾದ ಸ್ಥಿತಿ ಇದೆ ಇವರು ಗುಡಾರಗಳನ್ನು ಕೊಳಚೆ ಪ್ರದೇಶದಲ್ಲಿ ಹಾಕಿಕೊಂಡು ವಾಸಮಾಡುತ್ತಾರೆ(ಛಾಳ.೩) ಒಟ್ಟಾರೆಯಾಗಿ ಮಾಲ ಸಮುದಾಯದ ವಸತಿಯ ಸ್ಥಿತಿಗತಿಯನ್ನು ಇಲ್ಲಿ ನೋಡಲಾಗಿದೆ.

ಕೋಷ್ಠಕ.೪.೮: ಕೊಪ್ಪಳ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ

ಜಿಲ್ಲೆ	ತಾಲೂಕ	ಗ್ರಾಮ	ಕುಟುಂಬ	ಪಕ್ಕಾಮನೆ	ಕಚ್ಚಾಮನೆ	ಹೆಂಚಿನ ಮನೆ	ಸರ್ಕಾರಿ ಮನೆ	ಗುಡಿಸಲು	ಗುಡಾರ
ಕೊಪ್ಪಳ	ಕನಕಗಿರಿ	ಕನಕಗಿರಿ	೧೫	–	–	–	೫	–	೧೦
ಕೊಪ್ಪಳ	ಕನಕಗಿರಿ	ಕೆಸಕ್ಕಿಹಂಚಿನಾಳ	೦೨	–	–	–	–	–	೨
ಕೊಪ್ಪಳ	ಕುಕನೂರ	ಮಸಬಾ ಹಂಚಿನಾಳ	೧೦	–	–	–	೫	–	೫
ಕೊಪ್ಪಳ	ಕೊಪ್ಪಳ	ಇರಕಲ್‌ಗಡ	೦೧	–	–	–	–	–	೧
ಕೊಪ್ಪಳ	ಕೊಪ್ಪಳ	ಕಲ್ ಅಬ್ಬಿಗೇರಿ	೩೧	–	೮	೨	೧೩	–	೮
ಕೊಪ್ಪಳ	ಕೊಪ್ಪಳ	ಕುದುರಿಮೋತಿ	೦೬	–	–	–	೩	–	೩
ಕೊಪ್ಪಳ	ಕೊಪ್ಪಳ	ಕೊಪ್ಪಳ	೪೦	–	–	–	೧೫	–	೨೫
ಕೊಪ್ಪಳ	ಕೊಪ್ಪಳ	ಚಿಲಕಮುಖಿ	೯೮	–	೧೦	೧೫	೪೫	–	೨೮
ಕೊಪ್ಪಳ	ಕೊಪ್ಪಳ	ದನಗಳದೊಡ್ಡಿ	೦೭	–	–	–	೩	–	೪
ಕೊಪ್ಪಳ	ಗಂಗಾವತಿ	ಶಿವಪುರ	೦೧	–	–	–	–	–	೧
			೨೧೧		೧೮	೧೭	೮೯		೮೭

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ಲಂಬಚಿತ್ರ: ೪.೮. ಕೊಪ್ಪಳ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ



ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು ಹತ್ತು ಊರುಗಳಲ್ಲಿ ಮಾಲ ಸಮುದಾಯದವರು ಕಂಡುಬರುವರು. ಇದರಲ್ಲಿ

ಕನಕಗಿರಿಯಲ್ಲಿ ೧೫ ಕುಟುಂಬ ಮಾತ್ರವಿದ್ದು ಅವುಗಳಲ್ಲಿ ೫ ಕುಟುಂಬಗಳು ಸರ್ಕಾರಿ ವಸತಿ ಯೋಜನೆಯಡಿ ಮನೆಗಳನ್ನು ಹೊಂದಿವೆ. ಇನ್ನೂ ೧೦ ಕುಟುಂಬಗಳು ಗುಡಾರಗಳಲ್ಲಿ ವಾಸಿಸುತ್ತಿವೆ.

ಕೆಸಕ್ಕಿಹಂಚಿನಾಳದಲ್ಲಿ ಮಾಲ ಸಮುದಾಯದ ೨ ಕುಟುಂಬ ಮಾತ್ರವಿದ್ದು ಅವರು ಊರಹೊರಗೆ ಸರ್ಕಾರಿ ಜಮೀನಿನಲ್ಲಿ ಗುಡಾರಗಳಲ್ಲಿ ವಾಸಿಸುತ್ತಿದ್ದಾರೆ.

ಮಸಬಾಹಂಚಿನಾಳದಲ್ಲಿ ಮಾಲ ಸಮುದಾಯದವರು ೧೦ ಕುಟುಂಬ ಮಾತ್ರ ವಾಸವಾಗಿದ್ದು ಅವುಗಳಲ್ಲಿ ೫ ಕುಟುಂಬಗಳು ಸರ್ಕಾರಿ ವಸತಿ ಯೋಜನೆಯಡಿ ಮನೆಗಳನ್ನು ಹೊಂದಿವೆ. ಇನ್ನೂ ೫ ಕುಟುಂಬಗಳು ಗುಡಾರಗಳಲ್ಲಿ ವಾಸಿ ಮಾಡುತ್ತಾರೆ.

ಇರಕಲ್‌ಗಡದಲ್ಲಿ ೧ ಕುಟುಂಬ ಮಾತ್ರ ವಾಸವಿದ್ದು ಅದು ಊರಹೊರಗೆ ಸರ್ಕಾರಿ ಜಮೀನಿನಲ್ಲಿ ಗುಡಾರದಲ್ಲಿ ವಾಸಿಸುತ್ತಿದೆ.

ಕಲ್ಲು ಅಬ್ಬಿಗೇರಿಯಲ್ಲಿ ೩೧ ಕುಟುಂಬಗಳು ವಾಸವಾಗಿದ್ದು. ಇವುಗಳಲ್ಲಿ ಕಚ್ಚಾ ಮನೆ ೮ ಇರುತ್ತವೆ. ಹೆಂಚಿನಮನೆ ೨ ಇರುತ್ತವೆ. ಸರ್ಕಾರದ ವಸತಿ ಯೋಜನೆ ಪ್ರಯೋಜನೆಯನ್ನು ಪಡೆದು ವಸತಿ ಕಲ್ಪಿಸಿಕೊಂಡ ಕುಟುಂಬಗಳು ೧೫ ಇರುತ್ತವೆ ಹಾಗೂ ಗುಡಾರಗಳಲ್ಲಿಯೇ ವಾಸಿಸುತ್ತಿರುವ ಕುಟುಂಬಗಳು ೮ ಇರುತ್ತವೆ.

ಕುದರೆಮೋತಿಯಲ್ಲಿ ೬ ಕುಟುಂಬಗಳು ವಾಸವಾಗಿರುತ್ತವೆ. ಇವುಗಳಲ್ಲಿ ಸರ್ಕಾರದ ವಸತಿ ಯೋಜನೆ ಪ್ರಯೋಜನೆಯನ್ನು ಪಡೆದು ವಸತಿ ಕಲ್ಪಿಸಿಕೊಂಡ ಕುಟುಂಬಗಳು ೩ ಇರುತ್ತವೆ. ಹಾಗೂ ಗುಡಾರಗಳಲ್ಲಿಯೇ ವಾಸಿಸುತ್ತಿರುವ ಕುಟುಂಬಗಳು ೩ ಇರುತ್ತವೆ.


ಕೊಪ್ಪಳದಲ್ಲಿ ೪೦ ಕುಟುಂಬ ಮಾತ್ರ ವಾಸವಿದ್ದು, ಅವುಗಳಲ್ಲಿ ೧೫ ಸರ್ಕಾರಿ ವಸತಿ ಯೋಜನೆಯಡಿ ಮನೆಗಳನ್ನು ಹೊಂದಿವೆ. ಇನ್ನೂ ೨೫ ಕುಟುಂಬಗಳು ಗುಡಾರಗಳಲ್ಲಿ ವಾಸಿಸುತ್ತಿವೆ.

ಚಿಲಕಮುಖಿಯಲ್ಲಿ ೯೮ ಕುಟುಂಬಗಳು ವಾಸವಾಗಿರುತ್ತವೆ. ಇವುಗಳಲ್ಲಿ ಕಚ್ಚಾ ಮನೆ ಹೊಂದಿರುವ ಕುಟುಂಬಗಳು ೧೦ ಇರುತ್ತವೆ. ಹೆಂಚಿನ (ಸಿಮೆಂಟ್ ಸೀಟ್ ಒಳಗೊಂಡು) ಮನೆ ೧೫ ಇರುತ್ತವೆ. ಸರ್ಕಾರದ ವಸತಿ ಯೋಜನೆ ಪ್ರಯೋಜನೆಯನ್ನು ಪಡೆದು ವಸತಿ ಕಲ್ಪಿಸಿಕೊಂಡ ಕುಟುಂಬಗಳು ೪೫ ಇರುತ್ತವೆ. ಇಂದಿಗೂ ಗುಡಾರಗಳಲ್ಲಿಯೇ ವಾಸಿಸುತ್ತಿರುವ ಕುಟುಂಬಗಳು ೨೮ ಇರುತ್ತವೆ.

ದನಗಳದೊಡ್ಡಿಯಲ್ಲಿ ೭ ಕುಟುಂಬಗಳು ಇರುತ್ತವೆ. ಇವುಗಳಲ್ಲಿ ಸರ್ಕಾರದ ವಸತಿ ಯೋಜನೆ ಪ್ರಯೋಜನೆಯನ್ನು ಪಡೆದು ವಸತಿ ಕಲ್ಪಿಸಿಕೊಂಡ ಕುಟುಂಬಗಳು ೩ ಇರುತ್ತವೆ. ಹಾಗೂ ಗುಡಾರಗಳಲ್ಲಿಯೇ ವಾಸಿಸುತ್ತಿರುವ ಕುಟುಂಬಗಳು ೪ ಇರುತ್ತವೆ.

ಶಿವಪುರದಲ್ಲಿ ೧ ಕುಟುಂಬ ಮಾತ್ರ ವಾಸವಿದ್ದು ಅದು ಊರಹೊರಗೆ ಸರ್ಕಾರಿ ಜಮೀನಿನಲ್ಲಿ ಗುಡಾರದಲ್ಲಿ ವಾಸಿಸುತ್ತಿದೆ.

ವೃತ್ತಚಿತ್ರ ೪.೨: ಕೊಪ್ಪಳ ಜಿಲ್ಲೆಯ ಮಾಲ ಸಮುದಾಯದ ವಸತಿ ಸ್ವರೂಪ(ಶೇಕಡವಾರುಗಳಲ್ಲಿ)



ಜಿಲ್ಲೆ	ಕುಟುಂಬ	ಪಕ್ಕಾ	ಕಚ್ಚಾಮನೆ	ಹೆಂಚಿನ	ಸರ್ಕಾರಿ	ಗುಡಿಸಲು	ಗುಡಾರ
			ಮನೆ	ಮನೆ		ಮನೆ	ಮನೆ
ಕೊಪ್ಪಳ	೨೧೧	–	೮.೫೩	೮.೦೫	೪೨.೧೮	–	೪೧.೨೩




ಕೊಪ್ಪಳ ಜಿಲ್ಲೆಯಲ್ಲಿ ಮಾಲ ಸಮುದಾಯದ ೨೧೧ ಕುಟುಂಬಗಳು ನೆಲೆಸಿದ್ದು ಅವುಗಳಲ್ಲಿ ೧೮ ಕುಟುಂಬಗಳು ಕಚ್ಚಾ ಮನೆಗಳನ್ನು ಹೂಂದಿರುತ್ತವೆ. ಮತ್ತು ೧೭ ಕುಟುಂಬಗಳು ಹೆಂಚಿನ ಮನೆಗಳನ್ನು ಹೂಂದಿರುತ್ತವೆ. ೮೯ ಕುಟುಂಬಗಳು ಸರ್ಕಾರಿ ವಸತಿ ಯೋಜನೆಯಡಿ ಮನೆಗಳನ್ನು ಹೊಂದಿವೆ. ಇನ್ನೂ ೮೭ ಕುಟುಂಬಗಳು ಗುಡಾರಗಳಲ್ಲಿ ವಾಸಿಸುತ್ತಿವೆ.

ಕೋಷ್ಟಕ ४.೯: ಗದಗ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ

ಜಿಲ್ಲೆ	ತಾಲೂಕ	ಗ್ರಾಮ	ಕುಟುಂಬ	ಪಕ್ಕಾ	ಕಚ್ಚಾ	ಹೆಂಚಿನ	ಸರ್ಕಾರಿ	ಗುಡಿಸಲು	ಗುಡಾರ
					ಮನೆ	ಮನೆ	ಮನೆ	ಮನೆ	
ಗದಗ	ಗದಗ	ಗದಗ	೦೮	–	–	–	–	–	೮
ಗದಗ	ಗದಗ	ಹುಲಿಕೋಟೆ	೦೧	–	–	–	–	–	೧
ಗದಗ	ರೋಣ	ಗಜೇಂದ್ರಗಡ	೦೨	–	–	–	–	–	೨
			೧೧	–	–	–	–		೧೧

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ವೃತ್ತಚಿತ್ರ: ४.೩. ಗದಗ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ಶೇಕಡಾವಾರು ವಿವರ



ಗದಗ ಜಿಲ್ಲೆಯಲ್ಲಿ ಒಟ್ಟು ಮೂರು ಊರುಗಳಲ್ಲಿ ಮಾಲ ಸಮುದಾಯದವರು ಕಂಡುಬರುವರು. ಇದರಲ್ಲಿ ಗದಗ ನಗರದೊಳಗೆ ೮ ಕುಟುಂಬಗಳು, ಹುಲಿಕೋಟೆಯಲ್ಲಿ ಒಂದು ಕುಟುಂಬ,

ಗಜೇಂದ್ರಗಡದಲ್ಲಿ ೨ ಕುಟುಂಬಗಳು ನೆಲೆಸಿವೆ. ಈ ಮೂರು ಊರುಗಳಲ್ಲಿಯೂ ಈ ಸಮುದಾಯದವರು ಯಾವುದೇ ವಸತಿ ಹೊಂದಿರದೆ ಕೇವಲ ಗುಡಾರಗಳಲ್ಲಿಯೇ ವಾಸಿಸುತ್ತಿರುವುದು ಕ್ಷೇತ್ರಕಾರ್ಯದ ಮೂಲಕ ಕಂಡುಬಂದಿತು. ಶೇಕಡವಾರುಗಳಲ್ಲಿ ಹೇಳುವುದಾದರೆ ಶೇಕಡ ೧೦೦ರಷ್ಟು ಕುಟುಂಬಗಳು ಗುಡಾರವನ್ನೇ ಆಶ್ರಯಿಸಿವೆ.

ಕೋಷ್ಟಕ ೪.೧೦: ಧಾರವಾಡ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ

ಜಿಲ್ಲೆ	ಗ್ರಾಮ	ಕುಟುಂಬ	ಪಕ್ಕಾ	ಕಚ್ಚಾ	ಹೆಂಚಿನ	ಸರ್ಕಾರಿ	ಗುಡಿಸಲು	ಗುಡಾರ
			ಮನೆ	ಮನೆ	ಮನೆ	ಮನೆ		
ಧಾರವಾಡ	ಹುಬ್ಬಳ್ಳಿ	೨೮	–	–	–	–	–	೨೮
	ಒಟ್ಟು	**೨೮**	–	–	–	–	–	**೨೮**

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ಧಾರವಾಡ ಜಿಲ್ಲೆಯಲ್ಲಿ ಧಾರವಾಡ ಹುಬ್ಬಳ್ಳಿ ಮಧ್ಯದಲ್ಲಿ ಬರುವ ಗೋಪನಕೊಪ್ಪ ಎಂಬಲ್ಲಿ ಒಟ್ಟು ೨೮ ಕುಟುಂಬಗಳು ನೆಲೆಸಿವೆ. ಇಲ್ಲಿಯೂ ಈ ಸಮುದಾಯದವರು ಯಾವುದೇ ವಸತಿ ಹೊಂದಿರದೆ ಕೇವಲ ಗುಡಾರಗಳಲ್ಲಿಯೇ ವಾಸಿಸುತ್ತಿರುವುದು ಕ್ಷೇತ್ರಕಾರ್ಯದ ಮೂಲಕ ಕಂಡುಬಂದಿತು. ಶೇಕಡವಾರುಗಳಲ್ಲಿ ಹೇಳುವುದಾದರೆ ಶೇಕಡ ೧೦೦ ರಷ್ಟು ಕುಟುಂಬಗಳು ಗುಡಾರವನ್ನೇ ಆಶ್ರಯಿಸಿವೆ.

ಕೋಷ್ಟಕ ೪.೧೧: ಮೈಸೂರು ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ

ಜಿಲ್ಲೆ	ಗ್ರಾಮ	ಕುಟುಂಬ	ಪಕ್ಕಾ	ಕಚ್ಚಾ	ಹೆಂಚಿನ	ಸರ್ಕಾರಿ	ಗುಡಿಸಲು	ಗುಡಾರ
			ಮನೆ	ಮನೆ	ಮನೆ	ಮನೆ		
ಮೈಸೂರು	ಮೈಸೂರು	೦೭	–	–	–	–	–	೦೭
	ಒಟ್ಟು	೦೭	–	–	–	–	–	೦೭

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ಮೈಸೂರು ಜಿಲ್ಲೆಯಲ್ಲಿ ಮೈಸೂರು ನಗರದ ಬನ್ನಿಮಂಟಪ ಪ್ರದೇಶದಲ್ಲಿ ಒಟ್ಟು ೭ ಕುಟುಂಬಗಳು ನೆಲೆಸಿವೆ. ಇಲ್ಲಿಯೂ ಈ ಸಮುದಾಯದವರು ಯಾವುದೇ ವಸತಿ ಹೊಂದಿರದೆ ಕೇವಲ ಗುಡಾರಗಳಲ್ಲಿಯೇ ವಾಸಿಸುತ್ತಿರುವುದು ಕ್ಷೇತ್ರಕಾರ್ಯದ ಮೂಲಕ ಕಂಡುಬಂದಿತು. ಶೇಕಡವಾರುಗಳಲ್ಲಿ ಹೇಳುವುದಾದರೆ ಶೇಕಡ ೧೦೦ ರಷ್ಟು ಕುಟುಂಬಗಳು ಗುಡಾರವನ್ನೇ ಆಶ್ರಯಿಸಿವೆ.

ಕೋಷ್ಟಕ ೪.೧೨: ರಾಯಚೂರು ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ

ಜಿಲ್ಲೆ	ತಾಲೂಕ	ಗ್ರಾಮ	ಕುಟುಂಬ	ಪಕ್ಕಾ	ಕಚ್ಚಾ	ಹೆಂಚಿನ	ಸರ್ಕಾರಿ	ಗುಡಿಸಲು	ಗುಡಾರ
					ಮನೆ	ಮನೆ	ಮನೆ	ಮನೆ	
ರಾಯಚೂರು	ಮಾನ್ವಿ	ಪೋತ್ನಾಳ	೦೭	–	–	–	೩	–	೪
		ಒಟ್ಟು	೦೭	–	–	–	೩	–	೪

ರಾಯಚೂರು ಜಿಲ್ಲೆಯಲ್ಲಿ ಪೋತ್ನಾಳು ಎಂಬ ಊರಿನಲ್ಲಿ ಮಾತ್ರ ೭ ಕುಟುಂಬಗಳು ನೆಲೆಸಿವೆ. ಈ ಏಳು ಕುಟುಂಬಗಳಲ್ಲಿ ೩ ಕುಟುಂಬಗಳು ೨ ಸರ್ಕಾರಿ ವಸತಿ ಹೊಂದಿರುವರು. ಉಳಿದಂತೆ ಪೂತ್ನಾಳದಲ್ಲಿ ೪ ಕುಟುಂಬಗಳು ಇಂದಿಗೂ ಗುಡಾರಗಳಲ್ಲಿಯೇ ವಾಸಿಸುತ್ತಿರುವುದು ಕ್ಷೇತ್ರಕಾರ್ಯದ ಮೂಲಕ ಕಂಡುಬಂದಿತು.

ಕೋಷ್ಟಕ ೪.೧೩: ಶಿವಮೊಗ್ಗ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ

ಜಿಲ್ಲೆ	ತಾಲೂಕ	ಗ್ರಾಮ	ಕುಟುಂಬ	ಪಕ್ಕಾ	ಕಚ್ಚಾ	ಹೆಂಚಿನ	ಸರ್ಕಾರಿ	ಗುಡಿಸಲು	ಗುಡಾರ
					ಮನೆ	ಮನೆ	ಮನೆ	ಮನೆ	
ಶಿವಮೊಗ್ಗ	ಸೊರಬ	ಕುದರಿಗಣಿ	೦೮	–	–	–	೦೨	–	೦೬
ಸೊರಬ	ಜಡೆ		೧೦	–	–	–	೦೨	–	೦೮
			೧೮	–	–	–	೦೪		೧೪

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ


ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು ಎರಡು ಊರುಗಳಲ್ಲಿ ಮಾಲ ಸಮುದಾಯದವರು ಕಂಡುಬರುವರು. ಇದರಲ್ಲಿ ಕುದರೆಗಣಿಯಲ್ಲಿ ೮ ಕುಟುಂಬಗಳು, ಜಡೆಯಲ್ಲಿ ೧೦ ಕುಟುಂಬಗಳುನೆಲೆಸಿವೆ.

ಕುದರೆಗಣಿಯಲ್ಲಿ ೨ ಕುಟುಂಬಗಳು ಸರ್ಕಾರಿ ವಸತಿ ಹೊಂದಿರುವರು. ಉಳಿದಂತೆ ಕುದುರೆಗಣಿಯಲ್ಲಿ ೬ ಕುಟುಂಬಗಳು ಗುಡಾರದೊಳಗೇ ನೆಲೆಸಿವೆ.

ಜಡೆಯಲ್ಲಿ ೨ ಕುಟುಂಬಗಳು ಸರ್ಕಾರಿ ವಸತಿ ಹೊಂದಿರುವರು. ಉಳಿದಂತೆ ಜಡೆಯಲ್ಲಿ ೮, ಕುಟುಂಬಗಳು ಗುಡಾರದೊಳಗೇ ನೆಲೆಸಿವೆ.

ಶಿವಮೂಗ್ಗ ಜಿಲ್ಲೆಯಲ್ಲಿ ಒಟ್ಟು ೪ ಕುಟುಂಬಗಳು ಸರ್ಕಾರಿ ವಸತಿ ಯೋಜನೆಯ ಲಾಭ ಪಡೆದಿವೆಯಾದರೂ ಇನ್ನೂ ೧೪ ಕುಟುಂಬಗಳು ಇಂದಿಗೂ ಗುಡಾರಗಳಲ್ಲಿಯೇ ವಾಸಿಸುತ್ತಿರುವುದು ಕ್ಷೇತ್ರಕಾರ್ಯದ ಮೂಲಕ ಕಂಡುಬಂದಿತು.

ಲಂಬಚಿತ್ರ ೪.೯: ಶಿವಮೊಗ್ಗ ಜಿಲ್ಲೆಯಲ್ಲಿ ವಸತಿಹೀನರು ಹಾಗೂ ವಸತಿ ಹೊಂದಿದ ಕುಟುಂಬಗಳ ಪ್ರಮಾಣ



(೧ ವಸತಿ ಹೊಂದಿದ ಕುಟುಂಬಗಳು, ೨ ಗುಡಾರವಾಸಿ ಕುಟುಂಬಗಳು)

ಶೇಕಡವಾರುಗಳಲ್ಲಿ ಹೇಳುವುದಾದರೆ ಶೇಕಡ ೨೨.೨೩ ರಷ್ಟು ಕುಟುಂಬಗಳು ಸರ್ಕಾರಿ ವಸತಿ ಯೋಜನೆಯ ಲಾಭ ಪಡೆದರೆ ಶೇಕಡ ೭೭.೭೭ ರಷ್ಟು ಕುಟುಂಬಗಳು ಗುಡಾರವನ್ನೇ ಆಶ್ರಯಿಸಿವೆ.

ಕೋಷ್ಟಕ ೪.೧೪: ಹಾವೇರಿ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ವಸತಿ ಸ್ವರೂಪದ ವಿವರ

ಜಿಲ್ಲೆ	ತಾಲೂಕ	ಗ್ರಾಮ	ಕುಟುಂಬ	ಪಕ್ಕಾ	ಕಚ್ಚಾ	ಹೆಂಚಿನ	ಸರ್ಕಾರಿ	ಗುಡಿಸಲು	ಗುಡಾರ
					ಮನೆ	ಮನೆ	ಮನೆ	ಮನೆ	
ಹಾವೇರಿ	ಬ್ಯಾಡಗಿ	ಬಡಮಲ್ಲಿ	೧೯	–	–	–	೮	–	೧೧
ಹಾವೇರಿ ತಾಂಡ	ಬ್ಯಾಡಗಿ	ಬಡಮಲ್ಲಿ	೦೩	–	–	–	–	–	೦೩
ಹಾವೇರಿ	ಬ್ಯಾಡಗಿ	ರಾಮಪುರ	೦೪	–	–	–	–	–	೦೪
ಹಾವೇರಿ	ಬ್ಯಾಡಗಿ	ಹಂಸಬಾವಿ	೦೩	–	–	–	–	–	೦೩
ಹಾವೇರಿ	ಹಾನಗಲ್	ಹಾನಗಲ್	೦೩	–	–	–	–	–	೦೩
ಹಾವೇರಿ	ಹಿರೇಕೆರುರ	ಚಿಕ್ಕಕೆರೂರು	೦೮	–	–	–	೦೧	–	೦೭
		ಒಟ್ಟು	೪೦	–	–	–	೯	–	೩೧

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ಹಾವೇರಿ ಜಿಲ್ಲೆಯಲ್ಲಿ ಒಟ್ಟು ಆರು ಊರುಗಳಲ್ಲಿ ಮಾಲ ಸಮುದಾಯದವರು ಕಂಡುಬರುವರು. ಇದರಲ್ಲಿ ಬಡಮಲ್ಲಿಯಲ್ಲಿ ೧೯ ಕುಟುಂಬಗಳು, ಬಡಮಲ್ಲಿ ತಾಂಡದಲ್ಲಿ ೩ ಕುಟುಂಬ, ರಾಮಪುರದಲ್ಲಿ ೪, ಹಂಸಬಾವಿಯಲ್ಲಿ ಮೂರು, ಹಾನಗಲ್ಲಿನಲ್ಲಿ ೩ ಕುಟುಂಬಗಳು, ಚಿಕ್ಕಕೆರೂರುದಲ್ಲಿ ೮ ಕುಟುಂಬಗಳು ವಾಸವಾಗಿರುತ್ತವೆ.

ಬಡಮಲ್ಲಿಯಲ್ಲಿ ೧೯ ಕುಟುಂಬಗಳು ನೆಲೆಸಿದ್ದು ಇದರಲ್ಲಿ ೮ ಕುಟುಂಬಗಳು ಸರಕಾರಿ ಮನೆಗಳನ್ನು ಹೊಂದಿದ್ದು, ಇನ್ನು ಮಾಲ ಸಮುದಾಯದ ೧೧ ಕುಟುಂಬಗಳು ಗುಡಾರದೋಳಗೆ ವಾಸಮಾಡುತ್ತಿವೆ.

ಬಡಮಲ್ಲಿ ತಾಂಡದಲ್ಲಿ ೩ ಕುಟುಂಬಗಳು ನೆಲೆಸಿದ್ದು, ಇದರಲ್ಲಿ ಮಾಲ ಸಮುದಾಯದ ೩ ಕುಟುಂಬಗಳು ಗುಡಾರದೋಳಗೆ ವಾಸಮಾಡುತ್ತಿವೆ.

ರಾಮಪುರದಲ್ಲಿ ೪ ಕುಟುಂಬಗಳು ನೆಲೆಸಿದ್ದು, ಇದರಲ್ಲಿ ಮಾಲ ಸಮುದಾಯದ ೪ ಕುಟುಂಬಗಳು ಗುಡಾರದೋಳಗೆ ವಾಸಮಾಡುತ್ತಿವೆ.


ಹಂಸಬಾವಿಯಲ್ಲಿ ೩ ಕುಟುಂಬಗಳು ನೆಲೆಸಿದ್ದು, ಇದರಲ್ಲಿ ಮಾಲ ಸಮುದಾಯದ ೩ ಕುಟುಂಬಗಳು ಗುಡಾರದೋಳಗೆ ವಾಸಮಾಡುತ್ತಿವೆ.

ಹಾಗೂ ಹಾನಗಲ್ಲಿನಲ್ಲಿ ೩ ಕುಟುಂಬಗಳು ನೆಲೆಸಿದ್ದು, ಇದರಲ್ಲಿ ಮಾಲ ಸಮುದಾಯದ ೩ ಕುಟುಂಬಗಳು ಗುಡಾರದೋಳಗೆ ವಾಸಮಾಡುತ್ತಿವೆ

ಚಿಕ್ಕಕೆರೂರಿನಲ್ಲಿ ೮ ಕುಟುಂಬಗಳು ನೆಲೆಸಿದ್ದು, ಇದರಲ್ಲಿ ಮಾಲ ಸಮುದಾಯದ ಒಂದು ಕುಟುಂಬ ಸರ್ಕಾರಿ ವಸತಿ ಹೊಂದಿದ್ದು, ಮಾಲ ಸಮುದಾಯದ ಇನ್ನು ೭ ಕುಟುಂಬಗಳು ಗುಡಾರದೋಳಗೆ ವಾಸಮಾಡುತ್ತಿವೆ.

ಈ ಆರು ಊರುಗಳಲ್ಲಿ ಬಡಮಲ್ಲಿಯಲ್ಲಿ ೮ ಹಾಗೂ ಚಿಕ್ಕಕೆರೂರಿನಲ್ಲಿ ಒಂದು ಸರ್ಕಾರಿ ವಸತಿ ಹೊಂದಿರುವರು. ಉಳಿದಂತೆ ಬಡಮಲ್ಲಿಯಲ್ಲಿ ೧೧, ಚಿಕ್ಕಕೆರೂರಿನಲ್ಲಿ ೭, ಒಟ್ಟು ೯ ಕುಟುಂಬಗಳು ಸರ್ಕಾರಿ ವಸತಿ ಯೋಜನೆಯ ಲಾಭ ಪಡೆದಿವೆಯಾದರೂ ಇನ್ನೂ ೩೧ ಕುಟುಂಬಗಳು ಇಂದಿಗೂ ಗುಡಾರಗಳಲ್ಲಿಯೇ ವಾಸಿಸುತ್ತಿರುವುದು ಕ್ಷೇತ್ರಕಾರ್ಯದ ಮೂಲಕ ಕಂಡುಬಂದಿತು.

ವೃತ್ತಚಿತ್ರ ೪.೪: ಹಾವೇರಿ ಜಿಲ್ಲೆಯಲ್ಲಿ ನೆಲೆಗೊಂಡಿರುವ ಮಾಲ ಸಮುದಾಯದ ಶೇಕಡವಾರು ವಸತಿ ಸ್ವರೂಪದ ವಿವರ



(೧ ಗುಡಾರ ವಾಸಿ ಕುಟುಂಬಗಳು, ೨ ವಸತಿ ಹೊಂದಿದ ಕುಟುಂಬಗಳು)

ಶೇಕಡವಾರುಗಳಲ್ಲಿ ಹೇಳುವುದಾದರೆ ಶೇಕಡ ೨೨.೫ ರಷ್ಟು ಕುಟುಂಬಗಳು ಸರ್ಕಾರಿ ವಸತಿ ಯೋಜನೆಯ ಲಾಭ ಪಡೆದರೆ ಶೇಕಡ ೭೭. ೫ ರಷ್ಟು ಕುಟುಂಬಗಳು ಗುಡಾರವನ್ನೇ ಆಶ್ರಯಿಸಿವೆ.


ಕೋಷ್ಟಕ ೪.೧೫: ರಾಜ್ಯದ ಮಾಲ(ಪರ್ವತ ಮಲ್ಲಯ್ಯ) ಸಮುದಾಯದ ಕುಟುಂಬವಾರು ಮನೆಗಳ ವಿವರ

ರಾಜ್ಯ	ಗ್ರಾಮ	ಕುಟುಂಬ	ಪಕ್ಕಾ ಮನೆ	ಕಚ್ಚಾ ಮನೆ	ಹೆಂಚಿನ ಮನೆ	ಸರ್ಕಾರಿ ಮನೆ	ಗುಡಿಸಲು	ಗುಡಾರ
ಕರ್ನಾಟಕ	೨೫	೩೨೨	–	೧೮	೧೭	೧೦೫	–	೧೮೨
				೫.೫೯	೫.೨೭	೩೨.೬೧	–	೫೬.೫೨

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ



ವೃತ್ತಚಿತ್ರ ೪.೫: ರಾಜ್ಯದ ಮಾಲ ಸಮುದಾಯದವರ ಮನೆಗಳನ್ನು ಹೊಂದಿದವರ ಪ್ರಮಾಣ



ಒಟ್ಟು ೭ ಜಿಲ್ಲೆಗಳಿಂದ ೨೫ ಗ್ರಾಮಗಳಲ್ಲಿ ಅಲೆಮಾರಿ ಮಾಲ ಸಮುದಾಯದವರು ನೆಲೆಸಿರುವರು. ಇದರಲ್ಲಿ ೧೮ ಕುಟುಂಬಗಳು ಕಚ್ಚಾ ಮನೆಯನ್ನೂ, ೧೭ ಕುಟುಂಬಗಳು ಹೆಂಚಿನ ಮನೆಯನ್ನೂ, ೧೦೫ ಕುಟುಂಬಗಳು ಸರ್ಕಾರಿ ವಸತಿ ಯೋಜನೆಯ ಮನೆಗಳನ್ನೂ, ೧೮೨ ಕುಟುಂಬಗಳು ಗುಡಾರದೊಳಗೆ ವಾಸಿಸುತ್ತಿವೆ.

ಮಾಲ ಸಮುದಾಯದವರು ಮೊದಲು ವಲಸೆ ಹೋದಡೆಯಲ್ಲೆಲ್ಲ ಊರ ಹೊರಗೆ ಗುಡಾರಗಳನ್ನು ಹಾಕಿಕೊಂಡು ವಾಸಮಾಡುತ್ತಿದ್ದರು ಆದರೆ ಅವರಿಗೆ ಯಾವುದೇ ಮನೆಗಳು ಇದ್ದಿರಲಿಲ್ಲ ತಮ್ಮ ನೆಲೆ ಕಂಡುಕೊಂಡ ಗ್ರಾಮದಲ್ಲಿಯೂ ಇವರಿಗೆ ಮನೆಗಳಿದ್ದಿಲ್ಲ ಗುಡಾರಗಳನ್ನು ಹಾಕಿಕೊಂಡು ವಾಸಮಾಡುತ್ತಿದ್ದರು ಆದರೆ ಇತ್ತೀಚೆಗೆ ಸರಕಾರದ ಸೌಲಭ್ಯದಿಂದಾಗಿ ೩೨.೬೧ರಷ್ಟು ಜನರು ಆಶ್ರಯ ಮನೆಗಳನ್ನು ಹೊಂದಿದ್ದಾರೆ. ಮತ್ತು ಆಧುನಿಕರಣದ ಪ್ರಭಾವದಿಂದಾಗಿ ಇವರು ೫.೫೯ರಷ್ಟು ಜನರು ಕಚ್ಚಾಮನೆಯನ್ನು ಹೊಂದಿದ್ದಾರೆ ಮತ್ತು ೫.೨೭ರಷ್ಟು ಜನರು ಹಂಚಿನ ಮನೆಯನ್ನು ಹೊಂದಿದ್ದಾರೆ.

೪.೧೧ ಪಶು ಸಂಪತ್ತು

ಅಲೆಮಾರಿಗಳ ನಿಜವಾದ ಸಂಪತ್ತು ಎಂದರೆ ಪಶುಸಂಪತ್ತಾಗಿದೆ. ಅವರು ಊರಿಂದ ಊರಿಗೆ ವಲಸೆಹೋಗಲು ದನಗಳ ಸಹಾಯ ಬೇಕೇ ಬೇಕು. ಹಾಗೆಯೇ ಅವರು ಆಹಾರಕ್ಕಾಗಿ ಮತ್ತು ತಮ್ಮ ರಕ್ಷಣೆಗಾಗಿ ನಾಯಿಗಳನ್ನು ಸಾಕುವರು. ಹಾಗೆಯೇ ತಮ್ಮ ಹಬ್ಬ- ಹರಿದಿನಗಳಲ್ಲಿ ಬೇಟೆಮಾಡಲು ಕುರಿ-ಆಡುಗಳ ಅವಶ್ಯಕತೆ ಇದ್ದೇ ಇರುತ್ತದೆ. ಪ್ರತಿದಿನವೂ ಬೇಟೆ ಸಿಗುವುದು ಕಷ್ಟಸಾಧ್ಯದ ವಿಚಾರ. ಹಾಗಾಗಿ ತಮ್ಮ ಮಾಂಸಾಹಾರದ ಅವಶ್ಯಕತೆಗೆ ಸುಲಭವಾಗಿ ದೊರೆಯುವ ಕೋಳಿಗಳನ್ನೂ ಸಾಕುವರು.



ಮಾಲ ಸಮುದಾಯದವರನ್ನು ಕ್ಷೇತ್ರಕಾರ್ಯ ಮಾಡಿದಾಗ ಅವರು ಸಾಕಿರುವ ಪ್ರಾಣಿಸಂಪತ್ತು ಎಷ್ಟಿದೆ ಎಂದು ತಿಳಿಯಿತು. ಅದರ ವಿವರ ಈ ಕೆಳಗೆ ನೀಡಲಾಗಿದೆ.

೪.೧೧.೧ ಕೊಪ್ಪಳ ಜಿಲ್ಲೆಯ ಮಾಲ ಸಮುದಾಯದ ಗ್ರಾಮವಾರು ಪಶುಸಂಪತ್ತಿನ ವಿವರ


ಕೊಪ್ಪಳ ನಗರವನ್ನೂ ಸೇರಿ ಒಟ್ಟು ಹನ್ನೊಂದು ಊರುಗಳಲ್ಲಿ ಮಾಲ ಸಮುದಾಯದವರು ಕಂಡುಬರುವರು. ಇವರು ನಿರಂತರ ಅಲೆಮಾರಿಗಳಾಗಿರುವರಾದರೂ ತಮ್ಮ ನೆಲೆಯ ಹೆಸರನ್ನು ಹೇಳುವಾಗ ಈ ಊರುಗಳ ಹೆಸರನ್ನೇ ಹೇಳುವರು. ಕೊಪ್ಪಳ ಜಿಲ್ಲೆಯಲ್ಲಿ ಮಾಲ ಸಮುದಾಯದವರು ಅತೀ ಹೆಚ್ಚು ನೆಲೆಸಿರುವ ಗ್ರಾಮ ಚಿಲಕಮುಖಿಯಾಗಿದೆ. ಇದನ್ನು ಅವರು ತಮ್ಮ ಸಾಂಸ್ಕೃತಿಕ ಕೇಂದ್ರವಾಗಿಸಿಕೊಂಡಿರುವರು. ಬಹುತೇಕ ಅಲೆಮಾರಿಗಳಾಗಿ ಕರ್ನಾಟಕದಾದ್ಯಂತ ಹಂಚಿಹೋಗಿರುವ ಮಾಲ ಸಮುದಾಯದವರ ಕರ್ನಾಟಕದ ಮೂಲ ನೆಲೆ ಚಿಲಕಮುಖಿ ಎಂದು ಹೇಳಲಾಗುತ್ತದೆ.

ಕೋಷ್ಟಕ.೪.೧೬: ಕೊಪ್ಪಳ ಜಿಲ್ಲೆಯ ಮಾಲ ಸಮುದಾಯದ ಗ್ರಾಮವಾರು ಪಶುಸಂಪತ್ತಿನ ವಿವರ

ಜಿಲ್ಲೆ	ತಾಲೂಕು	ಗ್ರಾಮ	ಕುಟುಂಬ	ದನ	ಕುರಿ	ಆಡು	ನಾಯಿ	ಬೆಕ್ಕು	ಕೋಳಿ
ಕೊಪ್ಪಳ	ಕನಕಗಿರಿ	ಕನಕಗಿರಿ	೧೫	೧೫	೩	೭	೧೬	೨	೪೫
ಕೊಪ್ಪಳ	ಕನಕಗಿರಿ	ಕೆಸಕ್ಕಿಹಂಚಿನಾಳ	೦೨	೨	–	೩	೨	–	೪
ಕೊಪ್ಪಳ	ಕುಕನೂರ	ಮಸಬಾ ಹಂಚಿನಾಳ	೧೦	೧೨	೨	೬	೧೨	೩	೨೩
ಕೊಪ್ಪಳ	ಕೊಪ್ಪಳ	ಇರಕಲ್‌ಗಡ	೦೧	೨	–	೨	೩	–	೫
ಕೊಪ್ಪಳ	ಕೊಪ್ಪಳ	ಕಲ್ ಅಬ್ಬಿಗೇರಿ	೩೧	೩೪	೧೨	೧೯	೩೦	೫	೭೫
ಕೊಪ್ಪಳ	ಕೊಪ್ಪಳ	ಕುದುರಿಮೋತಿ	೦೬	೭	೨	೫	೮	೨	೧೩
ಕೊಪ್ಪಳ	ಕೊಪ್ಪಳ	ಕೊಪ್ಪಳ	೪೦	೨೦	೪	೫	೪೨	೫	೯೮
ಕೊಪ್ಪಳ	ಕೊಪ್ಪಳ	ಚಿಲಕಮುಖಿ	೯೮	೧೨೧	೨೦	೬೦	೧೦೫	೨೦	೨೩೪
ಕೊಪ್ಪಳ	ಕೊಪ್ಪಳ	ದನಗಳದೊಡ್ಡಿ	೦೭	೮	೨	೪	೮	೨	೧೫
ಕೊಪ್ಪಳ	ಗಂಗಾವತಿ	ಶಿವಪುರ	೦೧	೧	–	–	೨	–	೩
ಒಟ್ಟು			೨೧೧	೨೨೨	೪೫	೧೧೧	೨೨೮	೩೯	೫೧೫

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ಲಂಬಚಿತ್ರ: ೪.೧೦. ಕೊಪ್ಪಳ ಜಿಲ್ಲೆಯ ಮಾಲ ಸಮುದಾಯದ ಗ್ರಾಮವಾರು ಪಶುಸಂಪತ್ತಿನ ಪ್ರಮಾಣ



ಕನಕಗಿರಿಯಲ್ಲಿ ಒಟ್ಟು ೧೫ ಕುಟುಂಬಗಳು ನೆಲೆಸಿವೆ. ಇಲ್ಲಿ ಕುಟುಂಬಕ್ಕೊಂದರಂತೆ ಒಟ್ಟು ದನಗಳು ೧೫ ಇವೆ. ಇದರಲ್ಲಿ ಎಲ್ಲವೂ ಆಕಳು ಹಾಗೂ ಆಕಳ ಕರುಗಳಾಗಿವೆ. ೩ ಕುರಿ, ೭ ಆಡು, ೧೬ ನಾಯಿ, ೨ ಬೆಕ್ಕು ಹಾಗೂ ೪೫ ಕೋಳಿಗಳಿವೆ.

ಕೆಸಕ್ಕಿಹಂಚಿನಾಳದಲ್ಲಿ ಮಾಲ ಸಮುದಾಯದ ಎರಡು ಕುಟುಂಬ ಮಾತ್ರ ನೆಲೆಸಿವೆ. ಇಲ್ಲಿ ೨ ಆಕಳು, ೩ ಆಡು, ೨ ನಾಯಿ, ೪ ಕೋಳಿಗಳಿವೆ.

ಮಸಬಾಹಂಚಿನಾಳದಲ್ಲಿ ಒಟ್ಟು ೧೦ ಕುಟುಂಬಗಳು ನೆಲೆಸಿವೆ. ಇಲ್ಲಿ ಒಟ್ಟು ದನಗಳು ೧೨ ಇರುತ್ತವೆ. ಇದರಲ್ಲಿ ಎಲ್ಲವೂ ಆಕಳು ಹಾಗೂ ಆಕಳ ಕರುಗಳಾಗಿವೆ. ೨ ಕುರಿ, ೬ ಆಡು, ೧೨ ನಾಯಿ, ೩ ಬೆಕ್ಕು ಹಾಗೂ ೨೩ ಕೋಳಿಗಳಿವೆ.

ಇಲಕಲ್ಲುಗಡದಲ್ಲಿ ಮಾಲ ಸಮುದಾಯದ ಒಂದು ಕುಟುಂಬ ಮಾತ್ರ ನೆಲೆಸಿದೆ. ಇಲ್ಲಿ ಒಂದು ಆಕಳು, ೨ ಆಡು, ೩ ನಾಯಿ, ೫ ಕೋಳಿಗಳಿವೆ.

ಕಲ್ಲುಅಬ್ಬಿಗೇರಿಯಲ್ಲಿ ಒಟ್ಟು ೩೧ ಕುಟುಂಬಗಳು ನೆಲೆಸಿವೆ. ಇಲ್ಲಿ ಕುಟುಂಬಕ್ಕೊಂದರಂತೆ ಒಟ್ಟು ದನಗಳು ೩೪ ಇವೆ. ಇದರಲ್ಲಿ ೧೨ ಎತ್ತು ಹಾಗೂ ಇತರ ಎಲ್ಲವೂ ಆಕಳು ಹಾಗೂ ಆಕಳ ಕರುಗಳಾಗಿವೆ. ೧೨ ಕುರಿ, ೧೯ ಆಡು, ೩೦ ನಾಯಿ, ೫ ಬೆಕ್ಕು ಹಾಗೂ ೭೫ ಕೋಳಿಗಳಿವೆ.

ಕುದುರಿಮೋತಿಯಲ್ಲಿ ಒಟ್ಟು ೭ ಕುಟುಂಬಗಳು ನೆಲೆಸಿವೆ. ಇಲ್ಲಿ ಕುಟುಂಬಕ್ಕೊಂದರಂತೆ ಒಟ್ಟು ದನಗಳು ೭ ಇವೆ. ಇದರಲ್ಲಿ ಎಲ್ಲವೂ ಆಕಳು ಹಾಗೂ ಆಕಳ ಕರುಗಳಾಗಿವೆ. ೨ ಕುರಿ, ೫ ಆಡು, ೮ ನಾಯಿ, ೨ ಬೆಕ್ಕು ಹಾಗೂ ೧೩ ಕೋಳಿಗಳಿವೆ.

ಕೊಪ್ಪಳದಲ್ಲಿ ಒಟ್ಟು ೪೦ ಕುಟುಂಬಗಳು ನೆಲೆಸಿವೆ. ಇಲ್ಲಿ ಒಟ್ಟು ೨೦ ದನಗಳು, ಇದರಲ್ಲಿ ಎಲ್ಲವೂ ಆಕಳು ಹಾಗೂ ಆಕಳ ಕರುಗಳಾಗಿವೆ. ೪ ಕುರಿ, ೫ ಆಡು, ೪೨ ನಾಯಿ, ೫ ಬೆಕ್ಕು ಹಾಗೂ ೯೮ ಕೋಳಿಗಳಿವೆ.

ಚಿಲಕಮುಖಿಯಲ್ಲಿ ಒಟ್ಟು ೯೮ ಕುಟುಂಬಗಳು ನೆಲೆಸಿವೆ. ಈ ೯೮ ಕುಟುಂಬಗಳ ನಡುವೆ ಸಾಕಿರುವ ಒಟ್ಟು ದನಗಳು ೧೨೧ ಇವೆ. ಇದರಲ್ಲಿ ೨೫ರಷ್ಟು ಎತ್ತುಗಳಿದ್ದರೆ ಇನ್ನುಳಿದವೆಲ್ಲವೂ ಆಕಳು ಹಾಗೂ ಆಕಳ ಕರುಗಳಾಗಿವೆ. ಎಮ್ಮೆ ಸಾಕಿದ ಉದಾಹರಣೆ ಒಂದುಕಡೆಯೂ ಇಲ್ಲ. ಇವುಗಳಲ್ಲಿ ಎತ್ತುಗಳನ್ನು ತಮ್ಮ ಹೊಲಗಳಲ್ಲಿ ಬೇಸಾಯ ಮಾಡಲು ಉಪಯೋಗಿಸುವರು ಹಾಗೂ ಅಲೆಮಾರಿಗಳಾಗಿ ಊರೂರು ಸಂಚರಿಸುವಾಗ ಹೇರನ್ನು ಹೊರಲೂ ಇವುಗಳನ್ನು ಬಳಸುವರು. ಇನ್ನು ಆಕಳುಗಳನ್ನು ಹಾಲಿಗಿಂತ ಮುಖ್ಯವಾಗಿ ಸಂಚಾರದ ವೇಳೆಯಲ್ಲಿ ಹೇರನ್ನು ಹೊರಲು ಬಳಸುವರು.(ಛಾ:೪.೪) ಈ ಗ್ರಾಮದ ಮಾಲ ಸಮುದಾಯದ ಬಳಿ ೨೦ ಕುರಿ, ೬೦ ಆಡು, ೧೦೫ ನಾಯಿ, ೨೦ ಬೆಕ್ಕು ಹಾಗೂ ೨೩೪ ಕೋಳಿಗಳಿವೆ. ಮೊಲ ಇತ್ಯಾದಿ ಸಣ್ಣಪುಟ್ಟ ಪ್ರಾಣಿಗಳ ಬೇಟೆಯನ್ನಾಡಲು ನಾಯಿಗಳನ್ನು ಬಳಸಿದರೆ ಕೋಳಿಗಳನ್ನು ಆಹಾರವಾಗಿ ಬಳಸುವರು.

ದನಗಳದೊಡ್ಡಿಯಲ್ಲಿ ಒಟ್ಟು ೭ ಕುಟುಂಬಗಳು ನೆಲೆಸಿವೆ. ಇಲ್ಲಿ ಕುಟುಂಬಕ್ಕೊಂದರಂತೆ ಒಟ್ಟು ದನಗಳು ೮ ಇವೆ. ಇದರಲ್ಲಿ ಎಲ್ಲವೂ ಆಕಳು ಹಾಗೂ ಆಕಳ ಕರುಗಳಾಗಿವೆ. ೨ ಕುರಿ, ೪ ಆಡು, ೮ ನಾಯಿ, ೨ ಬೆಕ್ಕು ಹಾಗೂ ೧೫ ಕೋಳಿಗಳಿವೆ.

ಶಿವಪುರದಲ್ಲಿ ಮಾಲ ಸಮುದಾಯದ ಒಂದು ಕುಟುಂಬ ಮಾತ್ರ ನೆಲೆಸಿದೆ. ಇಲ್ಲಿ ಒಂದು ಆಕಳು, ೨ ನಾಯಿ, ೩ ಕೋಳಿಗಳಿವೆ.

ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು ೨೧೧ ಕುಟುಂಬಗಳು ನೆಲೆಸಿವೆ. ಈ ಜಿಲ್ಲೆಯಲ್ಲಿ ಮಾಲ ಸಮುದಾಯದವರು ಒಟ್ಟು ೨೨೨ ದನಗಳು, ೪೫ ಕುರಿ, ೧೧೧ ಆಡು, ೨೨೮ ನಾಯಿ, ೩೯ ಬೆಕ್ಕು, ೫೧೫ ಕೋಳಿಗಳನ್ನು ಸಾಕಿರುವರು.

ಕೋಷ್ಟಕ ೪.೧೭: ಗದಗ ಜಿಲ್ಲೆಯ ಮಾಲ ಸಮುದಾಯದ ಪಶುಸಂಪತ್ತಿನ ವಿವರ

ಜಿಲ್ಲೆಗಳು	ತಾಲೂಕ	ಗ್ರಾಮ	ಕುಟುಂಬ	ದನ	ಕುರಿ	ಆಡು	ನಾಯಿ	ಬೆಕ್ಕು	ಕೋಳಿ
ಗದಗ	ಗದಗ	ಗದಗ	೦೮	೭	–	೩	೮	೧	೧೮
ಗದಗ	ಗದಗ	ಹುಲಿಕೋಟೆ	೦೧	೧	–	–	೨	–	೫
ಗದಗ	ರೋಣ	ಗಜೇಂದ್ರಗಡ	೦೨	೩	–	೨	೩	–	೬
			೧೧	೧೧		೫	೧೩	೧	೨೯

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ಗದಗ ಜಿಲ್ಲೆಯಲ್ಲಿಗದಗ ನಗರದೊಳಗೆ ಮಾಲ ಸಮುದಾಯದವರು ನೆಲೆಸಿರುವರು. ಹುಲಿಕೋಟೆ ಹಾಗೂ ಗಜೇಂದ್ರಗಡದಲ್ಲಿ ಮಾಲ ಸಮುದಾಯದವರು ನೆಲೆಸಿರುವರು.

ಗದಗದಲ್ಲಿ ಮಾಲ ಸಮುದಾಯದ ಒಟ್ಟು ೮ ಕುಟುಂಬಗಳು ನೆಲೆಸಿವೆ. ಇಲ್ಲಿ ಒಟ್ಟು ೭ ಆಕಳು, ೩ ಆಡು, ೮ ನಾಯಿ, ೧ ಬೆಕ್ಕು, ೧೮ ಕೋಳಿಗಳಿವೆ.

ಹುಲಿಕೋಟಿಯಲ್ಲಿ ಒಂದು ಕುಟುಂಬ ಮಾತ್ರ ನೆಲೆಸಿದೆ. ಇಲ್ಲಿ ಒಟ್ಟು ೧ ಆಕಳು, ೨ ನಾಯಿ, ೫ ಕೋಳಿಗಳಿವೆ.

ಗಜೇಂದ್ರಗಡದಲ್ಲಿ ಒಟ್ಟು ೨ ಕುಟುಂಬಗಳು ನೆಲೆಸಿವೆ. ಇಲ್ಲಿ ಒಟ್ಟು ೩ ದನಗಳು, ಇದರಲ್ಲಿ ಎಲ್ಲವೂ ಆಕಳು ಆಗಿವೆ. ೨ ಆಡು, ೩ ನಾಯಿ, ೬ ಕೋಳಿಗಳಿವೆ.

ಗದಗ ಜಿಲ್ಲೆಯಲ್ಲಿ ಮಾಲ ಸಮುದಾಯದವರ ೧೧ ಕುಟುಂಬಗಳಿವೆ. ಇಲ್ಲಿ ಒಟ್ಟು ೧೧ ದನ, ೫ ಆಡು, ೧೩ ನಾಯಿ, ಒಂದು ಬೆಕ್ಕು ಹಾಗೂ ೨೯ ಕೋಳಿಗಳನ್ನು ಸಾಕಿರುವರು.

ಕೋಷ್ಟಕ ೪.೧೮: ಧಾರವಾಡ ಜಿಲ್ಲೆಯ ಮಾಲ ಸಮುದಾಯದ ಪಶುಸಂಪತ್ತಿನ ವಿವರ

ಜಿಲ್ಲೆ	ಊರು	ಕುಟುಂಬ	ದನ	ಕುರಿ	ಆಡು	ನಾಯಿ	ಬೆಕ್ಕು	ಕೋಳಿ
ಧಾರವಾಡ	ಹುಬ್ಬಳ್ಳಿ	೨೮	೨೦	೩	೮	೩೦	೩	೫೪

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ಧಾರವಾಡ ಜಿಲ್ಲೆಯಲ್ಲಿ ಧಾರವಾಡ ಹುಬ್ಬಳ್ಳಿ ನಗರಗಳ ಮಧ್ಯದಲ್ಲಿ ಬರುವ ಗೋಪನಕೊಪ್ಪ ಎಂಬ ಬಡಾವಣೆಯಲ್ಲಿ ಮಾಲ ಸಮುದಾಯದವರು ನೆಲೆಸಿರುವರು. ಇಲ್ಲಿ ಒಟ್ಟು ೨೮ ಕುಟುಂಬಗಳು ನೆಲೆಸಿವೆ. ಇವರು ಒಟ್ಟು ೨೦ ಆಕಳು, ಕರು, ೩ ಕುರಿ, ೮ ಆಡು, ೩೦ ನಾಯಿ, ೩ ಬೆಕ್ಕು, ೫೪ ಕೋಳಿಗಳನ್ನು ಸಾಕಿರುವರು.

ಕೋಷ್ಟಕ ೪.೧೯: ಮೈಸೂರು ಜಿಲ್ಲೆಯ ಮಾಲ ಸಮುದಾಯದ ಪಶುಸಂಪತ್ತಿನ ವಿವರ

ಜಿಲ್ಲೆ		ಕುಟುಂಬ	ದನ	ಕುರಿ	ಆಡು	ನಾಯಿ	ಬೆಕ್ಕು	ಕೋಳಿ
ಮೈಸೂರು	ಮೈಸೂರು	೦೭	೪	–	೨	೭	–	೮
		೦೭	೪	–	೨	೭	–	೮

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ಮೈಸೂರು ಜಿಲ್ಲೆಯ ಮೈಸೂರು ನಗರದ ಬನ್ನಿಮಂಟಪ ಪ್ರದೇಶದ ಬಳಿ ಮಾಲ ಸಮುದಾಯದವರು ನೆಲೆಸಿರುವರು. ಇಲ್ಲಿ ಒಟ್ಟು ೭ ಮಾಲ ಸಮುದಾಯದ ಕುಟುಂಬಗಳು ನೆಲೆಸಿವೆ. ಇಲ್ಲಿ ಒಟ್ಟು ೪ ದನಗಳು, ೨ ಆಡು, ೭ ನಾಯಿ, ೮ ಕೋಳಿಗಳನ್ನು ಸಾಕಿರುವರು.

ಕೋಷ್ಟಕ ೪.೨೦: ರಾಯಚೂರು ಜಿಲ್ಲೆಯ ಮಾಲ ಸಮುದಾಯದ ಪಶುಸಂಪತ್ತಿನ ವಿವರ

ಜಿಲ್ಲೆಗಳು	ತಾಲೂಕ	ಗ್ರಾಮ	ಕುಟುಂಬ	ದನ	ಕುರಿ	ಆಡು	ನಾಯಿ	ಬೆಕ್ಕು	ಕೋಳಿ
ರಾಯಚೂರು	ಮಾನ್ವಿ	ಪೋತ್ನಾಳ	೦೭	೭	–	೬	೭	–	೧೬
		ಒಟ್ಟು	೦೭	೭	–	೬	೭	–	೧೬

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ರಾಯಚೂರು ಜಿಲ್ಲೆಯ ಪೋತ್ನಾಳು ಗ್ರಾಮದಲ್ಲಿ ಮಾಲ ಸಮುದಾಯದವರು ನೆಲೆಸಿರುವರು. ಇಲ್ಲಿ ಒಟ್ಟು ೭ ಕುಟುಂಬಗಳು ನೆಲೆಸಿವೆ. ಇಲ್ಲಿ ಒಟ್ಟು ೭ ದನಗಳು, ೬ ಆಡು, ೭ ನಾಯಿ, ೧೬ ಕೋಳಿಗಳನ್ನು ಸಾಕಿರುವರು.

ಕೋಷ್ಟಕ ೪.೨೧: ಶಿವಮೊಗ್ಗ ಜಿಲ್ಲೆಯ ಮಾಲ ಸಮುದಾಯದ ಪಶುಸಂಪತ್ತಿನ ವಿವರ

ಜಿಲ್ಲೆಗಳು	ತಾಲೂಕ	ಗ್ರಾಮ	ಕುಟುಂಬ	ದನ	ಕುರಿ	ಆಡು	ನಾಯಿ	ಬೆಕ್ಕು	ಕೋಳಿ
ಶಿವಮೊಗ್ಗ	ಸೂರಬ	ಕುದರಿಗಣಿ	೦೮	೭	–	೩	೮	೧	೧೨
ಶಿವಮೊಗ್ಗ	ಸೂರಬ	ಜಡೆ	೧೦	೯	೨	೪	೧೧	–	೩೨
			೧೮	೧೬	೨	೭	೧೯	೧	೪೪

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ಶಿವಮೊಗ್ಗ ಜಿಲ್ಲೆಯಲ್ಲಿ ಜಡೆ ಹಾಗೂ ಕುದರಿಗಣಿ ಎಂಬ ಎರಡು ಊರುಗಳಲ್ಲಿ ಮಾಲ ಸಮುದಾಯದವರು ನೆಲೆಸಿರುವರು.

ಕುದರಿಗಣಿಯಲ್ಲಿ ಮಾಲ ಸಮುದಾಯದ ೮ ಕುಟುಂಬ ಮಾತ್ರ ನೆಲೆಸಿವೆ. ಇಲ್ಲಿ ಒಟ್ಟು ೭ ಆಕಳು, ೩ ಆಡು, ೮ ನಾಯಿ, ೧ ಬೆಕ್ಕು, ೧೨ ಕೋಳಿಗಳಿವೆ.

ಜಡೆಯಲ್ಲಿ ಮಾಲ ಸಮುದಾಯದ ಒಟ್ಟು ೧೦ ಕುಟುಂಬಗಳು ನೆಲೆಸಿವೆ. ಇಲ್ಲಿ ಒಟ್ಟು ೯ ದನಗಳು, ೨ ಕುರಿ, ೪ ಆಡು, ೧೧ ನಾಯಿ, ೩೨ ಕೋಳಿಗಳಿವೆ.

ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು ೧೮ ಕುಟುಂಬಗಳು ನೆಲೆಸಿದ್ದು ಒಟ್ಟು ೧೬ ದನ, ೨ ಕುರಿ, ೭ ಆಡು, ೧೯ ನಾಯಿ, ೧ ಬೆಕ್ಕು, ೪೪ ಕೋಳಿಗಳನ್ನು ಸಾಕಿರುವರು.

ಕೋಷ್ಟಕ ೪.೨೨: ಹಾವೇರಿ ಜಿಲ್ಲೆಯ ಮಾಲ ಸಮುದಾಯದ ಪಶುಸಂಪತ್ತಿನ ವಿವರ

ಜಿಲ್ಲೆಗಳು	ತಾಲೂಕ	ಗ್ರಾಮ	ಕುಟುಂಬ	ದನ	ಕುರಿ	ಆಡು	ನಾಯಿ	ಬೆಕ್ಕು	ಕೋಳಿ
ಹಾವೇರಿ	ಬ್ಯಾಡಗಿ	ಬಡಮಲ್ಲಿ	೧೯	೧೮	೪	೯	೨೦	೨	೪೮
ಹಾವೇರಿ	ಬ್ಯಾಡಗಿ	ಬಡಮಲ್ಲಿ ತಾಂಡ	೦೩	೩	–	೪	೩	–	೧೨

ಹಾವೇರಿ	ಬ್ಯಾಡಗಿ	ರಾಮಪುರ	೦೪	೩	೧	೪	೫	–	೯
ಹಾವೇರಿ	ಬ್ಯಾಡಗಿ	ಹಂಸಬಾವಿ	೦೩	೩	–	೧	೩	–	೭
ಹಾವೇರಿ	ಹಾನಗಲ್	ಹಾನಗಲ್	೦೩	೪	–	೨	೩	–	೮
ಹಾವೇರಿ	ಹೀರೆಕೆರುರ	ಚಿಕ್ಕಕೆರೂರು	೦೮	೯	–	೩	೯	–	೧೬
		ಒಟ್ಟು	೪೦	೪೦	೫	೨೩	೪೩	೨	೧೦೦

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ಹಾವೇರಿ ಜಿಲ್ಲೆಯಲ್ಲಿ ಬಡಮಲ್ಲಿ, ಬಡಮಲ್ಲಿ ತಾಂಡ, ರಾಮಾಪುರ, ಹಂಸಬಾವಿ, ಹಾನಗಲ್ಲುಗಳಲ್ಲಿ ಮತ್ತು ಚಿಕ್ಕಕೆರೂರುದಲ್ಲಿ ಮಾಲ ಸಮುದಾಯದವರು ನೆಲೆಸಿರುವರು.

ಬಡಮಲ್ಲಿಯಲ್ಲಿ ಮಾಲ ಸಮುದಾಯದ ಒಟ್ಟು ೧೯ ಕುಟುಂಬಗಳು ನೆಲೆಸಿವೆ. ಇಲ್ಲಿ ಒಟ್ಟು ೧೮ ದನಗಳು, ೪ ಕುರಿ, ೯ ಆಡು, ೨೦ ನಾಯಿ, ೪೮ ಕೋಳಿಗಳಿವೆ.

ಬಡಮಲ್ಲಿ ತಾಂಡದಲ್ಲಿ ಮಾಲ ಸಮುದಾಯದ ಒಟ್ಟು ೩ ಕುಟುಂಬ ಮಾತ್ರ ನೆಲೆಸಿವೆ. ಇಲ್ಲಿ ಒಟ್ಟು ೩ ಆಕಳು, ೪ ಆಡು, ೩ ನಾಯಿ, ೧೨ ಕೋಳಿಗಳಿವೆ.

ರಾಮಪುರದಲ್ಲಿ ಮಾಲ ಸಮುದಾಯದ ಒಟ್ಟು ೪ ಕುಟುಂಬ ನೆಲೆಸಿವೆ. ಇಲ್ಲಿ ಒಟ್ಟು ೩ ಆಕಳು, ೩ ಕುರಿ, ೧ ಆಡು, ೫ ನಾಯಿ, ೯ ಕೋಳಿಗಳಿವೆ.

ಹಂಸಬಾವಿಯಲ್ಲಿ ಮಾಲ ಸಮುದಾಯದ ಒಟ್ಟು ೩ ಕುಟುಂಬ ನೆಲೆಸಿವೆ. ಇಲ್ಲಿ ಒಟ್ಟು ೩ ಆಕಳು, ೧ ಆಡು, ೩ ನಾಯಿ, ೭ ಕೋಳಿಗಳಿವೆ.

ಹಾನಗಲ್ಲಿನಲ್ಲಿ ಮಾಲ ಸಮುದಾಯದ ಒಟ್ಟು ೩ ಕುಟುಂಬ ನೆಲೆಸಿವೆ. ಇಲ್ಲಿ ಒಟ್ಟು ೪ ಆಕಳು, ೨ ಆಡು, ೩ ನಾಯಿ, ೮ ಕೋಳಿಗಳಿವೆ.

ಚಕ್ಕಕೆರೂರದಲ್ಲಿ ಮಾಲ ಸಮುದಾಯದ ಒಟ್ಟು ೮ ಕುಟುಂಬ ನೆಲೆಸಿವೆ. ಇಲ್ಲಿ ಒಟ್ಟು ೯ ಆಕಳು, ೩ ಆಡು, ೯ ನಾಯಿ, ೧೬ ಕೋಳಿಗಳಿವೆ.

ಹಾವೇರಿ ಜಿಲ್ಲೆಯಲ್ಲಿ ಮಾಲ ಸಮುದಾಯದವರ ಒಟ್ಟು ೪೦ ಕುಟುಂಬಗಳಿವೆ. ಇಲ್ಲಿ ಒಟ್ಟು ೪೦ ದನ, ೫ ಕುರಿ, ೨೩ ಆಡು, ೪೩ ನಾಯಿ, ೨ ಬೆಕ್ಕು ಹಾಗೂ ೧೦೦ ಕೋಳಿಗಳನ್ನು ಸಾಕಿರುವರು.

ಕೋಷ್ಟಕ ೪.೨೩: ಮಾಲ ಸಮುದಾಯದ ಒಟ್ಟು ಪಶುಸಂಪತ್ತಿನ ವಿವರ

ಜಿಲ್ಲೆಗಳು	ಗ್ರಾಮ	ಕುಟುಂಬ	ದನ	ಕುರಿ	ಆಡು	ನಾಯಿ	ಬೆಕ್ಕು	ಕೋಳಿ
೭	೨೫	೩೨೨	೩೨೦	೫೫	೧೬೨	೩೪೭	೪೬	೭೬೬

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ಅಲೆಮಾರಿಗಳಾದ ಮಾಲ ಸಮುದಾಯದವರು ಕರ್ನಾಟಕದ ಏಳು ಜಿಲ್ಲೆಯಲ್ಲಿ ನೆಲೆಸಿರುವರು. ಇವರ ಒಟ್ಟು ಕುಟುಂಬಗಳು ೩೨೨, ಇವರು ಸಾಕಿರುವ ಪಶುಸಂಪತ್ತಿನಲ್ಲಿ ಒಟ್ಟು ೩೨೦ ದನಗಳು

ಇರುತ್ತವೆ. ೫೫ ಕುರಿಗಳು, ೧೬೨ ಆಡುಗಳು, ३೪೭ ನಾಯಿಗಳು, ೪೬ ಬೆಕ್ಕುಗಳು, ೭೬೬ ಕೋಳಿಗಳನ್ನು ಸಾಕಿರುವರು. ಅಲೆಮಾರಿಗಳಾದ ಮಾಲ ಸಮುದಾಯದವರು ಹೇರನ್ನು ಅಥವಾ ಅವರ ಸಾಮಾನುಗಳನ್ನು ಹೋರಲು ದನಗಳನ್ನು ಆಶ್ರಯಿಸಿರುವರು. ಕುರಿ ಸಾಕಣಿಕೆ ಸ್ವಲ್ಪ ಕಷ್ಟದಾಯಕವೆಂಬುದಕ್ಕಾಗಿಯೇನೊ ಕುರಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸಾಕಿಲ್ಲ. ಆದರೆ ಏನನ್ನಾದರೂ ತಿಂದು ಜೀರ್ಣಿಸಿಕೊಳ್ಳಬಲ್ಲ ಆಡನ್ನು ಕುರಿಗಿಂತ ಹೆಚ್ಚಾಗಿ ಸಾಕಿರುವರು. ದನಗಳ ಹೊರತಾಗಿ ಹೆಚ್ಚಿನ ಪ್ರಮಾಣದಲ್ಲಿ ಸಾಕಿರುವ ಮತ್ತೊಂದು ಪ್ರಾಣಿ ಇದ್ದರೆ ಅದು ನಾಯಿಯಾಗಿದೆ. ನಾಯಿಯನ್ನು ಬೇಟೆಗಾಗಿ ಬಳಸುವರು. ಅಲೆಮಾರಿತನದೊಂದಿಗೆ ಚಿಕ್ಕಪುಟ್ಟ ಪ್ರಾಣಿಗಳನ್ನು ಬೇಟೆಯಾಡಿ ಆಹಾರವೊದಗಿಸಿಕೊಳ್ಳುವ ಈ ಸಮುದಾಯದವರಿಗೆ ನಾಯಿಯ ಮೇಲೆ ಹೆಚ್ಚಿನ ಪ್ರೀತಿ. ಇನ್ನು ಬೆಕ್ಕನ್ನು ಅಷ್ಟಾಗಿ ಇವರು ಸಾಕಿಲ್ಲ. ಆದರೆ ಕೋಳಿಯನ್ನು ಇವರು ಹೆಚ್ಚಿನ ಪ್ರಮಾಣದಲ್ಲಿ ಸಾಕಿರುವರು. ಮಾಂಸಪ್ರಿಯರಾದ ಮಾಲ ಸಮುದಾಯದವರು ಬೇಟೆ ಸಿಗದಿರುವಾಗ ಕೋಳಿಯನ್ನು ಮಾಂಸಕ್ಕಾಗಿ ಅಥವಾ ತಿನ್ನುವದಕ್ಕಾಗಿ ಬಳಸುವರು. ಒಟ್ಟಾರೆಯಾಗಿ ಹೇಳಬಹುದೆಂದರೆ ಇವರು ಸಾಕಿರುವ ಪಶು ಪಕ್ಷಿಗಳು ಇವರ ಜೀವನ ಶೈಲಿಯನ್ನು ಮಾತ್ರ ಪ್ರಕಟಿಸದೆ ಅವರ ಆರ್ಥಿಕ ಸ್ಥಿತಿಯನ್ನೂ ಪ್ರತಿನಿಧಿಸುವುದು.

ಮೊದಲು ಮಾಲ ಸಮುದಾಯದವರು ಯಾವಾಗಲೂ ಅಲೆಮಾರಿ ಜೀವನ ಸಾಗಿಸಿದವರು ಆಗಿದ್ದಾರೆ. ಆದ್ದರಿಂದ ಮೊದಲು ಇವರು ಅಷ್ಟಾಗಿ ಪಶುಸಂಪತ್ತನ್ನು ಹೊಂದಿದ್ದಿಲ್ಲವೆಂದು ಹೆಳುತ್ತಾರೆ. ಇವರು ತಮ್ಮ ಸಾಮಾನುಗಳನ್ನು ಊರುರಿಗೆ ಹೊತ್ತುಕೊಂಡು ಹೋಗಲು ಹೆಚ್ಚಾಗಿ ಇವರು ಆಕಳುಗಳನ್ನು ಸಾಕುತ್ತಿದ್ದರಂತೆ. ಮತ್ತು ಸದಾ ಮಾಂಸಪ್ರೀಯರಾದ ಇವರು ಬೆರಳೆನಿಕೆಯಷ್ಟು ಮಾತ್ರ ಕೋಳಿಗಳನ್ನು ಸಾಕುತ್ತಿದ್ದರಂತೆ ಆದರೆ ಇತ್ತೀಚೆಗೆ ತಮಗೆ ಅನುಕೂಲವಾದ ಊರುಗಳಲ್ಲಿ ನೆಲೆನಿಂತು ತಮಗೆ ಅವಸ್ಯಕವಾದ ಪ್ರಾಣಿಗಳಾದ ಇವರು ಸಾಕಿಕೊಂಡಿದ್ದಾರೆ. ರಾಜ್ಯದ ಒಟ್ಟು ३೨೨ ಕುಟುಂಬಗಳಲ್ಲಿ ३೨೦ ದನ, ೫೫ ಕುರಿ, ೧೬೨ ಆಡು, ३೪೭ ನಾಯಿ, ೪೬ ಬೆಕ್ಕು, ಮತ್ತು ೭೬೬ ಕೋಳಿಗಳನ್ನು ಸಾಕಿಕೊಂಡಿರುತ್ತಾರೆ.

೪.೧೨ ಬೇಟೆ

ಬೇಟೆಯು ಮನುಷ್ಯ ತನ್ನ ಆಹಾರಕ್ಕಾಗಿ ಅನಿವಾರ್ಯವಾಗಿ ರೂಢಿಸಿಕೊಂಡಿರುವ ಒಂದು ಕ್ರಿಯೆಯಾಗಿದೆ. ಆದಿಮಾನವನ ಕಾಲದಲ್ಲಿ ಕೇವಲ ಮಾಂಸ ಹಾಗೂ ಗೆಡ್ಡೆಗೆಣಸುಗಳನ್ನೇ ಮನುಷ್ಯ ಆಶ್ರಯಿಸಿದ್ದ ಎಂಬುದನ್ನು ಚರಿತ್ರೆಯ ಮೂಲಕ ತಿಳಿದಿದ್ದೇವೆ. ಇಂದಿಗೂ ಅಲೆಮಾರಿ ಸಂಸ್ಕೃತಿಯಲ್ಲಿ ಬೇಟೆ ಮುಖ್ಯ ಪಾತ್ರವಹಿಸುತ್ತದೆ. ಅಲೆಮಾರಿತನದೊಂದಿಗೇ ಅನಿವಾರ್ಯವಾಗಿ ಬೇಟೆ ಮೈದಾಳಿರುತ್ತದೆ. ಇಂದು ಬಹುತೇಕವಾಗಿ ಕಾಡಿನ ನಾಶ ಮತ್ತು ಸರ್ಕಾರಗಳ ನಿಷೇಧಗಳಿಂದ ಮಾಲ ಸಮುದಾಯದವರು ಬೇಟೆಯಂಥ ಹವ್ಯಾಸದಿಂದ ಅಲ್ಪಮಟ್ಟಿಗೆ ದೂರವಾದಂತೆ ಕಂಡರೂ ಬೇಟೆ ಸಂಸ್ಕೃತಿಯಿಂದ ಪೂರ್ಣವಾಗಿ ದೂರವಾಗಲು ಸಾಧ್ಯವಾಗಿಲ್ಲ. ಮಾಲ ಸಮುದಾಯದವರು ಕೆಲವು ಪಕ್ಷಿಗಳನ್ನು ಹಿಡಿಯಲು ಬಿಡುವಿನ ಸಮಯದಲ್ಲಿ ಬೇಲಿಯನ್ನು ಎಣೆಯುತ್ತಾರೆ.*(ಛಾ:೪.೫)*

ಮಾಲ ಸಮುದಾಯದವರು ಹಲವು ಬಗೆಯ ಬೇಟೆಯ ಕ್ರಮಗಳನ್ನು ರೂಢಿಸಿಕೊಂಡಿದ್ದಾರೆ. ಅವುಗಳನ್ನು ಈ ರೀತಿ ವಿಭಾಗಿಸಬಹುದು.

೧. ನಾಯಿ ಬೇಟೆ

೨. ಬಿಲ್ಲು ಬೇಟೆ

೩. ನೀರು ಬೇಟೆ

೪. ಉರುಳು ಕ್ರಮ

೫. ಆಧುನಿಕ ಕ್ರಮದ ಬೇಟೆ – ಹೀಗೆ ವಿವಿಧ ಪ್ರಕಾರಗಳಲ್ಲಿ ಇವರು ಬೇಡೆಯಾಡುವುದನ್ನು ಕಾಣಬಹುದಾಗಿದೆ.

ನಾಯಿ ಬೇಟೆ: ಬೇಟೆಯಾಡುವುದಕ್ಕೆಂದೇ ದೇಶೀಯವಾದ ವಿಶೇಷ ತಳಿಗಳ ನಾಯಿಗಳನ್ನು ಮಾಲ ಸಮುದಾಯದವರು ಸಾಕುತ್ತಿದ್ದುದಾಗಿ ತಿಳಿದು ಬರುತ್ತದೆ. ಮಾಲ ಸಮುದಾಯದವರ ಅತೀ ಪ್ರೀತಿಯ ಆಹಾರ ಕಾಡುಹಂದಿ ಹಾಗೂ ಚಿಪ್ಪು ಹಂದಿ (ಆಲವಿ), ಮೋಲ, ಉಡ, ಇಣಚಿ ಇವುಗಳನ್ನು ತಮ್ಮ ನಾಯಿಗಳೊಂದಿಗೆ ಬೇಟೆಗೆ ಹೋಗಿ ಮೊಲಗಳನ್ನು ನಾಲ್ಕು ಐದರ ಸಂಖ್ಯೆಯಲ್ಲಿ ತಂದು ಉದಾಹರಣೆಗಳುಂಟು. ಆಲವಿಯಂಥ ವಿಶೇಷ ಪ್ರಾಣಿ ಸಿಕ್ಕಾಗ ಹೆಚ್ಚು ಸಂತುಷ್ಟಗೊಳ್ಳುವ ಇವರು ಆ ಮಾಂಸವನ್ನು ಸಾಮಾನ್ಯವಾಗಿ ತಮ್ಮ ಸಮುದಾಯದ ಎಲ್ಲರೊಂದಿಗೂ ಹಂಚಿಕೊಂಡು ತಿನ್ನುವುದನ್ನು ಕಾಣಬಹುದಾಗಿದೆ. ಇಂದಿಗೂ ಮಾಲ ಸಮುದಾಯದ ಬೇಟೆಗಾರನು ಕಾಡುಹಂದಿಯಂತ ದೊಡ್ಡ ಗಾತ್ರದ ಪ್ರಾಣಿಯನ್ನು ಬೇಟೆಯಾಡಿದಾಗ ತಮ್ಮ ಇಡೀ ಸಮುದಾಯಕ್ಕೆ ಮಾಂಸವು ಸಮಾನ ಹಂಚಿಕೆಯಾಗುವುದನ್ನು ಕಾಣಬಹುದಾಗಿದೆ. ಆದರೆ ಮಾಲ ಸಮುದಾಯದವರು ಇತ್ತೀಚೆಗೆ ಬೇಟೆಯಾಡುವದನ್ನು ಕಡಿಮೆ ಮಾಡಿದ್ದಾರೆ.

ನಾಯಿ ಬೇಟೆಯ ಕ್ರಮ: ನಾಯಿಗಳನ್ನು ಮುಂದಾಗಿ ಬಿಟ್ಟು ಪ್ರಾಣಿಗಳ ಇರುವನ್ನು ತಿಳಿದುಕೊಳ್ಳುವ ಬೇಟೆಗಾರರು ನಂತರ ಗುಂಪಾಗಿ ಸುತ್ತುವರೆದು ತಮ್ಮ ಕೈಯೊಳಗಿನ ಕೋಲು, ಭಲ್ಲೆಗಳಿಂದ ಪ್ರಾಣಿ ಅಡಗಿದ ಪೊದೆಯನ್ನು ಬಡಿಯುತ್ತ, ಕೇಕೆ ಹಾಕುತ್ತ ಪ್ರಾಣಿ ಹೊರಬರುವಂತೆ ಮಾಡುತ್ತಾರೆ. ಪ್ರಾಣಿ ಹೊರಬಂದು ಓಡಲು ಪ್ರಾರಂಬಿಸಿದ ಅಥವಾ ಅನುವಾದ ತಕ್ಷಣ ನಾಯಿಗಳು ಅದನ್ನು ಬೆನ್ನಟ್ಟಿ ಹಿಡಿಯುತ್ತವೆ. ನಾಯಿಯ ಬೆನ್ನ ಹಿಂದೆಯೇ ಓಡುವ ಬೇಟೆಗಾರರು ಆ ಪ್ರಾಣಿಗಳನ್ನು ಕೋಲಿನಿಂದ ಹೊಡೆದೋ, ಇಲ್ಲವೆ ಜೀವಂತವಾಗಿ ಹಿಡಿದು ನಾಯಿಯಿಂದ ಬಿಡಿಸಿಕೊಂಡು ತಮ್ಮ ಜೋಳಿಗೆಗೆ ಸೇರಿಸುತ್ತಾರೆ. ಸಾಮಾನ್ಯವಾಗಿ ಮೊಲ, ಉಡದಂತಹ ಪ್ರಾಣಿಗಳನ್ನು ಈ ಕ್ರಮದಲ್ಲಿ ಬೇಟೆಯಾಡುವರು.

ಉಡದಂತಹ ಪ್ರಾಣಿಗಳು ಅಕಸ್ಮಾತ್ ಹುತ್ತಗಳಲ್ಲಿ ಅಡಗಿಕೊಂಡಲ್ಲಿ ಹುತ್ತದ ಸುತ್ತಲೂ ನಿಂತು ಬೇಟೆಗಾರರು ತಮ್ಮ ಚೂಪಾದ ಆಯುಧಗಳಿಂದ ಹುತ್ತವನ್ನು ಬಗೆದು ಕೆಡವಿ ಉಡವನ್ನು ಹಿಡಿಯುತ್ತಾರೆ.

ನಾಯಿ ಬೇಟೆಗೆ ಗುಂಪಾಗಿ ತೆರಳುವ ಮಾಲ ಸಮುದಾಯದವರು ಸಿಕ್ಕ ಪ್ರಾಣಿಗಳನ್ನು ಸಮಾನವಾಗಿ ಹಂಚಿಕೊಳ್ಳುತ್ತಾರೆ. ಹಂಚಿಕೂಂಡು ತಿನ್ನುತ್ತಾರೆ.

ಕೋವಿ / ಬಂದೂಕು: ನಾಡ ಕೋವಿಗೆ ಅವಶ್ಯವಾದ ಮಸಿ (Gun-Powder)ಯನ್ನು ಮತ್ತು ನಾನಾ ಅಳತೆಯ ಗುಂಡುಗಳನ್ನು ಇವರೇ ತಯಾರಿಸಿಕೊಳ್ಳುವುದನ್ನು ಕಾಣಬಹುದಾಗಿದೆ. ಮಸಿಯನ್ನು

ತಯಾರಿಸಲು ಕಳ್ಳಿಯ ಕಟ್ಟಿಗೆಯ ಇದ್ದಿಲು, ಗಂಧಕ, ಸೋರುಪ್ಪು (ಪೆಟ್ಲುಪ್ಪು) ಮುಂತಾದ ರಾಸಾಯನಿಕಗಳನ್ನು ಬಳಸುತ್ತಾರೆ. ಹಾಗೆಯೇ ಸೀಸವನ್ನು ಕಾಯಿಸಿ ತಮಗೆ ಬೇಕಾದ ಆಕಾರದಲ್ಲಿ ಗುಂಡುಗಳನ್ನು ತಯಾರಿಸಿಕೊಳ್ಳುತ್ತಾರೆ. ಉದಾಹರಣೆಗೆ, ಮೊಲ, ಉಡ, ಪಕ್ಷಿಗಳನ್ನು ಬೇಟೆಯಾಡಲು ಅವಶ್ಯಕವಾದ ರವಾ ಗುಂಡುಗಳನ್ನು ಇವರು ತಯಾರಿಸುವ ಕ್ರಮ ಈ ರೀತಿಯಾಗಿದೆ.

ಸೀಸವನ್ನು ಕಾಯಿಸಿ ಅದು ರಸವಾಗುವಂತೆ ಮಾಡಿಕೊಳ್ಳುತ್ತಾರೆ. ಚಿಕ್ಕ ಚಿಕ್ಕ ರಂಧ್ರಗಳಿರುವ ಕಬ್ಬಿಣದ ಜರಡಿಯನ್ನು ಒಂದು ಅಗಲವಾದ ಪಾತ್ರೆಯ ಮೇಲೆ ಇಟ್ಟಿರುತ್ತಾರೆ. ಎಮ್ಮೆ ಸೆಗಣಿಯನ್ನು ನೀರಿನೊಂದಿಗೆ ಕಲಸಿ ರಾಡಿ ಮಾಡಿಕೊಂಡು ಅದನ್ನು ಪಾತ್ರೆಯಲ್ಲಿ ಹಾಕಿರುತ್ತಾರೆ. ರಸವಾದ ಸೀಸವನ್ನು ಜರಡಿಗೆ ಸುರಿದು ಅದರೊಳಗಿನ ಲೋಹದ ರಸ ಸೆಗಣಿ ರಾಡಿಗೆ ಬೀಳುವಂತೆ ಜರಡಿಯನ್ನು ಅಲುಗಾಡಿರುತ್ತಾರೆ. ಈ ರೀತಿಯಾಗಿ ಮಾಡುವುದರಿಂದ ಚಿಕ್ಕ ಚಿಕ್ಕ ರವೆಗಳು ತಯಾರಾಗುತ್ತವೆ. ಇವುಗಳನ್ನು ನಂತರ ಸೆಗಣಿ ರಾಡಿಯಿಂದ ತೆಗೆದು ತೊಳೆದ ನಂತರ ಬೇಟೆಯಾಡಲು ಉಪಯೋಗಿಸುತ್ತಾರೆ. ಇದಲ್ಲದೆ ಮಾರುಕಟ್ಟೆಯಲ್ಲಿ ಸಿಗುವ ಮಸಿ, ಗುಂಡುಗಳನ್ನು ಬೇಟೆಗಾಗಿ ಬಳಸುವುದನ್ನು ಕಾಣಬಹುದು. ನಾಡ ಕೋವಿ ಬಳಸಿ ಹಕ್ಕಿ, ಮೊಲ, ಮೀನುಗಳ ಬೇಟೆಯಾಡುವ ಇವರು ಕೇವಲ ತಮ್ಮ ಆಹಾರಕ್ಕಾಗಿ ಮಾತ್ರ ಇಂಥ ಕೋವಿಗಳನ್ನು ಬಳಸಿಕೊಳ್ಳುತ್ತಾರೆ. ಇತ್ತೀಚೆಗಿನ ಸರ್ಕಾರದ ಬಿಗಿ ಕ್ರಮದಿಂದಾಗಿ ನಾಡಕೋವಿಗಳ ತಯಾರಿಕೆ ಮತ್ತು ಬಳಕೆಗಳು ಇವರಿಂದ ದೂರವಾಗಿವೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು.

ಮೀನು ಬೇಟೆ: ಮಾಲ ಸಮುದಾಯದವರ ಪ್ರೀತಿಯ ಇನ್ನೊಂದು ಮಾಂಸಾಹಾರ ಮೀನು ಹಾಗೂ ಏಡಿಗಳಾಗಿವೆ. ತೆಳ್ಳಗೆ ಹರಿಯುವ ನೀರಿನಲ್ಲಿ ನಿಂತು ತಮ್ಮ ಸಮೀಪಕ್ಕೆ ಬರುವ ಮೀನನ್ನು ಕುಡುಗೋಲಿನಂತಹ ಆಯುಧಗಳನ್ನು ಉಪಯೋಗಿಸಿ ಹಿಡಿಯುತ್ತಾರೆ. ಸಾಮಾನ್ಯವಾಗಿ ಮಳೆಗಾಲದ ಸಂದರ್ಭದಲ್ಲಿ ಕೆರೆ ಕುಂಟೆಗಳಿಗೆ ಹೊಸ ನೀರು ಬರುವಾಗ ಮೀನುಗಳು ನೀರಿಗೆ ಎದುರು ಏರುತ್ತವೆ. ಇಂಥ ಸಂದರ್ಭಗಳನ್ನು ಉಪಯೋಗಿಸಿಕೊಂಡು ತಮ್ಮ ಆಯುಧಗಳನ್ನು ಬಳಸಿ ಮೀನು ಹಿಡಿಯುವುದನ್ನು ಕಾಣಬಹುದಾಗಿದೆ. ಏಡಿಗಳನ್ನು ನೀರಿರುವ ತಾವಿನಲ್ಲಿ ಗುದ್ದುಗಳಿಗೆ ಕೈಹಾಕಿ ಹಿಡಿಯುವುದಿದೆ. ಇಲ್ಲವೆ ಓತಿಕ್ಯಾತವನ್ನು ಬಡಿದು ಅದನ್ನು ಒಂದು ದಾರಕ್ಕೆ ಕಟ್ಟಿ ನೀರಿಗೆ ಇಳಿಬಿಡುವರು. ಓತಿಕ್ಯಾತದ ರಕ್ತದ ವಾಸನೆಗೆ ಬಂದು ಅದನ್ನು ಏಡಿಗಳು ಮುತ್ತುವವು. ಅದನ್ನು ದೂರ ಕುಳಿತು ನೋಡುತ್ತಿರುವ ಬೇಟೆಗಾರನು ಏಡಿಗಳು ಹೆಚ್ಚಿನ ಪ್ರಮಾಣದಲ್ಲಿ ಮುತ್ತಿದ ತಕ್ಷಣ ದಾರವನ್ನು ಮೇಲೆಳೆದುಕೊಂಡು ಅದಕ್ಕೆ ಮುತ್ತಿದ ಏಡಿಗಳನ್ನು ಹಿಡಿದುಕೊಳ್ಳುವನು. ಇದನ್ನು ಇವರು ಮಳಗಾಲದ ಸಂದರ್ಭದಲ್ಲಿ ತಮಗೆ ಸಮೀಪವಿರುವ ಕೆರೆ ನದಿಗಳಿಗೆ ಹೋಗಿ ಮೀನು ಹಿಡಿದುಕೊಂಡು ಬರುತ್ತಾರೆ ಈ ಬೇಟೆ ಕ್ರಮ ಇವರಲ್ಲಿ ಇಂದಗೂ ಇರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿ ಪಡೆಯಲಾಯಿತು.

ಗಾಣದ ಕ್ರಮ: ಕೊಂಡಿಯಾಕಾರದ ಲೋಹದ ಗಾಣಗಳನ್ನು ಸುಲಭವಾಗಿ ಹರಿಯಲು ಸಾಧ್ಯವಾಗದಂತಹ ನೈಲಾನ್ ದಾರಗಳಿಗೆ ಕಟ್ಟಿ, ಆ ದಾರದ ಇನ್ನೊಂದು ತುದಿಯನ್ನು ಉದ್ದನೆಯ ಕೋಲಿಗೆ ಕಟ್ಟಲಾಗುತ್ತದೆ.

(ಮೀನು) ಗಾಣದ ಕೊಂಡಿಗೆ ಎರೆ ಹುಳು, ಜಿಗಿಯಾದ ಹಸಿಹಿಟ್ಟು ಸಿಕ್ಕಿಸಿ (ಸಿಲುಕಿಸಿ) ನೀರಿಗೆ ದಾರವನ್ನು ಹರಿಯಬಿಡಲಾಗುತ್ತದೆ. ಆಹಾರದ ಆಸೆಗೆ ಬಂದ ಮೀನು ಕೊಂಡಿಗೆ ಸಿಕ್ಕಿಸಿದ ಆಹಾರ ತಿನ್ನುತ್ತಾ ಸುಲಭಕ್ಕೆ ಗಾಣದ ಕೊಂಡಿಗೆ ತಾನೇ ಸಿಕ್ಕಿ ಬೀಳುತ್ತದೆ. ಮೀನು ಗಾಣಕ್ಕೆ ಬಿದ್ದ ತಕ್ಷಣ ದಾರ ಜಗ್ಗಿದ ಅನುಭವ ಗಾಣ ಹೊಂದಿಸಿದ ಕೋಲಿನಿಂದ ಬೇಟೆಗಾರನಿಗೆ ತಿಳಿಯುತ್ತದೆ. ತಕ್ಷಣಕ್ಕೆ ಗಾಣವನ್ನು ಮೇಲೆಳೆದುಕೊಂಡು ಮೀನನ್ನು ಗಾಣದ ಕೊಂಡಿಯಿಂದ ಬಿಡಿಸಿಕೊಳ್ಳುತ್ತಾನೆ.

ದೊಡ್ಡ ದೊಡ್ಡ ಮೀನುಗಳನ್ನು ಹಿಡಿಯಬೇಕಾದ ಸಂದರ್ಭಗಳಲ್ಲಿ ಚಿಕ್ಕ ಮೀನುಗಳನ್ನು ಗಾಣದ ಕೊಂಡಿಗೆ ಸಿಕ್ಕಿಸಿ ನೀರಿಗೆ ಗಾಣವನ್ನು ಹಾಕುವುದುಂಟು. ಮೀನ ಮರಿಯನ್ನು ತಿನ್ನಲು ಬಂದ ದೊಡ್ಡ ಮೀನು ಸುಲಭಕ್ಕೆ ಗಾಣದ ಕೊಂಡಿಗೆ ಸಿಕ್ಕಿ ಬೀಳುತ್ತದೆ. ಮೀನುಗಳ ಗಾತ್ರಕ್ಕೆ ತಕ್ಕಂತೆ ಹಲವು ಗಾತ್ರದ ಗಾಣದ ಕೊಂಡಿಗಳು ಮಾರುಕಟ್ಟೆಗಳಲ್ಲಿ ಇಂದು ಸಿಗುತ್ತವೆ. ಅವುಗಳನ್ನೇ ಹೆಚ್ಚಾಗಿ ಉಪಯೋಗಿಸಲಾಗುತ್ತದೆ

ಕೂಳೆ ಕ್ರಮ: ಕೂಳೆಗಳಲ್ಲಿ ಎರಡು ಕ್ರಮ. ಒಂದು ದೊಡ್ಡ ಕೂಳೆ. ಇನ್ನೊಂದು ಚಿಕ್ಕ ಕೂಳೆ. ದೊಡ್ಡ ಕೂಳೆ ದೊಡ್ಡ ಮೀನುಗಳನ್ನು ಹಿಡಿಯಲು ಉಪಯೋಗಿಸಿದರೆ, ಚಿಕ್ಕ ಕೂಳೆಗಳನ್ನು ಚಿಕ್ಕ ಮೀನುಗಳನ್ನು ಹಿಡಿಯಲು ಉಪಯೋಗಿಸಲಾಗುತ್ತದೆ.

ಈ ಎರಡೂ ಕೂಳೆಗಳನ್ನು ಬಿದಿರಿನ ಕಡ್ಡಿಗಳನ್ನು ಉಪಯೋಗಿಸಿ ಮಾಡಲಾಗಿರುತ್ತದೆ. ಇಂತಹ ಕೂಳೆಗಳನ್ನು ಸ್ವತಃ ಬೇಟೆಗಾರನೇ ತಯಾರಿಸಿಕೊಳ್ಳುತ್ತಾನೆ. ಸುಲಭಕ್ಕೆ ಹರಿಯಲಾರದಂಥ ಗಟ್ಟಿಯಾದ ದಾರವನ್ನು ಬಿದಿರಿನ ಕಡ್ಡಿಗಳನ್ನು ಹೆಣೆಯಲು ಉಪಯೋಗಿಸಿಕೊಳ್ಳಲಾಗುತ್ತದೆ. ಈ ಕೂಳೆಗಳು ಮೀನನ್ನು ಸುಲಭವಾಗಿ ಹಿಡಿಯಲು ಸಹಕಾರಿಯಾಗುತ್ತವೆ.

ದೊಡ್ಡ ಕೂಳೆ: ಕೆರೆ ಕುಂಟೆ ಮುಂತಾದ ನಿಂತ ನೀರಿನಲ್ಲಿರುವ ದೊಡ್ಡ ಗಾತ್ರದ ಮೀನುಗಳನ್ನು ಹಿಡಿಯಲು ಈ ಕೂಳೆಯನ್ನು ಬಳಸಲಾಗುತ್ತದೆ. ಈ ಕೂಳೆಯೂ ದೊಡ್ಡಗಾತ್ರದ ಗೂಡೆಯಾಕಾರದಲ್ಲಿದ್ದು, ಕೆಳಭಾಗ ಅಗಲವಾಗಿಯೂ, ಮೇಲ್ಭಾಗ ಚಿಕ್ಕದಾಗಿಯೂ ಇರುತ್ತದೆ. ಇಂತಹ ಕೂಳೆಗಳನ್ನು ಕೈಯ್ಯಲ್ಲಿ ಹಿಡಿದು ಬೇಟೆಗಾರನು ನಿಶಬ್ಧವಾಗಿ ನೀರಿಗೆ ಇಳಿಯುತ್ತಾನೆ. ಮೀನು ತನ್ನ ಸಮೀಪಕ್ಕೆ ಬಂದುದನ್ನು ಗಮನಿಸಿದ ಆತನು ಮೀನನ್ನು ಮಧ್ಯ ಮಾಡಿಕೊಂಡು ನೀರಿನಲ್ಲಿ ಕೂಳೆಯನ್ನು ಆ ಕ್ಷಣಕ್ಕೆ ಡಬ್ಬಾಕಿರುತ್ತಾನೆ. ಈ ರೀತಿ ಮಾಡಿದ ತಕ್ಷಣ ಮೀನು ಕೂಳೆಯ ಕೂಳೆಯ ಮಧ್ಯಭಾಗದಲ್ಲಿ ಸಿಕ್ಕಿಬೀಳುತ್ತದೆ. ಒಂದು ಕೈಯಿಂದ ಕೂಳೆಯನ್ನು ಒತ್ತಿ ಹಿಡಿದು ಇನ್ನೊಂದು ಕೈಯಿಂದ ನೀರಿನಿಂದ ಮೀನನ್ನು ಎತ್ತಿಕೊಂಡು ತನ್ನ ಜೋಳಿಗೆಗೆ ಹಾಕಿಕೊಳ್ಳುತ್ತಾನೆ.

ಚಿಕ್ಕ ಕೂಳೆ: ಚಿಕ್ಕ ಮೀನಿನ ಕೂಳೆಯನ್ನು ಸಾಮಾನ್ಯವಾಗಿ ಸಣ್ಣಗೆ ಹರಿಯುವ ಹಳ್ಳ, ಕೆರೆಯ ಕೋಡಿಗಳಿಗೆ ಅಡ್ಡಲಾಗಿ ಇಡಲಾಗುತ್ತದೆ. ಈ ಕೂಳೆಯೂ ಸಹ ಬಿದಿರು ಕಡ್ಡಿ ಮತ್ತು ದಾರಗಳಿಂದ ತಯಾರಿಸಿದುದಾಗಿದ್ದು, ಎರಡು ಭಾಗಗಳನ್ನು ಈ ಕೂಳೆ ಒಳಗೊಂಡಿರುತ್ತದೆ. ಆ ಎರಡು ಭಾಗಗಳನ್ನು ಸೇರಿಸಿ ಬಿಗಿಯಾಗಿ ಕಟ್ಟವಾಗಿರುತ್ತದೆ.

ಕೂಳೆಯ ಮೊದಲ ಭಾಗ ಮೀನು ಕೂಳೆಯ ಒಳ ಹೋಗಲು ಸಹಕಾರಿಯಾದರೆ, ಅದರ ಹಿಂಭಾಗ ಕೂಳೆಗೆ ಬಿದ್ದ ಮೀನುಗಳನ್ನು ಸಂಗ್ರಹಿಸಿಕೊಳ್ಳಲು ಸಹಕಾರಿಯಾಗಿರುತ್ತದೆ.

ಸಣ್ಣಗೆ ಹರಿಯುವ ನೀರಿಗೆ ಅಡ್ಡಲಾಗಿ ಕೂಳೆಗಳನ್ನು ಇಟ್ಟು ಅದು ನೀರಿನೊಂದಿಗೆ ಹರಿದು ಹೋಗದಂತೆ ಎರಡೂ ಮಗ್ಗಲೂ ಮಣ್ಣು ಇತ್ಯಾದಿಗಳನ್ನು ಹಾಕಿ ಭದ್ರ ಮಾಡಿರುತ್ತಾರೆ. ಹರಿಯುವ ನೀರು ಈ ಕೂಳೆಯ ಮೂಲಕವೇ ಹರಿಯುವಂತೆ ಮಾಡಿ ಇಡುವುದರಿಂದ ಹರಿಯುವ ನೀರಿನೊಂದಿಗೆ ಹೋಗುವ ಮೀನುಗಳು ಸುಲಭವಾಗಿ ಈ ಕೂಳೆಗಳಲ್ಲಿ ಸಿಕ್ಕಿ ಬೀಳುತ್ತವೆ. ಈ ರೀತಿ ಸಿಕ್ಕಿ ಬಿದ್ದ ಮೀನುಗಳಿಗೆ ಮರಳಿ ಬರಲು ದಾರಿ ತಿಳಿಯದೆ ಅವುಗಳು ಕೂಳೆಯ ಹಿಂಭಾಗದಲ್ಲಿ ಸಂಗ್ರಹವಾಗುತ್ತಾ ಹೋಗುತ್ತವೆ. ಇಂಥ ಕೂಳೆಗಳನ್ನು ಸಾಯಂಕಾಲ ನೀರಿಗೆ ಇಟ್ಟು ಮಾರನೆಯ ಬೆಳಿಗ್ಗೆ ಕೂಳೆಯನ್ನು ತೆಗೆಯಲಾಗುತ್ತದೆ. ತೆಗೆದ ಕೂಳೆಯಿಂದ ಮೀನನ್ನು ಬೇರ್ಪಡಿಸಿ ನಂತರ ಅದನ್ನು ಆಹಾರವಾಗಿ ಬಳಸಲಾಗುತ್ತದೆ.

ಉರುಲು ಕ್ರಮ: ಬೆಳವ, ಕೌಜುಗ, ಕಾಡುಕೋಳಿ ಮುಂತಾದ ಪಕ್ಷಿಗಳನ್ನು ಹಿಡಿಯಲು ಉರುಲು ಕ್ರಮವನ್ನು ಬಳಸಲಾಗುತ್ತದೆ. ಸಾಮಾನ್ಯವಾಗಿ ಪಕ್ಷಿಗಳ ಗೂಡಿನ ಮುಂಭಾಗಕ್ಕೆ ಉರುಳನ್ನು ಕಟ್ಟಿ ಪಕ್ಷಿಗಳನ್ನು ಹಿಡಿಯಲಾಗುತ್ತದೆ. ಕುದುರೆಯ ಬಾಲದ ಕೂದಲಿನಿಂದ ತಯಾರಿಸಿದ ಉರುಲನ್ನು ಗೂಡಿರುವ ಭಾಗದ ಮರದ ಮುಂಭಾಗಕ್ಕೆ ಕಟ್ಟಿ ಮಧ್ಯಕ್ಕೆ ಒಂದು ಚಿಕ್ಕ ಕಡ್ಡಿಯನ್ನು ಇಡಲಾಗಿರುತ್ತದೆ. ಬೇಟೆಗಾರ ಒಡ್ಡಿದ ಉರುಳನ್ನು ಪಕ್ಷಿ ಹಾದು ಹೋಗುವಾಗ ಸಿಡಿ ಸಿಡಿದು ಪಕ್ಷಿ ಉರುಳಿಗೆ ಸಿಕ್ಕಿ ಬೀಳುತ್ತದೆ.

ಇತ್ತೀಚೆಗೆ ಕಾಡಿನ ನಾಶ, ಹಾಗೆಯೇ ನಗರಗಳ ಸಂಪರ್ಕಕ್ಕೆ ಹೆಚ್ಚಾಗಿ ಬಂದಿರುವ ಮಾಲ ಸಮುದಾಯದವರಲ್ಲಿ ಕ್ರಮೇಣವಾಗಿ ಬೇಟೆಯಾಡುವ ಪ್ರಮಾಣ ಕಡಿಮೆಯಾಗತೊಡಗಿದೆ. ಆದರೂ ಸಹ ಬೆರಳೆಣಿಕೆಯಷ್ಟು ಮಾಲ ಸಮುದಾಯದವರು ಬೇಟೆಯ ಕಲೆಯನ್ನು ಇನ್ನು ಜೀವಂತವಾಗಿ ಉಳಿಸಿಕೊಂಡಿದ್ದಾರೆ. ಮಾಲ ಸಮುದಾಯದವರಿಗೆ ದಿನನಿತ್ಯವೂ ಮಾಂಸಹಾರ ಬೇಕೇ ಬೇಕು. ಮಾಂಸವಿಲ್ಲದ ಊಟ ಅವರಲ್ಲಿ ಇಲ್ಲವೆನ್ನುವಷ್ಟು ಕಡಿಮೆ ಪ್ರಮಾಣದಲ್ಲಿದೆ. ಆದ್ದರಿಂದ ಇವರು ಮಾಂಸವನ್ನು ತಿನ್ನಲಿಕ್ಕಾಗಿಯೇ ಇತ್ತೀಚೆಗೆ ಹೆಚ್ಚಾಗಿ ಕೋಳಿಗಳನ್ನು ಸಾಕಿಕೊಂಡಿದ್ದಾರೆ.

೪.೧೩. ಮಾಲ ಸಮುದಾಯ ಹಾಗೂ ಅವರ ಸಂಘಗಗಳು

ಯಾವುದೇ ಒಂದು ಸಮುದಾಯವು ಸಂಘಟನಾತ್ಮಕವಾಗಿಯೇ ಇರುತ್ತದೆ. ಸಂಘಟನಾತ್ಮಕವಾಗಿ ಇರುವುದರಿಂದಲೇ ಆ ಸಮುದಾಯದೊಳಗೆ ವಿಧಿ-ವಿಧಾನ, ಆಚರಣೆ, ಜಾತಿ, ರಿವಾಜು, ನಿಷೇಧ ಇತ್ಯಾದಿಗಳು ಸಕ್ರಮ ರೀತಿಯಲ್ಲಿ ನಡೆಯುತ್ತವೆ. ಮಾಲದಂತಹ ಜನಸಂಖ್ಯೆಯ ದೃಷ್ಟಿಯಿಂದ ಚಿಕ್ಕದಾದ ಸಮುದಾಯವು ತಮ್ಮ ರಕ್ಷಣೆಗಾಗಿ ಹೆಚ್ಚು ಸಂಘಟನಾತ್ಮಕವಾಗಿಯೇ ಇರುತ್ತವೆ. ಈ ರೀತಿಯ ಸಂಘಟನೆ ತನ್ನ ಸಮುದಾಯದ ಉಳಿವಿಗಾಗಿ ರಚನೆಗೊಂಡಿದ್ದಾಗಿರುತ್ತದೆ. ಅದರಾಚೆಗೂ ತನ್ನಂಥದೇ ಪರ ಸಮುದಾಯಗಳೊಂದಿಗೆ ಸ್ಪರ್ಧಾತ್ಮಕವಾಗಿ ಸಾಗುವ ಮೂಲಕ ತನ್ನ ಸಮುದಾಯಕ್ಕೆ ಸಾಮಾಜಿಕ ಸೌಲಭ್ಯಗಳನ್ನು ಪಡೆಯಬೇಕಾಗುತ್ತದೆ. ಪ್ರಜ್ಞಾವಂತಿಕೆ ಹೆಚ್ಚಿದಂತೆಲ್ಲಾ ಈ ರೀತಿಯ ಸಂಘಟನೆಗಳ

ಅವಶ್ಯಕತೆ ಇದ್ದೇ ಇರುತ್ತದೆ. ಯಾರೊಂದಿಗೆ ಸ್ಪರ್ಧಿಸುವ ಹುನ್ನಾರವಿರದಿದ್ದರೂ ಸರ್ಕಾರ ಕೊಡಮಾಡುವ ಸೌಲಭ್ಯಗಳನ್ನು ಪಡೆಯಲಾದರೂ ಸಂಘ-ಸಂಸ್ಥೆಗಳು, ಸಂಘಟನೆಗಳೂ ಅವಶ್ಯಕವಾಗಿದೆ. ಇದಕ್ಕೆ ಮಾಲ ಸಮುದಾಯವು ಹೊರತಲ್ಲ. ಸರ್ಕಾರದ ಸೌಲಭ್ಯಗಳನ್ನು ಪಡೆಯಲೋ ಅಥವಾ ತನ್ನ ರಕ್ಷಣೆಗೋ ಈ ರೀತಿಯ ಕೆಲವು ಸಂಘ ಸಂಸ್ಥೆಗಳನ್ನು ಮಾಲ ಸಮುದಾಯವು ಹುಟ್ಟುಹಾಕಿಕೊಂಡಿದೆ. ಈ ಸಂಘಟನೆಯ ಮೂಲಕ ಮಾಲ ಸಮುದಾಯವು ಎಷ್ಟರಮಟ್ಟಿಗೆ ಸೌಲಭ್ಯ ಪಡೆದಿದೆಯೋ ತಿಳಿಯಲಾರದಾದರೂ ಈ ಸಮಾಜದೊಳಗೆ ತನ್ನ ಇರುವಿಕೆಯನ್ನು ಸೂಚಿಸುವ ಕಾರ್ಯವನ್ನು ಮಾತ್ರ ಮಾಡಿದೆ ಎಂಬುದು ಮಾತ್ರ ಸತ್ಯ.

೪.೧೩.೧ ಅಲೆಮಾರಿ ಮಾಲ ಕ್ಷೇಮಾಭಿವೃದ್ಧಿ ಸಂಘಟನೆ-ಹುಬ್ಬಳ್ಳಿ

ಹುಬ್ಬಳ್ಳಿಯಲ್ಲಿ ವಾಸವಾಗಿರುವ ಮಾಲ ಸಮುದಾಯದ ಹಿರಿಯ ಸದಸ್ಯರು, ಯುವಕರು ಒಟ್ಟುಗೂಡಿ ಸಮುದಾಯದ ಸಭೆಯನ್ನು ಮಾಡಿ ಮತ್ತು ಪರಿಣಿತ ವ್ಯಕ್ತಿಗಳ ಸಹಾಯ, ಸಹಕಾರ ಮತ್ತು ಅವರುಗಳ ಮಾರ್ಗದರ್ಶನದ ಮೇರೆಗೆ ೨೦೦೭-೦೮ರಲ್ಲಿ ಅಲೆಮಾರಿ ಮಾಲ ಕ್ಷೇಮಾಭಿವೃದ್ಧಿ ಸಂಘಟನೆಯನ್ನು ಹುಬ್ಬಳ್ಳಿಯಲ್ಲಿ ಚಾಲನೆಗೆ ತಂದರು. ಈ ಸಂಘಟನೆಯಲ್ಲಿ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರನ್ನೊಳಗೊಂಡಂತೆ ೧೮ ಪ್ರಮುಖ ವ್ಯಕ್ತಿಗಳು ಈ ಸಂಘಟನೆಯ ರೂವಾರಿಗಳಾಗಿರುತ್ತಾರೆ. ಮಾಲ ಸಮುದಾಯದವರಿಗೆ ಮೋದಲು ಮಾಲ ಸಮುದಾಯದವರಿಗೆ ಯಾವುದೇ ಸಂಘಟನೆಯ ಅರಿವು ಇದ್ದಿರಲಿಲ್ಲ ಆದರೆ ಇತ್ತೀಚೆಗೆ ಆಧುನಿಕರಣಕ್ಕೊಳಪಟ್ಟು ನಗರದಲ್ಲಿದ್ದಂತಹ ಮಾಲ ಸಮುದಾಯದ ಸದಸ್ಯರು ಒಟ್ಟುಗೂಡಿ ಮಾತನಾಡಿಕೊಂಡು ತಮ್ಮ ಅಭಿಲಾಷೆಗಳನ್ನು ಈಡೆರಿಸಿಕೊಳ್ಳುವದರ ಸಲುವಾಗಿ ಸಂಘಟನೆಯನ್ನು ಕಟ್ಟಿಕೊಳ್ಳುವದರ ಮುಖಾಂತರ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಥಿತ್ಯಂತರವನ್ನು ಕಾಣಲು ಪ್ರಯತ್ನ ಪಡುತ್ತಿದ್ದಾರೆ.

೪.೧೩.೨ ಮಾಲ ಸಮುದಾಯ ಅಲೆಮಾರಿ ಅಭಿವೃದ್ಧಿ ಸಂಘ-ಕೊಪ್ಪಳ

ಕೊಪ್ಪಳದಲ್ಲಿ ವಾಸವಾಗಿರುವ ಮಾಲ ಸಮುದಾಯದ ಯುವಕರು, ಹಿರಿಯರು ಒಟ್ಟುಗೂಡಿ ತಮ್ಮ ಸಮುದಾಯದ ಹಿತದೃಷ್ಟಿಯಿಂದ ಅಲೆಮಾರಿ ಅಭಿವೃದ್ಧಿ ಸಂಘಟನೆಯನ್ನು ಹುಟ್ಟುಹಾಕಿರುವರು. ಈ ಸಂಘಟನೆಯ ಉದ್ದೇಶವೆನೆಂದರೆ ಮಾಲ ಸಮುದಾಯದವರ ಮೂಲಭೂತ ಸಮಸ್ಯೆಗಳನ್ನು ಹೋಗಲಾಡಿಸುವುದಾಗಿದೆ. ತಮ್ಮ ಸಮುದಾಯಕ್ಕೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಕಾಲಕಾಲಕ್ಕೆ ಸರಿಯಾದ ರೀತಿಯಲ್ಲಿ ತಲುಪುವಂತೆ ನೋಡಿಕೊಳ್ಳುವುದು, ಸರ್ಕಾರಿ ಅಧಿಕಾರಿಗಳು ಹಾಗೂ ಮಾಲ ಸಮುದಾಯದ ಮಧ್ಯದಲ್ಲಿ ಸೇತುವೆಯಾಗಿ ನಿಂತು ಸಮುದಾಯದ ಸಮಸ್ಯೆಗಳನ್ನು ಈಡೇರಿಸಿಕೊಳ್ಳುವ ಉದ್ದೇಶವೇ ಸಂಘಟನೆಯದ್ದಾಗಿದೆ. ಜೊತೆಗೆ ತಮ್ಮ ಸಮುದಾಯದೊಳಗೆ ಇರುವ ಅನಿಷ್ಠ ಪದ್ಧತಿಗಳನ್ನು ದೂರಮಾಡಿ ಮಾಲ ಸಮುದಾಯದ ವ್ಯಕ್ತಿಗಳ ಏಳ್ಗೆಯನ್ನು ಈ ಸಂಘಟನೆ ಗುರಿಯಾಗಿಸಿಕೊಂಡಿದೆ.

ಈ ಸಂಘಟನೆಗಳಲ್ಲದೆ ಮಾಲ ಸಮುದಾಯದ ಜನ ತಮ್ಮ ಕಲೆಯ ಉಳಿವಿಗಾಗಿ ಹಾಗೂ ಸಮುದಾಯದ ಮುಂದಿನ ಪೀಳಿಗೆಗೆ ಕಲೆಯನ್ನು ಮುಂದುವರೆಸಿಕೊಂಡು ಹೋಗಲು ಪ್ರೇರಣೆ

ನೀಡುವ ಉದ್ದೇಶದಿಂದ ಕೆಲವು ಕಲಾ ಸಂಘಟನೆಗಳನ್ನೂ ಹುಟ್ಟುಹಾಕಿಕೊಳ್ಳಲಾಗಿದೆ. ಇಂತಹ ಒಂಭತ್ತು ಕಲಾ ಸಂಘಗಳು ಕರ್ನಾಟಕದಲ್ಲಿರುವುದಾಗಿ ಮಾಲಾ(ಪರ್ವತ ಮಲ್ಲಯ್ಯ) ಸಮುದಾಯದ ಮಾಹಿತಿದಾರರು ತಿಳಿಸಿದರು. ಅವುಗಳ ವಿವರ ಈ ಕೆಳಗಿನಂತಿದೆ.

೪.೧೩.೩ ಮಾಲ ಸಮುದಾಯದ ಕಲಾವಿದರ ವಿವಿಧ ಸಂಘಗಳು

ಮಾಲ ಸಮುದಾಯದವರು ತಮ್ಮ ಯೋಧರ ಸಾಹಸ ಚಟುವಟಿಕೆಗಳನ್ನೇ ಪ್ರದರ್ಶನ ಕಲೆಯಾಗಿ ಮಾರ್ಪಡಿಸಿಕೊಂಡು ಅವನ್ನು ಪ್ರದರ್ಶನ ಮಾಡುತ್ತ ಭಿಕ್ಷಾಟನೆ ಮಾಡುತ್ತಿದ್ದರು. ಪ್ರಸ್ತುತ ಭಿಕ್ಷಾಟನೆ ನಿಷೇಧಗೊಂಡಿರುವುದರಿಂದ ಈ ಪ್ರದರ್ಶನ ಕಲೆಯನ್ನು ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಪ್ರದರ್ಶನ ನೀಡಲು ಬಳಕೆ ಮಾಡಿಕೊಳ್ಳುತ್ತಿರುವರು. ಯಾವುದೇ ಒಂದು ಸಂಘದ ಹೆಸರಿರದೇ ಇದ್ದರೆ ಸರ್ಕಾರಿ ಸಂಸ್ಥೆಗಳಾಗಲೀ ಅಥವಾ ಸರ್ಕಾರೇತರ ಸಂಸ್ಥೆಗಳಾಗಲಿ ತಮ್ಮನ್ನು ಗುರುತಿಸಲಾರವು ಎನ್ನುವ ತಿಳುವಳಿಕೆಯನ್ನು ಪರರಿಂದ ಪಡೆದು ಮಾಲ ಸಮುದಾಯದ ಕಲಾವಿದರ ಸಂಘಗಳನ್ನು ಪ್ರಾರಂಭಿಸಿರುವರು. ಇವರು ಸಾಮಾನ್ಯವಾಗಿ ಈ ಕೆಳಗಿನ ಹೆಸರಿನ ಕಲೆಯನ್ನು ಪ್ರದರ್ಶಿಸುವರು.

೧. ಸಮರ ಕಲೆ

೨. ಮುಳ್ಳಿನ ಚಕ್ರ ತಿರುಗಿಸುವ ಆಟ

೩. ನಾಗರ ಫಣಿ ಆಟ

೪. ಬೆಂಕಿ ನಾಗರ ಫಣಿ ಆಟ

೫. ಬೆಂಕಿ ಚಕ್ರದಾಟ

೬. ಬೆಂಕಿ ಚಕ್ರವನ್ನು ತಿರುಗಿಸುತ್ತಾ ಹಣೆಯಿಂದ ನಿಂಬೆಹಣ್ಣು ತುಂಡಾಗುವಂತೆ ಹೊಡೆಯುವ ಆಟ.

೭. ಒಂದು ಕೈ ಬೆರಳಿನಿಂದ ಚೆಂಡಿನ ಚಕ್ರ ತಿರುಗಿಸುವ ಆಟ.

೮. ಒಂದೇ ಕೈಯಿಂದ ಕಟ್ಟಿಗೆಯ ಕೋಲನ್ನು ತಿರುಗಿಸುವ ಆಟ.

೯. ಎರಡು ಕೈಯಲ್ಲಿ ಎರಡು ಬೆತ್ತದ ಕಟ್ಟಿಗೆಯನ್ನು ತಿರುಗಿಸುವ ಆಟ.

೧೦. ಒಂದು ಕಟ್ಟಿಗೆಯ ಎರಡು ತುದಿಗೆ ಬೆಂಕಿ ಹಚ್ಚಿ ಗರಗರನೆ ತಿರುಗಿಸುವ ಆಟ.

೧೧. ಒಂದು ಉದ್ದವಾದ ಕೋಲನ್ನು ಬರಿ ಕಾಲ್ ಕೆಳಗೆ ತಿರುಗಿಸುವ ಆಟ.

೧೨. ದಾಲ್ ಪಟದ ಆಟ.

೧೩. ಒಬ್ಬ ವ್ಯಕ್ತಿಯ ತಲೆಯ ಮೇಲೆ ತೆಂಗಿನಕಾಯಿ ಇಟ್ಟು ಒಂದೇ ಏಟಿಗೆ ಎರಡು ತುಂಡಾಗುವಂತೆ ಬೆತ್ತದಿಂದ ಹೊಡೆಯುವ ಆಟ.

೧೪. ಕತ್ತಿವರಸೆ

೧೫. ಬಾಯಿಯಲ್ಲಿ ಸೀಮೆಎಣ್ಣೆ ಹಾಕಿಕೊಂಡು ಬೆಂಕಿ ಹಚ್ಚಿ, ಬಾಯಿಯಿಂದ ಬೆಂಕಿ ಪ್ರದರ್ಶನದ ಆಟ.

೧೬. ರಾಜಮಹಾರಾಜರ ಕಾಲದಲ್ಲಿ ಆಡುವ ದಾಲ್‌ಪಟದ ಆಟ.

೧೭. ಕೀಲು ಕುದುರೆ ಆಟ.

೧೮. ಗೊಂಬೆಯಾಟ.

೧೯. (ನಿಚ್ಚಣಿಕೆ ಏರುವ ಆಟ) ಬೆಂಕಿ ಚಕ್ರವನ್ನು ತಿರುಗಿಸುತ್ತ ನಿಚ್ಚಣಿಕೆ(ಏಣಿ)ಏರುವ ಆಟ

೨೦. ಸಂಬಾಳ ಬಾರಿಸುವ ವಾದ್ಯ.

೨೧. ಕರಡಿ ಕುಣಿತದಾಟ

೨೨. ಒಬ್ಬ ವ್ಯಕ್ತಿಯ ಕಾಲಿನ ಇಮ್ಮಡಿಯ ಕೆಳಗೆ ಉಳ್ಳಗಡ್ಡಿ (ಇರುಳ್ಳಿ) ಇಟ್ಟು ಇನ್ನೊಬ್ಬ ವ್ಯಕ್ತಿ ಕತ್ತಿಯಿಂದ ಆಟ ಆಡುತ್ತಲೇ ಉಳ್ಳಾಗಡಿ ಎರಡು ತುಂಡಾಗುವಂತೆ ಕತ್ತರಿಸುವ ಆಟ

೨೩. ಆರು ಚಿಕ್ಕ ಪ್ಲೇಟ್ ಜೋಡಿಸಿರುವ ತಕ್ಕಡಿಯಲ್ಲಿ ಪ್ರತಿಯೊಂದು ಪ್ಲೇಟಿಗೂ ಒಂದೊಂದರಂತೆ ಆರು ಲಿಂಬೆಹಣ್ಣು ತಕ್ಕಡಿಯಲ್ಲಿಟ್ಟು ಲಿಂಬೆಹಣ್ಣು ಕೆಳಗೆ ಬೀಳದಂತೆ ತಕ್ಕಡಿಯನ್ನು ಗರಗರನೆ ತಿರುಗಿಸುವ ಆಟ.

೨೪.೧೨ ಸಂಬಾಳ (ಡ್ರಮ್‌ಸೆಟ್)ಗಳನ್ನು ಬಾರಿಸುವ ಆಟ

ಇವು ಮಾಲ ಸಮುದಾಯವರ ವಂಶಪಾರಂಪರ್ಯ ಆಟಗಳಾಗಿದ್ದು, ಪ್ರತಿಯೊಂದು ಸಂಘದವರು ಈ ೨೪ ಆಟಗಳನ್ನು ರೂಢಿಸಿಕೊಂಡು ವಿವಿಧ ಸಮಾರಂಭಗಳಲ್ಲಿ, ಅಹ್ವಾನಿತ ಸಮಾರಂಭಗಳಲ್ಲಿ, ಅಹ್ವಾನಿಕ ರಾಜಕೀಯ ಕಾರ್ಯಕ್ರಮಗಳಲ್ಲಿ ಪ್ರಮುಖ ವ್ಯಕ್ತಿಯ ಜಯಂತೋತ್ಸವದಲ್ಲಿ, ದೊಡ್ಡ ದೊಡ್ಡ ಜಾತ್ರೆಗಳಲ್ಲಿ, ಅಹ್ವಾನಿತ ಮದುವೆ ಕಾರ್ಯಕ್ರಮಗಳಲ್ಲಿ, ಮೈಸೂರು ದಸರಾ ಜಂಬೂ ಸವಾರಿಯಲ್ಲಿ, ಸ್ಥಳೀಯ ಜಾತ್ರಾ ಮಹೋತ್ಸವದಲ್ಲಿ, ಕುಂಭಮೇಳದಲ್ಲಿ, ಉದ್ಘಾಟನಾ ಸಮಾರಂಭಗಳಲ್ಲಿ ಭಾಗಿಯಾಗಿ ತಮ್ಮ ವಂಶಪಾರಂಪರ್ಯ ಪ್ರದರ್ಶನ ಕಲೆಗಳನ್ನು ಆಡುತ್ತಾರೆ. ಈ ಎಲ್ಲಾ ಆಟಗಳನ್ನು ಕೆಳಗಿನ ೯ ಸಂಘದಲ್ಲಿದ್ದಂತಹ ಸದಸ್ಯರು ಪರಿಪೂರ್ಣವಾಗಿ ಆಡುತ್ತಾರೆ ಮತ್ತು ಮಾಲ ಸಮುದಾಯದವರು ಆಡುವ ಪ್ರದರ್ಶನ ಕಲೆಗಳಿಗೆ ಮೆಚ್ಚಿ ಮೈಸೂರಿನ ದಸರಾ ೨೦೧೬ ಜಂಬೂ ಸವಾರಿಯಲ್ಲಿ ಪ್ರಥಮ ಬಹುಮಾನವನ್ನು ನೀಡಿದ್ದಾರೆ. ಬೇರೆ ಬೇರೆ ರಾಜ್ಯಗಳಿಗೂ ಸಹ ಆಹ್ವಾನಿತ ಕಾರ್ಯಕ್ರಮಗಳಿಗೆ ಹೋಗಿ ತಮ್ಮ ಕಲೆಗಳನ್ನು ಪ್ರದರ್ಶಿಸುತ್ತಾರೆ. ಈ ಎಲ್ಲಾ ಆಟಗಳಿಂದ ತಮ್ಮ ಜೀವನ ನಿರ್ವಹಣೆ ಮಾಡಿಕೊಂಡು ಆರ್ಥಿಕ ಸಮಸ್ಯೆಯನ್ನು ನಿಭಾಯಿಸಿಕೊಳ್ಳಲು ತಾವು ವಾಸವಿದ್ದ ಬೇರೆ ಬೇರೆ ಸ್ಥಳದಲ್ಲಿ ಸಂಘವನ್ನು ಚಾಲನೆಗೆ ತಂದಿದ್ದಾರೆ. ಪ್ರತಿಯೊಂದು ಸಂಘದಲ್ಲಿ ೧೫-೨೦ ಜನರು ಸದಸ್ಯರು ಇರುತ್ತಾರೆ. ಒಂದು ಸಂಘದಲ್ಲಿದ್ದ ಸದಸ್ಯರು ಇನ್ನೊಂದು ಸಂಘದಲ್ಲಿ ಇರುವಂತಿಲ್ಲ. ಪ್ರತಿಯೊಂದು ಸಂಘದವರು ಸಹ ಮೇಲಿನ ೨೪ ಆಟಗಳನ್ನು ರೂಢಿಸಿಕೊಂಡು ರಾಜ್ಯ-ರಾಜ್ಯಗಳಿಗೆ ದೊಡ್ಡ ದೊಡ್ಡ ಕಾರ್ಯಕ್ರಮಗಳಿಗೆ ಹೋಗಿ ತಮ್ಮ ವಂಶಪಾರಂಪರ್ಯ ಕಲೆಗಳನ್ನು ಪ್ರದರ್ಶಿಸುತ್ತಾರೆ. ಟಿವಿ ಕಾರ್ಯಕ್ರಮ ಮಜಾ ಟಾಕೀಸ್‌ಗೂ ಹೋಗಿ ತಮ್ಮ ಜಾನಪದೀಯ ಕಲೆಗಳನ್ನು ಪ್ರದರ್ಶಿಸಿದ್ದಾರೆ.

ಸಂಘಗಳು ಮಾಲ ಸಮುದಾಯದವರು ಚಾಲನೆಗೆ ತಂದ ಸಂಘಟಗಳು

೧. ಶ್ರೀ ಆದಿಶಕ್ತಿ ಮಾಲ ಜಾನಪದ ಕಲಾವಿದರ ಸಂಘ-ಹುಬ್ಬಳ್ಳಿ(೨೦೧೩)

೨. ಶ್ರೀಮಲ್ಲಿಕಾರ್ಜುನ ಮಾಲ ಅಲೆಮಾರಿ ದಾಲಪಟ ಕಲಾವಿದರ ಸಂಘ-ಹುಬ್ಬಳ್ಳಿ(೨೦೧೧-೧೨)

೩. ಶ್ರೀ ಜಾನಪದ ಮಾಲ ಗೊಂಬೆ ಕುಣಿತ ಕಲಾವಿದರ ಸಂಘ-ಹುಬ್ಬಳ್ಳಿ(೨೦೧೪)

೪. ಚಾಮುಂಡೇಶ್ವರಿ ಮಾಲ ದಾಲಪಟ ಕಲಾವಿದರ ಸಂಘ-ಹುಬ್ಬಳ್ಳಿ(೨೦೧೬-೧೭)

೫. ಶ್ರೀಶೈಲಮಲ್ಲಿಕಾರ್ಜುನ ಮಾಲ ಸಾಹಸ ಜನಪದ ಅಲೆಮಾರಿ ಕಲಾವಿದರ ಸಂಘ-ಚಿಲಕಮುಖಿ, ಕೊಪ್ಪಳ ಜಿಲ್ಲೆ(೨೦೧೬)

೬. ಶ್ರೀ ಮಲ್ಲಿಕಾರ್ಜುನ ಮಾಲ ಅಲೆಮಾರಿ ಸಾಂಸ್ಕೃತಿಕ ಕಲಾವಿದರ ಸಂಘ(ರಿ)-ಕೊಪ್ಪಳ(೨೦೧೫-೧೬)

೭. ಶ್ರೀ ಮಲ್ಲಿಕಾರ್ಜುನ ಅಲೆಮಾರಿ ಡ್ರಮ್‌ಸೆಟ್ಸ್ ಕಲಾವಿದರ ಸಂಘ-ಕನಕಗಿರಿ(೨೦೧೫-೧೬)

೮. ಶ್ರೀ ದುರ್ಗಾಶಕ್ತಿ ಕಲಾವಿದರ ಸಂಘ-ಕನಕಗಿರಿ, ಕೊಪ್ಪಳ ಜಿಲ್ಲೆ(೨೦೧೭-೧೮)

೯. ಶ್ರೀ ಮಾರುತೇಶ್ವರ ಅಲೆಮಾರಿ ಕಲಾವಿದರ ಸಂಘ-ಕಲ್ ಅಬ್ಬಿಗೇರಿ(೨೦೧೫)

ಈ ರೀತಿಯ ಸಂಘಗಳನ್ನು ಮಾಲ ಸಮುದಾಯದವರು ತಮ್ಮ ಪ್ರದರ್ಶನ ಕಲೆಗಳನ್ನು ಉಳಿಸಿ ಬೆಳೆಸುವುದರ ಸಲುವಾಗಿ ಮತ್ತು ಆರ್ಥಿಕ ಅನುಕೂಲತೆ ಅಥವಾ ಹೊಟ್ಟೆ ಪಾಡಿಗಾಗಿ ಅವಲಂಬಿಸಿರುವ ವೃತ್ತಿ ಆಧಾರಕ ಕಲೆಗಳಿಗಾಗಿ ಮಾಲ ಸಮುದಾಯದವರು ತಾವು ವಾಸವಿರುವ ಹಳ್ಳಿ ಪಟ್ಟಣಗಳಲ್ಲಿ ತಮ್ಮ ಆರಾಧ್ಯ ದೇವರಿನ ಹೆಸರನ್ನು ಆಧರಿಸಿ ಸಂಘಗಳನ್ನು ಚಾಲನೆಗೆ ತಂದಿದ್ದಾರೆ. ಈ ಸಮುದಾಯದವರ ಆಟಗಳಿಗೆ ಅಥವಾ ವಂಶ ಪಾರಂಪರ್ಯ ಪ್ರದರ್ಶನ ಕಲೆಗಳಿಗೆ ಮೆಚ್ಚಿ ಅನೇಕ ವೇದಿಕೆಯಲ್ಲಿ ಬಹುಮಾನವನ್ನು ಕೊಟ್ಟು ಗೌರವಿಸಿದ್ದಾರೆ ಎಂದು ತಿಳಿಸಿದರು. ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಮಾಲ ಸಮುದಾಯದವರ ಪ್ರದರ್ಶನ ಕಲೆಗಳಿಗೆ ಮತ್ತು ಅವರ ಸಾಹಸಕ್ಕೆ ಮೆಚ್ಚಿ ವಿದ್ವಾಂಸರು ಪ್ರಶಸ್ತಿ ಪ್ರಮಾಣ ಪತ್ರ ಬಹುಮಾನ ಕೊಟ್ಟು ಗೌರವಿಸಿದ್ದಾರೆ. ಪ್ರತಿಯೊಂದು ಕಲಾವಿದರ ಪ್ರದರ್ಶನ ಸಂಘಕ್ಕೂ ಒಳ್ಳೆಯ ಪ್ರಾಶಸ್ತ್ಯ ದೊರಕುತ್ತದೆ. ಮತ್ತು ಅವರ ಪ್ರದರ್ಶನ ಕಲೆಗಳು ಭಿನ್ನ ಭಿನ್ನ ವಿಭಿನ್ನ ವಾಗಿರುತ್ತವೆ. ಊರಿನ ಜನರು, ನೋಡುಗರು ತಮ್ಮ ಕಲೆಗಳತ್ತ ಆಕರ್ಷಿಸುವಂತಿವೆ. ಮಾಲ ಸಮುದಾಯದ ಯುವಕರು ತಮ್ಮ ವಂಶಪಾರಂಪರ್ಯ ಕಲೆಯನ್ನು ಬೆಳಸಿಕೊಂಡು ಹೋಗಲು ಶ್ರಮಿಸುವುದಲ್ಲದೆ ತಮ್ಮ ಮಕ್ಕಳಿಗೂ ಸಹ ವಂಶಪಾರಂಪರ್ಯ ಪ್ರದರ್ಶನ ಕಲೆಗಳನ್ನು ಕಲಿಸಿಕೊಡುತ್ತಿದ್ದಾರೆ. ಪ್ರತಿಯೊಂದು ಮಾಲ ಸಮುದಾಯದ ಕುಟುಂಬದಲ್ಲಿ ಇಬ್ಬರಾದರೂ ತಮ್ಮ ಪ್ರದರ್ಶನ ಆಟಗಳನ್ನು ಆಡುವುದನ್ನು ಕಲಿತುಕೊಂಡಿರುತ್ತಾರೆ.

ಮಾಲ ಸಮುದಾಯದವರು ತಮ್ಮ ವಂಶಪರಾಂಪರಿಕ ಕಲೆಗಳನ್ನು ಆಡಲು ಮತ್ತು ತಮ್ಮ ಕಲೆಗಳನ್ನು ಗುರುತಿಸಿಕೊಳ್ಳುವ ಸಲುವಾಗಿ ಇತ್ತೀಚೆಗೆ ಇವರು ಸಂಘಗಳನ್ನು ಜಾರಿಗೆ ತಂದಿದ್ದಾರೆ.

ಆದರೆ ಮೊದಲು ಇವರು ಯಾವುದೇ ಸಂಘಗಳನ್ನು ಕಟ್ಟಿಕೊಂಡಿದ್ದಿಲ್ಲ ಸದಾ ಅಲೆಮಾರಿಯಾದ ಇವರಿಗೆ ಯಾವುದೇ ಸಂಘ ಮತ್ತು ಸಂಘಟನೆಗಳ ಅರಿವು ಇವರಿಗೆ ಇದ್ದಿರಲಿಲ್ಲ. ಆದರೆ ಇವರು ಇತ್ತೀಚೆಗೆ ಸಂಘಗಳನ್ನು ಕಟ್ಟಿಕೊಳ್ಳುವದರ ಮೂಲಕ ಸಾಮಾಜಿಕ ಸ್ಥಿತ್ಯಂತರವನ್ನು ಕಾಣಲು ಪ್ರಯತ್ನಿಸುತ್ತಿದ್ದಾರೆ.

೪.೧೩.೪ ತಮ್ಮ ಪ್ರದರ್ಶನ ಕಲೆಗಳ ಬಗೆಗೆ ಮಾಲ ಸಮುದಾಯದವರ ಅಭಿಪ್ರಾಯ

ಮಾಲ ಸಮುದಾಯದವರು ಆಡುವ ಪ್ರದರ್ಶನ ಕಲೆಗಳು ಆರ್ಥಿಕ ಬೆನ್ನೆಲುಬುಗಳಾಗಿವೆ. ಅವರ ಜೀವನಾಧಾರಕಗಳಾಗಿವೆ. ಪ್ರದರ್ಶನ ಕಲೆಗಳೇ ನಮಗೆ ಆಸ್ತಿ ಇದ್ದಂತೆ ಎಂದು ಹೇಳುತ್ತಾರೆ. ಮಾಲ ಸಮುದಾಯದವರು ತಮ್ಮ ವಂಶಪಾರಂಪರ್ಯ ಕಲೆಗಳನ್ನು ಉಳಿಸಿಕೊಂಡು ಹೋಗಲು ಪ್ರಯತ್ನಪಡುತ್ತಾರೆ. ನೋಡುಗರ ಕಣ್ಮನ ಸೆಳೆಯುವ ಸಮರ ಕಲೆ, ಕತ್ತಿವರಸೆ, ದಾಲ್‌ಪಟದ ಆಟ, ಪ್ರದರ್ಶನ ವೇಳೆ ಆಕಸ್ಮಿಕ ಅವಘಡ ಸಂಭವಿಸಿದರೆ ಜೀವನಕ್ಕೆ ಅಪಾಯ ಬಂದೆಸಗುವ ಸಾಧ್ಯತೆ ಇದೆ. ಲಾಠಿ, ಚಕ್ರದಾಟ, ಬೆಂಕಿ ಚಕ್ರದಾಟ, ಮುಳ್ಳಿನ ಚಕ್ರದಾಟ, ಚೆಂಡಿನ ಚಕ್ರದಾಟದ ಪ್ರದರ್ಶನ ವೇಳೆ ಪಕ್ಕದಲ್ಲಿ ಯಾರಾದರೂ ವ್ಯಕ್ತಿಗಳು ನಿಂತಿದ್ದರೆ ಅವರಿಗೆ ತಾಗಿದರೆ ಗಾಯಗಳಾಗುವ ಸಾಧ್ಯತೆಗಳಿವೆ. ಮತ್ತು ಒಬ್ಬ ವ್ಯಕ್ತಿಯ ತಲೆಯ ಮೇಲೆ ತೆಂಗಿನಕಾಯಿ ಇಟ್ಟು ಇನ್ನೊಬ್ಬ ವ್ಯಕ್ತಿ ಲಾಟಿಯನ್ನು ತಿರುಗಿಸುತ್ತ ತೆಂಗಿನಕಾಯಿಯನ್ನು ಎರಡು ತುಂಡಾಗುವಂತೆ ಹೊಡೆಯುವಾಗ ಆಕಸ್ಮಿಕ ಕೋಲು ತಲೆಗೆ ತಾಗಿದರೆ ತಲೆ ಹೊಡೆದು ಹೋಗುವ ಸಾಧ್ಯತೆ ಇರುತ್ತದೆ. ಮತ್ತು ಕುತ್ತಿಗೆಯ ಮೇಲೆ ವೀಳ್ಯದೆಲೆ, ಸೌತೆಕಾಯಿ ಇಟ್ಟು ಕತ್ತಿಯಿಂದ ಆಡುತ್ತಾ ವೀಳ್ಯದೆಲೆ ಸೌತೆಕಾಯಿ ಎರಡು ತುಂಡಾಗುವಂತೆ ಕತ್ತರಿಸಬೇಕು. ಅದನ್ನು ಸಹ ಆಡುವಾಗ ಕುತ್ತಿಗೆಗೆ ಕತ್ತಿ ತಾಗಿದರೆ ಅಪಾಯವಾಗುವ ಸಾಧ್ಯತೆ ಇರುತ್ತದೆ. ಇಮ್ಮಡಿಯ ಕೆಳಗೆ ಲಿಂಬೆಹಣ್ಣು ಅಥವಾ ಉಳ್ಳಾಗಡ್ಡಿ ಇಟ್ಟು ಕತ್ತಿಯಿಂದ ಆಡುತ್ತಲೆ ಉಳ್ಳಾಗಡ್ಡಿ ಎರಡು ತುಂಡಾಗುವಂತೆ ಕತ್ತಿಯಿಂದ ಕತ್ತರಿಸಬೇಕು, ಅದು ಕೂಡ ಅಪಾಯಕಾರಿ ಆಟವಾಗಿದೆ. ಮಾಲ ಸಮುದಾಯದವರು ಅತ್ಯಂತ ಅಪಾಯಕಾರಿ ಆಟಗಳನ್ನು ಆಡುತ್ತಾರೆ. ಮಾಲ ಸಮುದಾಯದವರು ಹೇಳುವ ಪ್ರಕಾರ ನಾವು ಆಡುವ ಪ್ರದರ್ಶನ ಕಲೆಗಳು ಅತ್ಯಂತ ಕಠಿಣಮಯವಾಗಿದ್ದು, ಬಹಳ ಅಪಾಯಕಾರಿ ಆಟಗಳು ಆಗಿವೆ. ಆದರೂ ಆ ಪ್ರದರ್ಶನ ಕಲೆಗಳನ್ನು ಸುಲಭವಾಗಿ ಏನು ಅಪಾಯಕಾರಿಯಾಗದಂತೆ ಆಡುತ್ತೇವೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು. ಇತ್ತೀಚೆಗೆ ಮಜಾ ಟಾಕಿಸ್, ಟಿವಿ ಮಾಧ್ಯಮದಲ್ಲಿ ತಮ್ಮ ಪ್ರದರ್ಶನ ಕಲೆಗಳ ಆಟಗಳನ್ನು ಆಡಿ ಪ್ರಶಸ್ತಿ ಬಹುಮಾನಗಳನ್ನು ಪಡೆದುಕೊಂಡು ಬಂದಿದ್ದೇವೆ ಎಂದು ತಿಳಿಸಿದರು.

ಮಾಲ ಸಮುದಾಯದ ಕಲಾವಿದರ ಸಂಘಗಳದವರು ಹಮ್ಮಿಕೊಂಡ ಜಾನಪದ ಉತ್ಸವ

ಶ್ರೀ ಮಲ್ಲಿಕಾರ್ಜುನ ಅಲೆಮಾರಿ ದಾಲಪಟ ಕಲಾವಿದ ಸಂಘ(ರಿ), ಮಹಾಲಕ್ಷ್ಮಿ ಬಡಾವಣೆ, ಹುಬ್ಬಳಿಯಲ್ಲಿ ವಾಸವಾಗಿದ್ದ ಮಾಲ ಸಮುದಾಯದ ಸಂಘದವರು ಸೇರಿಕೊಂಡು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಹಕಾರ ಹಾಗೂ ಸಹಯೋಗದೊಂದಿಗೆ ಜಾನಪದ ವಾರ್ಷಿಕೋತ್ಸವವನ್ನು ಪ್ರತಿವರ್ಷ ಕಲಾವಿದರು ಹಮ್ಮಿಕೊಳ್ಳುತ್ತಾರೆ. ಪ್ರತಿ ವರ್ಷ ಕನ್ನಡ ಮತ್ತು

ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಹುಬ್ಬಳ್ಳಿಯ ಗೊಕನಕೊಪ್ಪದ ಪದವಿಪೂರ್ವ ಕಾಲೇಜು ಆವರಣದಲ್ಲಿ ನಡೆಸುತ್ತಾರೆ. ಮಾಲ ಸಮುದಾಯದ ಸಂಘದ ಸದಸ್ಯರೆಲ್ಲರೂ ಸೇರಿಕೊಂಡು ಒಂದು ಅದ್ದೂರಿಯಾದ ವೇದಿಕೆಯನ್ನು ಸಿದ್ಧಪಡಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರತಿ ವರ್ಷ ವೇದಿಕೆಯ ಉದ್ಘಾಟಕರಾಗಿರುತ್ತಾರೆ. ಜಾನಪದ ಕಲೆ, ಜಾನಪದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಉತ್ಸವದಲ್ಲಿ ವಿವಿಧ ಜಿಲ್ಲೆಯ ಕಲಾವಿದರ ತಂಡಗಳಿಗೆ, ಪ್ರಮುಖ ವ್ಯಕ್ತಿಗಳಿಗೆ, ರಾಜಕೀಯ ಧುರೀಣರಿಗೆ, ಸರಕಾರಿ ಅಧಿಕಾರಿಗಳಿಗೆ ಆಮಂತ್ರಣ ಪತ್ರಿಕೆಯನ್ನು ಕಾರ್ಯಕ್ರಮವು ಒಂದು ವಾರ ಮುಂಚಿತವಾಗಿರುವಾಗಲೇ ಕೊಟ್ಟಿರುತ್ತಾರೆ. ಜಾನಪದ ಉತ್ಸವಕ್ಕೆ ಪ್ರತಿವರ್ಷ ಬೇರೆ ಬೇರೆ ಜಿಲ್ಲೆಯಿಂದ ೩೦ಕ್ಕೂ ಹೆಚ್ಚು ಕಲಾ ತಂಡಗಳು ಆಗಮಿಸಿ ತಮ್ಮ ಪ್ರದರ್ಶನ ಕಲೆಗಳನ್ನು ಪ್ರದರ್ಶಿಸಲು ಅನುಮತಿ ಮಾಡಿಕೊಡಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ಆಗಮಿಸಿದ ಬೇರೆ ಬೇರೆ ಜಿಲ್ಲೆಯ ಕಲಾವಿದರು ತಮ್ಮ ತಮ್ಮ ಜಾನಪದ ಆಟಗಳಾದ ಇವ್ವಾಳಿ, ಜಗ್ಗಲಿ ಮೇಳ, ಡೊಳ್ಳಿನ ಪದ, ಕರಡಿ ಮೇಳ, ಗಿಗಿಪದ, ಜನಪದ ಗೀತೆ, ಗಾಯನ, ಸುಡುಗಾಡು ಸಿದ್ಧರ ಆಟ, ದಾಲಪಟ, ಭಜನೆ, ಕುದುರೆ ಕುಣಿತ, ಸಂಗೀತ ಕಾರ್ಯಕ್ರಮಗಳು, ನೃತ್ಯ ಕಾರ್ಯಕ್ರಮಗಳು, ಪ್ರದರ್ಶನ ಕಾರ್ಯಕ್ರಮಗಳು, ಮರಗಾಲು ಕುದುರೆ ಕುಣಿತ, ಸಂಪ್ರದಾಯ ಪದಗಳು, ಮಹಿಳಾ ಡೊಳ್ಳುಕುಣಿತ, ಮಜಲು, ಝಾಂಜ್ ಮೇಳ, ದೈತ್ಯಕಾರದಗೊಂಬೆಗಳ ಮೆರವಣಿಗೆ, ಡೊಂಬರ ಆಟ, ಕವ್ವಾಲಿ ಆಟ, ಸಂಬಾಳ ಬಾರಿಸುವುದು, ಹಗಲು ವೇಷಗಾರರ ಆಟ, ಮಾಲ ಸಮುದಾಯದವರ ಪ್ರದರ್ಶನ ಕಲೆಗಳು ಸುಮಾರು ೩೦ ಕ್ಕೂ ಹೆಚ್ಚು ಕಲಾ ತಂಡಗಳು ಜಾನಪದೋತ್ಸವಕ್ಕೆ ಆಗಮಿಸಿ ಮೇಲಿನ ಎಲ್ಲಾ ಆಟಗಳ ಪ್ರದರ್ಶನ ಕಲೆಗಳನ್ನು ಆಡುತ್ತಾರೆ ಮತ್ತು ಬೇರೆ ಬೇರೆ ಜಾತಿ ಸಮುದಾಯಗಳ ಕಲಾವಿದರ ತಂಡಗಳಿಗೆ ವೇದಿಕೆಯ ಮೂಲಕ ಗಣ್ಯ ವ್ಯಕ್ತಿಗಳಿಂದ ಬಹುಮಾನ, ಪ್ರಶಸ್ತಿ, ಗೌರವ ಸನ್ಮಾನವನ್ನು ಹಮ್ಮಿಕೊಂಡಿರುತ್ತಾರೆ. ಬೃಹದಾಕಾರದ ವೇದಿಕೆಗೆ ಗಣ್ಯ ವ್ಯಕ್ತಿಗಳನ್ನು ಹುಬ್ಬಳ್ಳಿ ಭಾಗದ ಶಾಸಕರು, ಲೋಕಸಭಾ ಸದಸ್ಯರು, ಗಣ್ಯವ್ಯಕ್ತಿಗಳನ್ನು ಆಮಂತ್ರಿಸಿರುತ್ತಾರೆ. ಆ ವೇದಿಕೆಯಲ್ಲಿ ಜಿಲ್ಲೆಯ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ವೈದ್ಯರನ್ನು ಪ್ರಮುಖ ದೇಶಭಕ್ತರನ್ನು, ಮಿಲಿಟರಿ ಸಾಧಕರನ್ನು ಸಹಕಾರಿ ಪೊಲೀಸ್ ಅಧಿಕಾರಿಗಳನ್ನು, ಕಾರ್ಪೊರೇಟರ್‌ಗಳನ್ನು, ಸಮಾಜ ಸುಧಾರಕರನ್ನು, ಹಿರಿಯ ನಿವೃತ್ತ ಅಧಿಕಾರಿಗಳನ್ನು, ಮಹಾನ್ ಸಾಧಕರನ್ನು, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸುಮಾರು ೨೦ಕ್ಕೂ ಹೆಚ್ಚು ಗಣ್ಯವ್ಯಕ್ತಿಗಳನ್ನು ವೇದಿಕೆಯಲ್ಲಿ ಸನ್ಮಾನಿಸುತ್ತಾರೆ. ಜಾನಪದ ಉತ್ಸವಕ್ಕೆ ಆಗಮಿಸಿದ ಎಲ್ಲಾ ಕಲಾವಿದರ ತಂಡದವರಿಗೆ ಗಣ್ಯವ್ಯಕ್ತಿಗಳಿಗೆ ಸ್ಥಳೀಯ ಸದಸ್ಯರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಪ್ರತಿವರ್ಷ ಜಾನಪದ ಉತ್ಸವಕ್ಕೆ ಕಲಾವಿದರಿಗೆ ಸಹಾಯ ಧನವನ್ನು ನೀಡುತ್ತಾರೆ ಮತ್ತು ಸಾಹಿತ್ಯ ಕಾರ್ಯಕ್ರಮಗಳಿಗೆ ರಾಜ್ಯ ಸರಕಾರದಿಂದ ಗೌರವಧನ ಬರುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಲಾವಿದರ ಬಾಳಿಗೆ ಬೆಳಕಾಗಿ ಪ್ರೇರೆಪಿಸುತ್ತದೆ ಎಂಬ ಅಭಿಪ್ರಾಯವನ್ನು ಕಲಾವಿದರು ವ್ಯಕ್ತಪಡಿಸುತ್ತಾರೆ.

ಜಾನಪದ ಕಲೆ ಪ್ರದರ್ಶನಗಳನ್ನು ಬೆಳಸುವ ಉದ್ದೇಶದಿಂದ ಸತತವಾಗಿ ಪ್ರತಿವರ್ಷ ಜಾನಪದ ಉತ್ಸವವನ್ನು ಮಾಲ

ಸಮುದಾಯದವರು ಹಮ್ಮಿಕೊಳ್ಳುತ್ತಾರೆ. ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಉಳಿಸುವುದು ಈ ಸಮುದಾಯದವರ ಉದ್ದೇಶವಾಗಿದೆ ಎಂದು ಕ್ಷೇತ್ರಕಾರ್ಯದ ಮೂಲಕ ತಿಳಿಯಲಾಯಿತು.

ಮಾಲ ಸಮುದಾಯದ ಆರ್ಥಿಕ ಸಮಸ್ಯೆ ಮತ್ತು ಸ್ಥಿತ್ಯಂತರ.

ಮಾಲ ಸಮುದಾಯದ ಕೆಲವು ಕುಟುಂಬಗಳು ಆರ್ಥಿಕ ನಿರ್ವಹಣೆಗಾಗಿ ಕೆಲವು ಜನರು ವ್ಯಾಪಾರಿ ಉದ್ಯೋಗವನ್ನು ಅವಲಂಬಿಸಿದ್ದಾರೆ. ಅದರಲ್ಲಿ ಸ್ಟೇಷನರಿ ವ್ಯಾಪಾರವನ್ನು ಕೆಲವು ಮಹಿಳೆಯರು ಅವಲಂಬಿಸಿದ್ದಾರೆ. ಮೊದ ಮೊದಲಿಗೆ ಜಾತಿ ಆಧಾರದ ಮೇಲೆ ವೃತ್ತಿಗಳು ನಡೆಯುತ್ತಿದ್ದವು. ಆದರೆ ಈ ಆಧುನಿಕ ದಿನಮಾನಗಳಲ್ಲಿ ಪ್ರತಿಯೊಂದು ಬುಡಕಟ್ಟು ಸಮುದಾಯಗಳು ಕೂಡ ಸ್ಟೇಷನರಿಗಳನ್ನು ಸಾಮಾನುಗಳನ್ನು ಮಾರಾಟ ಮಾಡುತ್ತಾರೆ. ಅಷ್ಟೇ ಅಲ್ಲದೆ ಹಳ್ಳಿಯ ಮನೆ–ಮನೆಗಳಲ್ಲಿ ಅಂಗಡಿಗಳಲ್ಲಿ ಪಟ್ಟಣದ ಬಜಾರಗಳಲ್ಲಿ ಮುಂದುವರಿದ ಸಮುದಾಯಗಳು ಹಿಂದುಳಿದ ಸಮುದಾಯದವರು ಸಹ ಸ್ಟೇಷನರಿ ವ್ಯಾಪರವನ್ನು ಮಾಡುತ್ತಾರೆ. ಆದ್ದರಿಂದ ಸ್ಟೇಷನರಿ ಸಾಮಾನುಗಳನ್ನು ಕೊಂಡುಕೊಳ್ಳುವವರ ಸಂಖ್ಯೆ ಕಡಿಮೆಯಾಗಿದೆ. ಮಾಲ ಬುಡಕಟ್ಟು ಮಹಿಳೆಯರು ಊರೂರು ಅಲೆದು ಸ್ಟೇಷನರಿ ಸಾಮಾನುಗಳನ್ನು ಮಾರುತ್ತಾರೆ ದಿನಕ್ಕೆ ಅವರಿಗೆ ೩೦–೪೦ ರಂತೆ ಮಾತ್ರ ದಿನಗೂಲಿ ಸಿಗುವಂತಾಗಿದೆ. ಇದು ಕೂಡ ಒಂದು ಆರ್ಥಿಕ ಸಮಸ್ಯಗೆ ಕಾರಣವಾಗಿದೆ.

* ಇನ್ನು ಕೆಲವು ಕುಟುಂಬದ ಸದಸ್ಯರು ಇತ್ತೀಚೆಗೆ ಬಟ್ಟೆ ವ್ಯಾಪಾರವನ್ನು ಮಾಡುತ್ತಾರೆ. ಆದರೆ ಇಂದಿನ ಪ್ಯಾಶನ್ ಜಗತ್ತಿನಲ್ಲಿದ್ದ ಜನರು ಪಟ್ಟಣಗಳಲ್ಲಿ ಗಾರ್ಮೆಂಟ್ಸಗಳಲ್ಲಿ, ಮಕ್ಕಳಿಗೆ, ಸ್ತ್ರೀಯರಿಗೆ, ಪುರಷರಿಗೆ ವಿಧ ವಿಧವಾದ ಅತ್ಯಂತ ಸುಂದರವಾದ ಬಟ್ಟೆಗಳು ಸಿಗುವದರಿಂದ ಹಳ್ಳಿ ಜನರು ಪಟ್ಟಣಗಳಲ್ಲಿ ಸಿಗುವ ಬಟ್ಟೆಗಳನ್ನು ಧರಿಸುವುದರಿಂದ ಬಟ್ಟೆ ವ್ಯಾಪಾರ ಮಾಡುವ ಮಾಲ ಸಮುದಾಯದವರಿಗೆ ಅತಿಯಾಗಿ ನಿಗಧಿತ ಬೆಲೆಗಿಂತ ಕಡಿಮೆ ಬೆಲೆಗೆ ಜನರು ಬಟ್ಟೆಗಳನ್ನು ಕೇಳುತ್ತಾರೆ. ಆದ್ದರಿಂದ ಇವರಿಗೆ ಬಟ್ಟೆಗಳಲ್ಲಿ ಲಾಭವಾಗದೆ ದಿನಗೂಲಿ ಸಹಿತ ೩೦–೪೦ ರೂಪಾಯಿ ಸಿಗುತ್ತದೆ ಅದೇ ರೀತಿಯಾಗಿ ಕೆಲವು ಸದಸ್ಯರು ಕಾತಿಪಕ್ಕೆ ವ್ಯಾಪಾರವನ್ನು ಅವಲಂಬಿಸಿದ್ದು ಅದರಲ್ಲಿ ಕೂಡ ಬೇಡಿಕೆ ಕಡಿಮೆಯಾಗುತ್ತಿದ್ದರಿಂದ ಅದರಲ್ಲಿ ಕೂಡ ಆರ್ಥಿಕ ನಷ್ಟವಾಗುತ್ತಿದೆ. ಮಾಲ ಸಮುದಾಯದವರು ವಾಸ ಮಾಡುವ ಮನೆಗಳು ತುಂಬಾ ಕಡಿಮೆ ಇದ್ದು ಅವು ಬಹಳ ಚಿಕ್ಕದವುಗಳಾಗಿವೆ ಇತ್ತೀಚೆಗೆ ಕೆಲವೊಬ್ಬರಿಗೆ ಮಾತ್ರ ಆಶ್ರಯ ಯೋಜನಾ ಮನೆಗಳು ಇರುತ್ತವೆ. ಆದರೆ ಬಹಳಷ್ಟು ಜನ ಊರ ಹೊರಗೆ ಗುಡಿಸಲುಗಳನ್ನು ಅಥವಾ ಚಪ್ಪರವನ್ನು ಮತ್ತು ತಗಡನ್ನು ಬಡಿದುಕೊಂಡು ಜೀವನ ಸಾಗಿಸುತ್ತಿದ್ದಾರೆ. ಈ ಸಮುದಾಯದವರಿಗೆ ಸರಕಾರದಿಂದ ಬರುವ ಸವಲತ್ತುಗಳ ಬಗ್ಗೆ (ಗೊತ್ತು) ಅರಿವೆಯು ಇಲ್ಲ. ಕೆಲವು ಕುಟುಂಬದವರಿಗೆ ಇನ್ನು ಜಾತಿ ಆದಾಯ ಪ್ರಮಾಣ ಪತ್ರ, ರೇಷನ್ ಕಾರ್ಡ್, ವಾಸಸ್ಥಳ, ಆಧಾರಕಾರ್ಡ, ಗುರುತಿನ ಚೀಟಿ, ಸಂಧ್ಯಾಸುರಕ್ಷಾ ಯೋಜನೆಯ ಸೌಲಭ್ಯವಿರದೆ ಇರುವುದು ಕಂಡು ಬರುತ್ತದೆ.

ಮಾಲ ಸಮುದಾಯದ ಹೆಣ್ಣು ಮಕ್ಕಳಾಗಲಿ, ಗಂಡು ಮಕ್ಕಳಾಗಲಿ ತಾವಿದ್ದ ಊರಿನಲ್ಲಿ ಹೆಚ್ಚು ಭೂಮಿ ಹೊಂದಿದ ಶ್ರೀಮಂತರ ಹೊಲಕ್ಕೆ ಕೃಷಿಯಾಳುಗಳಾಗಿ ಕಳೆ ತೆಗೆಯಲು ಬೆಳೆಗಳನ್ನು ಕೊಯ್ಯಲು ರಾಶಿಮಾಡಲು ಇನ್ನಿತರ ಕೆಲಸಕ್ಕೆ ಕೃಷಿ ಆಳುಗಳಾಗಿ ದುಡಿಯಲು ಹೋಗುತ್ತಿದ್ದರು. ಗಂಡು ಮಕ್ಕಳು ಜತದಾಳುಗಳಾಗಿಯು ಮತ್ತು ತೋಟದ ಕೆಲಸ ಕಾರ್ಯಗಳಿಗೆ ಹೋಗುತ್ತಿದ್ದರು ಚಿಕ್ಕ-ಚಿಕ್ಕ ಹೆಣ್ಣು ಮಕ್ಕಳು ಮತ್ತು ಗಂಡುಮಕ್ಕಳು ಕೂಲಿ ದುಡಿಯುತ್ತಿದ್ದರು. ಮತ್ತು ಮಾಲ ಸಮುದಾಯದ ವಯಸ್ಸಾದ ವೃದ್ದರು ಮೊದಲು ಇಚಲ ಪೊರಕೆಯ ಸಹಾಯದಿಂದ ಚಾಪೆ ಹೆಣೆಯುವದನ್ನು. ಕೌದಿಯನ್ನು ಹೊಲೆಯುವದನ್ನು ಮಾಡುತ್ತಿದ್ದರಂತೆ. ಈ ಸಮುದಾಯದವರ ಪ್ರೀಯವಾದ ಪ್ರಾಣಿಯಾದ ಆಕಳುಗಳಿಗೆ ಕಟ್ಟಲು ಸಹಾಯಕವಾಗುವ ಹಗ್ಗವನ್ನು ವಸೆಯುತ್ತಿದ್ದರಂತೆ ಮಳೆಯಿಂದ ರಕ್ಷಿಸಿಕೊಳ್ಳಲು ಪ್ಲಾಸ್ಟಿಕ್ ಚೀಲದಿಂದ ಭಿಕ್ಷೆ ಹಾಕಿಕೊಳ್ಳಲು ಪ್ಲಾಸ್ಟಿಕ್ ಚೀಲದ ಸಹಾಯದಿಂದ ಅರಿಬಿಯ ಸಹಾಯದಿಂದ ಜೋಳಿಗೆಯನ್ನು, ತಯಾರಿಸುತ್ತಿದ್ದರು. ಬೇಟೆಯಾಡಲು ದಾರದ ಸಹಾಯದಿಂದ ಬೇಲಿ ತಯಾರಿಸುತ್ತಾರೆ. ಮಾಲಾ ಸಮುದಾಯದವರ ಮೂಲ ವೃತ್ತಿ ಧಾರ್ಮಿಕ ಭಿಕ್ಷೆ ಆಗಿರುವದರಿಂದ ಇನ್ನೂ ಕೆಲವು ವೃದ್ದರು ಭಿಕ್ಷೆಯನ್ನು ಅವಲಂಬಿಸಿದ್ದಾರೆ ಸರಕಾರದ ಹಲವಾರು ಯೋಜನೆಗಳು, ಅನುಷ್ಠಾನಗಳು ಮತ್ತು ಕ್ರಮಗಳು ಜಾರಿಗೆ ಬಂದರೂ ಕೂಡ ಇವರು ಇನ್ನೂ ಭಿಕ್ಷೆಯನ್ನು ಬೇಡುವುದು ಬಿಟ್ಟಿಲ್ಲ ಭಿಕ್ಷೆ ಬೇಡಿ ತಮ್ಮ ಜೀವನವನ್ನು ಸಾಗಿಸುತ್ತಿರುವುದು ಕಂಡುಬರುತ್ತದೆ. ಕೆಲವರು ರದ್ದಿಯನ್ನು ಆಯುತ್ತಾರೆ.

ಕೆಲವು ನೆಲೆನಿಂತ ಕುಟುಂಬಗಳಿಗೆ ಅಲ್ಪ ಸ್ವಲ್ಪ ಆಸ್ತಿ ಅಥವಾ ಹೊಲ (ಭೂಮಿ) ಇರುತ್ತದೆ. ಇಂತಹ ಕುಟುಂಬದವರು ಕೃಷಿಯನ್ನು ಅವಲಂಬಿಸಿ ಕಾಲಮಾನಕ್ಕೆ ಅಥವಾ ಋತುಮಾನಕ್ಕೆ ತಕ್ಕ ಹಾಗೆ ಬೇಸಾಯ ಮಾಡಿ ತಮ್ಮ ಜೀವನ ಸಾಗಿಸುತ್ತಾರೆ. ಜೊತೆಗೆ ಕೃಷಿಯ ಜೊತೆಗೆ ಅನೇಕ ರೀತಿಯ ಪ್ರಾಣಿಗಳನ್ನು ಸಾಕಿಕೊಂಡಿರುತ್ತಾರೆ.

ಗುಡಾರ (ಗುಡಿಸಲು) ತಯಾರಿಸುವ ವಿಧಾನ

ಗುಡಾರದ ವಿನ್ಯಾಸ ಎರಡು ನೀಲಗಿರಿ ಕಟ್ಟಿಗೆಯ ಕಂಬಗಳನ್ನು ತೆಗೆದುಕೊಂಡು ಗುಡಸಲಿನ ಮುಂಭಾಗದಲ್ಲಿ ಒಂದು ಮತ್ತು ಹಿಂಭಾಗದಲ್ಲಿ ಒಂದು ಈ ರೀತಿ ಎರಡು ಕಂಬಗಳನ್ನು ತೆಗೆದುಕೊಂಡು ಗುಂಡಿ ಅಗೆದು ನೀಲವು ಹಾಕುತ್ತಾರೆ, ಆ ಕಂಬಗಳು ೧೦-೧೨ ಪೂಟ್ ಅಂತರವಿರುತ್ತವೆ, ಆ ಎರಡು ಕಂಬಗಳ ಮೇಲೆ ೧೦-೧೨ ಪೂಟ್ ಉದ್ದವಿರುವ ಕಟ್ಟಿಗೆ(ಕಂಬ)ಯನ್ನು ಆ ಎರಡು ಕಂಬಗಳ ಮೇಲೆ ಹಾಕುತ್ತಾರೆ. ಆದ ನಂತರ ಗುಡಸಲಿನ ಎಡ ಮತ್ತು ಬಲಬಾಗಕ್ಕೆ ಸೀಳಿದ ೧೫ ಬೀದಿರನ್ನು ನೆಲದಿಂದ ಮೇಲೆಕ್ಕೆ ಅಡ್ಡಲಾಗಿ ಹಾಕಿದ ಕಟ್ಟಿಗೆಗೆ ಕಟ್ಟುತ್ತಾರೆ. ಆಗ ಆ ಗುಡಿಸಲು ತ್ರೀಭುಜಕಾರದ ಗುಡಿಸಲು ಆಗುತ್ತದೆ. ಗುಡಿಸಲಿನ ಹಿಂಭಾಗದಲ್ಲಿ ತೊಗರಿ ಕಟ್ಟಿಗೆಯನ್ನು ಕೈ ಬೆರಳಿನಂತೆ ಜೋಡಿಸುತ್ತಾರೆ. ಕಟ್ಟಿದ ಬಿದಿರಿಗೆ ಹಗ್ಗ ಹಾಕಿ ಸುತ್ತಲು ಬಿಗಿಯುತ್ತಾರೆ. ಮೇಲೆ ಕೌದಿಗಳನ್ನು ಹೊದಿಸುತ್ತಾರೆ ಆ ಕೌದಿಗಳ ಮೇಲೆ ಮಳೆ ಬಂದಾಗ ನೀರು ಒಳಗೆ ಬಾರದ ಹಾಗೆ ಕೌದಿಯ ಮೇಲೆ ತಾಡಪತ್ರೆಯನ್ನು ಹೊದಿಸುತ್ತಾರೆ ಅದು ಗಾಳಿಗೆ ಹಾರದಂತೆ ಗುಡಸಲಿನ ಸುತ್ತಲು ಮೂಲಿ ಮೂಲಿಗೆ ೬ ಕಬ್ಬಿಣದ ಛಡಿಗಳನ್ನು ನೆಲಕ್ಕೆ ಬಡಿದು ಆ ತಾಡಪತ್ರೆಯ ತುದಿಯನ್ನು ಬಿಗಿಯಾಗಿ ಹಿಡಿದು ಆ ಛಡಿಗಳಿಗೆ ಹಗ್ಗ

ಹಾಕಿ ತಾಡಪತ್ರೆ ಹಾರದಂತೆ ಕಟ್ಟುತ್ತಾರೆ ಗುಡಸಲಿನ ಮುಂಭಾಗದಲ್ಲಿ ತೊಗರಿ ಕಟ್ಟಿಗೆಯನ್ನು ಅಥವಾ ಗೊನವರಿ ಕಟ್ಟಿಗೆಯನ್ನು ನೆಡುತ್ತಾರೆ ನಂತರ ಗುಡಾರಕ್ಕೆ ಬಾಗಿನಲನ್ನು ಕಟ್ಟುತ್ತಾರೆ.

ಹಿಂದಿನ (ಆಗಿನ) ಕಾಲದಲ್ಲಿ ಮತ್ತು ಈಗಲೂ ಕೆಲವು ಮಾಲಾ ಸಮುದಾಯದವರು ಅಲೆಮಾರಿಗಳಾಗಿ ಇರುವದರಿಂದ ಕೆಲವರಿಗೆ ಖಾಯಂ ಆದ ವಸತಿಗಳಿರುವುದು ಕಡಿಮೆಯೇ ಆದರೆ ಬರುಬರುತ್ತಾ, ಈ ಪದ್ಧತಿ ಸಡಿಲಗೊಳ್ಳುತ್ತಿದ್ದು, ಖಾಯಂ ಆಗಿ ಮಣ್ಣು ಇಟ್ಟಿಗೆಗಳಿಂದ ಅಥವಾ ಕಲ್ಲಿನಿಂದ ನಿರ್ಮಿಸಿದ ಗೋಡೆಗಳ ಮೇಲೆ ಚಾವಣಿಗೆ ಹಂಚು ಇಲ್ಲವೆ ತಗಡುಗಳನ್ನು ಮತ್ತು ತೆಂಗಿನ ಗರಿಗಳನ್ನು ಬಳಸಿ ಚಿಕ್ಕ ಚಿಕ್ಕ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಕೆಲವು ನೆಲೆನಿಂತವರಿಗೆ ಕಲ್ಲಿನ ಮೆನೆಗೆ ತಗಡು ಮತ್ತು ಕಟ್ಟಿಗೆಯ ಹೊದಿಕೆ ಹಾಕಿಕೊಂಡಿದ್ದಾರೆ. ಊರಿಂದ ಊರಿಗೆ ಅಲೆಯುವ ಇವರು ತಮ್ಮ ಗುಡಾರಗಳಲ್ಲಿಯೇ ವಾಸಿಸುತ್ತಾರೆ. ಕೆಲವು ಕುಟುಂಬಗಳಿಗೆ ಜನತಾ ಆಶ್ರಯ ಯೋಜನೆಯ ಮನೆಗಳು ಇರುತ್ತವೆ, ಇನ್ನೂ ಹಲವಾರು ಕುಟುಂಬಗಳು ಗುಡಾರಗಳಲ್ಲಿಯೇ (ಗುಡಿಸಲು) ವಾಸಮಾಡುತ್ತಾರೆ.

ಬೇಟೆ-ಸದಾ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವ ಮಾಲ ಸಮುದಾಯವರು ಬೇಟೆಯಾಡುವದರ್ಲಲಿ ನಿಪುಣರು, ಅಡವಿಯಲ್ಲಿ ಪ್ರಾಣಿ ಪಕ್ಷಿಯ ಚಲನ ವಲನಗಳನ್ನು ಸೂಕ್ಷ್ಮವಾಗಿ ಇವರು ಅರಿತವರಾಗಿದ್ದಾರೆ. ಅಡವಿಯಲ್ಲಿ ಅಥವಾ ಕಾಡಿನಲ್ಲಿ ಸಿಗುವ ಕಾಡುಕೋಳಿ, ಮೊಲ, ಕಾಡುಹಂದಿ, ಜಿಂಕೆ, ಗೊರವಂಕ, ಬೆಳವ, ಬುರುಲಿ. ಉಡಾ, ಮುಂತಾದ ಚಿಕ್ಕ-ಚಿಕ್ಕ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡುತ್ತಿದ್ದದರ ಬಗ್ಗೆ ಮಾಹಿತಿ ತಿಳಿಯಲಾಯಿತು. ಮಾಲ ಸಮುದಾಯದವರು ಬೇಟೆಗಾಗಿ ದೇಶಿ ಮಾದರಿಯ ಆಯುಧಗಳನ್ನು ಅಂದರೆ ಈಟಿ, ಬರ್ಚಿ, ಕಲ್ಲು, ಕವಣೆ, ದಾರದ ಬೇಲಿ, ಕೋಲು(ಬಡಿಗೆ) ಮತ್ತು ಸಾಕುನಾಯಿಗಳನ್ನು ಬಳಸಿಕೊಂಡು ಬೇಟೆಯಾಡುವದನ್ನು ಮಾಡುತ್ತಿದ್ದ ಮಾಹಿತಿ ಕ್ಷೇತ್ರಕಾರ್ಯದ ಸಂದಂರ್ಭದಲ್ಲಿ ತಿಳಿಯಲಾಯಿತು. ಕೆಲವು ಹಬ್ಬ ಹರಿದಿನಗಳಲ್ಲಿಯೂ ಬೇಟೆಯಾಡುತ್ತಿದ್ದರು. ತಮ್ಮ ಆಹಾರಕ್ಕಾಗಿ ಅಡವಿಯಲ್ಲಿ ಮತ್ತು ತಮ್ಮ ಪರಿಸರದಲ್ಲಿ ಸೀಗುವ ಗೆಡ್ಡೆ-ಗೆಣಸು, ಅಡವಿಯಲ್ಲಿ ಸಿಗುವ ಮಾವು, ಕೌಳಿಹಣ್ಣು, ಹುಲಿಹಣ್ಣು, ಬಾರಿಹಣ್ಣು, ಕಾರಿಕಾಯಿ, ಕೌಳಿಕಾಯಿಯನ್ನು ಹುಡುಕಿ ತಿನ್ನುತ್ತಿದ್ದರು. ಆದರೆ ಇತ್ತೀಚೆಗೆ ೧೯೬೩ರ ಕರ್ನಾಟಕ ಅರಣ್ಯ ನೀತಿ ಕಾಯ್ದೆ, ೧೯೭೨ರ ವನ್ಯಜೀವಿ ಸಂರಕ್ಷಣಾ ಕಾಯ್ದೆ, ಮತ್ತು ಬೇಟೆ ನಿಷೇದ ಕಾಯ್ದೆಯ ಕಟ್ಟುನಿಟ್ಟಿನ ಕ್ರಮದಿಂದ ಇವರು ಬೇಟೆಯಾಡುವದನ್ನು ಕಡಿಮೆ ಮಾಡುತ್ತಿದ್ದಾರೆ.

ಮಾಲ ಸಮುದಾಯದ ಆರ್ಥಿಕ ಜೀವನವನ್ನು ನೋಡಿದಾಗ ಮಾಲ (ಪರ್ವತ ಮಲ್ಲಯ್ಯ) ಸಮುದಾಯದವರು ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ಅಲೆಮಾರಿಯಾಗಿ ವಲಸೆ ಬಂದ ಕೆಲವು ವರ್ಷಗಳವರೆಗೆ ಭಿಕ್ಷೆ ಬೇಡಲು ಕಂಬಿಯಲ್ಲಿ ಶ್ರೀಶೈಲ ಮಲ್ಲಯ್ಯನ ಮೂರ್ತಿಯನ್ನು ಇಟ್ಟುಕೊಂಡು ಆ ಕಂಬಿಯನ್ನು ತಲೆಯ ಮೇಲೆ ಹೊತ್ತುಕೊಂಡು ಕಾಲ್ನಡಿಗೆಯಿಂದ ಊರೂರು ಸಂಚಾರ ಮಾಡಿ ದವಸ ಧಾನ್ಯಗಳನ್ನು ನೀಡಿಸಿಕೊಳ್ಳುತ್ತಿದ್ದರು. ಆದರೆ ಕಾಲಾಂತರದಲ್ಲಿ ಈ ಸಮುದಾಯದವರು ಒಂದು ಸಿಲ್ವರ್ ತಾಟಿನಲ್ಲಿ ದುರ್ಗಾದೇವಿಯ ಫೋಟೊವನ್ನು ಇಟ್ಟುಕೊಂಡು ಹಳ್ಳಿ ಹಳ್ಳಿಗೆ ತಿರುಗಾಡಿ

ಭಿಕ್ಷೆ ನೀಡಿಸಿಕೊಳ್ಳುತ್ತಿದ್ದರು. ನಂತರ ಹೆಗಲಿಗೆ ಒಂದು ಜೋಳಿಗೆಯನ್ನು ಮಾತ್ರ ಹಾಕಿಕೊಂಡು ಭಿಕ್ಷೆ ಬೇಡಲು ಹೊಗುತ್ತಿದ್ದರು. ಆದರೆ ಇತ್ತೀಚೆಗೆ ಸರಕಾರದ ೧೯೭೫ ರ ಭಿಕ್ಷಾನಿಷೇಧ ಕಾಯ್ದೆಯ ಕಟ್ಟುನಿಟ್ಟಿನ ಕ್ರಮದಿಂದಾಗಿ ಮಾಲ (ಪರ್ವತ ಮಲ್ಲಯ್ಯ) ಸಮುದಾಯದ ಮಕ್ಕಳು, ಯುವಕರು, ಯುವತಿಯರು, ದುಡಿಯಲು ಸಾಮರ್ಥ್ಯ ಇದ್ದಂತವರು ಧಾರ್ಮಿಕ ಭಿಕ್ಷೆಯನ್ನು ಅವಲಂಬಿಸಿರುವುದಿಲ್ಲ. ಅದರ ಬದಲಾಗಿ ತಮ್ಮ ಜೀವನೋಪಾಯಕ್ಕಾಗಿ ಬೇರೆ ಬೇರೆ ಕೂಲಿ ಕೆಲಸಗಳನ್ನು ಮಾಡುತ್ತಾರೆ. ಆದರೆ ವಯಸ್ಸಾದವರು, ದುಡಿಯಲು ಸಾಮರ್ಥ್ಯ ಇಲ್ಲದವರು, ಅಂಗವಿಲರಂತಹ ಕೆಲವರು ಭಿಕ್ಷೆಯನ್ನು ಅವಲಂಬಿಸಿದ್ದಾರೆ. ಮಾಲ ಸಮುದಾಯದವರು ಸದಾ ಅಲೆಮಾರಿಗಳಾಗಿದ್ದು ಇವರಿಗೆ ನಿರ್ಧಿಷ್ಟ ನೆಲೆ ಎಂಬುದು ಇದ್ದಿರಲಿಲ್ಲ ಕೊಪ್ಪಳ ಜಿಲ್ಲೆಯ ಚಿಲಕಮುಖಿ ಎಂಬ ಗ್ರಾಮವು ತಮ್ಮ ನೆಲೆ ಎಂದು ಗುರುತಿಸಿಕೊಂಡು ಅಲ್ಲಿಂದ ತಮ್ಮ ಜೀವನ ನಿರ್ವಹಣೆಗಾಗಿ ದುಡಿಯಲೆಂದು ಬೇರೆ ಬೇರೆ ಹಳ್ಳಿ ಮತ್ತು ಪಟ್ಟಣಗಳಿಗೆ ಹೋಗಿ ಅಲ್ಲಿಯೇ ನೆಲೆಸಿದ್ದಾರೆ. ಹಲವಾರು ವರ್ಷಗಳ ಕಾಲ ಈ ಸಮುದಾಯದವರು ಊರಿನ ಗುಡಿಗಳಲ್ಲಿ ವಾಸಮಾಡುತ್ತಿದ್ದರು, ಮತ್ತು ಚಿಕ್ಕ ಚಿಕ್ಕ ಗುಡಾರಗಳನ್ನು ಹಾಕಿಕೊಂಡು ವಾಸಮಾಡುತ್ತಿದ್ದರು. ಆದರೆ ಇತ್ತೀಚೆಗೆ ಇವರು ವಾಸಿಸಲಿಕ್ಕೆ ಹಾಕುವ ಗುಡಾರಗಳು ಸ್ವಲ್ಪ ದೊಡ್ಡ ಪ್ರಮಾಣದಲ್ಲಿ ಇರುತ್ತವೆ. ಅದಲ್ಲದೆ ಕಾಲಾಂತರದಲ್ಲಿ ಮಾಲ ಸಮುದಾಯದ ಕೆಲವು ಕುಟುಂಬಗಳು ಶೇಕಡ ೫.೫೯ರಷ್ಟು ಕಚ್ಚಾ ಮನೆ ಹೊಂದಿದ್ದಾರೆ. ಶೇಕಡ ೫.೨೭ರಷ್ಟು ಹಂಚಿನ ಮನೆ ಹೊಂದಿದ್ದಾರೆ. ಕೆಲವು ಕುಟುಂಬಗಳಿಗೆ ಆಶ್ರಯ ಯೋಜನೆಯ ಮನೆ, ಇಂದಿರಾ ಆವಾಸ್ ಯೋಜನೆಯ ಮನೆ, ಆಸರೆ ಮನೆ, ಇನ್ನಿತರ ಯೋಜನೆಗಳು ಸೇರಿದಂತೆ ಇವರಿಗೆ ಶೇಕಡ ೩೨.೬೧ರಷ್ಟು ಸರಕಾರಿ ಮನೆಗಳನ್ನು ಹೊಂದಿದ್ದಾರೆ. ಇನ್ನು ೫೬.೫೨ರಷ್ಟು ಜನರು ಗುಡಾರಗಳಲ್ಲಿ ವಾಸಿಸುತ್ತಾರೆ. ಮಾಲ ಸಮುದಾಯದವರು ಕೆಲವು ಕೆಲಸ ಕಾರ್ಯಗಳನ್ನು ಮಾಡುತ್ತಾ ಸಮಾಜದ ಮುಖ್ಯವಾಹಿನಿಗೆ ಬರಲು ಪ್ರಯತ್ನಿಸುತ್ತಿದೆ. ತಾವಿರುವ ಪರಿಸ್ಥಿತಿಯಿಂದ ಬದಲಾವಣೆಯನ್ನು ಪಡೆಯುವಲ್ಲಿ ಸಾಮಾಜಿಕ ಸ್ಥಿತ್ಯಂತರವನ್ನು ಹೊಂದುವದರಲ್ಲಿ ಪ್ರಯತ್ನಿಸುತ್ತಿದೆ.

ಅಧ್ಯಾಯ ಐದು

ಶೈಕ್ಷಣಿಕ ಸ್ಥಾನಮಾನ ಮತ್ತು ರಾಜಕೀಯ ಸ್ಥಾನಮಾನ

೫.೧ ಕರ್ನಾಟಕದ ಸಾಕ್ಷರತೆ–ಚಾರಿತ್ರಿಕ ನೋಟ

೫.೨ ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದ ಪರಿಶಿಷ್ಟ ಜಾತಿ, ಪಂಗಡ ಹಾಗೂ ಇತರರ ಸಾಕ್ಷರರ ಸಂಖ್ಯೆ ಹಾಗೂ ಶೇಕಡವಾರು ಪ್ರಮಾಣ

೫.೩ ಪರಿಶಿಷ್ಟ ಜಾತಿಯ ಸಾಕ್ಷರತಾ ಪ್ರಮಾಣ ಮತ್ತು ಸಾಕ್ಷರತಾಅಂತರ

೫.೪ ಕರ್ನಾಟಕದ ವಿಭಾಗವಾರು ಸಾಕ್ಷರತಾ ಪ್ರಮಾಣ

೫.೫ ೨೦೦೧ರ ಸಾಕ್ಷರತೆಯ ಮಾಹಿತಿ (ಶೇಕಡವಾರುಗಳಲ್ಲಿ)

೫.೬ ಕರ್ನಾಟಕದಲ್ಲಿ ಶಾಲೆಯಿಂದ ಹೊರಗುಳಿದ ೬–೧೪ ವಯೋಮಾನದ ಮಕ್ಕಳ ವಿವರ

೫.೭ ಕರ್ನಾಟಕದ ಮಾಲ ಸಮುದಾಯಕ್ಕೆ ಸೇರಿದವರಜನಸಂಖ್ಯೆಯ ವಿವರ

೫.೮ ಸಮೀಕ್ಷೆಗೆ ಒಳಪಡಿಸಿದ ಮಾಲ ಸಮುದಾಯದಒಟ್ಟುಜನಸಂಖ್ಯೆ

೫.೯ ಸಮೀಕ್ಷೆಗೊಳಪಡಿಸಿದ ಮಾಲ ಸಮುದಾಯದ ಸಾಕ್ಷರತೆ ಹೊಂದಲು ಅನರ್ಹವಾದವರು ಹಾಗೂ ಅರ್ಹವಾದವರು

೫.೧೦ ಮಾಲ ಸಮುದಾಯದ ಸಾಕ್ಷರರು ಹಾಗೂ ಅನಕ್ಷರಸ್ಥರು

೫.೧೧ ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗೆ ಹೋಗುತ್ತಿರುವ ಮಾಲ ಸಮುದಾಯದ ಮಕ್ಕಳು

೫.೧೨ ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗೆ ಹೋಗುತ್ತಿರುವ ಮಕ್ಕಳು

೫.೧೩ ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢತರಗತಿಗೆ ಹೋಗುತ್ತಿರುವವರು

೫.೧೪ ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢತರಗತಿಗೆ ಹೋಗುತ್ತಿರುವವರ ಸಂಖ್ಯೆ

ಅಧ್ಯಾಯ ಐದು
ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನ

ಭಾರತೀಯ ಸಮಾಜ ಏಣಿಶ್ರೇಣಿಗಳಿಂದ ಕೂಡಿದೆ. ಇಲ್ಲಿಯ ಜಾತಿ ವ್ಯವಸ್ಥೆಯಲ್ಲಿ ಸಮಾನತೆ ಬರಬೇಕಾದರೆ ಮುಖ್ಯವಾಗಿ ತಳಜಾತಿಗಳು ಶಿಕ್ಷಣವನ್ನು ಪಡೆಯಲೇಬೇಕೆಂದು ಅಂಬೇಡ್ಕರ್‌ರವರು ತಿಳಿಸುತ್ತಾರೆ. ಆ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ಹಿಂದುಳಿದ, ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡಗಳಿಗೆ ಶಿಕ್ಷಣದಲ್ಲಿ ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕೆಂದು ತಿಳಿಸಲಾಗಿದೆ. ಶಿಕ್ಷಣ ಮನುಷ್ಯನ ಆತ್ಮ ಗೌರವವನ್ನು ಹೆಚ್ಚಿಸುತ್ತದೆ ಹಾಗೂ ಅವನು/ಳು ಸ್ವಾಭಿಮಾನದ ಬದುಕನ್ನು ಸಾಗಿಸಲು ಅದು ಆತ್ಮಸ್ಥೈರ್ಯವನ್ನು ನೀಡುತ್ತದೆ. ಹೀಗಾಗಿ ಪ್ರತಿಯೊಬ್ಬರಿಗೂ ಕಡ್ಡಾಯ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಸರ್ಕಾರ ಭಾರತದ ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದೆ. ಆದರೆ ಯಾವುದೇ ನೀತಿ ನಿಯಮಗಳು ಮನುಷ್ಯನ ಜೀವನಶೈಲಿ, ಹಿನ್ನೆಲೆ, ಪರಿಸರವನ್ನು ಅವಲಂಭಿಸಿರುತ್ತದೆ. ಯಾವ ನೀತಿಗಳೂ ಮನುಷ್ಯನಿಗೆ ಆ ಮುಖವಾಗಿ ಮುನ್ನಡೆಸಲು ಸಾಧನವಾಗುವುದಿಲ್ಲ. ಮುಖ್ಯವಾಗಿ ತಳಸಮುದಾಯಗಳು ಅದರಲ್ಲೂ ಅಲೆಮಾರಿತನವನ್ನು ಮೈಗೂಡಿಸಿಕೊಂಡಿರುವ ಸಮುದಾಯಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಹಿಂಜರಿಯುವುದೇಕೆ, ಶಾಲೆಗೆ ಕಳಿಸಿದರೂ ಆ ಮಕ್ಕಳು ಶಾಲೆಯ ಶಿಕ್ಷಣವನ್ನು ಏಕೆ ಪೂರೈಸಲು ಸಾಧ್ಯವಾಗುತ್ತಿಲ್ಲ ಎಂಬುದರ ಒಳಹೊಕ್ಕು ನೋಡಿದರೆ ಬೇರೆ ಅದರ ನಿಜ ರೂಪಗಳು ಅನಾವರಣಗೊಳ್ಳುತ್ತವೆ. ಭಾರತೀಯರ ಮೂಲಭೂತ ಸಮಸ್ಯೆಗಳಲ್ಲಿ ಬಡತನವೂ ಒಂದು, ಕೇವಲ ಬಡತನವೊಂದೇ ಶಿಕ್ಷಣಕ್ಕೆ ಅಡ್ಡಿ ಎಂದು ತಿಳಿಯಲು ಸಾಧ್ಯವಾಗುವುದಿಲ್ಲ. ಅದರಾಚೆಗೂ ಹಲವಾರು ಸಾಮಾಜಿಕ ಕಾರಣಗಳು ಮಕ್ಕಳನ್ನು ಶಾಲೆಯಿಂದ ಹೊರಗುಳಿಯುವಂತೆ ಮಾಡುತ್ತಿದೆ. ಉದಾಹರಣೆಗೆ ಕರ್ನಾಟಕದಲ್ಲಿ ಅನುಸೂಚಿತ ಪಟ್ಟಿಯಲ್ಲಿರುವ ಪರಿಶಿಷ್ಟ ಜಾತಿಗಳ ಸಂಖ್ಯೆ ೧೦೧ ಇದೆ, ಪರಿಶಿಷ್ಟ ಪಂಗಡಗಳು ೫೦ ಇವೆ, ಅದೇ ರೀತಿಯಾಗಿ ಪರಿಶಿಷ್ಟ ಜಾತಿಗಳ ಸಮಕ್ಕೆ ಹಿಂದುಳಿದ ವರ್ಗಗಳಿವೆ. ಜೊತೆಗೆ ಧಾರ್ಮಿಕ ಅಲ್ಪಸಂಖ್ಯಾತರೂ, ಅಲೆಮಾರಿಗಳೂ ಇವೆ. ಆದರೆ ಈ ಸಮುದಾಯಗಳಲ್ಲಿ ನಿಜಕ್ಕೂ ಶಿಕ್ಷಣಕ್ಕೆ ತೆರೆದುಕೊಂಡಿರುವ ಸಮುದಾಯಗಳು ಕೇವಲ ಬೆರಳೆಣಿಕೆಯಷ್ಟಿವೆ. ಉದಾಹರಣೆಗೆ ತೆಗೆದುಕೊಂಡರೆ

ಪರಿಶಿಷ್ಟ ಜಾತಿಗಳಲ್ಲಿಯೇ ಸ್ಪೃಶ್ಯರೂ, ಅಸ್ಪೃಶ್ಯರೂ, ಅವರಿಗಿಂತ ಕೀಳಾಗಿ ಹಾಗೂ ನಿರ್ಲಕ್ಷಿಸಲ್ಪಟ್ಟ ಅಲೆಮಾರಿ ಸಮುದಾಯಗಳಿವೆ. ಪರಿಶಿಷ್ಟ ಜಾತಿ ಪಟ್ಟಿಯಲ್ಲಿಯೇ ಇಷ್ಟೆಲ್ಲಾ ವೈವಿಧ್ಯತೆ ಇದೆ.

ಒಟ್ಟಾರೆಯಾಗಿ ೧೯೫೧ ರಿಂದ ಇತ್ತೀಚಿನ ೨೦೧೧ರ ಜನಗಣತಿಯವರೆಗೆ ಕರ್ನಾಟಕದ ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದರೆ ದಶಕದಿಂದ ದಶಕಕ್ಕೆ ಸಾಕ್ಷರತೆಯಲ್ಲಿ ಪ್ರಗತಿ ಉಂಟಾಗಿದೆ ಎಂಬುದು ಸ್ಪಷ್ಟವಾಗಿ ತಿಳಿದುಬರುವುದು. ೧೯೫೧ರ ಜನಗಣತಿ ವರದಿಯ ಪ್ರಕಾರ ಪ್ರತಿಶತ ಜನಸಂಖ್ಯೆಗೆ ಸಾಕ್ಷರತೆಯ ಪ್ರಮಾಣ ಶೇಕಡ ೨೦.೬೦ ಮಾತ್ರ ಇದೆ. ೧೯೬೧ಕ್ಕೆ ಶೇಕಡ ೨೫.೪೦ ಸಾಕ್ಷರತೆ ಕಂಡುಬಂದಿರುವುದಾಗಿ ಉಲ್ಲೇಖಿತವಾಗಿದೆ. ಅಂದರೆ ಈ ಕಾಲಾವಧಿಯಲ್ಲಿ ಶೇಕಡ ೪.೮ರಷ್ಟು ಸಾಕ್ಷರತೆಯ ಪ್ರಮಾಣ ಹೆಚ್ಚಾಗಿದೆ. ೧೯೭೧ ರ ಜನಗಣತಿ ಪ್ರಕಾರ ಶೇಕಡ ೩೧.೫೦ ಸಾಕ್ಷರತೆ ಇರುವುದಾಗಿ ತಿಳಿದುಬರುವುದು.

೫.೧ ಕರ್ನಾಟಕದ ಸಾಕ್ಷರತೆ–ಚಾರಿತ್ರಿಕ ನೋಟ


೧೯೮೧ರ ಜನಗಣತಿ ಪ್ರಕಾರ ಶೇಕಡ ೩೮.೫೦ ಸಾಕ್ಷರತೆ ದಾಖಲಾಗಿದೆ. ೧೯೯೧ರಲ್ಲಿ ಶೇಕಡ ೪೮.೪೫ ರಷ್ಟು ಸಾಕ್ಷರತೆ ಇರುವುದಾಗಿ ತಿಳಿದುಬರುತ್ತದೆ. ೨೦೦೧ ರಲ್ಲಿ ಸಾಕ್ಷರತೆಯ ಪ್ರಮಾಣವು ಶೇಕಡ ೬೬.೬೦ ರಷ್ಟಿದೆ. ೨೦೧೧ರ ಜನಗಣತಿ ಪ್ರಕಾರ ಶೇಕಡ ೭೫.೬೦ ಸಾಕ್ಷರತೆ ಇರುವುದು ತಿಳಿದುಬರುವುದು.

ಕೋಷ್ಟಕ ೫.೧: ಕರ್ನಾಟಕದ ಸಾಕ್ಷರತೆ–ಚಾರಿತ್ರಿಕ ನೋಟ: ೧೯೫೧–೨೦೧೧

ಕ್ರ.ಸಂ	ವರ್ಷಗಳು	ಒಟ್ಟು	ಪುರುಷರು	ಮಹಿಳೆಯರು	
೦೧	೧೯೫೧	೨೦.೬೦	----	---	೨೦.೬೦%
೦೨	೧೯೬೧	೨೫.೪೦	೩೬.೨೦	೧೪.೨೦	೨೫.೪೦%
೦೩	೧೯೭೧	೩೧.೫೦	೪೧.೬೦	೨೧.೦೦	೩೧.೫೦%
೦೪	೧೯೮೧	೩೮.೫೦	೪೮.೮೦	೨೭.೭೦	೩೮.೫೦%
೦೫	೧೯೯೧	೫೬.೦೦	೬೭.೩೦	೪೪.೩೦	೫೬.೦೦%
೦೬	೨೦೦೧	೬೬.೬೪	೭೬.೧೦	೫೬.೮೭	೬೬.೬೪%
೦೭	೨೦೧೧	೭೫.೬೦	೮೨.೮೫	೬೮.೧೩	೭೫.೬೦%

(ಮೂಲ: ಸೆನ್ಸಸ್ ಆಫ್ ಇಂಡಿಯಾ ೨೦೧೧. ತಾತ್ಪೂರ್ತಿಕ ಜನಸಂಖ್ಯಾ ಮೊತ್ತ. ಡೈರೆಕ್ಟೋರೇಟ್ ಆಫ್ ಸೆನ್ಸಸ್ ಆಪರೇಶನ್, ಕರ್ನಾಟಕ, ಭಾರತ ಸರ್ಕಾರ, ಪು; ೨೮)

ಲಂಬಚಿತ್ರ: ೫.೧. ಕರ್ನಾಟಕದ ಸಾಕ್ಷರತೆ-ಚಾರಿತ್ರಿಕ ನೋಟ: ೧೯೫೧-೨೦೧೧ ರ ಪ್ರಮಾಣ



ಈ ಏಳು ದಶಕದ ಸಾಕ್ಷರತೆಯ ಪ್ರಮಾಣ ಗಮನಿಸಿದರೆ ದಶಕದಿಂದ ದಶಕಕ್ಕೆ ಸಾಕ್ಷರತೆಯ ಪ್ರಮಾಣ ಏರುಮುಖವಾಗಿ ಸಾಗಿದೆ. ಹಾಗೆಯೇ ದಶಕದಿಂದ ದಶಕಕ್ಕೆ ಪುರುಷ ಹಾಗೂ ಮಹಿಳೆಯರ ಸಾಕ್ಷರತೆಯ ಪ್ರಮಾಣದಲ್ಲಿ ಅಂತರವಿದ್ದರೂ ಸಾಕ್ಷರತೆಯ ಅಂತರ ಕಡಿಮೆಯಾಗುತ್ತಾ ಬಂದಿರುವುದನ್ನು ಅಂಕಿ ಅಂಶಗಳು ತಿಳಿಸುತ್ತವೆ.

೫.೨: ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದ ಪರಿಶಿಷ್ಟ ಜಾತಿ, ಪಂಗಡ ಹಾಗೂ ಇತರರ ಸಾಕ್ಷರರ ಸಂಖ್ಯೆ ಹಾಗೂ ಶೇಕಡವಾರು ಪ್ರಮಾಣ

೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕದ ಒಟ್ಟು ಸಾಕ್ಷರರ ಸಂಖ್ಯೆಯು ೪,೦೬,೪೭,೩೨೨ಇದೆ. ಇದರಲ್ಲಿ ಪುರುಷರು ಶೇಕಡ ೨,೨೫,೦೮,೪೭೧, ಮಹಿಳೆಯರು ಶೇಕಡ ೧,೮೧,೩೮,೮೫೧ ಇರುವರು.




ಕೋಷ್ಟಕ ೫.೨: ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದ ಪರಿಶಿಷ್ಟ ಜಾತಿ, ಪಂಗಡ ಹಾಗೂ ಇತರರ ಸಾಕ್ಷರರ ಸಂಖ್ಯೆ ಹಾಗೂ ಶೇಕಡವಾರು ಪ್ರಮಾಣ

ಒಟ್ಟು ಸಾಕ್ಷರರು			ಪರಿಶಿಷ್ಟ ಜಾತಿಯ ಸಾಕ್ಷರರು			ಪರಿಶಿಷ್ಟ ಪಂಗಡದ ಸಾಕ್ಷರರು		
ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೨,೨೫,೦೮,೪೭೧	೧,೮೧,೩೮,೮೫೧	೪,೦೬,೪೭,೩೨೨	೫೨,೬೪,೫೪೫	೫೨,೧೦,೪೪೭	೧,೦೪,೭೪,೯೯೨	೨೧,೩೪,೭೫೪	೨೧,೧೪,೨೩೩	೪೨,೪೮,೯೮೭
೮೨.೪೭%	೬೮.೦೮%	೭೫.೩೬%	೧೭%	೧೭.೨೯%	೧೭.೧೫%	೬.೮೯%	೭.೦೨%	೬.೯೫%

ಪರಿಶಿಷ್ಟ ಜಾತಿಯ ಒಟ್ಟು ಸಾಕ್ಷರರ ಸಂಖ್ಯೆಯು ೧,೦೪,೭೪,೯೯೨ ಇದೆ. ಇದರಲ್ಲಿ ಪುರುಷರು ೫೨,೬೪,೫೪೫, ಮಹಿಳೆಯರು ೫೨,೧೦,೪೪೭ ಇರುವರು. ಪರಿಶಿಷ್ಟ ಪಂಗಡದ ಒಟ್ಟು ಸಾಕ್ಷರರ ಸಂಖ್ಯೆಯು ೪೨,೪೮,೯೮೭ ಇದೆ. ಇದರಲ್ಲಿ ಪುರುಷರು ೨೧,೩೪,೭೫೪, ಮಹಿಳೆಯರು ೨೧,೧೪,೨೩೩ ಇರುವರು.

ವೃತ್ತಚಿತ್ರ .೫.೧: ಕರ್ನಾಟಕದ ಪರಿಶಿಷ್ಟ ಜಾತಿ, ವರ್ಗ, ಇತರರ ಸಾಕ್ಷರತಾ ಪ್ರಮಾಣ



ಶೇಕಡವಾರುಗಳಲ್ಲಿ ಹೇಳುವುದಾದರೆ ಕರ್ನಾಟಕದ ಒಟ್ಟು ಸಾಕ್ಷರರ ಪ್ರಮಾಣವು ಶೇಕಡ ೭೫.೩೬ ಇದೆ. ಇದರಲ್ಲಿ ಪುರುಷರು ಶೇಕಡ ೮೨.೪೭, ಮಹಿಳೆಯರು ಶೇಕಡ ೬೮.೦೮ ಇರುವರು. ಪರಿಶಿಷ್ಟ ಜಾತಿಯ ಒಟ್ಟು ಸಾಕ್ಷರರ ಪ್ರಮಾಣವು ಶೇಕಡ ೧೭.೧೫ ಇದೆ. ಇದರಲ್ಲಿ ಪುರುಷರು ಶೇಕಡ ೧೭, ಮಹಿಳೆಯರು ಶೇಕಡ ೧೭.೨೯ ಇರುವರು. ಪರಿಶಿಷ್ಟ ಪಂಗಡದ ಒಟ್ಟು ಸಾಕ್ಷರರ ಪ್ರಮಾಣವು ಶೇಕಡ ೬.೯೫ ಇದೆ. ಇದರಲ್ಲಿ ಪುರುಷರು ಶೇಕಡ ೬.೮೯, ಮಹಿಳೆಯರು ಶೇಕಡ ೭.೦೨ ಇರುವರು. ಒಟ್ಟು ಸಾಕ್ಷರತೆಯ ಪ್ರಮಾಣಕ್ಕೆ ಹೋಲಿಕೆ ಮಾಡಿದರೆ ಪರಿಶಿಷ್ಟ ಜಾತಿಯ ಸಾಕ್ಷರತೆಯ ಪ್ರಮಾಣ (ಶೇಕಡ ೧೭.೧೫) ಅಷ್ಟೇನೂ ತೃಪ್ತಿಕರವಾಗಿಲ್ಲವೆಂದು ಹೇಳಬಹುದು. ಆದರೆ ಪರಿಶಿಷ್ಟ ಪಂಗಡಕ್ಕೆ ಹೋಲಿಕೆ ಮಾಡಿದರೆ ಪರಿಶಿಷ್ಟ ಜಾತಿಯ ಸಾಕ್ಷರತೆಯ ಪ್ರಮಾಣ ಪರವಾಗಿಲ್ಲ ಎನಿಸುವುದು. ೧೦೧ ಪರಿಶಿಷ್ಟ ಜಾತಿಗಳಲ್ಲಿ ಯಾವ ಪರಿಶಿಷ್ಟ ಸಮುದಾಯ ಶೇಕಡವಾರು ಎಷ್ಟು ಸಾಕ್ಷರತೆಯನ್ನು ಹೊಂದಿದೆ ಎಂದು ಸೂಕ್ಷ್ಮವಾಗಿ ಪರಿಶೀಲಿಸಿದರೆ ತಳಸಮುದಾಯಗಳಲ್ಲಿಯೂ ಸಾಕ್ಷರತೆಯು ಕೆಲವೇ ಕೆಲವು ಸಮುದಾಯಗಳಿಗೆ ಹಂಚಿಕೆಯಾಗಿದೆಯೇನೋ ಎನಿಸುವುದು. ಉದಾಹರಣೆಗೆ ಕರ್ನಾಟಕದಲ್ಲಿ ಅತ್ಯಂತ ಕಡಿಮೆ ಜನಸಂಖ್ಯೆಯನ್ನು ಹೊಂದಿದ ಅಲೆಮಾರಿಯಾದ ಮಾಲ ಸಮುದಾಯವು ಶೇಕಡ ನಾಲ್ಕರಷ್ಟು ಸಾಕ್ಷರತೆ ಹೊಂದಲು ಸಾಧ್ಯವಾಗಿಲ್ಲವೆಂದರೆ ಆಶ್ಚರ್ಯವಾಗಬಹುದು.



೫.೩ ಪರಿಶಿಷ್ಟ ಜಾತಿಯ ಸಾಕ್ಷರತಾ ಪ್ರಮಾಣ ಮತ್ತು ಸಾಕ್ಷರತಾ ಅಂತರ

೨೦೦೧ರ ಜನಗಣತಿ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯ ಸಾಕ್ಷರತಾ ಪ್ರಮಾಣವು ಶೇ ೬೭.೪ ರಷ್ಟಿದೆ. ಇದರಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣವು ಶೇ ೫೭.೪೫ ಇದ್ದರೆ ಪುರುಷರ ಸಾಕ್ಷರತಾ ಪ್ರಮಾಣ ಶೇ ೭೬.೨೯ ರಷ್ಟಿದೆ. ರಾಜ್ಯದ ಪರಿಶಿಷ್ಟ ಜಾತಿಗಳ ಸಾಕ್ಷರತಾ ಪ್ರಮಾಣವು ಶೇ ೫೨.೯೦ ಇದೆ. ಇದರಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣವು ಶೇ ೪೧.೭೦ ಇದ್ದರೆ ಪುರುಷರ ಸಾಕ್ಷರತಾ ಪ್ರಮಾಣ ಶೇ ೬೩.೮೦ರಷ್ಟಿದೆ. ಅಂದರೆ ಸಾಮಾನ್ಯ ಸಾಕ್ಷರತೆಗೂ ಪರಿಶಿಷ್ಟ ಜಾತಿಗಳ ಸಾಕ್ಷರತೆಗೂ ಇರುವ ಅಂತರ ಒಟ್ಟು -೧೪.೧೪ರಷ್ಟಿದೆ. ಮಹಿಳೆಯರ ಅಂತರ ಶೇ-೧೫.೭೫, ಪುರುಷರ ಅಂತರ ಶೇ-೧೨.೪೯ರಷ್ಟಿದೆ.

೫.೪ ಕರ್ನಾಟಕದ ವಿಭಾಗವಾರು ಸಾಕ್ಷರತಾ ಪ್ರಮಾಣ ೨೦೦೧-೨೦೧೧

ಕರ್ನಾಟಕದ ಒಟ್ಟು ಸಾಕ್ಷರತೆಯ ೨೦೦೧ ಹಾಗೂ ೨೦೧೧ರ ಶೈಕ್ಷಣಿಕ ಅಂತರವು ೮.೯೬ ಇದೆ.

ಕೋಷ್ಟಕ ೫.೩: ಕರ್ನಾಟಕದ ವಿಭಾಗವಾರು ಸಾಕ್ಷರತಾ ಪ್ರಮಾಣ ೨೦೦೧-೨೦೧೧

(ಶೇಕಡವಾರುಗಳಲ್ಲಿ)

ವಿಭಾಗ	ಪುರುಷರ	*ಸಾ.ಪ್ರ	ಮಹಿಳೆ	*ಸಾ.ಪ್ರ	ಒಟ್ಟು	*ಸಾ.ಪ್ರ
	೨೦೦೧	೨೦೧೧	೨೦೦೧	೨೦೧೧	೨೦೦೧	೨೦೧೧
ಬೆಂಗಳೂರು	೮೦.೩೦	೮೭.೦೪	೬೩.೯೮	೭೩.೮೫	೭೨..೩೭	೮೦.೨೧
ಮೈಸೂರು	೭೬.೬೨	೮೨.೬೯	೬೧.೩೧	೭೦.೩೯	೬೮.೯೨	೭೬.೫೦
ದ.ಕ	೭೯.೦೩	೮೫.೧೪	೬೩.೦೨	೭೨.೬೯	೭೧.೧೫	೭೮.೯೯
ಬೆಳಗಾವಿ	೭೬.೩೭	೮೩.೨೨	೫೩.೪೮	೬೫.೯೨	೬೫.೧೪	೭೪.೬೯
ಗುಲ್ಬರ್ಗಾ	೬೫.೮೭	೭೪.೮೯	೪೧.೦೭	೫೪.೭೬	೫೩.೬೪	೬೪.೯೩
ಉ.ಕ	೭೨.೦೧	೭೯.೬೫	೪೮.೩೦	೬೧.೧೨	೬೦.೩೫	೭೦.೫೧
ಕರ್ನಾಟಕ	**೭೬.೦೧**	**೮೨.೮೬**	**೫೬.೮೭**	**೬೭.೮೭**	**೬೬.೬೪**	**೭೫.೪೬**

*ಸಾ.ಪ್ರ: ಸಾಕ್ಷರತಾ ಪ್ರಮಾಣ

ಈ ಅಂತರವು ವಿಭಾಗಾವಾರು ಬೆಂಗಳೂರು ವಿಭಾಗದಲ್ಲಿ ೭.೮೪, ಮೈಸೂರು ವಿಭಾಗದಲ್ಲಿ ೭.೫೮, ದಕ್ಷಿಣ ಕನ್ನಡ ವಿಭಾಗದಲ್ಲಿ ೭.೮೪, ಬೆಳಗಾವಿ ವಿಭಾಗದಲ್ಲಿ ೯.೫೫, ಗುಲ್ಬರ್ಗಾ ವಿಭಾಗದಲ್ಲಿ ೧೧.೨೯, ಉತ್ತರ ಕನ್ನಡ ವಿಭಾಗದಲ್ಲಿ ೧೦.೧೬ರಷ್ಟಿದೆ

೫.೫ : ೨೦೦೧ ಸಾಕ್ಷರತೆಯ ಮಾಹಿತಿ (ಶೇಕಡವಾರುಗಳಲ್ಲಿ)

೨೦೦೧ರ ಸಾಕ್ಷರತೆಯ ಮಾಹಿತಿಯ ಪ್ರಕಾರ ರಾಜ್ಯದ ಒಟ್ಟು ಸಾಕ್ಷರತೆಯ ಪ್ರಮಾಣವು ಶೇ ೬೭.೦೪ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇ ೭೬.೨೯ ಇದ್ದರೆ ಮಹಿಳೆಯರ ಪ್ರಮಾಣವು ಶೇ ೫೭.೪೫ರಷ್ಟಿದೆ. ಅದೇ ರೀತಿಯಾಗಿ ರಾಜ್ಯದ ಪರಿಶಿಷ್ಟ ಜಾತಿಯ ಸಾಕ್ಷರತೆಯ ಪ್ರಮಾಣವು ಒಟ್ಟು ಶೇ ೫೨.೯೦ಇದೆ. ಇದರಲ್ಲಿ ಪುರುಷರ ಪ್ರಮಾಣವು ಶೇ ೬೩.೮೯ ಇದ್ದರೆ ಮಹಿಳೆಯರ ಪ್ರಮಾಣ ಶೇ ೪೧.೭೦ ಇದೆ. ಸಾಮಾನ್ಯರಿಗೂ ಪರಿಶಿಷ್ಟ ಜಾತಿಗೂ ಇರುವ ಶೈಕ್ಷಣಿಕ ಅಂತರವು ಒಟ್ಟು ಶೇ ೧೪.೧೪ ಇದೆ. ಇದರಲ್ಲಿ ಪುರುಷರ ಶೈಕ್ಷಣಿಕ ಅಂತರವು ಶೇ ೧೨.೪೯ ಇದ್ದರೆ ಮಹಿಳೆಯರ ಅಂತರವು ಶೇ ೧೫.೭೫ರಷ್ಟಿದೆ.

ಕೋಷ್ಟಕ ೫.೪: ೨೦೦೧ ಸಾಕ್ಷರತೆಯ ಮಾಹಿತಿ (ಶೇಕಡವಾರುಗಳಲ್ಲಿ)

ಕ್ರಸಂ	ವಿವರಗಳು	ಪುರುಷರು	ಮಹಿಳೆಯರು	ಒಟ್ಟು
೦೧.	ರಾಜ್ಯದ ಸಾಕ್ಷರತೆ ಪ್ರಮಾಣ	೭೬.೨೯	೫೭.೪೫	೬೭.೦೪
೦೨.	ಪ.ಜಾ ಸಾಕ್ಷರತೆ ಪ್ರಮಾಣ	೬೩.೮೦	೪೧.೭೦	೫೨.೯೦
೦೩.	ಅಂತರ (೧-೨)	೧೨.೪೯	೧೫.೭೫	೧೪.೧೪

ಆಧಾರ: ೨೦೦೧ರ ಜನಗಣತಿ ವರದಿ

ಭಾರತೀಯ ಜನಸಂಖ್ಯೆಯ ಬಹುಪಾಲನ್ನು ಈ ದೇಶದ ತಳಸಮುದಾಯಗಳು ಹೊಂದಿವೆ ಎನ್ನುವ ಮಾತು ಚಾಲ್ತಿಯಲ್ಲಿದೆ. ಬಡತನಕ್ಕೆ ಬಾಯಿಗಳು ಹೆಚ್ಚು ಎನ್ನುವ ಗಾದೆ ಮಾತು ಈ ಅರ್ಥದಲ್ಲಿಯೇ ಬಳಕೆಗೊಳ್ಳುತ್ತಿದೆ. ಜನಸಂಖ್ಯೆಯ ಬೆಳವಣಿಗೆಯನ್ನು ತಡೆಯಲು ಜನಸಂಖ್ಯಾಶಾಸ್ತ್ರಜ್ಞರೆಲ್ಲ ಶಿಫಾರಸ್ಸು ಮಾಡುವುದು ಜನತೆಯಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚಬೇಕು. ಅದರಲ್ಲೂ ಮುಖ್ಯವಾಗಿ ಮಹಿಳೆಯರ ಸಾಕ್ಷರತೆಯು ಜನಸಂಖ್ಯೆಯನ್ನು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದೇ ಹೇಳುತ್ತಾರೆ. ಜನಸಂಖ್ಯೆಯನ್ನು ನಿಯಂತ್ರಿಸುವಲ್ಲಿನ ವೈಫಲ್ಯಗಳ ಕುರಿತು ಆಶೀಶ್ ಬೋಸ್‌ರವರು ಈ ಕೆಳಗಿನ ಕಾರಣಗಳನ್ನು ನೀಡುತ್ತಾರೆ.

೧. ಶೀಘ್ರವಾಗಿ ಅನಕ್ಷರತೆಯನ್ನು ತೊಲಗಿಸುವಲ್ಲಿ ಇರುವ ಭಾರತೀಯರ ವೈಫಲ್ಯ

೨. ಜನಸಾಮಾನ್ಯರ ಕನಿಷ್ಠ ಜೀವನಾವಶ್ಯಕತೆಯನ್ನು ಪೂರೈಸುವಲ್ಲಿ ಇರುವ ಕೊರತೆ

೩. ಸಮಾಜದಲ್ಲಿ ಅನಕ್ಷರತೆಯು ವ್ಯಾಪಕವಾಗಿರುವುದರಿಂದ ಜನಸಂಖ್ಯೆಯ ಬೆಳವಣಿಗೆಯ ನಿಯಂತ್ರಣದ ಮಹತ್ವವನ್ನು ತಿಳಿಸಿಕೊಡುವುದರಲ್ಲಿನ ವೈಫಲ್ಯ.

ಬೋಸ್‌ರವರು ಮಹಿಳಾ ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸಿದಲ್ಲಿ ಮಾತ್ರ ಜನಸಂಖ್ಯೆಯ ನಿಯಂತ್ರಣ ಸಾಧ್ಯವಾಗುತ್ತದೆ ಎಂದು ಒತ್ತಿಹೇಳುತ್ತಾರೆ.

"ಸಾಕ್ಷರತೆಯಲ್ಲಿ ಕರ್ನಾಟಕದ ಸಾಧನೆ ಉತ್ತಮವಾಗಿದೆ. ರಾಜ್ಯದ ಸಾಕ್ಷರತೆಯ ಪ್ರಮಾಣವೂ ರಾಷ್ಟ್ರದ ಸಾಕ್ಷರತಾ ಪ್ರಮಾಣಕ್ಕಿಂತ ಅಧಿಕವಾಗಿದೆ. ಆದರೆ ಪ್ರಾದೇಶಿಕ ಸ್ವರೂಪ ಮತ್ತು ಮಹಿಳಾ ಸಾಕ್ಷರತೆಗೆ ಸಂಬಂಧಿಸಿದಂತೆ ಅದರ ಸಾಧನೆ ಹೇಳಿಕೊಳ್ಳುವಂತಿಲ್ಲ. ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಒಟ್ಟು ಸಾಕ್ಷರತೆಯ ಪ್ರಮಾಣ ಶೇ ೭೦ಕ್ಕಿಂತ ಕಡಿಮೆ ಇದೆ. ಕರ್ನಾಟಕವು ತನ್ನ ಪ್ರಾದೇಶಿಕ ಅಸಮಾನತೆಯನ್ನು ಸರಿಪಡಿಸಿಕೊಳ್ಳುವುದರಲ್ಲಿ ವಿಫಲವಿರುವುದಕ್ಕೆ ಸಾಕ್ಷರತೆಯ ಪ್ರಾದೇಶಿಕ ಸ್ವರೂಪವು ನಿದರ್ಶನವಾಗಿದೆ."೧ ಕರ್ನಾಟಕದಲ್ಲಿರುವ ಅನುಸೂಚಿತ ಪರಿಶಿಷ್ಟ ಜಾತಿಗಳ ಸಂಖ್ಯೆಯು ೧೦೧ರಷ್ಟಿದೆ. ಈ ೧೦೧ ಸಮುದಾಯಗಳ ಒಟ್ಟು ಸಾಕ್ಷರತಾ ಪ್ರಮಾಣವನ್ನು ಒಟ್ಟಾಗಿ ಪರಿಶಿಷ್ಟ ಜಾತಿಗಳ ಸಾಕ್ಷರತಾ ಪ್ರಮಾಣವೆಂದು ಪರಿಗಣಿಸಲಾಗುತ್ತದೆ. ವಾಸ್ತವವಾಗಿ ಈ ೧೦೧ ಸಮುದಾಯಗಳಲ್ಲಿ ಕೆಲವೇ ಕೆಲವು ಸಮುದಾಯಗಳು ಸಾಕ್ಷರತೆಯನ್ನು ಪಡೆಯುವಲ್ಲಿ ಪೂರ್ಣವಾಗಿ ಯಶಸ್ಸನ್ನು ಸಾಧಿಸಿವೆ ಎಂದು ಹೇಳಲಾಗದಿದ್ದರೂ ಸ್ವಲ್ಪಮಟ್ಟಿಗಾದರೂ ಅವು ಸಾಕ್ಷರತೆಯ ಅಂಚನ್ನು ತಲುಪುವಲ್ಲಿ ಯಶಸ್ವಿಯಾಗಿವೆ. ಆದರೆ ಬಹುತೇಕ ಪರಿಶಿಷ್ಟ ಜಾತಿಗಳ ಅಲ್ಪ ಜನಸಂಖ್ಯಾತ ಸಮುದಾಯಗಳು ಸಾಕ್ಷರತೆಯ ಅಂಚನ್ನು ತಲುಪಲೂ ಸಾಧ್ಯವಾಗದ ಸ್ಥಿತಿಯಲ್ಲಿವೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಮಾಲ (ಪರ್ವತ ಮಲ್ಲಯ್ಯ) ಸಮುದಾಯವನ್ನೇ ನೋಡಬಹುದು.

ಅಸ್ಪೃಶ್ಯತೆಯತೆ ಎಂಬುದು ಭಾರತಕ್ಕೆ ಅಂಟಿದ ಕಳಂಕವೇ ಸರಿ. ಅಸ್ಪೃಶ್ಯತೆಯ ಆಚರಣೆ ಸಾಮಾಜಿಕ ಪಿಡುಗಾಗಿದೆ. ಭಾರತದ ಅಸ್ಪೃಶ್ಯತೆಗೂ ಹಾಗೂ ಬಡತನಕ್ಕೂ ನಂಟಿದೆ. ಅದೇ ರೀತಿಯಾಗಿ ಅಸ್ಪೃಶ್ಯತೆಗೂ ಮತ್ತು ಅನಕ್ಷರತೆಗೂ ನಂಟಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಭಾರತದಲ್ಲಿ ಅನಕ್ಷರಸ್ಥರ ಪ್ರಮಾಣವು ಅಧಿಕವಾಗಿರಲು ಅಸ್ಪೃಶ್ಯತೆಯ ಆಚರಣೆಯೇ ಕಾರಣವೆಂಬುದನ್ನು ಮರೆಯಲಾಗದು. ರಾಜ್ಯದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ, ವಿಭಾಗದಿಂದ ವಿಭಾಗಕ್ಕೆ ಸಾಕ್ಷರತೆಯ ಪ್ರಮಾಣದಲ್ಲಿ ಅಸಮತೋಲನವಿದೆ. ಪ್ರಾಯಶಃ ಈ ರೀತಿಯ ಅಸಮತೋಲನಕ್ಕೆ ಬಡತನ ಎಷ್ಟು ಕಾರಣವೋ ಅಸ್ಪೃಶ್ಯತೆಯೂ ಅಷ್ಟೇ ಕಾರಣವಾಗಿದೆ.

ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ ಒಟ್ಟು ಶೈಕ್ಷಣಿಕ ಪ್ರಗತಿ ಎಂಬುದು ಕೇವಲ ಕೆಲವೇ ಮುಂಚೂಣಿಯಲ್ಲಿರುವ ಸಮುದಾಯಗಳಿಗೆ ಮಾತ್ರ ಸೀಮಿತವಾಗಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಇಂದು ಉದ್ಯೋಗ, ಶಿಕ್ಷಣ ಹಾಗೂ ಇತರ ಸವಲತ್ತುಗಳನ್ನು ಈ ಸಮುದಾಯಗಳು ಮಾತ್ರ ಅಲ್ಪ ಮಟ್ಟಿಗಾದರೂ ಪಡೆಯಲು ಸಾಧ್ಯವಾಗಿದೆ. ಆದರೆ ಅವುಗಳಲ್ಲಿಯೇ ಅಲ್ಪ ಸಂಖ್ಯಾತವಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳು ಶಿಕ್ಷಣದಂತಹ ಮೂಲಭೂತ ಸೌಲಭ್ಯವನ್ನು ಪಡೆಯಲು ಸಾವ್ಯವಾಗಿಲ್ಲವೆಂಬುದನ್ನು ತಿಳಿಸಲೇಬೇಕಾದ ಅನಿವಾರ್ಹತೆ ಇದೆ. ಈ ಮಾತನ್ನು ಹೇಳಲು ಮುಖ್ಯ ಕಾರಣವೇನೆಂದರೆ ಅವಕಾಶ ದೊರೆಯುವ ಸಮುದಾಯಗಳೊಂದಿಗೆ ಅವಕಾಶ ವಂಚಿತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ಮೂಲಭೂತ ಸೌಲಭ್ಯಗಳು ದೊರೆಯಬೇಕೆಂದೇ ಇದರ ಆಶಯವಾಗಿದೆ.

ದಲಿತರಲ್ಲಿಯೇ ದಲಿತರೆಂದು ಪರಿಗಣಿತದಾದ ಮಾಲ ಸಮುದಾಯದ ಮಹಿಳೆಯರು ಶೈಕ್ಷಣಿಕ ಪ್ರಗತಿಯಲ್ಲಿ ತುಂಬಾ ಹಿಂದುಳಿದಿದ್ದಾರೆ. ಮುಖ್ಯವಾಗಿ ಮೇಲ್ವರ್ಗಗಳಲ್ಲಿ ಸಾಮಾಜಿಕ ಕಾರಣಗಳಿಗಾಗಿ

ಮಹಿಳೆಯರನ್ನು ಮನೆಯಿಂದ ಹೊರಗೆ ವಿದ್ಯಾಭ್ಯಾಸಕ್ಕಾಗಿ ಕಳಿಸುವುದು ತುಂಬಾ ಅಪರೂಪವಾಗಿದೆ. ಹುಡುಗಿಯರು ಹದಿಮೂರು ವರ್ಷದಿಂದ ಹದಿನಾರು ವರ್ಷದೊಳಗೆ ಋತಿಮತಿಯಾಗುವುದು ಪ್ರಕೃತಿ ನಿಯಮ, ಹೀಗೆ ಮೈನೆರೆದ ಮಕ್ಕಳನ್ನು ಸಾಮಾಜಿಕ ಕಾರಣಗಳಿಗಾಗಿ ಮನೆಯಿಂದ ಹೊರಗೆ ಕಳಿಸಲು ಮೇಲ್ಜಾತಿಯವರು ಹಿಂಜರಿಯುವರು. ಆದರೆ ಇಂದು ಈ ರೀತಿಯ ಮನೋಭಾವನೆಯು ಸ್ವಲ್ಪ ತಗ್ಗಿದೆಯೆಂದೇ ಹೇಳಬಹುದೇನೊ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ, ಅವಳಿಗೆ ಬಂಡವಾಳ ತೊಡಗಿಸಿ ಓದುಸುವುದಕ್ಕಿಂತ ಅದೇ ಹಣವನ್ನು ವರದಕ್ಷಿಣೆಯಾಗಿ ನೀಡಿ ಮದುವೆ ಮಾಡಿಕೊಟ್ಟರೆ ಪಾಲಕರಾದ ತಮ್ಮ ಜವಬ್ದಾರಿ ಕಳಿಯುತ್ತದೆ ಎಂದೇ ಭಾವಿಸುವ ಪಾಲಕರ ಪ್ರಮಾಣವೇ ಹೆಚ್ಚು. ಹೀಗಾಗಿ ಮಹಿಳೆಯರಿಗೆ ಉನ್ನತ ಶಿಕ್ಷಣ ಕೊಡಿಸುವುದರಲ್ಲಿ ಪಾಲಕರು ಹಿಂಜರಿಯುತ್ತಾರೆ.

ತಳಸಮುದಾಯಗಳ ಜನರಿಗೆ ಶಿಕ್ಷಣಕ್ಕಿಂತ ತಮ್ಮ ನಿತ್ಯದ ಬವಣೆಯನ್ನು ಪೂರೈಸಿಕೊಳ್ಳುವುದೇ ಕಷ್ಟಸಾಧ್ಯದ ಕೆಲಸವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಅವರಿಗೆ ಮುಖ್ಯವಾಗಿಯೇ ಕಾಣುವುದಿಲ್ಲ.

ವಿಶೇಷವಾಗಿ ಹುಡುಗಿಯರಿಗೆ ಅಪ್ರಾಪ್ತ ವಯಸ್ಸಿನಲ್ಲಿಯೇ ಮದುವೆಮಾಡಿಕೊಡುವವರ ಪ್ರಮಾಣವೇ ಹೆಚ್ಚು. ವಿಶೇಷವಾಗಿ ತಳಸಮುದಾಯಗಳಲ್ಲಿ ಅದರಲ್ಲೂ ಅಲೆಮಾರಿತನವನ್ನು ಅಪ್ಪಿಕೊಂಡಿರುವ ಸಮುದಾಯಗಳಲ್ಲಿಯೇ ಈ ರೀತಿಯ ಮದುವೆಗಳು ಹೆಚ್ಚು ಪ್ರಮಾಣದಲ್ಲಿ ನಡೆಯುತ್ತವೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ.

ಮಕ್ಕಳನ್ನು ಶಾಲೆಯತ್ತ ಸೆಳೆಯಲು ಸರ್ಕಾರವು ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಮಧ್ಯಾಹ್ನದ ಬಿಸಿಊಟ, ಉಚಿತ ಪಠ್ಯಪುಸ್ತಕ, ವಿದ್ಯಾರ್ಥಿವೇತನ ಇತ್ಯಾದಿ ಆಮಿಷಗಳನ್ನು ಸರ್ಕಾರ ಒಡ್ಡುತ್ತಿದೆ. ಆದರೆ ಸರ್ಕಾರದ ಈ ಯೋಜನೆಯ ಪರಿಣಾಮವಾಗಿ ಇಂದು ದಾಖಲಾತಿಯ ಪ್ರಮಾಣವೂ ಹೆಚ್ಚಿದೆಯೆಂಬುದೇನೋ ಸರಿ. ಆದರೆ ಈ ಯೋಜನೆಗಳ ಪರಿಣಾಮಗಳು ಅಲೆಮಾರಿಗಳ ಮನಸ್ಸನ್ನು ಸೆಳೆಯುವಲ್ಲಿ ಸೋತಿವೆ. ದಿನಂಪ್ರತಿ ಊರಿಂದ ಊರಿಗೆ ಅಲೆಯುವ ಅಲೆಮಾರಿಗಳಿಗೆ ಹೋದದ್ದೇ ತಮ್ಮ ಊರು, ಒಂದು ದಿನ ಒಂದೂರಿನಲ್ಲಿದ್ದರೆ, ಮತ್ತೊಂದು ದಿನ ಮಗದೊಂದು ಊರಿನಲ್ಲಿರುತ್ತಾರೆ. ಇಂತಹ ಸ್ಥಿತಿಯಲ್ಲಿ ಮಕ್ಕಳನ್ನು ಯಾವ ಊರಿನ ಶಾಲೆಗೆ ಕಳಿಸಬೇಕೆಂಬುದೇ ಅವರಿಗೆ ದೊಡ್ಡ ಸಮಸ್ಯೆಯಾಗಿ ಕಾಡುತ್ತದೆ. ಈ ಸತ್ಯ ಪ್ರಾಯಶಃ ಕ್ಷೇತ್ರಕಾರ್ಯಕ್ಕೆ ಹೋಗದೇ ಇದ್ದರೆ ತಿಳಿಯುತ್ತಲೇ ಇರಲಿಲ್ಲ. ಕ್ಷೇತ್ರಕಾರ್ಯದಲ್ಲಿ ಗಮನಿಸಿದಂತೆ ಶಾಲೆಗೆ ಹೋಗಬೇಕಾದ ಎಷ್ಟೋ ಮಕ್ಕಳು ಶಾಲೆಯಿಂದ ಹೊರಗುಳಿದುರುವುದನ್ನು ಕಾಣುವಂತಾಯಿತು. ಇದು ಏಕೆ ಹೀಗೆ ಎಂದು ಪ್ರಶ್ನಿಸಿದರೆ ಬದುಕಿನ ಅನಿವಾರ್ಯತೆಯಂದೇ ಪಾಲಕರು ಉತ್ತರ ಹೇಳಿದರು.

ಗಮನಿಸಬೇಕಾದ ಅಂಶವೆಂದರೆ ಬಹುತೇಕ ಪರಿಶಿಷ್ಟ ಜಾತಿಯ ಪುರುಷ ಮಕ್ಕಳು ಇಂದು ಶೇಕಡ ೮೦ ರಷ್ಟು ಶಾಲೆಗೆ ಹೋಗುತ್ತಿವೆಯಾದರೂ ಅದು ಉನ್ನತ ಶಿಕ್ಷಣಕ್ಕೆ ಹೋದಂತೆಲ್ಲಾ ವಿದ್ಯಾರ್ಥಿಗಳ ಪ್ರಮಾಣ ಗಣನೀಯವಾಗಿ ಇಳಿಮುಖವಾಗುತ್ತ ಸಾಗುತ್ತದೆ. ಅದರಲ್ಲೂ ಉನ್ನತ ಶಿಕ್ಷಣಕ್ಕೆ ಹೋಗುವ ಪರಿಶಿಷ್ಟ ಜಾತಿಯ ಹೆಣ್ಣು ಮಕ್ಕಳ ಪ್ರಮಾಣವಂತೂ ಶೇಕಡ ೧ರಷ್ಟು ಇಲ್ಲವೆಂದರೆ

ಆಶ್ಚರ್ಯವಾಗುತ್ತದೆ. ಕರ್ನಾಟಕ ಮಾನವಾಭಿವೃದ್ಧಿ ವರದಿ ೨೦೦೫ರ ಸಮೀಕ್ಷೆ ಪ್ರಕಾರ "ಪ್ರಾಥಮಿಕ ಶಿಕ್ಷಣದ ಮೊದಲ ಮೂರರಿಂದ ನಾಲ್ಕು ವರ್ಷಗಳವರೆಗೆ ಮಕ್ಕಳು ಶಾಲೆಗೆ ದಾಖಲಾಗುವುದಿಲ್ಲ ಇಲ್ಲವೆ ಹಾಜರಾಗುವುದಿಲ್ಲ. ಇದರಿಂದ ಮುಂದೆ ಮಕ್ಕಳು ಅನಕ್ಷರಸ್ಥರಾಗಿ ಉಳಿದುಬಿಡುತ್ತಾರೆ. ಇದಲ್ಲದೆ ವಿವಿಧ ಹಂತಗಳಲ್ಲಿ ಶಾಲೆ ಬಿಡುವವರ ಸಂಖ್ಯೆಯೂ ಹೆಚ್ಚಾಗಿದೆ. ಶಿಕ್ಷಣದ ಮೊದಲ ಊರುಗೋಲೇ ಶಾಲಾ ದಾಖಲಾತಿ. ಇಲ್ಲಿ ಪರಿಶಿಷ್ಟ ಜಾತಿ, ಪಂಗಡಗಳನ್ನು ಹೊರತು ಪಡಿಸಿ ಇತರ ಸಾಮಾಜಿಕ ಗುಂಪುಗಳ ಸಾಧನೆಯು ಉತ್ತಮವಾಗಿದೆ"೨

೫.೬ ಕರ್ನಾಟಕದಲ್ಲಿ ಶಾಲೆಯಿಂದ ಹೊರಗುಳಿದ ೬-೧೪ ವಯೋಮಾನದ ಮಕ್ಕಳ ವಿವರ

ಆರ್ಥಿಕ ಹಾಗೂ ಸಾಂಖ್ಯಿಕ ನಿರ್ದೇಶನಾಲಯವು ೨೦೦೪ರಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ಕುಟುಂಬಗಳ ಕುರಿತು ಮಾದರಿ ಸಮೀಕ್ಷೆಯನ್ನು ಕೈಗೊಂಡಿತ್ತು. ಅದು ೯ರಿಂದ ೩೫ ವಯೋಮಾನದೊಳಗಿನ ಜನರ ಮಾಹಿತಿಯನ್ನು ಪಡೆದಿದೆ. ಈ ಸಮೀಕ್ಷೆಯು ಮಕ್ಕಳು ಶಾಲೆಯನ್ನು ಬಿಡಲು ಕೆಲವು ಕಾರಣಗಳನ್ನು ಗುರುತಿಸಿದೆ. ಅವುಗಳಾವುವೆಂದರೆ ಕ್ರಮವಾಗಿ

"೧. ಮನೆಯಲ್ಲಿ ಗೃಹಕೃತ್ಯದ ಕೆಲಸಗಳಲ್ಲಿ ತೊಡಗುವುದು.

೨. ಪಾಲಕರಿಗೆ ಮಕ್ಕಳ ಶಿಕ್ಷಣದ ಹೊರೆಯನ್ನು ಭರಿಸಲು ಸಾಧ್ಯವಾಗದೇ ಇರುವುದು.

೩. ಮಕ್ಕಳ ಪಾಲನೆ ಪೋಷಣೆಗಾಗಿ ಶಾಲೆಯನ್ನು ತೋರೆಯುವುದು.

೪. ಹೊರಗೆ ಕೂಲಿ ಕೆಲಸಗಳಲ್ಲಿ ತೊಡಗುವುದು, ಮುಂತಾದವುಗಳಾಗಿವೆ.

ಮಾಲ ಸಮುದಾಯದ ಮಕ್ಕಳ ಸಮಸ್ಯಗಳು

೧. ಹೋಟ್ಟೆಪಾಡಿಗಾಗಿ ಭಿಕ್ಷೆಬೇಡಲು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವುದು.

೨. ಸಣ್ಣ ಪುಟ್ಟ ಪ್ಲಾಸ್ಟಿಕ್ ವಸ್ತುಗಳನ್ನು ಮಾರಾಟ ಮಾಡಲು ಊರಿಂದೂರಿಗೆ ಹೋಗುವುದು.

೩. ಸಣ್ಣ ಪುಟ್ಟ ಜಾತ್ರೆಗಳಿಗೆ ಸ್ಟೆಷನರಿ ಸಮಾನುಗಳನ್ನು ಮಾರಾಟಮಾಡಲು ಹೋಗುವುದು.

೪. ಗೌಂಡಿ ಕೆಲಸಗಳಿಗೆ ರಸ್ತೆ ನಿರ್ಮಾಣದ ಕೆಲಸಗಳಿಗೆ ದಿನಗೂಲಿ ಹೋಗುವುದು.

೫. ಮನೆಯಲ್ಲಿ ಹುಟ್ಟಿದ ಚಿಕ್ಕಮಕ್ಕಳ ಆರೈಕೆಗಾಗಿ ಹಿರಿಯ ಮಕ್ಕಳನ್ನು ಶಾಲೆ ಬಿಡಿಸುವುದು ಮತ್ತು ಚಿಕ್ಕ ಮಕ್ಕಳ ಆರೈಕೆಯ ಜವಾಬ್ದಾರಿ ಕೋಡುವುದು.

೬. ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ೧೦ - ೧೨ ವರ್ಷದವರಾಗುದರೋಳಗೆ ಕೂಲಿ ಕೆಲಸದಾಳುಗಾಳಾಗಿ ದುಡಿಯಲು ಪ್ರಾರಂಭಿಸುವುದು.

೭. ಕಲಿಕಾ ಪ್ರಕ್ರಿಯೆಯಲ್ಲಿನ ಪರಿಕರಗಳನ್ನು ಕೊಂಡುಕೋಳ್ಳಲು ಸಾಮರ್ಥ್ಯ ಇಲ್ಲದೆ ಇರುವುದು.

೮. ಮನೆಯಲ್ಲಿ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಹಲವಾರು ಕೆಲಸದ ಜವಾಬ್ದಾರಿ ಕೊಟ್ಟಿರುವುದರಿಂದ ಮಕ್ಕಳು ಕಲಿಕೆಯಲ್ಲಿನ ಆಸಕ್ತಿಯನ್ನು ತೋರೆಯುವುದು.

೯. ಮಕ್ಕಳಿಗೆ ಕಲಿಯಲು ಪಾಲಕರು ಪ್ರೋತ್ಸಾಹ ಮತ್ತು ಪುಷ್ಠಿಕರಣ ನೀಡದೆ ಇರುವುದು.

೧೦. ಕೇಲವು ಮಕ್ಕಳಲ್ಲಿ ಆಲಿಸುವ ಮಾತನಾಡುವ ಕೋರತೆ ಮತ್ತು ಕಲಿಕೆಯಲ್ಲಿನ ಆಸಕ್ತಿಯ ಅಭಾವವಿರುವುದು.

೧೧. ಇವರು ಸದಾ ಅಲೆಮಾರಿಯಾಗಿರುವುದರಿಂದ ಸರ್ಕಾರದ ಶೈಕ್ಷಣಿಕ ಯೋಜನೆಗಳು ಸರಿಯಾಗಿ ದೊರಕದೆ ಇರುವುದು.

೧೨. ಮಕ್ಕಳ ದಾಖಲಾತಿ ಒಂದು ಊರಿನಲ್ಲಿದ್ದರೆ ಇವರ ಅಲೆಮಾರಿತನದಿಂದ ಇನ್ನೊಂದು ಊರಿನಲ್ಲಿ ವಾಸವಾಗಿರುತ್ತಾರೆ.

ಪ್ರೌಢ ಶಿಕ್ಷಣದಲ್ಲಿಯ ದಾಖಲಾತಿ ಪ್ರಮಾಣವು ಪ್ರಾಥಮಿಕ ಹಂತಕ್ಕಿಂತಲೂ ಕಡಿಮೆಯಾಗಿದೆ. ಹಾಗೇ ಉನ್ನತ ಶಿಕ್ಷಣ ಹಂತದಲ್ಲಿ ಈ ಪ್ರಮಾಣ ಇನ್ನು ಕುಗ್ಗುತ್ತದೆ. ತಾಂತ್ರಿಕ ಶಿಕ್ಷಣದಲ್ಲಂತೂ (ಡಿಪ್ಲಾಮೊ, ಬಿ.ಇ, ಬಿಟೆಕ್, ವೈದ್ಯಕೀಯ ಇತ್ಯಾದಿ) ಪರಿಶಿಷ್ಟ ಪಂಗಡದ ಮಕ್ಕಳ ಪಾಲು ೨೦೦೦ದಲ್ಲಿ ಶೇಕಡ ೦.೧ರಷ್ಟು ಇದ್ದು ೨೦೦೨-೦೩ರ ಹೊತ್ತಿಗೆ ಅದು ಶೇಕಡ ೧.೭ರಷ್ಟು ಏರಿಕೆ ಕಂಡಿದೆ. ಡಿಪ್ಲೊಮೋ ಕೋರ್ಸ್‌ಗಳಲ್ಲಿ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ದಾಖಾಲಾತಿಯು ಕನಿಷ್ಟ ಶೇಕಡ ೦.೭ರಷ್ಟು ಕಂಡು ಬಂದಿದೆ."೩ ಸರ್ಕಾರದ ಹೊಸ ಹೊಸ ಯೋಜನೆಗಳಾದ ವಿದ್ಯಾರ್ಥಿವೇತನ, ಉಚಿತ ವಸತಿ ನಿಲಯಗಳ ಸೌಲಭ್ಯ ಇತ್ಯಾದಿಗಳು ಇಂದು ಪರಿಶಿಷ್ಟ ಜಾತಿಯ ಮಕ್ಕಳಿಗೆ ದೊರೆಯುತ್ತಿವೆಯಾದರೂ ಸಹ ಆ ಸಮುದಾಯಗಳು ನಿರೀಕ್ಷಿತ ಮಟ್ಟದಲ್ಲಿ ಶೈಕ್ಷಣಿಕ ಪ್ರಗತಿಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲ.

೫.೭ ಕರ್ನಾಟಕದ ಮಾಲ ಸಮುದಾಯಕ್ಕೆ ಸೇರಿದವರ ಜನಸಂಖ್ಯೆಯ ವಿವರ

೨೦೧೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ನೆಲೆಸಿರುವ ಮಾಲ ಸಮುದಾಯದ ಎಲ್ಲಾ ಒಳಪಂಗಡಗಳನ್ನೊಳಗೊಂಡ ಒಟ್ಟು ಜನಸಂಖ್ಯೆಯು ೨೦,೧೦೫ ಇದೆ. ಇದರಲ್ಲಿ ಪುರುಷರು ೧೦,೧೦೦, ಮಹಿಳೆಯರು ೧೦,೦೦೫ ಇರುವರು. ನಗರ ಪ್ರದೇಶದೊಳಗೆ ನೆಲೆಸಿರುವ ಮಾಲ ಸಮುದಾಯದ ಒಟ್ಟು

ಕೋಷ್ಟಕ ೫.೫: ಕರ್ನಾಟಕದ ಮಾಲ ಸಮುದಾಯಕ್ಕೆ ಸೇರಿದವರ ಜನಸಂಖ್ಯೆಯ ವಿವರ

ಕ್ರ ಸಂ	ವಿವರ	ಜನಸಂಖ್ಯೆ		
		ಒಟ್ಟು	ಗಂಡು	ಹೆಣ್ಣು
೧	ನಗರ	೧೬,೩೭೪	೮,೨೧೧	೮,೧೬೩
೨	ಗ್ರಾಮೀಣ	೩,೭೩೧	೧,೮೮೯	೧,೮೪೨
೩	ಒಟ್ಟು	೨೦,೧೦೫	೧೦,೧೦೦	೧೦,೦೦೫

ಆಧಾರ: ೨೦೧೧ರ ಜನಗಣತಿ ವರದಿ

ವೃತ್ತಚಿತ್ರ: ೫.೨. ಕರ್ನಾಟಕದ ಮಾಲ ಸಮುದಾಯಕ್ಕೆ ಸೇರಿದವರ ಜನಸಂಖ್ಯೆಯ ವಿವರ



ಜನಸಂಖ್ಯೆಯು ೧೬,೩೭೪ ಇದೆ. ಇದರಲ್ಲಿ ಪುರುಷರು ೮,೨೧೧, ಮಹಿಳೆಯರು ೮,೧೬೩ ಇರುವರು. ಗ್ರಾಮೀಣ ಪ್ರದೇಶದೊಳಗೆ ನೆಲೆಸಿರುವ ಮಾಲ ಸಮುದಾಯದ ಒಟ್ಟು ಜನಸಂಖ್ಯೆಯು ೩,೭೩೧ ಇದೆ. ಇದರಲ್ಲಿ ಪುರುಷರು ೧,೮೮೯, ಮಹಿಳೆಯರು ೧,೮೪೨ ಇರುವರು.

೫.೮ ಸಮೀಕ್ಷೆಗೆ ಒಳಪಡಿಸಿದ ಮಾಲ ಸಮುದಾಯದ ಒಟ್ಟು ಜನಸಂಖ್ಯೆ

ಸಮೀಕ್ಷೆಗೆ ಒಳಪಡಿಸಿದ ಮಾಲ ಸಮುದಾಯವು ಅಲೆಮಾರಿಗಳಾಗಿದ್ದು ಕರ್ನಾಟಕದ ಕೊಪ್ಪಳ, ಗದಗ, ಧಾರವಾಡ, ಹಾವೇರಿ, ಶಿವಮೊಗ್ಗ, ಮೈಸೂರು, ರಾಯಚೂರು ಒಟ್ಟು ಏಳು ಜಿಲ್ಲೆಗಳಲ್ಲಿ ಮಾತ್ರ ಕಂಡುಬರುವರು.


ಕೋಷ್ಟಕ ೫.೬: ಸಮೀಕ್ಷೆಗೆ ಒಳಪಡಿಸಿದ ಮಾಲ ಸಮುದಾಯದ ಒಟ್ಟು ಜನಸಂಖ್ಯೆ

ಕ್ರ ಸಂ	ವಿವರ	ಜನಸಂಖ್ಯೆ		
		ಒಟ್ಟು	ಗಂಡು	ಹೆಣ್ಣು
೧	ಒಟ್ಟು	೧,೬೪೧	೮೧೮	೮೨೩

ಆಧಾರ: ಕ್ಷೇತ್ರಕಾರ್ಯದ ಸಮೀಕ್ಷೆ



ವೃತ್ತಚಿತ್ರ: ೫.೩. ಸಮೀಕ್ಷೆಗೆ ಒಳಪಡಿಸಿದ ಮಾಲ ಸಮುದಾಯದ ಒಟ್ಟು ಶೇಕಡಾವಾರು ಜನಸಂಖ್ಯೆ ಪ್ರಮಾಣ



ಇವರ ಒಟ್ಟು ಜನಸಂಖ್ಯೆಯು ೧,೬೪೧ ಮಾತ್ರ ಇದೆ. ಇದರಲ್ಲಿ ಪುರುಷರು ೮೧೮, ಮಹಿಳೆಯರು ೮೨೩ ಇರುವರು.

೫.೯ ಸಮೀಕ್ಷೆಗೊಳಪಡಿಸಿದ ಮಾಲ ಸಮುದಾಯದ ಸಾಕ್ಷರತೆ ಹೊಂದಲು ಅನರ್ಹವಾದವರು ಹಾಗೂ ಅರ್ಹವಾದವರು

ಸಮೀಕ್ಷೆಗೆ ಒಳಪಡಿಸಿದ ಮಾಲ ಸಮುದಾಯದ ಒಟ್ಟು ಜನಸಂಖ್ಯೆಯಲ್ಲಿ ೦-೬ ವಯೋಮಾನದೊಳಗಿನ ಮಕ್ಕಳು ಒಟ್ಟು ೧೭೪ ಇವೆ. ಇದರಲ್ಲಿ ಗಂಡು ೮೫ ಹಾಗೂ ಹೆಣ್ಣು ೮೯ ಇವೆ. ಭಾರತ ಸರ್ಕಾರದ ನಿಯಮದ ಪ್ರಕಾರ ೦-೬ ವಯೋಮಾನದ ಮಕ್ಕಳು ಶಾಲೆಗೆ ಹೋಗಲು ಅರ್ಹವಾದವುಗಳಲ್ಲ ಎಂದು ಪರಿಗಣಿಸಲಾಗಿದೆ. ಹೀಗಾಗಿ ಈ ವಯೋಮಾನದ ಮಕ್ಕಳನ್ನು ಸಾಕ್ಷರತೆ ಹೊಂದಲು ಅನರ್ಹವೆಂದು ಪರಿಗಣಿಸಲಾಗಿದೆ. ೬ ವರ್ಷದ ನಂತರದ ಎಲ್ಲಾ ವಯೋಮಾನದವರೂ ಸಾಕ್ಷರರಾಗಲು ಅರ್ಹವೆಂದು ಪರಿಗಣಿಸಲಾಗಿದೆ. ಸಮೀಕ್ಷೆಗೆ ಒಳಪಡಿಸಿದ ಸಾಕ್ಷರತೆ ಹೊಂದಲು ಅರ್ಹವಾದವರ ಸಂಖ್ಯೆಯು ಒಟ್ಟು ೧೪೬೬ ಇದೆ. ಇದರಲ್ಲಿ ಪುರುಷರು ೭೩೩ ಹಾಗೂ ಮಹಿಳೆಯರು ೭೩೩ ಇದೆ.

ಕೋಷ್ಟಕ ೫.೭: ಸಮೀಕ್ಷೆಗೊಳಪಡಿಸಿದ ಮಾಲ ಸಮುದಾಯದ ಸಾಕ್ಷರತೆ ಹೊಂದಲು ಅನರ್ಹವಾದವರು ಹಾಗೂ ಅರ್ಹವಾದವರ ವಿವರ

ಕ್ರಸಂ	ಜಿಲ್ಲೆ	ಸಾಕ್ಷರತೆ ಹೊಂದಲು ಅನರ್ಹವಾದವರು (೦-೬ ರೊಳಗಿನ ವಯೊಮಾನದವರು)			ಸಾಕ್ಷರತೆ ಹೊಂದಲು ಅರ್ಹವಾದವರು (೬ ರಿಂದ ೬೦ ರ ಮೇಲ್ಪಟ್ಟವರು)		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕೊಪ್ಪಳ	೫೨	೫೫	೧೦೭	೪೮೧	೪೮೧	೯೬೨
೨	ಗದಗ	೩	೨	೫	೨೪	೨೬	೫೦
೩	ಧಾರವಾಡ	೧೩	೧೩	೨೬	೫೯	೬೦	೧೧೯
೪	ಮೈಸೂರು	೨	೧	೩	೧೭	೧೯	೩೬
೫	ರಾಯಚೂರು	೨	೨	೪	೧೪	೧೫	೨೯
೬	ಶಿವಮೊಗ್ಗ	೩	೪	೭	೪೪	೪೨	೮೬
೭	ಹಾವೇರಿ	೧೦	೧೨	೨೨	೯೪	೯೦	೧೮೪
	ಒಟ್ಟು	**೮೫**	**೮೯**	**೧೭೪**	**೭೩೩**	**೭೩೩**	**೧೪೬೬**

ಆಧಾರ: ಕ್ಷೇತ್ರಕಾರ್ಯದ ಸಮೀಕ್ಷೆ

ಕೊಪ್ಪಳ ಜಿಲ್ಲೆಯಲ್ಲಿ ಸಾಕ್ಷರತೆ ಹೊಂದಲು ಅನರ್ಹವಾದವರು ಒಟ್ಟು ೧೦೭ ಮಕ್ಕಳಿವೆ. ಅದರಲ್ಲಿ ಗಂಡು ೫೨, ಹೆಣ್ಣು ೫೫ ಮಕ್ಕಳಿವೆ. ಈ ಜಿಲ್ಲೆಯಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೯೬೨ ಜನರಿರುವರು. ಅದರಲ್ಲಿ ಗಂಡು ೪೮೧, ಹೆಣ್ಣು ೪೮೧ ಜನರಿರುವರು.

ಗದಗ ಜಿಲ್ಲೆಯಲ್ಲಿ ಸಾಕ್ಷರತೆ ಹೊಂದಲು ಅನರ್ಹವಾದವರು ಒಟ್ಟು ೫ ಮಕ್ಕಳಿವೆ. ಅದರಲ್ಲಿ ಗಂಡು ೩, ಹೆಣ್ಣು ೨ ಮಕ್ಕಳಿವೆ. ಈ ಜಿಲ್ಲೆಯಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೫೦ ಜನರಿರುವರು. ಅದರಲ್ಲಿ ಗಂಡು ೨೪ ಜನರಿರುತ್ತಾರೆ. ಹೆಣ್ಣು ೨೬ ಜನರಿರುವರು.

ಧಾರವಾಡ ಜಿಲ್ಲೆಯಲ್ಲಿ ಸಾಕ್ಷರತೆ ಹೊಂದಲು ಅನರ್ಹವಾದವರು ಒಟ್ಟು ೨೬ ಮಕ್ಕಳಿವೆ. ಅದರಲ್ಲಿ ಗಂಡು ೧೩, ಹೆಣ್ಣು ೧೩ ಮಕ್ಕಳಿವೆ. ಈ ಜಿಲ್ಲೆಯಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೧೧೯ ಜನರಿರುವರು. ಅದರಲ್ಲಿ ಗಂಡು ೫೯, ಹೆಣ್ಣು ೬೦ ಜನರಿರುವರು.

ಮೈಸೂರು ಜಿಲ್ಲೆಯಲ್ಲಿ ಸಾಕ್ಷರತೆ ಹೊಂದಲು ಅನರ್ಹವಾದವರು ಒಟ್ಟು ೩ ಮಕ್ಕಳಿವೆ. ಅದರಲ್ಲಿ ಗಂಡು ೨, ಹೆಣ್ಣು ೧ ಮಗುವಿದೆ. ಈ ಜಿಲ್ಲೆಯಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೩೬ ಜನರಿರುವರು. ಅದರಲ್ಲಿ ಗಂಡು ೧೭, ಹೆಣ್ಣು ೧೯ ಜನರಿರುವರು.

ರಾಯಚೂರು ಜಿಲ್ಲೆಯಲ್ಲಿ ಸಾಕ್ಷರತೆ ಹೊಂದಲು ಅನರ್ಹವಾದವರು ಒಟ್ಟು ೪ ಮಕ್ಕಳಿವೆ. ಅದರಲ್ಲಿ ಗಂಡು ೨, ಹೆಣ್ಣು ೨ ಮಕ್ಕಳಿವೆ. ಈ ಜಿಲ್ಲೆಯಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೨೯ ಜನರಿರುವರು. ಅದರಲ್ಲಿ ಗಂಡು ೧೪, ಹೆಣ್ಣು ೧೫ ಜನರಿರುವರು.

ಶಿವಮೊಗ್ಗ ಜಿಲ್ಲೆಯಲ್ಲಿ ಸಾಕ್ಷರತೆ ಹೊಂದಲು ಅನರ್ಹವಾದವರು ಒಟ್ಟು ೭ ಮಕ್ಕಳಿವೆ. ಅದರಲ್ಲಿ ಗಂಡು ೩, ಹೆಣ್ಣು ೪ ಮಕ್ಕಳಿವೆ. ಈ ಜಿಲ್ಲೆಯಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೮೬ ಜನರಿರುವರು. ಅದರಲ್ಲಿ ಗಂಡು ೪೪, ಹೆಣ್ಣು ೪೨ ಜನರಿರುವರು.

ಹಾವೇರಿ ಜಿಲ್ಲೆಯಲ್ಲಿ ಸಾಕ್ಷರತೆ ಹೊಂದಲು ಅನರ್ಹವಾದವರು ಒಟ್ಟು ೨೨ ಮಕ್ಕಳಿವೆ. ಅದರಲ್ಲಿ ಗಂಡು ೧೦, ಹೆಣ್ಣು ೧೨ ಮಕ್ಕಳಿವೆ. ಈ ಜಿಲ್ಲೆಯಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೧೮೪ ಜನರಿರುವರು. ಅದರಲ್ಲಿ ಗಂಡು ೯೪, ಹೆಣ್ಣು ೯೦ ಜನರಿರುವರು.

ಒಟ್ಟಾರೆಯಾಗಿ ಹೇಳುವುದಾದರೆ ಸಮೀಕ್ಷೆಗೆ ಒಳಪಡಿಸಿದ ಮಾಲ ಸಮುದಾಯದವರಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಪುರುಷ ಹಾಗೂ ಮಹಿಳೆಯರು ಸರಿಸಮವಾಗಿರುವರು.

೫.೧೦ ಮಾಲ ಸಮುದಾಯದ ಸಾಕ್ಷರರು ಹಾಗೂ ಅನಕ್ಷರಸ್ಥರು

ಸಮೀಕ್ಷೆಗೊಳಪಡಿಸಿದ ಕೊಪ್ಪಳ ಜಿಲ್ಲೆಯ ಮಾಲ ಸಮುದಾಯದವರಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೯೬೨ ಜನರಿರುವರು. ಇದರಲ್ಲಿ ಪುರುಷರರು ೪೮೧ ಜನರಿರುವರು. ಮಹಿಳೆಯರು ೪೮೧ ಜನರಿರುವರು. ಆದರೆ ಸಾಕ್ಷರತೆ ಹೊಂದಿದವರು ಮಾತ್ರ ಒಟ್ಟು ೩೩೦ ಜನರಿದ್ದಾರೆ. ಇದರಲ್ಲಿ ಪುರುಷರು ೧೯೮ ಇದ್ದರೆ, ಮಹಿಳೆಯರು ೧೩೨ ಜನರಿರುವರು. ಅನಕ್ಷರಾಗಿರುವವರು ಒಟ್ಟು ೬೩೨ ಜನ, ಅದರಲ್ಲಿ ಪುರುಷರು ೧೬೦ ಜನರು ಹಾಗೂ ಮಹಿಳೆಯರು ೪೭೨ ಜನರಿದ್ದಾರೆ.

ಕೋಷ್ಟಕ ೫.೮: ಮಾಲ ಸಮುದಾಯದ ಸಾಕ್ಷರರು ಹಾಗೂ ಅನಕ್ಷರಸ್ಥರ ವಿವರ

ಜಿಲ್ಲೆ	ಸಾಕ್ಷರತೆ ಹೊಂದಲು ಅರ್ಹವಾದವರು (೬ ರಿಂದ ೬೦ ರ ವಯೊಮಾನದವರು.)			ಅನಕ್ಷರರು (೬ ರ ಮೇಲ್ಪಟ್ಟ ವಯೊಮಾನದವರು)			ಸಾಕ್ಷರತೆ ಹೊಂದಿದವರು (೬ ರ ನಂತರದವರು		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಕೊಪ್ಪಳ	೪೮೧	೪೮೧	೯೬೨	೧೬೦	೪೭೨	೬೩೨	೧೯೮	೧೩೨	೩೩೦
ಗದಗ	೨೪	೨೬	೫೦	೦೮	೨೦	೨೮	೧೪	೦೮	೨೨
ಧಾರವಾಡ	೫೯	೬೦	೧೧೯	೨೨	೪೨	೬೪	೩೪	೨೧	೫೫
ಮೈಸೂರು	೧೭	೧೯	೩೬	೦೮	೧೧	೧೯	೧೧	೦೮	೧೯

ರಾಯಚೂರು	೧೪	೧೫	೨೯	೦೬	೧೦	೧೬	೦೮	೦೫	೧೩
ಶಿವಮೊಗ್ಗ	೪೪	೪೨	೮೬	೨೦	೩೬	೫೬	೧೯	೧೧	೩೦
ಹಾವೇರಿ	೯೪	೯೦	೧೮೪	೩೮	೭೪	೧೧೨	೪೬	೨೬	೭೨
ಒಟ್ಟು	**೭೩೩**	**೭೩೩**	**೧೪೬೬**	**೨೬೨**	**೬೬೫**	**೯೨೭**	**೩೩೦**	**೨೧೧**	**೫೪೧**

ಆಧಾರ: ಕ್ಷೇತ್ರಕಾರ್ಯದ ಸಮೀಕ್ಷೆಯ ವರದಿ

ಗದಗ ಜಿಲ್ಲೆಯ ಮಾಲ ಸಮುದಾಯದವರಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೫೦ ಜನರಿರುವರು. ಇದರಲ್ಲಿ ಪುರುಷರು ೨೪ ಜನರಿರುವರು. ಮಹಿಳೆಯರು ೨೬ ಜನರಿರುವರು. ಆದರೆ ಸಾಕ್ಷರತೆ ಹೊಂದಿದವರು ಮಾತ್ರ ಒಟ್ಟು ೨೨ ಜನರಿದ್ದಾರೆ. ಇದರಲ್ಲಿ ಪುರುಷರು ೧೪ ಇದ್ದರೆ, ಮಹಿಳೆಯರು ೮ ಜನರಿರುವರು. ಅನಕ್ಷರಾಗಿರುವವರು ಒಟ್ಟು ೨೮ ಜನ, ಅದರಲ್ಲಿ ಪುರುಷರು ೮ ಹಾಗೂ ಮಹಿಳೆಯರು ೨೦ ಜನರಿದ್ದಾರೆ.

ಧಾರವಾಡ ಜಿಲ್ಲೆಯ ಮಾಲ ಸಮುದಾಯದವರಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೧೧೯ ಜನರಿರುವರು. ಇದರಲ್ಲಿ ಪುರುಷರು ೫೯ ಜನರಿರುವರು. ಮಹಿಳೆಯರು ೬೦ ಜನರಿರುವರು. ಆದರೆ ಸಾಕ್ಷರತೆ ಹೊಂದಿದವರು ಮಾತ್ರ ಒಟ್ಟು ೫೫ ಜನರಿದ್ದಾರೆ. ಇದರಲ್ಲಿ ಪುರುಷರು ೩೪ ಇದ್ದರೆ, ಮಹಿಳೆಯರು ೨೧ ಜನರಿರುವರು. ಅನಕ್ಷರಾಗಿರುವವರು ಒಟ್ಟು ೬೪ ಜನರು. ಅದರಲ್ಲಿ ಪುರುಷರು ೨೨ ಜನರು ಹಾಗೂ ಮಹಿಳೆಯರು ೪೨ ಜನರಿದ್ದಾರೆ.

ಮೈಸೂರು ಜಿಲ್ಲೆಯ ಮಾಲ ಸಮುದಾಯದವರಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೩೬ ಜನರಿರುವರು. ಇದರಲ್ಲಿ ಪುರುಷರು ೧೭ ಜನರಿರುವರು. ಮಹಿಳೆಯರು ೧೯ ಜನರಿರುವರು. ಆದರೆ ಸಾಕ್ಷರತೆ ಹೊಂದಿದವರು ಮಾತ್ರ ಒಟ್ಟು ೧೯ ಜನರಿದ್ದಾರೆ. ಇದರಲ್ಲಿ ಪುರುಷರು ೧೧ ಇದ್ದರೆ, ಮಹಿಳೆಯರು ೮ ಜನರಿರುವರು. ಅನಕ್ಷರಾಗಿರುವವರು ಒಟ್ಟು ೧೯ ಜನ, ಅದರಲ್ಲಿ ಪುರುಷರು ೮ ಜನರು, ಹಾಗೂ ಮಹಿಳೆಯರು ೧೧ ಜನರಿದ್ದಾರೆ.

ರಾಯಚೂರು ಜಿಲ್ಲೆಯ ಮಾಲ ಸಮುದಾಯದವರಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೨೯ ಜನರಿರುವರು. ಇದರಲ್ಲಿ ಪುರುಷರು ೧೪ ಜನರಿರುವರು. ಮಹಿಳೆಯರು ೧೫ ಜನರಿರುವರು. ಆದರೆ ಸಾಕ್ಷರತೆ ಹೊಂದಿದವರು ಮಾತ್ರ ಒಟ್ಟು ೧೩ ಜನರಿದ್ದಾರೆ. ಇದರಲ್ಲಿ ಪುರುಷರು ೮ ಜನರು, ಮಹಿಳೆಯರು ೫ ಜನರಿರುವರು. ಅನಕ್ಷರಾಗಿರುವವರು ಒಟ್ಟು ೧೬ ಜನ, ಅದರಲ್ಲಿ ಪುರುಷರು ೬ ಜನರು ಹಾಗೂ ಮಹಿಳೆಯರು ೧೦ ಜನರಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಮಾಲ ಸಮುದಾಯದವರಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೮೬ ಜನರಿರುವರು. ಇದರಲ್ಲಿ ಪುರುಷರು ೪೪ ಜನರಿರುವರು. ಮಹಿಳೆಯರು ೪೨ ಜನರಿರುವರು. ಆದರೆ ಸಾಕ್ಷರತೆ ಹೊಂದಿದವರು ಮಾತ್ರ ಒಟ್ಟು ೩೦ ಜನರಿದ್ದಾರೆ. ಇದರಲ್ಲಿ ಪುರುಷರು ೧೯

ಜನರಿದ್ದರೆ, ಮಹಿಳೆಯರು ೧೧ ಜನರಿರುವರು. ಅನಕ್ಷರಾಗಿರುವವರು ಒಟ್ಟು ೫೬ ಜನ, ಅದರಲ್ಲಿ ಪುರುಷರು ೨೦ ಜನರು ಹಾಗೂ ಮಹಿಳೆಯರು ೩೬ ಜನರಿದ್ದಾರೆ.

ಹಾವೇರಿ ಜಿಲ್ಲೆಯ ಮಾಲ ಸಮುದಾಯದವರಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೧೮೪ ಜನರಿರುವರು. ಇದರಲ್ಲಿ ಪುರುಷರು ೯೪ ಜನರಿರುವರು. ಮಹಿಳೆಯರು ೯೦ ಜನರಿರುವರು. ಆದರೆ ಸಾಕ್ಷರತೆ ಹೊಂದಿದವರು ಮಾತ್ರ ಒಟ್ಟು ೭೨ ಜನರಿದ್ದಾರೆ. ಇದರಲ್ಲಿ ಪುರುಷರು ೪೬ ಇದ್ದರೆ, ಮಹಿಳೆಯರು ೨೬ ಜನರಿರುವರು. ಅನಕ್ಷರಾಗಿರುವವರು ಒಟ್ಟು ೧೧೨ ಜನ, ಅದರಲ್ಲಿ ಪುರುಷರು ೩೮ ಜನರು ಹಾಗೂ ಮಹಿಳೆಯರು ೭೪ ಜನರಿದ್ದಾರೆ.

ಸಮೀಕ್ಷೆಗೆ ಒಳಪಡಿಸಿದ ಏಳು ಜಿಲ್ಲೆಯ ಮಾಲ ಸಮುದಾಯದವರಲ್ಲಿ ಸಾಕ್ಷರತೆ ಹೊಂದಲು ಅರ್ಹವಾದವರು ಒಟ್ಟು ೧೪೬೬ ಜನರಿರುವರು. ಇದರಲ್ಲಿ ಪುರುಷ ೭೩೩, ಮಹಿಳೆಯರು ೭೩೩ ಜನರಿರುವರು. ಆದರೆ ಸಾಕ್ಷರತೆ ಹೊಂದಿದವರು ಮಾತ್ರ ಒಟ್ಟು ೫೪೧ ಜನರಿದ್ದಾರೆ. ಇದರಲ್ಲಿ ಪುರುಷರು ೩೩೦, ಮಹಿಳೆಯರು ೨೧೧ ಜನರಿರುವರು. ಅನಕ್ಷರಾಗಿರುವವರು ಒಟ್ಟು ೯೨೭ ಜನ, ಅದರಲ್ಲಿ ಪುರುಷರು ೨೬೨ ಹಾಗೂ ಮಹಿಳೆಯರು ೬೬೫ ಜನರಿದ್ದಾರೆ. ಅನಕ್ಷರತೆ ಹೊಂದಿದವರಲ್ಲಿ ಮಹಿಳೆಯರು ಶೇಕಡ ೭೧.೭೩ರಷ್ಟಿದ್ದರೆ ಪುರುಷರು ಶೇಕಡ ೨೮.೨೭ ರಷ್ಟಿರುವರು. ಇನ್ನು ಸಾಕ್ಷರತೆ ಹೊಂದಿದವರಲ್ಲಿ ಮಹಿಳೆಯರು ಶೇಕಡ ೩೯. ೦೧ ರಷ್ಟಿದ್ದರೆ ಪುರುಷರು ಶೇಕಡ ೬೦.೯೯ ರಷ್ಟಿರುವರು.

ವೃತ್ತಚಿತ್ರ: ೫.೪: ಮಾಲ ಸಮುದಾಯದ ಸಾಕ್ಷರರು ಹಾಗೂ ಅನಕ್ಷರಸ್ಥರ ಪ್ರಮಾಣ



ಒಟ್ಟಾರೆ ಹೇಳುವುದಾದರೆ ಸಾಕ್ಷರತೆಗೆ ಅರ್ಹವಾದವರಲ್ಲಿ ಸಾಕ್ಷರತೆ ಹೊಂದಿದವರು ಶೇಕಡ ೩೬.೭೬ ಹಾಗೂ ಅನಕ್ಷರರು ಶೇಕಡ ೬೩.೨೪ ರಷ್ಟಿದ್ದಾರೆ. ಅಂದರೆ ಸಾಕ್ಷರತೆ ಹೊಂದಿದವರಿಗಿಂತ ಅನಕ್ಷರರೇ ಹೆಚ್ಚಿರುವರು ಹಾಗೂ ಇದರಲ್ಲಿ ಮಹಿಳೆಯರ ಪಾಲೇ ಹೆಚ್ಚಾಗಿರುವುದು ಸಮೀಕ್ಷೆಯ

ಮೂಲಕ ತಿಳಿದು ಬಂದಿತು. ಮಾಲ ಸಮುದಾಯದ ಮಹಿಳೆಯರು ಹೆಚ್ಚಾಗಿ ಮನೆಯ ಕೆಲಸ ಕಾರ್ಯಗಳಲ್ಲಿ ಭಾಗಿಯಾಗುತ್ತಾರೆ ಮತ್ತು ಅವರನ್ನು ಬೇಗನೆ ಮದುವೆ ಮಾಡಿಕೊಡುತ್ತಾರೆ. ಆದ್ದರಿಂದ ಶಿಕ್ಷಣದಲ್ಲಿ ಮಾಲ ಸಮುದಾಯದ ಹೆಣ್ಣುಮಕ್ಕಳು ಹಿಂದುಳಿಯಲಿಕ್ಕೆ ಕಾರಣವಾಗಿರುತ್ತದೆ.

೫.೧೧ ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗೆ ಹೋಗುತ್ತಿರುವ ಮಾಲ ಸಮುದಾಯದ ಮಕ್ಕಳು

ಸಾಕ್ಷರತೆಯ ಪ್ರಮಾಣ ಶೇಕಡ ೧೦೦ರಷ್ಟು ಹೆಚ್ಚಿಸಬೇಕೆಂಬ ಆಶಯ ಮತ್ತು ಗುರಿಯನ್ನು ಭಾರತ ಸರ್ಕಾರವು ಹೊಂದಿದೆ. ಹೀಗಾಗಿ ಭಾರತದೊಳಗಿರುವ ಎಲ್ಲಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ಕಡ್ಡಾಯ ಶಿಕ್ಷಣ ನೀತಿ ಜಾರಿಗೊಳಿಸಿದೆ. ಮಕ್ಕಳನ್ನು ಶಾಲೆಯಿಂದ ಹೊರಗುಳಿಯದಂತೆ ಮಾಡಲು ಹತ್ತು ಹಲವು ಯೋಜನೆಗಳನ್ನು ಹಾಕಿಕೊಂಡಿದೆ. ಹೀಗಿದ್ದೂ ಮಕ್ಕಳು ಬಡತನ, ಅಲೆಮಾರಿತನ, ಮಕ್ಕಳ ಲಾಲನೆ ಪಾಲನೆ ಇತ್ಯಾದಿ ನಾನಾ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿಯುತ್ತಿರುವರು ಎಂಬುದು ವಿಷಾದದ ಸಂಗತಿ.

ಮಕ್ಕಳಲ್ಲಿ ಪ್ರಾರಂಭದ ಒಂದರಿಂದ ನಾಲ್ಕನೇ ತರಗತಿಯವರೆಗೆ ಮಕ್ಕಳು ಸಾಮಾನ್ಯವಾಗಿ ಶಾಲೆಗೆ ಹೋಗುತ್ತಾರೆ. ಐದನೆಯ ತರಗತಿಯಿಂದ ಮೇಲಿನ ತರಗತಿಗಳಿಗೆ ಹೋಗುವವರ ಪ್ರಮಾಣ ನಿಧಾನವಾಗಿ ಇಳಿಕೆಯಾಗುತ್ತಾ ಸಾಗುತ್ತದೆ. ಮಗು ಐದನೇ ತರಗತಿಗೆ ಬರುವಷ್ಟರಲ್ಲಿ ಹನ್ನೊಂದು ವರ್ಷವಾಗಿರುತ್ತದೆ. ಚಿಕ್ಕಪುಟ್ಟ ಕೆಲಸ ನಿರ್ವಹಿಸುವಷ್ಟು ಶಕ್ತಿ, ತಿಳುವಳಿಕೆ ಮಗುವಿಗೆ ಬಂದಿರುತ್ತದೆ. ಹೀಗಾಗಿ ಪಾಲಕರು ತಮ್ಮೊಂದಿಗೆ ರದ್ದಿ ಆಯಲೋ, ಕೂಲಿ ಕೆಲಸ ನಿರ್ವಹಿಸಲೋ, ತಮ್ಮ ಸಣ್ಣ ಮಕ್ಕಳನ್ನು ನೋಡಿಕೊಳ್ಳಲೋ ಮಕ್ಕಳನ್ನು ಶಾಲೆಯಿಂದ ಹೊರಗುಳಿಯುವಂತೆ ಮಾಡುವರು ಎಂಬ ಅಪವಾದವಿದೆ. ಇದು ನಿಜವೂ ಸಹ.

ಸಮೀಕ್ಷೆ ಮಾಡಿದ ಮಾಲ ಸಮುದಾಯದ ಕುಟುಂಬಗಳಲ್ಲಿ ೬ ರಿಂದ ೧೮ ವರ್ಷದೊಳಗಿನ ಮಕ್ಕಳು ಶಾಲೆಗೆ ಹೋಗುವ ಮಕ್ಕಳು ಎಷ್ಟಿರುವರು, ಶಾಲೆಯಿಂದ ಹೊರಗುಳಿದ ಮಕ್ಕಳು ಎಷ್ಟಿರುವರು ಎಂದು ನೋಡಲಾಯಿತು.

೫.೧೨ ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗೆ ಹೋಗುತ್ತಿರುವ ಮಕ್ಕಳು

ಕೊಪ್ಪಳ ಜಿಲ್ಲೆಯಲ್ಲಿ ೬-೧೮ ವಯೋಮಾನದೊಳಗಿನ ಒಟ್ಟು ಮಕ್ಕಳಲ್ಲಿ ೨೫೭ ಮಕ್ಕಳು ಶಾಲೆಗೆ ಹೋಗುತ್ತಿರುವರು. ಇದರಲ್ಲಿ ಗಂಡು ೧೫೭ ಇದ್ದರೆ ಹೆಣ್ಣು ೧೦೧ ಮಕ್ಕಳಿವೆ. ಶಾಲೆಯನ್ನು ಅರ್ಧದಲ್ಲಿಯೇ ತೊರೆದು ಶಾಲೆಯಿಂದ ಹೊರಗುಳಿದ ಮಕ್ಕಳು ೧೨೮ ಇವೆ. ಇದರಲ್ಲಿ ಗಂಡು ೪೪ ಹಾಗೂ ಹೆಣ್ಣು ೮೪ ಇವೆ.

ಕೋಷ್ಟಕ ೫.೯: ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗೆ ಹೋಗುತ್ತಿರುವ ಮಕ್ಕಳು

ಕ್ರಸಂ	ಜಿಲ್ಲೆ	ಶಾಲೆಯಿಂದ ಹೊರಗುಳಿದವರು			ಶಾಲೆಗೆ ಹೋಗುತ್ತಿರುವವರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕೊಪ್ಪಳ	೪೪	೮೪	೧೨೮	೧೫೬	೧೦೧	೨೫೭
೨	ಗದಗ	೨	೬	೮	೮	೬	೧೪
೩	ಧಾರವಾಡ	೯	೯	೧೮	೧೬	೧೦	೨೬
೪	ಮೈಸೂರು	೨	೪	೬	೬	–	೬
೫	ರಾಯಚೂರು	೨	೩	೫	೬	–	೬
೬	ಶಿವಮೊಗ್ಗ	೨	೩	೫	೬	೨	೮
೭	ಹಾವೇರಿ	೬	೭	೧೩	೧೯	೧೨	೩೧
ಒಟ್ಟು		೬೭	೧೧೬	೧೮೩	೨೧೭	೧೩೧	೩೪೮

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ಲಂಬಚಿತ್ರ ೫.೨. ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗೆ ಹೋಗುತ್ತಿರುವ ಮಕ್ಕಳು



ಗದಗ ಜಿಲ್ಲೆಯಲ್ಲಿ ೬-೧೮ ವಯೋಮಾನದೊಳಗಿನ ಒಟ್ಟು ಮಕ್ಕಳಲ್ಲಿ ೧೪ ಮಕ್ಕಳು ಶಾಲೆಗೆ ಹೋಗುತ್ತಿರುವರು. ಇದರಲ್ಲಿ ಗಂಡು ೮ ಇದ್ದರೆ ಹೆಣ್ಣು ೬ ಮಕ್ಕಳಿವೆ. ಶಾಲೆಯನ್ನು ಅರ್ಧದಲ್ಲಿಯೇ

ತೊರೆದು ಶಾಲೆಯಿಂದ ಹೊರಗುಳಿದ ಮಕ್ಕಳು ೮ ಇವೆ. ಇದರಲ್ಲಿ ಗಂಡು ೨ ಹಾಗೂ ಹೆಣ್ಣು ೬ ಇವೆ.

ಧಾರವಾಡ ಜಿಲ್ಲೆಯಲ್ಲಿ ೬-೧೮ ವಯೋಮಾನದೊಳಗಿನ ಒಟ್ಟು ಮಕ್ಕಳಲ್ಲಿ ೨೬ ಮಕ್ಕಳು ಶಾಲೆಗೆ ಹೋಗುತ್ತಿರುವವರು. ಇದರಲ್ಲಿ ಗಂಡು ೧೬ಇದ್ದರೆ ಹೆಣ್ಣು ೧೦ ಮಕ್ಕಳಿವೆ. ಶಾಲೆಯನ್ನು ಅರ್ಧದಲ್ಲಿಯೇ ತೊರೆದು ಶಾಲೆಯಿಂದ ಹೊರಗುಳಿದ ಮಕ್ಕಳು ೧೮ ಇವೆ. ಇದರಲ್ಲಿ ಗಂಡು ೯ ಹಾಗೂ ಹೆಣ್ಣು ೯ ಇವೆ

ಮೈಸೂರು ಜಿಲ್ಲೆಯಲ್ಲಿ ೬-೧೮ ವಯೋಮಾನದೊಳಗಿನ ಒಟ್ಟು ಮಕ್ಕಳಲ್ಲಿ ೮ ಮಕ್ಕಳು ಶಾಲೆಗೆ ಹೋಗುತ್ತಿರುವವರು. ಇದರಲ್ಲಿ ಗಂಡು ೬ ಇದ್ದರೆ ಹೆಣ್ಣು ೨ ಮಕ್ಕಳಿವೆ. ಶಾಲೆಯನ್ನು ಅರ್ಧದಲ್ಲಿಯೇ ತೊರೆದು ಶಾಲೆಯಿಂದ ಹೊರಗುಳಿದ ಮಕ್ಕಳು ೬ ಇವೆ. ಇದರಲ್ಲಿ ಗಂಡು ೨, ಹಾಗೂ ಹೆಣ್ಣು ೪ ಇವೆ.

ರಾಯಚೂರು ಜಿಲ್ಲೆಯಲ್ಲಿ ೬-೧೮ ವಯೋಮಾನದೊಳಗಿನ ಒಟ್ಟು ಮಕ್ಕಳಲ್ಲಿ ೬ ಮಕ್ಕಳು ಶಾಲೆಗೆ ಹೋಗುತ್ತಿರುವವರು. ಇದರಲ್ಲಿ ಗಂಡು ೬ ಇದ್ದು, ಹೆಣ್ಣುಮಕ್ಕಳು ಒಂದೂ ಇರುವುದಿಲ್ಲ. ಶಾಲೆಯನ್ನು ಅರ್ಧದಲ್ಲಿಯೇ ತೊರೆದು ಶಾಲೆಯಿಂದ ಹೊರಗುಳಿದ ಮಕ್ಕಳು ೫ ಇವೆ. ಇದರಲ್ಲಿ ಗಂಡು ೨ ಹಾಗೂ ಹೆಣ್ಣು ೩ ಇವೆ.

ಶಿವಮೊಗ್ಗ ಜಿಲ್ಲೆಯಲ್ಲಿ ೬-೧೮ ವಯೋಮಾನದೊಳಗಿನ ಒಟ್ಟು ಮಕ್ಕಳಲ್ಲಿ ೮ ಮಕ್ಕಳು ಶಾಲೆಗೆ ಹೋಗುತ್ತಿರುವವರು. ಇದರಲ್ಲಿ ಗಂಡು ೬ ಇದ್ದರೆ ಹೆಣ್ಣು ೨ ಮಕ್ಕಳಿವೆ. ಶಾಲೆಯನ್ನು ಅರ್ಧದಲ್ಲಿಯೇ ತೊರೆದು ಶಾಲೆಯಿಂದ ಹೊರಗುಳಿದ ಮಕ್ಕಳು ೫ ಇವೆ. ಇದರಲ್ಲಿ ಗಂಡು ೨ ಹಾಗೂ ಹೆಣ್ಣು ೩ ಇವೆ.


ಹಾವೇರಿ ಜಿಲ್ಲೆಯಲ್ಲಿ ೬-೧೮ ವಯೋಮಾನದೊಳಗಿನ ಒಟ್ಟು ಮಕ್ಕಳಲ್ಲಿ ೩೧ ಮಕ್ಕಳು ಶಾಲೆಗೆ ಹೋಗುತ್ತಿರುವವರು. ಇದರಲ್ಲಿ ಗಂಡು ೧೯ ಇದ್ದರೆ ಹೆಣ್ಣು ೧೨ ಮಕ್ಕಳಿವೆ. ಶಾಲೆಯನ್ನು ಅರ್ಧದಲ್ಲಿಯೇ ತೊರೆದು ಶಾಲೆಯಿಂದ ಹೊರಗುಳಿದ ಮಕ್ಕಳು ೧೩ ಇವೆ. ಇದರಲ್ಲಿ ಗಂಡು ೬ ಹಾಗೂ ಹೆಣ್ಣು ೭ ಇವೆ.

ಸಮೀಕ್ಷೆಗೆ ಒಳಪಡಿಸಿದ ಮಾಲ ಸಮುದಾಯದ ೬-೧೮ ವಯೋಮಾನದೊಳಗಿನ ಒಟ್ಟು ಮಕ್ಕಳಲ್ಲಿ ೩೪೮ ಮಕ್ಕಳು ಶಾಲೆಗೆ ಹೋಗುತ್ತಿರುವವರು. ಇದರಲ್ಲಿ ಗಂಡು ೨೭೧ ಇದ್ದು ೧೩೧ ಹೆಣ್ಣುಮಕ್ಕಳು ಇವೆ. ಶಾಲೆಯನ್ನು ಅರ್ಧದಲ್ಲಿಯೇ ತೊರೆದು ಶಾಲೆಯಿಂದ ಹೊರಗುಳಿದ ಮಕ್ಕಳು ೧೮೩ ಇವೆ. ಇದರಲ್ಲಿ ಗಂಡು ೬೭ ಹಾಗೂ ಹೆಣ್ಣು ೧೧೬ ಇವೆ.

ಕೋಷ್ಟಕ ೫.೧೦: ೬–೧೪ ವಯೋಮಾನದೊಳಗಿನ ಶಾಲೆಗೆ ಹೋಗುತ್ತಿರುವ ಮಕ್ಕಳ ಪ್ರಮಾಣ

ಲಿಂಗ	ಶಾಲೆಗೆ ಹೋಗುತ್ತಿರುವ	ಶಾಲೆಯಿಂದ ಹೊರಗುಳಿದ
	ಮಕ್ಕಳ ಪ್ರಮಾಣ	ಮಕ್ಕಳ ಪ್ರಮಾಣ
ಗಂಡು	೬೨.೩೫%	೩೬.೬೧%
ಹೆಣ್ಣು	೩೭.೬೫%	೬೩.೩೯%

ಲಂಬಚಿತ್ರ ೫.೩: ೬–೧೪ ವಯೋಮಾನದೊಳಗಿನ ಶಾಲೆಗೆ ಹೋಗುತ್ತಿರುವ ಮಕ್ಕಳ ಪ್ರಮಾಣ



ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಗಂಡುಮಕ್ಕಳ ಪ್ರಮಾಣವು ಶೇಕಡ ೬೨.೩೫ ಇದೆ. ಹೆಣ್ಣುಮಕ್ಕಳ ಪ್ರಮಾಣವು ೩೭.೬೫ರಷ್ಟಿದೆ.

ಶಾಲೆಗೆ ಹೋಗದೆ ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಗಂಡುಮಕ್ಕಳ ಪ್ರಮಾಣವು ಶೇಕಡ ೩೬.೬೧ ಇದೆ. ಹೆಣ್ಣುಮಕ್ಕಳ ಪ್ರಮಾಣವು ೬೩.೩೯ರಷ್ಟಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಗಂಡು ಮಕ್ಕಳ ಪ್ರಮಾಣ ಹೆಚ್ಚಿದ್ದು ಹೆಣ್ಣುಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಶಾಲೆಯಿಂದ ಹೊರಗುಳಿದಿರುವರು.

ಮಾಲ ಸಮುದಾಯದವರು ಯಾವಾಗಲೂ ಬೇರೆ ಬೇರೆ ಊರಿಗೆ ಜೀವನ ನಿರ್ವಹಣೆಗಾಗಿ ಹೋಗುತ್ತಲೇ ಇರುತ್ತಿದ್ದರು ಇವರಿಗೆ ಶಿಕ್ಷಣದ ಅರಿವೇ ಇರುತ್ತಿರಲಿಲ್ಲ ಶಿಕ್ಷಣ ಎಂದರೆ ಕಾಲಹರಣ ಮಾಡುವುದು ಎಂದು ತಿಳಿದುಕೊಂಡಿರುತ್ತಿದ್ದರು. ಶಾಲೆಯನ್ನು ಕಲಿತರೆ ತಮ್ಮ ಮನೆತನದ ಬಡತನವನ್ನು ನೀಗಿಸುವವರು ಯಾರು ಎಂದು ಶಾಲೆಯನ್ನು ಕಲಿಸಬೇಕೆಂಬ ವಿಚಾರ ಅವರಿಗೆ ಬರುತ್ತಿದ್ದಿಲ್ಲವೆಂದು



ತಿಳಿಸಿದರು. ಆದರೆ ಮಾಲ ಸಮುದಾಯದವರು ಇತ್ತೀಚೆಗೆ ಆಧುನಿಕರಣದ ಪ್ರಭಾವಕ್ಕೊಳಗಾಗಿ ಮಾಲ ಸಮುದಾಯದವರು ತಮ್ಮ ಮಕ್ಕಳನ್ನು ಇತ್ತೀಚೆಗೆ ಸರಕಾರದ ಹಲವಾರು ಶಿಕ್ಷಣದ ಸವಲತ್ತುಗಳ ಯೋಜನೆಯ ಕ್ರಮದಿಂದ ಮತ್ತು ಸರಕಾರದ ಕಡ್ಡಾಯ ಶಿಕ್ಷಣ ನೀತಿಯ ಕ್ರಮದಿಂದ ಇತ್ತೀಚೆಗೆ ಮಾಲ ಸಮುದಾಯದ ೬೨.೩೫ರಷ್ಟು ಗಂಡು ಮಕ್ಕಳು ಮತ್ತು ೩೭.೬೫ ರಷ್ಟು ಹೆಣ್ಣುಮಕ್ಕಳು ಶಾಲೆಗೆ ಹೊಗುತ್ತಿದ್ದಾರೆ. ಮಾಲ ಸಮುದಾಯದವರು ಇತ್ತೀಚೆಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವದರ ಮೂಲಕ ಸಾಮಾಜಿಕ ಸ್ಥಿತ್ಯಂತರವನ್ನು ಕಾಣಲು ಪ್ರಯತ್ನಿಸುತ್ತಿದ್ದಾರೆ.

೫.೧೩ ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ತರಗತಿಗೆ ಹೋಗುತ್ತಿರುವವರು

ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಪ್ರಾಥಮಿಕ ಹಂತವೆಂದೂ, ಆರನೇ ತರಗತಿಯಿಂದ ಎಂಟನೇ ತರಗತಿಯವರೆಗೂ ಮಾಧ್ಯಮಿಕವೆಂದೂ, ಒಂಭತ್ತನೇ ತರಗತಿಯಿಂದ ಹನ್ನೆರಡನೇ ತರಗತಿಯವರೆಗೂ ಪ್ರೌಢ ತರಗತಿಗಳೆಂದು ಶಿಕ್ಷಣ ಇಲಾಖೆಯು ಪರಿಗಣಿಸಿದೆ. ಈ ಮೂರು ಹಂತದ ತರಗತಿಗಳು ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಮುಖ್ಯವೆಂದು ಪರಿಗಣಿಸಲಾಗಿದೆ. ಪ್ರಾಥಮಿಕ ಹಂತದಿಂದ ಹತ್ತನೇ ತರಗತಿಯವರೆಗೆ ಮಕ್ಕಳಿಗೆ ಉಚಿತ ಶಿಕ್ಷಣವನ್ನು ಸರ್ಕಾರಿ ಶಾಲೆಗಳಲ್ಲಿ ನೀಡಲಾಗುತ್ತಿದೆ. ಪಿಯು ಹಂತದ ಹನ್ನೊಂದು ಹಾಗೂ ಹನ್ನೆರಡನೇ ತರಗತಿಗಳಿಗೆ ಗಂಡುಮಕ್ಕಳಿಗೆ ಕನಿಷ್ಠ ಶುಲ್ಕವನ್ನು ವಿಧಿಸಲಾಗುವುದಾದರೂ ಹೆಣ್ಣುಮಕ್ಕಳಿಗೆ ಆ ತರಗತಿಗಳಲ್ಲಿಯೂ ಪೂರ್ಣ ಶುಲ್ಕವಿನಾಯತಿ ನೀಡಲಾಗುತ್ತಿದೆ. ಹಾಗೆಯೇ ಹೊಸ ರೀತಿಯ ಕಲಿಕಾ ವಿಧಾನ, ತರಗತಿಗಳಲ್ಲಿ ಕಲಿಸುವ ಶಿಕ್ಷಕರಿಗೆ ವಿಶೇಷವಾದ ತರಬೇತಿಗಳನ್ನೂ ನೀಡಲಾಗುತ್ತಿದೆ. ಸರ್ವಶಿಕ್ಷಣ ಅಭಿಯಾನದಡಿ ಈ ಎಲ್ಲಾ ತರಬೇತಿಗಳು ನಡೆಯುತ್ತಿವೆ. ಒಟ್ಟಿನಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಮುಖ್ಯ ಉದ್ದೇಶವನ್ನು ಹೊಂದಿ ಈ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ. ೨೦೧೯ರ ಸಾಲಿನಲ್ಲಿ ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವ ದೃಷ್ಟಿಯಿಂದ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತಿದೆ. ದುರ್ದೈವವೆಂದರೆ ಜಾಗತಿಕದ ಪರಿಣಾಮ ಇಂದಿನ ಪ್ರಾಥಮಿಕ ಹಂತದ ಶಿಕ್ಷಣಕ್ಕೂ ಆವರಿಸಿರುವುದು. ಪ್ರಾಥಮಿಕ ಹಂತದಲ್ಲಿ ಮಕ್ಕಳು ತಮ್ಮ ಮಾತೃಭಾಷೆಯಲ್ಲಿ, ಇಲ್ಲವೇ ರಾಜ್ಯದ ಆಡಳಿತದ ಭಾಷೆಯಲ್ಲಿ ನೀಡುವುದು ಉಚಿತ ಎಂಬುದು ಬಹುತೇಕ ಶಿಕ್ಷಣ ತಜ್ಞರ ವಾದವಾಗಿದೆ. ಆದರೆ ಶಿಕ್ಷಣದ ಕುರಿತು ಸರಿಯಾದ ಜ್ಞಾನವಿರದ ವಿಧಾನ ಸಭಾ ಸದಸ್ಯರಾಗಿ ಚುನಾಯಿತರಾದವರೇ ಶಿಕ್ಷಣ ಸಚಿವ ಸ್ಥಾನವನ್ನು ಅಲಂಕರಿಸುವುದು ಹಾಗೂ ರಾಜ್ಯ ಭಾಷೆಯ ಜ್ಞಾನವಿರದ ಪರರಾಜ್ಯದಿಂದ ಆಡಳಿತಾಧಿಕಾರಿಯೋ, ಆಯುಕ್ತರಾಗಿಯೋ, ಕಾರ್ಯದರ್ಶಿಯಾಗಿಯೋ ಉನ್ನತ ಹುದ್ದೆಯನ್ನು ಅಲಂಕರಿಸುವ ಐಎಎಸ್‌ಗಳು ಇರುವುದರಿಂದಾಗಿಯೇ ಶಿಕ್ಷಣದಲ್ಲಿ ಈ ರೀತಿಯ ಅವೈಜ್ಞಾನಿಕ ಆದೇಶಗಳು ಹೊರಡುವುದು ಮತ್ತು ಅನುಷ್ಠಾನಗೊಳ್ಳುವುದು. ವಿದ್ಯಾಭ್ಯಾಸ ಪಡೆಯುವುದೇ ಸರ್ಕಾರಿ ಹುದ್ದೆಗಳನ್ನು ಅಲಂಕರಿಸುವುದಕ್ಕಾಗಿ ಎನ್ನುವ ಭ್ರಮೆಯನ್ನು ಬ್ರಿಟೀಷರು ಭಾರತೀಯರ ತಲೆಯೊಳಗೆ ತುಂಬಿಹೋದರು. ಇಂದಿಗೂ ಅದೇ ಮನೋಭಾವನೆಯಲ್ಲಿಯೇ ತೊಳಲಾಡುತ್ತಿರುವ ಭಾರತೀಯರು ಇಂಗ್ಲಿಷನ್ನು ಬಾಲ್ಯದಿಂದಲೇ ಮಗು ಕಲಿಯಬೇಕು, ಯಾವುದೇ ಬ್ರಿಟೀಷ ನಾಗರೀಕನ ಇಂಗ್ಲಿಷಿಗೆ ಕಡಿಮೆಯಿಲ್ಲದಂತೆ ಇಂಗ್ಲಿಷಿನಲ್ಲಿ

ವ್ಯವಹರಿಸಬೇಕು ಎಂಬ ಭ್ರಮೆಯನ್ನು ಹೊಂದಿರುವುದು ದುರ್ದೈವವೇ ಸರಿ. ಪಾಲಕರ ಈ ದೌರ್ಭಲ್ಯವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ದುರುಪಯೋಗಪಡಿಸಿಕೊಳ್ಳುತ್ತಿವೆ. ಇದಕ್ಕೆ ಲಂಚಗುಳಿ ಅಧಿಕಾರಿಗಳೂ ಕಾರಣರಾಗಿರುವರು.

ಆದರೆ ತಳಸಮುದಾಯದ ಮಕ್ಕಳು ಅದರಲ್ಲೂ ಮಾಲದಂತಹ ಅಲೆಮಾರಿ ತಳಸಮುದಾಯದ ಮಕ್ಕಳು ಶಾಲೆಯ ಶಿಕ್ಷಣದಿಂದಲೇ ವಂಚಿತರಾಗಿರುವುದನ್ನು ಮೇಲಿನ ಅಂಕಿಅಂಶಗಳಿಂದ ತಿಳಿದುಬಂದಿದೆ. ಪ್ರಸ್ತುತ ಇಲ್ಲಿ ಪ್ರಾಥಮಿಕ ಹಂತ, ಮಾಧ್ಯಮಿಕ ಹಂತ ಹಾಗೂ ಪ್ರೌಢ ಹಂತಗಳಲ್ಲಿ ಮಾಲ ಸಮುದಾಯದ ಎಷ್ಟು ಮಕ್ಕಳು ವ್ಯಾಸಂಗ ಮಾಡುತ್ತಿರುವರು ಎಂಬುದನ್ನು ಈ ಕೆಳಗೆ ನೋಡಲಾಗಿದೆ.

೫..೧೩ ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ತರಗತಿಗೆ ಹೋಗುತ್ತಿರುವವರ ಸಂಖ್ಯೆ


ಕೊಪ್ಪಳ ಜಿಲ್ಲೆಯಲ್ಲಿ ಶಾಲೆಗೆ ಹೋಗುತ್ತಿರುವ ಮಾಲ ಸಮುದಾಯದ ಮಕ್ಕಳಲ್ಲಿ ಪ್ರಾಥಮಿಕ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ೯೮ ಮಕ್ಕಳಿವೆ. ಇದರಲ್ಲಿ ೬೦ ಗಂಡು ಹಾಗೂ ೩೮ ಹೆಣ್ಣುಮಕ್ಕಳಿವೆ. ಮಾಧ್ಯಮಿಕ ಹಂತದ ತರಗತಿಗೆ ಹೋಗುತ್ತಿರುವ ಒಟ್ಟು ಮಕ್ಕಳು ೭೧ ಇವೆ. ಇದರಲ್ಲಿ ೪೦ ಗಂಡು ಹಾಗೂ ೩೧ ಹೆಣ್ಣುಮಕ್ಕಳಿರುವರು. ಹಾಗೆಯೇ ಪ್ರೌಢ ಹಂತದ ತರಗತಿಗಳಿಗೆ ಹೋಗುತ್ತಿರುವ ಒಟ್ಟು ಮಕ್ಕಳು ೧೩೪ ಇವೆ. ಇದರಲ್ಲಿ ೮೫ ಗಂಡು ಹಾಗೂ ೪೮ ಹೆಣ್ಣುಮಕ್ಕಳಿರುವರು.

ಕೋಷ್ಟಕ ೫.೧೧: ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ತರಗತಿಗೆ ಹೋಗುತ್ತಿರುವವರ ಸಂಖ್ಯೆ

ಕ್ರಸಂ	ಜಿಲ್ಲೆ	ಪ್ರಾಥಮಿಕ			ಮಾಧ್ಯಮಿಕ			ಪ್ರೌಢ		
		ಗ	ಹೆ	ಒ	ಗ	ಹೆ	ಒ	ಗ	ಹೆ	ಒ
೧	ಕೊಪ್ಪಳ	೬೦	೩೮	೯೮	೪೦	೩೧	೭೧	೫೬	೩೨	೮೮
೨	ಗದಗ	೨	೨	೪	೨	೧	೦೩	೦೪	೦೩	೭
೩	ಧಾರವಾಡ	೫	೩	೮	೩	೨	೦೫	೦೮	೦೫	೧೩
೪	ಮೈಸೂರು	೨	–	೨	೧	–	೧	೦೩	–	೩
೫	ರಾಯಚೂರು	೨	–	೨	೧	–	೧	೦೩	–	೩
೬	ಶಿವಮೊಗ್ಗ	೨	–	೨	೨	–	೦೨	೦೨	೦೨	೪
೭	ಹಾವೇರಿ	೬	೪	೧೦	೪	೨	೦೬	೦೯	೦೬	೧೫
	ಒಟ್ಟು	**೭೯**	**೪೭**	**೧೨೬**	**೫೩**	**೩೬**	**೮೯**	**೮೫**	**೪೮**	**೧೩೩**

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೇ

ಲಂಬಚಿತ್ರ ೫.೪: ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ತರಗತಿಗೆ ಹೋಗುತ್ತಿರುವವರ ಸಂಖ್ಯೆ



ಗದಗ ಜಿಲ್ಲೆಯಲ್ಲಿ ಶಾಲೆಗೆ ಹೋಗುತ್ತಿರುವ ಮಾಲ ಸಮುದಾಯದ ಮಕ್ಕಳಲ್ಲಿ ಪ್ರಾಥಮಿಕ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ೪ ಮಕ್ಕಳಿವೆ. ಇದರಲ್ಲಿ ೨ ಗಂಡು ಹಾಗೂ ೨ ಹೆಣ್ಣುಮಕ್ಕಳಿವೆ. ಮಾಧ್ಯಮಿಕ ಹಂತದ ತರಗತಿಗೆ ಹೋಗುತ್ತಿರುವ ಒಟ್ಟು ಮಕ್ಕಳು ೩ ಇವೆ. ಇದರಲ್ಲಿ ೨ ಗಂಡು ಹಾಗೂ ೧ ಹೆಣ್ಣುಮಗುವಿದೆ. ಹಾಗೆಯೇ ಪ್ರೌಢ ಹಂತದ ತರಗತಿಗಳಿಗೆ ಹೋಗುತ್ತಿರುವ ಒಟ್ಟು ಮಕ್ಕಳು ೭ ಇವೆ. ಇದರಲ್ಲಿ ೪ ಗಂಡು ಹಾಗೂ ೩ ಹೆಣ್ಣುಮಕ್ಕಳಿರುವರು.

ಧಾರವಾಡ ಜಿಲ್ಲೆಯಲ್ಲಿ ಶಾಲೆಗೆ ಹೋಗುತ್ತಿರುವ ಮಾಲ ಸಮುದಾಯದ ಮಕ್ಕಳಲ್ಲಿ ಪ್ರಾಥಮಿಕ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ೮ ಮಕ್ಕಳಿವೆ. ಇದರಲ್ಲಿ ೫ ಗಂಡು ಹಾಗೂ ೩ ಹೆಣ್ಣುಮಕ್ಕಳಿವೆ. ಮಾಧ್ಯಮಿಕ ಹಂತದ ತರಗತಿಗೆ ಹೋಗುತ್ತಿರುವ ಒಟ್ಟು ಮಕ್ಕಳು ೫ ಇವೆ. ಇದರಲ್ಲಿ ೩ ಗಂಡು ಹಾಗೂ ೨ ಹೆಣ್ಣುಮಕ್ಕಳಿವೆ. ಹಾಗೆಯೇ ಪ್ರೌಢ ಹಂತದ ತರಗತಿಗಳಿಗೆ ಹೋಗುತ್ತಿರುವ ಒಟ್ಟು ಮಕ್ಕಳು ೧೪ ಇವೆ. ಇದರಲ್ಲಿ ೮ ಗಂಡು ಹಾಗೂ ೫ ಹೆಣ್ಣುಮಕ್ಕಳಿರುವರು.

ಮೈಸೂರು ಜಿಲ್ಲೆಯಲ್ಲಿ ಶಾಲೆಗೆ ಹೋಗುತ್ತಿರುವ ಮಾಲ ಸಮುದಾಯದ ಮಕ್ಕಳಲ್ಲಿ ಪ್ರಾಥಮಿಕ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ೨ ಮಕ್ಕಳಿವೆ. ಇದರಲ್ಲಿ ಎರಡೂ ಗಂಡುಮಕ್ಕಳಾಗಿವೆ. ಹಾಗೆಯೇ ಮಾಧ್ಯಮಿಕ ಹಂತದ ತರಗತಿಗೆ ಹೋಗುತ್ತಿರುವ ಒಟ್ಟು ಮಕ್ಕಳು ಒಂದು ಮಾತ್ರ ಇದ್ದು ಅದೂ ಗಂಡಾಗಿದೆ. ಹಾಗೆಯೇ ಪ್ರೌಢ ಹಂತದ ತರಗತಿಗಳಿಗೆ ಹೋಗುತ್ತಿರುವ ಒಟ್ಟು ಮಕ್ಕಳು ೩ ಇವೆ. ಇದರಲ್ಲಿ ಮೂರೂ ಗಂಡುಮಕ್ಕಳಾಗಿವೆ.

ರಾಯಚೂರು ಜಿಲ್ಲೆಯಲ್ಲಿ ಶಾಲೆಗೆ ಹೋಗುತ್ತಿರುವ ಮಾಲ ಸಮುದಾಯದ ಮಕ್ಕಳಲ್ಲಿ ಪ್ರಾಥಮಿಕ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ೨ ಮಕ್ಕಳಿವೆ. ಇದರಲ್ಲಿ ಎರಡೂ ಗಂಡುಮಕ್ಕಳಾಗಿವೆ. ಹಾಗೆಯೇ ಮಾಧ್ಯಮಿಕ ಹಂತದ ತರಗತಿಗೆ ಹೋಗುತ್ತಿರುವ ಒಟ್ಟು ಮಕ್ಕಳು ಒಂದು ಮಾತ್ರ ಇದ್ದು ಅದೂ ಗಂಡಾಗಿದೆ. ಹಾಗೆಯೇ ಪ್ರೌಢ ಹಂತದ ತರಗತಿಗಳಿಗೆ ಹೋಗುತ್ತಿರುವ ಒಟ್ಟು ಮಕ್ಕಳು ೩ ಇವೆ. ಇದರಲ್ಲಿ ಮೂರೂ ಗಂಡುಮಕ್ಕಳಾಗಿವೆ.

ಶಿವಮೊಗ್ಗ ಜಿಲ್ಲೆಯಲ್ಲಿ ಶಾಲೆಗೆ ಹೋಗುತ್ತಿರುವ ಮಾಲ ಸಮುದಾಯದ ಮಕ್ಕಳಲ್ಲಿ ಪ್ರಾಥಮಿಕ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ೨ ಮಕ್ಕಳಿವೆ. ಇದರಲ್ಲಿ ಎರಡೂ ಗಂಡುಮಕ್ಕಳಾಗಿವೆ. ಹಾಗೆಯೇ ಮಾಧ್ಯಮಿಕ ಹಂತದ ತರಗತಿಗೆ ಹೋಗುತ್ತಿರುವ ಒಟ್ಟು ಮಕ್ಕಳು ೨ ಇವೆ. ಇದರಲ್ಲಿ ಎರಡೂ ಗಂಡುಮಕ್ಕಳಾಗಿವೆ. ಹಾಗೆಯೇ ಪ್ರೌಢ ಹಂತದ ತರಗತಿಗಳಿಗೆ ಹೋಗುತ್ತಿರುವ ಒಟ್ಟು ಮಕ್ಕಳು ೪ ಇವೆ. ಇದರಲ್ಲಿ ೨ ಗಂಡು ಹಾಗೂ ೨ ಹೆಣ್ಣುಮಕ್ಕಳಿರುವರು.

ಹಾವೇರಿ ಜಿಲ್ಲೆಯಲ್ಲಿ ಶಾಲೆಗೆ ಹೋಗುತ್ತಿರುವ ಮಾಲ ಸಮುದಾಯದ ಮಕ್ಕಳಲ್ಲಿ ಪ್ರಾಥಮಿಕ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ೧೦ ಮಕ್ಕಳಿವೆ. ಇದರಲ್ಲಿ ೬ ಗಂಡು ಹಾಗೂ ೪ ಹೆಣ್ಣುಮಕ್ಕಳಿವೆ. ಮಾಧ್ಯಮಿಕ ಹಂತದ ತರಗತಿಗೆ ಹೋಗುತ್ತಿರುವ ಒಟ್ಟು ಮಕ್ಕಳು ೬ ಇವೆ. ಇದರಲ್ಲಿ ೪ ಗಂಡು ಹಾಗೂ ೨ ಹೆಣ್ಣುಮಕ್ಕಳಿವೆ. ಹಾಗೆಯೇ ಪ್ರೌಢ ಹಂತದ ತರಗತಿಗಳಿಗೆ ಹೋಗುತ್ತಿರುವ ಒಟ್ಟು ಮಕ್ಕಳು ೧೫ ಇವೆ. ಇದರಲ್ಲಿ ೯ ಗಂಡು ಹಾಗೂ ೬ ಹೆಣ್ಣುಮಕ್ಕಳಿರುವರು.

ಒಟ್ಟಾರೆಯಾಗಿ ಹೇಳುವುದಾದರೆ ಸಮೀಕ್ಷೆಗೊಳಪಡಿಸಿದ ಜಿಲ್ಲೆಗಳಲ್ಲಿ ಮಾಲ ಸಮುದಾಯದ ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಪ್ರಾಥಮಿಕ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ೧೨೬ ಮಕ್ಕಳಿವೆ. ಇದರಲ್ಲಿ ೭೯ ಗಂಡುಮಕ್ಕಳಾಗಿವೆ ಹಾಗೂ ೪೭ ಹೆಣ್ಣುಮಕ್ಕಳಾಗಿವೆ. ಹಾಗೆಯೇ ಮಾಧ್ಯಮಿಕ ಹಂತದ ತರಗತಿಗೆ ಹೋಗುತ್ತಿರುವ ಒಟ್ಟು ಮಕ್ಕಳು ೮೯ ಇವೆ. ಇದರಲ್ಲಿ ಗಂಡು ೫೩ ಹಾಗೂ ಹೆಣ್ಣು ೩೬ ಮಕ್ಕಳಿವೆ. ಹಾಗೆಯೇ ಪ್ರೌಢ ಹಂತದ ತರಗತಿಗಳಿಗೆ ಹೋಗುತ್ತಿರುವ ಒಟ್ಟು ಮಕ್ಕಳು ೧೩೪ ಇವೆ. ಇದರಲ್ಲಿ ೮೫ ಗಂಡುಮಕ್ಕಳಾಗಿವೆ ಹಾಗೂ ೪೮ ಹೆಣ್ಣುಮಕ್ಕಳಾಗಿವೆ. ಅಂದರೆ ಶೇಕಡ ೬೨.೩೫ ಗಂಡುಮಕ್ಕಳು, ೩೭.೬೫ ಹೆಣ್ಣುಮಕ್ಕಳು ಶಾಲೆಗೆ ಹೋಗುತ್ತಿದ್ದು ಶಾಲೆಗೆ ಹೋಗುತ್ತಿರುವ ಹೆಣ್ಣುಮಕ್ಕಳ ಪ್ರಮಾಣ ತುಂಬಾ ಕಡಿಮೆ ಇದೆ.

ಇದರಲ್ಲಿ ಶೇಕಡ ೩೬.೨೦ ಪ್ರಾಥಮಿಕ ಹಂತದಲ್ಲಿ, ಶೇಕಡ ೨೫.೫೭ ಮಾಧ್ಯಮಿಕದಲ್ಲಿಯೂ, ಶೇಕಡ ೩೮.೨೧ ಪ್ರೌಢ ಹಂತದಲ್ಲಿಯೂ ವ್ಯಾಸಂಗ ಮಾಡುತ್ತಿರುವುದು ತಿಳಿದುಬರುತ್ತಿದ್ದು ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಹಂತದವರೆಗಿನ ತರಗತಿಗಳಲ್ಲಿ ಮಹಿಳೆಯರ ಪ್ರಮಾಣ ಕಡಿಮೆ ಇರುವುದು ತಿಳಿದುಬರುವುದು.

ಆದರೆ ಪಿ.ಯು.ಸಿ ನಂತರದ ಪದವಿ ತರಗತಿಯಲ್ಲಿ ಮಾಲ ಸಮುದಾಯದ ಯಾವೊಂದು ಕುಟುಂಬದ ಮಕ್ಕಳು ವ್ಯಾಸಂಗ ಮಾಡುತ್ತಿರುವ ಉದಾಹರಣೆ ದೊರೆಯುವುದಿಲ್ಲ. ಬಹುತೇಕ ಹತ್ತನೇ ತರಗತಿ ಪೂರೈಸಿರುವುದೇ ಹೆಚ್ಚು. ಹತ್ತನೇ ತರಗತಿಯ ನಂತರ ಚಿಲಕಮುಖಿಯ ೪

ಹುಡುಗರು ಐಟಿಐ ಮಾಡುತ್ತಿರುವರು. ಅದರಾಚೆಗಿನ ತಾಂತ್ರಿಕ ಶಿಕ್ಷಣಕ್ಕೂ ಯಾವ ಮಗು ಪ್ರವೇಶಹೊಂದಿದ ಉದಾಹರಣೆ ಕ್ಷೇತ್ರಕಾರ್ಯದಲ್ಲಿ ದೊರೆತಿರುವುದಿಲ್ಲ.

ನೀವೇಕೆ ಹೆಚ್ಚಿನ ಪ್ರಮಾಣದಲ್ಲಿ ಗಂಡು ಮಕ್ಕಳನ್ನು ಓದಿಸುತ್ತಿದ್ದೀರಿ, ಹೆಣ್ಣು ಮಕ್ಕಳನ್ನು ಏಕೆ ಕಡಿಮೆ ಪ್ರಮಾಣದಲ್ಲಿ ಶಾಲೆಗಳಿಗೆ ಕಳಿಸುತ್ತೀರಿ ಎಂಬ ಪ್ರಶ್ನೆಗೆ ಮಾಲ ಸಮುದಾಯದ ಸದಸ್ಯರು ನೀಡಿದ ಉತ್ತರಗಳು ಈ ಕೆಳಗಿನಂತಿವೆ.

೧. ನಮ್ಮ ಮಕ್ಕಳನ್ನು ಶಾಲೆಗಳಿಗೆ ಶಕ್ತಿ ನಮಗಿಲ್ಲ. ಇಂದಿಗೂ ನಾವು ಕೂಲಿನಾಲಿ ಬದುಕನ್ನು ನಡೆಸಬೇಕಾಗಿದೆ. ನಾವು ಹೊಟ್ಟೆಪಾಡಿಗಾಗಿ ಊರೂರು ತಿರುಗಲೇಬೇಕು. ಊರೂರು ತಿರುಗುವ ನಾವು ನಮ್ಮ ಮಕ್ಕಳನ್ನು ಯಾರ ಬಳಿ ಬಿಟ್ಟುಹೋಗಬೇಕು. ಹೀಗಾಗಿ ಶಾಲೆಗೆ ಕಳಿಸಲು ಹಿಂಜರಿಯಬೇಕಾದ ಸ್ಥಿತಿ ನಮ್ಮದಾಗಿದೆ. ಆದರೆ ಇತ್ತೀಚೆಗೆ ಸರ್ಕಾರಿ ಶಾಲೆಯ ಮಾಸ್ತರುಗಳು ಮನೆಮನೆಗೆ ಬಂದು ಶಾಲೆಗೆ ಸೇರಬೇಕಾದ ಮಕ್ಕಳೆಷ್ಟಿವೆ ಎಂದು ಎಣಿಕೆ ಮಾಡಿಕೊಂಡು ಹೋಗುತ್ತಾರೆ. ಶಾಲೆ ಪ್ರಾರಂಭವಾದ ತರುವಾಯ ನಮ್ಮ ಮಕ್ಕಳನ್ನು ಶಾಲೆಗೆ ಸೇರಿಸಲು ಒತ್ತಾಯಿಸುತ್ತಿರುವರು. ಇತ್ತೀಚೆಗೆ ಶಾಲೆಯಲ್ಲಿ ಊಟ, ಪುಸ್ತಕ, ಸಮವಸ್ತ್ರ ಎಲ್ಲವನ್ನೂ ಕೊಡುತ್ತಿರುವರು. ಹೀಗಾಗಿ ಶಾಲೆಗೆ ಹೋಗಲು ಸಾಧ್ಯವಾದ ಮಕ್ಕಳನ್ನು ಶಾಲೆಗೆ ಕಳಿಸುತ್ತೇವೆ. ಆದರೆ ಶಾಲೆಗೆ ಹೋಗಲು ಸಾಧ್ಯವಾಗದ ಮಕ್ಕಳನ್ನು ನಮ್ಮೊಂದಿಗೇ ಕರೆದೊಯ್ಯುತ್ತೇವೆ ಎಂದು ತಿಳಿಸಿದರು.

೨. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ, ಹುಡುಗಿಯರು ಎಂದಿದ್ದರೂ ಒಂದು ದಿನ ಗಂಡನ ಮನೆಗೆ ತೆರಳುವವರೆ, ಹುಡುಗಿಯರು ಹುಡುಗರಂತಲ್ಲ. ಅವರನ್ನು ತುಂಬಾ ಸೂಕ್ಷ್ಮವಾಗಿ ನೋಡಿಕೊಳ್ಳಬೇಕು. ನಮ್ಮ ಸಮಾಜದಲ್ಲಿ ಹುಡುಗಿ ಮೈನೆರೆಯುವುದಕ್ಕೆ ಮೊದಲೇ ಮದುವೆ ಮಾಡುತ್ತಿದ್ದರು. ಇತ್ತೀಚೆಗೆ ಮೈನೆರೆದ ತರುವಾಯ ಹುಡುಗಿಯರಿಗೆ ಮದುವೆ ಮಾಡುತ್ತಿದ್ದೇವೆ. ಹುಡುಗಿಯರು ದಾರಿ ತಪ್ಪಿದರೆ ನಮ್ಮ ದೈವ ನಮ್ಮನ್ನು ಕುಲದಿಂದ ಹೊರಗಿಡುತ್ತದೆ. ಹೀಗಾಗಿ ಹುಡುಗಿಯರಿಗೆ ಬೇಗ ಮದುವೆ ಮಾಡುತ್ತೇವೆ. ಕೈಗೆ ಬಂದ ಹುಡುಗಿಯರನ್ನು ಶಾಲೆಗೆ ಕಳಿಸುವುದಾದರೂ ಹೇಗೆ ಎಂದು ಕೆಲವು ಮಾಲ ಸಮುದಾಯದ ಸದಸ್ಯರು ಮರುಪ್ರಶ್ನೆ ಮಾಡಿದರು.

೩. ನಾವು ವಾಸಮಾಡಲು ಮನೆಗಳು ಇರುವುದಿಲ್ಲ ನಾವು ಗುಡಾರಗಳಲ್ಲಿಯೇ ವಾಸಮಾಡುತ್ತೇವೆ ಆದ್ದರಿಂದ ನಮ್ಮ ಮಕ್ಕಳಿಗೆ ಓದಿಕೋಳ್ಳಲು ಸರಿಯಾದ ವ್ಯವಸ್ಥೆ ಇರುವುದಿಲ್ಲ ವಿದ್ಯುತ್ ವ್ಯವಸ್ಥೆ ಇಲ್ಲ, ಇದರಿಂದ ದಿನನಿತ್ಯ ಅಭ್ಯಾಸ ಮಾಡಲು ತೋದರೆಯಾಗುತ್ತದೆ ಆದ್ದರಿಂದ ಕಲಿಕೆಯಲ್ಲಿ ಹಿಂದುಳಿದು ಅನುತ್ತೀರ್ಣರಾಗಿ ಶಾಲೆಯನ್ನು ತೋರೆದು ಬಿಡುತ್ತಾರೆ.

೪. ನಮಗೆ ಯಾವುದೇ ರೀತಿಯಾದಂತ ಆಸ್ತಿ – ಅಂತಸ್ತು ಇರುವುದಿಲ್ಲ. ನಾವು ಕೂಲಿನಾಲಿ ದುಡಿದುಕೊಂಡೆ ಜೀವನವನ್ನು ಸಾಗಿಸಬೇಕು. ಆದ್ದರಿಂದ ನಮ್ಮ ಮಕ್ಕಳಿಂದಲೆ ನಾವು ತುತ್ತು ಅನ್ನವನ್ನು ಕಾಣುತ್ತೆವೆ. ಆ ಕಾರಣದಿಂದ ನಮ್ಮ ಮಕ್ಕಳು ೧೦ – ೧೨ ವರ್ಷವಾಗುತಿದ್ದಂತೆ ಕೂಲಿಕೆಲಸಗಳಿಗೆ ಕಳಿಸುತ್ತೆವೆ ಕೂಲಿಯಿಂದ ಬಂದ ಹಣದಿಂದ ನಾವು ಕುಟುಂಬದ ಆರ್ಥಿಕ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ನಿಭಾಯಿಸಿಕೊಳ್ಳುತ್ತೆವೆ.

೫. ಮಾಲ ಸಮುದಾಯದ ಪಾಲಕರು ಹೇಳುವ ಹಾಗೆ ತಂದೆ – ತಾಯಿಗಳಿಗೆ ವಯಸ್ಸಾಗುತ್ತಿದ್ದಂತೆ ಮಕ್ಕಳಿಗೆ ೧೫ – ೨೦ ವರ್ಷಗಳು ತುಂಬುತ್ತವೆ. ತಂದೆ ತಾಯಿಗಳ ಕೆಲಸದ ಭಾರವನ್ನು ನೀಗಿಸಲು ಮಕ್ಕಳು ತಂದೆ ತಾಯಿಗಳ ಜೋತೆಗೆ ಕೆಲಸಕ್ಕೆ ಕೈಜೋಡಿಸಲು ಪ್ರಾರಂಭಿಸಿ ಮನೆಯ ಆರ್ಥಿಕ ಜವಾಬ್ದಾರಿಯನ್ನು ಹೋತ್ತುಕೊಳ್ಳುತ್ತಾರೆ. ಇದರಿಂದ ಶಿಕ್ಷಣಕ್ಕೆ ಅಷ್ಟೊಂದು ಓತ್ತು ಕೊಡುವುದಿಲ್ಲ

ಬಹುತೇಕ ಮಾಲ ಸಮುದಾಯದ ವ್ಯಕ್ತಿಗಳಿಗೆ ಕಡ್ಡಾಯ ಶಿಕ್ಷಣ ನೀತಿ, ಮಾತೃ ಭಾಷಾ ಶಿಕ್ಷಣ ನೀತಿ ಯಾವುದರ ಅರಿವೂ ಇಲ್ಲ.

ಒಟ್ಟಾರೆಯಾಗಿ ನೋಡಿದರೆ ಮಾಲ ಸಮುದಾಯದ ಮಕ್ಕಳು ಮಾಧ್ಯಮಿಕ ಹಂತದಲ್ಲಿಯೇ ಶಾಲೆಯನ್ನು ತೊರೆಯುವರು. ತಂದೆ ತಾಯಿಯೊಂದಿಗೆ ಭಿಕ್ಷಾಟನೆಗೆ ಹೋಗುವುದು, ರದ್ದಿ ಆಯಲು ಹೋಗುವುದು ಇತ್ಯಾದಿ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಾರೆ.

ಮಾಲ(ಪರ್ವತ ಮಲ್ಲಯ್ಯ) ಸಮುದಾಯದವರ ಶೈಕ್ಷಣಿಕ ಸಮಸ್ಯೆ

ಮಾಲ ಸಮುದಾಯದವರ ಬಗ್ಗೆ ಶೈಕ್ಷಣಿಕವಾಗಿ ನೋಡಿದಾಗ ಈ ಸಮುದಾಯದವರಲ್ಲಿ ಅನಕ್ಷರಸ್ಥರ ಸಂಖ್ಯೆ ಬಹಳ ಕಂಡುಬರುತ್ತದೆ. ಈ ಸಮುದಾಯದವರು ಶೈಕ್ಷಣಿಕವಾಗಿ ಹಿಂದುಳಿಯಲಿಕ್ಕೆ ಕಾರಣ ಇವರ ಆರ್ಥಿಕ ಸಮಸ್ಯೆ, ಬಡತನ ಮತ್ತು ಅಲೆಮಾರಿತನದ ಜೀವನವೇ ಆಗಿರುತ್ತದೆ. ಈ ಸಮುದಾಯದವರಲ್ಲಿ ಬಹಳಷ್ಟು ಜನರು ಹೆಚ್ಚೆಚ್ಚು ಮಕ್ಕಳನ್ನು ಪಡೆದಿರುವುದು ಇದಕ್ಕೆ ಕಾರಣವಾಗಿದೆ. ಇವರಿಗೆ ನಿರ್ಧಿಷ್ಟ ನಲೆ ಇಲ್ಲದಿರುವುದು ಒಂದು ಪ್ರಮುಖವಾದ ಕಾರಣವಾಗಿದೆ. ಈ ಸಮುದಾಯದ ಹಿರಿಯ ನಾಗರಿಕರಿಗೂ ಸ್ತ್ರೀ–ಪುರುಷರಿಗೂ ಶಿಕ್ಷಣದ ಅರಿವೇ ಇಲ್ಲದಂತಾಗಿದೆ. ಈ ಸಮುದಾಯದ ಹಿರಿಯರು ತಮ್ಮ ಹೊಟ್ಟೆಪಾಡಿಗಾಗಿ ಭಿಕ್ಷೆ ಬೇಡಲು, ದುಡಿಯಲು ಊರೂರು–ಹಳ್ಳಿ–ಪಟ್ಟಣಗಳಿಗೆ ಅಲೆದಾಡುತ್ತಿದ್ದರಿಂದ ತಮ್ಮ ಮಕ್ಕಳಿಗೂ ಸಹ ಶಿಕ್ಷಣವನ್ನು ಕೊಡಿಸಲು ಆಗಿಲ್ಲ. ಇಂಥ ಕಾರಣದಿಂದಾಗಿ ಈಗಿರುವ ಯುವಕರು ಮತ್ತು ಯುವತಿಯರು ಸಹ ಕೆಲವರು ಮಾತ್ರ ಪ್ರಾಥಮಿಕ ಹಂತದ ಶಿಕ್ಷಣವನ್ನು ಪಡೆದುಕೊಂಡಿದ್ದಾರೆ. ಬಹಳಷ್ಟು ಯುವಕರು ಮತ್ತು ಯುವತಿಯರು ಅನಕ್ಷರಸ್ಥರಾಗಿಯೇ ಉಳಿದಿದ್ದಾರೆ. ಮಾಲ ಸಮುದಾಯದವರ ಕೆಲವು ಪಾಲಕರು ತಮ್ಮ ಮಕ್ಕಳ ಹೆಸರುಗಳನ್ನು ಶಾಲೆಗೂ ಸಹ ದಾಖಲಾತಿ ಮಾಡಿಸದೇ ಇರುವುದನ್ನು ತಿಳಿಸಿದ್ದಾರೆ. ಈ ಸಮುದಾಯದವರಲ್ಲಿ ಒಬ್ಬ ಯುವಕ ಇರಬಹುದು, ಒಬ್ಬ ಯುವತಿ ಇರಬಹುದು ಯಾರೊಬ್ಬರೂ ಇವತ್ತಿಗೂ ಸರಕಾರಿ ಹುದ್ದೆಯಲ್ಲಿ ಇಲ್ಲದಿರುವುದು ತಿಳಿದುಬಂದಿದೆ. ಆದರೆ ಈ ಸಮುದಾಯದ ನೆಲೆನಿಂತ ಕೆಲವು ಕುಟುಂಬದ ಪಾಲಕರು ಒಂದೇ ಊರಲ್ಲಿ ನೆಲೆ ನಿಂತವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು ಎಂದುಕೊಂಡು ಶಾಲೆಗೆ ಹೋಗಿ ಮಕ್ಕಳ ಹೆಸರನ್ನು ಪ್ರಾಥಮಿಕ ಶಾಲೆಯಲ್ಲಿ ನೊಂದಾಯಿಸಿ ಬರುತ್ತಾರೆ. ಆದರೆ ಶಾಲಾ ದಾಖಲಾತಿಯಲ್ಲಿ ನಾಮಕಾವಸ್ಥೆಗೆ ಮಾತ್ರ ಮಕ್ಕಳ ಹೆಸರುಗಳಿರುತ್ತವೆ. ಆದರೆ ಪ್ರತಿದಿನ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಕೆಲವು ಮಕ್ಕಳು ಶಾಲಾ–ಕಾಲೇಜಿಗೆ ಹೋದರೂ ಸಹ ಎಲ್ಲಾ ವಿಷಯಗಳನ್ನು ಸರಿಯಾಗಿ ಓದಲು ಬರೆಯಲು ಪರಿಪೂರ್ಣವಾಗಿ ಬರುವುದಿಲ್ಲ. ಕಳಪೆ ಮಟ್ಟದ ಶಿಕ್ಷಣ ವ್ಯವಸ್ಥೆಯಲ್ಲಿ ಇದ್ದಾರೆ. ಶಾಲೆಗೆ ದಾಖಲಾದ ಕೆಲವು ಮಕ್ಕಳನ್ನು ಪಾಲಕರು

ಅರ್ಧವಾರ್ಷಿಕ ರಜೆ, ಬೇಸಿಗೆ ರಜೆ ಇನ್ನಿತರ ಬೇರೆ ಬೇರೆ ರಜಾದಿನಗಳಲ್ಲಿ ಹಳ್ಳಿಯಲ್ಲಿ ತಮ್ಮ ಮಕ್ಕಳನ್ನು ದಿನಗೂಲಿ ಮಾಡಲು ಕಳುಹಿಸುವುದು, ಬೇರೆ ಊರಿಗೆ ದುಡಿಯಲು ಕಳುಹಿಸುವುದು, ದನಕರುಗಳನ್ನು ಕಾಯಲು ಕಳುಹಿಸುವುದು, ಪ್ಲಾಸ್ಟಿಕ್ ಸಾಮಾನುಗಳನ್ನು, ಬಟ್ಟೆಗಳನ್ನು, ಸ್ಟೇಷನರಿ ಸಾಮಾನುಗಳನ್ನು ಮಾರಿಕೊಂಡು ಬರಲು ವ್ಯಾಪಾರಕ್ಕಾಗಿ ಕಳುಹಿಸುವುದನ್ನು ಮಾಡುತ್ತಾರೆ. ಇದರಿಂದ ರಜೆ ಮುಗಿದು ಶಾಲೆಗಳು ಪ್ರಾರಂಭವಾದ ನಂತರ ಮಕ್ಕಳು ಶಾಲೆಗೆ ಹೋಗಲು ಆಸಕ್ತಿವಹಿಸುವುದಿಲ್ಲ. ಪಟ್ಟಣದಲ್ಲಿ ವಾಸವಾಗಿರುವ ಮಾಲ ಕುಟುಂಬದ ಸದಸ್ಯರು ಸಹ ರಜಾದಿನಗಳಲ್ಲಿ ಗೌಂಡಿಕೆಲಸಗಳಿಗಾಗಿ ಕಳುಹಿಸುವುದು, ರಸ್ತೆ ಕೆಲಸಗಳಿಗಾಗಿ ಕಳುಹಿಸುವುದು, ಶ್ರೀಮಂತರ ಮನೆಯಲ್ಲಿ ದುಡಿಯಲಿಕ್ಕೆ ಕಳುಹಿಸುವುದು, ಹೋಟೆಲ್, ಬಾರ್‌ಗಳಲ್ಲಿ, ಅಂಗಡಿಗಳಲ್ಲಿ ವಿವಿಧ ಕೆಲಸಗಳಿಗಾಗಿ ಮಕ್ಕಳನ್ನು ಕಳುಹಿಸುತ್ತಾರೆ. ರಜಾದಿನಗಳು ಮುಗಿದ ನಂತರ ಶಾಲೆಗಳು ಪ್ರಾರಂಭವಾದರು ಸಹ ವಿವಿಧ ಕೆಲಸಗಳಲ್ಲಿ ತೊಡಗಿದ ಮಾಲ ಸಮುದಾಯದವರ ಮಕ್ಕಳು ಮರಳಿ ಶಾಲೆಗೆ ಸೇರಲು ಇಷ್ಟಪಡುವುದಿಲ್ಲ. ಆ ಮಕ್ಕಳಿಗೆ ವ್ಯಾಪಾರ, ದುಡಿಯುವ ಜೀವನ ಸಂತೋಷ ತಂದು ಕೊಡುತ್ತದೆ. ಇದರಿಂದಾಗಿ ಮಾಲ ಸಮುದಾಯದವರ ಮಕ್ಕಳು ದುಡಿಯುವುದರಲ್ಲಿಯೇ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಾರೆ. ಆ ಮಕ್ಕಳು ದುಡಿಯುವುದರಿಂದ ಅಲ್ಪಸ್ವಲ್ಪ ಮನೆಯ ಆರ್ಥಿಕ ಸಮಸ್ಯೆ ನಿವಾರಣೆಯಾಗುತ್ತದೆ ಎಂಬ ಉದ್ದೇಶದಿಂದ ಪಾಲಕರು ಸಹ ಅವರನ್ನು ಶಾಲೆಗೆ ಕಳುಹಿಸಲು ಇಷ್ಟಪಡುವುದಿಲ್ಲ. ಇದರಿಂದ ಮಾಲ ಸಮುದಾಯದವರ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಪಟ್ಟಣಗಳಲ್ಲಿ ವಾಸವಾಗಿರುವ ಮಾಲ ಸಮುದಾಯದವರ ಮಕ್ಕಳು ಕೆಲವರು ಮಾತ್ರ ೧೦ನೇ ತರಗತಿ ಅಥವಾ ಪಿಯುಸಿ ಮಾತ್ರ ಓದಿಕೊಂಡಿರುತ್ತಾರೆ. ಶಿಕ್ಷಣದಿಂದ ಈ ಸಮುದಾಯದವರ ಮಕ್ಕಳು ಹಿಂದುಳಿಯಲಿಕ್ಕೆ ಇನ್ನೊಂದು ಪ್ರಮುಖವಾದ ಕಾರಣವೆಂದರೆ ಈ ಸಮುದಾಯದ ಮಕ್ಕಳು ಹದಿನೈದು ವರ್ಷವಾದ ನಂತರ ತಮ್ಮ ಆರ್ಥಿಕ ಬೆನ್ನೆಲುಬು ಆಗಿದ್ದ ವಂಶಪಾರಂಪರ್ಯ ಪ್ರದರ್ಶನ ಕಲೆಯನ್ನು ಅಭ್ಯಾಸ ಮಡಲು ಪ್ರಾರಂಭಿಸುತ್ತಾರೆ. ಅವರ ಪ್ರದರ್ಶನ ಕಲೆಗಳು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದವುಗಳು. ಇವತ್ತಿನವರೆಗೂ ಈ ಸಮುದಾಯದವರು ತಮ್ಮ ಪ್ರದರ್ಶನ ಕಲೆಗಳನ್ನು ಉಳಿಸಿಕೊಂಡು ಬರಲು ನವಪೀಳಿಗೆಗಳು ಸಹ ಪ್ರಯತ್ನಿಸುತ್ತಿವೆ ಮತ್ತು ಸಂಘಗಳನ್ನು ಕಟ್ಟಿಕೊಂಡು ತಮ್ಮ ಕಲೆಯನ್ನು ಬೆಳೆಸುತ್ತಿದ್ದಾರೆ. ಇದರಿಂದಲೂ ಸಹ ಮಕ್ಕಳು ಶಿಕ್ಷಣದಿಂದ ವಂಚಿತರಾಗಲು ಪ್ರಮುಖವಾದಂತಹ ಕಾರಣವೆನ್ನಬಹುದು. ಕೆಲವು ಕುಟುಂಬದ ಪಾಲಕರುಗಳು ಮಕ್ಕಳನ್ನು ಶಾಲೆಗೆ ಕಳುಹಿಸಲು ಇಚ್ಚಿಸಿದರೂ ಮಕ್ಕಳು ಶಾಲೆಗಳಿಗೆ ಹೋಗಲು ಇಷ್ಟಪಡುವುದಿಲ್ಲ. ಶಾಲಾ ಪಠ್ಯಪುಸ್ತಕಗಳ ಹೊರೆ, ಬರವಣಿಗೆಯ ಸಮಸ್ಯೆ, ಗ್ರಹಿಕಾ ಸಮಸ್ಯೆ, ಜ್ಞಾನಪಶಕ್ತಿ ಸಮಸ್ಯೆ, ಆಲಿಸುವ ಸಮಸ್ಯೆಗಳು ಮಕ್ಕಳಲ್ಲಿ ಇರುವುದರಿಂದ ಮಕ್ಕಳು ಶಾಲೆಗೆ ಹೋಗಲು ಇಷ್ಟಪಡುವುದಿಲ್ಲ. ಪಾಲಕರಲ್ಲಿ ತಮ್ಮ ಮಕ್ಕಳಿಗೆ ಪುಷ್ಠಿಕರಣದ ಅಭಾವ ಪ್ರೋತ್ಸಾಹದ ಅಭಾವ ವಿರುವುದು ತಿಳಿದುಬಂದಿದೆ. ಇದರಿಂದಾಗಿ ಮಕ್ಕಳು ಶಿಕ್ಷಣದಿಂದ ಶಾಲೆಯಿಂದ ಹೊರಗುಳಿದಿದ್ದಾರೆ. ಸರ್ಕಾರದಿಂದ ಶಾಲಾಮಕ್ಕಳಿಗಾಗಿ ಎಷ್ಟೋ ಯೋಜನೆಗಳು, ಸೌಲಭ್ಯಗಳು ಜಾರಿಗೆ ಬಂದರು ಸಹ ಅದನ್ನು ಸದುಪಯೋಗ ಪಡೆದುಕೊಳ್ಳುವಲ್ಲಿ ಮತ್ತು ಅದನ್ನು ಪಡೆಯುವಲ್ಲಿ ವಿಫಲರಾಗಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಬರುವ ಸವಲತ್ತುಗಳು ಮಾಲ ಸಮುದಾಯದ ಪಾಲಕರಿಗೆ ಅಲ್ಪಸ್ವಲ್ಪ ಗೊತ್ತಿದ್ದರು ಸಹ ಅದು ನಮಗೇಕೆ ಬೇಕು ಎನ್ನುವ ಭಾವನೆಯನ್ನು ಹೊಂದಿದ್ದಾರೆ, ನಾವು

ಮಕ್ಕಳನ್ನು ಶಾಲೆಗೆ ಕಳಿಹಿಸಿದರೆ ನಮ್ಮ ಮನೆಯ ಕೆಲಸವನ್ನು ಮಾಡುವವರು ಯಾರು ಎಂದು ಹೇಳಿಕೊಳ್ಳುತ್ತಾರೆ.

೫.೧೪. ರಾಜಕೀಯ ಸ್ಥಾನಮಾನ

ಮಾಲ ಸಮುದಾಯದವರು ರಾಜಕೀಯವಾಗಿ ಬಹಳ ಹಿಂದುಳಿದಿದ್ದಾರೆ. ಕರ್ನಾಟಕದಲ್ಲಿ ಅತ್ಯಲ್ಪ ಜನಸಂಖ್ಯೆಯನ್ನು ಹೊಂದಿದ ಮಾಲ ಸಮುದಾಯದವರು ಪ್ರತಿವರ್ಷ ಗ್ರಾಮ ಪಂಚಾಯಿತಿಯಲ್ಲಿ ಸ್ಥಾನ ದೊರೆತಿರುವುದಿಲ್ಲ. ಇವರು ಸದಾ ಅಲೆಮಾರಿಗಳಾಗಿರುವುದರಿಂದ ಕೆಲವು ಜನರಿಗೆ ಒಟಿನ ಕಾರ್ಡು ಇರದೆ ಇರುವುದರಿಂದ ಈ ಸಮುದಾಯದ ಕೆಲವು ಸದಸ್ಯರು ಮತದಾರರ ಪಟ್ಟಿಯಿಂದ ಹೊರಗುಳಿದಿದ್ದಾರೆ. ಇದಕ್ಕೆ ಮೂಲ ಕಾರಣ ಇವರ ಅಲೆಮಾರಿತನವೇ ಆಗಿದೆ. ಮಾಲ ಸಮುದಾಯದವರು ರಾಜಕೀಯವಾಗಿ ಹಿಂದುಳಿಯಲಿಕ್ಕೆ ನಿರ್ಧಿಷ್ಟ ನೆಲೆ ಇಲ್ಲದೆ ಇರುವುದು, ಆರ್ಥಿಕ ಮತ್ತು ಸಾಮಾಜಿಕ ದುರ್ಬಲತೆ ಪ್ರಮುಖವಾದ ಕಾರಣವಾಗಿದೆ. ಹಲವಾರು ವರ್ಷಗಳ ಹಿಂದೆ ಈ ಸಮುದಾಯದವರಿಗೆ ಹೊಲ, ಮನೆ, ಜಾಗ, ಭೂಮಿ ಮತ್ತು ಮೂಲಭೂತ ಸೌಕರ್ಯಗಳು ಇಲ್ಲದೆ ಇರುವ ಕಾರಣದಿಂದಾಗಿ ತಮ್ಮ ಆರ್ಥಿಕ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ, ಒಂದು ಊರಿನಿಂದ ಇನ್ನೊಂದು ಊರಿಗೆ ತಮ್ಮ ಗಂಟು ಮೊಟೆಯನ್ನು ಕಟ್ಟಿಕೊಂಡು ಜೋಪಡಿ ಕಿತ್ತಿಕೊಂಡು ಒಂದು ಊರಿನಲ್ಲಿ ಕೆಲವು ಕುಟುಂಬಗಳು ಇನ್ನೊಂದು ಊರಿನಲ್ಲಿ ಕೆಲವು ಕುಟುಂಬಗಳು ಗುಡಿಸಲುಗಳನ್ನು ಹಾಕಿಕೊಂಡು ವಾಸವಾಗಿದ್ದಾರೆ ಮತ್ತು ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ, ಬೇರೆ ಬೇರೆ ತಾಲೂಕುಗಳಲ್ಲಿ ತಮಗೆ ಯೋಗ್ಯವೆನಿಸಿದ ಊರುಗಳಲ್ಲಿ ವಾಸವಾಗಿ ಈ ಸಮುದಾಯದ ಜನರು ಒಂದೆ ಕಡೆ ನೆಲೆ ನಿಲ್ಲದೆ ಹರಿದು ಹಂಚಿ ಹೋಗಿದ್ದಾರೆ. ಆದ್ದರಿಂದ ಒಂದೇ ಊರಿನಲ್ಲಿ ನೆಲೆ ನಿಲ್ಲದ ಕಾರಣದಿಂದಾಗಿ ರಾಜಕೀಯ ಪ್ರಾತಿನಿಧಿಕತೆ ಈ ಸಮುದಾಯದವರಿಗೆ ದೊರೆತಿಲ್ಲ. ಮಾಲ ಸಮುದಯದವರ ಬಹಳಷ್ಟು ಸದಸ್ಯರು ಇಂದಿಗೂ ಚುಣಾವಣೆಯ ಕುರಿತಾಗಿ ಪೂರ್ಣಪ್ರಜ್ಞೆಯನ್ನು ಅವಳಡಿಸಿಕೊಂಡಿಲ್ಲ.

ಮಾಲ ಸಮುದಾಯದವರು ಕೆಲವು ಕುಟುಂಬಗಳು ನೆಲೆ ನಿಂತ ಸ್ಥಳ ಅಥವಾ ಊರಿನಲ್ಲಿ ಚುಣಾವಣೆಗೆ ಸ್ಪರ್ಧಿಸಿದರೂ ಜಯಗಳಿಸುವುದು ಬಹಳ ಕಷ್ಟಕರವಾಗಿದೆ. ಏಕೆಂದರೆ ಮಾಲ ಸಮುದಾಯದವರು ನೆಲೆ ನಿಂತ ಕೆಲವು ಊರುಗಳಲ್ಲಿ ಬೇರೆ ಪರಿಶಿಷ್ಟ ಜಾತಿ ಸಮುದಾಯದವರು ವಾಸವಿದ್ದು ಆ ಬೇರೆ ಸಮುದಾಯಗಳ ಜನಸಂಖ್ಯೆ ಪ್ರಮಾಣ ಹೆಚ್ಚಾಗಿರುವುದರಿಂದ ಅವರು ಪರಿಶಿಷ್ಟ ಜಾತಿಯ ಮೀಸಲಾತಿಯ ಸದಸ್ಯರ ಸ್ಥಾನದಲ್ಲಿ ಸ್ಪರ್ಧಿಸುತ್ತಾರೆ ಮತ್ತು ಈ ರೀತಿಯ ಬೇರೆ ಪರಿಶಿಷ್ಟ ಜಾತಿ ಸಮುದಾಯದವರು ಪ್ರತಿವರ್ಷ ಗ್ರಾಮಪಂಚಾಯತಿ ಸದಸ್ಯರಾಗಿ ಆಯ್ಕೆಯಾಗುತ್ತಾರೆ. ಮಾಲ ಸಮುದಾಯದವರು ನೆಲೆನಿಂತ ಕುಟುಂಬಗಳ ಜನಸಂಖ್ಯೆ ಪ್ರಮಾಣ ಕಡಿಮೆಯಿರುವುದರಿಂದ ಗ್ರಾಮ ಪಂಚಾಯಿತಿ ಸದಸ್ಯರ ಸ್ಥಾನಕ್ಕೆ ಸ್ಪರ್ಧಿಸಿದರು ಸಹ ಜಯವನ್ನು ಗಳಿಸುವುದಿಲ್ಲ. ಈ ಕಾರಣದಿಂದಾಗಿ ಮಾಲ ಸಮುದಾಯದವರು ರಾಜಕೀಯವಾಗಿ ಬಹಳ ಹಿಂದುಳಿದಿದ್ದಾರೆ. ಈ ಸಮುದಾಯದವರಿಗೆ ರಾಜಕೀಯ ಪ್ರಾಭಲ್ಯ ದೊರೆಯದೆ ಇದ್ದುದರಿಂದ ಆರ್ಥಿಕ ಅಭಿವೃದ್ಧಿಯಲ್ಲಿ ಸಹ ಹಿಂದುಳಿಯಲಿಕ್ಕೆ ಕಾರಣವಾಗಿದೆ.

ಇತ್ತೀಚೆಗಷ್ಟೆ ಮಾಲ ಸಮುದಾಯದವರ ಕೆಲವು ಕುಟುಂಬಗಳು ಕೆಲವು ಸದಸ್ಯರು ಒಂದು ಕಡೆ ನಿಲೆ ನಿಲ್ಲಲು ಪ್ರಯತ್ನಿಸುತ್ತಿವೆ. ಕೆಲವೊಂದು ಕುಟುಂಬಗಳಿಗೆ ಮಾತ್ರ ಆಶ್ರಯ ಯೋಜನೆ ಮನೆಗಳು ದೊರೆತಿವೆ. ಅಲೆಮಾರಿಗಳ ಚಾರಿತ್ರಿಕ ಬೆಳವಣಿಗೆ ಎಷ್ಟು ಸಂಕೀರ್ಣವೂ ಅವುಗಳ ಅಭಿವೃದ್ಧಿ ಸಾಧಿಸುವ ಮಾರ್ಗವು ಸಹ ಅಷ್ಟೇ ಸಂಕೀರ್ಣವಾಗಿದೆ. ಸಮಾಜದ ಚಾರಿತ್ರಿಕ ಹಂತದಲ್ಲಿ ನೆಲೆತಪ್ಪಿ ಹೋದ ಮಾಲ ಸಮುದಾಯದವರ ಸಂಕೀರ್ಣ ಬದುಕು ಅನೇಕ ಜಟೀಲ ಸಮಸ್ಯೆಗಳಿಗೆ ಕಾರಣವಾಗಿದೆ. ಇದುವರೆಗೆ ರಾಜಕೀಯ ಅಧಿಕಾರದಲ್ಲಿ ಸ್ಥಾನ ಗಳಿಸಿದವರು ಪ್ರಭಲ ಜಾತಿ ಮತ್ತು ಅವರು ಪ್ರಭಲ ಜನಸಂಖ್ಯೆ ಹೊಂದಿದವರಾಗಿರುವುದು ಕಂಡುಬರುತ್ತದೆ. ಮಾಲ ಸಮುದಾಯಗಳ ಜನಸಂಖ್ಯೆ ಪ್ರಮಾಣ ಅಲ್ಲಲ್ಲಿ ಹರಿದು ಹಂಚಿ ಅಲೆಮಾರಿಯಾಗಿ ಹೊದವರು ಮೂರು ವರ್ಷಕ್ಕೊಮ್ಮೆ ಮಾತ್ರ ಮರಳಿ ಬರುತ್ತಾರೆ ಈ ರೀತಿ ಹೋಗಿದ್ದರಿಂದ ರಾಜಕೀಯದಲ್ಲಿ ಸ್ಥಾನಮಾನ ದೊರಕದಂತಾಗಿದೆ. ಈ ಸಮುದಾಯಗಳ ಜನಸಂಖ್ಯೆ ಹೆಚ್ಚಾಗಿದ್ದಷ್ಟು ರಾಜಕೀಯ ವ್ಯಕ್ತಿಗಳ, ಮುಖಂಡರ ಮತ್ತು ಪಕ್ಷಗಳ ಗಮನ ಮಾಲ ಸಮುದಾಯದತ್ತ ಸೆಳೆಯುತ್ತದೆ. ಪ್ರತಿಯೊಂದು ಸಮುದಾಯದಲ್ಲಿ ಒಬ್ಬ ಪ್ರಭಲ ಮುಖಂಡನಿದ್ದು, ಆತನ ಮಾತಿನಂತೆ ಒಗ್ಗಟ್ಟಾಗುತ್ತಾರೆ. ಆದರೆ ಮಾಲ ಸಮುದಾಯದವರಲ್ಲಿ ಪ್ರಬಲ ವ್ಯಕ್ತಿಗಳ ಸಂಖ್ಯೆ ಇಲ್ಲದಂತಾಗಿದೆ. ಈ ಆಧುನಿಕ ಕಾಲದಲ್ಲಿ ಸರಕಾರಗಳು ರೂಪಿಸುವ ಬಹುತೇಕ ಯೋಜನೆಗಳು ಪ್ರತಿಹಂತದಲ್ಲೂ ರಾಜಕೀಯ ಮಧ್ಯಪ್ರವೇಶ ಇಲ್ಲದೆ ಅನುಷ್ಠಾನದಲ್ಲಿರುವ ಅಥವಾ ಜಾರಿ ಯಲ್ಲಿರುವ ರಾಜಕೀಯ ಲೋಪದೋಷಗಳಿಂದಾಗಿ ಹಲವು ಯೋಜನೆಗಳು ಸವಲತ್ತುಗಳು ಈ ಸಮುದಾಯದವರಿಗೆ ತಲುಪುತ್ತಿಲ್ಲ. ಮಾಲ ಸಮುದಾಯದವರು ಆಧುನಿಕ ಜಗತ್ತಿನ ಲೌಕಿಕ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಆದರೂ ಬಹಳಷ್ಟು ಕಾಳಜಿಯಿಂದ ತಮ್ಮ ಅನನ್ಯತೆಯನ್ನು, ಸಂಸ್ಕೃತಿಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಮತ್ತು ಮಾಲ ಸಮುದಾಯದವರು ಅನೇಕ ಬೌದ್ಧಿಕ ದೈಹಿಕ ಚಮತ್ಕಾರಗಳನ್ನು ಕಟ್ಟಿಕೊಂಡಿದ್ದಾರೆ. ಇವರು ರಾಜಕೀಯ ಮೀಸಲಾತಿಯ ಸ್ಥಾನದಿಂದ ವಂಚಿತರಾಗಿದ್ದಾರೆ. ಇವರ ಸ್ಥಾನದ ಲಾಭವನ್ನು ಮತ್ತು ಇವರ ಮೀಸಲಾತಿಯ ಮೂಲಭೂತ ಸೌಕರ್ಯಗಳನ್ನು ಬೇರೆ ಪರಿಶಿಷ್ಟ ಜಾತಿಯ ಸಮುದಾಯಗಳು ಪಡೆದುಕೊಂಡು ಅಧಿಕಾರ ನಡೆಸುತ್ತಾರೆ. ಇಂತಹ ವ್ಯವಸ್ಥೆ ಇದ್ದಾಗ ಮಾಲ ಸಮುದಾಯದವರು ರಾಜಕೀಯವಾಗಿ ಅಭಿವೃದ್ಧಿ ಹೊಂದುವುದರಲ್ಲಿ, ರಾಜಕೀಯ ಸೌಲಭ್ಯವನ್ನು ಪಡೆದುಕೊಳ್ಳುವುದರಲ್ಲಿ ಬಹಳ ವಂಚಿತತೆಯನ್ನು ಅನುಭವಿಸುತ್ತಿದ್ದಾರೆ. ಈ ಸಮುದಾಯದವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯ ವಾಗಿ ಯಾವ ರೀತಿಯ ಅಭಿವೃದ್ಧಿಯನ್ನು ಹೊಂದದೆ ನಾಗರಿಕ ಸಮಾಜದಿಂದ ದೂರವಿದ್ದು, ಹಲವಾರು ರೀತಿಯ ಸಮಸ್ಯೆ, ಹವಮಾನಗಳಿಗೆ ಗುರಿಯಾಗುತ್ತಾ ಹೊಟ್ಟೆಪಾಡಿಗಾಗಿ ಪರದಾಡುವವರು ಆಗಿದ್ದಾರೆ. ಇವರು ನೆಲೆನಿಂತ ಊರಿನಲ್ಲಿರುವ ಸದಸ್ಯರನ್ನು, ಕುಟುಂಬದವರನ್ನು ರಾಜಕೀಯ ವ್ಯಕ್ತಿಗಳು ತಮ್ಮ ಆಯ್ಕೆಯ ಪ್ರಕ್ರಿಯೆಯ ಸಲುವಾಗಿ ಮಾತ್ರ ಬಳಸಿಕೊಳ್ಳುತ್ತಿದ್ದಾರೆ. ಮಾಲ ಸಮುದಾಯದವರಿಗೆ ಮೂಲಭೂತ ಸೌಲಭ್ಯಗಳನ್ನು ಕೊಡುವುದಾಗಿ ಸುಳ್ಳು ಭರವಸೆಯನ್ನು ನೀಡುತ್ತಿದ್ದಾರೆ ಎಂದು ಕ್ಷೇತ್ರಕಾರ್ಯದ ಮುಖಾಂತರ ತಿಳಿಸಿದ್ದಾರೆ. ಒಟ್ಟಿನಲ್ಲಿ ಈ ಸಮುದಾಯದವರು ರಾಜಕೀಯವಾಗಿ ಹಿಂದುಳಿದಿರುವುದು ಕಂಡುಬರುತ್ತದೆ.

ಇಂದು ಭಾರತವು ೨೧ನೇ ಶತಮಾನದಲ್ಲಿದೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕು ೭೩ ವರ್ಷಗಳಾಗಿವೆ. ಪ್ರಪಂಚದ ಮಹತ್ವದ ಪ್ರಜಾಪ್ರಭುತ್ವವಿರುವ ರಾಷ್ಟ್ರಗಳಲ್ಲೊಂದು ಎಂದು ಜಾಗತಿಕವಾಗಿ ಗುರುತಿಸಲ್ಪಡುತ್ತಿದೆ. ಆದರೆ ಭಾರತವು ಯಾರಿಗೆ ಬಂತು, ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ ಎಂದು ಕೇಳುವಂತಾಗಿದೆ. ಆದರೆ ಭಾರತವು ಮೇಲ್ನೋಟಕ್ಕೆ ಕಾಣುವಷ್ಟು ಪಾರದರ್ಶಕವಾಗಿ ಉಳಿದಿಲ್ಲವೇನೋ ಎನಿಸುವಂತಾಗಿದೆ. ಇದರ ಆಂತರಿಕ ಸ್ಥಿತಿ ಮಾತ್ರ ಇನ್ನೂ ಬದಲಾವಣೆ ಕಾಣದೆ ಬಳಲುತ್ತಿದೆ. ಭಾರತ ಜಾತ್ಯಾತೀತ ರಾಷ್ಟ್ರವೆಂದು ಘೋಷಿಸಲ್ಪಟ್ಟಿದೆ. ಆದರೆ ಅದು ಇನ್ನೂ ಉಸಿರಾಡುತ್ತಿರುವುದು ಜಾತಿಯ ವಿಷಮ ಗಾಳಿಯನ್ನೇ, ಪ್ರಭಲ ಜಾತಿಯ ಬಂಡವಾಳಶಾಹಿಗಳಿಗೆ ಮಾತ್ರ ರಾಜಕೀಯ ಅಧಿಕಾರ ಎನ್ನುವಂತಹ ದೌರ್ಭಾಗ್ಯದ ಸ್ಥಿತಿಗೆ ಭಾರತ ಬಂದು ತಲುಪಿದೆ. ತಳಸಮುದಾಯಗಳು, ಅದರಲ್ಲೂ ಅಲ್ಪ ಜನಸಂಖ್ಯೆಯನ್ನು ಹೊಂದಿದ ತಳಸಮುದಾಯಗಳಿಗೆ ರಾಜಕೀಯ ಭವಿಷ್ಯವಿಲ್ಲ ಎನ್ನುವ ಸ್ಥಿತಿಗೆ ಭಾರತದ ವ್ಯವಸ್ಥೆಯಿದೆ. ಗಾಂಧಿಯಜೀವರ ರಾಮರಾಜ್ಯದ ಕನಸು, ಸಮಾನ ಸಮಾಜದ ಕಲ್ಪನೆ ಗಾಳಿಗೆ ತೂರಲ್ಪಟ್ಟಿದೆ. ಇಂದು ರಾಮರಾಜ್ಯವೆಂದರೆ ಹಿಂದುತ್ವವನ್ನು ಹಿಡಿದು ಎಳೆದಾಡುತ್ತಾ ಅದನ್ನೇ ಬಂಡವಾಳವಾಗಿಸಿಕೊಂಡು ರಾಜಕೀಯ ಮಾಡುವುದು ಎಂಬ ಅಭಿಪ್ರಾಯಕ್ಕೆ ಬಹುತೇಕ ರಾಜಕೀಯ ವ್ಯವಸ್ಥೆ ಬಂದು ತಲುಪಿದೆ.

ರಾಮಮನೋಹರರ ಲೋಹಿಯಾರವರು "ರಾಜಕೀಯ ಪಕ್ಷಗಳಲ್ಲಿ ಅಧಿಕಾರದ ಹುದ್ದೆಗಳನ್ನು ಸೂಕ್ತ ಪ್ರಮಾಣದಲ್ಲಿ ನೀಡಬೇಕಾಗಿದೆ. ಸಮಿತಿಗಳನ್ನು ರಚಿಸುವಾಗ ಶೂದ್ರ, ಹರಿಜನ ಮತ್ತು ಮುಸಲ್ಮಾನರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಬೇಕಾಗಿದೆ. ಅಗಸ, ಕ್ಷೌರಿಕ, ಗಾಣಿಗ, ಕಮ್ಮಾರ ಮತ್ತು ಇತರೆ ಹಿಂದುಳಿದ ಜಾತಿಗಳಲ್ಲಿ ನೂರಾರು ಬಗೆಯ ಸಮಸ್ಯೆಗಳಿವೆ. ಅವರ ಕೇರಿಗಳಿಗೆ ಒಳ್ಳೆಯ ರಸ್ತೆಗಳು ಆಗಬೇಕು. ಸುಲಭ ಬೆಲೆಗೆ ಕಚ್ಚಾ ಮಾಲುಗಳು ದೊರೆಯಬೇಕು. ಪೋಲೀಸರ ದಬ್ಬಾಳಿಕೆ ನಿಲ್ಲಬೇಕು. ಇವರಿಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ದೊರಕಿಸಿಕೊಟ್ಟು ಆ ಮೂಲಕ ಅವರ ವಿಶ್ವಾಸವನ್ನು ಗಳಿಸಿಕೊಂಡು ಈ ನತದೃಷ್ಟ ಜಾತಿಗಳ ಸಂಘಟನೆಯನ್ನು ರಾಜಕೀಯ ಕ್ಷೇತ್ರದೊಳಗೆ ತರುವುದರಿಂದ ಬಹುಜನ ಸಮಾಜ ರೂಪಿತವಾಗಬಲ್ಲದು"[೪] ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇಂದು ಬಲಿಷ್ಟ ಜಾತಿಗಳ ಒತ್ತಡಗಳ ಮಧ್ಯದಲ್ಲಿ ಅಲ್ಪಸಂಖ್ಯಾತ ತಳಸಮುದಾಯಗಳು ನಲಗುವಂತಾಗಿದೆ. ವೋಟ್ ಬ್ಯಾಂಕನ್ನೇ ಕೇಂದ್ರವಾಗಿಸಿಕೊಂಡು ರಾಜಕೀಯ ಮಾಡುವ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳಿಗೆ ಅಲ್ಪ ಜನಸಂಖ್ಯೆಯನ್ನು ಹೊಂದಿರುವ ಹಿಂದುಳಿದ ಜಾತಿಗಳು ಕಾಣದಂತಾಗಿದೆ. ಜನಸಂಖ್ಯಾ ಬಾಹುಳ್ಯವನ್ನು ಹೊಂದಿದ ಕೆಲವೇ ಕೆಲವು ತಳಸಮುದಾಯಗಳು ನಿರ್ದಿಷ್ಟ ಮೀಸಲಾತಿಯಡಿ ರಾಜಕೀಯ ಪಕ್ಷಗಳ ಟಿಕೆಟನ್ನು ಪಡೆದು ರಾಜ್ಯ ಹಾಗೂ ರಾಷ್ಟ್ರಮಟ್ಟದ ರಾಜಕೀಯ ಗದ್ದುಗೆ ಹೊಂದುವಂತಾಗಿದೆ. ರಾಜಕೀಯ ಗದ್ದುಗೆ ಹೊಂದಲು ಸಾಧ್ಯವಾಗಿರುವ ತಳಸಮುದಾಯದ ಬಂಡವಾಳಶಾಹಿಗಳು ಮೇಲ್ಜಾತಿಗಳ ಹಿಡಿತದಲ್ಲಿರುತ್ತಾರೆ ಎಂಬುದು ನಿಜ. ಆದರೆ ಅಷ್ಟು ಸೌಲಭ್ಯವೂ ಅಲ್ಪಜನಸಂಖ್ಯೆಯನ್ನು ಹೊಂದಿದ ತಳಸಮುದಾಯಗಳಿಗೆ ದಕ್ಕದೇ ಹೋಗಿರುವುದು ಮಾತ್ರ ಸತ್ಯ.

ಆದರೆ ಇವೆಲ್ಲದರ ಆಚೆಯೂ ಬಹುತೇಕ ನಿರ್ಲಕ್ಷಿತ ಜಾತಿ, ಸಮುದಾಯಗಳು ಭಾರತದಲ್ಲಿ ಇನ್ನೂ ಜೀವಂತವಾಗಿ ಇವೆ. ಅವುಗಳ ಇರುವಿನ ಕುರಿತು ಸರ್ಕಾರ ಗಮನವನ್ನೇ ಹರಿಸುತ್ತಿಲ್ಲ. ಅಂತಹ ನಿರ್ಭಾಗ್ಯ ಜಾತಿ, ಸಮುದಾಯಗಳು ಸ್ವತಃ ತಾವು ನಿರ್ಲಕ್ಷಿತರು ಎಂದು ಹೇಳಿಕೊಳ್ಳಲು ಗಂಟಲಿಲ್ಲದ ಅಸಹಾಕತೆಯನ್ನು ಅನುಭವಿಸುತ್ತಿವೆ.

ಇಂದು ಭಾರತದ ರಾಜಕೀಯ ಪಕ್ಷಗಳು ಉಸಿರಾಡುತ್ತಿರುವುದೇ ಜಾತಿಗಳ ವೋಟನ್ನು ಆಧಾರಿಸಿ. ಜನಸಂಖ್ಯಾ ದೃಷ್ಟಿಯಿಂದ ಪ್ರಭುತ್ವವಾಗಿರುವ ಬಹುಸಂಖ್ಯಾತ ಜಾತಿಗಳು ಸರ್ಕಾರದಿಂದ ಸಿಗುವ ಅಲ್ಪ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುತ್ತಿವೆ. ಅಂತಹ ಬಹುಸಂಖ್ಯಾತ ಜಾತಿ, ಸಮುದಾಯದವರು ತುಂಬಾ ಪ್ರಜ್ಞಾವಂತಿಕೆಯಿಂದಲೇ ತಾವು ಓಟಿಂಗ್ ಬ್ಯಾಂಕ್ ಎಂಬುದನ್ನು ಸೂಚ್ಯವಾಗಿ ಆಡಳಿತಾರೂಢ ರಾಜಕೀಯ ಪಕ್ಷಗಳಿಗೆ ಮನವರಿಕೆ ಮಾಡುತ್ತಿವೆ. ಹೀಗೆ ಎಚ್ಚರಿಕೆ ಕೊಡುವುದರ ಮೂಲಕ ತಮಗೆ ಬೇಕಾದ ಸೌಲಭ್ಯಗಳನ್ನು ಅವು ಪಡೆಯುತ್ತಾ ಬರುತ್ತಿವೆ.

ಲೋಹಿಯಾರವರು ಗುರುತಿಸಿರುವಂತೆ ಅಲ್ಪ ಜನಸಂಖ್ಯೆಯನ್ನು ಹೊಂದಿದ, ತೀರಾ ನಿಕೃಷ್ಟವೆಂದು ಭಾವಿಸುವ ಸಮುದಾಯಗಳನ್ನು ಆಡಳಿತಾರೂಢ ಸರ್ಕಾರಗಳು ಅಲಕ್ಷಿಸುವ ಅಪಾಯವಿರುವುದನ್ನು ಕಾಣಬಹುದಾಗದೆ.

ಇದಾವುದರ ಪ್ರಜ್ಞೆಯೂ ಇರದೆ ತಮ್ಮ ಮೂಲ ವೃತ್ತಿಯಿಂದ ವಂಚಿತವಾಗಿರುವ ಅಲೆಮಾರಿ ಹಾಗೂ ನಿರ್ಲಕ್ಷಿತ ಸಮುದಾಯಗಳು ತಮ್ಮ ಸಾಂಸಾರಿಕ ಬವಣೆಗಳಲ್ಲಿಯೇ ಕಾಲ ನೂಕುವ ಅಸಹಾಯಕ ಸ್ಥಿತಿಗೆ ನೂಕಲ್ಪಟ್ಟಿವೆ.

ಅದರಲ್ಲೂ ಮಾಲ ಸಮುದಾಯದಂತಹ ಧ್ವನಿ ಕಳೆದುಕೊಂಡು ಅಸಾಹಯಕತೆ ಹೊಂದಿರುವ ಚಿಕ್ಕ ಅಸ್ಪೃಶ್ಯ ಸಮುದಾಯವು ಮೀಸಲಾತಿಯ ಸೌಲಭ್ಯಗಳನ್ನು ಹೊಂದಿಯೂ ಈ ವ್ಯವಸ್ಥೆಯಲ್ಲಿ ನಿರ್ಲಕ್ಷ್ಯಕ್ಕೆ ಗುರಿಯಾಗಿದೆ. ಹೀಗಾಗಿ ಈ ಸಮುದಾಯವು ತನ್ನ ಅಸ್ತಿತ್ವದ ಕುರಿತೇ ಅನುಮಾನ ಪಡುವಂತಹ ಸ್ಥಿತಿಯನ್ನು ಅನುಭವಿಸುತ್ತಿವೆ. ಇಂತಹ ಅಸಾಹಾಯಕ ಸ್ಥಿತಿಯಿಂದಾಗಿ ಎಷ್ಟೋ ಕಡೆ ತಮ್ಮ ಜಾತಿಗೆ ಮೀಸಲಾತಿ ಸೌಲಭ್ಯ ದೊರೆಯುತ್ತದೆಂಬ ಪ್ರಜ್ಞೆ ಇದ್ದರೂ ಬೇರೊಂದು ಜಾತಿಯ ಹೆಸರಿನ ಹೆಸರಿನಲ್ಲಿ 'ಸಿಂಧುತ್ವ ಪ್ರಮಾಣ ಪತ್ರ' ಪಡೆಯುವಂತಾಗಿದೆ ಎಂಬುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮಾಲ ಸಮುದಾಯದ ಮಾಹಿತಿದಾರರು ತಿಳಿಸಿದರು. ಎಷ್ಟೋ ಕಡೆ ಮಾಲ ಸಮುದಾಯವು ಕರ್ನಾಟಕದ ಈ ಭಾಗದಲ್ಲಿಲ್ಲ, ಅದಿರುವುದು ಆಂದ್ರ ಪ್ರದೇಶದಲ್ಲಿ ಎಂದು ಹೇಳಿ ಅಧಿಕಾರಿಗಳು ಅರ್ಜಿಗಳನ್ನು ತಿರಸ್ಕರಿಸುವರು ಎಂಬ ಅಳಲು ಮಾಲ(ಪರ್ವತ ಮಲ್ಲಯ್ಯ) ಸಮುದಾಯದವರದ್ದಾಗಿದೆ. ಈ ಕಾರಣಕ್ಕಾಗಿ ತಮ್ಮ ಜಾತಿಯ ಹೆಸರನ್ನೇ ತೊರೆದು ಬೇರೆ ಜಾತಿಯ ಹೆಸರನ್ನು ಹೇಳಿಕೊಳ್ಳುವಂತಹ ದುಃಸ್ಥಿತಿಗೆ ಮಾಲದಂತಹ ತಳಸಮುದಾಯವನ್ನು ದೂಡಲಾಗಿದೆ. ಮಾಲದಂತಹ ಸಮುದಾಯಗಳು ಅಸ್ಪೃಶ್ಯತೆಯ ಕಾರಣಕ್ಕಾಗಿಯೇ ಹೆಚ್ಚು ಅವಮಾನಗಳಿಗೆ ಒಳಗಾಗುತ್ತಿವೆ. ಅದರಲ್ಲೂ ರಾಜಕೀಯ ವ್ಯವಸ್ಥೆಯ ಪ್ರಾಥಮಿಕ ಹಂತದ ಮೊದಲನೆಯ ಮೆಟ್ಟಿಲು ತುಳಿಯಲಾಗದ ಮಾಲ ಸಮುದಾಯದವರಿಗೆ ಒಂದು ಪ್ರತ್ಯೇಕ ಅಸ್ತಿತ್ವದ ಅವಶ್ಯಕತೆ ಅನಿವಾರ್ಯವಾಗಿದೆ.

ಪರ್ವತಮಲ್ಲಯ್ಯ ಎಂದು ಸ್ಥಳೀಯರಿಂದ ಕರೆಯಲ್ಪಡುವ ಅಲೆಮಾರಿ ಮಾಲ ಸಮುದಾಯವು ಇಂದು ಮಧ್ಯ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಮಾತ್ರ ನೆಲೆಸಿದೆಯಾದರೂ ರಾಜಕೀಯವಾಗಿ ಒಂದು ಗ್ರಾಮಪಂಚಾಯತಿಯ ಸದಸ್ಯರಾಗಲೂ ಸಾಧ್ಯವಾಗದಿರುವುದು ಇರಲಿ, ಎಷ್ಟೋ ಕುಟುಂಬಗಳಿಗೆ ಇಂದಿಗೂ ಮತದಾರರ ಚೀಟಿ (ವೋಟರ್ ಕಾರ್ಡ್) ಹೊಂದಲು ಸಾಧ್ಯವಾಗಿಲ್ಲ ಎಂಬುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿತು. ಅನಕ್ಷರಸ್ಥರಿಂದಲೇ ತುಂಬಿರುವ ಈ ಸಮುದಾಯವು ರಾಜಕೀಯವಾಗಿ ಬಲಿಷ್ಠ ಸಮುದಾಯಗಳ ಅಡಕತ್ತರಿಯಲ್ಲಿ ಸಿಲುಕಿಕೊಂಡಿವೆ.

ರಾಜ್ಯ ಮತ್ತು ರಾಷ್ಟ್ರ ಮಟ್ಟದ ರಾಜಕೀಯದಲ್ಲಿ ಮಾಲ ಸಮುದಾಯದ ಪಾತ್ರ ಕೇವಲ ಹಣವಂತ ಮೇಲ್ಜಾತಿಯವರು ಹೇಳುವ ಪಕ್ಷ ಅಥವಾ ವ್ಯಕ್ತಿಗೆ ಹಣ ಪಡೆದು ಮತ ಚಲಾಯಿಸುವ ಮಟ್ಟಕ್ಕೆ ಸೀಮಿತಗೊಂಡಿದೆ. ಹಾಗೆಯೇ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ರಾಜಕೀಯ ಕ್ಷೇತ್ರದಲ್ಲಿಯೂ ಇವರ ಪಾತ್ರ ಸೊನ್ನೆ ಎಂದೇ ಹೇಳಬಹುದು.

ಅಲೆಮಾರಿಗಳಾಗಿ ಊರೂರು ಸುತ್ತುತ್ತಾ ಗುಂಪಾಗಿ ಒಂದೇ ಕಡೆ ನೆಲೆಸುವ ಮಾಲ ಸಮುದಾಯದವರಲ್ಲಿ ಒಂದಿಬ್ಬರು ಕೇವಲ ಜನಸಂಖ್ಯಾ ಪ್ರಬಲ್ಯದಿಂದಾಗಿ ಮಾತ್ರ ನಗರಸಭೆಯಲ್ಲಿ ಒಂದೆರಡು ಸ್ಥಾನಗಳನ್ನು ಗಳಿಸುವ ಮಟ್ಟಕ್ಕೆ ಸೀಮಿತವಾಗಿರುವ ಅಪವಾದಗಳು ಕಂಡು ಬರುತ್ತಿವೆ. ಮಾಲ ಸಮುದಾಯದವರಲ್ಲಿರುವ ಅಜ್ಞಾನ, ಬಡತನ, ಅನಕ್ಷರತೆ, ಜಾತಿಯ ಅಪಮಾನ ತೊಲಗುವವರೆಗೂ ಇವರ ಸ್ಥಿತಿ ಬದಲಾಗಲಾರದು.

ಈ ಸಮುದಾಯದ ಏಳಿಗೆಗಾಗಿ ಸರ್ಕಾರ ಮತ್ತು ಸ್ವಯಂ ಸೇವಾ ಸಂಘಟನೆಗಳು ನಿಷ್ಪೃಹತೆದಿಂದ ಕಾರ್ಯ ನಿರ್ವಹಿಸಿದಲ್ಲಿ ಮಾತ್ರ ಮಾಲ ಸಮುದಾಯದಂತಹ ಕನಿಷ್ಟಮಟ್ಟದ ತಳಸಮುದಾಯಗಳು ತಮ್ಮ ಕಾಲ ಮೇಲೆ ತಾವು ನಿಂತು ಧ್ವನಿ ತೆರೆದು ತಮಗೆ ದೊರೆಯಬೇಕಾದ ಹಕ್ಕುಗಳನ್ನು ಕೇಳಲು ಶಕ್ತವಾಗುತ್ತವೆ. ಬಹುಶಃ ಲೋಹಿಯಾ, ಗಾಂಧಿ, ಅಂಬೇಡ್ಕರ್‌ರವರ ಆಶಯಗಳು ಇವೇ ಆಗಿದ್ದವೇನೋ.

ಮಾಲ ಸಮುದಾಯದವರು ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದಿದ್ದಾರೆ. ಈ ಸಮುದಾಯದವರು ಈ ರೀತಿ ಎಲ್ಲಾ ಕ್ಷೇತ್ರದಲ್ಲಿ ಹಿಂದುಳಿಯಲಿಕ್ಕೆ ಪ್ರಮುಖವಾದ ಕಾರಣ ಇವರಲ್ಲಿರುವ ಅಲೆಮಾರಿತನವಾಗಿರುತ್ತದೆ. ಮತ್ತು ಬಡತನವಾಗಿರುತ್ತದೆ. ಬಡತನದ ಬೇಗೆಯಲ್ಲಿ ಬೆಂದ ಮಾಲ ಸಮುದಾಯ ಇಂದಿಗೂ ಸಮಾಜದಲ್ಲಿ ಮತ್ತು ಆಧುನಿಕತೆಯ ಜೊತೆಗೆ ಸಂಪೂರ್ಣವಾಗಿ ಚೆತರಿಸಿಕೊಳ್ಳಲಿಕ್ಕೆ ಆಗುತ್ತಿಲ. ಆದರೆ ಇತ್ತೀಚಿನ ಕೆಲವು ಸರಕಾರದ ಕಟ್ಟುನಿಟ್ಟಿನ ಕ್ರಮದಿಂದಾಗಿ ಸರಕಾರದ ಹಲವು ಯೋಜನೆಯ ಫಲವಾಗಿ ಅಲ್ಪ ಸ್ವಲ್ಪ ಮಕ್ಕಳು ಶಾಲೆಯನ್ನು ಪ್ರವೇಶಿಸಿದ್ದಾರೆ. ಆದರೆ ಒದಲು ಬರೆಯಲು ಸರಿಯಾದ ವಾಸದ ಮನೆಗಳು ಅವರಿಗೆ ಇರುವದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಆ ಮಕ್ಕಳು ಅಭಿವೃದ್ದಿಯನ್ನು ಕಾಣುವುದು ಬಹಳ ಕಷ್ಟಕರವಾಗಿರುತ್ತದೆ. ಆದರೂ ಕೆಲವು ಮಕ್ಕಳು ಶಾಲೆಗೆ ಹೊಗಲು ಇಚ್ಚಿಸುತ್ತಾರೆ. ಕೆಲವು ನೆಲೆನಿಂತ ಊರಿನಲ್ಲಿನ ಮಕ್ಕಳು ಶಾಲೆಗೆ ಹೊಗುತ್ತಾರೆ. ಶಾಲೆಯನ್ನು ಕಲಿಯುವದರ ಮುಖಾಂತರ ಬದಲಾವಣೆಯನ್ನು ಬಯಸುತ್ತಾರೆ. ಕೆಲವು ಕುಟುಂಬಗಳಿಗೆ ಒಟರ್ ಕಾರ್ಡ ಮತ್ತು ಪಡಿತರ ಚೀಟಿಗಳು ಇದ್ದಿರಲಿಲ್ಲ ಆದರೆ ಇತ್ತಿಚೆಗೆ

ಕೆಲವು ಸದಸ್ಯರು ಓಟರ್ ಕಾರ್ಡ, ಆಧಾರ್ ಕಾರ್ಡ, ಪಡೆಯುದರ ಮೂಲಕ ರಾಜಕೀಯ ಜ್ಞಾನವನ್ನು ಮತ್ತು ಸ್ಥಿತ್ಯಂತರವನ್ನು ಬಯಸುತ್ತಿದ್ದಾರೆ.

ಮಾಲ ಸಮುದಾಯದ ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತ್ಯಂತರ

ಮಾಲ ಸಮುದಾಯದ ಶಿಕ್ಷಣ ಕುರಿತು ನೋಡಿದಾಗ ಸದಾ ಅಲೆಮಾರಿತನವನ್ನು ಮೈಗೂಡಿಸಿಕೊಂಡಿದ್ದ ಮಾಲ ಸಮುದಾಯದ ಹಿರಿಯರಿಗೆ, ಮಕ್ಕಳಿಗೆ, ಯುವಕರಿಗೆ, ಯುವತಿಯರಿಗೆ, ಶಿಕ್ಷಣ ಎಂಬ ಶಬ್ದದ ಅರಿವೆಯೇ ಅವರಿಗೆ ಇದ್ದಿಲ್ಲ ಬಡತನ ಇವರಿಗೆ ಅಂಟಿಕೊಂಡಿರುವದರಿಂದ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ತಮ್ಮ ದಿನನಿತ್ಯದ ಜೀವನ ಸಾಗುವದಿಲ್ಲ ಎಂದು ಮಕ್ಕಳ ತಂದೆ ತಾಯಿಗಳು ತಮ್ಮ ಚಿಕ್ಕ ಮಕ್ಕಳನ್ನು ಕರೆದುಕೊಂಡು ಬೇರೆ ಊರುಗಳಿಗೆ ದಿನಗೂಲಿ ಕೆಲಸಕ್ಕೆಂದು ಹೊಗುತ್ತಿದ್ದರು. ಇದರಿಂದ ಮಕ್ಕಳಿಗೆ ಪ್ರಾಥಮಿಕ ಶಾಲೆಗೂ ಸಹ ಸೇರಿಸಲು ಆಗುತ್ತಿರಲಿಲ್ಲ ಆದರೆ ೧೯೮೬ರ ಬಾಲಾಪರಾಧ ಕಾಯ್ದೆಯ ಕಟ್ಟುನಿಟ್ಟಿನ ಕ್ರಮದಿಂದಾಗಿ ಮತ್ತು ಸಂವಿಧಾನದ ೪೫ನೇ ವಿಧಿಯು ಅನ್ವಯು ೧೪ ವರ್ಷ ವಯಸ್ಸಿನ ಒಳಗಿನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಕಡ್ಡಾಯಗೊಳಿಸಿರುವದರಿಂದ ಇತ್ತಿಚೆಗೆ ತಮ್ಮ ಮಕ್ಕಳನ್ನು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಕಳುಹಿಸುತ್ತಿದ್ದಾರೆ. ಮಾಲ ಸಮುದಾಯದ ಮಕ್ಕಳಲ್ಲಿ ಶಾಲೆಗೆ ಹೊಗುತ್ತಿರುವ ಮಕ್ಕಳಲ್ಲಿ ಗಂಡು ಮಕ್ಕಳ ಪ್ರಮಾಣವು ಶೇಕಡ ೬೨. ೩೫ರಷ್ಟು ಇರುತ್ತದೆ. ಹೆಣ್ಣು ಮಕ್ಕಳ ಪ್ರಮಾಣವು ಶೇಕಡ ೩೭.೬೫ ರಷ್ಟಿರುತ್ತದೆ. ಮಾಲ ಸಮುದಾಯದವರು ಇತ್ತೀಚೆಗೆ ಅಲ್ಪ ಸ್ವಲ್ಪ ಶಿಕ್ಷಣ ಪಡೆಯುವದರ ಮುಖಾಂತರ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಗುರುತಿಸಿಕೊಳ್ಳಲು ಮತ್ತು ಸಾಮಾಜಿಕ ಸ್ಥಿತ್ಯಂತರವನ್ನು ಕಂಡುಕೊಳ್ಳುವಲ್ಲಿ ಪ್ರಯತ್ನಿಸುತ್ತಿವೆ. ಅದೇ ರೀತಿ ಮಾಲ ಸಮುದಾಯದವರು ರಾಜಕೀಯವಾಗಿ ಬಹಳ ಹಿಂದುಳಿದಿದ್ದು ಆದರೆ ಇತ್ತೀಚೆಗೆ ಕೆಲವು ಸದಸ್ಯರು ಮತದಾನ ಮಾಡುವ ಹಿತದೃಷ್ಟಿಯಿಂದ ತಮ್ಮನ್ನು ಗುರುತಿಸಿಕೊಳ್ಳುವ ಸಲುವಾಗಿ ಓಟರ್ ಕಾರ್ಡನ್ನು ಪಡೆಯುವದರ ಮೂಲಕ ರಾಜಕೀಯತೆಯ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಕೊನೆ ಟಿಪ್ಪಣಿ

೧ ಚಂದ್ರಶೇಖರ್ ಟಿ ಆರ್; ೨೦೧೨ ಸಾಕ್ಷರತೆ:೫೯

೨ ಕರ್ನಾಟಕ ಮಾನವಾಭಿವೃದ್ಧಿ ವರದಿ ೨೦೦೫:೨೫೮

೩ ಅದೇ: ೨೦೦೫: ೨೫೯

೪. ರಾಮ ಮನೋಹರ ಲೋಹಿಯಾ ೧೯೯೮ :೧೩೫

ಅಧ್ಯಾಯ ಆರು
ಆಹಾರ ಮತ್ತು ಆರೋಗ್ಯ

೬.೧ ಆಹಾರ

೬.೧.೧ ಆಹಾರ ಪಡಿತರ ಚೀಟಿಯನ್ನು ಹೊಂದಿದ ಮಾಲ ಸಮುದಾಯದ ಕುಟುಂಬಗಳು

೬.೧.೨ ಕೊಪ್ಪಳ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

೬.೧.೩ ಗದಗ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

೬.೧.೪ ಧಾರವಾಡ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

೬.೧.೫ ಹಾವೇರಿ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

೬.೧.೬ ಶಿವಮೊಗ್ಗ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

೬.೧.೭ ಮೈಸೂರು ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

೬.೧.೮ ರಾಯಚೂರು ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

೬.೨ ಆಹಾರ

೬.೩ ಆರೋಗ್ಯ

೬.೪ ಮಾಲ ಸಮುದಾಯ ಮತ್ತು ಆಧುನಿಕ ಜಗತ್ತು

ಅಧ್ಯಾಯ ಆರು
ಆಹಾರ ಮತ್ತು ಆರೋಗ್ಯ

ಪ್ರತಿಯೊಂದು ಜೀವಿ ಜೀವಿಸಲು ಆಹಾರ ಅವಶ್ಯಕವಾಗಿ ಬೇಕು. ಆದಿಕಾಲದ ಮಾನವನು ಪ್ರಕೃತಿಯಲ್ಲಿ ನೈಸರ್ಗಿಕವಾಗಿ ದೊರೆಯುವ ಪ್ರಾಣಿ ಪಕ್ಷಿಗಳ ಹಸಿಮಾಂಸ, ಗೆಡ್ಡೆ–ಗೆಣಸುಗಳನ್ನು ಆಹಾರವಾಗಿಸಿಕೊಂಡಿದ್ದನು ಎಂಬುದನ್ನು ಚರಿತ್ರೆಯ ಮೂಲಕ ತಿಳಿದಿದ್ದೇವೆ. ಮಾನವನು ಬರುಬರುತ್ತಾ ಕೃಷಿಯನ್ನು ಪ್ರಾರಂಭಿಸಿದನು. ಬೆಂಕಿಯ ಅನ್ವೇಷಣೆಯಾಯಿತು, ತನ್ನ ಬಳಕೆಗಾಗಿ ಪ್ರಾಣಿಗಳನ್ನು ಪಳಗಿಸಿ ಸಾಕಲು ಪ್ರಾರಂಭಿಸಿದ ಎಂಬುದನ್ನೆಲ್ಲಾ ಚರಿತ್ರೆಯಲ್ಲಿ ಓದಿದ್ದೇವೆ. ನಾಗರೀಕತೆ ಬೆಳೆದಂತೆಲ್ಲಾ ಆಹಾರದ ಸಂರಕ್ಷಣೆ, ಪರಿಶುದ್ಧ ಆಹಾರದ ಸೇವನೆ ಇತ್ಯಾದಿ ಪರಿಕಲ್ಪನೆಗಳೆಲ್ಲಾ ಬರತೊಡಗಿದವು. ಪ್ರಸ್ತುತ ಮಾನವನ ಮೂಲಭೂತ ಅವಶ್ಯಕತೆಯಲ್ಲಿ ಆಹಾರಕ್ಕೆ ಮೊದಲ ಸ್ಥಾನವನ್ನು ನೀಡಲಾಗಿದೆ. ಅದರ ನಂತರದ ಸ್ಥಾನವೇ ಆರೋಗ್ಯಕ್ಕೆ ಕೊಡಲಾಗಿದೆ.

ಆದರೆ ಎಷ್ಟೋ ಅಲೆಮಾರಿ ತಳಸಮುದಾಯುಗಳು ಆಹಾರದ ಕೊರತೆಯುನ್ನು ಅನುಭವಿಸುತ್ತಿವೆಯೆಂದು ಹೇಳಲಾಗುತ್ತಿದೆ. ಪರಿಶುದ್ಧ ಆಹಾರವಂತೂ ಕನಸಿನ ಮಾತು. ಭಿಕ್ಷಾಟನೆಯನ್ನೇ ಅವಲಂಭಿಸಿರುವ ಅಲೆಮಾರಿ ಸಮುದಾಯಗಳಿಗೆ ಸಿಗುವ ಆಹಾರವು ಬಹುತೇಕ ತಂಗಳು ಇಲ್ಲವೇ ಹಳಸಿದ ಪದಾರ್ಥಗಳೇ ಆಗಿರುತ್ತವೆ. ಅರಣ್ಯನೀತಿಯಿಂದಾಗಿ ಇಂತಹ ಸಮುದಾಯಗಳಿಗೆ ಇಂದು ಬೇಟೆಗಾರಿಕೆ ಮಾಡಲು ಸಾಧ್ಯವಾಗದ ಸ್ಥಿತಿ ಇದೆ. ಎಷ್ಟೋ ಅಲೆಮಾರಿ ಸಮುದಾಯಗಳು ಅಳಿಲು, ಮೀನು, ಏಡಿ, ಮೊಲ, ಬೆಳವ ಚಿಕ್ಕಮುಟ್ಟ ಪಕ್ಷಿಗಳನ್ನು ಬೇಟೆಯಾಡಿ ಆಹಾರವಾಗಿ ಬಳಸುವಲ್ಲಿಗೇ ಸಂತೃಪ್ತಿಯನ್ನು ಹೊಂದುವಂತಹ ಸ್ಥಿತಿ ಉಂಟಾಗಿದೆ. ಇಂದು ಭಿಕ್ಷಾಟನೆಯನ್ನೂ ಸರ್ಕಾರವು ಅಪರಾಧವೆಂದು ಪರಿಗಣಿಸಿರುವುದರಿಂದ ಭಿಕ್ಷಾಟನೆ ಮಾಡುವುದೂ ಈ ಸಮುದಾಯಗಳಿಗೆ ಕಷ್ಟಸಾಧ್ಯವಾದ ಕೆಲಸವಾಗಿದೆ.

ಒಂದು ಕಾಲದಲ್ಲಿ ಕುಮ್ರಿ ಬೇಸಾಯವನ್ನು ನೆಚ್ಚಿ ಬದುಕುತ್ತಿದ್ದ ಸಮುದಾಯಗಳಿಗೆ ಅರಣ್ಯ ನೀತಿಯಿಂದಾಗಿ ಕುರ್ಮಿ ಬೇಸಾಯ ಮಾಡಲೂ ಸಾಧ್ಯವಾಗದಂತಹ ಅಸಾಹಾಯಕ ಸ್ಥಿತಿ ಇದೆ. ಕೃಷಿ ಭೂಮಿ ಕೆಲವೇ ಕೆಲವು ಕುಟುಂಬಕ್ಕೆ ಇದ್ದರೂ ಅವು ಬಹುತೇಕ ಮಳೆಯಾಧಾರಿತ ನಿಷ್ಪ್ರಯೋಜಕ ತುಂಡು ಭೂಮಿಗಳಾಗಿವೆ. ಇಂದು ನ್ಯಾಯಬೆಲೆ ಅಂಗಡಿಗಳು ಬಂದ ತರುವಾಯ ಬಡತನರೇಖೆಗಿಂತ

ಕೆಳಗಿರುವ ಕುಟುಂಬಗಳ ಆಹಾರಧಾನ್ಯಗಳ ಕೊರತೆ ಸ್ವಲ್ಪಮಟ್ಟಿಗೆ ನೀಗಿದೆ ಎಂಬ ಮಾತು ಕೇಳಿಬರುತ್ತಿದೆ. ಆದರೆ ಅಲೆಮಾರಿ ಸಮುದಾಯಗಳು ಒಂದು ಊರಿನಲ್ಲಿ ನೆಲೆಸದಿರುವುದರಿಂದ ಅವರು ಆಹಾರ ಪಡಿತರಗಳನ್ನು ಸರಿಯಾಗಿ ಪಡೆಯಲೂ ಸಾಧ್ಯವಾಗುವುದಿಲ್ಲ ಎಂಬ ಮಾತೂ ಕೇಳಿಬರುವುದು. ಇತ್ತೀಚೆಗೆ ಸಕಾಲದಲ್ಲಿ ಆಹಾರ ಪಡಿತರಗಳನ್ನು ಬಡಕುಟುಂಬಗಳು ಪಡೆಯದಿದ್ದಲ್ಲಿ ಅವರಿಗೆ ಆಹಾರದ ಅವಶ್ಯಕತೆ ಇಲ್ಲವೆಂದು ಭಾವಿಸಿ ಅವರ ಪಡಿತರ ಚೀಟಿಯನ್ನು ರದ್ದುಗೊಳಿಸಲಾಗುವುದು ಎಂದು ಆಹಾರ ಸರಬರಾಜು ಹಾಗೂ ನಾಗರೀಕ ಇಲಾಖೆಯು ಆದೇಶವೂ ಇದೆ. ಹಾಗೆಯೇ ಆಹಾರ ಪಡಿತರ ಪಡೆಯಲು ನ್ಯಾಯಬೆಲೆ ಅಂಗಡಿಗಳಲ್ಲಿ ಕಡ್ಡಾಯವಾಗಿ ಬಯೋಮ್ಯಾಟ್ರಿಕ್ ಮಾಡಬೇಕಾಗಿದೆ. ಬಯೋಮ್ಯಾಟ್ರಿಕ್ ಮಾಡಿರುವುದರಿಂದ ಆಹಾರ ಧಾನ್ಯಗಳ ಹಂಚಿಕೆಯಲ್ಲಿ ನಡೆಯುವ ಅಕ್ರಮಗಳ ಪ್ರಮಾಣ ಕಡಿಮೆಯಾಗಿದೆಯೆಂಬುದೇನೋ ನಿಜವಾದರೂ ಮಾಲ ಸಮುದಾಯದಂತಹ ಅಲೆಮಾರಿ ಸಮುದಾಯಗಳಿಗೆ ಸ್ವಲ್ಪ ತೊಂದರೆಯಾಗುತ್ತಿದೆಯಂಬುದೂ ಕೂಡ ಅಷ್ಟೇ ನಿಜ.

೬.೧ ಆಹಾರ ಪಡಿತರ ಚೀಟಿಯನ್ನು ಹೊಂದಿದ ಮಾಲ ಸಮುದಾಯದ ಕುಟುಂಬಗಳು

ಮಾಲ ಸಮುದಾಯದ ಹೆಚ್ಚು ಕುಟುಂಬಗಳು ಕಂಡುಬರುವುದು ಕೊಪ್ಪಳ ಜಿಲ್ಲೆಯ ಚಿಲಕಮುಖಿಯಲ್ಲಿಯೆ. ಈ ಗ್ರಾಮದಲ್ಲಿ ೯೮ ಕುಟುಂಬಗಳು ನೆಲೆಸಿವೆ. ೯೮ ಕುಟುಂಬಗಳಲ್ಲಿ ೯೮ ಕುಟುಂಗಳಿಗೂ ಬಡತನರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ನೀಡುವ ಹಸಿರು ಪಡಿತರ ಚೀಟಿಯನ್ನು ನೀಡಲಾಗಿತ್ತು. ಆದರೆ ಎಂಟು ಕುಟುಂಬಗಳು ಸಕಾಲದಲ್ಲಿ ಬಯೋಮ್ಯಾಟ್ರಿಕ್ ಮಾಡಿ ಅಪ್‌ಡೇಟ್ ಮಾಡದೇ ಹೋಗಿದ್ದರಿಂದ ಪಡಿತರ ಚೀಟಿಯನ್ನು ರದ್ದಾಗಿದ್ದುದಾಗಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬಂದಿತು. ತರುವಾಯ ಹಸಿರುಕಾರ್ಡು ಮಾಡಿಸಲು ಸ್ಥಳೀಯ ಗ್ರಾಮಪಂಚಾಯತಿಯಲ್ಲಿ ಮಾಡಿಸಬೇಕು ಇಲ್ಲವೇ ಗಂಗಾವತಿಯ ಸೇವಾಕೇಂದ್ರಗಳಲ್ಲಿ ಮಾಡಿಸಬೇಕೆಂದು ತಿಳಿಸಿದರು ಎಂಬ ಮಾಹಿತಿಯನ್ನು ನೀಡಿದರು.

ಕೋಷ್ಟಕ ೬.೧: ಆಹಾರ ಪಡಿತರ ಚೀಟಿಯನ್ನು ಹೊಂದಿದ ಮಾಲ ಸಮುದಾಯದ ಕುಟುಂಬಗಳು

ಕ್ರಸಂ	ಜಿಲ್ಲೆಗಳು	ತಾಲೂಕ	ಗ್ರಾಮ	ಕುಟುಂಬಗಳು	ಪಡಿತರ ಚೀಟಿ ಹೊಂದಿರುವ ಕುಟುಂಬಗಳು	ಪಡಿತರ ಚೀಟಿ ಇರದ ಕುಟುಂಬಗಳು
೧	ಕೊಪ್ಪಳ	ಕನಕಗಿರಿ	ಕನಕಗಿರಿ	೧೫	೧೩	೦೨
		ಕನಕಗಿರಿ	ಕೆಸಕ್ಕಿಹಂಚಿನಾಳ	೦೨	–	೦೨
		ಕುಕನೂರ	ಮಸಬಾ ಹಂಚಿನಾಳ	೧೦	೦೯	೦೧
		ಕೊಪ್ಪಳ	ಇರಕಲ್‌ಗಡ	೦೧	–	೦೧
		ಕೊಪ್ಪಳ	ಕಲ್ ಅಬ್ಬಿಗೇರಿ	೩೧	೨೯	೦೨

		ಕೊಪ್ಪಳ	ಕುದುರಿಮೋತಿ	೦೬	೦೫	೦೧
		ಕೊಪ್ಪಳ	ಕೊಪ್ಪಳ	೪೦	೩೬	೦೪
		ಕೊಪ್ಪಳ	ಚಿಲಕಮುಖಿ	೯೮	೯೦	೦೮
		ಕೊಪ್ಪಳ	ದನಗಳದೊಡ್ಡಿ	೦೭	೦೭	೦೧
		ಗಂಗಾವತಿ	ಶಿವಪುರ	೦೧	–	೦೧
೨	ಗದಗ	ಗದಗ	ಗದಗ	೦೮	೦೭	೦೧
		ಗದಗ	ಹುಲಿಕೋಟೆ	೦೧	–	೦೧
		ರೋಣ	ಗಜೇಂದ್ರಗಡ	೦೨	–	೦೨
೩	ಧಾರವಾಡ	ಧಾರವಾಡ	ಹುಬ್ಬಳ್ಳಿ	೨೮	೨೩	೦೫
೪	ಮೈಸೂರು	ಮೈಸೂರ	ಮೈಸೂರು	೦೭	೦೫	೦೨
೫	ರಾಯಚೂರು	ಮಾನ್ವಿ	ಪೋತ್ನಾಳ	೦೭	೦೪	೦೩
೬	ಶಿವಮೊಗ್ಗ	ಸೊರಬ	ಕುದರಿಗಣಿ	೦೮	೭	೦೧
		ಸೊರಬ	ಜಡೆ	೧೦	೭	೩
೭	ಹಾವೇರಿ	ಬ್ಯಾಡಗಿ	ಬಡಮಲ್ಲಿ	೧೯	೧೫೦	೪
		ಬ್ಯಾಡಗಿ	ಬಡಮಲ್ಲಿ ತಾಂಡ	೦೩	೦೨	೦೧
		ಬ್ಯಾಡಗಿ	ರಾಮಪುರ	೦೪	೨	೨
		ಬ್ಯಾಡಗಿ	ಹಂಸಬಾವಿ	೦೩	೨	೧
		ಹಾನಗಲ್	ಹಾನಗಲ್	೦೩	೨	೧
		ಹಿರೇಕೆರುರ	ಚಿಕ್ಕಕೆರೂರು	೦೮	೦೭	೦೧
		ಒಟ್ಟು		೩೨೨	೨೭೨	೫೭

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ದಿನದ ಒಪ್ಪೊತ್ತಿನ ಊಟಕ್ಕೆ ಪರದಾಡುವ ಈ ಕುಟುಂಬಗಳು ಇಂದಿಗೂ ಪಡಿತರ ಚೀಟಿ ಮಾಡಿಸಲು ಸಾಧ್ಯವಾಗದೆ ಪರದಾಡುತ್ತಿವೆ. ಪಡಿತರ ಚೀಟಿ ಮಾಡಿಸಲು ಜಾತಿ ಸರ್ಟಿಫಿಕೇಟ್, ಆಧಾರ ಕಾರ್ಡ್ ಇತ್ಯಾದಿ ದಾಖಲೆಗಳನ್ನು ಸೇವಾಕೇಂದ್ರದಲ್ಲಿ ಕೇಳುತ್ತಾರೆ. ತಮ್ಮ ಬಳಿ ಒಂದು


ದಾಖಲೆ ಇದ್ದರೆ ಮತ್ತೊಂದು ದಾಖಲೆ ಇಲ್ಲ. ಅವುಗಳನ್ನೆಲ್ಲಾ ಸರಿಪಡಿಸಬೇಕು ಎನ್ನುವಷ್ಟೊತ್ತಿಗೆ ಹೊಟ್ಟೆಪಾಡನ್ನು ಅರಸಿ ಮತ್ತಾವುದೋ ಊರಿಗೆ ಹೋಗಿರುವುದಾಗಿಯೂ, ಪಡಿತರ ಚೀಟಿಯನ್ನು ಪಡೆಯುವುದೇ ದುಸ್ಸಾಹಸದ ಕೆಲಸವಾಗಿದೆಯೆಂದೂ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹೇಳಿದರು. ಇನ್ನುಳಿದ ಎಲ್ಲಾ ಊರುಗಳದ್ದೂ ಇಂತಹ ಯಾವುದೋ ಸಮಸ್ಯೆಯಿಂದಾಗಿ ಪಡಿತರ ಚೀಟಿ ಹೊಂದಲು ಸಾಧ್ಯವಾಗಿಲ್ಲ.

ಕೋಷ್ಟಕ ೬.೧.೧: ಕೊಪ್ಪಳ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

ಕ್ರಸಂ	ಜಿಲ್ಲೆಗಳು	ತಾಲೂಕ	ಗ್ರಾಮ	ಕುಟುಂಬಗಳು	ಪಡಿತರ ಚೀಟಿ ಹೊಂದಿರುವ ಕುಟುಂಬಗಳು	ಪಡಿತರ ಚೀಟಿ ಇರದ ಕುಟುಂಬಗಳು
೧	ಕೊಪ್ಪಳ	ಕನಕಗಿರಿ	ಕನಕಗಿರಿ	೧೫	೧೩	೦೨
	ಕೊಪ್ಪಳ	ಕನಕಗಿರಿ	ಕೆಸಕ್ಕಿಹಂಚಿನಾಳ	೦೨	–	೦೨
	ಕೊಪ್ಪಳ	ಕುಕನೂರ	ಮಸಬಾ ಹಂಚಿನಾಳ	೧೦	೦೯	೦೧
	ಕೊಪ್ಪಳ	ಕೊಪ್ಪಳ	ಇಲಕಲ್‌ಗಡ	೦೧	–	೦೧
	ಕೊಪ್ಪಳ	ಕೊಪ್ಪಳ	ಕಲ್ ಅಬ್ಬಿಗೇರಿ	೩೧	೨೯	೦೨
	ಕೊಪ್ಪಳ	ಕೊಪ್ಪಳ	ಕುದುರಿಮೋತಿ	೦೬	೦೫	೦೧
	ಕೊಪ್ಪಳ	ಕೊಪ್ಪಳ	ಕೊಪ್ಪಳ	೪೦	೩೬	೦೪
	ಕೊಪ್ಪಳ	ಕೊಪ್ಪಳ	ಚಿಲಕಮುಖಿ	೯೮	೯೦	೦೮
	ಕೊಪ್ಪಳ	ಕೊಪ್ಪಳ	ದನಗಳದೊಡ್ಡಿ	೦೭	೦೬	೦೧
	ಕೊಪ್ಪಳ	ಗಂಗಾವತಿ	ಶಿವಪುರ	೦೧	–	೦೧
			ಒಟ್ಟು	೨೧೧	೧೮೯	೨೩

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ಲಂಬಚಿತ್ರ ೬.೧: ಕೊಪ್ಪಳ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ



ಕನಕಗಿರಿಯಲ್ಲಿ ಮಾಲ ಸಮುದಾಯದ ೧೫ ಕುಟುಂಬಗಗಳು ವಾಸವಾಗಿದ್ದು ಈ ೧೫ ಕುಟುಂಬಗಳಲ್ಲಿ ೧೩ ಕುಟುಂಬಗಳಿಗೆ ಪಡಿತರ ಚೀಟಿಗಳಿರುತ್ತವೆ. ಇನ್ನುಎರಡು ಕುಟುಂಬಗಳಿಗೆ ಪಡಿತರ ಚೀಟಿ ಇರುವುದಿಲ್ಲ.

ಕೆಸಕ್ಕಿಹಂಚಿನಾಳ ಗ್ರಾಮದಲ್ಲಿ ಮಾಲ ಸಮುದಾಯದ ಎರಡು ಕುಟುಂಬಗಳು ವಾಸವಾಗಿದ್ದು, ಈ ಎರಡು ಕುಟುಂಬಕ್ಕೂ ಪಡಿತರ ಚೀಟಿ ಇರುವುದಿಲ್ಲ.

ಮಸಬಾಹಂಚಿನಾಳದಲ್ಲಿ ಮಾಲ ಸಮುದಾಯದ ೧೦ ಕುಟುಂಬಗಳು ವಾಸವಾಗಿದ್ದು ೧೦ ಕುಟುಂಬಗಳಲ್ಲಿ ೯ ಕುಟುಂಬಗಳಿಗೆ ಪಡಿತರ ಚೀಟಿಗಳಿರುತ್ತವೆ. ಇನ್ನುಒಂದು ಕುಟುಂಬಕ್ಕೆ ಪಡಿತರ ಚೀಟಿ ಇರುವುದಿಲ್ಲ.

ಇಲಕಲ್‌ಗಡದಲ್ಲಿ ಮಾಲ ಸಮುದಾಯದ ಒಂದು ಕುಟುಂಬ ನೆಲೆಸಿದ್ದು ಇರಕಲ್ ಗಡದ ಒಂದು ಕುಟುಂಬಕ್ಕೂ ಪಡಿತರ ಚೀಟಿ ಇರುವುದಿಲ್ಲ.

ಕಲ್ಲು ಅಬ್ಬಿಗೇರಿಯಲ್ಲಿಯೂ ಮಾಲ ಸಮುದಾಯದ ೩೧ ಕುಟುಂಬಗಳು ವಾಸವಾಗಿದ್ದು ಈ ೩೧ ಕುಟುಂಬಗಳಲ್ಲಿ ೨೯ ಕುಟುಂಬಗಳಿಗೆ ಪಡಿತರ ಚಿಟಿಗಳಿದ್ದು ಇನ್ನು ಎರಡು ಕುಟುಂಬಗಳಿಗೆ ಪಡಿತರ ಚೀಟಿ ಹೊಂದಲು ಸಾಧ್ಯವಾಗಿಲ್ಲ.

ಕುದುರೆಮೋತಿಯಲ್ಲಿ ಮಾಲ ಸಮುದಾಯದ ಆರು ಕುಟುಂಬ ನೆಲೆಸಿದ್ದು ಒಂದು ಕುಟುಂಬವು ಪಡಿತರಚೀಟಿ ಹೊಂದಿಲ್ಲ. ಇನ್ನುಳಿದ ಐದು ಕುಟುಂಬಗಳು ಪಡಿತರ ಚೀಟಿ ಹೊಂದಿವೆ.

ಕೊಪ್ಪಳ ನಗರದಲ್ಲಿ ನೆಲೆಸಿರುವ ಮಾಲ ಸಮುದಾಯದ ೪೦ ಕುಟುಂಬಗಳಲ್ಲಿ ೩೬ ಕುಟುಂಬಗಳು ಪಡಿತರ ಚೀಟಿ ಹೊಂದಿದ್ದು ಇನ್ನು ೪ ಕುಟುಂಬಗಳಿಗೆ ಪಡಿತರ ಚೀಟಿ ಇರುವುದಿಲ್ಲ.

ಚಿಲಕಮುಖಿಯಲ್ಲಿ ಮಾಲ ಸಮುದಾಯದ ೯೮ ಕುಟುಂಬಗಳು ನೆಲೆಸಿದ್ದು ೯೮ ಕುಟುಂಬಗಳಲ್ಲಿ ೯೦ ಕುಟುಂಬಗಳು ಪಡಿತರ ಚೀಟಿಯನ್ನ ಹೊಂದಿದ್ದು, ಇನ್ನು ೮ ಕುಟುಂಬಗಳು ಪಡಿತರ ಚೀಟಿ ಹೊಂದಿರುವುದಿಲ್ಲ.

ದನಗಳದೊಡ್ಡಿಯಲ್ಲಿ ಮಾಲ ಸಮುದಾಯದ ೭ ಕುಟುಂಬಗಳು ನೆಲೆಸಿದ್ದು ಆ ಏಳು ಕುಟುಂಬಗಳಲ್ಲಿ ಆರು ಕುಟುಂಬಗಳಿಗೆ ಪಟಿತರ ಚೀಟಿ ಇರುತ್ತವೆ. ಇನ್ನು ಒಂದು ಕುಟುಂಬಕ್ಕೆ ಪಡಿತರ ಚೀಟಿ ಇರುವದಿಲ್ಲ.

ಶಿವಪುರದಲ್ಲಿ ಮಾಲ ಸಮುದಾಯದ ಒಂದೇ ಕುಟುಂಬವಿದ್ದು ಆ ಒಂದು ಕುಟುಂಬಕ್ಕೆ ಪಡಿತರ ಚೀಟಿ ಇರುವುದಿಲ್ಲ.

ಕೊಪ್ಪಳ ಜಿಲ್ಲೆಯಲ್ಲಿ ಮಾಲ ಸಮುದಾಯದ ಒಟ್ಟು ೨೧೧ ಕುಟುಂಬಗಳಲ್ಲಿ ೧೮೯ ಕುಟುಂಬಗಳಿಗೆ ಪಡಿತರ ಚೀಟಿಗಳಿದ್ದು ಇನ್ನುಳಿದ ೨೩ ಕುಟುಂಬಗಳು ಪಡಿತರ ಚೀಟಿಯ ಕೊರತೆಯಿಂದ ಬಳಲುತ್ತಿವೆ. ಅಂದರೆ ಶೇಕಡವಾರುಗಳಲ್ಲಿ ಹೇಳುವುದಾದರೆ ೮೯.೫೭ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳಿದ್ದು ಇನ್ನೂ ೧೦.೪೭ ಕುಟುಂಬಗಳಿಗೆ ಪಡಿತರ ಚೀಟಿ ಇಲ್ಲವಾಗಿವೆ.

೬.೧.೨ ಗದಗ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ


ಗದಗ ಜಿಲ್ಲೆಯಲ್ಲಿ ಕಂಡುಬರುವ ಮಾಲ ಸಮುದಾಯದ ಒಟ್ಟು ಕುಟುಂಬಗಳು ೧೧, ಇದರಲ್ಲಿ ಗದಗದಲ್ಲಿ ೮ ಕುಟುಂಬಗಳು, ಹುಲಿಕೋಟೆಯಲ್ಲಿ ಒಂದು ಕುಟುಂಬ, ಗಜೇಂದ್ರಗಡದಲ್ಲಿ ಎರಡು ಕುಟುಂಬಗಳು ಇರುತ್ತವೆ.

ಕೋಷ್ಟಕ ೬.೧.೨: ಗದಗ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

ಕ್ರಸಂ	ಜಿಲ್ಲೆಗಳು	ಗ್ರಾಮ	ಕುಟುಂಬಗಳು	ಪಡಿತರ ಚೀಟಿ ಹೊಂದಿರುವ ಕುಟುಂಬಗಳು	ಪಡಿತರ ಚೀಟಿ ಇರದ ಕುಟುಂಬಗಳು
೧	ಗದಗ	ಗದಗ	೦೮	೦೭	೦೧
	ಗದಗ	ಹುಲಿಕೋಟೆ	೦೧	–	೦೧
	ಗದಗ	ಗಜೇಂದ್ರಗಡ	೦೨	–	೦೨
			೧೧	೦೭	೦೪

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ಲಂಬಚಿತ್ರ ೬.೨: ಗದಗ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ



ಗದಗದಲ್ಲಿ ನಗರದಲ್ಲಿ ಮಾಲ ಸಮುದಾಯದ ೮ ಕುಟುಂಬಗಳು ನೆಲೆಸಿದ್ದು ೭ ಕುಟುಂಬಗಳು ಪಡಿತರ ಚೀಟಿಯನ್ನ ಹೊಂದಿದ್ದು ಅದರಲ್ಲಿ ಒಂದು ಕುಟುಂಬವು ಪಡಿತರ ಚೀಟಿಯನ್ನು ಹೊಂದಿರುವುದಿಲ್ಲ.

ಹುಲಿಕೋಟೆಯಲ್ಲಿ ಮಾಲ ಸಮುದಾಯದ ಒಂದು ಕುಟುಂಬ ನೆಲೆಸಿದ್ದು ಆ ಒಂದು ಕುಟುಂಬಕ್ಕೆ ಪಡಿತರ ಚೀಟಿ ಹೊಂದಲು ಸಾಧ್ಯವಾಗಿಲ್ಲ.

ಮತ್ತು ಗಜೆಂದ್ರಗಡದಲ್ಲಿ ಎರಡು ಕುಟುಂಬಗಳು ನೆಲೆಸಿದ್ದು ಈ ಎರಡೂ ಮಾಲ ಸಮುದಾಯದ ಕುಟುಂಬಗಳೂ ಪಡಿತರ ಚೀಟಿ ಹೊಂದಲು ಸಾಧ್ಯವಾಗಿಲ್ಲ.

ಅಂದರೆ ಶೇಕಡವಾರುಗಳಲ್ಲಿ ಹೇಳುವುದಾದರೆ ೬೩.೬೩ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳಿದ್ದು ಇನ್ನೂ ೩೬.೩೭ ಕುಟುಂಬಗಳಿಗೆ ಪಡಿತರ ಚೀಟಿ ಇಲ್ಲವಾಗಿವೆ.

೬.೧.೩ ಧಾರವಾಡ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

ಧಾರವಾಡ ಜಿಲ್ಲೆಯಲ್ಲಿ ಕಂಡುಬರುವ ಮಾಲ ಸಮುದಾಯದ ಒಟ್ಟು ಕುಟುಂಬಗಳು ೨೮, ಈ ಕುಟುಂಬಗಳೆಲ್ಲಾ ಹುಬ್ಬಳ್ಳಿ ಧಾರವಾಡದ ಮಧ್ಯದಲ್ಲಿ ಬರುವ ಗೋವನಕೊಪ್ಪ ಪ್ರದೇಶದಲ್ಲಿ ನೆಲೆಸಿವೆ.

ಕೋಷ್ಟಕ ೬.೧.೩: ಧಾರವಾಡ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

ಕ್ರಸಂ	ಜಿಲ್ಲೆಗಳು	ಗ್ರಾಮ	ಕುಟುಂಬಗಳು	ಪಡಿತರ ಚೀಟಿ ಹೊಂದಿರುವ ಕುಟುಂಬಗಳು	ಪಡಿತರ ಚೀಟಿ ಇರದ ಕುಟುಂಬಗಳು
೧	ಧಾರವಾಡ	ಹುಬ್ಬಳ್ಳಿ	೨೮	೨೩	೦೫
		ಒಟ್ಟು	೨೮	೨೩	೦೫

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ಹುಬ್ಬಳ್ಳಿಯಲ್ಲಿರುವ ಗೂಕನಕೂಪ್ಪ ಬಡಾವಣೆಯಲ್ಲಿಮಾಲ ಸಮುದಾಯದ ೨೮ ಕುಟುಂಬಗಳು ವಾಸವಾಗಿವೆ ಅದರಲ್ಲಿ ೨೩ ಕುಟುಂಬಗಳು ಪಡಿತರ ಚೀಟಿ ಹೊಂದಿವೆ ಇನ್ನೂ ಐದು ಕುಟುಂಬಗಳು ಪಡಿತರ ಚೀಟಿಯನ್ನು ಹೊಂದಿರುವುದಿಲ್ಲ.

ಅಂದರೆ ಶೇಕಡವಾರುಗಳಲ್ಲಿ ಹೇಳುವುದಾದರೆ ೮೨.೧೪ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳಿದ್ದು ಇನ್ನೂ ೧೭.೮೬ ಕುಟುಂಬಗಳಿಗೆ ಪಡಿತರ ಚೀಟಿ ಇಲ್ಲವಾಗಿವೆ.

೬.೧.೪ ಮೈಸೂರು ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

ಮೈಸೂರು ಜಿಲ್ಲೆಯಲ್ಲಿ ಕಂಡುಬರುವ ಮಾಲ ಸಮುದಾಯದ ಒಟ್ಟು ಕುಟುಂಬಗಳು ೭, ಇವೆಲ್ಲವೂ ಮೈಸೂರು ನಗರದ ಬನ್ನಿಮಂಟಪಕ್ಕೆ ಹತ್ತಿರದ ಕೊಳಚೆ ಪ್ರದೇಶದಲ್ಲಿ ನೆಲೆಸಿವೆ.

ಕೋಷ್ಟಕ ೬.೧.೪: ಮೈಸೂರು ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

ಕ್ರಸಂ	ಜಿಲ್ಲೆಗಳು	ಗ್ರಾಮ	ಕುಟುಂಬಗಳು	ಪಡಿತರ ಚೀಟಿ ಹೊಂದಿರುವ ಕುಟುಂಬಗಳು	ಪಡಿತರ ಚೀಟಿ ಇರದ ಕುಟುಂಬಗಳು
೧	ಮೈಸೂರು	ಮೈಸೂರು	೦೭	೦೫	೦೨
		ಒಟ್ಟು	೦೭	೦೫	೦೨

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ಮೈಸೂರಿನಲ್ಲಿ ಮಾಲ ಸಮುದಾಯದ ೭ ಕುಟುಂಬಗಳು ನೆಲೆಸಿವೆ ಈ ೭ ಕುಟುಂಬಗಳಲ್ಲಿ ೫ ಕುಟುಂಬಗಳು ಪಡಿತರ ಚೀಟಿ ದೊರೆತಿದೆ. ಇನ್ನೂ ಎರಡು ಕುಟುಂಬಗಳಿಗೆ ಪಡಿತರ ಚೀಟಿ ದೊರೆತಿರುವುದಿಲ್ಲ.

ಶೇಕಡ ೭೧.೪೨ ರಷ್ಟು ಕುಟುಂಬಗಳು ಪಡಿತರ ಚೀಟಿ ಹೊಂದಿವೆಯಾದರೂ ಇನ್ನೂ ಶೇಕಡ ೨೮.೫೮ ರಷ್ಟು ಕುಟುಂಬಗಳು ಪಡಿತರ ಚೀಟಿ ದೊರೆಯದೆ ಹೋಗಿದೆ.

೬.೧.೫ ರಾಯಚೂರು ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

ರಾಯಚೂರು ಜಿಲ್ಲೆಯ ಪೂತ್ನಾಳ ಗ್ರಾಮದಲ್ಲಿ ಮಾಲ ಸಮುದಾಯದ ಒಟ್ಟು ೭ ಕುಟುಂಬಗಳು ವಾಸವಾಗಿವೆ ಇದರಲ್ಲಿ ೪ ಕುಟುಂಬಗಳಿಗೆ ಪಡಿತರ ಚೀಟಿ ಇರುತ್ತವೆ. ಇನ್ನೂ ಮೂರು ಕುಟುಂಬಗಳಿಗೆ ಪಡಿತರ ಚೀಟಿ ದೊರೆತಿರುವುದಿಲ್ಲ.

ಕೋಷ್ಟಕ ೬.೧.೫: ರಾಯಚೂರು ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

ಕ್ರಸಂ	ಜಿಲ್ಲೆಗಳು	ತಾಲೂಕ	ಗ್ರಾಮ	ಕುಟುಂಬಗಳು	ಪಡಿತರ ಚೀಟಿ ಹೊಂದಿರುವ ಕುಟುಂಬಗಳು	ಪಡಿತರ ಚೀಟಿ ಇರದ ಕುಟುಂಬಗಳು
೧	ರಾಯಚೂರು	ಮಾನ್ವಿ	ಪೋತ್ನಾಳ	೦೭	೦೪	೦೩
			ಒಟ್ಟು	೦೭	೦೪	೦೩

ಆಧಾರ: ಕ್ಷೇತ್ರಕಾರ್ಯ ಮಾಹಿತಿ

ಶೇಕಡ ೫೭.೧೪ ರಷ್ಟು ಕುಟುಂಬಗಳು ಪಡಿತರ ಚೀಟಿ ಹೊಂದಿವೆಯಾದರೂ ಇನ್ನೂ ಶೇಕಡ ೪೨.೮೬ ರಷ್ಟು ಕುಟುಂಬಗಳು ಪಡಿತರ ಚೀಟಿ ದೊರೆಯದೆ ಹೋಗಿದೆ.

೬.೧.೬ ಶಿವಮೊಗ್ಗ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

ಶಿವಮೊಗ್ಗ ಜಿಲ್ಲೆಯಲ್ಲಿ ಕಂಡುಬರುವ ಮಾಲ ಸಮುದಾಯದ ಒಟ್ಟು ಕುಟುಂಬಗಳು ೧೮ ಇರುತ್ತವೆ.

ಕೋಷ್ಟಕ ೬.೧.೬: ಶಿವಮೊಗ್ಗ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

ಕ್ರಸಂ	ಜಿಲ್ಲೆಗಳು	ತಾಲೂಕ	ಗ್ರಾಮ	ಕುಟುಂಬಗಳು	ಪಡಿತರ ಚೀಟಿ ಹೊಂದಿರುವ ಕುಟುಂಬಗಳು	ಪಡಿತರ ಚೀಟಿ ಇರದ ಕುಟುಂಬಗಳು
೧	ಶಿವಮೊಗ್ಗ	ಸೊರಬ	ಕುದರಿಗಣಿ	೦೮	೦೭	೦೧
		ಸೊರಬ	ಜಡೆ	೧೦	೦೭	೦೩
			ಒಟ್ಟು	೧೮	೧೪	೦೪

ಆಧಾರ:ಕ್ಷೇತ್ರಕಾರ್ಯ ಮಾಹಿತಿ

ಕುದರಿಗಣಿಯಲ್ಲಿ ಮಾಲ ಸಮುದಾಯದ ೮ ಕುಟುಂಬಗಳು ನೆಲೆಸಿವೆ. ಕುದರಿಗಣಿಯಲ್ಲಿ ಇರುವ ೮ ಕುಟುಂಬಗಳಲ್ಲಿ ೭ ಕುಟುಂಬಗಳಿಗೆ ಪಡಿತರ ಚೀಟಿ ಇರುತ್ತವೆ ಇನ್ನು ಒಂದು ಕುಟುಂಬಕ್ಕೆ ಪಡಿತರ ಚೀಟಿ ಸಿಗದೆ ವಂಚಿತವಾಗಿದೆ.

ಜಡೆ ಗ್ರಾಮದಲ್ಲಿ ಮಾಲ ಸಮುದಾಯದ ೧೦ ಕುಟುಂಬಗಳು ನೆಲೆಸಿವೆ. ಹತ್ತು ಕುಟುಂಬಗಳಲ್ಲಿ ೭ ಕುಟುಂಬಗಳಿಗೆ ಪಡಿತರ ಚೀಟಿ ದೊರೆತಿದೆ. ಇನ್ನೂ ಮೂರು ಕುಟುಂಬಗಳಿಗೆ ಪಡಿತರ ಚೀಟಿ ದೊರೆತಿರುವುದಿಲ್ಲ.

ಶೇಕಡ ೭೮ರಷ್ಟು ಕುಟುಂಬಗಳು ಪಡಿತರ ಚೀಟಿ ಹೊಂದಿವೆಯಾದರೂ ಇನ್ನೂ ಶೇಕಡ ೨೨ ರಷ್ಟು ಕುಟುಂಬಗಳು ಪಡಿತರ ಚೀಟಿ ದೊರೆಯದೆ ಹೋಗಿದೆ.

೬.೧.೭ ಹಾವೇರಿ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

ಹಾವೇರಿ ಜಿಲ್ಲೆಯಲ್ಲಿ ಕಂಡುಬರುವ ಮಾಲ ಸಮುದಾಯದ ಒಟ್ಟು ಕುಟುಂಬಗಳು ೪೦,

ಕೋಷ್ಟಕ ೬.೧.೭: ಹಾವೇರಿ ಜಿಲ್ಲೆಯಲ್ಲಿ ಪಡಿತರ ಚೀಟಿ ಹೊಂದಿದ ಹಾಗೂ ಹೊಂದದೇ ಇರುವ ಕುಟುಂಬಗಳ ಸಂಖ್ಯೆ

ಕ್ರಸಂ	ಜಿಲ್ಲೆಗಳು	ತಾಲೂಕ	ಗ್ರಾಮ	ಕುಟುಂಬಗಳು	ಪಡಿತರ ಚೀಟಿ ಹೊಂದಿರುವ ಕುಟುಂಬಗಳು	ಪಡಿತರ ಚೀಟಿ ಇರದ ಕುಟುಂಬಗಳು
೧	ಹಾವೇರಿ	ಬ್ಯಾಡಗಿ	ಬಡಮಲ್ಲಿ	೧೯	೧೫	೦೪
	ಹಾವೇರಿ	ಬ್ಯಾಡಗಿ	ಬಡಮಲ್ಲಿ ತಾಂಡ	೦೩	೦೨	೦೧
	ಹಾವೇರಿ	ಬ್ಯಾಡಗಿ	ರಾಮಪುರ	೦೪	೨	೨
	ಹಾವೇರಿ	ಬ್ಯಾಡಗಿ	ಹಂಸಬಾವಿ	೦೩	೨	೧
	ಹಾವೇರಿ	ಹಾನಗಲ್	ಹಾನಗಲ್	೦೩	೨	೧
	ಹಾವೇರಿ	ಹೀರೆಕೆರುರ	ಚಿಕ್ಕಕೆರೂರು	೦೮	೦೭	೦೧
			ಒಟ್ಟು	೪೦	೩೦	೧೦

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ಬಡಮಲ್ಲಿ ಗ್ರಾಮದಲ್ಲಿ ಮಾಲ ಸಮುದಾಯದ ೧೯ ಕುಟುಂಬಗಳು ನೆಲೆಸಿದ್ದು, ಅದರಲ್ಲಿ ೧೫ ಕುಟುಂಬಗಳು ಪಡಿತರ ಚೀಟಿಯನ್ನ ಹೊಂದಿದ್ದು, ಇನ್ನು ೪ ಕುಟುಂಬಗಳಿಗೆ ಪಡಿತರ ಚೀಟಿ ಇರುವದಿಲ್ಲ.

ಬಡಮಲ್ಲಿ ತಾಂಡದಲ್ಲಿ ಮಾಲ ಸಮುದಾಯದ ಮೂರು ಕುಟುಂಬಗಳು ನೆಲೆಸಿವೆ. ಬಡಮಲ್ಲಿ ತಾಂಡದಲ್ಲಿ ಇರುವ ಮೂರು ಕುಟುಂಬಗಳಲ್ಲಿ ೨ ಕುಟುಂಬಗಳಿಗೆ ಪಡಿತರ ಚೀಟಿ ಇರುತ್ತವೆ. ಇನ್ನು ಒಂದು ಕುಟುಂಬಕ್ಕೆ ಪಡಿತರ ಚೀಟಿ ಇರುವುದಿಲ್ಲ.

ರಾಮಾಪುರದಲ್ಲಿ ಮಾಲ ಸಮುದಾಯದ ಒಟ್ಟು ನಾಲ್ಕು ಕುಟುಂಬಗಳು ವಾಸವಾಗಿರುತ್ತವೆ. ಎರಡು ಕುಟುಂಬಗಳಿಗೆ ಮಾತ್ರ ಪಡಿತರ ಚೀಟಿ ಇರುತ್ತವೆ. ಇನ್ನು ಎರಡು ಕುಟುಂಬಗಳಿಗೆ ಪಡಿತರ ಚೀಟಿ ದೊರೆತಿರುವುದಿಲ್ಲ.

ಹಂಸಬಾವಿಯಲ್ಲಿ ಮಾಲ ಸಮುದಾಯದ ಮೂರು ಕುಟುಂಬಗಳು ವಾಸವಾಗಿವೆ. ಅದರಲ್ಲಿ ಎರಡು ಕುಟುಂಬಗಳಿಗೆ ಪಡಿತರ ಚೀಟಿ ದೊರೆತಿರುತ್ತವೆ. ಇನ್ನು ಒಂದು ಕುಟುಂಬಕ್ಕೆ ಪಡಿತರ ಚೀಟಿ ದೊರೆಯದೇ ಹೋಗಿದೆ.

ಹಾನಗಲ್ಲಿನಲ್ಲಿ ಮಾಲ ಸಮುದಾಯದ ಮೂರು ಕುಟುಂಬಗಳು ವಾಸವಾಗಿವೆ. ಅಲ್ಲಿರುವ ಎರಡು ಕುಟುಂಬಗಳಿಗೆ ಪಡಿತರ ಚೀಟಿ ದೊರೆತಿರುತ್ತವೆ. ಇನ್ನು ಒಂದು ಕುಟುಂಬಕ್ಕೆ ಪಡಿತರ ಚೀಟಿ ದೊರೆಯದೆ ಹೋಗಿದೆ.

ಚಿಕ್ಕೆರೂರಿನ ಒಟ್ಟು ಎಂಟು ಕುಟುಂಬಗಳಲ್ಲಿ ಏಳು ಕುಟುಂಬಗಳಿಗೆ ಪಡಿತರ ಚೀಟಿ ದೊರೆತಿರುವುದಾದರೂ ಒಂದು ಕುಟುಂಬ ಪಡಿತರ ಚೀಟಿ ಸಿಗದೆ ವಂಚಿತವಾಗಿದೆ.

ಶೇಕಡ ೭೫ರಷ್ಟು ಕುಟುಂಬಗಳು ಪಡಿತರ ಚೀಟಿ ಹೊಂದಿವೆಯಾದರೂ ಇನ್ನೂ ಶೇಕಡ ೨೫ರಷ್ಟು ಕುಟುಂಬಗಳು ಪಡಿತರ ಚೀಟಿ ದೊರೆಯದೆ ಹೋಗಿದೆ.

ಮಾಲ ಸಮುದಾಯದವರಿಗೆ ಮೊದಲು ಪಡಿತರ ಚೀಟಿ ಯಾರಿಗು ಇದ್ದಿರಲಿಲ್ಲ ಎಂದು ತಳಿಸಿದರು. ಇವರಿಗೆ ಮೋದಲು ಜಾತಿ ಪ್ರಮಾಣ ಪತ್ರ, ಆಧಾರ ಕಾರ್ಡು, ಒಟಿನ ಕಾರ್ಡು ಇಲ್ಲದ ಕಾರಣದಿಂದಾಗಿ ಇವರಿಗೆ ಪಡಿತರ ಚೀಟಿ ಯಾರಿಗೂ ಇದ್ದಿರಲಿಲ್ಲ ಮತ್ತು ಇವರು ಬೇರೆ ಬೇರೆ ಊರಿನಲ್ಲಿರುವುದು ಒಂದು ದೊಡ್ಡ ಸಮಸ್ಯೆಯಾಗುತ್ತಿತ್ತು ಆದ್ದರಿಂದ ಇವರಿಗೆ ಪಡಿತರ ಚೀಟಿ ಇದ್ದಿರಲಿಲ್ಲ ಆದರೆ ಇತ್ತೀಚೆಗೆ ಇವರು ತಮ್ಮ ನೆಲೆಯನ್ನು ಕಂಡುಕೊಂಡ ನಂತರ ಅನ್ನಬಾಗ್ಯದ ಯೋಜನೆಯ ಅಡಿಯಲ್ಲಿ ರಾಜ್ಯದ ೩೨ ಕುಟುಂಬಗಳಲ್ಲಿ ೨೭ ಕುಟುಂಬಗಳು ಪಡಿತರ ಚೀಟಿಯನ್ನು ಹೊಂದಿದ್ದಾರೆ ಈ ರೀತಿ ಇವರು ಸಮಾಜದಲ್ಲಿ ಸ್ಥಿತ್ಯಂತರವನ್ನು ಹೊಂದುವದರಲ್ಲಿ ಪ್ರಯತ್ನ ಪಡುತ್ತಿದ್ದಾರೆ.

೬.೨ ಆಹಾರ

ಮಾಲ ಸಮುದಾಯದವರು ದಿನನಿತ್ಯ ಬಳಸುವ ಸಾಮಾನ್ಯ ಅಡುಗೆಗಳಲ್ಲಿ ಸಾಮಾನ್ಯವಾಗಿ ಭಿಕ್ಷಾಟನೆಯಲ್ಲಿ ತೊಡಗಿದ ಜನರು ತಮಗೆ ಜನರು ಯಾವ ಆಹಾರವನ್ನು ನೀಡುತ್ತಾರೋ ಅದನ್ನೇ ಆಹಾರವಾಗಿ ಬಳಸುತ್ತಾರೆ. ಎಲ್ಲಾ ವೇಳೆಯಲ್ಲಿಯೂ ಭಿಕ್ಷೆ ಸಿಗುವುದು ಕಷ್ಟಸಾಧ್ಯ. ಹೀಗಾಗಿ ಜೋಳದ ಮುದ್ದೆ, ರೊಟ್ಟಿ, ಸಾರು ಇತ್ಯಾದಿ ಆಹಾರವನ್ನು ತಯಾರಿಸಿಕೊಳ್ಳುವರು. ಸಾಮಾನ್ಯವಾಗಿ ಇವರು

ಸೇವಿಸುವ ಆಹಾರದಲ್ಲಿ ಮಾಂಸದ ಪದಾರ್ಥವನ್ನು ಆಪೇಕ್ಷಿಪಡುವರು. ಬೇಟೆಯಾಡಿದ ಇಣಿಚಿ (ಅಳಿಲು), ಬುರ್ಲೆ, ಕೌಜಗ, ಮೊಲ, ಕಾಡುಬೆಕ್ಕು, ಕಾಡುಕೋಳಿ ಇತ್ಯಾದಿ ಪದಾರ್ಥಗಳನ್ನೂ ಮಾಂಸಾಹಾರವಾಗಿ ಬಳಸುವುದು ಸಾಮಾನ್ಯ. ಏನಿಲ್ಲದಿದ್ದರೂ ಕೊನೆಗೆ ಅಳಿಲು, ಏಡಿ, ಸಣ್ಣ ಮೀನನ್ನಾದರೂ ಆಹಾರದೊಂದಿಗೆ ಸೇವಿಸುತ್ತಾರೆ. ಕಾಡಿನ ಪ್ರಾಣಿಗಳು ದೊರೆಯದಿದ್ದ ಸಂದರ್ಭದಲ್ಲಿ ತವು ಸಾಕಿದ ಕೋಳಿಯನ್ನು ಆಹಾರಕ್ಕಾಗಿ ಬಳಸುವುದೂ ಉಂಟು.

ಅಲೆಮಾರಿಯಾಗಿ ಕಾಡಿನಲ್ಲಿ ತಿರುಗುವಾಗಲೋ ಇಲ್ಲವೇ ಬೇರೆ ಊರುಗಳಿಗೆ ಹೋಗುವಾಗ ಆಹಾರ ದೊರೆಯದಿದ್ದ ಪಕ್ಷದಲ್ಲಿ ಮಂಡಗಳ್ಳಿ ಹಣ್ಣು, ಮಂಡಗಳ್ಳಿ ಚಿಗುರನ್ನು ಮತ್ತು ಕಾಡಿನಲ್ಲಿ ಅಥವಾ ಅಡವಿಯಲ್ಲಿ ಸಿಗುವ ಇನ್ನಿತರ ಹಣ್ಣುಗಳಾದ ತೊಂಡೆಹಣ್ಣು, ಕವಳಿಕಾಯಿ, ಕಾರಿಕಾಯಿ, ಬಾರಿಹಣ್ಣು, ನೇರಳೇಹಣ್ಣು, ಗೆಡ್ಡೆ-ಗೆಣಸು ಇತ್ಯಾದಿ ಹಣ್ಣು-ಹಂಪಲುಗಳನ್ನು ತಿನ್ನುವುದೂ ಉಂಟು.

ಮದುವೆ, ಹುಟ್ಟು ಸಾವುಗಳಂತಹ ಘಟನೆಗಳು ನಡೆದಾಗ ಅವುಗಳ ಆಚರಣೆಯಲ್ಲಿ ಹಾಗೂ ದೈವಾರಾಧನೆಯಲ್ಲಿ ಮಾಂಸಾಹಾರ ಕಡ್ಡಾಯವಾಗಿರುತ್ತದೆ. ಕೋಳಿ, ಹುಂಜ ಆಡು, ಟಗರು, ಆಡು ಇಲ್ಲವೆ ಓತನ್ನು ಅಂತಹ ಸಂದರ್ಭದಲ್ಲಿ ಬಲಿಕೊಟ್ಟು ಅದನ್ನೇ ಆಹಾರವಾಗಿ ತಯಾರಿಸಿಕೊಂಡು ಊಟ ಮಾಡುವರು.

ಅದೇ ರೀತಿಯಾಗಿ ಮೇಲೆ ತಿಳಿಸಿದ ಆಚರಣೆಗಳಲ್ಲಿ ಹೆಂಡ, ಸರಾಯಿಯ ಸಮಾರಾಧನೆಯೂ ಕಡ್ಡಾಯವಾಗಿ ಇರುತ್ತದೆ. ಹಿಂದೆ ಇವರೇ ಹೆಂಡ ಇಳಿಸಿಕೊಳ್ಳುತ್ತಿದ್ದರು ಇಲ್ಲವೇ ಸರಾಯಿ (ಭಟ್ಟಿ ಸರಾಯಿ) ತಯಾರಿಸಿಕೊಳ್ಳುತ್ತಿದ್ದರಂತೆ. ಆದರೆ ಇತ್ತೀಚೆಗೆ ಹೆಂಡ, ಸರಾಯಿ ತಯಾರಿಸುವುದು ಅಪರಾಧವೆಂದು ಸರ್ಕಾರ ಪರಿಗಣಿಸಿದ್ದರಿಂದಾಗಿ ಹೆಂಡ, ಸರಾಯಿಗಳ ತಯಾರಿಕೆಯನ್ನೇನೋ ಕೈಬಿಟ್ಟಿರುವರು. ಆದರೆ ಕುಡಿತ ಇವರಿಂದ ದೂರ ಸರಿದಿಲ್ಲ. ಸರ್ಕಾರದ ಪರವಾನಿಗೆಯಿಂದ ಕಾರ್ಖಾನೆಗಳಲ್ಲಿ ತಯಾರಾಗುವ ಕಡಿಮೆ ದರ್ಜೆಯ ಮದ್ಯವನ್ನೇ ಕುಡಿಯುವರು. ಆಂಧ್ರದ ಮಾಲ ಸಮುದಾಯದವರು ಸ್ತ್ರೀದೈವಗಳಿಗೆ ಕೋಣನ ಬಲಿ ಕೊಡುವುದು, ದನದ ಮಾಂಸದ ಭಕ್ಷಣೆ ಮಾಡುವುದು ತಿಳಿದುಬರುವುದಾದರೂ ಕರ್ನಾಟಕದ ಮಾಲ ಸಮುದಾಯದವರು ದನವನ್ನು ಆಹಾರವಾಗಿ ಬಳಸುವುದಿಲ್ಲ. ಹಿಂದೆ ತಮ್ಮ ಪೂರ್ವಿಕರು ದನ, ಹಂದಿ ತಿನ್ನುತ್ತಿದ್ದುದ್ದಾಗಿ ತಿಳಿಸುವ ಮಾಲ ಸಮುದಾಯದ ಹಿರಿಯ ಮಾಹಿತಿದಾರರು ಪ್ರಸ್ತುತ ದನ, ಊರಹಂದಿ ತಿನ್ನುವುದಿಲ್ಲ. ದನ ತಿನ್ನುವುದರಿಂದ ಊರೊಳಗಿನ ಇತರೆ ಸಮುದಾಯದವರು ತಮ್ಮನ್ನು ತೀರಾ ನಿಕೃಷ್ಟವಾಗಿ ಕಾಣುವರು ಎಂಬ ಕಾರಣಕ್ಕಾಗಿಯೇ ತಮ್ಮ ಹಿಂದಿನ ತಲೆಮಾರಿನವರೇ ದನ, ಹಂದಿ ಮಾಂಸದ ಭಕ್ಷಣೆಯಿಂದ ದೂರವಾಗಿರುವರು. ಆದರೆ ಕಾಡುಹಂದಿ ಹಾಗೂ ಇತರ ಪ್ರಾಣಿಗಳ ಮಾಂಸವನ್ನು ಆಹಾರವಾಗಿ ಬಳಸುತ್ತೇವೆ ಎಂದು ತಿಳಿಸಿದರು.

೬.೩ ಆರೋಗ್ಯ

ಅಭಿವೃದ್ಧಿಯೆಂಬುದು ಆರ್ಥಿಕತೆಯನ್ನು ಅವಲಂಭಿಸಿದೆ ಎಂಬುದು ತಪ್ಪು ಕಲ್ಪನೆ. ಮನುಷ್ಯನು ಸಮಾಜದೊಳಗೆ ಅಭಿವೃದ್ಧಿಗೊಳ್ಳುವುದು ಕೇವಲ ಹಣ, ಸಂಪತ್ತಿನಿಂದಲ್ಲ. ನಿಜವಾದ

ಅಭಿವೃದ್ಧಿಯೆಂಬುದು ಮಾನವಾಭಿವೃದ್ಧಿಯೇ ಆಗಿದೆಯೆಂದು ಅಮಾರ್ತ್ಯಸೇನ್ ಹಾಗೂ ಜೀನ್ ಡ್ರೀಡ್ ಅವರಂತಹ ಆರ್ಥಿಕ ತಜ್ಞರು ಅಭಿಪ್ರಾಯಪಡುತ್ತಿರುವರು. "ಮಾನವನ ಮೂಲಭೂತ ಸೌಕರ್ಯಗಳಲ್ಲಿ ಶಿಕ್ಷಣಕ್ಕೆ ಎಷ್ಟು ಮಹತ್ವವಿದೆಯೋ ಆರೋಗ್ಯಕ್ಕೂ ಅಷ್ಟೇ ಮಹತ್ವವಿದೆ"೨ ಹಿಂದಿನ ದಿನಮಾನಗಳಿಗೆ ಹೋಲಿಕೆ ಮಾಡಿದರೆ ಇಂದು ಮಾನವನಿಗೆ ಅಧಿಕ ಪ್ರಮಾಣದಲ್ಲಿ ಆರೋಗ್ಯ ಲಭಿಸುತ್ತಿದೆ ಎಂದೇ ಹೇಳಬಹುದು. ಮನುಷ್ಯನಿಗೆ ಆರೋಗ್ಯ ಸಮಸ್ಯೆಗಳು ಬಂದಾಗ ಚಿಕಿತ್ಸೆ ನೀಡುವುದಕ್ಕಿಂತ ಆರೋಗ್ಯ ಸಮಸ್ಯೆಗಳು ಬಾರದಂತೆ ಮುಂಜಾಗ್ರತೆ ವಹಿಸುವುದೇ ಜಾಣತನ. ಮನುಷ್ಯನು ಆರೋಗ್ಯವಂತನಾಗಿರುವಲ್ಲಿ ಪೌಷ್ಠಿಕ ಆಹಾರದ ಪಾತ್ರ ಅಧಿಕವಾಗಿದೆ. ಅಷ್ಟೇ ಅಲ್ಲ ಮನುಷ್ಯನ ಆರೋಗ್ಯಕ್ಕೆ ನೈರ್ಮಲ್ಯೀಕರಣವೂ ಮುಖ್ಯವೆಂದು ಪರಿಭಾವಿಸಲಾಗಿದೆ. ಇದನ್ನು ಮನಗಂಡೇ ಪಂಚವಾರ್ಷಿಕ ಯೋಜನೆಯಲ್ಲಿ ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ವಿಶ್ವಸಂಸ್ಥೆಯ ಅಭಿಲಾಷೆಯೂ ಅದೇ ಆಗಿದೆ. ಭಾರತ ಸರ್ಕಾರವು ದಡಾರ, ಪ್ಲೇಗ್, ಕ್ಷಯ, ಕುಷ್ಠ ಮುಂತಾದ ಮಾರಕ ರೋಗಗಳಿಂದ ಜನರನ್ನು ಕಾಪಾಡುವುದಕ್ಕಾಗಿಯೇ ಮುಂಜಾಗ್ರತಾ ಕ್ರಮಗಳಾಗಿ ವ್ಯಾಕ್ಸಿನ್, ಚುಚ್ಚುಮದ್ದು ಇತ್ಯಾದಿಯಾಗಿ ಪ್ರತಿಯೊಬ್ಬ ಪ್ರಜೆಗೂ ನೀಡುತ್ತಾ ಬಂದಿದೆ. ಬಹುತೇಕ ಪ್ಲೇಗ್ ಮಾರಿಯು ಭಾರತದಿಂದ ದೂರಾಗಿದೆ. ಇನ್ನುಳಿದ ರೋಗಗಳು ಬಹುತೇಕವಾಗಿ ನಿಯಂತ್ರಣಗೊಂಡಿದ್ದು ಅಲ್ಲೊಂದು, ಇಲ್ಲೊಂದು ಪ್ರಕರಣಗಳಾಗಿರುವ ಕುರಿತು ಪತ್ರಿಕೆಗಳಲ್ಲಿ ಓದುತ್ತೇವೆ.

ಭಾರತದ ಅಭಿವೃದ್ಧಿಯಲ್ಲಿ ಪಂಚವಾರ್ಷಿಕ ಯೋಜನೆಗಳಿಗೆ ಮಹತ್ವದ ಸ್ಥಾನವಿದೆ. ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಂಡ ನಿರ್ಣಗಳಂತೆಯೇ ಆರೋಗ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

ಬಡತನಕ್ಕೂ ಅನಾರೋಗ್ಯಕ್ಕೂ ಅವಿನಾಭಾವ ಸಂಬಂಧ. ಅಶುದ್ಧವಾದ ನೀರು, ಅಶುದ್ಧವಾದ ಆಹಾರ ಸೇವನೆ ಅನಾರೋಗ್ಯಕ್ಕೆ ಕಾರಣವಾಗುವುದು. ಹಾಗೆಯೇ ವೈಯಕ್ತಿಕ ಸುಚಿತ್ವದ ಕೊರತೆಯೂ ಅನಾರೋಗ್ಯಕ್ಕೆ ದಾರಿಮಾಡಿಕೊಡುತ್ತದೆ. ಮಾನವನ ವಾಸದ ನೆಲೆಯೂ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುವುದುಂಟು. ಬಹುತೇಕ ತಳಸಮುದಾಯಗಳು ಕೊಳಚೆ ಪ್ರದೇಶಗಳಲ್ಲಿಯೇ ನೆಲೆಸುವುದು. ಕೊಳಚೆ ಪ್ರದೇಶದಲ್ಲಿ ಶುಚಿತ್ವದ ಕೊರತೆಯಿಂದಾಗಿ ಕಾಲರಾ, ಕಾಮಾಲೆ ವಿಷಮಶಿತ ಜ್ವರ ಇತ್ಯಾದಿ ಖಾಯಿಲೆಗಳು ಬರುವುದು ಸಹಜ. ವಿಶೇಷವಾಗಿ ಮಹಿಳೆ ಮತ್ತು ಮಕ್ಕಳನ್ನು ಕಾಡುವ ರೋಗಗಳೇ ಹೆಚ್ಚು.

ಮಹಿಳೆಯರಿಗೆ ಸಾಮಾನ್ಯವಾಗಿ ರಕ್ತಹೀನತೆ, ಅನಾರೋಗ್ಯ, ಅಶಕ್ತತೆ ಹೆಚ್ಚಾಗಿ ಕಾಡುತ್ತವೆ. ಜೊತೆಗೆ ಲಿವರಿಗೆ ಸಂಬಂಧಿಸಿದ ರೋಗಗಳೂ ಕಂಡುಬರುವವು. ಭಿಕ್ಷಾಟನೆಯಿಂದ ಅಶುದ್ಧವಾದ ಆಹಾರ ಸೇವನೆ, ಅಶುದ್ಧವಾದ ನೀರಿನ ಸೇವನೆ, ಪ್ರತಿನಿತ್ಯ ಶುಚಿಯಾಗಿರದೇ ಇರುವುದು ಮಹಿಳೆಯರು ಮತ್ತು ಮಕ್ಕಳು ರೋಗಗಳಿಂದ ಬಳಲಲು ಕಾರಣವೆಂದು ಗುರುತಿಸಲಾಗಿದೆ. ಮಾಲ ಸಮುದಾಯದಂತಹ ಅಲೆಮಾರಿ ತಳಸಮುದಾಯಗಳು ಹೆಣ್ಣುಮಕ್ಕಳಿಗೆ ಅಪ್ರಾಪ್ತ ವಯಸ್ಸಿನಲ್ಲಿಯೇ ಮದುವೆ ಮಾಡಿಕೊಡುವುದು, ಮಹಿಳೆಯರ ದೇಹದ ಬೆಳವಣಿಗೆ ಸಂಪೂರ್ಣವಾಗಿ ಆಗದ ಪೂರ್ವದಲ್ಲಿಯೇ

ಮಕ್ಕಳನ್ನು ಹೆರವುದು, ಮಹಿಳೆಯರಿಗೆ ಸರಿಯಾದ ಸಮಯಕ್ಕೆ ಪೌಷ್ಠಿಕ ಆಹಾರ ಸಿಗದೆ ಇರುವುದು ಇತ್ಯಾದಿ ಕಾರಣಗಳಿಗಾಗಿ ಆರೋಗ್ಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಆದರೆ ಈ ರೀತಿಯ ತಳಸಮುದಾಯಗಳು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಆಲೋಪತಿ ವೈದ್ಯರನ್ನು ಪೂರ್ಣವಾಗಿ ಅವಲಂಭಿಸಿದೆ ತಮ್ಮ ಪರಂಪರೆಯಲ್ಲಿ ಪೂರ್ವದಿಂದಲೂ ಬಂದ ನಾಟಿ ವೈದ್ಯವನ್ನೂ ಅವಲಂಭಿಸುವರು.

ಮಾನವ ಇತರೆ ಪ್ರಾಣಿಗಳಿಗಿಂತ ತುಂಬಾ ಮುಂದುವರೆದವನಾಗಿದ್ದಾನೆ. ಅವನ ಯೋಚನಾ ಕ್ರಮ ಇತರ ಪ್ರಾಣಿಗಳಿಗಿಂತ ಸಾವಿರಪಾಲು ಹೆಚ್ಚಿನದು. ಇವನ ನಿರಂತರ ಹುಡುಕಾಟ ಜೀವನದ ಕುರಿತು ಇವನಿಗಿರುವ ಕಾಳಜಿ. ಇವನನ್ನು ನಿರಂತರವಾದ ಹೊಸ ಹೊಸ ಆವಿಷ್ಕಾರಗಳಿಗೆ ತೊಡಗುವಂತೆ ಮಾಡಿದೆ. ಮನುಷ್ಯ ಅತಿ ಪ್ರಾಚೀನದಲ್ಲಿ ಮಾಂಸಹಾರಿಯಾಗಿದ್ದು, ನಂತರ ಸಸ್ಯಹಾರಕ್ಕೆ ತಿರುಗಿ ಮಾಂಸ ಮತ್ತು ಸಸ್ಯವನ್ನು ಏಕೀಭಾವವಾಗಿ ಉಪಯೋಗಿಸುವಂತೆ ತೊಡಗಿದುದು. ಆಹಾರವನ್ನು ಬೇಯಿಸಿಕೊಂಡು ತಿನ್ನುವ ಪರಿಪಾಟಕ್ಕೆ ಇಳಿದುದು, ಹೊಸ ಹೊಸ ಲೋಹಗಳ ಆವಿಷ್ಕಾರಕ್ಕೆ ತೊಡಗಿದುದುದು, ಸಾಮಾನ್ಯವಾದ ವಿಷಯವೇನಲ್ಲ. ಸಸ್ಯಗಳಲ್ಲಿಯೇ ಯಾವುದನ್ನು ಆಹಾರವಾಗಿ ಉಪಯೋಗಿಸಬೇಕು ಯಾವುದನ್ನು ಉಪಯೋಗಿಸಬಾರದು ಎಂಬುದನ್ನು ಇವನು ಅರಿತುಕೊಂಡುದು ಇಂತಹ ನಿರಂತರ ಶೋಧನೆಗಳಿಂದಲೇ.

ಪರಿಸರದಲ್ಲಿ ಮಾನವನು ನಿರಂತರವಾಗಿ ಪ್ರಕೃತಿ ಮತ್ತು ಶತ್ರುಗಳಿಂದ ರಕ್ಷಣೆಯನ್ನು ಒದಗಿಸಿಕೊಳ್ಳುವ ಕಾಯಕದಲ್ಲಿ ತೊಡಗಿರುತ್ತಾನೆ. ಮನುಷ್ಯನಿಗೆ ಹೊರಗಿನ ಶತ್ರುಗಳ ಭಯ ಒಂದು ಕಡೆಗಿದ್ದರೆ, ತನ್ನೊಳಗಿನ ಶತ್ರುಗಳ ಕುರಿತೆ ಇನ್ನೊಂದು ನಮೂನೆಯ ಚಿಂತೆ. ಒಳಗಿನ ಶತ್ರುವೆಂದರೆ ಪ್ರಕೃತಿಯಲ್ಲಿ ಇವನನ್ನು ನಿರಂತರವಾಗಿ ಕಾಡುವ ಒಂದಿಲ್ಲೊಂದು ರೋಗರುಜಿನಗಳಾಗಿವೆ. ನಿಸರ್ಗದ ಕೂಸಾದ ಮಾನವ ಆದಿಕಾಲದಿಂದಲೂ, ನಿಸರ್ಗದೊಡನೆ ತನ್ನ ಅಸ್ತಿತ್ವಕ್ಕಾಗಿ ಹೋರಾಡುತ್ತಾ ಸೋತು ನಿಸರ್ಗಕ್ಕೇ ಶರಣಾಗಿದ್ದಾನೆ. ಇವನ ನಿಸರ್ಗದೊಂದಿಗಿನ ನಿರಂತರ ಹೋರಾಟದಿಂದಾಗಿ ತನ್ನ ಅಸ್ತಿತ್ವವನ್ನು ಅಲ್ಪಸ್ವಲ್ಪವಾದರೂ ಉಳಿಸಿಕೊಳ್ಳಲು ಯಶಸ್ವಿಯಾಗಿದ್ದಾನೆ.

ಪ್ರಪಂಚದ ಇಂದಿನ ವೈದ್ಯ ಪದ್ಧತಿಗಳಿಗೆ ತಾಯಿ ಬೇರಾದುದು ನಾಟಿವೈದ್ಯ. ಈ ನಾಟಿವೈದ್ಯವೂ ಆಯಾ ಪರಿಸರ, ಗುಂಪು ಬುಡಕಟ್ಟು, ಸಮುದಾಯಗಳಲ್ಲಿ ಭಿನ್ನ ಭಿನ್ನವಾದ ರೀತಿಯಲ್ಲಿಯೇ ಬಳಕೆಗೊಳ್ಳುತ್ತದೆ. ಈ ಎಲ್ಲಾ ಸಮುದಾಯ ಗುಂಪುಗಳ ವೈದ್ಯ ಪದ್ಧತಿಯ ಮೂಲ ಉದ್ದೇಶ ಮಾತ್ರ ಅದರೊಳಗಿನ ರೋಗ ರುಜಿನಗಳನ್ನು ಹೊಡೆದೋಡಿಸುವುದಾಗಿದೆ. ನಾಟಿವೈದ್ಯದಲ್ಲಿ ಮೂರು ಗುಂಪುಗಳನ್ನು ಸ್ಥೂಲವಾಗಿ ಗುರುತಿಸಬಹುದು. ಸಸ್ಯ ನಾಟಿವೈದ್ಯ, ಖನಿಜ ನಾಟಿವೈದ್ಯ, ಮತ್ತು ಮಂತ್ರಗಾರಿಕೆ. ನಾಟಿ ವೈದ್ಯದಲ್ಲಿ ಮನುಷ್ಯ ಮತ್ತು ಪ್ರಾಣಿ ಜನಪದ ವೈದ್ಯವೆಂದೂ ವಿಂಗಡಿಸಬಹುದು. "ರ್‍ಯಾಡ್ ಕ್ಲಿಪ್ ಬ್ರೌನ್, ಎಮಿಲಿ ಡರ್ಖಿಂ, ರುತ್ ಬೆನೆಡಿಕ್ಟ್, ಲೆವಿಸ್ಟ್ರಾಸ್ ಮುಂತಾದವರ ಅಭಿಪ್ರಾಯಗಳ ಆಧಾರದ ಮೇಲೆ ಆರ್.ಎಸ್.ಬಾಗ್ಸ್‌ರವರು ಜನಪದ ವೈದ್ಯಕೀಯ ಕ್ಷೇತ್ರದಲ್ಲಿ ಅಧ್ಯಯನಗಳು ಸಾಧ್ಯವೆಂಬುದನ್ನು ಅವರು ನೀಡಿರುವ ಜಾನಪದ ಕ್ಷೇತ್ರದ ವೈಜ್ಞಾನಿಕ ವರ್ಗೀಕರಣವೇ ಸಾಕ್ಷಿ"[೨]

ಪ್ರಸ್ತುತ ಇಲ್ಲಿ ಮಾಲ ಸಮುದಾಯದ ವೈದ್ಯ ಪದ್ಧತಿ ಕುರಿತು ಗಮನಹರಿಸುವ ಒಂದ ಪ್ರಯತ್ನವನ್ನು ಮಾಡಲಾಗಿದೆ. ಮಾಲ ಸಮುದಾಯದವರು ತಮಗೆ ಒದಗುವ ರೋಗ ರಜಿನಗಳಿಂದ ಪಾರಾಗಲು ತಮ್ಮ ಪರಿಸರದಲ್ಲಿ ದೊರೆಯುವ ಕೆಲವು ಸಸ್ಯಗಳನ್ನು, ಲೋಹಗಳನ್ನು ಹಾಗೆಯೇ ಭಸ್ಮಗಳನ್ನು ಉಪಯೋಗಿಸುವುದನ್ನು ನೋಡಬಹುದಾಗಿದೆ. ಇವುಗಳ ಹೊರತಾಗಿಯೂ ಮಂತ್ರ ಶಕ್ತಿಯಿಂದ ರೋಗಗಳನ್ನು ನಿಯಂತ್ರಿಸುವ ಪರಿಪಾಠ ಇತರ ಸಮುದಾಯಗಳಲ್ಲಿರುವಂತೆಯೇ ಇವರಲ್ಲಿಯೂ ಕಂಡುಬರುತ್ತದೆ.

"ರೋಗಗಳು ಕಾಲಕ್ರಮೇಣ ಹವಾಮಾನಕ್ಕನುಗುಣವಾಗಿ ರೂಪಾಂತರಗಳನ್ನು ಹೊಂದಿ ವಿವಿಧ ರೂಪ ಮತ್ತು ಲಕ್ಷಣಗಳನ್ನು ಹೊಂದುತ್ತಾ ಪ್ರಾದೇಶಿಕವಾಗಿ ವೈವಿಧ್ಯತೆ ಮತ್ತು ವೈಚಿತ್ರತೆಯನ್ನುಂಟು ಮಾಡುವುದು ಸೋಜಿಗದ ಸಂಗತಿಯಾಗಿರುವುದು. ಈಜಿಪ್ಟ್ ಮತ್ತು ಇತರ ಸಂಸ್ಕೃತಿಯಲ್ಲಿ ಕಂಡುಬಂದ ಪ್ರಾಚೀನ ಅವಶೇಷಗಳು ಪ್ರಾಣಿವರ್ಗ ಮತ್ತು ಮಾನವ ವರ್ಗಗಳನ್ನು ಕಾಡುತ್ತಿದ್ದ ಭಯಂಕರ ಮಾರಿಹುಣ್ಣುಯೆಂದೇ ಜನಪ್ರಿಯವಾಗಿರುವ ಕ್ಯಾನ್ಸರ್ ಮತ್ತು ಇತರ ಮಾರಕ ರೋಗಗಳು ಅಂದು ಪ್ರಾಚೀನ ಮಾನವನನ್ನು ಕಾಡಿರಲಿಕ್ಕೆ ಸಾಕು ಎಂದು ತಿಳಿಸುತ್ತವೆ"ಳ.

ಮಾಲ ಸಮುದಾಯದಲ್ಲಿ ಕೆಲವು ರೋಗಗಳು ಪ್ರಕೃತಿಯಲ್ಲಿ ಸಹಜವಾಗಿ ಬರುವ ರೋಗಗಳಾಗಿ ಕಂಡುಬಂದರೆ, ಇನ್ನೂ ಕೆಲವು ರೋಗಗಳು ತಮ್ಮ ಸಮುದಾಯದ ಸಾಮೂಹಿಕ ತಪ್ಪಿನಿಂದಾಗಿ ಒದಗಿಬಂದ ಪಿಡುಗೆಂದೇ ಭಾವಿಸಲಾಗುತ್ತದೆ.

ಮಾಲಸಮುದಾಯದ ಸಮಾಜದಲ್ಲಿ ಯಾವುದೇ ತೆರನಾದ ಹೊಸ ವಿಚಾರ ನಡವಳಿಕೆಗಳು ಯಾರ ಮೂಲಕವಾದರೂ ಸೇರ್ಪಡೆಗೊಂಡು ಕಾರ್ಯಾಚರಣೆಯಲ್ಲಿ ಬಂದರೆ ಅವುಗಳ ಪರಿಣಾಮ ಬಹಳ ಕ್ರೂರವಾಗಿ ತಮ್ಮ ಇಡೀ ಸಮುದಾಯದ ಮೇಲೆ ಆಗುವುದೆಂಬ ನಂಬಿಕೆ ಇವರಲ್ಲಿದೆ. ಇಂತಹ ಪರಿಣಾಮಗಳೆಂದರೆ ತಮ್ಮ ಸಮುದಾಯಕ್ಕೆ ರೋಗರುಜಿನಗಳು ಬರುತ್ತವೆಂಬ ನಂಬುಗೆ ಇವರದು.

ಮೂರನೆಯದಾಗಿ ರೋಗಗಳಿಂದುಂಟಾಗುವ ಸಾವು ನೋವುಗಳು ಸಹಜವಾದುದಲ್ಲ. ಅದೊಂದು ದುಷ್ಟಶಕ್ತಿಯ ಕೈವಾಡದ ಮೂಲಕ ಆದುದೆಂಬ ನಂಬುಗೆ ಅವರದು. ಯಾವುದೋ ಒಂದು ಭೌತಕ ವಸ್ತುವಿನಲ್ಲಿ ದುಷ್ಟ ಶಕ್ತಿಯೊಂದು ಅಡಗಿ ಆ ಮೂಲಕ ಕಾರ್ಯಾಚರಣೆ ಮಾಡುತ್ತದೆಂಬ ನಂಬಿಕೆಗೆ ಇವರು ಒಳಗಾಗುವುದುಂಟು.

ನಾಲ್ಕನೆಯದಾಗಿ ತನ್ನ ಸಮುದಾದವರಲ್ಲದ ಇನ್ನೊಂದು ಪಂಗಡದ ಮನುಷ್ಯರೊಂದಿಗೆ ದೈಹಿಕ ಸಂಪರ್ಕ ತಮಗೆ ರೋಗ ತರುವ ಕಾರಣವಾಗಿದೆ ಎನ್ನುವ ನಂಬುಗೆಗೂ ಇವರಲ್ಲಿದೆ

ಮಾಟ, ರೋಗ ತರುವ ಯಾವುದೇ ವಸ್ತುವಿನ ಪ್ರವೇಶ, ದುಷ್ಟ ಅತಿಮಾನುಷ ಶಕ್ತಿಯ ಪ್ರವೇಶ, ದೇಹದಿಂದ ಆತ್ಮ ಬೇರೆಯಾಗುವುದು. ಹೀಗೆ ಹತ್ತು ಹಲವು ಸಮಸ್ಯೆಗಳು ಮಾನವನನ್ನು ಶಕ್ತಿ ಗುಂದಿಸುವ ಬದಲು ಹೆಚ್ಚು ಹೆಚ್ಚು ನಿಗೂಢತೆಯತ್ತ ಎಳೆಯುತ್ತಾ ಅದನ್ನು ಭೇದಿಸುವ ಹೊಸ

ತಂತ್ರಗಳನ್ನು ರೂಪಿಸಿಕೊಳ್ಳುವಂತೆ ಪ್ರೇರೇಪಿಸಿರಬೇಕು. ಇದಕ್ಕೆ ಮಾಲಸಮುದಾಯವೂ ಹೊರತಾಗಿಲ್ಲ. ಇಲ್ಲಿ ಹುಟ್ಟಿದ ಪ್ರತಿ ಪ್ರಾಣಿಗೂ ನೋವು, ರೋಗಗಳನ್ನು ತರುವ ಶಕ್ತಿ ಇರುವುದು ದೇವರಿಗೆ ಮಾತ್ರ, ಅದಕ್ಕೆ ಪರಿಹಾರವಾವನ್ನೂ ದೇವರು ಸೂಚಿಸಿರುವನು ಎಂಬ ನಂಬಿಕೆ ಮಾಲ ಸಮುದಾಯದೊಳಗಿದೆ.

ತಮಗೆ ಬಂದ ರೋಗ ಯಾವುದು? ಆ ರೋಗಕ್ಕೆ ಯಾವ ಸಸ್ಯ ಔಷಧೋಪಚಾರ ಮಾಡುವುದು ಒಳಿತು ಎಂದು ಗುರುತಿಸುವುದಷ್ಟೆ ಮನುಷ್ಯನ ಕೆಲಸ. ಮನುಷ್ಯನು ಎಲ್ಲಿಯವರೆಗೆ ಪರಿಶುದ್ಧನು, ಆತ್ಮಶುದ್ಧಿಯುಳ್ಳವನಾಗಿರುತ್ತಾನೋ, ಅಲ್ಲಿಯವರೆಗೂ ಆ ಸಸ್ಯಗಳ ಗುಣಧರ್ಮಗಳನ್ನು ತಿಳಿದುಕೊಳ್ಳುವ ಶಕ್ತಿಯನ್ನು ಗಳಿಸಿಕೊಂಡಿರುತ್ತಾರೆ. ಪ್ರಾಮಾಣಿಕತೆಗೆ ಅವನು ಎಂದು ಭಿನ್ನವಾಗಿ ನಡೆದುಕೊಳ್ಳುತ್ತಾನೋ, ಅಂದಿಗೆ ಅವನ ಔಷಧಿಗೆ ಗುಣಪಡಿಸುವ ಶಕ್ತಿಯು ನಾಶಗೊಳ್ಳುತ್ತದೆ. ಹಣ, ಅಂತಸ್ತು, ಇವು ಯಾವುಗಳಿಗೂ ತನ್ನನ್ನು ಒಡ್ಡಿಕೊಳ್ಳದೆ ರೋಗ ಇರುವಂಥವನಿಗೆ ಮಾತ್ರ ಔಷಧಿ ಕೊಡುವ, ಗುಣಪಡಿಸುವ ಸಾಮರ್ಥ್ಯ ಇರುತ್ತದೆ. ಸಣ್ಣ ಪುಟ್ಟ ರೋಗಗಳಿಗೆ ಔಷಧಿ ಮಾಡುವ ಸಾಮಾನ್ಯವಾದ ಗಿಡ ಸಸ್ಯಗಳ ಪರಿಚಯ ಬಹುತೇಕವಾಗಿ ಎಲ್ಲಾ ಮಾಲ ಸಮುದಾಯದವರಿಗೂ ತಿಳಿದಿರುತ್ತದೆ. ದುಷ್ಟಶಕ್ತಿಗಳಿಂದುಂಟಾಗುವ ರೋಗಗಳಿಗೆ ವೈದ್ಯ ಮಾಡುವ ಕಾರ್ಯ ಮಾಲ ಸಮುದಾಯದ ಕೆಲವೇ ಕೆಲವು ಹಿರಿಯರ ಬಳವಳಿಯಾಗಿರುತ್ತದೆ. ಇವರನ್ನು ಮಾಂತ್ರಿಕ ವೈದ್ಯರೆಂದು ಬೇಕಾದರೆ ಕರೆಯಬಹುದು. ಮಾಲ ಸಮುದಾಯದಲ್ಲಿ ಇವರಿಗೆ ಒಂದು ವಿಶಿಷ್ಟ ಸ್ಥಾನವೇ ಇದೆ. ಸಾಮಾನ್ಯವಾಗಿ ಇಂತಹ ಮಾಂತ್ರಿಕ ಶಕ್ತಿಯ ವೈದ್ಯರು ಮಧ್ಯಮ ವಯಸ್ಸನ್ನು ಮೀರಿದವರಾಗಿರುತ್ತಾರೆ.

ಮಾಲ ಸಮುದಾಯದವರು ಇತ್ತೀಚೆಗೆ ಸರ್ಕಾರಿ ಆಸ್ಪತ್ರೆಗಳಿಗೆ ಹೋಗುವವರಾದರೂ ತಮಗೆ ಬರುವ ಸಾಮಾನ್ಯ ರೋಗಗಳಿಗೆ ಇಂದಿಗೂ ಮನೆಮದ್ದನ್ನೇ ನೆಚ್ಚಿಕೊಂಡಿರುವರು.

ಮಾಲ ಸಮುದಾಯದಲ್ಲಿ ಈ ವೈದ್ಯಕೀಯ ಪದ್ಧತಿ ಪೂರ್ವದಿಂದ ಬಂದ ಬಳವಳಿಯಾಗಿರುವುದಾಗಿ ಮಾಹಿತಿದಾರರು ತಿಳಿಸುತ್ತಾರೆ. ತಮ್ಮಹಿರಿಯರು ರೂಢಿಸಿಕೊಂಡುಬಂದ ಔಷಧಿ ಪದ್ಧತಿಯನ್ನೇ ತಾವೂ ಮುಂದುವರೆಸಿಕೊಂಡು ಬಂದುದಾಗಿ ತಿಳಿಸುವರು. ಇವರು ತಮ್ಮ ಗಿಡಮೂಲಿಕೆಯ ಗುಟ್ಟನ್ನು ಹೊರಗೆ ಹೇಳಿದರೆ ಅದರ ಸತ್ವ ಕಡಿಮೆಯಾಗುತ್ತದೆಂದು ನಂಬಿರುವರು. ಹೀಗಾಗಿ ಇವರು ಯಾವ ಗಿಡಮೂಲಿಕೆಯ ಗುಟ್ಟನ್ನೂ ಹೊರಗೆ ಹೇಳಲು ಹಿಂಜರಿಯುವರು. ಇವರಿಂದ ಗಿಡಮೂಲಿಕೆಗಳ ಹೆಸರುಗಳ ಕುರಿತು ಅರಿತುಕೊಳ್ಳಲು ಕ್ಷೇತ್ರಕಾರ್ಯದಲ್ಲಿ ತುಂಬಾ ಕಷ್ಟಪಡಬೇಕಾಯಿತು.

ಮಾಲ ಸಮುದಾಯದ ವೈದ್ಯರು ರೋಗ ಲಕ್ಷಣಗಳನ್ನು ತಿಳಿಯಲು ದೈಹಿಕ ಲಕ್ಷಣಗಳನ್ನು ಅವಲೋಕಿಸುವುದುಂಟು. ಕೆಲವರು ನಾಡಿ ಹಿಡಿದೂ ನೋಡುವರು. ಹಳದಿ ಬಣ್ಣದ ಮೂತ್ರ, ಹಳದಿ ಕಣ್ಣು, ಉಗುರುಗಳು ಹಳದಿ ಬಣ್ಣಕ್ಕೆ ತಿರುಗಿದ್ದಲ್ಲಿ ಅಂಥವರಿಗೆ ಅರಿಶಿಣ ಖಾಯಿಲೆ (ಕಾಮಾಲೆ) ಎಂದು ಗುರತಿಸಲಾಗುತ್ತದೆ.

ಒಂದು ಕಾಲಕ್ಕೆ ಕಾಡನ್ನೇ ಆಶ್ರಯಿಸಿಕೊಂಡಿದ್ದ ಮಾಲ ಸಮುದಾಯದವರು ಇಂದು ಬಹುತೇಕ ಕಾಡಿನಿಂದ ದೂರವಾಗಿದ್ದಾರೆ. ಆದರೂ ಗಿಡಮೂಲಿಕೆಗಳ ಜ್ಞಾನದಿಂದ ವಂಚಿತರಾಗಿಲ್ಲ. ಸ್ಥಳೀಯವಾಗಿ ದೊರೆಯುವ ಗಿಡಗಂಟೆಗಳನ್ನೇ ಔಷಧಿಯಾಗಿ ಬಳಸುವರು.

ವಿಷ ಜಂತುಗಳ ಕಡಿತಕ್ಕೆ ಕೆಲವರು ನೇರವಾಗಿ ಔಷಧಿ ಸಸ್ಯಗಳನ್ನು ಬಳಸಿದರೆ, ಇನ್ನು ಕೆಲವರು ಕಬ್ಬಿಣದ ಮೊಳೆ, ಇಲ್ಲವೆ ಕುಡುಗೋಲಿನಿಂದ ಚೇಳು ಇತ್ಯಾದಿ ವಿಷಜಂತುಗಳು ಕಡಿದ ವ್ಯಕ್ತಿಯ ಕೈಗೆ ಮೂರು ಸಾರೆ ನಿವಾಳಿಸಿ ಮಂತ್ರಿಸುತ್ತಾರೆ. ಚಿಲಕಮುಖಿಯ ಒಬ್ಬ ಮಾಲ ಸಮುದಾಯದ ಒಬ್ಬ ವ್ಯಕ್ತಿ ಒಂದು ರೋಗಕ್ಕೆ ಸಸ್ಯಗಳಿಂದ ತಯಾರಿಸಿದ ಔಷಧಿ ಒದಗಿಸಿದರೆ, ಇನ್ನೊಬ್ಬ ರೋಗಿಯ ಚೇಳಿನ ಕಡಿತಕ್ಕೆ ಕಬ್ಬಿಣದ ಮೊಳೆಯಿಂದ ನಿವಾಳಿಸಿ ಮಂತ್ರ ಹೇಳಿ ವಿಷ ಇಳಿಸುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾ ಯಿತು.

ಯಾರಾದರೂ ಎಚ್ಚರ ತಪ್ಪಿ ಮಲಗಿದಾಗ, ಮಗುವಿಗೆ ವಿಪರೀತ ಜ್ವರ ಬಂದಾಗ, ಮಗುವನ್ನು ಬೇರೆಯವರು ಎತ್ತಿ ಮುದ್ದಾಡಿ ದೃಷ್ಟಿಯಾಗಿದೆಯೆಂದೂ ಭಾವಿಸಿದಾಗ, ಹಂಚಿಕಡ್ಡಿಯಿಂದ ಇಲ್ಲವೆ ಕೈ ಬಳೆಯ ಚೂರಿನಿಂದ ಸುಟ್ಟರೆ ರೋಗ ನಿವಾರಣೆಯಾಗುವುದೆಂಬ ನಂಬಿಕೆ ಇವರಲ್ಲಿದೆ.

ಕಾಲಿಗೆ ಕಜ್ಜಿ ರೀತಿಯ ಗಾಯಗಳಾದರೆ ಅದನ್ನು ದಾಟುಬಕ್ಕೆಯೆಂದು ಕರೆಯುವ ಇವರು ಮೂರುದಾರಿ ಕಲೆಯುವಲ್ಲಿ ಓಕಳಿ ನೀರು ದಾರಿಗೆ ಅಡ್ಡಹಾಕಿ, ಅದರ ಮೇಲೆ ಎರಡು ಎಲೆ, ಎರಡು ಅಡಿಕೆ, ನಾಲ್ಕಾಣೆ ದಕ್ಷಿಣವಿಟ್ಟು ಗಾಯವಾದವನಿಗೆ ಆ ಓಕಳಿಯನ್ನು ದಾಟಿಸಿ ಕರೆತರುವ ವಾಡಿಕೆ ಉಂಟು. ಓಕಳಿಯನ್ನು ದಾಟಿ ಬರುವ ರೋಗಿಯು 'ನನ್ನ ಗಾಯ ಮಾದು ನಿನ್ನ ದಾಟಿದವನಿಗೆ ಆ ಗಾಯ ಬರಲಿ' ಎಂದು ಹೇಳುತ್ತಾ ತಿರುಗಿ ನೋಡದೆ ಅದಕ್ಕೆ ಬೆನ್ನಾಗಿ ಬರುತ್ತಾನೆ. ಇದೇ ರೀತಿಯಾಗಿ ಒಂದೊಂದು ರೋಗಲಕ್ಷಣಗಳಿಗೂ ಭಿನ್ನ ಭಿನ್ನವಾದ (ಮೂರು ದಾರಿ ಕಲೆಯುವಲ್ಲಿ) ಮಾನವಾಕಾರದ ಗೊಂಬೆಯನ್ನು ನೆಲದ ಮೇಲೆ ಬರೆದು ಆ ಗೊಂಬೆಯ ಮೇಲೆ ನಿಂಬೆಹಣ್ಣೊ, ತೆಂಗಿನಕಾಯಿಯೋ, ಕಾರೆಮುಳ್ಳೋ ಹೀಗೆ ಯಾವುದಾದದರೂ ಒಂದನ್ನು ಇರಿಸಿಬರುವುದುಂಟು. ಹಾಗೆಯೇ ಒಡೆದ ಗಡಿಗೆಯಲ್ಲಿ ಕೋಳಿಮೊಟ್ಟೆ, ಇದ್ದಿಲು, ಎಲೆ, ಅಡಿಕೆ, ದಕ್ಷಿಣೆಗಳನ್ನು ಇಟ್ಟು ಬರುವುದು ವಾಡಿಕೆ.

ವೈದ್ಯ ಪದ್ಧತಿ

ಮಾಲಾ ಸಮುದಾಯದವರು ತಮ್ಮ ಆರೋಗ್ಯ ರಕ್ಷಣೆಗಾಗಿ ಆಸ್ಪತ್ರೆಗಳಿಗೆ ಭೇಟಿ ಕೊಡುವ ವಿಚಾರ ಕಂಡುಬಂದರು ಸಹ ಕೆಲವು ಮಹಿಳೆಯರು ಮತ್ತು ಪುರಷರು ಹೆಚ್ಚಾಗಿ ಪ್ರತಿಯೊಂದು ಖಾಯಿಲೆಗೂ ಆಸ್ಪತ್ರೆಗೆ ಹೋಗದೇ ಇರುವುದು ತಿಳಿದು ಬರುತ್ತದೆ. ಆಸ್ಪತ್ರೆಗಳ ಇರುವಿಕೆ ಮತ್ತು ಸೌಲಭ್ಯಗಳ ಅರಿವು ಇದ್ದರೂ ಕೆಲವು ಸಂದರ್ಭಗಳಲ್ಲಿ ಮನೆ ಮದ್ದು ಪಾಲಿಸಲು ಮುಂದಾಗುವದನ್ನು ಹಲವಾರು ಕುಟುಂಬಗಳು ಸ್ಪಷ್ಟಪಡಿಸಿವೆ. ಈ ಸಮುದಾಯದವರ ಹಿರಿಯರು ಸಣ್ಣ ಪುಟ್ಟ ತೊಂದರೆಗಳಿಗೆ ಆಸ್ಪತ್ರೆಗೆ ಹೋಗುವುದಿಲ್ಲ. ಆದರೆ ಇತ್ತೀಚಿನ ಯುವತಿಯರು ಮತ್ತು ಯುವಕರು ಕೆಲವು ಖಾಯಿಲೆಗಳಿಗೆ ಆಸ್ಪತ್ರೆಯನ್ನು ಅವಲಂಬಿಸಿರುವದು ತಿಳದು ಬರುತ್ತದೆ.

೧. ಹೊಟ್ಟೆ ನೋವು

ನೆವಣಿ ಅಕ್ಕಿ ಅನ್ನವನ್ನು ಉಪ್ಪು ಕಾರವಿಲ್ಲದೆ ಕುದಿಸಿ ಸಪ್ಪನೆಯ ಅನ್ನವನ್ನು ತಿನ್ನಬೇಕು ಮತ್ತು ನೆವಣಿ ಅಕ್ಕಿಯನ್ನು ತೊಳೆದು ಅದರ ನೀರನ್ನು ಕುಡಿಯುತ್ತಾರೆ. ಇನ್ನೂಂದು ಎಂದರೆ ಮೂರು

ದಿವಸ ಜೋಳದ ಮುದ್ದಿಯನ್ನು ತಿನ್ನುತ್ತಾರೆ. ನಂತರ ಉಪ್ಪು ಹಾಕಿ ಕಾಯಿಸಿದ ನೀರನ್ನು ಕುಡಿಯುತ್ತಾರೆ. ಅಡವಿಯಲ್ಲಿ ಸಿಗುವ ನೆಲಬೇವು ರಂಜಿಕೆಯನ್ನು ಕಲಿಸಿ ನೀರಿನಲ್ಲಿ ಕುದಿಸಿದ ನಂತರ ಜರಡಿಗೆ ಹಾಕಿ ಸೋಸಿದ ನೀರನ್ನು ಕುಡಿಯುತ್ತಾರೆ. ಮಜ್ಜಿಗೆಗೆ ಉಪ್ಪು ಬೆರಸಿಕೊಂಡು ಕುಡಿಯುವುದು ಮತ್ತು ಜೋಳದ ಅನ್ನವನ್ನು ಉಪ್ಪು ಹಾಕದೇ ಕುದಿಸಿ ಊಟ ಮಾಡುವುದು. ಮೂರು ದಿವಸ ದೇವರ ಪೂಜಾರಿ ಮಂತ್ರಿಸಿದ ನೀರನ್ನು ಕುಡಿಯುತ್ತಾರೆ ಮತ್ತು ಗಜ್ಜಗದ ಕಾಯಿ ತೆಯ್ದು ಮಜ್ಜಿಗೆಯಲ್ಲಿ ಹಾಕಿ ಕುಡಿಯುತ್ತಾರೆ.

೨. ಹೊಟ್ಟೆ ಉಬ್ಬರ

ಜೇನಿನ ತುಪ್ಪವನ್ನು ತಿನಿಸುವುದನ್ನು ಮಾಡುತ್ತಾರೆ, ನಂತರ ಚಕ್ಕಡಿ ಗಾಲಿಗೆ (ಚಕ್ರ) ಹಚ್ಚಿದ ಕಪ್ಪುಮಸಿ (ಎರಿಬಂಡಿ)ಯನ್ನು ತೆಗೆದುಕೊಂಡು ಬೆಂಕಿಯ ಮೇಲೆ ಹಾಕಿ ಅದರ ಹೊಗೆಯನ್ನು ಮೂಗಿನಿಂದ ಎಳೆದಕೊಳ್ಳುಬೇಕು ಆಗ ವಾಂತಿ ಆಗುತ್ತದೆ ವಾಂತಿ ಆದ ನಂತರ ಹೊಟ್ಟೆ ಉಬರ ಇಳಿಯುತ್ತದೆ. ನಂತರ ನೀರಿನಲ್ಲಿ ಸೋಡಾಪುಡಿ, ನಿಂಬೆರಸ, ಅಜಿವಾನ, ಯಾಲಕ್ಕಿ, ಉಪ್ಪು, ಬೆರೆಸಿ ಕುಡಿದಾಗ ಹೊಟ್ಟೆ ಉಬ್ಬರ ಇಳಿಯುತ್ತದೆ ಮತ್ತು ಸೈಂದ್ರಲವಣವನ್ನು ಪುಡಿ– ಪುಡಿ ಮಾಡಿ ನುಂಗುವುದು ಮತ್ತು ಪುದಿನಾ ಸೊಪ್ಪಿನ ರಸವನ್ನು ಕುಡಿಯುದನ್ನು ಮಾಡುತ್ತೆವೆ ಎಂದು ಕ್ಷೇತ್ರಕಾರ್ಯದ ಸಮಯದಲ್ಲಿ ತಿಳಿಸಿದರು.

೩. ಕೈಕಾಲಿಗೆ ಗಾಯ

೧. ಸುಣ್ಣ, ಎಮ್ಮೆಯ ಸೆಗಣಿಯನ್ನು ಕಲೆಸಿ ಸುಟ್ಟಗಾಯಕ್ಕೆ ಹಚ್ಚುವುದು. ೨.ಬೇವಿನ ಕಾಂಡ ತೆಯಿದು ಗಾಯಕ್ಕೆ ಹಚ್ಚುವುದು. ೩.ಬೇವಿನ ಎಲೆಗಳನ್ನು ಸಣ್ಣಗೆ ಅರೆದು ಅಚ್ಚುವುದು. ೪.ಉಪಯೋಗಕ್ಕೆ ಬಾರದಿರುವ ಮಾತ್ರೆಯನ್ನು ಸಣ್ಣಗ ಪುಡಿಮಾಡಿ ಗಾಯಕ್ಕೆ ಹಚ್ಚುವುದು. ೫.ನೇರಳೆ ಹಣ್ಣಿನ ಗಿಡದ ಎಲೆಯ ರಸವನ್ನು ಗಾಯಕ್ಕೆ ಹಚ್ಚುವುದು. ೬. ಅರಿಷಿಣ ಕೊಂಬನ್ನು ತೆಯ್ದು ಗಾಯಕ್ಕೆ ಹಚ್ಚುವುದನ್ನು ಮಾಡುತ್ತಾರೆ.

೪. ಎಡವಿ ಬಿದ್ದರೆ

೧. ತಲೆ ಕೊದಲನ್ನು ತೆಗೆದುಕೊಂಡು ಹೆಬ್ಬರಳಿಗೆ ಕಟ್ಟುವುದು. ೨.ನಸಿಪುಡಿ, ತಂಬಾಕು ಎಡವಿದ ಗಾಯಕ್ಕೆ ಹಚ್ಚುವುದು.೩. ತಂಬಾಕು ಸುಣ್ಣ ಕಲೆಸಿ ಎಡವಿದ ಗಾಯಕ್ಕೆ ಹಾಕಿ ಕಟ್ಟುವುದು. ೪.ಕಾಟನ ಅರಬಿಯನ್ನು ಸುಟ್ಟು ಅದರ ಬೂದಿಯನ್ನು ಗಾಯಕ್ಕೆ ಒತ್ತುವುದು. ೫. ಒಲೆಯ ಬೂದಿಯನ್ನು ರಕ್ತ ಬರುವ ಜಾಗಕ್ಕೆ ಒತ್ತುವುದು. ೬. ಬೆರಳಿನ ಉಗುರು ಕಿತ್ತು ಹೋಗಿದ್ದರೆ ಉಳ್ಳಾಗಡ್ಡಿಯ ಒಂದು ಪೊದರು ತೆಗೆದು ಅದಕ್ಕೆ ಒಳ್ಳೆಣ್ಣೆ ಅರಿಶಿಣ ಪುಡಿ ಹಾಕಿ ಬೆಂಕಿಯಲ್ಲಿ ಸುಟ್ಟು ಬಿಸಿ ಇರುವಾಗಲೇ ಉಗುರಿನ ಜಾಗಕ್ಕೆ ಕಟ್ಟುತ್ತಾರೆ.

೫. ಚರ್ಮ ಸುಟ್ಟು ಗಾಯಗಳಾದರೆ

೧. ನಂಜಿನ ಗಿಡದ ಬೇರನ್ನು ತೇಯ್ದು ಸುಟ್ಟಗಾಯಕ್ಕೆ ಹಚ್ಚುತ್ತಾರೆ. ಮತ್ತು ೨.ಅಂಬರಿ ಗಿಡದ ಮುಗುಳು, ಒಣರೊಟ್ಟಿ ತುಂಡು, ತೆಲೆಯ ಕೊದಲು ಈ ಮೂರನ್ನು ಸೇರಿಸಿ ರೊಟ್ಟಿ ಮಾಡುವ

ಅಂಚಿನಲ್ಲಿ ಕರಕು ಆಗುವವರೆಗು ಕಾಯಿಸಿ ನಂತರ ಮೂರನ್ನು ತೆಗೆದುಕೊಂಡು ಕಲ್ಲಿನಿಂದ ಪುಡಿಮಾಡಿ ಕೊಬ್ಬರಿಯ ಎಣ್ಣೆಯಲ್ಲಿ ಕಲೆಸಿ ಗಾಯಕ್ಕೆ ಹಚ್ಚುವುದು. ೩. ಒಳ್ಳೆಣ್ಣೆ ಕಾರಪುಡಿ ಕಲೆಸಿ ಹಚ್ಚುವುದು.

೬. ಕಾಲಿಗೆ ಮುಳ್ಳು ಚುಚ್ಚಿದರೆ

೧. ಎಕ್ಕದ ಗಿಡದ ಹಾಲನ್ನು ಮುಳ್ಳು ನಟ್ಟ ಜಾಗಕ್ಕೆ ಹಚ್ಚುವುದು. ೨. ಕಳ್ಳಿ ಗಿಡದ ಹಾಲನ್ನು ಮುಳ್ಳು ನಟ್ಟ ಜಾಗಕ್ಕೆ ಹಚ್ಚುವುದು. ೩. ಕಡಲೆ ಹಿಟ್ಟನ್ನು ಮುಳ್ಳು ನಟ್ಟ ಜಾಗಕ್ಕೆ ಹಾಕಿ ಕಟ್ಟುವುದು. ೪.ಲೋಳೆಸರದ ರಸವನ್ನು ತೆಗೆದು ಮುಳ್ಳಿನ ಜಾಗಕ್ಕೆ ಹಚ್ಚುವುದು. ೫. ಬಿಸಿಯಾದ ಹಂಚಿಗೆ ಕಾಟನ ಬಟ್ಟೆ ಒತ್ತಿ ಮುಳ್ಳಿನ ಜಾಗಕ್ಕೆ ಕಾವು ಕೊಡುವುದು.

೭. ನಾಯಿ ಕಡಿದರೆ

೧. ನಾಯಿ ಸಾಕಿದವರ ಮನೆಯಲ್ಲಿ ಒಣ ಕೊಬ್ಬರಿಯನ್ನು ಇಸ್ಕೊಂಡು ಬಂದು ಮೂರು ದಿವಸ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ತಿನ್ನುವುದು. ೨. ನಾಯಿ ಕಡಿದ ಜಾಗವನ್ನು ಬೆಚ್ಚಗೆ ಮಾಡುವುದು ೩. ಅಡವಿಯಲ್ಲಿ ಸಿಗುವ ಮುಳ್ಳುಬದನೆಕಾಯಿಯ ಬೀಜವನ್ನು ನಾಯಿ ಕಡಿದ ಗಾಯಕ್ಕೆ ಹಚ್ಚುವುದು.೪. ಮುಳ್ಳು ಪಾಪ್ರಿಕಾಯಿಯ ಗಿಡದ ತಪ್ಪಲವನ್ನು ನೀರಿನಲ್ಲಿ ಕುದಿಸಿ ಮೂರು ದಿವಸ ಕುಡಿಸಬೇಕು ನಂಜು ಬರುವುದಿಲ್ಲ ಎಂಬ ನಂಬಿಕೆ ಇವರದು. ೫. ಬೇವಿನ ಕಡ್ಡಿ ಕರಿ ಅರಬಿ ಸುಟ್ಟು ನಾಯಿ ಕಡಿದ ಗಾಯಕ್ಕೆ ಒಂಬತ್ತು ಸಲ, ಐದು ಸಲ, ಇಲ್ಲವೆ ಹನ್ನೊಂದು ಸಲ ಗಾಯಕ್ಕೆ ಹಚ್ಚುತ್ತಾರೆ. ೬. ನಂಜಿನ ಬೇರನ್ನು ತೇಯ್ದು ಬೆಳಿಗ್ಗೆ ಊಟಕ್ಕಿಂತ ಮುಂಚೆ ತಿನ್ನುತ್ತಾರೆ. ೭. ಮಂತ್ರಿಸಿದ ನೀರನ್ನು ಐದು ದಿವಸದ ತನಕ ಜಳಕ ಮಾಡಿ ಕುಡಿಯುತ್ತಾರೆ ಆ ನೀರು ಶಂಕರ ಎಂಬ ದೇವರ ಹೆಸರಿನ ನೀರು ಆಗಿರುತ್ತದೆ. ೮. ಕಾಲಿಗೆ ಮಂತ್ರಿಸಿದ ಕರಿದಾರವನ್ನು ಶ್ರಾವಣ ಮಾಸದಲ್ಲಿ ಪೂಜೆ ಮಾಡಿಸಿಕೊಂಡು ಕಟ್ಟಿಕೊಳ್ಳುತ್ತಾರೆ.

೮. ಹಾವು, ಚೇಳು, ವಿಷಜಂತುಗಳು ಕಡಿದರೆ

೧. ಅಡವಿಯಲ್ಲಿ ಸಿಗುವ ನಾಗಮುಷ್ಟಿ ಬೇರು ತಗೆದುಕೊಂಡು ಬಂದು ಅದನ್ನು ತೆಯ್ದು ನೀರಿನಲ್ಲಿ ಕಲೆಸಿ ಕುಡಿಯುವುದು. ೨. ನಂಜಿನ ಬೇರನ್ನು ತೇಯ್ದು ಅದನ್ನು ಕಣ್ಣಿನ ಕೆಳಗೆ ಹಚ್ಚಿಕೊಳ್ಳುವುದು. ೩. ಈಶ್ವರಿ ಸಸ್ಯದ ಬೇರನ್ನು ತೇಯ್ದು ಬಿಸಿನೀರಿನಲ್ಲಿ ಹಾಕಿ ಕಲೆಸಿ ಕುಡಿಯುವುದು.

೯. ಚೇಳು ಕಚ್ಚಿದರೆ

೧. ಬಟ್ಟೆಗಳಿಗೆ ಹಚ್ಚುವ ಸೋಪನ್ನು ಸುಟ್ಟು ಚೇಳು ಕಚ್ಚಿದ ಜಾಗಕ್ಕೆ ಹಚ್ಚುತ್ತಾರೆ ಮತ್ತು ೨. ಅಡುಗೆಗೆ ಹಾಕುವ ಉಪ್ಪನ್ನು ನೀರಿನಲ್ಲಿ ಕರಗಿಸಿ ಕೀವಿಗೆ ಉಪ್ಪುನೀರನ್ನು ಹಾಕುತ್ತಾರೆ. ೩. ಸೌಳು ಸುಣ್ಣ ಬೆರೆಸಿ ಚೇಳು ಕಚ್ಚಿದವರ ಮೂಗಿನಲ್ಲಿ ಹಾಕುತ್ತಾರೆ. ೪. ಜಾಪಳ ಬೀಜವನ್ನು ತೇಯ್ದು ಚೇಳು ಕಡಿದ ಜಾಗಕ್ಕೆ ಹಚ್ಚುವುದು. ೫.ಅಂಗಡಿಯಿಂದ ಹೊಸ ಬ್ಲೇಡನ್ನು ತಂದು ಚೇಳು ಕಡಿದ ಜಾಗಕ್ಕೆ ಲಂಬವಾಗಿ ಇಟ್ಟು ಮೆಲ್ಲಗೆ ಎಳೆಯುತ್ತಾರೆ. ೬. ದೀಪವನ್ನು ಹಚ್ಚಿ ಚೇಳು ಕಡಿದ ಜಾಗಕ್ಕೆ ಇಡಬೇಕು ಅದು ಚೇಳಿನ ವಿಷವನ್ನು ಜಗ್ಗಿಕೊಳ್ಳುತ್ತದೆ. (ಎಳೆದುಕೊಳ್ಳುತ್ತದೆ).೭. ಕರಿ ಎಳ್ಳಿನ ತಪ್ಪಲವನ್ನು ಮತ್ತು ಟೀಕಿ

ಗಿಡದ ತಪ್ಪಲುವನ್ನು ಈ ಎರಡು ಗಿಡಿದ ತಪ್ಪಲವನ್ನು ಕಲೆಸಿ ಹಿಂಡಿ ಅದರ ರಸವನ್ನು ತೆಗೆದುಕೊಂಡು ಚೇಳು ಯಾವುದೇ ಎಡಬಾಗಕ್ಕೆ ಕಡಿದಿದ್ದರೆಬಲಬಾಗದ ಕಿವಿಯಲ್ಲಿ ರಸ ಹಿಂಡುವುದು. ಬಲಬಾಗಕ್ಕೆ ಕಚ್ಚಿದ್ದರೆ ಎಡಬಾಗದ ಕಿವಿಗೆ ರಸ ಹಿಂಡುವುದು. ೮. ಸೌಳು ಸುಣ್ಣ ಮತ್ತು ಬಳ್ಳೊಳ್ಳಿ ಈ ಮೂರು ಬೆರೆಸಿ ಬೆಚ್ಚಗೆ ಮಾಡಿ ಚೇಳು ಕಡಿದ ಜಾಗಕ್ಕೆ ಹಾಕುತ್ತಾರೆ.

೧೦. ಕಣ್ಣಿನಲ್ಲಿ ಕಸರು,ಅರಳು ಬಿದ್ದಾಗ

೧. ಕಲ್ಲು ಸಕ್ಕರೆಯನ್ನು ಅರೆದು ಪುಡಿಮಾಡಿ ಮೂರು ದಿವಸ ರಾತ್ರಿ ಮಲಗುವಾಗ ಕಣ್ಣಿನಲ್ಲಿ ಹಾಕಿಕೊಂಡು ಮಲಗಿದರೆ ಕಣ್ಣಿನಲ್ಲಿ ಬಿದ್ದ ಕಸರು ಅರಳು ಹೊರಗೆ ಬರುತ್ತವೆ. ೨. ಅಳ್ಳಿಗೆ (ಹತ್ತಿ) ಬೆಣ್ಣಿ ಹಚ್ಚಿಕೊಂಡು ಕಣ್ಣಿನಲ್ಲಿ ಇಟ್ಟುಕೊಂಡಾಗ ಕಣ್ಣಲ್ಲಿದ್ದಂತ ಕಸರು, ಅರಳು, ಅಳ್ಳಿಗೆ(ಹತ್ತಿ) ಅಂಟಿಕೊಂಡು ಹೊರಗೆ ಬರುತ್ತವೆ ೩.ಕಣ್ಣು ಕೆಂಪಗೆ ಆಗಿದ್ದರೆ ಹುಂಜದ ಚಂಡಿನ ಮೇಲೆ ಇರುವ ಕೆಂಪು ಜುಟ್ಟಲನ್ನು ಕತ್ತಿರಿಸಿ ಅದರಿಂದ ಬರವ ರಕ್ತವನ್ನು ಕಣ್ಣಲ್ಲಿ ಹಾಕುತ್ತಾರೆ.

೧೧. ಹೆರಿಗೆ ಆಗುವ ಮೊದಲು

೧. ಅಡವಿಯಲ್ಲಿ ಸಿಗುವ ಗಂಗೆ ತಪ್ಪಲವನ್ನು ಮಾತನಾಡದೇ ತಂದು ಬೆಲ್ಲದಲ್ಲಿ ಕಲೆಸಿ ತಿನಿಸುವುದು.೨.ಕೊತಂಬರಿ ಬೀಜ, ಬೆಲ್ಲವನ್ನು ಬೆರೆಸಿ ನೀರಿನಲ್ಲಿ ಕುದಿಸಿ ನಂತರ ಸೋಸಿ ಬೆಣ್ಣೆ ಅಥವಾ ತುಪ್ಪದಲ್ಲಿ ಸೋಸಿದ ನೀರನ್ನು ಹಾಕಿ ಕುಡಿಯಲು ಕೊಡುವುದು. ೩. ಒಕ್ಕಳಿಗೆ ಕೊಬ್ಬರಿ ಎಣ್ಣೆಯನ್ನು ಹಾಕುತ್ತಾರೆ. ೪.ಚಹಾ ಕುಡಿಸುತ್ತಾರೆ. ೫. ಬೀಸಿ ನೀರಿನಿಂದ ಹೆರಗೆ ಮುನ್ನ ಜಳಕ (ಸ್ನಾನ)ಮಾಡಿಸುತ್ತಾರೆ.

೧೨. ಉಳಿಕಿನ ಔಷದಿ ಗಾಯವಾಗಿ ಉಳುಕು ಬಿದ್ದರೆ

೧. ಚೆಂಡು ಹೂವಿನ ತಪ್ಪಲು, ತಂಬಾಕು, ಸುಣ್ಣ ಸೇರಿಸಿ ಅರೆದು ಗಾಯಕ್ಕೆ ಹಾಕಿ ಕಟ್ಟುವುದು ಗಾಯದಲ್ಲಿದ್ದ ಹುಳ ಸತ್ತು ಗಾಯ ವಾಸಿಯಾಗುತ್ತದೆ. ೨.ಡಾಂಬರ ಗುಳಿಗೆಯನ್ನು ಪುಡಿ ಮಾಡಿ ಗಾಯಕ್ಕೆ ಹಾಕಿ ಕಟ್ಟುತ್ತಾರೆ. ೩.ಅಂಗಡಿಯಲ್ಲಿ ಸಿಗುವ ಟರಪಂಟೈಲ್ ಎಣ್ಣೆಯನ್ನು ಗಾಯಕ್ಕೆ ಹಚ್ಚುತ್ತಾರೆ. ೪.ಮುಡಿಚಿ ಪುಡಿಯನ್ನು ಗಾಯಕ್ಕೆ ಹಾಕಿ ಕಟ್ಟುತ್ತಾರೆ.

೧೩. ಕಾಲಿಗೆ ಇಸುಬು

೧. ಟೆಂಗಿನ ಚಿಪ್ಪನ್ನು ತುಂಡು ತುಂಡಾಗಿ ಮಾಡಿ ಮಣ್ಣಿನ ಗಡಿಗೆಯಲ್ಲಿ ಕೆಲವು ಗಿಡಮೂಲಿಕೆಗಳನ್ನು ಮತ್ತು ಚಿಪ್ಪನ್ನು ಹಾಕಿ ಗಡಿಗೆಯನ್ನು ಒಲೆಯ ಮೇಲಿಟ್ಟು ಕಾಯಿಸಿದಾಗ ಒಂದು ರೀತಿಯ ಔಷದ ತಯಾರುಗುತ್ತಿತ್ತು, ಅದನ್ನು ಕೋಳಿಯ ಗರಿಯಿಂದ ಏಳು ದಿವಸ ಕಾಲಿನ ಇಸುಬಿಗೆ ಹಚ್ಚಿದರೆ ಇಸುಬು ವಾಸಿಯಾಗುತ್ತಿತ್ತು.

೧೪. ನೆಗಡಿಯಾದರೆ

೧.ವಿಳ್ಯದಲೆಯ ರಸವನ್ನು ಜೇನು ತುಪ್ಪದೊಂದಿಗೆ ಸೇರಿಸಿ ಕುಡಿದಾಗ ನೆಗಡಿ ವಾಸಿಯಾಗುತ್ತದೆ. ೨.ಅರಿಷಿಣದ ಪುಡಿಯನ್ನು ಬಿಸಿನೀರಿನಲ್ಲಿ ಹಾಕಿ ಕುಡಿಯುವದು. ೩.ಮಾಂಸಹಾರವನ್ನು ಸೇವನೆ

ಮಾಡುತ್ತಾರೆ. ೪.ಲೆಕ್ಕಿಯ ತಪ್ಪಲವನ್ನು ಗುಂಡಿಗೆಯಲ್ಲಿ ಕುದಿಸಿ ಕುದಿಯುವ ನೀರಿನಲ್ಲಿ ಬಿಳಿಕಲ್ಲನ್ನು (ಇಟಗಲ್ಲು) ಹಾಕಿ ಕುದಿಸಬೇಕು ನೆಗಡಿ ಬಂದಂತಹ ವ್ಯಕ್ತಿಗಳನ್ನು ಗುಂಡಿಗೆ ಹತ್ತಿರ ಕೂಡಿಸಿ ಅವರಿಗೆ ಕೌದಿಯನ್ನು ಒದಿಸಬೇಕು ಗುಂಡಿಯಲ್ಲಿದ್ದ ಹೊಗೆ ಅವರಿಗೆ ಹೋಗಿ ನೆಗಡಿ ವಾಸಿಯಾಗುತ್ತದೆ. ೫.ಬೆಂಕಿಯ ಮೇಲೆ ಯಾವುದಾದರೂ ಹಿಟ್ಟನ್ನು ಹಾಕಿ ಅರಿಬಿಯನ್ನು (ಮುಸುಕು) ಹೊದಿಸಿಕೊಂಡು ಹೊಗೆಯನ್ನು ಮೂಗಿನಿಂದ ಎಳೆದುಕೊಳ್ಳುತ್ತಾರೆ. ೬.ಅರಳೀಯನ್ನು ಸುಟ್ಟು ಅದರ ಹೊಗೆಯನ್ನು ಮೂಗಿನಿಂದ ಎಳೆದುಕೊಳ್ಳಬೇಕು. ೭.ಬಿಸಿನೀರಿನಲ್ಲಿ ಜಂಡುಬಾಮ್ ಹಾಕಿ ಅದರ ಹೊಗೆಯನ್ನು ಮೂಗಿಗೆ ಗಂಟಲಿಗೆ ಎಳೆದುಕೊಳ್ಳಬೇಕು. ೮.ನೀಲಗಿರಿ ಎಲೆಗಳನ್ನು ನೀರಿನಲ್ಲಿ ಕುದಿಸಿ ಹೊರಬರುವ ಹಬೆಯನ್ನು ಉಸಿರಿನೊಂದಿಗೆ ಎಳೆದುಕೊಳ್ಳಬೇಕು. ೯.ಬೆಂಕಿ ಕೆಂಡದ ಅರಿಷಿಣಪುಡಿ ಹಾಕಿ ಅದ ಹವೆಯನ್ನು ಮೂಗಿನಿಂದ ಎಳೆದುಕೊಳ್ಳುತ್ತಾರೆ. ೧೦.ವಿಳ್ಯದಲೆಯನ್ನು ಹಸಿಯಾಗಿಯೇ ತಿನ್ನುವುದು.

೧೫. ಕೆಮ್ಮು

೧. ಬೆಳ್ಳೊಳ್ಳಿಯನ್ನು ಸುಟ್ಟು ತಿನ್ನುವುದು. ೨. ಬಿಸಿ ನೀರಿಗೆ ಅರಿಷಿಣವನ್ನು ಬೆರೆಸಿ ಕುಡಿಯುವುದು. ೩.ಶುಂಠಿ ಚಾಹಾ ಕುಡಿಯುವುದು. ೪. ಜೇನು ತುಪ್ಪ ತಿನ್ನುವುದು. ತುಳಸಿ ತಿನ್ನವದು. ೫.ಕೊತ್ತಂಬರಿ ಬೀಜ ಜೀರಿಗೆ ಪುಡಿ ಮಾಡಿ ಕುದಿಸಿ ಚಹದೊಂದಿಗೆ ಕುಡಿಯುತ್ತಾರೆ. ೬.ಬೆಳ್ಳೊಳ್ಳಿಯನ್ನು ಸುಟ್ಟು ಬೆಲ್ಲವನ್ನು ಬೆರೆಸಿ ತಿನ್ನುವುದು. ೭.ಊದಿನಕಟ್ಟಿಯನ್ನು ಹಚ್ಚಿ ಗಂಟಲಿನ ಕೀರುನಾಲಿಗೆ ಸುಟ್ಟರೆ ಕೆಮ್ಮು ವಾಸಿಯಾಗುತ್ತದೆ ಮತ್ತು ೮. ಉದ್ದನೆಯ ಕಟ್ಟಿಗೆಗೆ ಸುಣ್ಣ ಉಪ್ಪು ಬೆರೆಸಿ ಕಟ್ಟಿಗೆಗೆ ಹಚ್ಚಿ ಗಂಟಲಿನ ಕೀರುನಾಲಿಗೆಗೆ ಒತ್ತಿದರೆ ಕೆಮ್ಮು ವಾಸಿಯಾಗುತ್ತದೆ. ೯.ಗಂಟಲ ಕೆರೆತ ಇದ್ದರೆ ಒಂದು ಗ್ಲಾಸ್ ನೀರಿಗೆ ಉಪ್ಪು ಬೆರೆಸಿ ೫ ರಿಂದ ೬ ಸಲ ಮುಕ್ಕಳಿಸುತ್ತಾರೆ.

೧೬. ತಲೆನೋವು

೧. ಒಂದೆರಡು ಬಳ್ಳೂಳ್ಳಿ ಪಳಕ, ಇದ್ದಿಲು ಕೂಡಿಸಿ ತೇಯ್ದು ಹಣೆಗೆ ಹಚ್ಚಿಕೊಳ್ಳುವುದು.೨. ಸೌಳು ಸುಣ್ಣವನ್ನು ಬೆರೆಸಿ ಹಣೆಯಲ್ಲಿರುವ ನರಗಳಿಗೆ ಹಚ್ಚುತ್ತಾರೆ ೩.ಹಣೆಗೆ ಅಥವಾ ತಲೆಯ ಸುತ್ತ ಬಿಗಿಯಾಗಿ ಬಟ್ಟೆ ಕಟ್ಟಿಕೊಳ್ಳುತ್ತಾರೆ.

೧೭. ಜ್ವರ

೧. ಲೆಕ್ಕಿ ಎಲೆಗಳನ್ನು ಬಿಸಿಮಾಡಿ ತಲೆಗೆ ಕಟ್ಟಿಕೊಳ್ಳುತ್ತಾರೆ.೨. ಲೆಕ್ಕಿ ಎಲೆಗಳನ್ನು ಬಿಸಿ ಮಾಡಿ ಪಾದದ ಕೆಳಗೆ ಹಾಕಿಕೊಳ್ಳುವುದು.೩.ಚಿಕ್ಕ ಮಕ್ಕಳಿಗೆ ಔಡಲ ಎಲೆಗಳನ್ನು ತಲೆಗೆ ಹಾಕಿ ಕಟ್ಟುವುದು, ೪.ಒಣ ಮೆಣಸಿನಕಾಯಿ ಬಳ್ಳುಳ್ಳಿಯನ್ನು ಒಣ ರೊಟ್ಟಿಯಲ್ಲಿ ಕಲೆಸಿ ತಿನ್ನುತ್ತಾರೆ. ೫.ಇಂಗಳದಹಣ್ಣಿಗೆ ಬೆಲ್ಲ ಸೇರಿಸಿ ತಿಂದರೆ ಜ್ವರ ಕಡಿಮೆಯಾಗುತ್ತದೆ.೬. ಅಮೃತಬಳ್ಳಿಯನ್ನು ಜಜ್ಜಿ ಕೊತ್ತಂಬರಿ ಜೀರಿಗೆ ಸೇರಿಸಿ ಕುದಿಸಿ ಸೋಸಿ ಕುಡಿಯುತ್ತಾರೆ.೭. ನೀರಿನಲ್ಲಿ ಸಕ್ಕರೆ ಚಹಪುಡಿ, ಶುಂಠಿ, ಕೂತಂಬರಿ ಬೀಜ ಹಾಕಿ ಕುದಿಸಿ ಕುಡಿಯುತ್ತಾರೆ.

೧೮. ಹಲ್ಲು ನೋವು

೧. ಹಲ್ಲು ನೋವು ಬಂದರೆ ತೊಂಡೆ ಬಳ್ಳಿಯ ಎಲೆಯ ರಸವನ್ನು ಕಿವಿಯಲ್ಲಿ ಹಾಕಿಕೊಳ್ಳುತ್ತಾರೆ. ೨.ಲವಂಗವನ್ನು ಹಲ್ಲಿನ ಸಂದಿಗೆ ಇಟ್ಟುಕೊಳ್ಳುತ್ತಾರೆ.೩. ನಸಿಪುಡಿ ತಂಬಾಕನ್ನು ಹಲ್ಲಿನ ಸಂಧಿಯಲ್ಲಿ ಇಟ್ಟುಕೊಳ್ಳುತ್ತಾರೆ.

೧೮. ಕಾಮಾಲೆ

೧. ದೊಡ್ಡ ಪತ್ರೆ ಎಲೆಯನ್ನು ಅರೆದು ಅದರಿಂದ ಬರುವ ರಸವನ್ನು ಕುಡಿಯುತ್ತಾರೆ. ೨. ಕರಿಮೆಣಸಿನ ಕಾಳನ್ನು ನಿರಿನಲ್ಲಿ ಕುದಿಸಿ ಅದರ ಕಷಾಯವನ್ನು ಕುಡಿಯುತ್ತಾರೆ.೩. ಜೀರಿಗೆಪುಡಿ ಜೇನುತುಪ್ಪ ಬೆರೆಸಿ ತಿನ್ನುತ್ತಾರೆ. ೪. ಅರಿಷಿನಪುಡಿ ಜೇನುತುಪ್ಪ ಮಜ್ಜಿಗೆಯಲ್ಲಿ ಹಾಕಿಕೊಂಡು ಕುಡಿಯುತ್ತಾರೆ.೫.ಉಳ್ಳಾಗಡ್ಡಿಯನ್ನು ದಿನಾಲು ಸುಟ್ಟು ತಿನ್ನುತ್ತಾರೆ. ೬. ಹಸಿ ಹಾಲಿಗೆ ಸಕ್ಕರೆ ಜೀರಿಗೆಪುಡಿ ಹಾಕಿ ಕುಡಿಯುತ್ತಾರೆ. ೭. ಇಂಗಳದ ಹಣ್ಣನ್ನು ದಿನಾಲು ಎರಡು ತಿನ್ನುತ್ತಾರೆ. ೮. ಕಬ್ಬಿನದ ಹಾಲಿನ ರಸವನ್ನು ಕುಡಿಯುತ್ತಾರೆ.

೧೯. ಜ್ವರ ಬಂದಾಗ ಮಾಂತ್ರಿಕ ವೈದ್ಯನು ಕೊಡುವದು

೧. ಆದಿತ್ಯವಾರ ಅಥವಾ ಗುರುವಾರಗಳಂದು ವೈದ್ಯನು ಯಾರೂ ಇರದ ವೇಳೆಯಲ್ಲಿ ಮೂರು ದಾರಿ ಕಲೆಯುವಲ್ಲಿ ಒಂದು ಮಾನವ ಆಕೃತಿಯನ್ನು ಬರೆಯುತ್ತಾನೆ. ನಂತರ ಒಂದು ಹೊಸ ಗಡಿಗೆಯ ತಳವನ್ನು ತೆಗೆದುಕೊಂಡು ಮೂರು ಲಿಂಬೆ ಹಣ್ಣು, ಮೂರು ಕೋಳಿ ಮೊಟ್ಟೆ, ಮೂರು ತೆಂಗಿನಕಾಯಿ, ಮೂರು ಅರಿಶಿಣ ಕೊಂಬುಗಳನ್ನು ಅದರೊಳಗೆ ಹಾಕಿಕೊಳ್ಳುತ್ತಾರೆ ಜೊತೆಗೆ ಅರಿಶಿಣ, ಕುಂಕುಮ, ಊದುಬತ್ತಿ, ಒಂದು ಕಾಲು ರೂಪಾಯಿ ದಕ್ಷಿಣೆಯನ್ನು ತೆಗೆದುಕೊಳ್ಳುತ್ತಾರೆ ಆ ಎಲ್ಲಾ ವಸ್ತುಗಳನ್ನು ರೋಗಿಯ ಮುಂದೆ ಮೂರು ಸಾರಿ, ಹಿಂದೆ ಮೂರು ಸಾರಿ ನಿವಾಳಿಸಿ ನಿನಗೆ ಬಂದ ರೋಗ ಆ ಅನಿಷ್ಟಕ್ಕೆ ತಗಲಲಿ ಎಂದೂ ಹೇಳಿ ತಾವು ಬರೆದಿರುವ ಗೊಂಬೆಯ ಹೊಟ್ಟೆಯ ಭಾಗಕ್ಕೆ ಅವುಗಳನ್ನು ಇಟ್ಟು ಪೂಜೆ ಮಾಡಿ ಹಿಂದಿರುಗಿ ನೋಡದೆ ಹೊಗುತ್ತಾರೆ. ಹೀಗೆ ಮಾಡಿದಲ್ಲಿ ರೋಗಿಗೆ ರೋಗ ಪರಿಹಾರವಾಗುತ್ತದೆಂಬ ನಂಬಿಗೆ ಅವರದು.

೨೦. ಮಕ್ಕಳು ಹೆಚ್ಚು ಹಟ ಮಾಡುತ್ತಿದ್ದರೆ

ಒಣ ಮೆಣಸಿನಕಾಯಿ, ಉಪ್ಪು ನಿವಾಳಿಸಿ ಅದನ್ನು ಸುಡುವ ವಾಡಿಕೆಯುಂಟು ಸುಟ್ಟಾಗ ಹೆಚ್ಚು ಘಾಟವಾದರೆ, ಉಪ್ಪು ಹೆಚ್ಚು ಚಟಪಟ ಎಂದರೆ ಮಗುವಿಗೆ ಆದ ದೃಷ್ಠಿ ನಿವಾರಣೆಯಾಯಿತೆಂದೂ ಭಾವಿಸಲಾಗುತ್ತದೆ. 'ಈ ವೈದ್ಯರ ನಂಬಿಕೆ ಆಚರಣೆಗಳ ತುಂಬ ವಿಶಿಷ್ಟವಾಗಿದ್ದು, ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ತಿಳಿಸಲಾಗಿದೆ. ಈ ವೈದ್ಯದ ನಂಬಿಕೆ ಆಚರಣೆಗಳು ಹೊಸ ವೈದ್ಯಕೀಯ ಜಗತ್ತಿಗೆ ಅಪರಿಚಿತವಾಗಿ ಕಂಡರೂ, ಅವುಗಳು ಆ ಸಮುದಾಯದ ಸಾಂಸ್ಕೃತಿಕ ತುಣುಕುಗಳಾಗಿ ಉಳಿದಿವೆ.

ಮಾಲ ಸಮುದಾಯದವರ ನಾಟಿ ಔಷಧಿಗಳಲ್ಲಿ ಕೆಲವಂತೂ ಹೊಸ ವೈದ್ಯಕೀಯ ಪದ್ಧತಿಗೆ ಸವಾಲೆನ್ನುವಂತೆ ಕಾರ್ಯನಿರ್ವಹಿಸುವುದು ಕಂಡುಬರುತ್ತದೆ. ಮುಳ್ಳು ನಟ್ಟ ಗಾಯಕ್ಕೆ 'ಉತ್ತರಾಣಿ'

ಸೊಪ್ಪನ್ನು ಹಚ್ಚಿದಲ್ಲಿ ಬೆಳಗಾಗುವುದರೊಳಗೆ ರೋಗಿಯ ಗಾಯ ಮಾಯವಾಗುತ್ತದೆ. ಒಳಗೆ ಕಸುರು ಇದ್ದ ಪಕ್ಷದಲ್ಲಿ ಎರಡು ದಿನದೊಳಗೆ ಕಸರು ಹೊರಗೆ ಬಂದು ಗಾಯ ಮಾಯವಾಗುತ್ತದೆ.

ಉತ್ತರಾಣಿ ಔಷಧ

೧. ಕೆಂಪು ಉತ್ತರಾಣಿ ಬೇರನ್ನು ಎಳೆನೀರಲ್ಲಿ ಅರೆದು ದಿನಂಪ್ರತಿ ಒಂದು ತೊಲದಂತೆ ಹಾಲು ಹೊಟ್ಟೆಗೆ ತಿಂದಲ್ಲಿ ರಕ್ತ ಪ್ರಮೇಯ ಗುಣವಾಗುತ್ತದೆ.

೨. ಉತ್ತರಾಣಿ ಬೇರನ್ನು ಬೆಣ್ಣೆಯಲ್ಲಿ ಬಾಡಿಸಿ ತಿಂದರೆ ಬಿಳಿ ಸೆರಗು ನಿವಾರಣೆಯಾಗುತ್ತದೆ.

೩. ನಾಲ್ಕು ಉತ್ತರಾಣಿ ಸೊಪ್ಪು, ನಾಲ್ಕು ತುಳಸಿ ಸೊಪ್ಪು, ಒಂದು ಸಣ್ಣ ವೀಳ್ಯದೆಲೆ ಮೂರನ್ನು ಸೇರಿಸಿ,

ಗೋಮೂತ್ರದಲ್ಲಿ ಅರೆದು ಮೈಮೇಲಾದ ದದ್ದಿಗೆ (ತದ್ದು) ಅರೆದು ಹಚ್ಚಿದಲ್ಲಿ ವಾರದಲ್ಲಿ ತದ್ದು ಗುಣವಾಗುತ್ತದೆ

ಉಪ್ಪಿಮುಳ್ಳು

ಉಪ್ಪಿಮುಳ್ಳು ಗಿಡದ ಕಾಂಡದ ತೊಗಟೆಯನ್ನು ಅರೆದು ಉಗುರುಸುತ್ತು ಆದ ಬೆರಳಿಗೆ ಕಟ್ಟಿದಲ್ಲಿ 'ಉಗುರು ಸುತ್ತು ಗಾಯ' ಮಾಯವಾಗುತ್ತದೆ.

ಬಂಗಾಳಿ ಎಲೆ

ಬಂಗಾಳಿ ಎಲೆಯ ಕುಡಿಯನ್ನು ರಾಗಿ ಹಿಟ್ಟಿನೊಂದಿಗೆ ಸೇರಿಸಿ ಸಣ್ಣ ಗಾತ್ರದ ರೊಟ್ಟಿಯನ್ನು ಮಾಡಿ ಹಂಚಿನ ಮೇಲೆ ತುಪ್ಪ ಹಾಕಿ ಬೇಯಿಸಿ ಆ ರೊಟ್ಟಿಯನ್ನು ತಿಂದರೆ ಹೊಟ್ಟೆಯೊಳಗಿರುವ ಮದ್ದು ಮತ್ತು ಜೀರ್ಣಾಂಗಗಳಿಗೆ ಸಂಬಂಧಿಸಿದ ಇತರ ರೋಗಗಳು ಗುಣ ಹೊಂದುತ್ತವೆ.

"ಆಡು ಮುಟ್ಟದ ಬಳ್ಳಿ

ಆಡು ಮುಟ್ಟದ ಬಳ್ಳಿಯ ಎಲೆಯ ರಸವನ್ನು ಆಡಿನ ಹಾಲಿನೊಂದಿಗೆ ಸೇರಿಸಿ ಕುಡಿಸಿದಲ್ಲಿ ಹೊಟ್ಟೆಯೊಳಗಿಟ್ಟ ಮದ್ದು ಹೊರ ಬರುತ್ತದೆ ಎನ್ನುವ ನಂಬುಗೆ ಇವರದು.

ಚಳ್ಳವರೆ ಸೊಪ್ಪು

ಚಳ್ಳವರೆ ಸೊಪ್ಪು ಮೂರು, ಹಾಗಲ ಎಲೆ ಮೂರು, ಒಂದು ವೀಳ್ಯೆದೆಲೆ ಈ ಮೂರನ್ನು ಸೇರಿಸಿ ಮಗುವಿನ ನೆತ್ತಿಗೆ ನಾಲ್ಕು ಹನಿ ಹಾಕಿದಲ್ಲಿ ಮುಟ್ಟುದೋಷವಾದ ಮಗುವಿನ ರೋಗ ಗುಣವಾಗುತ್ತದೆ.

ಮಾದಲ ಬೇರು

ಮಾದಲ ಬೇರನ್ನು ಜೇನುತುಪದಲ್ಲಿ ಅರೆದು ಬಸಿರಿ ಹೆಂಗಸರಿಗೆ ಕುಡಿಸಿದಲ್ಲಿ ವಾಂತಿ ತಲೆಸುತ್ತುಗಳು ಕಡಿಮೆಯಾಗುತ್ತವೆ.

ಅಂಕೋಲೆ ಗಿಡದ ಬೇರು

ಅಂಕೋಲೆ ಗಿಡದ ಬೇರನ್ನು ತೆಯ್ದು ಅಕ್ಕಿ ತೊಳೆದ ನೀರಿನಲ್ಲಿ ಸೇರಿಸಿ ಕುಡಿಸಿದ ಬೇಧಿ ನಿವಾರಣೆಯಾಗುತ್ತದೆ.

ಸರ್ಪಗಂಧಿ ಬೇರು

ಸರ್ಪಗಂಧಿ ಬೇರನ್ನು, ನಿಂಬೆಯ ರಸದಲ್ಲಿ ತೆಯ್ದು ನೆಕ್ಕಿಸಿದಲ್ಲಿ ಕಡಿದ ಹಾವಿನ ವಿಷವು ಇಳಿಯುತ್ತದೆ.

ಲೆಕ್ಕಿಯ ತಪ್ಪಲು, ಕಳ್ಳಿ ತಪ್ಪಲು, 'ಪರಂಗಿ ತಪ್ಪಲು' ಮೂರನ್ನು ಸೇರಿಸಿ ಓಲೆಯ ಮೆಲೆ ಇಟ್ಟು ಕಾಯಿಸಿದರೆ ಒಂದು ರೀತಿಯ ಎಣ್ಣೆ ಬರುತ್ತದಂತೆ. ಶುದ್ಧವಾದ ತೆಂಗಿನ ಎಣ್ಣೆ, ಎಳ್ಳೆಣ್ಣೆ, ಔಡಲ ಎಣ್ಣೆಗಳನ್ನು ಸಮಾನವಾಗಿ ಸೇರಿಸಿಕೊಂಡು, ಒಂದು ಹೊಸ ಗಡಿಗೆಯಲ್ಲಿ ಇವುಗಳನ್ನು ಕುದಿಯಲು ಇಡುತ್ತಾರೆ. ಎಣ್ಣೆ ಕುದಿಯತೊಡಗಿದ ನಂತರ ತೆಗೆದ ತೆಪ್ಪಲುಗಳಿಂದ ದೊರೆತ ಎಣ್ಣೆಯನ್ನು ಸೇರಿಸುತ್ತಾರೆ ನಂತರ ಆ ಎಣ್ಣೆ ತಂಪಾದ ನಂತರ ಕೀಲು ನೋವಿಗೆ ಹಚ್ಚಿಕೊಂಡಲ್ಲಿ ರೋಗ ನಿವಾರಣೆಯಾಗುತ್ತಂತೆ.

ನುಗ್ಗೆ ಗಿಡದ ಸೊಪ್ಪು

ನುಗ್ಗೆ ಗಿಡದ ಸೊಪ್ಪನ್ನು ಬೇಳೆಯಲ್ಲಿ ಇಟ್ಟು ತಳಿಸಿಕೊಂಡು ತಿಂದಲ್ಲಿ ಹೊಟ್ಟೆಯೊಳಗಿರುವ ಕಲ್ಮಶಗ ನಿವಾರಣೆಯಾಗುತ್ತದೆ. ಹೀಗೆ ಹತ್ತು ಹಲವು ರೀತಿಯಲ್ಲಿ ಮನುಷ್ಯನಿಗೆ ಬರುವ ರೋಗಗಳಿಗೆ ವೈದ್ಯ ಮಾಡುವುದರೊಂದಿಗೆ, ತಮ್ಮೊಂದಿಗೆ ಸಹಜೀವನ ನಡೆಸುವ ಪ್ರಾಣಿ ವೈದ್ಯದಲ್ಲಿಯೂ ಮಾಲ ಸಮುದಾಯದವರು ಪರಿಣಿತರು.

ಪ್ರಾಣಿವೈದ್ಯ

ತಮ್ಮೊಳಗಿನ ರೋಗಗಳನ್ನು ಪತ್ತೆ ಹಚ್ಚಿ ಅವುಗಳಿಗೆ ನಿವಾರಣೆಗಳನ್ನು ಕಂಡುಕೊಂಡಂತೆ ತನ್ನೊಂದಿಗೆ ಸಹಜೀವನ ನಡೆಸುವ ತನ್ನ ಬದುಕಿಗೆ ಒಂದು ರೀತಿಯಲ್ಲಿ ಆಧಾರ ಸ್ತಂಭಗಳಂತಿರುವ ತನ್ನ ಸಾಕು ಪ್ರಾಣಿಗಳ ಕುರಿತು ಮಾನವನಿಗೆ ಕಾಳಜಿ ಹೆಚ್ಚು. ಮನುಷ್ಯನಿಗೆ ಮಾತನಾಡುವ ಶಕ್ತಿ ಇದೆ. ತನ್ನ ದೇಹದೊಳಗೆ ನಡೆಯುವ ವ್ಯತ್ಯಾಸಗಳನ್ನು (ರೋಗಗಳನ್ನು) ಕುರಿತು ಬಾಯಿ ಬಿಟ್ಟು ಹೇಳಬಲ್ಲ. ಆದರೆ ಆತನ ಒಡನಾಡಿ ಸಾಕು ಪ್ರಾಣಿಗಳಿಗೆ, ಮಾತನಾಡಲು ಬಾಯಿ ಇಲ್ಲ. ಅವುಗಳಿಗೆ ಬರುವ ರೋಗಗಳನ್ನು ವೈದ್ಯನು ಪ್ರಾಣಿಗಳ ಬಾಹ್ಯ ಚರ್ಯೆಗಳನ್ನು ಗಮನಿಸಿ ಅದಕ್ಕೆ ಬಂದ ರೋಗ ಎಂತಹದು ಎಂದು ಗುರುತಿಸಿರಬೇಕಾಗುತ್ತದೆ. ಹೀಗಾಗಿ ಮನುಷ್ಯ ವೈದ್ಯನಕ್ಕಿಂತ ಪ್ರಾಣಿ ವೈದ್ಯನು ಹೆಚ್ಚು ಸೂಕ್ಷ್ಮ ಸಂವೇದನೆ ಇರುವವನಾಗಬೇಕಾಗುತ್ತದೆ. ಪ್ರಾಣಿ ವೈದ್ಯ ನಿನ್ನೆ ಮೊನ್ನೆಯದಲ್ಲ. ಅದಕ್ಕೆ ಅದರದೇ ಆದ ಸುದೀರ್ಘ ಇತಿಹಾಸ ಮತ್ತು ಪರಂಪರೆ ಇದೆ. ಅಲ್ಲದೆ ಇತರ ಜಾನಪದ ರೂಪಗಳಂತೆ ಪ್ರಾಣಿ ವೈದ್ಯದ ಉಗಮ, ವಿಕಾಸಗಳು, ಸ್ವರೂಪ, ಲಕ್ಷಣಗಳು ಮತ್ತು ತಂತ್ರ ವಿಧಾನಗಳು ಪ್ರಪಂಚದಾದ್ಯಂತ ಒಂದೇ ರೀತಿಯಾಗಿವೆ. 'ತಮ್ಮ 'ಮೊದಲ ಹಸಿವು' ಎಂಬ ರೋಗ ನಿವಾರಿಸಿಕೊಳ್ಳಲು ಪ್ರಾಣಿಗಳು ತಮಗೆ ತಿಳಿದ ನೂರಾರು ಬಗೆಯ ಸೊಪ್ಪು ಸೆದೆ, ಹಣ್ಣು ಹಂಪಲು, ಗಡ್ಡೆ ಗೆಣಸು ಮಾಂಸ

ಮಡ್ಡಿಗಳನ್ನು ತಿಂದಿರಬೇಕು'. (ಶಿವರಾಮ ವಿ.ಎಸ್. ೧೯೮೯, ೩೪) ಪ್ರಾಣಿಗಳ ಜೀವನ ವಿಧಾನ ಅವುಗಳ ಆಹಾರದ ಆಯ್ಕೆ ಮುಂತಾದವುಗಳನ್ನು ಗಮನಿಸುತ್ತಾ ಬಂದ ಮನುಷ್ಯನು, ಅವುಗಳಿಗೆ ಬರುವ ರೋಗ, ರೋಗಕ್ಕೆ ಕೊಡುವ ಚಿಕಿತ್ಸೆಗಳ ಕುರಿತು ನಿಸರ್ಗದಲ್ಲಿ ತನಗೆ ದೊರೆತ ಅನುಭವದ ಮೂಲಕ ಗುರುತಿಸಿಕೊಂಡಿರಬೇಕೇನೋ ? ಉದಾ. ನಾಯಿ, ಬೆಕ್ಕುಗಳು ತಮಗೆ ಅಜೀರ್ಣವಾದಾಗ ಇಬ್ಬನಿಯಿಂದ ಕೂಡಿದ ಗರಿಕೆ ಹುಲ್ಲನ್ನು ತಿಂದು ವಾಂತಿ ಮಾಡಿಕೊಳ್ಳುತ್ತವೆ. ದನಕ್ಕೆ ಗಾಯವಾದರೆ, ನಾಲಿಗೆಯಿಂದ ನೆಕ್ಕಿ ಗಾಯವನ್ನು ಗುಣಪಡಿಸಿಕೊಳ್ಳುತ್ತದೆ. ಹಕ್ಕಿಯೊಂದಕ್ಕೆ ಕಾಲು ಮುರಿದಲ್ಲಿ ಅದು ತನ್ನ ಮುರಿದ ಕಾಲಿಗೆ ಒಂದು ರೀತಿಯ ಮಣ್ಣನ್ನು ಲೇಪಿಸಿಕೊಂಡು ಕಾಲಿಗೆ ಕಟ್ಟನ್ನು ಹಾಕಿಕೊಳ್ಳುತ್ತದೆ. ಇವೇ ಮುಂತಾಗಿ ಪ್ರಾಣಿಗಳು ತಮಗೆ ತಾವೇ ಸ್ವಯಂ ವೈದ್ಯ ಮಾಡಿಕೊಳ್ಳುವ ಕ್ರಮವನ್ನು ಗಮನಿಸಿದರೆ ಪ್ರಾಣಿಗಳ ವೈದ್ಯ ಪರಂಪರೆ ಮತ್ತು ಪ್ರಾಚೀನತೆಯ ಅರಿವು ನಮಗೆ ದೊರೆಯುತ್ತದೆ.

"ಪ್ರಾಣಿ ವೈದ್ಯ ವಾಸ್ತವವಾಗಿ ನಿಸರ್ಗದ ಸಹಜ ಪ್ರೇರಣೆಯಿಂದ ಅನಿವಾರ್ಯವಾಗಿ ರೂಪಗೊಂಡುದಾಗಿದೆ. ಮನುಷ್ಯ ತನ್ನನ್ನು ರಕ್ಷಿಸಿಕೊಳ್ಳುವ ಜೊತೆಗೆ ತನ್ನ ಪರಿಸರವನ್ನು ಸಂರಕ್ಷಿಸಿಕೊಳ್ಳುವ ಪ್ರವೃತ್ತಿಯನ್ನು ಹೊಂದಿದ ಪರಿಣಾಮವಿದು. ತನ್ನ ಯೋಗಕ್ಷೇಮದೊಡನೆ ಸಾಕು ಪ್ರಾಣಿಗಳ ಆರೋಗ್ಯ ಮುಖ್ಯವೆಂದು ಕೃಷಿಕ ಗಮನದಲ್ಲಿಟ್ಟುಕೊಂಡಿದ್ದರಿಂದ ಪ್ರಾಣಿ ವೈದ್ಯ ಹೆಚ್ಚು ಪ್ರಾಮುಖ್ಯತೆ ಪಡೆದಿದೆ."೫ ಇಂದು ಪಶುಗಳನ್ನು ಗಮನಿಸಲೆಂದೇ ಪಶುವೈದ್ಯ ಚಿಕಿತ್ಸಾಲಯಗಳಿದ್ದರೂ, ಜನಪದ ವೈದ್ಯವೇ ಹೆಚ್ಚು ಬಳಕೆಯಲ್ಲಿದೆ. ಪ್ರಾಣಿ ವೈದ್ಯದಲ್ಲಿ ಮೊದಲ ಹಂತವಾಗಿ ಪ್ರಾಣಿಗಳಿಗೆ ಬಂದ ರೋಗ ಲಕ್ಷಣಗಳನ್ನು ಗುರುತಿಸುವುದು. ರೋಗ ಯಾವುದೆಂದೂ ಗುರುತಿಸದೇ ಹೋದ ಪಕ್ಷದಲ್ಲಿ ಅದಕ್ಕೆ ಕೊಡುವ ಚಿಕಿತ್ಸೆಯು ವ್ಯರ್ಥವಾಗುವ ಸಾಧ್ಯತೆ ಹೆಚ್ಚು. ಇವು ಎಲ್ಲವೂ ಪ್ರಾಣಿ ವೈದ್ಯನಿಗೆ ಅನುಭವ (ಸತತ)ದ ಮೂಲಕ ದೊರೆಯುತ್ತದೆ. ಪ್ರಾಣಿ ತಿನ್ನುವ ಹುಲ್ಲಿನ ಮೂಲಕ ಕೆಲವು ಬ್ಯಾಕ್ಟೀರಿಯಾ ವೈರಸ್‌ಗಳು ಪ್ರಾಣಿಯ ದೇಹವನ್ನು ಪ್ರವೇಶಿಸುವ ಸಾಧ್ಯತೆಗಳು ಹೆಚ್ಚಾಗಿವೆ. ದನಗಳಿಗೆ ಬರುವ 'ಕಾಲುಬಾವು; ಮತ್ತು 'ಬಾಯಿ ಬಾವು' ರೋಗವು ಹುಲ್ಲಿನ ಮೂಲಕ ಬಂದ ರೋಗವಾಗಿರುತ್ತದೆಂದು ತಿಳಿಸುತ್ತಾರೆ. ಈ ರೋಗ ಬಂದಾ ಹುಲ್ಲು ತನ್ನದೆ, ನಡೆಯಲಾಗದೆ, ಬವಣೆ ಪಡುವ ದನವನ್ನು ಗಮನಿಸಿ, ಅದಕ್ಕೆ ತಕ್ಕದಾದ ಔಷಧಿಯನ್ನು ವೈದ್ಯನು ಕೊಡುತ್ತಾನೆ.

ಕೃಷಿ ವ್ಯವಸ್ಥೆಯನ್ನು ನೆಚ್ಚಿದ ಕೃಷಿಕನಿಗೆ, ಪ್ರಾಣಿಗಳ ಅವಶ್ಯಕತೆ ಇರುವಂತೆಯೇ ಅಲೆಮಾರಿಗಳಿಗೂ ಪ್ರಾಣಿಗಳ ಸಹಾಯ ಮತ್ತು ಅಗತ್ಯತೆ ಇದ್ದಿತು. ತಮ್ಮ ಹೇರನ್ನು ಹೋರುವ ಹಾಗೂ ಇತರ ನಾನಾ ಉದ್ದೇಶಗಳಿಗಾಗಿ ಬಳಕೆಗೊಳ್ಳುವ ಪ್ರಾಣಿಗಳಿಗೆ ಬರುವ ರೋಗಗಳಿಗೆ ನೀಡಬೇಕಾದ ಚಿಕಿತ್ಸೆಯ ಕುರಿತು ಸಮುದಾಯದೊಳಗಿನ ಕೆಲವೇ ಕೆಲವು ವ್ಯಕ್ತಿಗಳಿಗೆ ತಿಳಿದಿರುತ್ತದೆ. ಪ್ರಾಯಶಃ ಮಾನವ ವೈದ್ಯ ಪದ್ಧತಿಯಲ್ಲಿ ಜರುಗಿದಂತೆ ಇಲ್ಲಿಯೂ ರೋಗ ನಿವಾರಕ ಔಷಧಿಗಳ ತಿಳುವಳಿಕೆಯು ಪರಂಪರೆಯಾಗಿಯೂ, ಅನುವಂಶಿಕವಾಗಿ ಅತ್ಯಂತ ರಹಸ್ಯವಾದ ಕ್ರಮದಲ್ಲಿ ಸಾಗಿಬಂದಿರಬೇಕು. ಔಷಧಿಗಳಿಗೆ ಅವಶ್ಯಕವಾಗಿ ಬಳಸುವ ನಾರು ಬೇರುಗಳ ಕುರಿತು ಇತರರಿಗೆ ತಿಳಿಸಿದಲ್ಲಿ ತಮಗೆ ಇರುವ ರೋಗ ಗುಣಪಡಿಸುವ ಶಕ್ತಿಯು ಮಾಯವಾಗಿಬಿಡುತ್ತದೆನ್ನುವ ಗಾಢವಾದ ನಂಬಿಗೆ

ಇವರಲ್ಲುಂಟು. ಸಾಮಾನ್ಯವಾಗಿ ಬಾಯಿಲ್ಲದ ಪ್ರಾಣಿಗಳಿಗೆ ಔಷಧಿ ಕೊಟ್ಟು ರೋಗ ಗುಣಪಡಿಸಿದರೆ ತಮಗೆ ಪುಣ್ಯ ಫಲಿಸುತ್ತದೆ ಎನ್ನುವ ನಂಬುಗೆ ಇವರಲ್ಲುಂಟು. ಹಾಗೆಯೇ ಪ್ರಾಣಿಗಳಿಗೆ ಔಷಧಿ ಕೊಡುವುದು ಪವಿತ್ರ ಕಾರ್ಯವೆಂದು ಭಾವಿಸುವ ಈ ಸಮುದಾಯದ ವೈದ್ಯರು ತಾವು ಕೊಟ್ಟ ಔಷಧಿಗೆ ಪ್ರತಿಫಲವನ್ನು ಬಯಲಾರರು. ಪ್ರತಿಫಲವನ್ನು ಬಯಸುವುದು ಪಾಪದ ಕಾರ್ಯ ಎನ್ನುವ ನಂಬುಗೆ ಇವರಲ್ಲಿ ನೆಲೆಗೊಂಡಿದೆ.

ಪ್ರಾಣಿಯೊಂದಕ್ಕೆ ಕಾಲೂ ಮುರಿದಲ್ಲಿ 'ಹರಿದಚ್ಚಗಿನ ಸೊಪ್ಪು' ಅದಕ್ಕೆ ಸಮ ಪ್ರಮಾಣದಲ್ಲಿ 'ಅರಿಶಿನ ಪುಡಿ' ಅದೇ ಕ್ರಮದಲ್ಲಿ 'ಉದ್ದಿನ ಪುಡಿ' ಕೋಳಿಮೊಟ್ಟೆಯ ಬಿಳಿ ರಸ ಸೇರಿಸಿ ಸೊಪ್ಪು ನುಣ್ಣಗೆ ಆಗುವಂತೆ ಅರೆದು ಮುರಿದ ಕಾಲನ್ನು ಹೊಂದಿಸಿ ಕಾಲಿನ ಮೇಲ್ಭಾಗದಲ್ಲಿ ಔಷಧಿ ಲೇಪನ ಮಾಡಿ ಜೋಡಿಸಿದ ಅಂಗವು ಜಾರದಂತೆ ಬಿದಿರ ಡಬ್ಬೆಗಳನ್ನು ಇಟ್ಟು ಆ ಔಷಧಿಯ ಲೇಪನ ಮಾಡುತ್ತಾ ಬಿಳಿಯ ಬಟ್ಟೆಯನ್ನು ಕಾಲಿನ ಸುತ್ತಲೂ ಸುತ್ತಿ ಕಟ್ಟು ಹಾಕುವ ಪದ್ಧತಿ ಇವರಲ್ಲುಂಟು.

ನಾಲಿಗೆ ಮುಳ್ಳುಬಂದು ಬಂದು ಹುಲ್ಲನ್ನು ತಿನ್ನದೆ ಇದ್ದ ಪಕ್ಷದಲ್ಲಿ ನಾಲಿಗೆಗೆ ಮದ್ದುಗುಣಿಕೆಯ ಕಾಯಿಯ ಮುಳ್ಳುಗಳಿಂದ ನಾಲಿಗೆಯನ್ನು ತಿಕ್ಕುವ ಕ್ರಮ ಇವರಲ್ಲುಂಟು. ದನಗಳ ಹೊಟ್ಟೆ ಉಬ್ಬರಿಸಿಕೊಂಡಿದ್ದರೆ, ಗೊಟ್ಟದ ಮೂಲಕ ಒಳ್ಳೆಣ್ಣೆಯನ್ನು ಕುಡಿಸುವ ಪದ್ಧತಿವುಂಟು. ಹೀಗೆ ಮಾಡಿದಲ್ಲಿ ದನಗಳ ಹೊಟ್ಟೆ ಉಬ್ಬಳಿಕೆ ಕಡಿಮೆ ಆಗುವುದು. ಕೋಳಿ ಪ್ರಿಯರಾದ ಮಾಲ ಸಮುದಾಯದವರು ಕೋಳಿಗಳನ್ನು ಸ್ವತಃ ಸಾಕಿಕೊಳ್ಳುತ್ತಾರೆ. ಕೋಳಿಗಳಿಗೆ ಬರುವ ತೂಕಡಿಗೆ ರೋಗದ ನಿವಾರಣೆಗೆ ಬಿಳಿ ಉಳ್ಳಾಗಡ್ಡೆಯನ್ನು ಸಣ್ಣಗೆ ಹೆಚ್ಚಿ ಕೋಳಿಗೆ ತಿನ್ನಲು ಕೊಡುವುದುಂಟು. ಸಾಮಾನ್ಯವಾಗಿ ಇಂತಹ ಸಾಮಾನ್ಯ ಚಿಕಿತ್ಸೆಯನ್ನು ಎಲ್ಲಾ ಮಾಲ ಸಮುದಾಯದ ಹೆಣ್ಣು ಮಕ್ಕಳು ಅರಿತುಕೊಂಡವರಾಗಿರುತ್ತಾರೆ.

ಪ್ರಾಣಿಗಳ ವೈದ್ಯ ಪದ್ಧತಿಯಲ್ಲಿಯೂ ಮನುಷ್ಯ ವೈದ್ಯ ಪದ್ಧತಿಯಲ್ಲಿಯಂತೆಯೇ ಮಂತ್ರ ತಂತ್ರಗಳಿಗೆ ಪ್ರಾಮುಖ್ಯ ಕೊಡುವುದು ಕಂಡುಬರುತ್ತದೆ. ಇವರಲ್ಲಿ ಮಾಟ ಮತ್ತು ವೈದ್ಯಕ್ಕೆ ನಿಕಟ ಸಂಬಂಧಿವೆ. "ಪ್ರಾಣಿಗಳ ರೋಗ ರುಜಿನಗಳಿಗೆ ಅಲೌಕಿಕ ಶಕ್ತಿಗಳೇ ಕಾರಣ ಎಂಬ ನಂಬಿಗೆ ಬಲವಾಗಿ ಬೇರೂರಿರುವುದು ಇದಕ್ಕೆ ಮೂಲ"೬ ಪ್ರಾಣಿಗಳಲ್ಲಿ ಕೆಲವೊಮ್ಮೆ ಹವಾಮಾನದ ವ್ಯತ್ಯಾಸದಿಂದಾಗಿ ರೋಗಗಳು ಬರುವುದುಂಟು. ಈ ರೀತಿ ಬಂದ ರೋಗಗಳಿಗೆ ತಮ್ಮ ನಾಟಿ ಪದ್ಧತಿ ವೈದ್ಯೋಪಚಾರ ಮಾಡುವುದರೊಂದಿಗೆ ಮಾಟ ಮಂತ್ರಗಳಿಂದಲೂ ಆರೋಗ್ಯವನ್ನು ತರಲು ಪ್ರಯತ್ನಿಸುವುದುಂಟು. ಕಾಲುಬಾವು, ಬಾಯಿ ಬಾವಿನಂತಹ ಸಾಂಕ್ರಾಮಿಕ ರೋಗಗಳು ಬಂದಾಗ ವೈದ್ಯೋಪಚಾರ ಮಾಡಲಾಗುತ್ತದೆ. ಹಾಗೆಯೇ ಮನೆಯ ಹಿರಿಯನಾದವನು ಮಧ್ಯರಾತ್ರಿಯ ಹೊತ್ತಿನಲ್ಲಿ ಕಾಡಿಗೆ ತೆರಳಿ ಹೆಸರಿಲ್ಲದ ಗಿಡದ ತಪ್ಪಲನ್ನು ತಂದು ರೋಗ ಬಂದ ದನಕ್ಕೆ ಆ ತೊಪ್ಪಲಿನಿಂದ ನಿವಾಳಿಸಿ ಹರಿಯುವ ನೀರಿಗೆ ಅದನ್ನು ಬಿಡುವ ಪದ್ಧತಿ ಇವರಲ್ಲುಂಟು. ತೊಪ್ಪಲು ಯಾವ ರೀತಿಯಲ್ಲಿ ನೀರಿನೊಂದಿಗೆ ಹರಿದು ದೂರ ದೂರಕ್ಕೆ ಹೋಗುತ್ತದೆಯೋ ಹಾಗೆ ರೋಗವು ದನದಿಂದ ದೂರಕ್ಕೆ ತೊಲಗುತ್ತದೆನ್ನುವ ನಂಬುಗೆ ಇವರಲ್ಲುಂಟು.

ಎಮ್ಮೆ ಈಳಿದಾಗ ಅದಕ್ಕೆ ದೃಷ್ಟಿ ತಾಗಬಾರದೆಂಬ ಕಾರಣಕ್ಕಾಗಿ ಕುತ್ತಿಗೆಗೆ ಚಿಪ್ಪು, ನಿಂಬೆ ಹಣ್ಣು, ಕೆಂಪು ಮೆಣಸಿನಕಾಯಿ, ಕೇರು ಬೀಜ ಕವಡೆಗಳನ್ನು ಕಂಬಳಿಯ ಕರಿದಾರದಲ್ಲಿ ಪೋಣಿಸಿ ಕಟ್ಟುತ್ತಾರೆ.

ಹಸುವಿನ ಹೊಟ್ಟೆ ಉಬ್ಬರಿಸಿಕೊಂಡಾಗ ಸಣ್ಣ ಮಕ್ಕಳನ್ನು ಬೆತ್ತಲೆಗೊಳಿಸಿ ಹಸುವಿನ ಹೊಟ್ಟೆಯ ಕೆಳಭಾಗದಿಂದ ಹಸುವನ್ನು ಮೂರು ಬಾರಿ ಸುತ್ತಿಸುತ್ತಾರೆ. ಆ ಮಗು ಸುತ್ತಿದರೆ ಹೊಟ್ಟೆ ಉಬ್ಬರ ಕೊನೆಗೊಳ್ಳುತ್ತದೆಂದು ನಂಬಲಾಗುತ್ತದೆ. ಇದರೊಂದಿಗೆ ಹೊಟ್ಟೆ ಉಬ್ಬರಿಸಿದ ಹಸುವಿಗೆ ಒಳ್ಳೆಣ್ಣೆಯನ್ನು ಗೊಟ್ಟದಲ್ಲಿ ಹಾಕಿ ಕುಡಿಸುವುದುಂಟು. ಒಳ್ಳೆಣ್ಣೆಯನ್ನು ಕುಡಿದ ಹಸುವಿಗೆ ಅಪಾರ ವಾಯು ಹೊರ ಹೋಗಿ ಹೊಟ್ಟೆ ಉಬ್ಬರ ತೊಲಗುತ್ತದೆ. 'ಹಸುವಿಗೆ ಕೆಟ್ಟ ಹುಳ ಮುಟ್ಟಿ ಬಾವು ಬಂದಲ್ಲಿ ಕುಡುಗೋಲಿನಿಂದ ನಿವಾಳಿಸಿ ಮಂತ್ರ ಹೇಳಿ ಬಾವನ್ನು ಇಳಿಸುವ ಕ್ರಮವಿದೆ.'

'ಕರು ವಿಪರೀತವಾಗಿ ಉಚ್ಚೆಕೊಳ್ಳುತ್ತಾ ಹೋದರೆ ಕಾಸರಕನ ಸೊಪ್ಪಿನಿಂದ ತಯಾರಿಸಿದ ಔಷಧಿಯನ್ನು ಕೊಡುವುದುಂಟು' ಅದರೊಂದಿಗೆ ಕಾಳಿಯ ಸಹೋದರನೆಂದು ಭಾವಿಸುವ 'ಮೂಗು ಬಸಪ್ಪನಿಗೆ' ಹಣ್ಣುಕಾಯಿ ಕೊಡುವುದಾಗಿ ಬೇಡಿಕೊಳ್ಳುವುದುಂಟು.

ಸೂಜಿ, ಮೊಳೆಯಂತಹ ಲೋಹದ ವಸ್ತುಗಳನ್ನು ಪಶು ನುಂಗಿದರೆ ಉತ್ತರಾಣಿಯ ಸೊಪ್ಪು ಮತ್ತು ಸೈಂದ್ರಲವಣವನ್ನು ಸೇರಿಸಿ ಅರೆದು ದಿವಸಕ್ಕೆ ಮೂರು ಸಾರಿಯಂತೆ ಪಶುವಿಗೆ ಕೊಟ್ಟರೆ ದೇಹದೊಳಗೆ ಸೇರಿದ ಉಪಕರಣಗಳು ದೇಹದಿಂದ ಹೊರಬರುತ್ತವೆ. 'ಉಪ್ಪಿ ಮುಳ್ಳಿನ ಸೊಪ್ಪು ಒಂದು ತೊಲೆ, ಬಾಗೆ ಮರದ ಚಕ್ಕೆ ಒಂದು ತೊಲೆ, ಕಾಡು ಮೆಣಸಿನ ಸೊಪ್ಪು ಒಂದು ತೊಲೆ, ಕರಿ ಮೆಣಸಿನ ಕಾಳು ಎರಡು ತೊಲೆ, ಬೊಳ್ಳಳ್ಳಿ ಒಂದು ತೊಲೆ ಈ ಪ್ರಕಾರವಾಗಿ ಇವುಗಳನ್ನು ಪುಡಿ ಮಾಡಿ ಇಟ್ಟುಕೊಳ್ಳುತ್ತಾರೆ. ಎರಡು ಗುಳಿಗೆಗಳನ್ನು ಬಿಸಿ ನೀರಿನೊಂದಿಗೆ ಸೇರಿಸಿ ದಿನಕ್ಕೆ ಎರಡು ಬಾರಿಯಂತೆ ಪಶುಗಳಿಗೆ ಕುಡಿಸುವುದರಿಂದ ಗುಲ್ಮ ರೋಗ ವಾಸಿಯಾಗುತ್ತದೆ.

"ಅಂಕೋಲೆ ಮರದ ಬೇರಿನ ತೊಗಡೆ ಒಂದು ಹಿಡಿ, ಅಂಕೋಲೆ ಮರದ ಸೊಪ್ಪು ಒಂದು ಹಿಡಿ ತೆಗೆದುಕೊಂಡು ಸಣ್ಣಗೆ ಅರೆದು ಒಂದು ಸೇರು ರಾಗಿ ಗಂಜಿಗೆ ಸೇರಿಸಿ ಬೆಳಿಗ್ಗೆ ಅರ್ಧಸೇರು ಗಂಜಿ ರಾತ್ರಿ ಅರ್ಧ ಸೇರು ಗಂಜಿಯನ್ನು ಕುಡಿಸುವುದರಿಂದ ಹಸುವಿನ ಹೊಟ್ಟೆಯ ಬಾವು ಕಡಿಮೆಯಾಗುತ್ತದೆ. ಈ ಚಿಕಿತ್ಸೆಯನ್ನು ಮೂರು ದಿನವಾದರೂ ನಡೆಸಬೇಕು ಅಂಕೋಲೆ ಮರದ ತೊಗಟೆಯನ್ನು ನಿಂಬೆ ಹಣ್ಣಿನ ರಸದಲ್ಲಿ ತೆಯ್ದು ಪಶುಗಳಿಗೆ ಕೊಡುವುದರಿಂದ ಪಶುಗಳಿಗೆ ಬರುವ ದಮ್ಮು ಗೂರಲು ರೋಗಗಳು ವಾಸಿಯಾಗುತ್ತವೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು.

"ಒಣಗಿ ಉದಿರಿದ ಕಕ್ಕೆ ಮರದ ಕಾಯಿಯನ್ನು ಕುಟ್ಟಿ ಪುಡಿ ಮಾಡಿ ಇಟ್ಟುಕೊಂಡಿರುತ್ತಾರೆ. ಒಂದು ಹಿಡಿ ಕಕ್ಕೆ ಕಾಯಿಯ ಪುಡಿಗೆ ಅಷ್ಟೇ ಪ್ರಮಾಣದ ಬೆಣ್ಣೆ, ಮೆಣಸಿನ ಪುಡಿ ಬೆರೆಸಿ ಕೊಡುವುದರಿಂದ ಪಶುಗಳಿಗೆ ಬರುವ ಸರ್ವಾಂಗ ವ್ಯಾಧಿಗಳು ನಿವಾರಣೆಯಾಗುತ್ತವೆ ಎಂಬ ನಂಬಿಗೆ ಇವರಲ್ಲಿ ಇರುತ್ತದೆ.

ದನ ಮತ್ತು ಆಡು, ಕುರಿಗಳಿಗೆ ಬರುವ ಚಪ್ಪೆ ರೋಗವು ದುಷ್ಟ ಮಾರಿಯ ಶಾಪವೆಂದೇ ಭಾವಿಸುತ್ತಾರೆ. ತಮ್ಮ ದನಗಳಿಗೆ ಬಂದ ರೋಗ ನಿವಾರಣೆ ಮಾಡುವಂತೆ ಮಾರಿಯನ್ನು ಬೇಡಿಕೊಂಡು ಕೋಳಿ ಬಲಿಕೊಟ್ಟು ಆಕೆಯನ್ನು ಶಾಂತಿ ಮಾಡಲಾಗುತ್ತದೆ. ಹಾಗೆಯೇ ದನದ ಆರೋಗ್ಯ ಉತ್ತಮಗೊಂಡರೆ ಮಾರಿಯ ಗುಡಿಗೆ ಏನನ್ನಾದರೂ ಕಾಣಿಕೆ ಸಲ್ಲಿಸುವುದಾಗಿ ಬೇಡಿಕೊಳ್ಳುತ್ತಾರೆ.

ನಂತರ ಮಾರಿ ಗುಡಿಯಲ್ಲಿರುವ ಕರಿಬಾನಿ ನೀರನ್ನು ತಂದು ಎಮ್ಮೆಯ ಸಗಣಿ ಮತ್ತು ಅರಿಶಿಣವನ್ನು ನೀರಿನಲ್ಲಿ ಬೆರಸಿ ಕುದಿಸಿ ಅದರೊಳಗೆ ತಾವು ದೇವಾಲಯದಿಂದ ತಂದ ಕರಿಬಾನಿ ನೀರಿನ ಕೆಲವು ಹನಿಗಳನ್ನು ಸೇರಿಸಿ ದನಗಳ ಚಪ್ಪೆಗೆ ಸಗಣಿ ನೀರಿನ ಲೇಪನ ಮಾಡುತ್ತಾರೆ. ಜೊತೆಗೆ 'ಕಾಡಿಗರಗು' ಸೊಪ್ಪಿನ ರಸಕ್ಕೆ ಹನ್ನೊಂದು ಪಲಕು ಬೆಳ್ಳುಳ್ಳಿ, ಹನ್ನೊಂದು ಮೆಣಸು, ಒಂದು ಕೋಲಿ ಮೊಟ್ಟೆಯನ್ನು ಸೇರಿಸಿ ಗೊಟ್ಟದ ಮೂಲಕ ದನಕ್ಕೆ ಕುಡಿಸುತ್ತಾರೆ. ಕುರಿಗಾದರೆ ಇದೇ ಔಷಧಿಯನ್ನು ಅಲ್ಪ ಪ್ರಮಾಣದಲ್ಲಿ ಕುಡಿಸುತ್ತಾರೆ.

ಚಪ್ಪೆ ರೋಗವಾದ ಜಾಗೆಗೆ ಕಬ್ಬಿಣದ ಸಲಾಕೆಯನ್ನು ಕಾಸಿ ಬರೆ ಎಳೆದರೆ ಚಪ್ಪೆರೋಗ ವಾಸಿಯಾಗುತ್ತದೆಂಬ ನಂಬಿಕೆಯುಂಟು. ಪ್ರಾಣಿಗಳಿಗೆ ಕಾಲು ಮುರಿದರೆ ಗೂಳಪ್ಪನ ಸೊಪ್ಪು ಹರಿದಚ್ಚಗನ ಸೊಪ್ಪು, ಮೊಟ್ಟೆಯ ಬಿಳಿ ರಸ, ಸ್ವಲ್ಪ ಬೆಲ್ಲ, ಒಂದು ಸೊಲಿಗೆ ಹಾಲರಿಶಿಣಗಳನ್ನು ಸೇರಿಸಿ, ಅರೆದು ಮುರಿದ ಕಾಲನ್ನು ಜೋಡಿಸಿ ಅದಕ್ಕೆ ಔಷಧಿಯ ಲೇಪನ ಮಾಡಿ ನಂತರ ಬಿದಿರು ದಬ್ಬೆಕಟ್ಟಿ ತಾವು ಅರೆದಿಟ್ಟುಕೊಂಡ ಔಷಧಿಯನ್ನು ಬಿಳಿ ಬಟ್ಟೆಗೆ ಲೇಪನ ಮಾಡುತ್ತಾ ಬಿದಿರ ದಬ್ಬೆಯ ಮೇಲೆ ಬಿಳೀ ಬಟ್ಟೆ ಸುತ್ತಿ ಕಟ್ಟನ್ನು ಹಾಕುತ್ತಾರೆ. ಹಾಗೆಯೇ ತಾವು ಅರೆದು ಸಿದ್ಧ ಮಾಡಿಕೊಂಡಿರುವ ಔಷಧಿಯ ಗುಳುಗೆಗಳನ್ನು ಇಪ್ಪತ್ತೊಂದು ದಿನ ಪ್ರಾಣಿಗೆ ಮಜ್ಜಿಗೆಯೊಂದಿಗೆ ಬೆರಸಿ ಕುಡಿಸಲಾಗುತ್ತದೆ.

ಮನುಷ್ಯನಂತೆಯೇ ತಾವು ಸಾಕಿದ ಪ್ರಾಣಿಗಳಿಗೂ ನಿವಾಳಿಕೆ ತೆಗೆಯುವುದು. ಮಂತ್ರಿಸಿ ರೋಗ ನಿವಾರಣೆ ಮಾಡುವುದುಂಟು. ತಮ್ಮ ವಿರೋಧಿಗಳು ಮಾಟ ಮಾಡಿ ತಮ್ಮ ಪ್ರಾಣಿಗಳಿಗೆ ಕೈಮದ್ದು ಮಾಡುವುದುಂಟು ಎನ್ನುವ ಭಯ ಇವರಲ್ಲುಂಟು. ಹಾಗಾಗಿ ಕೈಮದ್ದನ್ನು ತೆಗೆಯುವ ಹಲವು ರೀತಿಯ ಔಷಧಿಯ ಕ್ರಮ ಇವರಲ್ಲುಂಟಂತೆ.

ಮಾಟ ಮಾಡಿದವನಿಗೆ ಮಾಡಿದ ಮಾಟ ತಿರುಗುವಂತೆ ಎದುರು ಮಾಟ ಮಾಡುವುದು, ತಮ್ಮ ದನಕ್ಕೊದಗಿದ ಆಪತ್ತನ್ನು ತೊಲಗಿಸಲು ಮಂತ್ರ ತಂತ್ರಗಳನ್ನು ಉಪಯೋಗಿಸುವುದು ಮಾಲ ಸಮುದಾಯದವರಲ್ಲಿ ಸಾಮಾನ್ಯ ಬಹುಶಃ ಎಲ್ಲಾ ಕೆಳ ಸಮುದಾಯಗಳಲ್ಲಿಯೂ ಈ ರೀತಿಯ ಮಾಟ ಮಂತ್ರಗಳ ತಂತ್ರಗಳು ಕಂಡುಬರುತ್ತವೆ.

ತೀ.ನಂ.ಶಂಕರನಾರಾಯಣರು 'ಕಾಡು ಗೊಲ್ಲರ ಸಂಸ್ಕೃತಿ ಮತ್ತು ನಂಬಿಕೆಗಳು' ಕೃತಿಯಲ್ಲಿ ಕಾಡುಗೊಲ್ಲ ಸಮುದಾಯವರು ತಮ್ಮ ಕುರಿಗಳಿಗೆ ಬರುವ ರೋಗವೊಂದಕ್ಕೆ (ಕರೇಗಾಬು ರೋಗ) ಯಾವ ರೀತಿಯಲ್ಲಿ ಮಾಂತ್ರಿಕ ಔಷಧಿ ಉಪಯೋಗಿಸುತ್ತಾರೆ ಎನ್ನುವ ಕುರಿತು ತಿಳಿಸುತ್ತಾರೆ.

"ಪಶ್ಚಿಮದಿಂದ ಪೂರ್ವಕ್ಕೆ ಹರಿಯುವ ಹಳ್ಳದಲ್ಲಿ ಮೂರು ಚಲುಮೆ (ಒರತಿ)ಗಳನ್ನು ತೆಗೆಯಬೇಕು. ಈ ಚಲುಮೆಗಳಲ್ಲಿ ಬಂದ ನೀರಿಗೆ ಪೂಜೆ ಮಾಡಿ ಈ ಮೂರು ಚಲುಮೆಗಳ ನಡುವೆ ಚನ್ನಾಗಿ ಬೆಳಗಿದ ಒಂದು ತಾಮ್ರದ ಬಿಂದಿಗೆಯನ್ನು ಇಡಬೇಕು. ಒಂದು ತಾಮ್ರದ ಚೊಂಬನ್ನು ಚೆನ್ನಾಗಿ ಬೆಳಗಿ ಒಂದೊಂದು ಚಲುಮೆಯಿಂದಲೂ ಕ್ರಮವಾಗಿ ಒಂದೊಂದು ಚೊಂಬು ನೀರನ್ನು ತುಂಬಿ ಬಿಂದಿಗೆಗೆ ಹಾಕಬೇಕು. ಬಿಂದಿಗೆಯ ನೀರಿಗೂ ಗಂಗಾ ಪೂಜೆ ಮಾಡಬೇಕು. ಸತ್ತವರನ್ನು ಹೂಳಿದ ಸಮಾದಿಯ ಮೇಲೆ ಬೆಳೆದಿರುವ ಬಿಲ್ವಪತ್ರೆ ಮರದ ಬಳಿಗೆ ಒಬ್ಬ ಗೃಹಸ್ಥ ಮತ್ತು ಒಬ್ಬ ಮದುವೆಯಾಗದ

ಹುಡುಗ ಇಬ್ಬರೂ ಮಧ್ಯರಾತ್ರಿಯಲ್ಲಿ ಹೋಗಬೇಕು. ಅವರು ಹೋಗುವುದನ್ನು ಯಾರೂ ನೋಡಬಾರದು. ದಾರಿಯಲ್ಲಿ ಹೋಗುವಾಗ ಇಬ್ಬರೂ ಪರಸ್ಪರ ಮಾತನಾಡಬಾರದು. ಆದರೆ ಮರದ ಬಳಿ ಹೋದ ಗೃಹಸ್ಥ ಆ ಬಿಲ್ವಪತ್ರೆ ಮರಕ್ಕೆ ಪೂಜೆ ಮಾಡಿದ ನಂತರ ಮದುವೆಯಾಗದ ಹುಡುಗ ಸಂಪೂರ್ಣ ಬೆತ್ತಲೆಯಾಗಿ ಮರವನ್ನು ಹತ್ತಬೇಕು. ಹತ್ತಿದ ತಕ್ಷಣ ಕೈಗೆ ಸಿಕ್ಕ ಕೊಂಬೆಯಿಂದ ಒಂದು ಹಿಡಿ ಬಿಲ್ವ ಪತ್ರೆ ಕೀಳಬೇಕು. ಮೇಲೋಗುತ್ತ ಇನ್ನು ಎರಡು ಹಿಡಿ ಬಿಲ್ವ ಪತ್ರೆ ಕೀಳಬೇಕು. ನಂತರ ಇಳಿಯುವಾಗಲೂ ಬಿಂದಿಗೆಯಿರುವ ಚೆಲುಮೆ ಬಳಿಗೆ ಬಂದು ಬಿಂದಿಗೆ ತೆಗೆದುಕೊಂಡು ಒಂಬತ್ತು ನಿಂಬೆಹಣ್ಣು, ಒಂಬತ್ತು ಬಿಳಿ ಕಣಗಳು ಹೂವು ಮತ್ತು ಆರು ಹಿಡಿ ಬಿಲ್ವ ಪತ್ರೆ ತೆಗೆದುಕೊಂಡು ಕುರಿಯ ರೊಪ್ಪದ ಬಳಿಯಲ್ಲಿ ಒಂದು ಕಂಬಳಿ ಹಾಸಿ ಅದರ ಮೇಲೆ ಅದನ್ನೆಲ್ಲಾ ಇಟ್ಟು ಒಂಬತ್ತು ನಿಂಬೆಹಣ್ಣು, ಒಂಬತ್ತು ಕಣಗಲೆ ಹೂವು, ಆರು ಹಿಡಿ ಬಿಲ್ವಪತ್ರೆಯನ್ನು ಚೆನ್ನಾಗಿ ಹೊಸಗಿ ಬಿಂದಿಗೆಯೊಳಕ್ಕೆ ಹಾಕಿ ಆ ಬಿಂದಿಗೆಗೆ ಪುನಃ ಪೂಜೆ ಮಾಡಿ ಯಾವ ಕುರಿ ಅಥವಾ ಮೇಕೆಗೆ ಕರೆಗಾಬ ರೋಗ ಬಂದಿರುವುದು ಅದರ ಮೇಲೆ ಚೆಲ್ಲಬೇಕು. ಈ ರೀತಿ ಮೂರು ಹೊತ್ತು ಮಾಡಬೇಕು. ಹೀಗೆ ಮಾಡಿದರೆ ಕರೆಗಾಬು ರೋಗ ವಾಸಿ ಎಂದು ನಂಬುತ್ತಾರೆ"[೭].

ಮಾನವನು ತನ್ನ ಆರೋಗ್ಯದ ಕಡೆಗೆ ಲಕ್ಷ್ಯ ವಹಿಸಿಕೊಳ್ಳುವುದರ ಜೊತೆಗೆ ತನಗೆ ಉಪಯುಕ್ತವಾದ ಹಾಗೂ ಸಹಾಯ ಮಾಡುವ ಸಾಕು ಪ್ರಾಣಿಗಳ ಆರೋಗ್ಯದ ಕಡೆಗೂ ಲಕ್ಷ್ಯ ವಹಿಸುವುದನ್ನು ಇಲ್ಲಿ ಗುರುತಿಸಲಾಗಿದೆ. ಇಷ್ಟೇ ಅಲ್ಲದೆ ಮನುಷ್ಯ ತನ್ನ ಆರೋಗ್ಯ ರಕ್ಷಣೆಗಾಗಿ ಪ್ರಾಣಿಜನ್ಯ ವಸ್ತುಗಳನ್ನು ಬಳಸುವುದೂ ಉಂಟು. ಅತಿ ಪವಿತ್ರವೆಂದು ಭಾವಿಸಲಾಗುವ ಪ್ರಾಣಿ ಗೋವು, ಪವಿತ್ರವಾದ ಈ ಪ್ರಾಣಿಯ ಮೂತ್ರ ಕುಡಿದಲ್ಲಿ ಕೆಮ್ಮು ಕಸಾಲೆಗಳು ಕಡಿಮೆಯಾಗುತ್ತದೆ ಎನ್ನುವ ನಂಬಿಗೆವುಂಟು. ಮಾಲ ಸಮುದಾಯದವರ ಸಹಾಯಕ ಪ್ರಾಣಿಯಾದ ಕತ್ತೆಯ ಮೂತ್ರದಲ್ಲಿಯೂ ಕೆಲವು ರೋಗ ಪ್ರತಿರೋಧಕ ಔಷಧಿಗಳನ್ನು ತಯಾರಿಸುವುದುಂಟು. ಮೇಕೆಯ ಹಾಲು, ಇಕ್ಕೆಗಳನ್ನು ಔಷಧಕಾಗಿ ಬಳಸುತ್ತಾರೆ. ಹಾಗೆಯೇ ಕುದುರೆಯ ಬಾಲದ ಕೂದಲು, ಕಸ್ತೂರಿ ಮೃಗದಿಂದ ದೊರೆಯುವ ಕಸ್ತೂರಿ ಎನ್ನುವ ಪದಾರ್ಥ, ಹುಲಿಯ ಎಲಬು, ಮೀನಿನ ಕಣ್ಣು ಒಮ್ಮೊಮ್ಮೆ ಜೀವಂತವಾದ ಚಿಕ್ಕ ಮೀನುಗಳು, ಏಡಿಯ ಕಸಾಯ ಹೀಗೆ ಪ್ರಾಣಿಗಳಿಂದ ದೊರೆಯುವ ಪದಾರ್ಥಗಳನ್ನು ಉಪಯೋಗಿಸಿಕೊಂಡು ಔಷಧಿಗಳನ್ನು ತಯಾರಿಸುವ ಉದಾಹರಣೆಗಳುಂಟು.

ಮನುಷ್ಯನು ತನಗೆ ಗೊತ್ತಿದ್ದೊ ಗೊತ್ತಿಲ್ಲದೆಯೋ ಹತ್ತು ಹಲವು ಔಷಧಿಗಳನ್ನು ಕಂಡುಕೊಂಡಿದ್ದಾನೆ. ಮನುಷ್ಯನಿಗೆ ಆಹಾರದಷ್ಟೇ ಆರೋಗ್ಯವು ಮುಖ್ಯ ಎನ್ನುವುದನ್ನು ಇದು ಸೂಚಿಸುತ್ತದೆ. ಮಾಲ ಸಮುದಾಯದವರು ಉಪಯೋಗಿಸುವ ಔಷಧಿಗಳಾಗಲಿ, ರೋಗವನ್ನು ನಿಯಂತ್ರಿಸಲು ನಡೆಸುವ ತಾಂತ್ರಿಕ ಸ್ವರೂಪಗಳಾಗಲಿ ವೈಜ್ಞಾನಿಕತೆಯಿಂದ ಕೂಡಿದೆ ಎಂದು ತಿಳಿಸುವುದು ಕಷ್ಟವಾದರೂ, ಇವು ನಿರುಪಯುಕ್ತ ಔಷಧಿಗಳೆಂದೂ ವಾದಿಸುವುದು ಕಷ್ಟ ತಲೆಮಾರುಗಳಿಂದ ಇವರೊಳಗೆ ಬಳಕೆಗೊಳ್ಳುತ್ತಿರುವ ನಾಡ ಔಷಧಿಗಳು, ರೋಗಗಳನ್ನು ನಿಯಂತ್ರಿಸುವ ಶಕ್ತಿಯುನ್ನು ಹೊಂದಿದವುಗಳಾಗಿರುವುದರಿಂದ ಇವರೊಳಗೆ ಇನ್ನು ಜೀವಂತವಾಗಿ ಉಳಿದು ಬಂದಿರಬೇಕು. ಇವರು ಉಪಯೋಗಿಸುವ ಔಷಧಿಯ ಗಿಡ ಮೂಲಿಕೆಗಳನ್ನು ಸಂಸ್ಕರಿಸಿ ವೈಜ್ಞಾನಿಕ ಶೋಧನೆಯೊಳಗೆ

ಒರೆಹಚ್ಚಿ ನೋಡಿ ಸಾರ್ವಜನಿಕರ ಉಪಯೋಗಕ್ಕೆ ದೊರೆಯುವಂತೆ ಮಾಡಿದಲ್ಲಿ ಎಷ್ಟೊ ಹೊಸ ರೋಗಗಳಿಗೆ ಹೊಸ ಹೊಸ ಔಷಧಿಗಳು ದೊರೆಯಬಹುದೇನೋ. ಆಧುನಿಕತೆಯ ವ್ಯಾಮೋಹದಿಂದ ಮೆರೆಯುವ ಇಂದಿನ ಪೀಳಿಗೆಗೆ ಇಂಥ ಬುಡಕಟ್ಟುಗಳು ಬಳಸುವ ಔಷಧಿಗಳು ಅವೈಜ್ಞಾನಿಕವಾಗಿದೆಯೆಂದೂ ಕಂಡುಬಂದರೂ ಆಧುನಿಕ ಆಲೋಚನಾ ಕ್ರಮ ಪೂರ್ಣವಾಗಿ ಸರಿಯಾದುದೆಲ್ಲಾ ಅನಿಸುತ್ತದೆ.

ಯಾರು ಏನೇ ಭಾವಿಸಿಕೊಂಡರೂ ತಮ್ಮ ಜೀವನ ಶೈಲಿಯಿಂದ ಇಂತಹ ತಳಸಮುದಾಯಗಳು ದೂರ ಸರಿಯಲಾರವು ಎಂಬುದು ಮಾತ್ರ ನಿಜ.

೬.೪. ಮಾಲ ಸಮುದಾಯ ಮತ್ತು ಆಧುನಿಕ ಜಗತ್ತು

ಮಾಲ ಸಮುದಾಯ ಬಡತನದ ಬೆಗೆಯಲ್ಲಿ ನರಳುತ್ತಿದೆ. ಮೂಲಭೂತ ಸೌಲಭ್ಯಗಳು ಇವರಿಗೆ ಇನ್ನು ತಲುಪಿಲ್ಲ. ಇವರಿಗೆ ಬೆಳೆಯತ್ತಿರುವ ಸಮಾಜದಲ್ಲಿ ಸೂಕ್ತವಾದ ಕೆಲಸವಿಲ್ಲದಂತಾಗಿದೆ. ಇನ್ನು ಇವರು ಇನ್ನೊಬ್ಬರ ಹೊಲದಲ್ಲಿ ಜಿತದಾಳುಗಳಾಗಿ ಕೂಲಿಯಾಳುಗಳಾಗಿ, ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇದುವರೆಗೂ ಈ ಸಮುದಾಯದವರು ತಮ್ಮ ಜೀವನ ಜೆರ್ವಹಣೆಗಾಗಿ ಅಲೆಮಾರಿಗಳಾಗಿ ಹೊಗುವದನ್ನು ಇನ್ನು ತ್ಯಜಿಸಿಲ್ಲ, ಇಂತಹ ಪರಿಸ್ಥಿತಿಯಿದ್ದಾಗ ಇವರು ಆಧುನಿಕ ಜಗತ್ತಿಗೆ ಬರುವುದು ಬಹಳ ಕಷ್ಟವಾಗಿದೆ.

ಮಾಲ ಸಮುದಾಯದವರಲ್ಲಿ ಅಕ್ಷರಸ್ಥರ ಸಂಖ್ಯೆ ಬಹಳ ಕಡಿಮೆ ಇರುವದು ಕಂಡುಬಂದಿತು ಅಕ್ಷರ ಜ್ಞಾನವಿಲ್ಲದ ಇಲ್ಲದ ಕಾರಣದಿಂದ ನಿರುದ್ಯೋಗ ಸಮಸ್ಯ ಇವರಲ್ಲಿ ಕಂಡುಬರುತ್ತದೆ. ಈ ಸಮುದಾಯದವರು ಹಲವಾರು ಸಮಸ್ಯಯಿಂದ ಇರುವುದು ಕಂಡುಬರುತ್ತದೆ, ಮಾಲ ಸಮುದಾಯದವರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಬಹಳ ಹಿಂದುಳಿದಿದ್ದಾರೆ. ಇವರಿಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಗುರುತಿಸಿಕೊಳ್ಳಲಿಕ್ಕೆ ಪ್ರಾಯಾಸ ಪಡುತಿದ್ದಾರೆ. ಭಿಕ್ಷೆ ಮತ್ತು ವಂಶಪಾರಂಪರಿಕ ಪ್ರದರ್ಶನ ಕಲೆಗಳೆ ಇವರ ಜಗತ್ತಾಗಿರುತ್ತವೆ.

ಹಿಂದಿನಿಂದಲೂ ಸಮಾಜದಲ್ಲಿ ಅತ್ಯಂತ ಹೀನಾಯವಾದ ಅಸ್ಪೃಶ್ಯತೆಯನ್ನು ಅನುಭವಿಸಿರುವ ಸಮುದಾಯವಾದ ಮಾಲ (ಪರ್ವತ ಮಲ್ಲಯ್ಯ) ಸಮುದಾಯದವರಿಗೆ ಸಮಾಜದಲ್ಲಿ ಸಮಾನತೆಯನ್ನು ಕಾಣಲು ಸರಕಾರದಿಂದ ಸೌಲಭ್ಯಗಳು ಸಿಗಬೇಕು. ಮತ್ತು ಸಮಾಜದಲ್ಲಿ ಸಮಾನತೆಯನ್ನು ಪಡೆಯುವಂತಾಗಬೇಕು. ಈ ಸಮುದಾಯಕ್ಕೆ ಶಿಕ್ಷಣ ಮತ್ತು ಉಧ್ಯೋಗದ ಭದ್ರತೆ ದೊರೆಯಬೇಕಾಗಿದೆ. ಶ್ರಮಕ್ಕೆ ತಕ್ಕಂತೆ ಕೂಲಿ ಸಿಗಬೇಕಾಗಿದೆ. ಈ ರೀತಿಯ ಹಲವು ಅಭಿವೃದ್ದಿ ಯೋಜನೆಗಳು ಈ ಸಮುದಾಯದವರಿಗೆ ತಲುಪಿದಾಗ ಇವುಗಳು ಈಡೇರಿದಾಗ ಮಾತ್ರ ಬೇರೆ ಸಮುದಾಯಗಳ ಜೊತೆ ಮುಂದುವರಿಯಲು ಸಾಧ್ಯವಾಗುತ್ತದೆ.

ಸದಾ ಅಲೆಮಾರಿಯಾದ ಇವರು ಮಕ್ಕಳ ಶಿಕ್ಷಣವನ್ನು ಬಿಡಿಸಿ ತಮ್ಮ ಜೀವನ ನಿರ್ವಹಣೆಗಾಗಿ ಕೂಲಿ ಕೆಲಸಕ್ಕೆ ಕರೆದುಕೊಂಡು ಹೊಗುತ್ತಾರೆ. ಇವರು ಅಭಿವೃದ್ದಿ ಹೊಂದಬೇಕಾದರೆ ಇವರಿಗೆ

ಶಿಕ್ಷಣದ ಬಗೆಗೆ ಅರಿವು ಮೂಡಿಸಬೇಕಾಗಿದೆ. ಪೋಷಕರಿಗೆ ಶಿಕ್ಷಣಕ್ಕೆ ಸಂಬಂಧಿಸಿದ ತಿಳಿವಳಿಕೆ ನೀಡಬೇಕು. ಕೇಂದ್ರ ಸರಕಾರ ರಾಜ್ಯ ಸರಕಾರ ಅನುಸರಿಸುವ ಶಿಕ್ಷಣದ ಬಗೆಗೆ ತಿಳಿವಳಿಕೆ ನೀಡಬೇಕು. ಈ ಸಮುದಾಯದ ಅಲೆಮಾರಿ ಜೀವನ ತಡೆಗಟ್ಟಲು ಸರಕಾರ ಕೃಷಿ ಭೂಮಿ ಒದಗಿಸಬೇಕು. ಸಮುದಾಯದ ಎಲ್ಲಾ ಸದಸ್ಯರು ಒಂದೇ ಕಡೆ ನೆಲೆನಿಂತು ಜೀವನ ನಡೆಸುವಂತಹ ಸೌಲಭ್ಯವನ್ನು ಸರಕಾರ ಈ ಸಮುದಾಯದವರಿಗೆ ಕೊಡಬೇಕಾಗಿದೆ.

ಸರಕಾರ ವರ್ಷಕ್ಕೆ ಸಾಕಷ್ಟು ಆಶ್ರಯ ಮನೆಗಳನ್ನು ನೀಡುತ್ತದೆ. ಆ ಮನೆಗಳು ಸೂಕ್ತವಾಗಿ ಈ ಸಮುದಾಯದವರಿಗೆ ತಲುಪಬೇಕು. ಇವರಿಗೆ ಮನೆಯ ಜೊತೆಗೆ ಮೂಲಭೂತ ಸೌಲಭ್ಯಗಳನ್ನು ನೀಡಬೇಕು. ಸರಕಾರ ಸುಮಾರು ವರ್ಷಗಳ ಕಾಲ ಮೀಸಲಾತಿ ಅನುಗುಣವಾಗಿ ಹಲವಾರು ಸೌಲಭ್ಯಗಳನ್ನು ನೀಡುತ್ತ ಬಂದಿದೆ. ಆದರೆ ಈ ಸಮುದಾಯಕ್ಕೆ ಯಾವ ಯೋಜನೆಯು ತಲುಪಿಲ್ಲ. ಮತ್ತು ಈ ಸಮುದಾಯವನ್ನು ಸರಕಾರ ಗಣನೆಗೆ ತೆಗೆದುಕೊಳ್ಳಬೇಕು. ಈ ಸಮುದಾಯದ ಪ್ರಗತಿ ಸಾಧ್ಯವಾಗಬೇಕಾದರೆ ಸರಕಾರ ಇವರ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ಸ್ಥಿತಿಗತಿಗಳನ್ನು ಅರಿತುಕೊಂಡು ಇವರಿಗೆ ಸೌಲಭ್ಯಗಳನ್ನು ಕಲ್ಪಿಸಬೇಕಾಗಿದೆ.

ಆಧುನಿಕ ಔದ್ಯೋಗೀಕರಣವು ಭಾರತೀಯನಿಗೆ ಹೊಸ ಹೊಸ ಅವಕಾಶಗಳನ್ನು ಸೃಷ್ಟಿಸಿದರೂ ಅಧ್ಯಯನಕ್ಕೆ ವಸ್ತುಗಳಾಗಿ ಪರಿವರ್ತನೆಗೊಂಡಿರುವ ಅಲೆಮಾರಿ ಹಾಗೂ ಅಲಕ್ಷಿತ ಸಮುದಾಯಗಳ ಪರಿಸ್ಥಿತಿ ಹೆಚ್ಚು ಹೆಚ್ಚು ಶೋಚನೀಯ ಸ್ಥಿತಿಯನ್ನೇ ಅನುಭವಿಸುವಂತಾಗಿದೆ. ಬಹುಶಃ ಮಧ್ಯಕಾಲೀನ ಭಾರತದಲ್ಲಿ ತಮ್ಮ ಪಾರಂಪರಿಕ ವೃತ್ತಿಯಿಂದಾಗಿ ತಂಬಾ ಸ್ವಾವಲಂಬಿಗಳಾಗಿದ್ದ ಮಾಲ ಸಮುದಾಯದವರು ಈಗಿನಷ್ಟು ಆರ್ಥಿಕವಾಗಿ ಶೋಚನೀಯ ಸ್ಥಿತಿಯನ್ನು ಆ ಕಾಲದಲ್ಲಿ ತಲುಪಿರಲಿಲ್ಲ ಎನಿಸುತ್ತದೆ.

ಇಂತಹ ಆಧುನಿಕ ದಿನಗಳಲ್ಲೂ ಕೂಡ ಭಾರತದಲ್ಲಿ ಇಂತಹ ತಳಸಮುದಾಯಗಳ ಕುರಿತು ಯಾವುದೇ ಆಶಾದಾಯಕ ಭಾವನೆಯನ್ನು ಕಾಣುವುದು ಅಸಾಧ್ಯದ ಮಾತಾಗಿಯೇ ಉಳಿದಿದೆ.

'ಭಾರತ ಮತ್ತು ಪಾಕಿಸ್ತಾನಗಳಲ್ಲಿ ಆರೋಗ್ಯ, ಶಿಕ್ಷಣ, ಭೂ ಸುಧಾರಣೆಗಳನ್ನು ಸಂಪೂರ್ಣ ನಿರ್ಲಕ್ಷಿಸಲಾಯಿತು. ನಂತರದ ದಿನಗಳಲ್ಲಿ ತಮ್ಮ ಆರ್ಥಿಕತೆಯನ್ನು ಜಾಗತೀಕರಣದ ಪೈಪೋಟಿಗಳಿಗೆ ಒಳಪಡಿಸಿದಾಗ ಜಾಗತಿಕ ಪೈಪೋಟಿಯನ್ನು ಎದುರಿಸಲು ಈ ರಾಷ್ಟ್ರಗಳು ಸಾಮರ್ಥ್ಯ ಹೊಂದಲಾರದೆ ಹೋದವು.'[೮] ಅಮಾರ್ತ್ಯ ಸೇನ್‌ರು ತಿಳಿಸುವುದು ಇದನ್ನೇ. ಸಾಮರ್ಥ್ಯ ಹೊಂದಿದ ಸಮುದಾಯಗಳು ಜಾಗತೀಕರಣ ಪ್ರಕ್ರಿಯೆಗೆ ತಮ್ಮನ್ನು ತೆರೆದುಕೊಂಡರೆ ಸಾಮರ್ಥ್ಯ ಪಡೆಯದ ಸಮುದಾಯಗಳು ಜಾಗತೀಕರಣ ಪ್ರಕ್ರಿಯೆಯಿಂದ ಇನ್ನು ಮುಂದುಡುವ ಸ್ಥಿತಿಗೆ ಇಳಿಯುತ್ತದೆ.'[೯]

ಜಾಗತೀಕರಣದ ಪ್ರಭಾವ ಹೆಚ್ಚಿದಂತೆಲ್ಲಾ ಇಂತಹ ಸಮುದಾಯಗಳು ಹೆಚ್ಚಿನ ಆತಂಕಗಳಿಗೆ ಒಳಗಾಗುತ್ತಲೇ ಇವೆ. ಆಧುನಿಕತೆ ಹಾಗೂ ಜಾಗತೀಕರಣದ ಪರಿಣಾಮವಾಗಿ ದೈಹಿಕ ಕಸರತ್ತನ್ನು ಪ್ರದರ್ಶಿಸಿ ಜೀವನ ನಿರ್ವಹಣೆ ಮಾಡುತ್ತ ಅದನ್ನೇ ಮೂಲ ಕಸುಬಾಗಿಸಿಕೊಂಡಿದ್ದ ಸಮುದಾಯವೊಂದು ಪ್ರಸ್ತುತ ಆಧುನಿಕ ಜನತೆಯ ಕಣ್ಣಿನಿಂದ ದೂರಾಗುತ್ತಿದೆ. ಸಾಮಾಜಿಕವಾಗಿ ಬಹಿಸ್ಕೃತರಾದ ಮಾಲ

ಸಮುದಾಯದವರು ಕೇವಲ ಅಂತ್ಯಜರಾಗಿ, ಕೂಲಿಯಾಳಾಗಿ, ಜೀತಗಾರರಾಗಿ ಮಾತ್ರ ಇದ್ದಂಥವರ ಕಣ್ಣಿಗೆ ಕಾಣುವರು. ಅದರಾಚೆಗೆ ಅವರಿಗೂ ತಮಗೂ ಯಾವುದೇ ಮಾನವೀಯ ಸಂಬಂಧಗಳಿಲ್ಲ ಎನ್ನುವಂತಹ ಧೋರಣೆ ಹೊಂದಿವೆ.

ಸಾಮಾಜಿಕ ನಿರ್ಲಕ್ಷ್ಯ ಹಾಗೂ ಅಪಮಾನದಿಂದಾಗಿ ಕಳೆದುಹೋಗುತ್ತಿರುವ ಇಂತಹ ಸಮುದಾಯಗಳು ಇಂದು ಸವಕಲು ನಾಣ್ಯವಾಗುತ್ತಿವೆ. ಆಧುನಿಕತೆಯಿಂದಾಗಿ ಅಲಕ್ಷ್ಯಕ್ಕೊಳಗಾಗಿರುವ ಮಾಲದಂತಹ ಅಲೆಮಾರಿ ಸಮುದಾಯವು ಆರ್ಥಿಕವಾಗಿ ಹಿಂದುಳಿದಂತೆ ರಾಜಕೀಯವಾಗಿಯೂ ಹಿಂದುಳಿದಿದೆ. ಇಂದು ಅನುಸೂಚಿತ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸೇರಿದರೂ ಈ ಸಮುದಾಯಕ್ಕಿಂತ ಸಾಂಖಿಕವಾಗಿ ಹಾಗೂ ಆರ್ಥಿಕವಾಗಿ ಪ್ರಬಲವಾಗಿರುವ ಎಷ್ಟೋ ಪರಿಶಿಷ್ಟ ಜಾತಿ ಸಮುದಾಯಗಳು ಎಲ್ಲಾ ಅವಕಾಶಗಳನ್ನು ತಾವೇ ಬಾಚಿಕೊಳ್ಳುತ್ತಿವೆ. ಆದರೆ ಮಾಲದಂತಹ ಅಲಕ್ಷಿತ ಸಮುದಾಯಗಳು ಇದಾವುದರ ಗೊಡವೆಗೂ ಹೋಗದೆ ತನ್ನ ಪಾಡಿಗೆ ತಾನು ಹೊಟ್ಟೆ ಹೊರೆಯಲು ನಿರಂತರವಾಗಿ ಹೋರಾಡಬೇಕಾಗಿದೆ.

ಸಾಮಾಜಿಕವಾಗಿ ಬಹಿಸ್ಕೃತಗೊಂಡು ಕಳಂಕಿತರ ಪಟ್ಟಿಗೆ ಸೇರಿಸಲ್ಪಟ್ಟ ಈ ಸಮುದಾಯಕ್ಕೆ ಅಕ್ಷರ ಜ್ಞಾನದ ಕೊರತೆ, ಆರ್ಥಿಕ ಸ್ವಾವಲಂಬನೆ ಇಲ್ಲದೇ ಇರುವುದು. ಸಾಮಾಜಿಕವಾಗಿ ಇವರನ್ನು ತುಂಬಾ ಕೀಳಾಗಿ ಕಾಣುವುದು ಮುಂತಾದ ಅನಿಷ್ಟಗಳೆಲ್ಲಾ ಇವರ ಏಳ್ಗೆಗೆ ಕಾಲ್ತೊಡಕಾಗಿವೆ.

ಇಂದು ಮಾಲ ಸಮುದಾಯವೊಂದಿದೆ ಎಂದು ಗುರುತಿಸಲಾರದಷ್ಟು ಕ್ಷೀಣಿಸಗೊಂಡಿರುವ ಈ ಸಮುದಾಯ ಭವಿಷ್ಯತ್ತಿನಲ್ಲಿ ಕಾಣೆಯಾಗುವ ಸಂಭವವೇ ಹೆಚ್ಚು. ಪೂರ್ಣ ಕಾಣೆಯಾದಲ್ಲಿ ಚಿಂತೆ ಇಲ್ಲ. ಆದರೆ ಅದು ತನ್ನ ಮೂಲ ಅನಿಷ್ಟಗಳನ್ನೆಲ್ಲಾ ಮೈಗಂಟಿಸಿಕೊಂಡು ರೂಪಾಂತರಗೊಳ್ಳುವ ಭಯ ಕಾಡುವುದುಂಟು ಎಂದು ಅಲಕ್ಷಿತ ಸಮುದಾಯಗಳ ಕುರಿತು ಅಧ್ಯಯನ ಮಾಡುವ ಸಮಾಜ ಶಾಸ್ತ್ರಜ್ಞರೂ, ಮಾನವ ಶಾಸ್ತ್ರಜ್ಞರೂ ಆತಂಕ ಪಡುತ್ತಾರೆ.

ಒಟ್ಟಿನಲ್ಲಿ ಆಧುನಿಕ ಜಗತ್ತಿನಲ್ಲಿ ತನ್ನ ಅನನ್ಯತೆಯನ್ನು ಕಳೆದುಕೊಂಡ ಮಾಲ ಸಮುದಾಯವು ಕೇವಲ ಅಸ್ಪೃಶ್ಯ ಎನ್ನುವ ಕಳಂಕಿತ ಪಟ್ಟವನ್ನು ಮಾತ್ರ ತನ್ನ ಹೆಗಲಮೇಲೆ ಹೊತ್ತು ಸಾಗುತ್ತಿದೆ. ಈ ಸಮುದಾಯ ಆಧುನಿಕ ಜಗತ್ತಿನಲ್ಲಿ ಯಾವುದೇ ಹೊಸ ಭರವಸೆಗಳಿಲ್ಲದೆ ಅತಂತ್ರ ಬದುಕಿನೊಂದಿಗೆ ಕಾಲ ತಳ್ಳುತ್ತ ಸಾಗುತ್ತಿರುವುದು ಮಾತ್ರ ಸತ್ಯ. ಒಂದು ಸವಕಲು ನಾಣ್ಯದಂತೆ ಕಾಣುತ್ತಿರುವ ಸಮುದಾಯವೊಂದಿದ್ದರೆ ಅದು ಮಾಲ ಸಮುದಾಯವೆಂದರೆ ಅತಿಶಯೋಕ್ತಿಯಾಗಲಾರದು.

ಸ್ವಾತಂತ್ರ್ಯಾ ನಂತರ ಭಾರತದಲ್ಲಿ ಕಂಡುಬಂದ ಉದಾರೀಕರಣ, ನಗರೀಕರಣ, ಜಾಗತೀಕರಣದಂತಹ ಚಿಂತನೆಗಳಿಂದ ಭಾರತೀಯ ಸಾಮಾಜಿಕ ಬದುಕಿನಲ್ಲಿ ಹಲವಾರು ಬದಲಾವಣೆಗಳಾಗಿವೆಯೆಂಬುದೇನೋ ಸರಿ, ಆದರೆ ಈ ನೀತಿಗಳು ಹಾಗೂ ಚಿಂತನೆಗಳು ಬಹಿಸ್ಕೃತ ಅಲೆಮಾರಿಗಳ ಸ್ಥಿತಿಯನ್ನು ಬದಲಿಸುವ ಬದಲಾಗಿ ಅವುಗಳನ್ನು ಮತ್ತಷ್ಟು ತಳಕ್ಕೆ ನೂಕಿವೆ. ಹೀಗಾಗಿ ಇಂದು ಭಾರತದ ಬಹುತೇಕ ಪರಿಶಿಷ್ಟ ಜಾತಿ, ಪಂಗಡಗಳು ಮತ್ತು ಅಲೆಮಾರಿ ವಿಮುಕ್ತ ಬುಡಕಟ್ಟುಗಳು ಹಾಗೂ ಅಲ್ಪ ಸಂಖ್ಯಾತ ಕುಶಲಕರ್ಮಿ ಸಮುದಾಯಗಳು ಹೆಚ್ಚೆಚ್ಚು ಶೋಷಣೆಗೆ

ಒಳಗಾಗುತ್ತಲೇ ಸಾಗಿವೆ. ಈ ಸಮುದಾಯಗಳಲ್ಲಿ ಹುಟ್ಟಿದ ಏಕೈಕ ಕಾರಣಕ್ಕಾಗಿ ಸಮುದಾಯದೊಳಗಿನ ಜನ ಶೋಷಣೆಗೆ ಒಳಗಾಗಬೇಕಾಗಿ ಬಂದಿರುವುದು ವಿಷಾದನೀಯ ವಿಚಾರವಾಗಿದೆ. ಸಂವಿಧಾನಿಕವಾಗಿ ತಳಸಮುದಾಯಗಳಿಗೆ ಮೀಸಲಾತಿಯನ್ನು ನೀಡಲಾಗಿದೆಯಾದರೂ ಈ ಸಮುದಾಯಗಳ ವಿಚಾರದಲ್ಲಿ ಅದು ಕೇವಲ ತೋರುಗಾಣಿಕೆಯ ಮೀಸಲಾತಿಯಂತೆ ತೋರುತ್ತದೆ. ಎಷ್ಟೋ ಅಲೆಮಾರಿ ಸಮುದಾಗಳಿಗೆ ಮೀಸಲಾತಿ ಎಂದರೇನೆಂಬುದೇ ತಿಳಿಯದ ಸ್ಥಿತಿ ಇದೆ. ರಾಜಕಾರಣದ ಪಾಲ್ಗೊಳ್ಳುವಿಕೆಯ ಮೂಲಕ ಆತ್ಮಸ್ಥೈರ್ಯವನ್ನು ಪಡೆಯಬೇಕಾಗಿದ್ದ ತಳಸಮುದಾಯದ ಸದಸ್ಯರು ಅಧೀರತೆ, ಶೋಷಣೆಗಳಿಂದಾಗಿ ಕೀಳರಿಮೆ ಅನುಭವಿಸುವಂತಾಗಿದೆ. ಬಂಡವಾಳಶಾಹಿ ಮತ್ತು ಮೇಲ್ಜಾತಿಗಳ ಹಿಡಿತದಲ್ಲಿರುವ ಸಾಮಾಜಿಕ ವಲಯದಲ್ಲಿ ತಳ ಸಮುದಾಯದ ಅಲೆಮಾರಿ ಸಮುದಾಯಗಳಿಗೆ ಅಸ್ತಿತ್ವವೇ ಇಲ್ಲದಂತಾಗಿದೆ. ಸಾಮಾಜಿಕವಾಗಿ ಅತ್ಯಂತ ದುರ್ಬಲವಾದ ಪರಿಶಿಷ್ಟ ಜಾತಿಯ ಅಲೆಮಾರಿಗಳು ತಮ್ಮ ಮಿತಿಯಲ್ಲಿ ಯಾವುದೇ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆಯೆಂಬುದು ಸ್ಪಷ್ಟವಾಗಿ ಕಾಣುತ್ತದೆ.

ಆಹಾರ ಮತ್ತು ಆರೋಗ್ಯ ಸಮಸ್ಯೆ ಹಾಗೂ ಸ್ಥಿತ್ಯಂತರ

ಮಾಲ ಸಮುದಾಯದವರ ಬೇರೆ ರಾಜ್ಯದಿಂದ ವಲಸೆ ಬಂದವರಾಗಿದ್ದು, ಬಡತನ ಎಂಬುದು ಇವರನ್ನು ಕೆಳಮಟ್ಟಕ್ಕೆ ತಳ್ಳಲ್ಪಟ್ಟಿರುತ್ತದೆ. ಮಾಲ ಸಮುದಾಯದವರು ಸದಾ ಅಲೆಮಾರಿಗಳು ಇವರಿಗೆ ಅಸ್ಪೃಶ್ಯತೆಯು ಕಾಡುವದರ ಜೊತೆಗೆ ಬಡತನವು ಸಹ ಇವರಿಗೆ ಕಾಲ ಕಾಲಾಂತರ ಶತ್ರುವಾಗಿರುವುದು ಕಾಣುತ್ತದೆ. ಯಾವುದೇ ಆಸ್ತಿ ಪಾಸ್ತಿ ಹೊಂದಿರದ ಮಾಲ ಸಮುದಾಯದವರು ತಮ್ಮದು ಮತ್ತು ತಮ್ಮ ಮಕ್ಕಳ ಹೊಟ್ಟೆ ತುಂಬಿಸಿಕೊಳ್ಳಲು ಕಾಲ್ನಡಿಗೆಯಿಂದ ಸಾಹಸ ಸಂಚಾರವನ್ನು ಮಾಡಿದ್ದಾರೆ. ಹೊದ ಊರುಗಳಲ್ಲೆಲ್ಲಾ ಊರ ಹೊರಗೆ ಗುಡಾರ ಇಲ್ಲವೆ ಊರ ಹೊರಗಿನ ಗುಡಿಗಳಲ್ಲಿ ಉಳಿದುಕೊಂಡು ಸಣ್ಣ ಪುಟ್ಟ ಪ್ರದರ್ಶನ ಕಲೆಗಳನ್ನು ಆಡಿ ಆ ಊರಿನ ಜನರು ಕೊಟ್ಟ ಅನ್ನ ನೀರನ್ನು ಕುಡಿದು ಬದುಕುತ್ತಿದ್ದರು. ಈ ಸಮುದಾಯದ ಸದಸ್ಯರಿಗೆ ಬಟ್ಟೆಗಳನ್ನು ಕೊಳ್ಳಲು ಹಣದ ಅಭಾವದಿಂದ ಅರಕಲು ಬಟ್ಟೆಗಳನ್ನು ಹಾಕಿಕೊಳ್ಳುತ್ತಿದ್ದರು. ಭಿಕ್ಷೆ ಬೇಡಲು ಹೋದಾಗ ಬೇರೆಯವರು ಕೊಟ್ಟ ಬಟ್ಟೆಗಳನ್ನು ಹಾಕಿಕೊಳ್ಳುತ್ತಿರುತ್ತಿದ್ದರಂತೆ ಆದರೆ ಇತ್ತೀಚೆಗೆ ತಾವು ಕೂಲಿ ಮಾಡಿ ದುಡಿದುದ್ದರಲ್ಲಿ ಬಂದ ಹಣವನ್ನು ಖರ್ಚು ಮಾಡಿ ತಮಗೆ ಬಟ್ಟೆಗಳನ್ನು ಖರಿದಿಸಿ ತಮ್ಮ ಪ್ರಮುಖವಾದ ಹಬ್ಬ ಆಚರಣೆಗಳಲ್ಲಿ ಹಾಕಿಕೊಳ್ಳುತ್ತಾರೆ. ಹಲವು ವರ್ಷದವರೆಗೆ ಭಿಕ್ಷೆಯಿಂದ ಬಂದ ಆಹಾರವನ್ನು ತಿಂದು ಬದುಕುತ್ತಿದ್ದರು ಕೆಲವು ಸಲ ಅನ್ನ ನೀರು ಇಲ್ಲದೆ ಉಪವಾಸ ಬದುಕಿದ ಸಂಗತಿಗಳನ್ನು ತಿಳಿಸಿದರು. ಈ ರೀತಿ ವರ್ಷವಿಡಿ ಜೀವನವನ್ನು ಇದೇ ರೀತಿ ಸಾಗಿಸುತ್ತಿದ್ದರು. ಇದರಿಂದ ಈ ಸಮುದಾಯದವರಿಗೆ ಅಪೌಷ್ಠಿಕ ಕೊರತೆ, ಆಹಾರದ ಸಮಸ್ಯ, ಸರಿಯಾದ ಸಮಯಕ್ಕೆ ಊಟ ಇಲ್ಲದಿರುವುದು. ಈ ರೀತಿಯಾದಂತಹ ಸಮಸ್ಯಗಳ ಕೊರತೆಯ ಸುಳಿಯಲ್ಲಿ ಈ ಸಮುದಾಯದವರು ಸಿಲುಕಿ ಹೋಗಿದ್ದಾರೆ. ಯಾವುದೇ ಓಟಿನ ಕಾರ್ಡ, ಜಾತಿ ಪ್ರಮಾಣ ಪತ್ರ, ನಿರ್ಧಿಷ್ಟ ನೆಲೆ, ಇದಾವುದು ಈ ಸಮುದಾಯದವರಿಗೆ ಇದ್ದಿರಲಿಲ್ಲ. ಆ ಕಾರಣದಿಂದ ಈ ಸಮುದಾಯದವರಿಗೆ ರೇಷನ್ ಕಾರ್ಡುಗಳು ಸಹ ಇದ್ದಿರಲಿಲ್ಲ.

ಆದರೆ ಇತ್ತೀಚೆಗೆ ತಮ್ಮ ನೆಲೆಯನ್ನು ಕಂಡುಕೊಳ್ಳುವ ಸಲುವಾಗಿ ಮತ್ತು ಇತ್ತೀಚೆಗೆ ಮತ ಚಲಾವಣೆಗೆಂದು, ಕಡ್ಡಾಯ ಆಧಾರ ಕಾರ್ಡ ಹೊಂದಬೇಕೆನ್ನುವ ಸರಕಾರದ ನಿಯಮದನುಸಾರವಾಗಿ ಇವರು ಒಟರ್ ಕಾರ್ಡ ಮತ್ತು ಆಧಾರ್ ಕಾರ್ಡ ಹೊಂದಿದ್ದು ಕೆಲವು ಕುಟುಂಬಗಳು ಅನ್ನಭಾಗ್ಯದ ಯೋಜನೆಯ ಅಡಿಯಲ್ಲಿ ಪಡಿತರ ಚೀಟಿಯನ್ನು ಹೊಂದಿದ್ದಾರೆ. ಇದರಿಂದ ಇವರು ಅನ್ನಭಾಗ್ಯ ಯೋಜನೆ ಅಡಿಯಲ್ಲಿ ಕರ್ನಾಟಕದಲ್ಲಿ ನೆಲೆಸಿದ ೩೨೨ ಕುಟುಂಬಗಳಲ್ಲಿ ೨೭೨ ಕುಟುಂಬಗಳು ಪಡಿತರ ಚೀಟಿಯನ್ನು ಹೊಂದಿಲಿಕ್ಕೆ ಸಾಧ್ಯವಾಗಿದೆ. ಆದ್ದರಿಂದ ಮಾಲ ಸಮುದಾಯದವರು ಇಂದು ಅನ್ನಭಾಗ್ಯದ ಲಾಭದಿಂದ ಒಪ್ಪತ್ತಿನ ಊಟವನ್ನು ಕಾಣುವಂತಾಗಿದೆ. ಇದರಿಂದ ಸಮಾಜದಲ್ಲಿ ಇವರು ಸ್ಥಿತ್ಯಂತರವನ್ನು ಕಂಡುಕೊಳ್ಳಲಿಕ್ಕೆ ಪ್ರಯತ್ನಿಸುತ್ತಿದ್ದಾರೆ.

ಮತ್ತು ಈ ಸಮುದಾಯದ ಯುವಜನತೆ ಬೆಳೆಯುತ್ತಿರುವ ನಗರೀಕರಣದ ಪ್ರಭಾವಕ್ಕೆ ಒಳಗಾಗಿ ಸಣ್ಣ ಪುಟ್ಟ ಕೆಲಸಗಳಲ್ಲಿ ತೊಡಗಿಕೊಂಡು ತಮ್ಮ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಮೊದಲು ಸದಾ ಸಂಚಾರಿಯಾದ ಇವರಿಗೆ ತಮಗೆ ಹಲವಾರು ರೋಗ ರುಜಿನಗಳು ಕಾಡುತ್ತಿದ್ದವು. ಪ್ರತಿಯೊಂದು ರೋಗದ ವಾಸಿಗಾಗಿ ಇವರು ಅಡವಿಯಲ್ಲಿ ಸಿಗುವ ಹಲವು ಗಿಡಮೂಲಿಕೆಯನ್ನು ಮನೆಮದ್ದಾಗಿಸಿಕೊಂಡಿದ್ದರು. ಆಸ್ಪತ್ರೆ ಎಂಬುದು ಈ ಸಮುದಾಯದವರಿಗೆ ಗೊತ್ತಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಇವರು ತಮ್ಮ ರೋಗ ವಾಸಿಗಾಗಿ ಈ ಸಮುದಾಯದವದರಿಗೆ ಯಾವುದೆ ಕಾಯಿಲೆಗಳು ಬಂದರೆ, ಚೇಳು ಕಡಿದರೆ, ಹಾವು ಕಡಿದರೆ, ಜ್ವರ ಬಂದರೆ, ನೆಗಡಿ ಆದರೆ, ನಾಯಿ ಕಡಿದರೆ, ಕಾಲು ಉಳುಕು ಬಿದ್ದರೆ, ಕೆಮ್ಮು ಆದರೆ, ಮಗು ಅಳುತ್ತಿದ್ದರೆ, ಹೊಟ್ಟೆ ನೋವು ಆದರೆ, ಬೇಗ ಹೇರಿಗೆ ಆಗದಿದ್ದರೆ, ದನಕರುಗಳಿಗೆ ಅಸ್ಥವೆಸ್ಥವಾಗಿದ್ದರೆ, ಕಾಲಿಗೆ ಗಾಯಗಳಾಗಿದ್ದರೆ, ಕಣ್ಣಿನಲ್ಲಿ ಕಸರು ಬಿದ್ದರೆ, ಹೊಟ್ಟೆ ಉಬ್ಬರವಾದರೆ, ಇನ್ನಿತರ ಪ್ರತಿಯೊಂದು ಖಾಯಿಲೆಗಳಿಗೂ ಈ ಸಮುದಾಯದವರು ಮನೆಮದ್ದನ್ನು ಆಶ್ರಯಿಸಿದ್ದಾರೆ. ಆದರೆ ಇತ್ತೀಚಿನ ದಿನಮಾನಗಳಲ್ಲಿ ಸರಕಾರಿ ಸೌಲಭ್ಯದಿಂದ ತಮ್ಮ ಖಾಯಿಲೆಗಳನ್ನು ಬೇಗನೆ ಗುಣಪಡಿಸಿಕೊಳ್ಳಬೆಕೆನ್ನುವ ಕಾರಣದಿಂದ ಸರಕಾರಿ ಆಸ್ಪತ್ರೆಗಳಿಗೆ ಹೊಗುತ್ತಿರುವದನ್ನು ತಿಳಿಸಿದರು. ಇತ್ತೀಚೆಗೆ ಇಂತಹ ಮನೆಮದ್ದುಗಳನ್ನು ಉಪಯೋಗಿಸುತ್ತಾರಾದರು ಸರಕಾರಿ ಆಸ್ಪತ್ರೆಗಳಿಗೆ ಹೊಗುತ್ತಾರೆ. ಸರಕಾರಿ ಆಸ್ಪತ್ರೆಗಳಿಗೆ ಹೋಗುವದರಿಂದ ಮರಣ ಪ್ರಮಾಣವನ್ನು ತಡೆಗಟ್ಟಬಹುದೆಂದು ತಿಳಿದು, ಮತ್ತು ಪ್ರಸೂತಿ ಸೌಲಭ್ಯದಂತಹ ಮಾಹಿತಿಯನ್ನು ತಿಳಿದುಕೊಂಡು ಇವರು ಆಸ್ಪತ್ರೆಗಳಿಗೆ ಹೊಗುವದರ ಮೂಲಕ ತಮ್ಮ ಸಾಮಾಜಿಕ ಸ್ಥತ್ಯಂತರವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ತಾವು ನೆಲೆಸಿದ ಪ್ರದೇಶದಲ್ಲಿ ಬರುವ ಸರಕಾರಿ ಆಸ್ಪತ್ರೆಗಳಿಗೆ ಹೊಗುವದನ್ನು ಮಾಡುತ್ತಾರೆ.

ಮಾಲ ಸಮುದಾಯದವರು ಗುಳೆ ಹೋದರೆ, ಕೂಲಿ ಕೆಲಸಕ್ಕೆ ಹೋದರೆ, ಭಿಕ್ಷೆಗೆ ಹೋದರೆ ಯಾವುದೇ ಕೆಲಸ ಕಾರ್ಯಗಳಿಗೆ ಹೊಗಬೇಕಾದರೆ (ಕುಡು ಕುಟುಂಬ) ಬಹಳ ಕುಟುಂಬಗಳು ಸೇರಿಕೊಂಡು ಹೊಗುತ್ತಿರುತ್ತಿದ್ದ ವಿಚಾರ ತಿಳಿಸಿದರು. ನಂತರದ ದಿನಗಳಲ್ಲಿ ತಮ್ಮ ಜೀವನದ ನಿರ್ವಹಣೆಗಾಗಿ ಸಮುದಾಯ ಒಡೆದು ಬೇರೆ ಬೇರೆ ಊರುಗಳಿಗೆ ಹೊಗತೊಡಗಿದರು, ನಂತರದಲ್ಲಿ

ಒಂದೊಂದು ಕುಟುಂಬದವರು ಸೇರಿ ಒಂದಡೆ ದುಡಿಯಲು ಹೊಗುತ್ತದ್ದರೆಂಬ ವಿಚಾರ ತಿಳಿಸಿದರು. ಕಾಲಾಂತರದಲ್ಲಿ ನಗರೀಕರಣ ಮತ್ತು ಕೈಗಾರಿಕರಣದ ಪ್ರಭಾವದಿಂದ ಅವಿಭಕ್ತ ಕುಟುಂಬಗಳು ಒಡೆದು ವಿಭಕ್ತ ಕುಟುಂಬಗಳಾಗಿ ನಗರಗಳ ಕಡೆಗೆ ಮತ್ತು ಪಟ್ಟಣಗಳ ಕಡೆಗೆ ಹೊಗತೊಡಗಿದರು. ಬೆಳೆಯುತ್ತಿರುವ ನಗರಗಳ ಪ್ರಭಾವದಿಂದ ಈ ಸಮುದಾಯದ ಕೆಲವು ಹೆಣ್ಣುಮಕ್ಕಳು ಸಣ್ಣ ಪುಟ್ಟ ಸ್ಟೆಷನರಿಯಂತಹ ವ್ಯಾಪಾರವನ್ನು, ಮತ್ತು ಕಾಯಿಪಲ್ಲೆ ವ್ಯಾಪಾರವನ್ನು, ಮಾಡಲು ಪ್ರಾರಂಭಿಸಿದರು. ಇದರಿಂದ ತಮ್ಮ ದಿನನಿತ್ಯದ ಜೀವನ ಸಾಗಿಸಲು ಸಾಹಾಯಕವಾಗಿ ಸಮಾಜದಲ್ಲಿ ಸ್ಥಿತ್ಯಂತರವನ್ನು ಕಂಡುಕೊಳ್ಳಲಿಕ್ಕೆ ಪ್ರಯತ್ನಿಸುತ್ತಿದ್ದಾರೆ.

ಮಾಲ ಸಮುದಾಯದವರು ಇಪ್ಪತ್ತು ವರ್ಷದ ಆಚೆಗೆ ತಾವು ಅಡುಗೆ ತಯಾರಿಸಿಕೊಳ್ಳಲು ಮಣ್ಣಿನಿಂದ ತಯಾರಿಸಿದ ಗಡಿಗೆಯನ್ನು, ನೀರು ತುಂಬಲು ಮಣ್ಣಿನ ಬಿಂದಿಗೆಯನ್ನು, ಊಟ ಮಾಡಲು ತಟ್ಟೆಯನ್ನಾಗಿ ಪರ್ಯಾಣ ಎಂಬ ಮಣ್ಣಿನ ತಟ್ಟೆಯನ್ನು, ನೀರು ಕುಡಿಯಲು ಮಗಿ ಎಂಬ ಮಣ್ಣಿನ ತಂಬಿಗೆಯನ್ನು, ಹೊಲಗಳಿಗೆ ಕೆಲಸ ಮಾಡಲು ಹೊದರೆ ನೀರನ್ನು ಕುಡಿಯಲು ತತ್ರಾಣಿ ಎಂಬ ಸಣ್ಣ ಬಿಂದಿಗೆಯನ್ನು, ಭಿಕ್ಷೆ ಬೇಡಿ ತಂದ ಕಾಳನ್ನು ಹಾಕಿ ಇಡಲು ಗೊಬ್ಬಿ ಎಂಬ ಬಿಂದಿಗೆ ತರ ಇರುವ ಮಣ್ಣಿನ ಪರಿಕರವನ್ನು, ಈ ರೀತಿ ತಮ್ಮ ದಿನನಿತ್ಯದ ಅಡುಗೆ ಮಾಡಲು ಮಣ್ಣಿನ ಸಾಮಾನುಗಳನ್ನು ಉಪಯೂಗಿಸುತ್ತಿದ್ದೆವು ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿ ಪಡೆಯಲಾಯಿತು. ಆದರೆ ಈ ಸಮುದಾಯದವರು ಕಾಲಾಂತರದಲ್ಲಿ ಆಧುನಿಕರಣದ ಪ್ರಭಾವದಿಂದ ಸಿಲ್ವರ್ ಪಾತ್ರೆಗಳನ್ನು, ಸ್ಟೀಲ್ ಸಾಮಾನುಗಳನ್ನು, ಉಪಯೋಗಿಸುವದರಿಂದ ಇವರು ಸಾಮಾಜಿಕ ಸ್ಥಿತ್ಯಂತರವನ್ನು ಕಂಡುಕೊಂಡಿದ್ದಾರೆ.

ಮಾಲ ಸಮುದಾಯದವರು ಮೂದಲು ಯಾವುದೇ ಊರಿಗೆ ಅಲೆಮಾರಿಯಾಗಿ ಹೋದರೆ ಈ ಸಮುದಾಯದ ಸದಸ್ಯರೆಲ್ಲರು ಸೇರುವುದು ವರ್ಷಕ್ಕೊಮ್ಮ ಚಿಲಕಮುಖಿ ಎಂಬ ಗ್ರಾಮದ ದುರ್ಗಾದೇವಿಯ ಜಾತ್ರೆಗೆ ಮಾತ್ರ ಆಗಿತ್ತು, ಈ ಸಮುದಾಯದಲ್ಲಿ ಯಾವುದೇ ಜಿವನಾರ್ತಕ ಆಚರಣೆಗಳನ್ನು ಸತ್ತ ಸುದ್ದಿಗಳನ್ನು ತಿಳಿಸಲು, ಇನ್ನಿತರ ವಿಧಿ-ವಿಧಾನಗಳ ಬಗ್ಗೆ ಒಬ್ಬರಿಗೊಬ್ಬರು ತಿಳಿಸಲು ಆಗುತ್ತಿರಲಿಲ್ಲ. ಆದರೆ ಆಧುನಿಕತೆಯ ಪ್ರಭಾವದಿಂದ ಈ ಸಮುದಾಯದವ ಕೆಲವು ಸದಸ್ಯರು ಮೊಬೈಲ್‌ಗಳ ಬಳಕೆಯನ್ನು ಮಾಡುವದರ ಮೂಲಕ ಮತ್ತು ತಮ್ಮ ತಮ್ಮ ಭಾವನೆಗಳನ್ನು ಹಂಚಿಕೊಳ್ಳುವದರ ಮೂಲಕ ಇವರು ಸಾಮಾಜಿಕ ಸ್ಥಿತ್ಯಂತರವನ್ನು ಸ್ವಲ್ಪ ಮೆಟ್ಟಿಗೆ ಕಂಡುಕೊಂಡಿದ್ದಾರೆ.

ಪ್ರಸ್ತುತ ಮಾಲ ಸಮುದಾಯದವರು ಅಲೆಮಾರಿತನವನ್ನು ತ್ಯಜಿಸಿ ಒಂದೇ ಕಡೆ ನೆಲೆಸಿದ್ದಾರೆನಿಸಿದರೂ ಇಂದಿಗೂ ಅವರು ಅಲೆಮಾರಿತನವನ್ನು ಸಂಪೂರ್ಣವಾಗಿ ತ್ಯಜಿಸಿಲ್ಲ. ಇಂದಿಗೂ ಇವರು ದುಡಿಮೆಯನ್ನು ಹುಡುಕಿಕೊಂಡು ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗುತ್ತಿರುತ್ತಾರೆ. ಮಾಲ ಸಮುದಾಯವು ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿಯೇ ನೆಲೆಸಿದ್ದಾರೆ. ಇವರು ಗುಂಪಾಗಿ ಒಂದೇ ಕಡೆ ನೆಲೆಸುತ್ತಾರೆ. ಸಾಮಾಜಿಕವಾಗಿ ತೀರಾ ಕೆಳಸ್ಥಾನದಲ್ಲಿರುವ ಮಾಲ ಸಮುದಾಯವು ಇಂದು ಸಾಮಾಜಿಕ ಬದಲಾವಣೆಗಳಿಂದಾಗಿ ಮೇಲ್ನೋಟಕ್ಕೆ ಅಸ್ಪೃಶ್ಯತೆಯ ಕಾವು

ಈ ಸಮುದಾಯದ ಮೇಲೆ ಅಲ್ಪವಾಗಿ ಕಡಿಮೆಯಾಗಿದೆ ಎನಿಸಿದರೂ ಸಂಪೂರ್ಣವಾಗಿ ದೂರವಾಗಿದೆ ಎಂದು ಹೇಳುವುದು ಸಾಧ್ಯವಾಗಿಲ್ಲವೆಂಬುದು ಮಾತ್ರ ಸ್ಪಷ್ಟ.

ಕೊನೆ ಟಿಪ್ಪಣಿ

೧ ರಾಮ ಮನೋಹರ ಲೋಹಿಯಾ, ಜಾತಿ ಪದ್ಧತಿ:೧೯೯೮ :೧೩೫

೨ ಚಂದ್ರಶೇಖರ್ ಟಿ ಆರ್: ಕರ್ನಾಟಕದ ವರ್ತಮಾನ: ೨೦೦೧:೧೦೭

೩ ಲಲಿತ ಎ ಸಿ: ಜನಪದ ಆಚರಣೆಗಳು: ೧೯೯೩:೫೦

೪ ಅದೇ :೧೯೯೩:೫೧

೫ ಹಿರಿಯಣ್ಣ ಅಂಬಳಿಕೆ: ಜನಪದ, ಜಾನಪದ: ೧೯೯೩:೧೧೮

೬ ಅದೇ:೧೯೯೩:೧೨೨

೭ ಶಂಕರನಾರಾಯಣ ತೀ ನಂ: ಕಾಡುಗೊಲ್ಲರ ಆಚರಣೆ: ೧೯೮೨:೧೭೧– ೧೭೨

೮ ಸ್ವಾಮಿನಾಥನ್ ಅಯ್ಯರ್, ೧೯೯೮ ಎಕನಾಮಿಕ್ ಟೈಮ್ಸ್ ೧೬.೧೦.೧೯೯೮

೯ ಟಿ.ಆರ್.ಚಂದ್ರಶೇಖರ್, ೧೯೯೮,ವರ್ತಮಾನದ ಕರ್ನಾಟಕ: , ೧೯

ವಕ್ತೃಗಳು.

೧ ಮಲ್ಲಮ್ಮ ಬೋಗಿ

೨.ಹನಮಂತಪ್ಪ ಬಬ್ಬಲ್

೩.ಶಂಕ್ರಪ್ಪ ಬೋಗಿ

ಅಧ್ಯಾಯ ಏಳು
ಸಮಾರೋಪ

ಅಧ್ಯಯನದ ಫಲಿತಗಳು

ಸಲಹೆಗಳು

ಮುಂದಿನ ಅಧ್ಯಯನದ ಸಾಧ್ಯತೆಗಳು

ಪರಾಮರ್ಶನ ಗ್ರಂಥಗಳು

ಪ್ರಶ್ನಾವಳಿ

ತಿಳುವಳಿಕೆದಾರರ ವಿವರಗಳು

ಅಧ್ಯಾಯ ಏಳು
ಸಮಾರೋಪ

ಭಾರತದಲ್ಲಿ ಪರಿಶಿಷ್ಟ ಜಾತಿಯ ಸಮುದಾಯದಕ್ಕೆ ಸೇರಿದ ವ್ಯಕ್ತಿಗಳನ್ನು ಸಮಾಜದ ಕೊನೆಯಲ್ಲಿರುವ ಪ್ರಜೆ ಎಂದೇ ನೋಡಲಾಗುತ್ತಿದೆ. ಅದರಲ್ಲೂ ಪರಿಶಿಷ್ಟ ಜಾತಿಗೆ ಸೇರಿದ ಅಲೆಮಾರಿ ಅಲ್ಪ ಜನಸಂಖ್ಯೆಯನ್ನು ಹೊಂದಿರುವ ಸಮುದಾಯವಾಗಿದ್ದಲ್ಲಿ ಅಂತಹ ಸಮುದಾಯಗಳನ್ನು ಇನ್ನೂ ನಿಕೃಷ್ಟವಾಗಿ ಈ ವ್ಯವಸ್ಥೆ ಕಾಣುವುದು. ಹಿಂದಿನಿಂದ ಇಂದಿನವರೆಗೂ ಈ ರೀತಿಯ ತಳಸಮುದಾಯಗಳು ಮೇಲ್ಜಾತಿಯ ಹಾಗೂ ಬಂಡವಾಳಶಾಹಿಗಳ ನಿರಂತರ ದಬ್ಬಾಳಿಕೆಗೆ ಒಳಗಾಗುತ್ತಲೇ ಬರುತ್ತಿರುವೆ. 'ಮನುಜರೆಲ್ಲರುಂ ಒಂದೇ ವಲಂ' ಎಂದು ಹತ್ತನೇ ಶತಮಾನದಲ್ಲಿಯೇ ಆದಿಕವಿ ಪಂಪನು ತಿಳಿಸಿರುವನು. ಅದನ್ನೇ ತರುವಾಯ ಬಂದ ವಚನಕಾರರು, ಕೀರ್ತನಕಾರರೂ ಪ್ರತಿಪಾದಿಸಿದರು. ಸಮಸಮಾಜದ ಕನಸನ್ನು ಹನ್ನರಡನೇ ಶತಮಾನದ ವಚನ ಚಳುವಳಿ ಕಂಡಿತು. ಆದರೆ ಅಂದಿನ ಸಾಮಾಜಿಕ ಪರಿಸ್ಥಿತಿ ಭಿನ್ನವಾಗಿಯೇ ಇತ್ತು. ರಾಜಾಡಳಿತವು ಜನಸಾಮಾನ್ಯರ ಪರ ನಿಲ್ಲದೆ ಪುರೋಹಿತಶಾಹಿಯ ಕಡೆ ಒಲವನ್ನು ತೋರಿತು. ಅದೇ ಕಾರಣಕ್ಕಾಗಿಯೇ ಕಲ್ಯಾಣದಲ್ಲಿ ಕ್ರಾಂತಿಯೂ ನಡೆಯಿತು. ಮನುಷ್ಯ ಹೆಚ್ಚು ಹೆಚ್ಚು ಶಿಕ್ಷಿತನಾದಂತೆಲ್ಲಾ ಜಾತಿಯತೆಯೂ ತನ್ನ ಪರಧಿಯನ್ನು ಮೀರಿ ಬೆಳೆಯುತ್ತಿದೆ ಎನಿಸುತ್ತದೆ. ಅದಕ್ಕೆ ಇಂದಿನ ಮೇಲ್ಜಾತಿಗಳು, ಅವುಗಳಿಗೆ ಕಳಸವಿಟ್ಟಂತಿರುವ ಮತಮಾನ್ಯಗಳೂ, ರಾಜಕೀಯ ಹಿತಾಸಕ್ತಿಗಳು ಪೋಷಿಸುತ್ತಾ ಸಾಗಿರುವುದು ಶೋಚನೀಯವಾದ ವಿಚಾರವಾಗಿದೆ. ಮಾಲದಂತಹ ಅಲೆಮಾರಿ ತಳಸಮುದಾಯವನ್ನು ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡಿದಾಗ ಒಂದು ಸಂಗತಿ ಸ್ಪಷ್ಟವಾಯಿತು. ಈ ರಾಷ್ಟ್ರದ ಶೇಕಡ ಅರ್ಧದಷ್ಟಿರುವ ತಳಸಮುದಾಯಗಳಿಗೆ ಮೇಲ್ಜಾತಿಗಳನ್ನು ರಕ್ಷಿಸುವ ಮಾನವ ಹಕ್ಕುಗಳು ತಮ್ಮ ಪಾಲಿಗೂ ಇವೆ ಎನ್ನುವ ಪೂರ್ಣ ಅರಿವಿಲ್ಲ. ಅರಿವಿದ್ದರೂ ಅದನ್ನು ಹಕ್ಕಾಗಿ ಪಡೆಯದ ಅಸಾಹಾಯಕ ಸ್ಥಿತಿಯಲ್ಲಿ ತಳಸಮುದಾಯುಗಳಿವೆ. ಒಟ್ಟಾರೆಯಾಗಿ ಮೇಲ್ಜಾತಿ, ಕೆಳಜಾತಿಗಳೆನ್ನದೆ ಎಲ್ಲಾ ಜಾತಿ, ಸಮುದಾಯಗಳಿಂದಲೂ ಒಂದಲ್ಲಾ ಒಂದು ರೀತಿಯಲ್ಲಿ ಅಲೆಮಾರಿ ಸಮುದಾಯಗಳು ಶೋಷಣೆಗೆ ಒಳಗಾಗುತ್ತಲೇ ಬಂದಿರುವುದು ಮಾತ್ರ ಸತ್ಯ.

ಜಾಗತಿಕವಾಗಿ ಮಾನವ ಹಕ್ಕುಗಳ ಘೋಷಣೆಯಾಗಿ ಹಲವು ದಶಕಗಳೇ ಕಳೆದಿವೆ. ಆದರೂ ಎಲ್ಲಾ ವ್ಯಕ್ತಿಗಳೂ ಮಾನವ ಹಕ್ಕುಗಳನ್ನು ಸಂಪೂರ್ಣವಾಗಿ ಹೊಂದಲು ಸಾಧ್ಯವಾಗುತ್ತಿಲ್ಲ.

ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಮುಕ್ತವಾಗಿ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶ ಇರದೇ ಇರುವುದು, ಅದರಲ್ಲೂ ಅಲೆಮಾರಿ ಸಮುದಾಯಗಳನ್ನು ಗುಮಾನಿಯಿಂದ ನಿಕೃಷ್ಟವಾಗಿ ನೋಡುವುದು, ಅವರು ಇಂದಿಗೂ ಯಾರದೋ ಜಾಗದಲ್ಲಿ ಗುಡಾರದಲ್ಲಿ ಬದುಕುತ್ತಾ ಇರುವುದನ್ನು ನೋಡಿದಾಗ ನೆಪಮಾತ್ರಕ್ಕೆ ಮಾನವ ಹಕ್ಕುಗಳು ಇವೆಯೇನೋ ಎನಿಸುತ್ತದೆ.

ಪ್ರತಿಯೊಬ್ಬ ಬಂಡವಾಳಶಾಹಿಯ ಹಿಂದೆ ಕೂಲಿ ಮಾಡುವ ಶ್ರಮಿಕ ವರ್ಗ ಇದ್ದೇ ಇರುತ್ತದೆ. ಕೂಲಿ ಮಾಡುವ ಅಂತ್ಯಜರು ಇಂದಿಗೂ ಶೋಷಣೆಗೆ ಒಳಗಾಗುತ್ತಲೇ ಇರುವುದು, ಮೇಲ್ಜಾತಿಯ ಬಂಡವಾಳಶಾಹಿಗಳು ಶ್ರಮಿಕರ ದೈಹಿಕ ಶ್ರಮವನ್ನು ಬಳಕೆ ಮಾಡಿಕೊಂಡು ತಾವು ಮೇಲ್ಜಾತಿಯವರು, ಶ್ರೀಮಂತರು ಎಂದು ಮೆರೆಯುತ್ತಲೇ ಇರುವುದನ್ನು ನಮ್ಮ ಸುತ್ತಲ ವ್ಯವಸ್ಥೆಯಲ್ಲಿ ದಿನನಿತ್ಯ ಕಾಣುತ್ತಿರುವೆವು. "ಮಾನವ ಹಕ್ಕುಗಳಿಗೆ ಸಂಬಂಧಿಸಿದ ಅನೇಕ ಒಡಂಬಡಿಕೆ ಹಾಗೂ ಸನ್ನದುಗಳು ಲಿಂಗ ಹಾಗೂ ಜಾತಿಯಾಧಾರದ ಮೇಲೆ ಮಾನವರಲ್ಲಿ ಯಾವುದೇ ರೀತಿಯ ತಾರತಮ್ಯವಿರಬಾರದು ಎಂದು ಹೇಳುತ್ತವೆ". ಮಾನವ ಹಕ್ಕುಗಳ ಜಾಗತಿಕ ಘೋಷಣೆಯು ಮೇಲ್ವರ್ಗ ಹಾಗೂ ಕೆಳವರ್ಗ, ಕೆಂಪು ಬಣ್ಣದ ಚರ್ಮ ಹಾಗೂ ಕಪ್ಪು ಬಣ್ಣದ ಚರ್ಮವನ್ನು ಹೊಂದಿದವರ ನಡುವೆ ಸಮಾನ ಹಕ್ಕುಗಳನ್ನು ಮಾನ್ಯ ಮಾಡಿದೆ. ಮಾನವ ಹಕ್ಕು ಘೋಷಣೆಯ ವಿಧಿ ೧, ವಿಧಿ ೨ರ ಪ್ರಕಾರ ಮಾನವನಿಗೆ ಸಲ್ಲಬೇಕಾದ ಎಲ್ಲಾ ರೀತಿಯ ಹಕ್ಕು ಹಾಗೂ ಸೌಲಭ್ಯಗಳನ್ನು ಹೊಂದಲು ಹೆಣ್ಣು ಗಂಡು, ಮೇಲ್ಜಾತಿ, ಕೆಳಜಾತಿ ಎಂಬ ಭೇದವಿಲ್ಲದೆ ಎಲ್ಲರಿಗೂ ಸಮಾನವಾದ ಹಕ್ಕಿದೆ ಎಂದು ತಿಳಿಸುತ್ತದೆ. ಅಂತರಾಷ್ಟ್ರೀಯ ನಾಗರೀಕ, ಹಕ್ಕುಗಳ ಒಪ್ಪಂದ ಹಾಗೂ ಅಂತರಾಷ್ಟ್ರೀಯ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ರಾಜಕೀಯ ಹಕ್ಕುಗಳ ಒಪ್ಪಂದವು ವರ್ಗ ಹಾಗೂ ಲಿಂಗ ತಾರತಮ್ಯವನ್ನು ನಿಷೇಧಿಸುತ್ತದೆ.

ಮಾನವ ಹಕ್ಕುಗಳ ಹಿನ್ನೆಲೆಯಲ್ಲಿ ಮಹಿಳೆಗೆ ಅವಶ್ಯವಾಗಿ ಮೊದಲು ಅಗತ್ಯವಾಗಿರುವುದು ಮಹಿಳೆಯರ ಸಾಮಾಜಿಕ ಸಬಲೀಕರಣ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಸಬಲೀಕರಣವಾಗಿವೆ. ಭಾರತ ಹಳ್ಳಿಗಳಿಂದ ಕೂಡಿದ ದೇಶ. ಹಳ್ಳಿಯಲ್ಲಿರುವ ಮಹಿಳೆಯರು ಬಹುತೇಕ ನಿರಕ್ಷರಿಗಳು. ಅವರಿಗೆ ಮಾನವ ಹಕ್ಕುಗಳ ಅರಿವು ಅಷ್ಟಾಗಿ ಇಲ್ಲವೆಂದೇ ಹೇಳಬಹುದು. ಸಂವಿಧಾನದ ಪ್ರಕಾರ ಪುರುಷ ಮಹಿಳೆಯೆಂಬದೇ ಕಾನೂನು ಎಂಬುದು ಎಲ್ಲರಿಗೂ ಸಮಾನ ಎಂದು ಹೇಳುವುದು. ಆದರೆ ಪುರುಷ ಹಾಗೂ ಮಹಿಳೆಯರ ಮಧ್ಯದ ಅಸಮತೋಲನವನ್ನು ತೊಲಗಿಸುವ ಇಚ್ಛಾಶಕ್ತಿಯು ಆಡಳಿತದ ಸೂತ್ರ ಹಿಡಿದ ಪುರುಷಶಾಹಿ ವ್ಯವಸ್ಥೆಗೆ ಇಲ್ಲವೆಂದೇ ತೋರುತ್ತದೆ.

ಜಾತಿ ತಾರತಮ್ಯ ನಿವಾರಣೆ ಹಾಗೂ ತಳಸಮುದಾಯಗಳ ಸಬಲೀಕರಣಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಬೇಕು ಎಂಬುದೇ ಸಂವಿಧಾನದ ಆಶಯವಾಗಿದೆ. ಆ ಕಾರಣಕ್ಕಾಗಿಯೇ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಆಯೋಗಗಳನ್ನು ರಚಿಸಲಾಗಿದೆ.

ವರ್ಗ ಹಾಗೂ ವರ್ಣ ಸಂಘರ್ಷವೆಂಬುದು ಇಂದು ವಿಶ್ವವ್ಯಾಪಿ ವಿಷಯವಾಗಿದೆ. ಇದು ವಿವಿಧ ಆಯಾಮಗಳಿಂದ ಕೂಡಿದೆ. ಮುಂದುವರೆದ ರಾಷ್ಟ್ರವೆಂದು ಕರೆಸಿಕೊಳ್ಳುವ ಅಮೆರಿಕಾದಂತಹ ರಾಷ್ಟ್ರದಲ್ಲಿಯೇ ಬಿಳಿ ಹಾಗೂ ಕಪ್ಪು ವರ್ಣಗಳ ಮಧ್ಯ ಸಂಘರ್ಷವಿದೆ. ಇಂದಿಗೂ ಕಪ್ಪು ಜನರನ್ನು

ಆ ದೇಶದ ಬಿಳಿಯರು ಎರಡನೇ ಪ್ರಜೆಯಾಗಿಯೇ ನೋಡುವರೆಂಬ ಅಪವಾದವಿದೆ. ದಕ್ಷಿಣ ಆಫ್ರಿಕೆಗೆ ಹೊರಟಾಗ ಗಾಂಧಿಯನ್ನು ರೈಲಿನಿಂದ ಹೊರದೂಡಿದ್ದು ಅವರು ಕಪ್ಪು ವರ್ಣದವರೆಂಬ ಕಾರಣಕ್ಕಾಗಿಯೆ. ಶತಶತಮಾನಗಳಿಂದ ಶೋಷಣೆಗೆ ಒಳಗಾದ ದಮನಿತ ಅಸ್ಪೃಶ್ಯ ತಳಸಮುದಾಯಗಳಿಗೆ ನ್ಯಾಯ ದೊರಕಿಸಿ ಸಮಾಜದಲ್ಲಿ ಗೌರವದ ಸ್ಥಾನವನ್ನು ಕಲ್ಪಿಸಿ ಅವರೂ ಮೇಲ್ಜಾತಿ, ಮೇಲ್ವರ್ಗಗಳಂತೆ ಗೌರವಯುತವಾಗಿ ಸಮಾಜದಲ್ಲಿ ತಲೆಯೆತ್ತಿ ನಿಲ್ಲುವಂತೆ ಮಾಡಬೇಕಾದ ಅವಶ್ಯಕತೆ ಇದೆ. ಪುರೋಹಿತಶಾಹಿ ವ್ಯವಸ್ಥೆಯು ಸೃಷ್ಟಿಸಿದ ಹೃದಯಹೀನವಾದ ನಡವಳಿಕೆ, ನಗರೀಕರಣದಿಂದ ಉಂಟಾಗುತ್ತಿರುವ ದುರಂತಗಳು, ಮುಖ್ಯವಾಗಿ ಮೇಲ್ಜಾತಿಗಳು ಹುಟ್ಟುಹಾಕಿರುವ ಹಿತಾಸಕ್ತಿಯ ತೊಡಕುಗಳನ್ನು ಪರಿಹರಿಸಿಕೊಳ್ಳುವುದು ಹೇಗೆ ಎಂಬುದೇ ಸವಾಲಾಗಿದೆ.

ಭಾರತೀಯ ಸಂವಿಧಾನವು ಇತರ ರಾಷ್ಟ್ರಗಳ ಸಂವಿಧಾನಕ್ಕಿಂತ ಭಿನ್ನವಾಗಿದೆ. ಇತರ ರಾಷ್ಟ್ರಗಳಲ್ಲಿರದಷ್ಟು ಜಾತಿ, ಬುಡಕಟ್ಟುಗಳು ಭಾರತದಲ್ಲಿವೆ. ಇದನ್ನರಿತ ಭಾರತದ ಸಂವಿಧಾನ ಶಿಲ್ಪಿಗಳು ಭಾರತೀಯ ಜಾತಿಗನುಗುಣವಾಗಿ ಮೀಸಲಾತಿ ಕಾಯ್ದೆಯನ್ನು ಸಂವಿಧಾನದಲ್ಲಿ ಸೂಚಿಸಿತು. ಇದರ ಪರಿಣಾಮವಾಗಿ ಭಾರತದ ಎಷ್ಟೋ ತಳಸಮುದಾಯಗಳು, ಬುಡಕಟ್ಟುಗಳು ಮೀಸಲಾತಿ ಸೌಲಭ್ಯವನ್ನು ಪಡೆಯುವಂತಾಯಿತು. ಭಾರತದ ಸಂವಿಧಾನದ ವಿಧಿಗಳಾದ ೧೭,೧೮,೨೨ರಿಂದ ೨೫,೨೯,೩೮,೪೬, ೧೬೪,೨೨೪, ೨೪೩, ೨೭೫, ೩೩೨, ೩೩೪ ರಿಂದ ೩೩೯ ಹಾಗೂ ೩೪೧,೩೪೨ ಇತ್ಯಾದಿ ವಿಧಿಗಳು ದಲಿತ, ಹಿಂದುಳಿದ, ಬುಡಕಟ್ಟುಗಳ ಹಕ್ಕುಗಳನ್ನು ಎತ್ತಿಹಿಡಿಯುವಲ್ಲಿ ಸಹಕಾರಿಯಾಗಿವೆ ಎಂಬುದನ್ನು ನೆನಪಿಸಿಕೊಳ್ಳಬೇಕು. ಮಾಲ ಸಮುದಾಯದಂತಹ ದ್ವನಿ ಕಳೆದುಕೊಂಡ ಎಷ್ಟೋ ಅಸ್ಪೃಶ್ಯ ಸಮುದಾಯಗಳು ನಮ್ಮ ಈ ಸಮಾಜದೊಳಗಿವೆ. ಅವುಗಳನ್ನೂ ಮುಖ್ಯವಾಹಿನಿಗೆ ಕೊಂಡೊಯ್ಯಬೇಕಾದ ಅಗತ್ಯ ಇಂದಿದೆ.

ಒಟ್ಟಾರೆಯಾಗಿ ಈ ಅಧ್ಯಯನದಲ್ಲಿ ಅಲೆಮಾರಿಗಳಾಗಿ ಗುರುತಿಸಿಕೊಂಡಿರುವ ಮಾಲ ಸಮುದಾಯದ ಸಾಮಾಜಿಕ ಹಾಗೂ ಆರ್ಥಿಕ, ಶೈಕ್ಷಣಿಕ, ಆರೋಗ್ಯ ಹಾಗೂ ರಾಜಕೀಯತೆ ಇವುಗಳನ್ನು ಅರಿಯಲು ಸಾಧ್ಯವಾಗಿದೆ.

ಸ್ವಾತಂತ್ರ್ಯಾನಂತರ ಭಾರತದಲ್ಲಿ ಕಂಡುಬಂದ ಉದಾರೀಕರಣ, ನಗರೀಕರಣ, ಜಾಗತೀಕರಣದಂತಹ ಚಿಂತನೆಗಳಿಂದ ಭಾರತೀಯರ ಸಾಮಾಜಿಕ ಬದುಕಿನಲ್ಲಿ ಹಲವಾರು ಬದಲಾವಣೆಗಳಾಗಿವೆಯೆಂಬುದೇನೋ ಸರಿ, ಆದರೆ ಮಾಲದಂತಹ ನಿರ್ಲಕ್ಷಿತ ತಳಸಮುದಾಯಗಳ ಬದುಕನ್ನು ಇವು ಬದಲಿಸುವ ಬದಲಾಗಿ ಅವರನ್ನು ಮತ್ತಷ್ಟು ತಳಕ್ಕೆ ನೂಕಿವೆ. ಹೀಗಾಗಿ ಇಂದು ಭಾರತದ ಬಹುತೇಕ ಅಲಕ್ಷಿತ ತಳಸಮುದಾಯಗಳು ಹೆಚ್ಚು ಹೆಚ್ಚು ಶೋಷಣೆಗೆ ಒಳಗಾಗುತ್ತಿವೆ. ಸಾಮಾಜಿಕ ವಲಯದಲ್ಲಿ ಅತ್ಯಂತ ದುರ್ಬಲವಾಗಿರುವ ಮಾಲ ಸಮುದಾಯದ ಸಮಸ್ಯೆಯನ್ನು ಈ ಅಧ್ಯಯನದ ಪ್ರತಿ ಅಧ್ಯಾಯಗಳ ಮೂಲಕ ಗುರುತಿಸಲಾಗಿದೆ. ಕರ್ನಾಟಕದಲ್ಲಿನ ಮಾಲ (ಪರ್ವತ ಮಲ್ಲಯ್ಯ) ಸಮುದಾಯದ ಪ್ರಸ್ತುತ ಅಧ್ಯಯನಕ್ಕೆ ೩೨೪ ಕುಟುಂಬಗಳನ್ನು ಕರ್ನಾಟಕದ ಮಾಲ(ಪರ್ವತ ಮಲ್ಲಯ್ಯ) ಸಮುದಾಯದವರು ಕೊಪ್ಪಳ, ಗದಗ, ಧಾರವಾಡ, ರಾಯಚೂರ, ಶಿವಮೊಗ್ಗ, ಹಾವೇರಿ,

ಮೈಸೂರ, ಏಳು ಜಿಲ್ಲೆಗಳು ಸೆರಿದಂತೆ, ಕರ್ನಾಟಕದ ಇಪ್ಪತ್ತೈದು ಹಳ್ಳಿಗಳಲ್ಲಿ ನೆಲೆಸಿದ್ದಾರೆ. ಏಳು ಜಿಲ್ಲೆಗಳ ಮಾಲ ಸಮುದಾಯದ ಹಿರಿಯರು ಯುವಕರು ಅನುಭವಿ ತಜ್ಞರ ಮತ್ತು ಕೆಲವು ತಿಳಿವಳಿಕೆದಾರರ ಮಾಹಿತಿ ಆಧರಿಸಿ ಅಧ್ಯಯನ ಫಲಿತಗಳನ್ನು ಗುರುತಿಸಲಾಗಿದೆ. ಒಟ್ಟಾರೆಯಾಗಿ ಈ ಅಧ್ಯಯನದಿಂದ ಕಂಡುಬಂದ ಫಲಿತಗಳು ಈ ಕೆಳಗಿನಂತಿವೆ.

ಅಧ್ಯಯನದ ಪ್ರಮುಖ ಫಲಿತಗಳು

೧ ಮಾಲ ಸಮುದಾಯದವರನ್ನು ಸಾಮಾಜಿಕವಾಗಿ ತಮ್ಮ ವೃತ್ತಿಸೂಚಕ ಪದಗಳನ್ನಾಧರಿಸಿ ಪರ್ವತ ಮಲ್ಲಯ್ಯನವರು, ಮಲ್ಲರು, ಶ್ರೀಶೈಲ ಮಲ್ಲಯ್ಯನವರು, ಮಲ್ಲಯ್ಯನವರು, ಮಾಲ ಜಂಗಮರು, ಜಂಗಮರು, ಬುಡುಗ ಜಂಗಮರು, ಮುತ್ತುಗಾರರು, ಚನ್ನಮಲ್ಲಯ್ಯನವರು, ಮಾಲ ಎಂದು ಅವರು ಮಾಡುವ ವೃತ್ತಿಯ ಆಧಾರದ ಮೇಲೆ ಈ ರೀತಿ ಹಲವಾರು ಹೆಸರಿನಿಂದ ಕರೆಯುತ್ತಾರೆ.

೨ ಮಾಲ ಸಮುದಾಯದವರ ಪಂಗಡಗಳನ್ನು ದಾಸನೂರ ಕೂಸಣ್ಣನವರು ಒಟ್ಟು ೩೭ ಇರುತ್ತವೆ ಎಂದು ಗುರುತಿಸಿರುವರು ಅದರಲ್ಲಿ ಹೆಚ್ಚಾಗಿ ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಕಂಡುಬರುತ್ತವೆ. ಆದರೆ ಕರ್ನಾಟಕದ ಮಾಲ (ಪರ್ವತ ಮಲ್ಲಯ್ಯ) ಸಮುದಾಯದವರಲ್ಲಿ ನರಸಲ್, ಗುಂಡರೆಡ್ಡಿ, ಲದ್ದಲ್, ಉಳ್ಳಿ, ಬಂಗಾರಿ, ಬೋಗಿ, ಬಂದೂಕ, ಬಬ್ಬಲ್, ಪರ್ವತ್ತೆರ, ಮುತ್ತುಗಾರರು, ಗುಡ್ಡದರ, ಎಂಬ ಹನ್ನೊಂದು ಮನೆತನಗಳು ಮಾತ್ರ ಕಂಡುಬರುತ್ತವೆ.

೩ ಮಾಲ ಸಮುದಾಯವು ಕರ್ನಾಟಕದಲ್ಲಿ ಅಲ್ಪಜನಸಂಖ್ಯೆಯನ್ನು ಹೊಂದಿದ್ದು ಅಲೆಮಾರಿತನವನ್ನು ಮೈಗೂಡಿಸಿಕೊಂಡಿದೆ.

೪. ಕರ್ನಾಟಕದಲ್ಲಿ ಇವರು ಸ್ಥಳಿಯವಾಗಿ ಪರ್ವತ ಮಲ್ಲಯ್ಯನವರು ಎಂದು ಗುರುತಿಸಲ್ಪಟ್ಟಿದ್ದು ಕರ್ನಾಟಕದಲ್ಲಿ ೩೨೪ ಕುಟುಂಬಗಳು ಮಾತ್ರ ಕಂಡುಬರುತ್ತವೆ. ಇವರ ಜನಸಂಖ್ಯೆ ಕೇವಲ ೧೬೪೧ ಇದ್ದು ಇದರಲ್ಲಿ ಪುರುಷರು ೮೧೮ ಇರುತ್ತಾರೆ. ಮಹಿಳೆಯರು ೮೨೩ ಜನರು ಇರುತ್ತಾರೆ. ಮಾಲ ಸಮುದಾಯದವರು ಕೊಪ್ಪಳ ಜಿಲ್ಲೆಯಲ್ಲಿ ಅತಿ ಹೆಚ್ಚು ಜನರು ವಾಸವಾಗಿದ್ದಾರೆ. ಇದೊಂದು ಅಲ್ಪ ಜನಸಂಖ್ಯಾ ಸಮುದಾಯವಾಗಿದೆ.

೫ ಮಾಲ ಸಮುದಾಯದವರು ಇಂದಿಗೂ ಅಲೆಮಾರಿತನವನ್ನು ಮೈಗೂಡಿಸಿಕೊಂಡಿದ್ದು ಊರಿನ ಹೊರಭಾಗದಲ್ಲಿ ಪ್ರತ್ಯೇಕವಾಗಿ ಗುಡಾರಗಳನ್ನು ರಚಿಸಿಕೊಂಡು ನೆಲೆಸುವರು. ಮತ್ತು ಸಮುದಾಯದವರು ವಸತಿಹೀನರಾಗಿದ್ದಾರೆ, ಶೇಕಡ ೫೬.೫೨ರಷ್ಟು ಜನರು ಇನ್ನು ಗುಡಾರಗಳಲ್ಲಿ ವಾಸಮಾಡುತ್ತಿದ್ದಾರೆ.

೬. ಮಾಲ ಸಮುದಾಯದ ಮೂಲ ಮತ್ತು ಚರಿತ್ರೆಯಿಂದ ತಿಳಿದು ಬರುವ ಹಾಗೆ ಹಿಂದೆ ಮಾಲ ಸಮುದಾಯದ ಪೂರ್ವಜರು ಯುದ್ದಕಾಲದಲ್ಲಿ ಸೈನ್ಯದೂಳಗೆ ವಾಧ್ಯ ಪರಿಕರಗಳನ್ನು ನುಡಿಸಲು ನಿಯೋಜಿತರಾಗಿದ್ದರೆಂದು ತಿಳಿದು ಬರುವ ಹಾಗೆ ಯುದ್ದ ಪರಿಕರಗಳಾದ ಕತ್ತಿ, ಕೋಲು, ಬರ್ಚಿ, ಚಕ್ರ, ದಾಲ್‌ಪಟ ಇವುಗಳೆಲ್ಲವನ್ನು ಉಪಯೋಗಿಸಿ ತಮ್ಮ ಪ್ರದರ್ಶನ ಕಲೆಗಳಾಗಿ ಮಾರ್ಪಡಿಸಿಕೊಂಡು ಸುಮಾರು ೨೪ ಪ್ರದರ್ಶನಗಳನ್ನು ಕಲೆಗಳನ್ನು ಜಾತ್ರೆ, ಉತ್ಸವಗಳಲ್ಲಿ, ಮದುವೆ ಸಮಾರಂಭಗಳಲ್ಲಿ

ತಮ್ಮ ಸಾಂಸ್ಕೃತಿಕ ಆಟಗಳನ್ನು ಪ್ರದರ್ಶಿಸಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಮಾಲ ಸಮುದಾಯದವರು ತಮ್ಮ ಸಾಂಸ್ಕೃತಿಕ ಆಟಗಳನ್ನು ಆಡಲೆಂದು ಕರ್ನಾಟಕದ ಮಾಲ ಸಮುದಾಯದವರು ಒಟ್ಟು ಒಂಬತ್ತು ಸಂಘಗಳನ್ನು ತಮ್ಮ ಆರಾಧ್ಯ ದೇವರಿನ ಹೆಸರಿನಲ್ಲಿ ಚಾಲನೆಗೆ ತಂದಿದ್ದಾರೆ.

೭. ಮಾಲ ಸಮುದಾಯದವರು ತಮ್ಮ ಜೀವನೋಪಾಯಕ್ಕಾಗಿ ಶೇಕಡಾ ೩೩.೮೫ ಕೃಷಿಕೂಲಿಗಳಾಗಿರುವರು. ಶೇಕಡಾ ೧೮.೨೮ ಕೃಷಿಯೇತರ ಕೂಲಿಯವರಾಗಿರುವರು. ಶೇಕಡ ೧೩.೧೮ ರಷ್ಟು ರದ್ದಿ ಆಯುವ ಕೆಲಸವನ್ನು ಮಾಡುವರು. ಶೇಕಡ ೨.೫೬ರಷ್ಟು ರಿಕ್ಷಾ ಒಡಿಸುವರು. ಶೇಕಡ ೬.೨೦ರಷ್ಟು ಸಣ್ಣ ವ್ಯಾಪಾರ ಮಾಡುವರು. ಶೇಕಡ ೧೫.೫೫ರಷ್ಟು ಧಾರ್ಮಿಕ ಭಿಕ್ಷಾಟನೆ ಮಾಡುವರು. ಶೆಕಡ ೫.೧೫ರಷ್ಟು ಇತರೆ ಕೆಲಸಗಳಲ್ಲಿ ತೊಡಗಿದವರಾಗಿದ್ದಾರೆ.ಹೆಚ್ಚು ಜನರು ಭಿಕ್ಷಾಟನೆಯೇ ತನ್ನ ಧರ್ಮವೆಂದು ಪರಿಗಣಿಸಿ ಸಹಜವೆಂಬಂತೆ ಇಂದಿಗೂ ಭಿಕ್ಷಾಟನೆಯಲ್ಲಿಯೇ ಜೀವನ ನಡೆಸುವುದು.

೮. ಅತ್ಯಂತ ಬಡತನದಲ್ಲಿರುವ ಮಾಲ ಸಮುದಾಯದವರ ಸ್ಥಿತಿ ಚಿಂತಾಜನಕವಾಗಿದೆ. ಕೃಷಿ ಕೂಲಿಯನ್ನು ನಂಬಿ ಬದುಕುತ್ತಿರುವ ಕೆಲವರಿಗೆ ಶಮಕ್ಕೆ ತಕ್ಕಂತೆ ನಿಜವಾದ ಕೂಲಿ ದೊರೆಯದೆ ಕಾರಣ ಇವರಲ್ಲಿ ವಲಸೆ ಹೂಗುವ ಕ್ರಮ ಹೆಚ್ಚಾಗುತ್ತಾ ಬರುತ್ತದೆ. ದೂರದ ಬೇರೆ ಊರಿಗೆ ಕೆಲಸಗಳನ್ನು ಉಡುಕಿಕೊಂಡು ಹೊಗುವದರಿಂದ ಮಕ್ಕಳ ಶಿಕ್ಷಣ ಕುಂಟಿತಗೊಂಡು ಮತ್ತಷ್ಟು ಅಶಿಕ್ಷಿತರಾಗಲು ಕಾರಣವಾಗಿದೆ.

೯. ಮಾಲ ಸಮುದಾಯದವರು ಆಚರಿಸುವ ಪ್ರತಿಯೋಂದು ಕಾರ್ಯಕ್ರಮಗಳಲ್ಲಿ ಮಧ್ಯಪಾನ ಸೇವಿಸುತ್ತಾರೆ.

೧೦. ಆಧುನಿಕ ಶಿಕ್ಷಣ ಪಡೆಯುವಲ್ಲಿ ಮಾಲ ಸಮುದಾಯವು ಬಹುತೇಕ ವಂಚಿತವಾಗಿದೆ. ಇಂದಿಗೂ ಈ ಸಮುದಾಯ ಪರಿಶಿಷ್ಟ ಜಾತಿ ಪ್ರಮಾಣ ಪಡೆಯಲು ಕಷ್ಟಪಡಬೇಕಾದ ಸ್ಥಿತಿ ಇದೆ. ಮಾಲ ಸಮುದಾಯದವರಲ್ಲಿ ಯಾವೂಬ್ಬ ಹೆಣ್ಣು ಮಗಳಾಗಲಿ ಗಂಡುಮಕ್ಕಳಾಗಲಿ ಹೆಚ್ಚಿನ ಸಂಖ್ಯೆ ವಿಧ್ಯಾರ್ಹತೆ ಪಡೆದಿರುವದಿಲ್ಲ ಮತ್ತು ಯಾವುದೇ ತಾಂತ್ರಿಕ ಕೊರ್ಸ, ವೃತ್ತಿಪರ ಕೊರ್ಸ, ಸ್ನಾತ್ತಕ್ಕೋತ್ತರ ಪದವಿಗಳನ್ನು ಪಡೆದಿರುವುದಿಲ್ಲ. ಮಾಲ ಸಮುದಾಯದ ಯಾವೂಬ್ಬ ವ್ಯಕ್ತಿಯು ಸರಕಾರಿ ನೌಕರಿಯಲ್ಲಿ ಇರುವುದಿಲ್ಲ.

ಇತರೆ ಫಲಿತಗಳು

೧೧. ಮಾಲ ಸಮುದಾಯದರಲ್ಲಿ ೩೨೨ ಕುಟುಂಬಗಳಲ್ಲಿ ಇನ್ನು ೫೭ ಕುಟುಂಬಗಳಿಗೆ ಪಡಿತರ ಚೀಟಿಗಳು ಇರುವುದಿಲ್ಲ.

೧೨.ರಾಜಕೀಯವಾಗಿ, ಆರ್ಥಿಕವಾಗಿ ಈ ಸಮುದಾಯ ತುಂಬಾ ಹಿಂದುಳಿದಿದ್ದಾರೆ.

೧೩.ಮಾಲ ಸಮುದಾಯದವರು ಮೂಲತಃ ಆಂಧ್ರಪ್ರದೇಶದಿಂದ ಕರ್ನಾಟಕ್ಕೆ ವಲಸೆ ಬಂದವರಾಗಿದ್ದು ಇವರ ಮಾತೃಭಾಷೆ ತೆಲುಗು ಆಗಿರುತ್ತದೆ. ತೆಲುಗು ಮಾತನಾಡುವದರೂಂದಿಗೆ ಕನ್ನಡವನ್ನು ಸುಲಲಿತವಾಗಿ ಮಾತನಾಡುತ್ತಾರೆ.

೧೪. ಮಾಲ ಸಮುದಾಯದ ನಾನಾ ಪಂಗಡಗಳು ಕರ್ನಾಟಕಕ್ಕೆ ವಲಸೆ ಬಂದಿವೆ ಮತ್ತು ಮಾಲ ಸಮುದಾಯದಲ್ಲಿ ಹಲವಾರು ಒಳಪಂಗಡಗಳು ಇರುತ್ತವೆ ಆ ಒಳಪಂಗಡಗಳಿಗೆ ಪ್ರತ್ಯೇಕ ಬೆಡಗುಗಳಿವೆ ಅವುಗಳಲ್ಲಿ ಮುಖ್ಯವಾಗಿ ನೆಟ್‌ಪಾನಿವಂಡ್ಲು, ಮಾಲ(ನೆಕಾರಿಕೆ ಮಾಡುವವರು) ಅರುವ ಮಾಲ, ಕಂಠ ಮಾಲ, ಮುರುಕಿನಾಡು ಮಾಲ, ಪೂಕಿನಾಡಿ ಮಾಲ, ರೆಡ್ಡಿಭೂಮಿ ಮಾಲ, ಸರಿಂಡ್ಲಾ ಮಾಲ, ದಿಂಡ್ಲುಲಾ ಮಾಲ ಎಂಬ ಪಂಗಡಗಳು ಕಂಡುಬರುತ್ತವೆ. ಈ ಎಲ್ಲಾ ಪಂಗಡದವರು ಒಂದೇ ಜಾತಿ ಮೂಲದವರಾದರು ಅವರುಗಳ ವೃತ್ತಿ ಆಧಾರದ ಮೇಲೆ ಪಂಗಡಗಳಾಗಿ ವಿಂಗಡನೆಯಾಗಿರುವುದಾಗಿರುತ್ತವೆ. ಸರಿಂಡ್ಲಾ ಕಳ್ಳುಬಳ್ಳಿಗೆ ಸೇರಿದವರು ಕರ್ನಾಟಕದ ಅಲೆಮಾರಿ ಮಾಲ ಸಮುದಾಯವಾಗಿದೆ.

೧೫. ಮಾಲ ಸಮುದಾಯದವರು ಸಾಮಾಜಿಕವಾಗಿ ತಮ್ಮ ಪಾರಂಪರಿಕ ಜೀವನಾವರ್ತಕ ಆಚರಣೆಗಳನ್ನು ಆಧುನಿಕರಣಕ್ಕೊಳಪಡಿಸದೆ ತಮ್ಮದೆ ಆದ ವಿಧಿ-ವಿಧಾನಗದಲ್ಲಿ ತಮ್ಮ ಸಂಸ್ಕೃತಿಯ ಚೌಕಟ್ಟಿನಲ್ಲಿ ಆಚರಿಸುತ್ತಾ ಬರುತ್ತಿದ್ದಾರೆ.

೧೬. ಕರ್ನಾಟಕದ ಮಾಲ ಸಮುದಾಯದವರು ತಮ್ಮ ವಾರ್ಷಿಕಾವರ್ತನ ಆಚರಣೆಗಳಲ್ಲಿ ಪ್ರಮುಖವಾಗಿ ಮಾಹಾನವಮಿ ಮತ್ತು ಯುಗಾದಿ ಹಬ್ಬವನ್ನು ಆಚರಿಸುತ್ತಾರೆ. ಇವರು ಹೆಚ್ಚಾಗಿ ಶಕ್ತಿ ದೇವತೆಗಳ ಆರಾಧಕರು ಆಗಿದ್ದಾರೆ. ಮಾಹಾನವಮಿ ಹಬ್ಬದಲ್ಲಿ ಗಾಳಿದುರಗಮ್ಮ ಮತ್ತು ದುರ್ಗಾಪರಮೇಶ್ವರಿ ಹಬ್ಬವನ್ನು ಸಮುದಾಯದ ಸದಸ್ಯರೆಲ್ಲರು ಒಟ್ಟಿಗೆ ಸೇರಿ ಆಚರಿಸುತ್ತಾರೆ. ಈ ಹಬ್ಬದಲ್ಲಿ ಹಿರಿಯರ ಹಬ್ಬಕ್ಕೆ ಮಾಂಸಹಾರಿ ಮಾಡಿ ಪೂಜೆ ಮಾಡುವುದರ ಮೂಲಕ ಹಿರಿಯರಿಗೆ ಅಥವಾ ಸತ್ತ ವ್ಯಕ್ತಿಗೆ ಶಾಂತಿಯನ್ನು ಬಯಸುತ್ತಾರೆ. ವಿಜಯದಶಮಿಯ ದಿವಸ ಮಾಲ ಸಮುದಾಯದವರು ಭಿಕ್ಷೆಗೆ ಒಯ್ಯುವ ಕಂಬಿ, ತಾವು ಆಟಕ್ಕಾಗಿ ಅಥವಾ ಪ್ರದರ್ಶನ ಕಲೆಗಾಗಿ ಉಪಯೂಗಿಸುವ ಈಟಿ, ಕತ್ತಿ, ಕೋಲು, ಸಂಬಾಳ, ಚಕ್ರಗಳನ್ನು, ಪೂಜಿಸುತ್ತಾರೆ.

೧೭. ಸ್ತ್ರೀ ದೈವಗಳ ಆರಾಧಕರು ಆಗಿದ್ದಾರೆ. ದುರಗಮ್ಮ, ಸುಂಕ್ಲಮ್ಮ, ಹುಲಿಗೆಮ್ಮ, ಮಾರಮ್ಮ, ಚೌಡೇಶ್ವರಿ ಎಂಬ ದೇವತೆಗಳನ್ನು ಆರಾಧಿಸುತ್ತಾರೆ. ಸದಾ ಅಲೆಮಾರಿಯಾದ ಮಾಲ ಸಮುದಾಯದವರು ಬೇರೆ ಯವುದೇ ಊರಿನಲ್ಲಿದ್ದರು ಸಹ ಪ್ರತಿ ದಸರಾ ಹಬ್ಬಕ್ಕೂಮ್ಮೆ ಕೊಪ್ಪಳ ಜಿಲ್ಲೆಯ ಚಿಲಕಮುಖಿ ಗ್ರಾಮಕ್ಕೆ ದುರ್ಗಾಪರಮೇಶ್ವರಿ ಜಾತ್ರೆಗೆ ಪ್ರತಿಯೊಬ್ಬ ಸದಸ್ಯರು ಬರಲೇಬೇಕು ಆ ಹಬ್ಬಕ್ಕೆ ಬರಲಾರದ ವ್ಯಕ್ತಿಗೆ ೧೦೦ ರೂಪಾಯಿ ದಂಡ ಹಾಕಲಾಗುತ್ತದೆ. ದುರ್ಗಾಪರಮೇಶ್ವರಿ ಜಾತ್ರೆಗೆ ಪ್ರತಿಯೊಂದು ಮನೆಯ ಸದಸ್ಯರು ಸೇರಿ ಹಣವನ್ನು ಸಂಗ್ರಹಿಸಿ ಕುರಿಯನ್ನು ತಂದು ದೇವಿ ಹೆಸರಿನಲ್ಲಿ ಪೂಜಿಸಿ ಅದನ್ನು ಬಲಿಕೊಡುವ ಪದ್ಧತಿ ಇವರಲ್ಲಿದೆ ನಂತರ ದೈವದೂಟವನ್ನು ಮಾಡಿ ಸಾಮೂಹಿಕವಾಗಿ ಊಟವನ್ನು ಸೇವಿಸುವರು. ಇವರು

೧೮. ಮಾಲ ಸಮುದಾಯದವರು ತಾವು ನಲ್ಲಮಲೆಯ ಕಾಡಿನಿಂದ ಬಂದವರು ತಮ್ಮ ಆರಾಧ್ಯ ದೇವರು ಶ್ರೀಶೈಲ ಮಲ್ಲಯ್ಯ ಎಂದು ಪ್ರತಿ ವರ್ಷ ಶಿವರಾತ್ರಿಗೂಮ್ಮೆ ಮನೆಗೂಬ್ಬರು ಮಲ್ಲಯ್ಯನಿಗೆ

ಪಾದಯಾತ್ರೆ ಮಾಡುತ್ತಾರೆ. ತಾವು ಭಿಕ್ಷೆ ಬೇಡುವ ಕಂಬಿ (ದೇವರ ಪೆಟ್ಟಿಗೆ) ಯಲ್ಲಿ ಶ್ರೀಶೈಲ ಮಲ್ಲಯ್ಯನ ಮೂರ್ತಿಯನ್ನು ಇಟ್ಟುಕೊಂಡು ಭಿಕ್ಷೆ ಬೇಡಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ.

೧೮. ಮಾಲ ಸಮುದಾಯದವರಲ್ಲಿ ಜಾತಿಯ ಹೊರತಾದ ವ್ಯಕ್ತಿಯನ್ನು ಮತ್ತು ಪರಜಾತಿಯ ಹೆಣ್ಣನ್ನು ವಿವಾಹವಾದರೆ ಸಾರ್ವಜನಿಕವಾಗಿ ತಲೆಬೋಳಿಸುವ ಕ್ರಮ ಈ ಸಮುದಾಯದವರಲ್ಲಿರುತ್ತದೆ. ಈ ಸಮುದಾಯದಲ್ಲಿ ದೈವದ ಮಾತಿಗೆ ವಿರುದ್ದವಾಗಿ ನಡೆದುಕೊಂಡಲ್ಲಿ ಅಂತಹ ವ್ಯಕ್ತಿಯನ್ನು ಮತ್ತು ಆ ಕುಟುಂಬವನ್ನು ಜಾತಿ ಬಹಿಸ್ಕಾರ ಹಾಕುವ ಮೂಲಕ ಶಿಕ್ಷೆಗೆ ಗುರಿಪಡಿಸಲಾಗುವದು.

೧೯. ಮಾಲ ಸಮುದಾಯದ ಶುದ್ದತೆ ನಿಷೇಧದಿಂದ ಅಂತರ್ಜಾತಿಯ ವಿವಾಹಗಳು ಕಂಡುಬರುವದಿಲ್ಲ.

೨೦. ಮಾಲ ಸಮುದಾಯದ ಮದುವೆ, ಪ್ರಮುಖವಾದ ಹಬ್ಬ ಆಚರಣೆಗಳಲ್ಲಿ, ಮತ್ತು ಮದುವೆ ಸಂಧರ್ಬದಲ್ಲಿ ಈ ಸಮುದಾಯದ ಮಧುಮಕ್ಕಳಿಗೆ ತಾಳಿ ಕಟ್ಟುವ ಕಾರ್ಯಕ್ರವನ್ನು ಪುರೋಹಿತರನ್ನು ಕರೆಸದೆ ಕಟ್ಟೆಮನೆ ಯಜಮಾನರಲ್ಲಿ ಗೌಡ (ನರಸಲ್) ಶಾನುಭೋಗ (ಗುಂಡರೆಡ್ಡಿ) ವಾಲಿಕಾರ (ಲದ್ದಲ್) ಇರುವರು.

೨೧. ಮಾಲ ಸಮುದಾಯದ ಪ್ರತಿಯೊಂದು ಸಂಘದವರು ಆಡುವಂತಹ ಪ್ರದರ್ಶನ ಕಲೆಗಳು ಮಧ್ಯಯುಗಿನ ಕಾಲದಲ್ಲಿ ಯುದ್ದದ ಸಂದರ್ಭದಲ್ಲಿ ಎದುರಾಳಿಗಳ ವಿರುದ್ದ ಆಡುವಂತಹ ಯುದ್ದ ಕಲೆಗಳಾಗಿರುತ್ತವೆ. ಪ್ರತಿಯೊಂದು ಸಂಘದವರು ಆಡುವಂತಹ ಆಟಗಳಾದ ಚಕ್ರದಾಟದ ವಿಧಗಳು, ಕೋಲಿನಾಟದ ವಿಧಗಳು, ಸಮರ ಕಲೆಯ ವಿಧಗಳು, ಸಾಂಸ್ಕೃತಿಕ ಆಟದ ವಿಧಗಳು. ಎಲ್ಲಾ ಸೇರಿ ಒಟ್ಟು ೨೪ ಆಟಗಳನ್ನು ಆಡಿ ತಮ್ಮ ಆರ್ಥಿಕ ಸಮಸ್ಯೆಯನ್ನು ನಿಭಾಯಿಸಿಕೊಳ್ಳುತ್ತಾರೆ.

೨೨. ಮಾಲ ಸಮುದಾಯದವರು ತಮ್ಮ ಉಪಜೀವನಕ್ಕಾಗಿ ಪಾರಂಪರಿಕ ವೃತ್ತಿಯ ಬದಲಾಗಿ ಪರ್ಯಾಯ ವೃತ್ತಿಗಳನ್ನು ಅನುಸರಿಸಿದರೂ ಆರ್ಥಿಕವಾಗಿ ಸಬಲರಾಗಿಲ್ಲ, ಕಾರಣ ಇವರ ಮೂಲ ವೃತ್ತಿಯಾದ ಭೀಕ್ಷಾಟನೆಯನ್ನು ಅವಲಂಬಿಸಿದ್ದು ಭೀಕ್ಷಾಟನೆ ಕಾಯ್ದೆ ಜಾರಿಗೆ ಬಂದಾಗಿನಿಂದ ಇನ್ನು ಇವರ ಪರಿಸ್ಥಿತಿ ಶೋಚನಿಯವಾಗಿದೆ.

೨೩. ಮಾಲ ಸಮುದಾಯದವರು ಮಾಂಸಹಾರಿಗಳಾಗಿದ್ದು ಇವರಲ್ಲಿ ಬೇಟೆ ಕ್ರಮ ಇತ್ತು ಆದರೆ ಇತ್ತೀಚಿನ ಬೇಟೆ ನಿಷೇಧ ಕಾನೂನಿನ ಕಟ್ಟುನಿಟ್ಟಿನ ಕ್ರಮದಿಂದಾಗಿ ಬೇಟೆ ಆಡುವದನ್ನು ನಿಷೇಧಿಸಿದ್ದಾರೆ.

೨೪. ಮಾಲ ಸಮುದಾಯದವರು ಸರಕಾರಿ ಸೌಲಭ್ಯಗಳನ್ನು ಪಡೆಯಲು ಚಹರೆ ಸಮಸ್ಯ ಅತಿಯಾಗಿ ಕಾಡುತ್ತಿದೆ. ಮತ ಬ್ಯಾಂಕ್ ರಾಜಕಾರಣಕ್ಕಾಗಿ ಆಧಾರಕಾರ್ಡ ಮತದಾರರ ಕಾರ್ಡ ಪಡೆದಿರುವರು.

೨೫. ಮಾಲ ಸಮುದಾಯದವರಲ್ಲಿ ಆರೋಗ್ಯ ರಕ್ಷಣೆಗಾಗಿ ಸಾಂಪ್ರದಾಯಿಕ ಮನೆಮದ್ದು ಎಂಬ ವೈದ್ಯ ಪದ್ದತಿ ಇರುತ್ತದೆ.

೨೬.ಈ ದೇಶದ ಸಂವಿಧಾನದಡಿ ಲಿಂಗಭೇದ, ಜಾತಿಭೇದಗಳಿಲ್ಲದೆ ಎಲ್ಲರಿಗೂ ಸಮಾನ ಹಕ್ಕುಗಳಿವೆ ಎಂದಿದ್ದರೂ ಅಸ್ಪೃಶ್ಯ ಅಲಕ್ಷಿತ ಸಮುದಾಯಗಳು ಇನ್ನೂ ಮುಖ್ಯವಾಹಿನಿಗೆ ಬರಲು ಸಾಧ್ಯವಾಗಿಲ್ಲ.

೨೭. ಕರ್ನಾಟಕದಲ್ಲಿ ನೆಲೆ ನಿಂತಿರುವ ಮಾಲ ಸಮುದಾಯವು ಇಂದಿಗೂ ತನ್ನ ಸ್ಥಾನಮಾನದ ಕುರಿತು ಯಾವುದೇ ಪರಿವೆ ಹೊಂದಿಲ್ಲವೆಂಬುದು, ಅದರಲ್ಲಿಯೂ ಅಸ್ಪೃಶ್ಯರಲ್ಲಿಯೇ ಅಸ್ಪೃಶ್ಯವಾಗಿರುವ ಈ ಸಮುದಾಯದ ಸ್ಥಿತಿ ಇತರ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡಿರುವ ಅಸ್ಪೃಶ್ಯ ಸಮುದಾಯಗಳಿಗಿಂತ ಶೋಚನೀಯವಾಗಿರುವುದು.

೨೮. ಆಧುನೀಕರಣ ಹಾಗೂ ಜಾಗತೀಕರಣದ ಪ್ರಭಾವ ಮಾಲ ಸಮುದಾಯದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನ ಮೇಲೆ ಪ್ರಭಾವ ಬೀರಿದ್ದು ಅವರು ಈ ವ್ಯವಸ್ಥೆಯಲ್ಲಿ ಅತಂತ್ರ ಸ್ಥಿತಿಯನ್ನು ಅನುಭವಿಸುವಂತಾಗಿದೆ.

ಪ್ರಮುಖ ಸಲಹೆಗಳು

೧ ಪರ್ಯಾಯ ಹೆಸರುಗಳಿರುವ ಮಾಲ ಸಮುದಾಯದವರಿಗೆ ಒಂದೇ ಹೆಸರನ್ನು ಆಧರಿಸಿ ಗುರುತಿಸಬೇಕು. ಇವರಿಗೆ ಸ್ಥಳಿಯವಾಗಿ ಸಮಾಜದಲ್ಲಿ ಹೆಚ್ಚಾಗಿ ಪರ್ವತ ಮಲ್ಲಯ್ಯನವರು ಎಂದು ಕರೆಯುತ್ತಾರೆ. ಆದರೆ ಈ ಪದ ಇವರ ವೃತ್ತಿ ಸೂಚಕ ಪದವಾಗಿರುತ್ತದೆ. ಪರ್ವತ ಮಲ್ಲಯ್ಯ ಎಂಬ ಪದ ಸಂವಿಧಾನದಲ್ಲಿ ಉಲ್ಲೇಖವಿರುವದಿಲ್ಲ. ಆದ್ದರಿಂದ ಪರ್ವತ ಮಲ್ಲಯ್ಯ ಎಂಬ ಪದ ಬಳಕೆಯಿಂದ ಇವರಿಗೆ ಸರಕಾರದಿಂದ ಇದುವರೆಗು ಯಾವುದೇ ಸೌಲಭ್ಯಗಳು ದೊರೆತಿರುವುದಿಲ್ಲ. ಆದ್ದರಿಂದ ಮಾಲ ಮತ್ತು ಪರ್ವತ ಮಲ್ಲಯ್ಯ ಇವೆರಡು ಪದ ಒಂದೇ ಆಗಿರುವದರಿಂದ ಇವುಗಳ ಆಧಾರದ ಮೇಲೆ ಇವರಿಗೆ ಸರಕಾರದಿಂದ ಬರುವ ವಿವಿಧ ಯೋಜನೆಯ ಸೌಲಭ್ಯಗಳನ್ನು ಒದಗಿಸಬೇಕು.

೨. ಮಾಲ(ಪರ್ವತ ಮಲ್ಲಯ್ಯ) ಸಮುದಾಯದವರ ಮನೆತನಗಳು ಕರ್ನಾಟಕದಾದ್ಯಂತ ಕೇವಲ ಹನ್ನೊಂದು ಮಾತ್ರ ಇರುತ್ತವೆ ಆ ಹನ್ನೊಂದು ಮನೆತನಗಳಿಗೆ ಒಂದೊಂದರಂತೆ ಹನ್ನೊಂದು ಬೆಡಗುಗಳು ಇರುತ್ತವೆ. ಆ ಬೆಡಗುಗಳನ್ನು ಕನ್ನಡದಲ್ಲಿ ಅನುವಾದಿಸಿದಾಗ ಅವುಗಳು ಕೆಲವು ಪ್ರಮುಖವಾದ ವಸ್ತುಗಳನ್ನು ಮತ್ತು ದೇವರಿನ ಹೆಸರಿನಿಂದ ನಿರ್ಧೆಶಿಸಲ್ಪಟ್ಟಿದ್ದು ಅಂತಹ ವಸ್ತುಗಳು ಆಯಾ ಮನೆತನದವರಿಗೆ ಕೆಲವು ವಿಧಿ ನಿಷೆದಗಳಿಂದ ಕೂಡಿರುತ್ತವೆ ಆದ್ದರಿಂದ ಇವರ ಮನೆತನ ಮತ್ತು ಬೆಡಗುಗಳ ಕುರಿತು ಹೆಚ್ಚಿನ ಅಧ್ಯಯನದ ಅಗತ್ಯವಿದೆ.

೩. ಮಾಲ ಸಮುದಾಯವು ಅತಂತ್ರವಾಗಿ ಅಲೆಮಾರಿ ಜೀವನ ಕೈಬಿಟ್ಟು ಒಂದೇ ಕಡೆ ನೆಲೆನಿಲ್ಲಲು ಬೇಕಾದ ಮೂಲಭೂತ ಸೌಲಭ್ಯಗಳನ್ನು, ಜೀವನಕ್ಕೆ ಅವಶ್ಯವಾದ ಭರವಸೆಯ ಸ್ಥಿರತೆಯನ್ನು ಕಲ್ಪಿಸಿಕೊಡಬೇಕು.

೪ ಮಾಲ ಸಮುದಾಯದವರಲ್ಲಿ ಪುರುಷರು ೮೧೮ ಇರುತ್ತಾರೆ ಮಹೀಳೆಯರು ೮೨೩ ಇರುತ್ತಾರೆ. ಅಂದರೆ ಪುರುಷರು ೪೯.೮೫ರಷ್ಟು ಇರುತ್ತಾರೆ ಮಹೀಳೆಯರು ೫೦.೧೫ರಷ್ಟು ಇರತ್ತಾರೆ. ಈ ಸಮುದಾಯದಲ್ಲಿ ೧೦೦೦ ಪುರುಷರಿಗೆ ೧೦೦೬ ಮಹಿಳೆಯರು ಇರುತ್ತಾರೆ. ಇಲ್ಲಿ ಪುರುಷರ ಪ್ರಮಾಣಕ್ಕಿಂತ ಮಹಿಳೆರ ಪ್ರಮಾಣ ಹೆಚ್ಚು ಇರುತ್ತದೆ. ಈ ಸಮುದಾಯದಲ್ಲಿ ಪುರುಷರ ಸಂಖ್ಯೆ ಕಡಿಮೆ ಆಗಲಿಕ್ಕೆ ಇವರಲ್ಲಿರುವ ಅಲೆಮಾರಿತನದಿಂದ ಇವರಿಗೆ ಸರಿಯಾದ ಪೌಷ್ಠಿಕ ಆಹಾರ ಸಿಗದೆ ಇರುವುದು ಮತ್ತು ಇತರೆ ದುಶ್ಚಟ ನಿಷೇದಿತ ಕಾರ್ಯಕ್ರಮಗಳನ್ನು ಸರಕಾರ ಹಮ್ಮಿಕೊಳ್ಳಬೇಕು

೫. ಮಾಲ ಸಮುದಾಯದ ಕುಟುಂಬಗಳಿಗೆ ಹಳ್ಳಿ ಹಾಗೂ ನಗರಗಳಲ್ಲಿ ಗುಡಾರ ಮತ್ತು ಗುಡಿಸಲುಗಳಲ್ಲಿ ವಾಸಿಸುವ ಇವರಿಗೆ ಸರಕಾರದಿಂದ ಉಚಿತವಾಗಿ ಜಾಗ ಕಲ್ಪಿಸಿ ಇಂದಿರಾ ಆವಾಸ ಯೋಜನೆ. ಆಶ್ರೆಯ ಯೋಜನೆ ಮನೆಗಳನ್ನು ನೀಡಬೇಕು. ಆ ಮೂಲಕ ಮೂಲಭೂತ ಸೌಲಭ್ಯಗಳಾದ ವಿಧ್ಯುತ್, ಕುಡಿಯುವ ನೀರು, ಪಡಿತರ ಚೀಟಿ ನೀಡಬೇಕು

೬. ಮಾಲ ಸಮುದಾಯದ ಕಲಾವಿದರ ತಂಡಗಳನ್ನು ಗುರ್ತಿಸಿ ಅವರಿಗೆ ಸರಕಾರದಿಂದ ಧನಸಹಾಯ ದೊರಕುವಂತೆ ಮಾಡಬೇಕು. ಮಾಲ ಸಮುದಾಯದವರು ಅನಾದಿ ಕಾಲದಿಂದಲು ಪೋಷಿಸಿ ಪಾಲಿಸಿಕೊಂಡು ಬಂದ ಪರಂಪಾರಾಗತ ಕಲೆಗಳನ್ನು, ಅಲೆಮಾರಿ ಸಮುದಾಯಗಳ ಕಲೆಗಳ ಉಳಿವಿಗಾಗಿ ಪ್ರತ್ಯೇಕ ಕಲಾ ಅಕಾಡೆಮಿ ಸ್ಥಾಪಿಸಬೇಕು.

೭. ಮಾಲ ಸಮುದಾಯದ ಜನರು ಭಿಕ್ಷಾಟನೆ ಬಿಟ್ಟು ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳಲು ಅವಶ್ಯವಾದ ಸಾಲಸೌಲಭ್ಯಗಳನ್ನು ನೀಡುವುದು.

೮ ಸದಾ ದುಡಿಮೆಯನ್ನು ಅವಲಂಬಿಸಿರುವ ಮಾಲ ಸಮುದಾಯದವರಿಗೆ ಕೂಲಿ ದರವನ್ನು ಹೆಚ್ಚಿಸಿ ವರ್ಷಪೂರ್ತಿವರೆಗೆ ಕೆಲಸ ಮಾಡುವ ಅನುಕೂಲತೆಯನ್ನು ಸರಕಾರ ಮಾಡಬೇಕು.

೯. ಮಾಲ ಸಮುದಾಯದವರಿಗೆ ಸರಕಾರ ಆರ್ಥಿಕ ಭದ್ರತೆ ನೀಡಿ ಒಂದಡೆ ನೆಲೆ ನಿಲ್ಲುವಂತೆ ಮಾಡಬೇಕು. ಮಧ್ಯಪಾನ ನಿಷೇಧಿತ ಯೋಜನಾ ಕಾರ್ಯಕ್ರಮಗಳನ್ನು ಮತ್ತು ಮಧ್ಯಪಾನ ಸೇವನೆಯನ್ನು ತಡೆಗಟ್ಟಲು ಸರಕಾರದಿಂದ ಅವರಿಗೆ ಪ್ರತಿ ತಿಂಗಳಿಗೊಮ್ಮೆಯಾದರು ತಿಳಿವಳಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

೧೦ ಮಾಲ ಸಮುದಾಯದವರು ವಾಸವಿರುವ ಪ್ರದೇಶದಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆಯಬೇಕು. ಆ ಶಾಲೆಗಳಲ್ಲಿ ಅಡುಗೆ ಸಹಾಯಕಿಯರನ್ನು ಅದೇ ಸಮುದಾಯದ ಹೆಣ್ಣು ಮಕ್ಕಳನ್ನು ನೇಮಿಸಬೇಕು. ಆದ್ದರಿಂದ ಮಾಲ ಸಮುದಾಯದ ಮಕ್ಕಳಿಗೆ ಸ್ವಲ್ಪ ಮಟ್ಟಿಗೆ ಶಿಕ್ಷಣ ಕಲಿಯಲು ಉತ್ಸಾಹ ಬರುತ್ತದೆ. ಮಾಲ ಸಮುದಾಯದ ಮಕ್ಕಳಲ್ಲಿ ಆಲಿಸುವ ಕೊರತೆ, ಮಾತನಾಡುವ ಕೊರತೆ ಇರುವವರನ್ನು ಶಿಕ್ಷಕರು ಗುರುತಿಸಿ ಅವರನ್ನು ತರಗತಿಯಲ್ಲಿ ಎಲ್ಲಾ ಮಕ್ಕಳಿಗಿಂತ ಮುಂದೆ ಬಂದು ಕುಳಿತುಕೊಳ್ಳುವಂತೆ ಪ್ರೇರೆಪಿಸಬೇಕು.

ಇತರೆ ಸಲಹೆಗಳು

೧೧. ಪರಿಶಿಷ್ಟ ಸಮುದಾಯಗಳಿಗೆ ನೀಡುವ ರಾಜಕೀಯ ಮೀಸಲಾತಿಯಲ್ಲಿ ಮಾಲ ಹಾಗೂ ಅಂತಹ ಅಲಕ್ಷಿತ ಪರಿಶಿಷ್ಟ ಸಮುದಾಯಗಳಿಗೆ ನಿರ್ಧಿಷ್ಟ ಮೀಸಲಾತಿಯನ್ನು ನಿಗದಿಗೊಳಿಸುವುದು.

೧೨.ಮಾಲ ಸಮುದಾಯದಲ್ಲಿ ಹೆಚ್ಚಿನ ಪ್ರಮಾಣದ ಅಪ್ರಾಪ್ತ ವಯಸ್ಸಿನ ಮದುವೆಗಳು ನಡೆಯುತ್ತವೆ. ಅಂತಹ ಮದುವೆಗಳನ್ನು ನಿಯಂತ್ರಿಸಲು ಆ ಸಮುದಾಯಕ್ಕೆ ತಿಳುವಳಿಕೆಯನ್ನು ಕೊಡುವುದು.

೧೩.ಮಾಲ ಸಮುದಾಯವನ್ನು ಮುಖ್ಯವಾಹಿನಿಗೆ ತರಲು ಅವಶ್ಯವಾದ ಶಿಕ್ಷಣ, ಉದ್ಯೋಗ, ಆರ್ಥಿಕ ಭದ್ರತೆಯನ್ನು ಕಲ್ಪಿಸುವುದು.

೧೪. ಮಾಲ ಸಮುದಾಯದವರನ್ನು ಒಟ್ಟುಗೂಡಿಸಿ ಅವರಿಗೆ ಶಿಕ್ಷಣದ ಅರಿವನ್ನು ಮೂಡಿಸಿ ಇವರನ್ನು ಸಂಘಟಿಸುವುದರ ಜೊತೆಗೆ ಇವರ ಸಮಸ್ಯೆಗಳನ್ನು ಗ್ರಹಿಸಿ ಇವರಿಗೆ ಒಳ್ಳೆಯ ಸ್ಥಾನಮಾನ ನೀಡುವ ಅವಶ್ಯಕತೆಯಿದೆ.

೧೫. ಮಾಲ ಸಮುದಾಯದ ಚಾರಿತ್ರಿಕ ಹಿನ್ನಲೆಯನ್ನು ಅರಿಯದ ಇವರಿಗೆ ಸಮುದಾಯದ ಪ್ರಜ್ಞೆಯನ್ನು ಮೂಡಿಸುವ ಅಗತ್ಯತೆ ಇದೆ.

೧೬. ಶೈಕ್ಷಣಿಕ ಮಹತ್ವವನ್ನು ತಿಳಿಸುವದರ ಜೊತೆಗೆ ಬಾಲಕಾರ್ಮಿಕರಾಗದಂತೆ, ಬಾಲ್ಯವಿವಾಹಗಳನ್ನು ತಡೆಯಬಹುದು.

೧೭. ಶಿಕ್ಷಣದ ಅರಿವಿನೊಂದಿಗೆ ಸಮುದಾಯದ ಸಂಘಟನೆ ಮತ್ತು ಹಕ್ಕುಗಳ ಕುರಿತು ತಿಳುವಳಿಕೆ ಮತ್ತು ಹೋರಾಟದ ಅಗತ್ಯತೆ ಇರುತ್ತದೆ.

೧೮. ಪಾರಂಪರಿಕ ವೃತ್ತಿಗಳು ಮಾನ್ಯತೆ ಕಳೆದುಕೊಂಡಿರುವದರಿಂದ ಪರ್ಯಾಯ ವೃತ್ತಿಗಳ ಕಡೆ ಮುಖಮಾಡಬೇಕು.

೧೯. ಕಡಿಮೆ ಜನಸಂಖ್ಯೆ ಹೊಂದಿರುವ ಇವರಿಗೆ ವಿಶೇಷ ಮೀಸಲಾತಿ ನೀಡುವದರ ಮೂಲಕ ಅಭಿವೃದ್ಧಿಯೆಡೆಗೆ ಕೊಂಡೊಯ್ಯಬೇಕಾಗಿದೆ.

೨೦. ಕೊಳಚೆ ಪ್ರದೇಶದಲ್ಲಿ ಗುಡಾರಗಳನ್ನು ಹಾಕಿಕೊಂಡು ವಾಸಿಸುವ ಇವರ ನೆಲೆಗಳನ್ನು ಬೇರೆ ಕಡೆಗೆ ನಿಯೋಜಿಸಿ ಮೂಲಭೂತ ಅವಶ್ಯಕತೆಗಳನ್ನು ಒದಗಿಸುವದರಿಂದ ಸ್ವಲ್ಪಮಟ್ಟಿಗಾದರೂ ಇವರ ಜೀವನ ಶೈಲಿಯನ್ನು ಬದಲಾಯಿಸಬಹುದು.

೨೧. ಮಾಲ ಸಮುದಾಯದವರು ವಾಸಿಸುವ ಪ್ರದೇಶದಲ್ಲಿ ಮಕ್ಕಳ ಅಭಿವೃದ್ಧಿಗೊಸ್ಕರ ಅಂಗನವಾಡಿಗಳನ್ನು ತೆರೆಯಬೇಕು. ಅಂಗನವಾಡಿ ಕಾರ್ಯಕರ್ತೆಯರನ್ನು, ಅಡುಗೆ ಸಹಾಯಕಿಯರನ್ನು ಮಾಲ ಸಮುದಾಯದ ಹೆಣ್ಣು ಮಕ್ಕಳನ್ನು ನೇಮಕ ಮಾಡಿಕೊಳ್ಳಬೇಕು. ಇದರಿಂದ ಆ ಸಮುದಾಯದ ಮಕ್ಕಳ ಶಿಕ್ಷಣ ಮಟ್ಟ ಮತ್ತು ಅಪೌಷ್ಠಿಕತೆಯನ್ನು ಅಭಿವೃದ್ಧಿಪಡಿಸಬಹುದು.

೨೨. ಮಾಲ ಸಮುದಾಯದವರ ಮಾತೃ ಭಾಷೆ ತೆಲುಗು ಆಗಿರುವುದರಿಂದ ಆ ಸಮುದಾಯದ ಮಕ್ಕಳಿಗಾಗಿ ತೆಲುಗು ಭಾಷಾ ಪಠ್ಯಕ್ರಮಗಳನ್ನು ಜಾರಿಗೆ ತರಬೇಕು.

೨೩. ಮಾಲ ಸಮುದಾಯದ ಮಹಿಳೆಯರ ಮಹಿಳಾ ಸಂಘಟನೆಗಳನ್ನು ಸ್ಥಾಪಿಸಿ ಸ್ತ್ರೀಶಕ್ತಿ ಸಂಘಗಳು ಸಕ್ರೀಯವಾಗಿ ಕಾರ್ಯನಿರ್ವಹಿಸುವಂತೆ ಅನುಕೂಲ ಮಾಡಿಕೊಡಬೇಕು.

೨೪. ಮಾಲ ಸಮುದಾಯದವರು ವಾಸಿಸುವ ಪ್ರದೇಶಗಳಲ್ಲಿ ಅವರ ಆರೋಗ್ಯದ ಅನುಕೂಲಕ್ಕಾಗಿ ಪ್ರಾಥಮಿಕ ಆರೊಗ್ಯ ಘಟಕವನ್ನು ಸ್ಥಾಪಿಸಬೇಕು.

೨೫. ಮಾಲ ಸಮುದಾಯದವರ ಮಕ್ಕಳಿಗೆ ವಿಧ್ಯಾರ್ಥಿ ನಿಲಯದ ಪ್ರವೇಶಕ್ಕೆ ಪ್ರಥಮ ಆಧ್ಯತೆ ಕೊಡಬೇಕು.

೨೬. ಮಾಲ ಸಮುದಾಯದವರಿಗೆ ಸರಕಾರದ ವಿವಿಧ ಅಭಿವೃದ್ಧಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ದೊರಕಿಸಿಕೊಡಬೇಕು.

೨೭. ಮಾಲ ಸಮುದಾಯದ ಪ್ರತಿಯೊಂದು ಕುಟುಂಬದವರಿಗೆ ಅವರ ಅಲೆಮಾರಿ ಬದುಕನ್ನು ತಡೆಗಟ್ಟುವ ಸಲುವಾಗಿ ಸರಕಾರದಿಂದ ಸ್ವಂತ ಭೂಮಿಯನ್ನು ಒದಗಿಸಬೇಕು.

೨೮. ಮಾಲ ಸಮುದಾಯದವರು ವಾಸಿಸುವ ಗ್ರಾಮಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ, ದೇವಾಲಯಗಳಲ್ಲಿ, ಊರಿನ ಭಾವಿ, ಕೆರೆ, ಕಟ್ಟೆಗಳಲ್ಲಿ ಇವರಿಗೆ ಪ್ರವೇಶವನ್ನು ಒದಗಿಸಬೇಕು.

೨೯. ಮಾಲ ಸಮುದಾಯದವರಿಗೆ ಸ್ವಾಭಿಮಾನಿ ಜೀವನ ನಡೆಸಲು ಆರ್ಥಿಕ ಸಾಹಾಯವನ್ನು ಸರಕಾರ ಕಲ್ಪಿಸಿಕೂಡಬೇಕು.

೩೦. ಸಮುದಾಯದ ಪ್ರಗತಿಗಾಗಿ ಜಾರಿಗೆ ತಂದಂತಹ ಸರಕಾರದ ಯೋಜನೆಗಳ ಬಗ್ಗೆ ತಿಳುವಳಿಕೆ ನೀಡಬೇಕು.

೩೧. ಮಾಲ ಸಮುದಾಯದವರು ವಾಸಿಸುವ ಪ್ರದೇಶದಲ್ಲಿ ಮಕ್ಕಳ ಜ್ಞಾನಾರ್ಜನೆಗಾಗಿ ಗ್ರಂಥಾಲಯದ ವ್ಯವಸ್ಥೆಯನ್ನು ಮಾಡಬೇಕು.

೩೨. ಮಾಲ ಸಮುದಾಯದವರಿಗೆ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಸರಕಾರ ಸ್ಥಾಪಿಸುವುದು ಅಥವಾ ಪ್ರಾರಂಭಿಸುವುದು ಅವಶ್ಯಕವಾಗಿದೆ.

೩೩. ಮಾಲ ಸಮುದಾಯದವರು ವಿವಿಧ ಪ್ರದರ್ಶನ ಕಲೆಗಳನ್ನು ನಂಬಿ ಜೀವನ ನಡೆಸುತ್ತದ್ದಂತಹ ಕಲಾವಿದರಿಗೆ ಸಾಮಾಜಿಕವಾಗಿ ಪ್ರೊತ್ಸಾಹ ಮಾಡಬೇಕು.

೩೪. ಮಾಲ ಸಮುದಾಯದ ಮಕ್ಕಳಿಗೆ ಶಾಲೆಯಲ್ಲಿ ಪಾಠದ ಜೊತೆಗೆ ಪಾಠೋತ್ತರ ಚಟುವಟಿಕೆಗಳಲ್ಲಿ ಬಾಗಿಯಾಗುವಂತೆ ಶಿಕ್ಷಕರು ಪ್ರೊತ್ಸಾಹ ಮತ್ತು ಪುಷ್ಠಿಕರಣವನ್ನು ನೀಡಬೇಕು.

ಅಧ್ಯಯನದ ಮುಂದಿನ ಸಾಧ್ಯತೆಗಳು

ಕರ್ನಾಟಕದ ಮಾಲ (ಪರ್ವತ ಮಲ್ಲಯ್ಯ) ಸಮುದಾಯವನ್ನು ಕೇಂದ್ರಿಕರಿಸಿ ಮಾಲ ಸಮುದಾಯದ ಸಾಮಾಜಿಕ ಅಧ್ಯಯನ ಎಂಬ ಶೀರ್ಷಿಕೆ ಅಡಿಯಲ್ಲಿ ಅಧ್ಯಯನ ಮಾಡಲಾಗಿದೆ. ಇದೇ ಸಮುದಾಯವನ್ನು ಕುರಿತು ಇನ್ನು ಹೆಚ್ಚಿನ ಅಧ್ಯಯನಗಳನ್ನು ಮಾಡಬಹುದಾಗಿದೆ. ಇದುವರೆಗೂ ಗುರುತಿಸದೆ ಇರುವ ಮಾಲ ಸಮುದಾಯದ ಕುರಿತಾಗಿ ನಡೆದ ಸಂಶೋಧನೆ ಮೂದಲನೆಯದ್ದಾಗಿದೆ. ಮೂದಲ ಪ್ರಯತ್ನದಲ್ಲಿ ಸೃಷ್ಠಿಸಲಾಗದಂತಹ ಹಲವಾರು ಅಂಶಗಳನ್ನು ಆಸಕ್ತ ಅಧ್ಯಯನಕಾರರು ಹೆಚ್ಚಿನ ಅಧ್ಯಯನ ಮಾಡಬಹುದಾಗಿದೆ. ಒಟ್ಟಿನಲ್ಲಿ ಮಾಲ ಸಮುದಾಯದ ಅಧ್ಯಯನವು ಈ ಅಧ್ಯಯನದ ಮಿತಿಯಲ್ಲಿ ಸಮುದಾಯದ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಸಮಾಜಮುಖಿಯಾಗಬೇಕೆಂಬ ಆಶಯದೊಂದಿಗೆ ಈ ಸಂಶೋಧನಾ ಚಟುವಟಿಕೆಯನ್ನು ಕೈಗೂಳ್ಳಲಾಗಿದೆ.

ಅಧ್ಯಯನದ ಮಿತಿ ಹಾಗೂ ಕಾಲಾವಧಿಯ ಮಿತಿಯಿಂದಾಗಿ ಮಾಲ ಸಮುದಾಯದ ಎಲ್ಲಾ ಒಳಪಂಗಡಗಳನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡಲು ಸಾಧ್ಯವಾಗಿಲ್ಲ. ಮಾಲ

ಸಮುದಾಯದಲ್ಲಿಯೇ ಅಲೆಮಾರಿತನವನ್ನು ರೂಢಿಸಿಕೊಂಡಿರುವ, ಸ್ಥಳೀಯವಾಗಿ ಪರ್ವತಮಲ್ಲಯ್ಯ ಎಂದು ಗುರುತಿಸಲ್ಪಡುವ ಒಂದು ಪಂಗಡವನ್ನು ಮಾತ್ರ ಇಲ್ಲಿ ಅಧ್ಯಯನ ಮಾಡಲಾಗಿದೆ.

ಅಲೆಮಾರಿ ಮಾಲ ಸಮುದಾಯದ ಕುರಿತು ಸಮಾಜಶಾಸ್ತ್ರೀಯ ನೆಲೆಗಟ್ಟನ್ನೇ ಕೇಂದ್ರವಾಗಿರಿಸಿಕೊಂಡು ಅಧ್ಯಯನ ಮಾಡಲು ಸಾಧ್ಯವಾಗಿದೆ. ಅದರಾಚೆಗೆ ಆರ್ಥಿಕ, ಮನವಶಾಸ್ತ್ರೀಯ, ಶೈಕ್ಷಣಿಕ, ಸಾಂಸ್ಕೃತಿಕ, ಮಾನವಿಕ ಇತ್ಯಾದಿ ಜ್ಞಾನಶಿಸ್ತುಗಳ ನೆಲೆಗಟ್ಟಿನಲ್ಲಿಯೂ ಅಧ್ಯಯನ ಮಾಡಬಹುದಾಗಿದೆ.

ಒಟ್ಟಾರೆಯಾಗಿ ಕರ್ನಾಟಕದ ಅಲೆಮಾರಿ ಮಾಲ ಸಮುದಾಯದ ಕುರಿತು ಅಧ್ಯಯನ ಮಾಡಲಾಗಿ ಕಂಡು ಬಂದ ಫಲಿತಗಳು ಮತ್ತು ಮುಂದೆ ಅಧ್ಯಯನ ನಡೆಸಲು ಇರಬಹುದಾದ ಸಾಧ್ಯತೆಗಳ ಕುರಿತು ಇಲ್ಲಿ ವಿವರಿಸಲಾಗಿದೆ. ಅಧ್ಯಯನ ಮಿತಿ ಹಾಗೂ ಕಾಲಮಿತಿಗಳಿಂದಾಗಿ ಪ್ರಸ್ತುತ ಅಧ್ಯಯನವನ್ನು ಕರ್ನಾಟಕದ ಅಲೆಮಾರಿ ಮಾಲ ಸಮುದಾಯವನ್ನು ಕೇಂದ್ರೀಕರಿಸಿಕೊಂಡು ಮಾಡಲಾಗಿದೆ. ಈ ಅಧ್ಯಯನವು ಮಾಲ ಸಮುದಾಯದ ವಿವಿಧ ಆಯಾಮಗಳನ್ನು ಅರಿಯುವ ಒಂದು ಪ್ರಾಮಾಣಿಕ ಪ್ರಯತ್ನವಾಗಿದೆ. ಈ ಅಧ್ಯಯನವು ಮುಂದೆ ಪರಿಶಿಷ್ಟ ಜಾತಿಯ ಮಾಲ ಸಮುದಾಯದ ಇತರ ಒಳಪಂಗಡಗಳು ಹಾಗೂ ಅದೇ ರೀತಿಯ ಅಲಕ್ಷಿತ ಸಮುದಾಯಗಳ ಕುರಿತು ಅಧ್ಯಯನ ಮಾಡುವವರಿಗೆ ಒಂದು ಕೈದೀವಿಗೆಯಾದೀತೆಂದು ಭಾವಿಸಲಾಗಿದೆ. ಈ ಅಧ್ಯಯನದ ಆಚೇಗೆ ಉಳಿದ ಮಾಲ ಸಮುದಾಯದ ಇತರೇ ಅಂಶಗಳನ್ನು ಮುಂದಿನ ಅಧ್ಯಯನಕಾರರಿಗೆ ಬಿಡಲಾಗಿದೆ.

ಪರಾಮಾರ್ಶನ ಸಾಹಿತ್ಯ

ಅಮರಪ್ರಿಯ, ೧೯೯೮, ಆದಿಜಾಂಬವ ಕಿರುಚರಿತ್ರೆ, ಮಾತಂಗ ಪ್ರಕಾಶನ, ಆದಿಜಾಂಬವ ಸೇವಾ ಸಂಘ, ಹೊಳ್ಕುಂದು, ಗುಲ್ಬರ್ಗಾ.

ಅರ್ಜುನ ಗೂಳಸಂಗಿ ೨೦೦೦ ದಲಿತ ಬದುಕು ಮತ್ತು ಸಂಸ್ಕೃತಿಯ ಜಾನಪದೀಯ ಅಧ್ಯಯನ, ದೇವದಾಸಿ ವಿಮೋಚನಾ ಸಂಸ್ಥೆ ಅಥಣಿ.

ಅಸುಂಡಿ ಶಿವರಾಮ, ೨೦೦೭, ದಲಿತ ಸಾಂಸ್ಕೃತಿಕ ಲೋಕ, ಸಚಿನ್ ಪಬ್ಲಿಕೇಶನ್, ಬೆಂಗಳೂರು.

ಅರವಿಂದ ಮಾಲಗತ್ತಿ (ಸಂ), ೨೦೦೬, ಕನ್ನಡ ವಿಷಯ ವಿಶ್ವಕೋಶ, ಜಾನಪದ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಅರವಿಂದ ಮಾಲಗತ್ತಿ (ಸಂ), ೨೦೦೨, ದಲಿತ ಮಾರ್ಗ, ಕನ್ನಡ ಪುಸ್ತಕ ಪ್ರಧಿಕಾರ, ಬೆಂಗಳೂರು.

ಅಂಜಿನಪ್ಪ ಯಳನಾಡು, ೧೯೯೩ ಹಗಲುವೇಷಗಾರರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರ.

ಅಂಬಳಿಕೆ ಹಿರಿಯಣ್ಣ ೧೯೭೮ ಮಲೆನಾಡು ಜಾನಪದ ಸಂಪ್ರದಾಯಗಳು, ಪುಸ್ತಕ ಚಿಲುಮೆ ಪ್ರಕಾಶನ ಮೈಸೂರ.

ಆನಂದ್ ತೇಲ್ತುಂಬ್ಡೆ (ಮೂಲ), ರಾಹು (ಅನು), ೨೦೧೪, ಅಂಬೇಡ್ಕರೋತ್ತರ ದಲಿತ ಸಂಘರ್ಷ ದಾರಿ–ದಿಕ್ಕು ಚಿಂತನ ಪುಸ್ತಕ, ಬೆಂಗಳೂರು.

ಆನಂದ್ ತೇಲ್ತುಂಬ್ಡೆ (ಮೂಲ), ೨೦೧೩, ನಾ ದಿವಾಕರ (ಅನು), ಜಾಗತೀಕರಣ ಮತ್ತು ದಲಿತರು, ಲಡಾಯಿ ಪ್ರಕಾಶನ, ಗದಗ.

ಆರಾಧ್ಯ ಬಿ ಎಂ ಎಂ, ೧೯೯೫, ಪರಿಶಿಷ್ಟ ಜನಾಂಗದವರಿಗೆ ಸಂವಿಧಾನ ಕೊಡುಗೆ, ಅಪ್ಪು ಪ್ರಕಾಶನ, ಬೆಂಗಳೂರು.

ಈರಣ್ಣ, ೨೦೦೬, ಪರಿಸರ ಅಧ್ಯಯನ, ಸೃಷ್ಟಿ ಪ್ರಕಾಶನ, ಧಾರವಾಡ.

ಎಲ್ಲಪ್ಪ ಕೆಕೆ ಪುರ, ೧೯೯೩, ದೊಕ್ಕಲ ಮಕ್ಕಳು ಒಂದು ಅಧ್ಯಯನ, ಶ್ರೀದುರ್ಗ ಪ್ರಕಾಶನ, ಕೆಕೆ ಪುರ.

ಎಸ್. ಎಸ್ ಹೀರೆಮಠ ಜಾತ್ರೆಗಳು ೧೯೯೩ ಕರ್ನಾಟಕ ದಲಿತ ಸಂಸ್ಕೃತಿಯ ಪರಂಪರೆ, ಹೂಸಪೇಟೆ ಸಮತಾ ಪ್ರಕಾಶನ

ಎಂ ವೆಂಕಟಸ್ವಾಮಿ ೧೯೯೭ ಅಸ್ಪೃಶ್ಯರು ಒಂದು ಪರಿಶೀಲನೆ, ನವಕರ್ನಾಟಕ ಪಬ್ಲಿಕೆಷನ್ಸ ಬೆಂಗಳೂರ

ಎಂ ಬಿ ಪಾಟೀಲ ೧೯೯೭ ಗುಲ್ಬರ್ಗಾ ಜಿಲ್ಲೆ ಗ್ಯಾಸೆಟಿಯರ್, ಅಂಬೆಡ್ಕರ್ ವಿಧಿ ಬೆಂಗಳೂರ

ಎಸ್. ಎಸ್ ಹೀರೆಮಠ ೨೦೦೫ ಜನಪದ ಸಮಾಜ ಮತ್ತು ಸಂಸ್ಕೃತಿ, ಸೂರ್ಯ ಪ್ರಕಾಶನ ಚಿತ್ರದುರ್ಗ ಜಿಲ್ಲೆ.

ಎಸ್. ಎಸ್ ಹೀರೆಮಠ ೨೦೧೮ ದಲಿತ ಸಂಸ್ಕೃತಿ ಅಧ್ಯಯನ ಮಾಲೆ ದಲಿತ ಸಂಸ್ಕೃತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

ಎಂ ನಂಜುಂಡಸ್ವಾಮಿ ೨೦೧೨ ಹೂಲೆಯ-ಮಾದರು-ರಾಜರು ಒಂದೆ ಮಾಳವ ಫಿಲೂಸಫಿಕಲ್ ಬೆಂಗಳೂರ

ಒಡೆಯರ್ ಸಿ ಹೆಗ್ಗಡೆ, ೨೦೧೦, ಜಾತಿ ಶ್ರೇಣೀಕರಣ ಮತ್ತು ಅಸ್ಪೃಶ್ಯತೆ: ಒಂದು ಐತಿಹಾಸಿಕ ವಿಶ್ಲೇಷಣೆ, ಲಕ್ಷ್ಮೀ ಪ್ರಿಂಟಿಂಗ್ ಮತ್ತು ಪಬ್ಲಿಷರ್ ಹೌಸ್, ಮೈಸೂರು.

ಕಮಲಾಕ್ಷ ಪಿ, ೧೯೬೮, ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ, ಸಿದ್ಧಾರ್ಥ ಪ್ರಿಂಟರ್ಸ್, ಮಂಗಳೂರು.

ಕೇಶವನ್ ಪ್ರಸಾದ್ ಕೆ, ೧೯೯೩, ಕಪ್ಪೆ ಹೊಲೆಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಕೋಟಗಾನಹಳ್ಳಿ ರಾಮಯ್ಯ, ೧೯೯೩, ಸಿಂದ್ ಮಾದಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಕೃಷ್ಣ ಬಿ ಆರ್, ೨೦೦೮, ಸಮಾಜಶಾಸ್ತ್ರ(ಭಾಗ-೧), ಚೇತನ ಬುಕ್ ಹೌಸ್, ಮೈಸೂರು.

ಗಂಗಾಧರ ದೈವಜ್ಞ, ೨೦೦೦, ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗೀತಾನಾಗಭೂಷಣ, ೧೯೯೩, ದುರುಗುಮುರುಗಿಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.

ಗೊವಿಂದರಾಜು ಟಿ ೧೯೯೩ ಗೂಂಬೆರಾಮರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.

ಗೊಳಸಂಗಿ ಅರ್ಜುನ, ೨೦೦೦, ದಲಿತ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ, ದೇವದಾಸಿ ವಿಮೋಚನಾ ಸಂಸ್ಥೆ, ಅಥಣಿ.

ಗೊಳಸಂಗಿ ಅರ್ಜುನ, ೧೯೯೮, ಗ್ರಾಮೀಣ ಪ್ರದೇಶದಲ್ಲಿ ಒಕ್ಕುಲುತನ ಸಮಸ್ಯೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಗೌರಮ್ಮ ಕೆ ಯಲ್ಲಪ್ಪ ಬೂತಯ್ಯ ಟಿ, ೨೦೧೦, ಭಾರತದ ಜಾತಿಪದ್ಧತಿಯ ಸವಾಲುಗಳು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಚಲುವರಾಜು, ೧೯೯೩, ದಕ್ಕಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಚಂದ್ರಶೇಖರ ಟಿ ಆರ್ (ಸಂ), ೨೦೦೧, ದಲಿತ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜಾನಕಲ್ ರಾಜಣ್ಣ ಎಂ, ೨೦೦೮, ದಕ್ಕಲಿಗ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಚೆನ್ನಸ್ವಾಮಿ ಸೊಸಲೆ ಎನ್ ಗ್ರಾಮಗಳು ಅಂದು ಇಂದು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜೋಗನ್ ಶಂಕರ್,೧೯೮೮ ಗ್ರಾಮ ಸಮಾಜ, ಜೀವ ಪ್ರಕಾಶನ ಮೈಸೂರ.

ಜೋತ್ಸ್ನಾ ಕಾಮತ್, ೧೯೯೯, ಮಹಿಳೆ ಒಂದು ಅಧ್ಯಯನ, ನವಕರ್ನಾಟಕ ಪಬ್ಲಿಕೆಷನ್ಸ ಬೆಂಗಳೂರು.

ಡಾ. ಆರ್ ಮುನಿಸ್ವಾಮಿ ೧೯೯೯ ಬಿಜಾಪೂರ ಜಿಲ್ಲೆ ಗ್ಯಾಸೆಟಿಯರ್

ದಾಸನೂರು ಕೂಸಣ್ಣ, ೧೯೯೫, ಶೋಷಿತ ಜಂಗಮರ ಮೀಸಲಾತಿ, ಮಾತಂಗ ಪ್ರಕಾಶನ, ಮೈಸೂರು.

ದಾಸನೂರು ಕೂಸಣ್ಣ, ೧೯೯೯, ಬಹಿಷ್ಕೃತರ ಸಂಘರ್ಷ ಮತ್ತು ಪರಿವರ್ತನೆ, ಮಾತಂಗ ಪ್ರಕಾಶನ, ಮೈಸೂರು.

ದಾಸನೂರು ಕೂಸಣ್ಣ, ೨೦೦೧, ಡಾ. ಬಿ. ಆರ್. ಅಂಬೇಡ್ಕರ್ ಸಾಮಾಜಿಕ ಚಿಂತನೆ, ಮಾತಂಗ ಪ್ರಕಾಶನ, ಮೈಸೂರು.

ದಾಸನೂರು ಕೂಸಣ್ಣ, ೨೦೦೬, ರೈತರ ಆತ್ಮಹತ್ಯೆ ಮತ್ತು ದಲಿತರ ನವಬ್ರಾಹ್ಮಣಿಕೆ?, ಮಾತಂಗ ಪ್ರಕಾಶನ, ಮೈಸೂರು.

ದೇವಯ್ಯ ಹರವೆ, ೧೯೯೧, ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ದೇವರಾಜ ಓ ಅವರು, (೨೦೧೩), ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು, ಪಲ್ಲವ ಪ್ರಕಾಶನ, ಚನ್ನಪಟ್ಟಣ.

ನಂಜುಂಡಸ್ವಾಮಿ ಎಂ, ೨೦೧೨, ಹೊಲೆಯರ-ಮಾದರು-ರಾಜರು, ಮಾಳವ ಫಿಲೋಲಾಜಿಕಲ್ ಅಕಾಡೆಮಿ, ಬೆಂಗಳೂರು.

ನಂಜಮ್ಮಣ್ಣಿ ಎಂ ೧೯೭೪ ಸಾಮಾಜೀಕ ಸಮಾಜಶಾಸ್ತ್ರ, ಕನ್ನಡ ಅಧ್ಯಯನ ಮೈಸೂರು ವಿಶ್ವವಿದ್ಯಾಲಯ ಮೈಸೂರ.

ನಾಯಕ ಡಿ.ಬಿ.೨೦೦೦, ಲಂಬಾಣಿ ಜಾನಪದ ಸಾಹಿತ್ಯ, ಬಂಜಾರ ಪ್ರಕಾಶನ ಗುಲಬರ್ಗಾ.

ನಾರಾಯಣ ಎಂ ೨೦೦೦, ಗ್ರಾಮೀಣ ಮತ್ತು ನಗರ ಸಮಾಜಶಾಸ್ತ್ರ, ಚೇತನ ಬುಕ್ ಹೌಸ್ ಮೈಸೂರ.

ನಾಗರಾಜು, ೧೯೯೩, ಕೆಂಬಟ್ಟೆ ಹೊಲೆಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ನಿಂಗಪ್ಪ ಸಣ್ಣಕ್ಕಿ, ೧೯೮೦, ಬುಡಬುಡಕಿಯರು, ಐ ಬಿ ಎಚ್ ಪ್ರಕಾಶನ ಬೆಂಗಳೂರು.

ಪಾಂಡುರಂಗ ಬಾಬು, ೧೯೯೭, ಆದಿಜಾಂಬವರ ಕನ್ನಡ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಪಾಟೀಲ ಕಲ್ಲನ ಗೌಡ, ೧೯೫೫, ಅಸ್ಪೃಶ್ಯತೆ ನಿವಾರಣೆ, ಹುಬ್ಬಳ್ಳಿ.

ಪುಟ್ಟಯ್ಯ ಬಿ ಎಂ, ೨೦೦೮, ಮುಖಾಮುಖಿ ಸಮಾಜ ಸಂಸ್ಕೃತಿ ಚಳುವಳಿ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ.

ಪುಟ್ಟಯ್ಯ ಬಿ ಎಂ, ೨೦೦೮, ದಲಿತರು ಮತ್ತು ಭೂಮಿಯ ಪ್ರಶ್ನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪುರುಸೂತ್ತಮ ಬಿಳಿಮಲೆ, ೧೯೮೯, ದಲಿತ ಜಗತ್ತು, ಹೂಸದಿಕ್ಕು ಪ್ರಕಾಶನ ಬೆಂಗಳೂರು.

ಪೆಂಡಕೂರು ಗುರುಮೂರ್ತಿ, ೨೦೧೦, ಭಗ್ನ ವಿಜಯನಗರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪೋತೆ ಎಚ್ ಟಿ, ೨೦೧೨, ದಲಿತ ಲೋಕ, ಕುಂಟುಬ ಪ್ರಕಾಶನ, ಗುಲಬರ್ಗಾ.

ಪ್ರಕಾಶ ಡಿ ಸಿ, ೨೦೦೦, ಕ್ರಾಂತಿಗೆ ಕರೆ (ಪೆರಿಯಾರ್ ವಿಚಾರ), ದಲಿತ ರಾಷ್ಟ್ರೀಯ ಆಂದೋಲನ, ಬೆಂಗಳೂರು.

ಪ್ರಧಾನ ಗುರುದತ್ತ (ಸಂ), ೨೦೦೯, ಮತಾಂತರ (ಸತ್ಯದ ಮೇಲೆ ಹಲ್ಲೆ) ಸಾಹಿತ್ಯ ಪ್ರಕಾಶನ ಕೊಪ್ಪಿಕರ ಬೀದಿ, ಹುಬ್ಬಳ್ಳಿ.

ಪ್ರಭಾಕರ ಎ ಎಸ್, ೨೦೦೦, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಭಾಕರ ಎ ಎಸ್, ೨೦೦೫ ಬುಡಕಟ್ಟು ಅಭಿವೃದ್ಧಿ ಮಿಮಾಂಸೆ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪ್ರಭಾಕರ ಎ ಎಸ್, ೨೦೦೬, ಆದಿವಾಸಿ ಆಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ.

ಬರಗೂರು ರಾಮಚಂದ್ರಪ್ಪ (ಸಂ), ೧೯೯೩, ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಬಂಜಗೆರೆ ಜಯಪ್ರಕಾಶ, ೧೯೯೩, ಸಂಸ್ಕೃತಿ–ಉಪಸಂಸ್ಕೃತಿ (ಪ್ರಸ್ತಾವನೆ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಬಾಗಡೆ ಜೆ.ವಿ. ೨೦೦೮ ಕಂಜಾರಭಾಟ್, ಕನ್ನಡ ಪುಸ್ತಕ ಪ್ರಾಧಿಕಾರ ಕರ್ನಾಟಕ ಸರಕಾರ ಬೆಂಗಳೂರ.

ಬಾಲಗುರುಮೂರ್ತಿ, ಪ್ರತಾಪ ರಾ ಬಹುರೂಪಿ; ೨೦೦೮, ಬುಡ್ಗ ಜಂಗಮ, ಕನ್ನಡ ಪುಸ್ತಕ ಪ್ರಾಧಿಕಾರ ಕರ್ನಾಟಕ ಸರಕಾರ ಬೆಂಗಳೂರ

ಬಿಳಿಮಲೆ ಪುರುಷೋತ್ತಮ, ೨೦೦೦, ಹುಲಿಗೆಮ್ಮ, ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬಿದರಹಳ್ಳಿ ನರಸಿಂಹಮೂರ್ತಿ (ಸಂ), ೧೯೯೭, ಜಾಂಬವತಿ ಕಲ್ಯಣ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಬೇವಿನಕಟ್ಟಿ ಮಂಜುನಾಥ, ೧೯೯೬, ಮಾತಂಗಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬೇವಿನಕಟ್ಟಿ ಮಂಜುನಾಥ, ೨೦೦೭, ವ್ಯಾದ ಚರಿತೆ ಬೆಡ ಕುಲಮೂಲದ ಕಥನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬೋರಲಿಂಗಯ್ಯ ಹಿ ಚಿ, ೧೯೭೯, ಉಜ್ಜಿನಿ ಚೌಡಮ್ಮ ಗ್ರಾಮದೇವತೆ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಬೋರಲಿಂಗಯ್ಯ ಹಿ ಚಿ, ೨೦೧೦, ಕುಣಬಿಯರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಬೋರಲಿಂಗಯ್ಯ ಹಿ ಚಿ, ಗಿರಿಜನ ನಾಡಿಗೆ ಪಯಣ ೧೯೯೧, ರಾಗಿರೊಟ್ಟಿ ಪ್ರಕಾಶನ ಬೆಂಗಳೂರು.

ಬೋರಲಿಂಗಯ್ಯ ಹಿ ಚಿ, ೧೯೯೬, ಕರ್ನಾಟಕ ಜನಪದಗಳ ಕೋಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

ಬೋರಲಿಂಗಯ್ಯ ಹಿ ಚಿ, ೨೦೦೦, ಬುಡಕಟ್ಟು ದೈವರಾಧನೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

ಮರಡಿ ಶ್ರೀನಿವಾಸ, ಬೇವಿನಬೆಂಚಿ ವೆಂಕಟೇಶ, ಗುಂಜಳ್ಳಿ ನರಸಿಂಹ, ಅರೋಲಿ ರಮೇಶ (ಸಂ), ೨೦೧೪, ಒಳಮೀಸಲಾತಿ ಮುಟ್ಟಲಾರದವನ ಒಡಲಾಳ, ಲಡಾಯಿ ಪ್ರಕಾಶನ, ಗದಗ.

ಮಹೇಶ್ ಸಿ ಕೆ, ೨೦೦೩, ಮೀಸಲಾತಿ ಮತ್ತು ಭವಿಷ್ಯದ ಪಥಗಳು, ವಿಮೋಚನ ಪ್ರಕಾಶನ, ಚಿತ್ರದುರ್ಗ.

ಮಹೇಶ ಸಿ ಕೆ, ೨೦೦೩, ಅಂಬೇಡ್ಕರ್ ಮತ್ತು ಮೀಸಲಾತಿ ವರ್ಗೀಕರಣ, ಮಾತಂಗ ಪರಿವಾರ, ಬೆಂಗಳೂರು.

ಮಹೇಶ ಸಿ ಕೆ, ೨೦೦೬, ದಲಿತ ಚರಿತ್ರೆ ಮತ್ತು ಬುದ್ಧಧಮ್ಮ, ವಿಮೋಚನಾ ಪ್ರಕಾಶನ, ಚಿತ್ರದುರ್ಗ.

ಮಹಾದೇವಯ್ಯ ಪಿ, ೨೦೦೫, ದಲಿತರು ಮತ್ತು ಪರ್ಯಾಯ ರಾಜಕಾರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಲ್ಲಿಕಾ ಘಂಟಿ, ೨೦೦೮, ದಲಿತ ಸಾಹಿತ್ಯ ಚಳುವಳಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಮಲ್ಲಿಕಾರ್ಜುನ ಮಾನ್ವಡೆ ೨೦೦೮, ಕೂರಮ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರಕಾರ ಬೆಂಗಳೂರ

ಮಲ್ಲಿನಾಥಯ್ಯ ಡಿ.ಎಚ್.(ಅನು) ೧೯೮೫, ಸಮಾಜಶಾಸ್ತ್ರ ಕೈಪಿಡಿ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರ ವಿಶ್ವವಿದ್ಯಾಲಯ ಮೈಸೂರ.

ಮಹೆಶ್ವರಪ್ಪ (ಅನು) ೧೯೭೦, ಸಾಮಾಜಿಕ ಒಪ್ಪಂದ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರ ವಿಶ್ವವಿದ್ಯಾಲಯ ಮೈಸೂರ.

ಮೀರಾಸಾಬಿಹಳ್ಳಿ ಶಿವಣ್ಣ, ೧೯೯೯, ದುರುಗ ಜಾನಪದ, ಶಕ್ತಿ ಮುದ್ರಣ ಮತ್ತು ಪ್ರಕಾಶನ, ಬೆಂಗಳೂರು.

ಮೀರಾಸಾಬಿಹಳ್ಳಿ ಶಿವಣ್ಣ, ೨೦೦೩, ಮ್ಯಾಸಮಂಡಲ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಮುನಿವೆಂಕಟಪ್ಪ ವಿ, ೧೯೯೮, ದಲಿತ ಚಳುವಳಿ ಒಂದು ಅವಲೋಕನ, ವಿಚಾರವಾದಿ ಪ್ರಕಾಶನ, ಮೈಸೂರ

ಮೇತ್ರಿ ಕೆ ಎಂ, ೨೦೦೨, ಬುಡಕಟ್ಟು ಕುಲಕಸುಬುಗಳು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೇತ್ರಿ ಕೆ ಎಂ, ಚಲುವರಾಜು (ಸಂ) ೨೦೦೭, ಬುಡಕಟ್ಟು ಅಧ್ಯಯನ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೊಗಳ್ಳಿ ಗಣೇಶ, ೧೯೯೯, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೋಹನ ಜೆ, ೧೯೯೯, ಪರಿಶಿಷ್ಟ ಜಾತಿ, ಪಂಗಡಗಳ ಮೇದಾರರ ವರ್ತನೆಗಳು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

ಮೈಲಹಳ್ಳಿ ರೇವಣ್ಣ, ೧೯೯೬, ಮಾದಾರ ಜನಪದ ಒಂದು ಅಧ್ಯಯನ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

ಮೈಲಹಳ್ಳಿ ರೇವಣ್ಣ, ೨೦೦೪, ಮಾದಾರ ಸಂಸ್ಕೃತಿ ಮತ್ತು ಸಾಹಿತ್ಯ, ರಾಜ್ ಪ್ರಕಾಶನ, ಮೈಸೂರು.

ಯಲ್ಲಪ್ಪ ಬೂತಯ್ಯ ಟಿ, ೨೦೦೦, ದಾರ್ಶನಿಕರು ಮತ್ತು ದಲಿತರು, ಆದಿ ಸಾಹಿತ್ಯ ಪ್ರಕಾಶನ, ಮೈಸೂರು.

ಯಲ್ಲಪ್ಪ ಬೂತಯ್ಯ ಟಿ, ೨೦೧೨, ಮಾತಂಗ ವಚನಗಳು, ಆದಿ ಭಾರತ ಸಾಹಿತ್ಯ ಪ್ರಕಾಶನ, ಮೈಸೂರು

ರಂಗನಾಥ ದಿವಾಕರ್,೨೦೦೧, ಕರನಿರಾಕರನೆಯ ವಿರಕಥೆ, ಲೂಕಶಿಕ್ಷಣ ಗ್ರಂಥಮಾಲೆ ಬೆಂಗಳೂರ.

ರಾಜ್ ಎಂ ಸಿ, ೨೦೦೨, ದಲಿತತ್ವ, ಅಂಬೇಡ್ಕರ್ ಸಂಪನ್ಮೂಲ ಕೇಂದ್ರ, ಶಾಂತಿನಗರ, ತುಮಕೂರು.

ರಾಜಶೇಖಯ್ಯ ಎ ಎಂ (ಸಂ), ೧೯೯೯, ಡಾ. ಬಾಬಾ ಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು–೫, ಬೆಂಗಳೂರು.

ರಾವು, ೨೦೧೦, ಜಾತಿ ವ್ಯವಸ್ಥೆ ವಿಕಾಸ ವಿನಾಶ, ಸುಮೇದ ಪ್ರಕಾಶನ, ಗುಲಬರ್ಗಾ.

ರಾಜೆಗೌಡ ಹ ಕ (ಸಂ) ೧೯೮೬, ಜಾನಪದ ಗಂಗೂತ್ರಿ, ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ ಬೆಂಗಳೂರು.

ರೆವೆರೆಂಡ್ ಎಫ್ ಕಿಟ್ಟೆಲ್ ೧೮೯೪ ಕನ್ನಡ ಇಂಗ್ಲಿಷ ಡಿಕ್ಷನರಿ

ಲಕ್ಷ್ಮಿನಾರಾಯಣ, ೨೦೦೧, ಡಾ. ಬಿ. ಆರ್. ಅಂಬೇಡ್ಕರ್ ಮತ್ತು ಸಮಕಾಲೀನ ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ,

ಲಕ್ಷ್ಮೀಪತಿ ಕೋಲಾರ, ೧೯೯೩, ಮಾಷ್ಟಿಕರ ಸಂಸ್ಕೃತಿ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಲಕ್ಷ್ಮಣ ತೆಲಗಾವಿ, ೨೦೦೭, ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಲಕ್ಕಪ್ಪಗೌಡ ಎಚ್.ಜೆ (ಪ್ರಸಂ): ೧೯೯೮, ೨೦೦೦ ಕರ್ನಾಟಕ ಬುಡಕಟ್ಟುಗಳು ಸಂಪುಟ ೧, ಸಂಪುಟ ೨, ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ ಬೆಂಗಳೂರು.

ವಡ್ಡಗೆರೆ ನಾಗರಾಜಯ್ಯ, ೨೦೦೦, ಆಸಾದಿ ಖಂಡಕಾವ್ಯ, ಪಂಚಮ ಪ್ರಕಾಶನ, ಶಿರಾ.

ವಡ್ಡಗೆರೆ ನಾಗರಾಜಯ್ಯ, ೨೦೦೧, ಆಸಾದಿ, ಪಂಚಮ ಪ್ರಕಾಶನ, ತುಮಕೂರು.

ವಡ್ಡಗೆರೆ ನಾಗರಾಜಯ್ಯ, ೨೦೦೮, ಬದ್ಧನೆಡೆಗೆ, ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು.

ವಡ್ಡಗೆರೆ ನಾಗರಾಜಯ್ಯ, ೨೦೧೦, ವಡ್ಡೆಗೆರೆ ನಾಗಮ್ಮ: ಮಹಾಸತಿ ಕಾವ್ಯ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಮಾಗಡಿ ರಸ್ತೆ, ಬೆಂಗಳೂರು.

ವಾಸುದೇವ ಬಡಿಗೇರ, ೨೦೧೧, 'ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿಜಯಶ್ರೀ ಇಟ್ಟಣ್ಣವರ, ೨೦೧೧, ಹದಿನೆಂಟು ಜಾತಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಕ್ಟರ್ ಎಸ್. ಡಿಸೋಜಾ, ೧೯೭೭, ಭಾರತದಲ್ಲಿ ಜಾತಿ ಪದ್ಧತಿ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ವೀರಸಂಗಯ್ಯ ಜೆ ಎಂ, ೨೦೧೩, ರೈತ ಉಳಿದರೆ ಉಳಿದೀತು.. ಹಳ್ಳಿ ಉಳಿದರೆ ದೇಶ ಉಳಿದೀತು.., ಕ್ರಿಯಾ ಪ್ರಕಾಶನ, ಸಂಪಂಗಿರಾಮನಗರ, ಬೆಂಗಳೂರು.

ವಿಯೋಗಿ ಹರಿ, ೧೯೫೬, ಅಸ್ಪೃಶ್ಯತೆ ಒಂದು ಮಹಾಶಾಪ, ದೆಹಲಿ.

ಶಂಕರನಾರಾಯಣ ತೀ ನಂ, ೧೯೮೨, ಕಾಡುಗೊಲ್ಲ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಶಂಕರರಾವ್ ಚ ನ, ೨೦೦೩, ಸಮಾಜಶಾಸ್ತ್ರ ಸಂಪುಟ-೧, ಜೈಭಾರತ ಪ್ರಕಾಶನ, ಮಂಗಳೂರು.

ಶಂಕನಪುರ ಮಹಾದೇವ, ೨೦೧೧, ಮಲೆಯ ಮಾದಯ್ಯನ ಸಾಂಸ್ಕೃತಿಕ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಂಕರ್ ನಾರಾಯಣರಾವ್, ಎನ್ ಪಿ ಫಣಿ, ೧೯೯೪ ಸಮಾಜ ಮತ್ತು ಜಾನಪದ ಇತಿಹಾಸ, ಅಕ್ಷರ ಪ್ರಕಾಶನ ಹೆಗ್ಗೋಡು.

ಶಿವಪ್ಪ ಕೆ, ೨೦೦೪, ಬಳ್ಳಾರಿ ಜಿಲ್ಲೆಯ ಹೊಲೆಯ ಮಾದಿಗರ ಸಂಸ್ಕೃತಿ, ಸಾರ ಎಂಟರಪ್ರೈಸಸ್, ಮೈಸೂರು.

ಶಿವಪ್ರಕಾಶ ಎಚ್ ಎಸ್, ೧೯೯೨, ಮಾದರಿ ಮಾದಯ್ಯ, ಸಮುದಾಯ ಪ್ರಕಾಶನ, ಬೆಂಗಳೂರು.

ಶ್ರೀನಿವಾಸಪ್ಪ, ೨೦೦೦, ಔಷಧೀಯ ಬೆಳೆಗಳ ಬೇಸಾಯ, ಕಾವ್ಯಕಲಾ ಪ್ರಕಾಶನ ಬೆಂಗಳೂರು.

ಶ್ರೀಮತಿ ಹೆಚ್ ಎಸ್, ೧೯೯೮, ಪ್ರಾಚೀನ ಭಾರತದ ಚರಿತ್ರೆ: ಡಿ.ಡಿ. ಕೋಸಾಂಬಿಯವರ ಚಿಂತನೆಗಳು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಬೆಂಗಳೂರು.

ಶ್ರೀಪಡ್ರೆ, ೨೦೦೮, ದೇಶಿ ಕೃಷಿ ಜ್ಞಾನ, ಮಣ್ಣು ಮತ್ತು ನೀರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಶ್ರೀ ಎನ್ ಬಸವರಾಧ್ಯ ೧೯೯೩ ಎಂ ಎ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಏಳನೆಯ ಸಂಪುಟ, ಸರಕಾರಿ ಮುದ್ರಣಾಲಯ ಬೆಂಗಳೂರ.

ಸಬರದ ಬಸವರಾಜ. ೨೦೦೯, ಜನಪದ ದೈವಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸದಾಶಿವಯ್ಯ ಎಚ್ ಎಂ, ೧೯೮೦, ಸಮಾಜಶಾಸ್ತ್ರ ಭಾಗ-೨, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಸತ್ಯನಾಥ ಟಿ ಎಸ್, ೧೯೮೮, ಕನ್ನಡ ಜಾನಪದ: ಕೆಲವು ಮುಖಗಳು. ಶಾರದ ಪ್ರಕಾಶನ, ಬೆಂಗಳೂರು.

ಸತ್ಯನಾರಾಯಣ ರಾ, ೧೯೯೮, (ಸಂ), ಶ್ರೀಮತಂಗಮುನಿ ವಿರಚಿತ ಬೃಹದ್ದೇಶಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸವಿತಾ ನಾಯಕ,೨೦೦೧, ಬುಡಕಟ್ಟು ಮಹಿಳೆಯರ ಪ್ರದರ್ಶನ ಕಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸುಭಾಷ್ ಭರಣಿ, ೨೦೦೫, ಧರೆಗೆ ದೊಡ್ಡವರು, ಕನ್ನಡ ಪುಸ್ತಕ ಪ್ರಾದಿಕಾರ, ಬೆಂಗಳೂರು.

ಸಿರಾಜ್ ಉಲ್ ಹಸನ್ ೧೯೨೦ ಕ್ಯಾಸ್ಟ ಆಂಡ್ ಟ್ರೈಬ್ಸ ಆಫ್ ಎಚ್ ಇ ಎಚ್ ದ ನಿಜಾಮ್ಸ ಡಾಮಿನೆಷನ್ಸ

ಸಿದ್ಧಲಿಂಗಯ್ಯ, ೨೦೦೦, ಜನ ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಿದ್ಧಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಮೂಲಭಾರತಿ ಪ್ರಕಾಶನ, ಬೆಂಗಳೂರು.

ಸಿದ್ಧಯ್ಯ ಕೆ ಬಿ, ೨೦೦೯, ಗಲ್ಲೆಬಾನಿ, ನಮ್ಮ ಪ್ರಕಾಶನ, ಬಿಳಿಗೆರೆ, ತಿಪಟೂರು ತಾಲೂಕು.

ಸೋಸಲೆ ಚಿನ್ನಸ್ವಾಮಿ ಎನ್, ೨೦೧೨, ದಲಿತರ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು, ಯಾಜಿ ಪ್ರಕಾಶನ, ಭೂಮಿ, ಹೊಸಪೇಟೆ.

ಸೋಸಲೆ ಚಿನ್ನಸ್ವಾಮಿ ಎನ್, ೨೦೦೪, ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೂರ್ಯನಾಥ ಯು ಕಾಮತ್ ೧೯೯೫ ಧಾರವಾಡ ಜಿಲ್ಲೆ ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ೮ ನೆ ಮಹಡಿ ಬೆಂಗಳುರ

ಹಿರೇಮಠ ಎಸ್ ಎಸ್, ೧೯೯೭, ಮಾದರ ಚನ್ನಯ್ಯನ ನಾಡಿನಲ್ಲಿ, ಅಮೃತ ಪ್ರಕಾಶನ, ಹರಪನಹಳ್ಳಿ.

ಹಿರೇಮಠ ಎಸ್ ಎಸ್, ೧೯೮೮, ಜನಪದ ಸಮಾಜ ಸಂಸ್ಕೃತಿ, ಸೂರ್ಯ ಪ್ರಕಾಶನ, ಮಲ್ಲಾಡಿಹಳ್ಳಿ.

ಹೆಗಡೆ ಆರ್ ಪಿ (ಅನು), ಜಿಯಲಾಲ ಆರ್ಯ (ಮೂಲ), ೨೦೧೪, ದಲಿತ ಸಮಾಜ ಇಂದಿನ ಸವಾಲುಗಳು, ಲಡಾಯ ಪ್ರಕಾಶನ, ಗದಗ.

ಹೆಗ್ಗೆರೆ ರಂಗಪ್ಪ (ಸಂ), ೨೦೦೪, ಮಾತಂಗ ಸಂಸ್ಕೃತಿ, ಶ್ರೀ ಆದಿಜಾಂಬವ ಮಾದಿಗ ಮಹಾಸಂಸ್ಥಾನ ಟ್ರಸ್ಟ್ (ರಿ) ಕೋಡಿಹಳ್ಳಿ.

ಹುಚ್ಚಪ್ಪ ಮಾಸ್ತರ ಎನ್, ೧೯೯೭, ಚಂದ್ರಗುತ್ತಿ ರೇಣುಕಾಂಬೆ ಜಾತ್ರೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಇಂಗ್ಲೀಷ್ ಕೃತಿಗಳು

Ayer Anathakrishnan. L. K, 1994, the Mysore Tribes and Castes Vol. 1 to 5, Mysore University, Mysore.

Anad Teltumbde, 1997, Ambedkar in and for the post Ambedkar Dalit Movement, Sugawa prakashana, pune.

Ayyangar, M, 1962, Ananthasayanam, Indian Culture and Religious Thought, University of Calcutta, Calcutta.

Ambedka B. R, 2003, Annihlation of Caste, Kousalya Prakashana, Aurangabad.

Ambedka B. R, 1947, 'State and Miorities', what are Their Rights and how to them in the Constitution of Free India, publisher, Siddarth Books, Delhi.

Basu D.D, 2000, Shorter Constitution, Prentice Hall of India, New Delhi, 1994.

Chatterjee S.K., Educational Development of Scheduled Caste: Looking Ahead, Gayan Pubication, New Delhi.

Chinna Rao Yagati, 2003, Dalit Studies: A Bibliographical Handbook, Karnataka Publishers, New Delhi.

Enthoven R. E, 1990, the Tribes and Castes of Bombay Vol. 1, Asian Educational Services, New Delhi.

Edger Thurston, 1987, Rangachari k., Caste and Tribes of Southern India Vol. 6 P to S, Asian Educational Services, New Delhi.

Fukuhar J. N, An Outlin of the Religious literature of India,

Hawanur G. S, 1975, Karnataka Backward Classes Commission Report, Govt. of Karnataka, Bangalore.

Hayavdana Rao C, The Mysore Gazetteer (Vol. II part I), Govt of Karnataka, Bangalore.

Kapadia K.M, 1968, Marriage and Family in India: Oxford University Press, Culcutta.

Kuppu Awamy, 1986, Social change in India: Vikas Publishing House, pvt.Ltd, New Delhi.

Jogdand P.G, 1995, Dlit Women in India: Issues and Perspectives, Gayan Publication, New Delhi.

Jha D.N, 2002, The Myth of the Holy cow, N. Y. Verso Publication, London.

Justice P. S. Narayana's, 2004, The Schedul Castes and Schedule Tribes (Prevention of Attrocities), Published by K. C. GOGIA, For M/S. Gogia Publiton.

Manohar Yadav, 1998, Career and Dalith Movement In Karnataka, Journal of Social and Economic Development, Vol-I, No-1, Bangalore.

Narasimhaiah H, 1975, Thoughts on Science and Society, Bangalore University Press.

Radhakumu Mookerji, 1921, ASOKA, Nationalism in Hindu Culture, Theosophical Publishing House. New Delhi

Russell R V, The Tribes and Castes of the Central Provinces of India: 1993, Asian Publications, New Delhi

Singh K.S, 1994, the Scheduled Tribes, Anthropological Survey of India, New Delhi.

Sangwan, Om Prakash (Ed), 1996, Dalit Socity and Challenges of Development, Common Wealth Publication, New Delhi.

Shankara Makasgi Punekar, 1991, Harijin Contribution to Indian Medival Philosophy, Prasaranga, Bangalore University.

Sherring Rev M. A, 1974, the Tribes and Castes of the Bombay Presidency.

Sing K. S, 2010, People of India, National Series Vol. II, The Scheduled Castes and Anthropological Survey of India.

Srinivas M. N, 1992, Caste in Modern India, Media Promoters and Publisher Pvt. Ltd., Bombay.

Shankar Rao C. N, 2008, Indian Society and Social Thought-2, Publisher Swapna Books, Bangalore.

ಪಿಎಚ್. ಡಿ ಮಹಾಪ್ರಬಂಧಗಳು

ಗೀತಾ ಎಂ. ಯಂಕಂಚಿ, ೨೦೧೨, ಕರ್ನಾಟಕ ಅರಣ್ಯವಾಸಿ ಬುಡಕಟ್ಟು ಸಮುದಾಯಗಳ ಆಹಾರ ವೈವಿಧ್ಯತೆ ಹಾಗೂ ಭದ್ರತೆ, ಪಿಎಚ್.ಡಿ ಮಹಾಪ್ರಬಂಧ ಮಾರ್ಗದರ್ಶಕರು ಡಾ. ಚಲುವರಾಜು, ಕನ್ನಡ ವಿಶ್ವವಿದ್ಯಾಲಯ, ಹಂಪಿ-ವಿದ್ಯಾರಣ್ಯ.

ಕೆಂಚವೀರಪ್ಪ ಎನ್, ೨೦೧೧, ಕರ್ನಾಟಕದಲ್ಲಿ ಆಸಾದಿ ಸಂಪ್ರದಾಯ, ಎಂ. ಫಿಲ್, ಸಂಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ವಡ್ಡಗೆರೆ ನಾಗರಾಜಯ್ಯ, ೨೦೧೪, ಕರ್ನಾಟಕದ ಆದಿಜಾಂಬನ ಮಾತಂಗ ಪರಂಪರೆ: ಸಾಂಸ್ಕೃತಿಕ ವಿಶ್ಲೇಷಣೆ, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಯ್. ಹೊನ್ನುಂಗರ ಎಸ್, ೨೦೧೩, ಛಲವಾದಿ ಸಮುದಾಯ: ಸಮಾಜಶಾಸ್ತ್ರೀಯ ಅಧ್ಯಯನ, (ಗದಗ ಜಿಲ್ಲೆಯನ್ನು ಪರಿಗಣಿಸಿ), ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಜಕುಮಾರ ಕೆ ಆರ್ ಜೆ, ೨೦೦೭, ಸ್ವಾತಂತ್ರ್ಯ ಪೂರ್ವದಲ್ಲಿ ಮಾದಿಗ ಸಮುದಾಯ, ಚರಿತ್ರೆ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚನ್ನಣ್ಣ ವಾಲೀಕಾರ, ೧೯೯೩, ಹೈದ್ರಾಬಾದ್ ಕರ್ನಾಟಕದ ಗ್ರಾಮದೇವತೆಗಳು, ಅಪ್ರಕಟಿತ ಪಿಎಚ್. ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ತಿಪ್ಪೇಸ್ವಾಮಿ ಕೆರೆಯಾಗಳಹಳ್ಳಿ, ೨೦೦೯, ಚಿತ್ರದುರ್ಗ ಜಿಲ್ಲೆಯ ಆಸಾದಿಗಳ ಬದುಕು ಮತ್ತು ಸಂಪ್ರದಾಯ, ಎಂ. ಫಿಲ್ ಸಂಪ್ರಬಂಧ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

ಹನುಮಂತಪ್ಪ, ೨೦೦೬, ಮೊಳಕಾಲ್ಮೂರು ತಾಲೂಕು ಪರಿಸರದ ಮಾದಿಗ ಸಮುದಾಯದ ಜಾನಪದೀಯ ಅಧ್ಯಯನ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

ನಾರಾಯಣಸ್ವಾಮಿ ಜಿ, ೨೦೦೩, ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ: ಒಂದು ಅಧ್ಯಯನ, ಪಿಎಚ್. ಡಿ ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಶರಣಪ್ಪ ಕೆ ಸಿ, ೨೦೧೭, ಹಟ್ಟಿ ಸಂಸ್ಕೃತಿ ಮತ್ತು ಪರಂಪರೆ–ಸಾಮಾಜಿಕ ಅಧ್ಯಯನ, ಅಪ್ರಕಟಿತ ಪಿಹೆಚ್. ಡಿ ಮಹಾಪ್ರಬಂಧ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀಧರ, ೨೦೦೭, ಪಂಬದರಲ್ಲಿ ಸಾಮಾಜಿಕ ಬದಲಾವಣೆ, ಬುಡಕಟ್ಟು ಅಧ್ಯಯನ ವಿಭಾಗ, ಕನ

ಬುಡಕಟ್ಟು ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ,ವಿದ್ಯಾರಣ್ಯ-೫೮೩೨೭೬

ಕ್ಷೇತ್ರಕಾರ್ಯದ ಪ್ರಶ್ನಾವಳಿ

ಮಾಲ ಸಮುದಾಯದ ಸಾಮಾಜಿಕ ಅಧ್ಯಯನ

೧. ಸಾಮಾನ್ಯ ಮಾಹಿತಿ

ಎ. ಸಮೀಕ್ಷೆಯ ದಿನಾಂಕ
ಬಿ. ಒಳಪಂಗಡ :
ಸಿ. ಬೆಡಗು :
ಡಿ. ಮಾತೃಭಾಷೆ
ಇ. ಮನೆದೇವರು / ದೈವ
ಇ. ಕುಲಚಿಹ್ನೆ
ಎಫ್. ಮನೆತನದ ಹೆಸರು
ಜಿ. ಕು.ಗ್ರಾಮ / ಗ್ರಾಮ / ನಗರ
ಎಚ್. ವಾರ್ಡ್
ಐ. ಪಂಚಾಯತಿ
ಜೆ. ತಾಲೂಕು
ಕೆ. ಜಿಲ್ಲೆ
ಎಲ್. ಭೂಹಿಡುವಳಿ (ಎಕರೆಗಳಲ್ಲಿ)
೧. ಒಣ :
೨. ನೀರಾವರಿ :

ಒ. ಪಶುಸಂಪತ್ತು (ಸಂಖ್ಯೆಗಳಲ್ಲಿ)
೧. ಎತ್ತು, ಹೋರಿ :
೨. ಆಕಳು, ಕರು :
೩. ಎಮ್ಮೆ, ಕೋಣ :
೪. ಕುರಿ :
೫. ಮೇಕೆ :
೬. ಕೋಳಿ :

ಪಿ. ಮನೆ ವಿವರ
೧. ಗುಡಿಸಲು
೨. ಟಿನ್‌ಮನೆ
೩. ದಾಬಾ ಮಾಳಿಗೆ
೪. ಆರ್.ಸಿ.ಸಿ.
೫. ಹೆಂಚಿನ ಮನೆ
೬. ಆಶ್ರಯ ಮನೆ
೭. ಬಾಡಿಗೆ ಮನೆ

ಕ್ಯೂ. ಇತರೆ ಸೌಲಭ್ಯಗಳು

೧. ಪಡಿತರ ಚೀಟಿ ೨. ಗ್ಯಾಸ್ ೩. ನಲ್ಲಿ ೪. ಶೌಚಾಲಯ ೫. ಸ್ನಾನಗೃಹ ೬. ಸೈಕಲ್ ೭. ರೇಡಿಯೋ ೮. ಟೇಪ್ ರಿಕಾರ್ಡರ್
೯. ಟಿ.ವಿ. ೧೦. ದೂರವಾಣಿ ೧೧. ಮೋಟರ್ ಸೈಕಲ್ ೧೨. ಇತರೆ

೧೧. ವೈಯಕ್ತಿಕ ಮಾಹಿತಿ

ಕ್ರಸಂ.	ಕುಟುಂಬದ ಸದಸ್ಯರ ಹೆಸರುಗಳು	ಸಂಬಂಧ ಮುಖ್ಯಸ್ಥ/ಮುಖ್ಯಸ್ಥಳು	ಲಿಂಗ	ವಯಸ್ಸು	ಶಿಕ್ಷಣ	ವೈವಾಹಿಕ ಸ್ಥಾನಮಾನ	ಕಸಬು	ಸರ್ಕಾರಿ ಸೌಲಭ್ಯಗಳು ( )			
								ಓಟಿನಕಾರ್ಡ	ವಿಧವಾ ವೇತನ	ಅಂಗವಿಕಲ	ಶಿಷ್ಯವೇತನ
೧											
೨											
೩											

ಸಂಶೋಧಕರು
ಪ್ರೇಮವ್ವ ಮುದುಟಗಿ ಯಲ್ಲಪ್ಪ

ಮಾರ್ಗದರ್ಶಕರು
ಪ್ರೊ ಕೆ ಎಂ ಮೇತ್ರಿ, ಪ್ರಾಧ್ಯಾಪಕರು

ಮಾಹಿತಿ ದಾರರ ಸಹಿ ಮತ್ತು ವಿಳಾಸ

ಮಾಹಿತಿದಾರರ ವಿವರ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಸದಸ್ಯರ ಸಂಖ್ಯೆ	ಬೆಡಗು	ಜಿಲ್ಲೆ
೦೧	ದುರಗಪ್ಪ ಉಳ್ಳಿ	೪೭	ಕೂಲಿ	ಕನಕಗಿರಿ	೬	ಮದ್ದಿನೀರು	ಕೊಪ್ಪಳ
೦೨	ನೀರುಪಾದಿ ಉಳ್ಳಿ	೩೫	ಕಲಾವಿದರು	ಕನಕಗಿರಿ	೫	ಮದ್ದಿನೀರು	ಕೊಪ್ಪಳ
೦೩	ಬಸವರಾಜ ಉಳ್ಳಿ	೨೫	ಕಲಾವಿದರು	ಕನಕಗಿರಿ	೮	ಮದ್ದಿನೀರು	ಕೊಪ್ಪಳ
೦೪	ಕನಕಪ್ಪ ಉಳ್ಳಿ	೩೦	ಕಲಾವಿದರು	ಕನಕಗಿರಿ	೬	ನರೇಂದ್ರ	ಕೊಪ್ಪಳ
೦೫	ಗಂಗಪ್ಪ ಪರ್ವತ ಮಲ್ಲಯ್ಯ	೬೦	ಹಿರಿಯರು	ಕಲ್ ಅಬ್ಬಿಗೆರೆ	೭	ನರೇಂದ್ರ	ಕೊಪ್ಪಳ
೦೬	ಚಿದಾನಂದಪ್ಪ ಪರ್ವತ ಮಲ್ಲಯ್ಯ	೫೦	ಹಿರಿಯರು	ಕಲ್ ಅಬ್ಬಿಗೆರೆ	೯	ನರೇಂದ್ರ	ಕೊಪ್ಪಳ
೦೭	ನಾಗರಾಜ ಲದ್ದಲ್	೨೫	ವ್ಯಾಪಾರ	ಕೆಸಕ್ಕಿ ಹಂಚಿನಾಳ	೬	ಶಶೇಂದ್ರ	ಕೊಪ್ಪಳ
೦೮	ಮ್ಮಣ್ಣ ನಾಗಪ್ಪ ನರಸಲ್	೫೫	ಕೂಲಿ	ಕೆಸಕ್ಕಿ ಹಂಚಿನಾಳ	೭	ಪಾಯಲ್	ಕೊಪ್ಪಳ
೦೯	ಮೂಕ ಹಂಪಯ್ಯ ಪ.ಮ	೪೦	ಕೂಲಿ	ಕಲ್ ಅಬ್ಬಿಗೆರೆ	೬	ನರೇಂದ್ರ	ಕೊಪ್ಪಳ
೧೦	ದೊಡ್ಡ ವಿರಣ್ಣ ಪರ್ವತ ಮಲ್ಲಯ್ಯ	೪೫	ಕೂಲಿ	ಕಲ್ ಅಬ್ಬಿಗೆರೆ	೧೨	ನರೇಂದ್ರ	ಕೊಪ್ಪಳ
೧೧	ಈರಣ್ಣ ಲದ್ದಲ್	೬೦	ಕೂಲಿ	ಕುದರಿಮೂತಿ	೯	ಶಶೇಂದ್ರ	ಕೊಪ್ಪಳ
೧೨	ಮಲ್ಲಿಕಾರ್ಜುನ ಲದ್ದಲ್	೪೦	ಕೂಲಿ	ಕುದರಿಮೂತಿ	೮	ಶಶೇಂದ್ರ	ಕೊಪ್ಪಳ

೧೩	ಪಕಿರಪ್ಪ ಮಾಲ	೩೫	ವ್ಯಾಪಾರ	ಕೊಪ್ಪಳ	೪	ಸೈನಿಳ್	ಕೊಪ್ಪಳ
೧೪	ಚೆನ್ನಪ್ಪ ಮಾಲ	೪೬	ಕೂಲಿ	ಕೊಪ್ಪಳ	೮	ಸೈನಿಳ್	ಕೊಪ್ಪಳ
೧೫	ಮುದುಕಪ್ಪ ಮಾಲ	೫೬	ಕೂಲಿ	ಕೊಪ್ಪಳ	೮	ಸೈನಿಳ್	ಕೊಪ್ಪಳ
೧೬	ದುರಗಪ್ಪ ಉಳ್ಳಿ	೩೫	ಕಲಾವಿದರು	ಕೊಪ್ಪಳ	೬	ಮದ್ದಿನೀರು	ಕೊಪ್ಪಳ
೧೭	ಸಣ್ಣಹನಮಪ್ಪ ನರಸಲ್	೪೬		ಕೊಪ್ಪಳ	೫	ಪಾಯಲ್	ಕೊಪ್ಪಳ
೧೮	ಗಂಗಪ್ಪ ಬಬ್ಬಲ್	೨೦	ಕಲಾವಿದರು	ಚಿಲಕಮುಕಿ	೯	ಕರಿನೀಳ್	ಕೊಪ್ಪಳ
೧೯	ಬರಮರೆಡ್ಡಿ ಲದ್ದಲ್	೩೭	ಕಲಾವಿದರು	ಚಿಲಕಮುಕಿ	೭	ಶಶೇಂದ್ರ	ಕೊಪ್ಪಳ
೨೦	ಹನಮಂತಪ್ಪ ಬಬ್ಬಲ್	೪೫	ಕಲಾವಿದರು	ಚಿಲಕಮುಕಿ	೯	ಕರಿನೀಳ್	ಕೊಪ್ಪಳ
೨೧	ಸಣ್ಣ ಹನಮಂತಪ್ಪ	೪೫	ಕಲಾವಿದರು	ಚಿಲಕಮುಕಿ	೪	ಬಂಗಾರಿ	ಕೊಪ್ಪಳ
೨೨	ಶಂಕ್ರಪ್ಪ ಬೋಗಿ	೫೫	ಹಿರಿಯರು	ಚಿಲಕಮುಕಿ	೧೬	ನರೇಂದ್ರ	ಕೊಪ್ಪಳ
೨೩	ವೆಂಕಟೆಶ ನರಸಲ್	೨೫	ಆಟೋರಿಕ್ಷಾ ಒಡಿಸುವದು	ಚಿಲಕಮುಕಿ	೧೨	ಪಾಯಲ್	ಕೊಪ್ಪಳ
೨೪	ಹನಮವ್ವ ದುರಗಪ್ಪ	೩೯	ಕೂಲಿಕೆಲಸ	ಚಿಲಕಮುಕಿ	೬	ಇರುಕುಳ	ಕೊಪ್ಪಳ
೨೫	ಬಸವ್ವ ನರಸಲ್	೪೭	ಕೂಲಿ ಕೆಲಸ	ಚಿಲಕಮುಕಿ	೭	ಪಾಯಲ್	ಕೊಪ್ಪಳ
೨೬	ಸುಂಕಪ್ಪ ಲದ್ದಲ್	೪೬	ಸಣ್ಣ ವ್ಯಾಪಾರ	ಚಿಲಕಮುಕಿ	೯	ಶಶೇಂದ್ರ	ಕೊಪ್ಪಳ

೨೭	ರಾಮಣ್ಣ ಉಳ್ಳಿ	೮೭	ಭೀಕ್ಷೆ	ಚಿಲಕಮುಕಿ	೪	ಮದ್ಲಿನೀರು	ಕೊಪ್ಪಳ
೨೮	ಹುಲಿಗೆವ್ವ ಉಳ್ಳಿ	೩೨	ಕೂಲಿ	ಚಿಲಕಮುಕಿ	೪	ಮದ್ಲಿನೀರು	ಕೊಪ್ಪಳ
೨೯	ದೂಡ್ಡೀರಪ್ಪ ಆಸಂಗೆಪ್ಪ ಬೋಗಿ	೪೫	ವ್ಯಾಪಾರ	ಚಿಲಕಮುಕಿ	೮	ನರೇಂದ್ರ	ಕೊಪ್ಪಳ
೩೦	ಸುಂಕವ್ವ ಗುಂಡರೆಡ್ಡಿ	೩೦	ವ್ಯಾಪಾರ	ಚಿಲಕಮುಕಿ	೩	ಇರುಕುಳ	ಕೊಪ್ಪಳ
೩೧	ದುರಗಪ್ಪ ಭೋಗಿ	೪೬	ಕೂಲಿ	ಚಿಲಕಮುಕಿ	೬	ನರೇಂದ್ರ	ಕೊಪ್ಪಳ
೩೨	ಪರಸಪ್ಪ ಲದ್ದಲ್	೨೭	ವ್ಯಾಪಾರ	ಪೊತ್ನಾಳ	೭	ಇರುಕುಳ	ಕೊಪ್ಪಳ
೩೩	ಮಲ್ಲಪ್ಪ ಶಂಕ್ರಪ್ಪ ಭೋಗಿ	೩೫	ಕಲಾವಿದರು	ಚಿಲಕಮುಕಿ	೫	ನರೇಂದ್ರ	ಕೊಪ್ಪಳ
೩೪	ಯಳವಪ್ಪ ನರಸಲ್	೫೭	ಕೂಲಿ	ಚಿಲಕಮುಕಿ	೫	ಪಾಯಲ್	ಕೊಪ್ಪಳ
೩೫	ಮಂಜಪ್ಪ ನರಸಲ್	೩೭	ಕೂಲಿ	ಚಿಲಕಮುಕಿ	೫	ಪಾಯಲ್	ಕೊಪ್ಪಳ
೩೬	ನಿರುಪಾದಿ ನರಸಲ್	೩೦	ಸಣ್ಣ ವ್ಯಾಪಾರ	ಚಿಲಕಮುಕಿ	೬	ಪಾಯಲ್	ಕೊಪ್ಪಳ
೩೭	ಕಿನ್ನೆರಪ್ಪ ನರಸಲ್	೬೭	ಭೀಕ್ಷೆ	ಚಿಲಕಮುಕಿ	೧೦	ಪಾಯಲ್	ಕೊಪ್ಪಳ
೩೮	ಶರಣಪ್ಪ ಬೋಗಿ	೫೫	ಕೂಲಿ	ಚಿಲಕಮುಕಿ	೧೨	ನರೇಂದ್ರ	ಕೊಪ್ಪಳ
೩೯	ಶಾಂತವ್ವ ಬಸವರಾಜ ಪ.ಮಲ್ಲಯ್ಯ	೩೮	ಕೂಲಿ	ದನಗಳದೋಡ್ಡಿ	೪	ಇರುಕುಳ	ಕೊಪ್ಪಳ
೪೦	ಗವಿಶಿದ್ದಪ್ಪ ಪ.ಮ	೪೭	ಕೂಲಿ	ದನಗಳದೋಡ್ಡಿ	೪	ಇರುಕುಳ	ಕೊಪ್ಪಳ
೪೧	ಮಲ್ಲವ್ವ ಲದ್ದಲ್	೬೫	ಭಿಕ್ಷೆ	ಗದಗ	೨	ಶಶೇಂದ್ರ	ಗದಗ

೪೨	ಮಾಗುಂಡಪ್ಪ ಉಳ್ಳಿ	೫೫	ಕೂಲಿ	ಹುಲಿಕೂಟಿ	೬	ಮದ್ದಿನೀರು	ಗದಗ
೪೩	ಶಿವಪ್ಪ ಭೋಗಿ	೫೩	ಕೂಲಿ	ಗಜೆಂದ್ರಗಡ	೫	ನರೇಂದ್ರ	ಗದಗ
೪೪	ಹಂಪಯ್ಯ ದೋಡ್ಡವಿರಣ್ಣ	೪೮	ಕಲಾವಿದರು	ಹುಬ್ಬಳ್ಳಿ	೫	ಶಶೇಂದ್ರ	ಧಾರವಾಡ
	ಪರ್ವತ ಮಲ್ಲಯ್ಯ						
೪೫	ಸಂಗಪ್ಪ ಪ.ಮ	೪೨	ಕಲಾವಿದರು	ಹುಬ್ಬಳ್ಳಿ	೭	ಶಶೇಂದ್ರ	ಧಾರವಾಡ
೪೬	ಕೊಟೆಶ ಗಿಡ್ಡಪ್ಪ ಉಳ್ಳಿ	೪೮	ಕಲಾವಿದರು	ಹುಬ್ಬಳ್ಳಿ	೪	ಮದ್ದಿನೀರು	ಧಾರವಾಡ
೪೭	ತುಳಸಮ್ಮ ಹುಲಗಪ್ಪ	೪೦	ಕೂಲಿ	ಹುಬ್ಬಳ್ಳಿ	೫	ಪಶುನೀಳ	ಧಾರವಾಡ
೪೮	ಹೀರೆಹನಮಂತಪ್ಪ ಉಳ್ಳಿ	೬೭	ಕೂಲಿ	ಹುಬ್ಬಳ್ಳಿ	೮	ಮದ್ದಿನೀರು	ಧಾರವಾಡ
೪೯	ರಾಜಪ್ಪ ಗುಂಡರೆಡ್ಡಿ	೩೫	ಕಲಾವಿದರು	ಹುಬ್ಬಳ್ಳಿ	೬	ಇರುಕುಳ	ಧಾರವಾಡ
೫೦	ಸಾವಂತ್ರಮ್ಮ ಲದ್ದಲ	೫೬	ಮನೆಗೆಲಸ	ಹುಬ್ಬಳ್ಳಿ	೪	ಮದ್ದಿನೀರು	ಧಾರವಾಡ
೫೧	ಪರಸುರಾಮ ಗುಂಡರೆಡ್ಡಿ	೫೦	ಕೂಲಿ	ಮೈಸೂರ	೭	ಇರುಕುಳ	ಮೈಸೂರ
೫೨	ನರಸಪ್ಪ ಗುಡ್ಡದರ	೩೯	ಕೂಲಿ	ಬಡಮಲ್ಲಿ(ಹಾವೇರಿ)	೮	ಕೊಂಡೊಳ್	ಹಾವೇರಿ
೫೩	ಲಕ್ಷ್ಮಪ್ಪ ಪರ್ವತ್ತೆರ	೩೬	ಕೂಲಿ	ಬಡಮಲ್ಲಿ(ಹಾವೇರಿ)	೭	ವೀರಶಟ್	ಹಾವೇರಿ
೫೪	ಮಲ್ಲಮ್ಮ ಗುಡ್ಡದ್ತರ	೩೮	ಕೂಲಿ	ಬಡಮಲ್ಲಿ ತಾಂಡಾ	೨	ಕೊಂಡೊಳ್	ಹಾವೇರಿ
೫೫	ನಾಗಮ್ಮ ಪರ್ವತ್ತೆರ	೬೭	ಕೂಲಿ	ಚಿಕ್ಕೆರುರ	೩	ವೀರಶಟ್	ಹಾವೇರಿ

೫೬	ಸುರೇಶ ಪರ್ವತ್ತೆರ	೪೦	ವ್ಯಾಪಾರ	ಚಿಕ್ಕೆರುರ	೫	ವೀರಶಟ್	ಹಾವೇರಿ
೫೭	ಈರಪ್ಪ ಪರ್ವತ್ತೆರ	೫೨	ಕೂಲಿ	ಚಿಕ್ಕೆರುರ	೬	ವೀರಶಟ್	ಹಾವೇರಿ
೫೮	ಪಕೀರಮ್ಮ ಗುಡ್ಡದರ	೩೫	ಕೂಲಿ	ಚಿಕ್ಕೆರುರ	೮	ವೀರಶಟ್	ಹಾವೇರಿ
೫೯	ಚಂದಪ್ಪ ಪರ್ವತ್ತೆರ	೬೦	ಭಿಕ್ಷೆ	ರಾಮಾಪೂರ	೬	ಕೊಂಡೊಳ್	ಹಾವೇರಿ
೬೦	ಯಮನಪ್ಪ ಗುಡ್ಡದರ	೫೮	ಕೂಲಿ	ರಾಮಾಪೂರ	೫	ಕೊಂಡೊಳ್	ಹಾವೇರಿ
೬೧	ಮಲ್ಲಪ್ಪ ಪರ್ವತ್ತೆರ	೪೮	ಕೂಲಿ	ಹಂಸಭಾವಿ	೯	ವೀರಶಟ್	ಹಾವೇರಿ
೬೨	ದುರಗಮ್ಮ ಪರ್ವತ್ತೆರ	೫೦	ಕೂಲಿ	ಹಂಸಭಾವಿ	೭	ವೀರಶಟ್	ಹಾವೇರಿ
೬೩	ಶರಣಪ್ಪ ಗುಡ್ಡದರ	೪೫	ಕೂಲಿ,ವ್ಯಾಪಾರ	ಹಾನಗಲ್	೫	ಕೊಂಡೊಳ್	ಹಾವೇರಿ
೬೪	ಸುಂಕವ್ವ ಗುಡ್ಡದರ	೪೦	ಕೂಲಿ	ಹಾನಗಲ್	೫	ಕೊಂಡೊಳ್	ಹಾವೇರಿ
೬೫	ದಾನಮ್ಮ ಪರ್ವತ್ತೆರ	೩೮	ಕೂಲಿ	ಹಾನಗಲ್	೮	ವೀರಶಟ್	ಹಾವೇರಿ
೬೬	ನಾಗರಾಜ ಮುತ್ತುಗಾರರು	೩೭	ಕೂಲಿ	ಜಡೆ	೪	ಪಗಡಿಶಟ್ಟಿ	ಶಿವಮೊಗ್ಗ
೬೭	ನರಸಪ್ಪ ಮುತ್ತುಗಾರರು	೪೫	ಕೂಲಿ	ಜಡೆ	೬	ಪಗಡಿಶಟ್ಟಿ	ಶಿವಮೊಗ್ಗ
೬೮	ಹನಮಂತಪ್ಪ ಮುತ್ತುಗಾರರು	೪೯	ಕೂಲಿ	ಜಡೆ	೫	ಪಗಡಿಶಟ್ಟಿ	ಶಿವಮೊಗ್ಗ
೬೯	ಮಂಜವ್ವ ಮುತ್ತುಗಾರರು	೪೩	ಕೂಲಿ	ಕುದರಿಗಣಿ	೮	ಪಗಡಿಶಟ್ಟಿ	ಶಿವಮೊಗ್ಗ

ಸಂಪನ್ಮೂಲ ವ್ಯಕ್ತಿಗಳು

ಕ್ರಸಂ	ಸಂಪನ್ಮೂಲ ವ್ಯಕ್ತಿಗಳು	ವೃತ್ತಿ	ಊರು
೧	ಆರ್ ವೆಂಕಟೇಶ	ಯೋಜನಾ ಅಧಿಕಾರಿ	ಕೊಪ್ಪಳ
೨	ಮಹೇಶ ಎಚ್	ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಯರು	ಚಿಲಕಮುಖಿ
೩	ಪಕಿರಪ್ಪ ತಳವಾರ ಕೆ.ಮಂಗಳೂರು	ಪ್ರಥಮ ದರ್ಜೆ ಸಹಾಯಕರು	ಕುದರಿಮೋತಿ
೪	ಶರಣಪ್ಪ ವಾಲಿಕಾರ	ಗ್ರಾಮ ಪಂಚಾಯತಿ ಅಧ್ಯಕ್ಷರು	ಕಲ್ ಅಬ್ಬಿಗೇರಿ
೫	ಸಂಗಮೇಶ ಹುಣಸಿಹಾಳ	ಸ್ಥಳಿಯರು	ಕೊಪ್ಪಳ
೬	ಪರಣ್ಣ ಮನವಳ್ಳಿ	ತಾಲೂಕ ಶಾಸಕರು ಗಂಗಾವತಿ	ಗಂಗಾವತಿ
೭	ಮರಿಯಪ್ಪ ತಳವಾರ	ವಕೀಲರು ಯಲಬುರ್ಗಾ	ಮಸಬಹಂಚಿನಾಳ
೮	ಪಂಪಣ್ಣ ಗುಮಗೇರಿ	ಊರಿನ ಮುಖಂಡರು	ಚಿಲಕಮುಖಿ
೯	ವಿರೇಶ ಸಮಗಂಡಿ	ಮಾಜಿ ಜಿಲ್ಲಾ ಪಂಚಾಯತಿ ಸದಸ್ಯರು	ಕನಕಗಿರಿ
೧೦	ರಾಮಣ್ಣ ಕುಕನೂರ	ಪ್ರಾಥಮೀಕ ಶಾಲಾ ಮುಖ್ಯೋಪಾಧ್ಯಯರು	ಕನಕಗಿರಿ
೧೧	ಯಮನಪ್ಪ ಬಜಂತ್ರಿ	ಮಾಜಿ ಗ್ರಾಮ ಪಂಚಾಯತಿ ಸದಸ್ಯರು	ಕನಕಗಿರಿ
೧೨	ಹುಲಗಪ್ಪ ವಾಲಿಕಾರ	ಪಟ್ಟಣ ಪಂಚಾಯತಿ ಸದಸ್ಯರು	ಕನಕಗಿರಿ
೧೩	ಶ್ರೀಶೈಲ ಸಂಕನಗೌಡ	ಪಟ್ಟಣ ಪಂಚಾಯತಿ ಮುಖಂಡರು	ಕನಕಗಿರಿ
೧೪	ಶಂಕರಗೌಡ ಪಾಟಿಲ	ಊರಿನ ಮುಖಂಡರು	ಕಲ್ ಅಬ್ಬಿಗೇರಿ

೧೫	ವಿರಯ್ಯ ಜಡಿಮಠ	ನಿವೃತ್ತಿ ಮುಖೋಪಾಧ್ಯಯರು	ಕೆಸಕ್ಕಿ
೧೬	ತುಕಾರಾಮ ಬಡಿಗೇರ	ಪಂಚಾಯತಿ ಅಧ್ಯಕ್ಷರು	ಚಿಕ್ಕ ಸುಳಿಕೇರಾತಾಂಡಾ
೧೭	ದುರಗವ್ವ ಹರಿಜನ	ಗ್ರಾಮ ಪಂಚಾಯತಿ ಅಧ್ಯಕ್ಷರು	ಚಿಲಕಮುಖಿ
೧೮	ವಿರಪ್ಪ ಚಾಗರಿ	ಪ್ರಾಥಮೀಕ ಶಾಲಾ ಮುಖ್ಯೋಪಾಧ್ಯಯರು	ಕುಕನೂರು
೧೯	ಪ್ರಾಣೇಶರಾವ್ ಕುಲಕರ್ಣಿ ಮುಖ್ಯೋಪಾಧ್ಯಯರು	ಪ್ರಾಥಮೀಕ ಶಾಲಾ	ಕೆಸಕ್ಕಿ ಹಂಚಿನಾಳ
೨೦	ಅಶೋಕ ಈರಗಾರ	ಪ್ರಾಥಮೀಕ ಶಾಲಾ ಮುಖ್ಯೋಪಾಧ್ಯಯರು	ಮಸಬ ಹಂಚಿನಾಳ

ಮಾಲ ಸಮುದಾಯದ ಕುಟುಂಬಗಳ ಪಟ್ಟಿ

ಕ್ರ ಸಂ	ಹೆಸರು	ವಯಸ್ಸು	ಶಿಕ್ಷಣ	ಊರು	ವೃತ್ತಿ	ದೂರವಾಣಿ
೧	ಈರಪ್ಪ ಉಳ್ಳಿ	೪೫	–	ಕನಕಗಿರಿ	ಕಲಾವಿದರು	
೨	ಈರಮ್ಮ ಲದ್ದಲ್	೫೫	–	ಕನಕಗಿರಿ	ಮಾಹಿತಿದಾರರು	
೩	ಗುರುಲಿಂಗಪ್ಪ ಲದ್ದಲ್	೪೦	೨	ಕನಕಗಿರಿ	ಕೂಲಿ	
೪	ಬಸವರಾಜ ಲದ್ದಲ್	೪೦	೧೦	ಕನಕಗಿರಿ	ಕಲಾವಿದರು	೯೭೩೧೨೪೩೬೮೮
೫	ಚಂದ್ರಪ್ಪ ಉಳ್ಳಿ	೪೨		ಕನಕಗಿರಿ	ಕಲಾವಿದರು	
೬	ದುರಗಪ್ಪ ಉಳ್ಳಿ	೫೦	–	ಕನಕಗಿರಿ	ಕೂಲಿ	
೭	ನೀರುಪಾದಿ ಉಳ್ಳಿ	೪೫	೨	ಕನಕಗಿರಿ	ಕಲಾವಿದರು	
೮	ಮಾಹಾರಾಜ ಲದ್ದಲ್	೩೮	–	ಕನಕಗಿರಿ	ಕಲಾವಿದರು	
೯	ಸತ್ತಪ್ಪ ಲದ್ದಲ್	೪೦	–	ಕನಕಗಿರಿ	ಕಲಾವಿದರು	
೧೦	ಹನಮೇಶ ಲದ್ದಲ್	೨೮	೬	ಕನಕಗಿರಿ	ಕಲಾವಿದರು	
೧೧	ಮಂಜುನಾಥ ದು ಉಳ್ಳಿ	೩೦	೨	ಕನಕಗಿರಿ	ಕಲಾವಿದರು	
೧೨	ಹನಮೇಶ ಉಳ್ಳಿ	೨೫	೫	ಕನಕಗಿರಿ	ಕಲಾವಿದರು	

೧೩	ಬಡಕಪ್ಪ ಉಳ್ಳಿ	೪೦	–	ಕನಕಗಿರಿ	ಕಲಾವಿದರು
೧೪	ರಾಜಪ್ಪ ಪೂಜಾರಿ	೩೮	–	ಕನಕಗಿರಿ	ಕಲಾವಿದರು
೧೫	ದುರಗಪ್ಪ ಗಿಡ್ಡಪ್ಪ ಲದ್ದಲ್	೩೨	–	ಕನಕಗಿರಿ	ಕಲಾವಿದರು
೧೬	ಕನಕಾಚಲ ಮಾರುತಿ ಉಳ್ಳಿ	೨೫	೪	ಕನಕಗಿರಿ	ಕಲಾವಿದರು
೧೭	ಹನಮೇಶ ಉಳ್ಳಿ	೨೦	–	ಕನಕಗಿರಿ	ಕಲಾವಿದರು
೧೮	ನಾಗರಾಜ ಲದ್ದಲ್	೨೫	೫	ಕೆಸಕ್ಕಿ ಹಂಚಿನಾಳ	ವ್ಯಾಪಾರ
೧೯	ಫಮ್ಮಣ್ಣ ನಾಗಪ್ಪ ನರಸಲ್	೫೫	–	ಕೆಸಕ್ಕಿ ಹಂಚಿನಾಳ	ಕೂಲಿ
೨೦	ಗುಂಡಪ್ಪ ಉಳ್ಳಿ	೫೦	–	ಇಲಕಲ್ ಗಡ	ಕೂಲಿ
೨೧	ಅನ್ನದಾನೇಶ ಪರ್ವತ ಮಲ್ಲಯ್ಯ	೩೫	–	ಕಲ್ ಅಬ್ಬಿಗೆರೆ	ಕೂಲಿ
೨೨	ಈರಣ್ಣ ಲದ್ದಲ್	೫೫	–	ಕಲ್ ಅಬ್ಬಿಗೆರೆ	ಕೃಷಿ ಕೂಲಿ
೨೩	ಕುಪ್ಪಣ್ಣ ಪರ್ವತ ಮಲ್ಲಯ್ಯ	೪೮	–	ಕಲ್ ಅಬ್ಬಿಗೆರೆ	ಕೂಲಿ
೨೪	ಗಂಗಪ್ಪ ಪರ್ವತ ಮಲ್ಲಯ್ಯ	೬೦	–	ಕಲ್ ಅಬ್ಬಿಗೆರೆ	ಮಾಹಿತಿದಾರರು
೨೫	ಚಿದಾನಂದಪ್ಪ ಪರ್ವತ ಮಲ್ಲಯ್ಯ	೫೦	–	ಕಲ್ ಅಬ್ಬಿಗೆರೆ	ಮಾಹಿತಿದಾರರು
೨೭	ನಾಗಪ್ಪ ಫಕಿರಪ್ಪ ಪರ್ವತ ಮಲ್ಲಯ್ಯ	೬೦	–	ಕಲ್ ಅಬ್ಬಿಗೆರೆ	ಮಾಹಿತಿದಾರರು
೨೮	ದುರಗಪ್ಪ ಪರ್ವತ ಮಲ್ಲಯ್ಯ	೬೦	–	ಕಲ್ ಅಬ್ಬಿಗೆರೆ	ಮಾಹಿತಿದಾರರು

೨೯	ದೂಡ್ಡ ಈರಣ್ಣ ಪರ್ವತ ಮಲ್ಲಯ್ಯ	೬೦	–	ಕಲ್ ಅಬ್ಬಿಗೆರೆ	ಮಾಹಿತಿದಾರರು
೩೦	ದೂಡ್ಡಬಸಪ್ಪ ರು ಪರ್ವತ ಮಲ್ಲಯ್ಯ	೫೦	–	ಕಲ್ ಅಬ್ಬಿಗೆರೆ	ಕೂಲಿ
೩೧	ಮಲ್ಲಪ್ಪ ಲದ್ದಲ್	೮೦	–	ಕಲ್ ಅಬ್ಬಿಗೆರೆ	ಹಿರಿಯರು
೩೨	ಮೂಕ ಹಂಪಯ್ಯ ಪ.ಮ	೪೦	–	ಕಲ್ ಅಬ್ಬಿಗೆರೆ	ಕೂಲಿ
೩೩	ರಾಜಪ್ಪ ಪರ್ವತ ಮಲ್ಲಯ್ಯ	೪೫	–	ಕಲ್ ಅಬ್ಬಿಗೆರೆ	ಕೂಲಿ
೩೪	ರುದ್ರಪ್ಪ ಪರ್ವತ ಮಲ್ಲಯ್ಯ	೬೦	–	ಕಲ್ ಅಬ್ಬಿಗೆರೆ	ಕೂಲಿ
೩೫	ಶರಣಪ್ಪ ಪರ್ವತ ಮಲ್ಲಯ್ಯ	೩೫	–	ಕಲ್ ಅಬ್ಬಿಗೆರೆ	ಕೂಲಿ
೩೬	ಶಾಂತಪ್ಪ ಪರ್ವತ ಮಲ್ಲಯ್ಯ	೪೦	–	ಕಲ್ ಅಬ್ಬಿಗೆರೆ	ಕೃಷಿ ಕೂಲಿ
೩೭	ಸಂಗಪ್ಪ ಪರ್ವತ ಮಲ್ಲಯ್ಯ	೫೦	–	ಕಲ್ ಅಬ್ಬಿಗೆರೆ	ಕೃಷಿಕೂಲಿ
೩೮	ಸಣ್ಣ ಹನಮಂತಪ್ಪ ಪರ್ವತ ಮಲ್ಲಯ್ಯ	೫೫	–	ಕಲ್ ಅಬ್ಬಿಗೆರೆ	ಮಾಹಿತಿದಾರರು
೩೯	ಹನಮಂತ ಪರ್ವತ ಮಲ್ಲಯ್ಯ	೫೫	–	ಕಲ್ ಅಬ್ಬಿಗೆರೆ	ಕೂಲಿ
೪೦	ಈರಣ್ಣ ಲದ್ದಲ್	೬೦	–	ಕುದರಿಮೂತಿ	ಕೂಲಿ
೪೧	ಮಲ್ಲಿಕಾರ್ಜುನ ಲದ್ದಲ್	೪೦	–	ಕುದರಿಮೂತಿ	ಕೂಲಿ
೪೨	ಮಾರುತಿ ಲದ್ದಲ್	೩೦	೫	ಕುದರಿಮೂತಿ	ಕಲಾವಿದರು
೪೩	ಹಿಚ್ಚಿರಪ್ಪ ಪರ್ವತಮಲ್ಲಯ್ಯ	೫೩	–	ಕುದರಿಮೂತಿ	ಭೀಕ್ಷೆ

೪೪	ಬಡಕಪ್ಪ ಫಕಿರಪ್ಪ ಉಳ್ಳಿ	೭೦	–	ಕೊಪ್ಪಳ	ಭೀಕ್ಷೆ
೪೫	ಮಂಜಪ್ಪ ಹನಮಂತಪ್ಪ ಲದ್ದಲ್	೪೭	–	ಕೊಪ್ಪಳ	ಕೂಲಿ
೪೬	ಶಿವಪ್ಪ ಹನಮಂತಪ್ಪ ಮಾಲ	೩೮	–	ಕೊಪ್ಪಳ	ಕೂಲಿ
೪೭	ರಾಜಪ್ಪ ಈರಪ್ಪ ಪೂಜಾರ	೬೦	–	ಕೊಪ್ಪಳ	ಕೂಲಿ
೪೮	ಪಕಿರಪ್ಪ ಮಾಲ	೩೫	–	ಕೊಪ್ಪಳ	ವ್ಯಾಪಾರ
೪೯	ಚೆನ್ನಪ್ಪ ಮಾಲ	೪೬	–	ಕೊಪ್ಪಳ	ಕೂಲಿ
೪೯	ಮುದುಕಪ್ಪ ಮಾಲ	೫೬	–	ಕೊಪ್ಪಳ	ಕೂಲಿ
೫೦	ದುರಗಪ್ಪ ಉಳ್ಳಿ	೩೫	–	ಕೊಪ್ಪಳ	ಕಲಾವಿದರು
೫೧	ಸಣ್ಣಹನಮಪ್ಪ ನರಸಲ್	೪೬	–	ಕೊಪ್ಪಳ	ಮಾಹಿತಿದಾರರು
೫೧	ರಾಜಪ್ಪ ಉಳ್ಳಿ	೫೫	–	ಕೊಪ್ಪಳ	ಕೂಲಿ
೫೨	ಚೆಂದಪ್ಪ ಬಡಕಪ್ಪ ಹುಳ್ಳಿ	೬೬	–	ಕೊಪ್ಪಳ	ಭಿಕ್ಷೆ
೫೩	ಈರಪ್ಪ ಬಂದೂಕ	೪೫	–	ಕೊಪ್ಪಳ	ಕೂಲಿ
೫೪	ನಿಂಗಮ್ಮ ಲಕ್ಷ್ಮಣ ಉಳ್ಳಿ	೬೬	–	ಕೊಪ್ಪಳ	ಮನೆಗೆಲಸ
೫೫	ಈರಪ್ಪ ನರಸಲ್	೭೦	–	ಕೊಪ್ಪಳ	ಭಿಕ್ಷೆ
೫೬	ಚಂದಪ್ಪ ಉಳ್ಳಿ	೫೪	–	ಕೊಪ್ಪಳ	ಕೂಲಿ

೫೭	ಚೆನ್ನಮ್ಮ ಲದ್ದಲ್	೭೦	–	ಕೊಪ್ಪಳ	ಭಿಕ್ಷೆ
೫೮	ವೆಂಕಟೇಶ ಮಾಲ	೪೦	೪	ಕೊಪ್ಪಳ	ಕೂಲಿ
೫೯	ಬಸಪ್ಪ ಬಂದರ್	೫೫	–	ಕೊಪ್ಪಳ	ಕೂಲಿ
೬೦	ರುದ್ರಪ್ಪ ಎಮ್ಮಿ	೪೫	–	ಕೊಪ್ಪಳ	ಕೂಲಿ
೬೧	ಈರವ್ವ ನರಸಲ್	೫೫	–	ಕೊಪ್ಪಳ	ಮನೆಗೆಲಸ
೬೨	ಅಡಿವೆಪ್ಪ ಕರಿಯಪ್ಪ ನರಸಲ್	೬೫	–	ಕೊಪ್ಪಳ	ರದ್ದಿ ಆಯುವದು
೬೩	ದುರಗಪ್ಪ ನರಸಲ್	೫೪	–	ಕೊಪ್ಪಳ	ಸಣ್ಣ ವ್ಯಾಪಾರ
೬೪	ದುರಗಪ್ಪ ಉಳ್ಳಿ	೫೫	–	ಕೊಪ್ಪಳ	ಕೂಲಿ
೬೫	ಲಕ್ಷ್ಮಿ ಹುಳ್ಳಿ	೪೫	–	ಕೊಪ್ಪಳ	ವ್ಯಾಪಾರ
೬೬	ದುರಗವ್ವ ಹುಳ್ಳಿ	೩೫	–	ಕೊಪ್ಪಳ	ವ್ಯಾಪಾರ
೬೭	ಛತ್ರಪ್ಪ ಉಳ್ಳಿ	೩೦	೬	ಕೊಪ್ಪಳ	ಕಲಾವಿದರು
೬೮	ಸಣ್ಣ ಚೆನ್ನಪ್ಪ ಉಳ್ಳಿ	೪೦	–	ಕೊಪ್ಪಳ	ಹಿರಿಯ ಕಲಾವಿದರು
೬೯	ಸಣ್ಣರಾಜಪ್ಪ ಬಸಪ್ಪ ಉಳ್ಳಿ	೬೭	–	ಕೊಪ್ಪಳ	ಭಿಕ್ಷೆ
೭೦	ಪಕಿರಪ್ಪ ಉಳ್ಳಿ	೪೦	–	ಕೊಪ್ಪಳ	ಕೂಲಿ
೭೧	ಪರಸಪ್ಪ ರಾಮಣ್ಣ ಉಳ್ಳಿ	೪೩	–	ಕೊಪ್ಪಳ	ಕೂಲಿ

೭೨	ಹನಮವ್ವ ಆಡಿನ್	೩೭	–	ಕೊಪ್ಪಳ	ರದ್ದಿ ಆಯುವದು	
೭೩	ಯಮನೂರಪ್ಪ ಗುಂಡರೆಡ್ಡಿ	೪೦	–	ಕೊಪ್ಪಳ	ಕೂಲಿ	
೭೪	ಹನಮಂತಪ್ಪ ಬಬ್ಬಲ್	೪೫	–	ಚಿಲಕಮುಕಿ	ಕಲಾವಿದರು	೯೭೪೦೭೮೯೨೫೧
೭೫	ಸಣ್ಣ ಹನಮಂತಪ್ಪ	೪೫	–	ಚಿಲಕಮುಕಿ	ಕಲಾವಿದರು	
೭೬	ಶಿವಣ್ಣ ಬೋಗಿ	೩೦	೭	ಚಿಲಕಮುಕಿ	ಕಲಾವಿದರು	
೭೭	ರಾಜಪ್ಪ ಬಬ್ಬಲ್	೨೫	೨	ಚಿಲಕಮುಕಿ	ಕಲಾವಿದರು	
೭೮	ಗಂಗಪ್ಪ ಬಬ್ಬಲ್	೨೦	೪	ಚಿಲಕಮುಕಿ	ಕಲಾವಿದರು	
೭೯	ಬರಮರೆಡ್ಡಿ ಲದ್ದಲ್	೩೭	–	ಚಿಲಕಮುಕಿ	ಕಲಾವಿದರು	
೮೦	ಕುಪ್ಪಣ್ಣ ಬಬ್ಬಲ್	೨೭	–	ಚಿಲಕಮುಕಿ	ಕಲಾವಿದರು	
೮೧	ಈರಪ್ಪ ಬಂದೂಕ	೩೦	೬	ಚಿಲಕಮುಕಿ	ಕಲಾವಿದರು	
೮೨	ಅನ್ನದಾನೇಶ ಗುಂಡರೆಡ್ಡಿ	೩೦	೭	ಚಿಲಕಮುಕಿ	ಕಲಾವಿದರು	
೮೩	ಮಲ್ಲಪ್ಪ ಬೋಗಿ	೪೦	–	ಚಿಲಕಮುಕಿ	ಕಲಾವಿದರು	
೮೪	ರಾಘವೇಂದ್ರ ಬೋಗಿ	೨೮	–	ಚಿಲಕಮುಕಿ	ಕಲಾವಿದರು	
೮೫	ಬಸವರಾಜ ಬೋಗಿ	೨೫	–	ಚಿಲಕಮುಕಿ	ಕಲಾವಿದರು	
೮೬	ಚಂದಪ್ಪ ಉಳ್ಳಿ	೩೦	–	ಚಿಲಕಮುಕಿ	ಕಲಾವಿದರು	

೮೭	ಹನಮಂತಪ್ಪ ಉಳ್ಳಿ	೨೮	೬	ಚಿಲಕಮುಕಿ	ಕಲಾವಿದರು
೮೮	ಈರಣ್ಣ ಆಡಿನ್	೨೯	೩	ಚಿಲಕಮುಕಿ	ಕಲಾವಿದರು
೮೯	ಕನಕಪ್ಪ ಲದ್ದಲ್	೧೮	–	ಚಿಲಕಮುಕಿ	ಕಲಾವಿದರು
೯೦	ದುರಗಪ್ಪ ಲದ್ದಲ್	೨೦	–	ಚಿಲಕಮುಕಿ	ಕಲಾವಿದರು
೯೧	ಶಂಕ್ರಪ್ಪ ಬೋಗಿ	೫೬	–	ಚಿಲಕಮುಕಿ	ಹಿರಿಯರು
೯೨	ರಾಜಪ್ಪ ಬಬ್ಬಲ್	೫೦	–	ಚಿಲಕಮುಕಿ	ಹೀರಿಯ ಕಲಾವಿದರು
೯೩	ದುರಗಪ್ಪ ಲಕ್ಷ್ಮಪ್ಪ ಬಬ್ಬಲ್	೬೦	–	ಚಿಲಕಮುಕಿ	ಕೂಲಿ
೯೪	ಗಿಡ್ಡಪ್ಪ ಮಲ್ಲಪ್ಪ ಬಬ್ಬಲ್	೫೦	–	ಚಿಲಕಮುಕಿ	–
೯೫	ಕನಕಪ್ಪ ಕರಿಯಪ್ಪ ಲದ್ದಲ್	೪೮	–	ಚಿಲಕಮುಕಿ	ಕೂಲಿ
೯೬	ಚೆನ್ನಪ್ಪ ಕರಿಯತ್ತಿನವರ್	೫೦	–	ಚಿಲಕಮುಕಿ	ಕೃಷಿಕೂಲಿ
೯೭	ಶಾಂತಪ್ಪ ಕರಿಯತ್ತಿನವರ್	೪೬	–	ಚಿಲಕಮುಕಿ	ಕೃಷಿಕೂಲಿ
೯೮	ಈರಣ್ಣ ಹುಲಗಪ್ಪ ಆಡಿನ್	೪೯	–	ಚಿಲಕಮುಕಿ	ಹಿರಿಯ ಕಲಾವಿದರು
೯೯	ರಾಜಪ್ಪ ಚಂದಪ್ಪ ಉಳ್ಳಿ	೪೩	–	ಚಿಲಕಮುಕಿ	ಕೂಲಿ
೧೦೦	ಗಾಳೆಪ್ಪ ಹುಲಗಪ್ಪ ಲದ್ದಲ್	೩೦	–	ಚಿಲಕಮುಕಿ	ರಿಕ್ಷಾ ಒಡಿಸುವವರು
೧೦೧	ಅಂಕಲಪ್ಪ ಲಕ್ಷ್ಮಪ್ಪ ಲದ್ದಲ್	೬೦	–	ಚಿಲಕಮುಕಿ	ವ್ಯಾಪಾರ

೧೦೨	ಈಶ್ವರಪ್ಪ ಈರಪ್ಪ ಬಂದೂಕ	೫೫	–	ಚಿಲಕಮುಕಿ	ಹಮಾಲಿ
೧೦೩	ಯಮನಪ್ಪ ರಾಜಪ್ಪ ಗುಂಡ್ರೆಡ್ಡಿ	೩೮	–	ಚಿಲಕಮುಕಿ	ಕೂಲಿ
೧೦೪	ರಾಜಪ್ಪ ಹಿರೆರಾಜಪ್ಪ ಉಳ್ಳಿ	೬೫		ಚಿಲಕಮುಕಿ	ಭೀಕ್ಷೆ
೧೦೫	ಶಿವಾಜಪ್ಪ ಹೀರೆರಾಜಪ್ಪ ಉಳ್ಳಿ	೩೬	–	ಚಿಲಕಮುಕಿ	ಕೂಲಿ ಕೆಲಸ
೧೦೬	ಲಕ್ಷ್ಮವ್ವ ಬಸಪ್ಪ ಉಳ್ಳಿ	೪೫	–	ಚಿಲಕಮುಕಿ	ಕೂಲಿ ಕೆಲಸ
೧೦೭	ಹನಮಂತ ಬಸಪ್ಪ ಉಳ್ಳಿ	೪೦	–	ಚಿಲಕಮುಕಿ	ವ್ಯಾಪಾರ
೧೦೮	ಶರಣಮ್ಮ ಸುಂಕಪ್ಪ ಬೋಗಿ	೩೬	–	ಚಿಲಕಮುಕಿ	ಕೃಷಿ ಕೂಲಿ
೧೦೯	ದ್ಯಾಮಣ್ಣ ಬಂದೂಕ	೪೫	–	ಚಿಲಕಮುಕಿ	ಕೂಲಿ
೧೧೦	ಕುಂಡೆಪ್ಪ ನರಸಲ್	೬೦	–	ಚಿಲಕಮುಕಿ	ಕೂಲಿ
೧೧೨	ಸಣ್ಣಗೋರಪ್ಪ ನರಸಲ್	೬೨	–	ಚಿಲಕಮುಕಿ	ಕೃಷಿ
೧೧೩	ವೆಂಕಟೆಶ ನರಸಲ್	೨೫	೭	ಚಿಲಕಮುಕಿ	ಆಟೋರಿಕ್ಷಾ ಒಡಿಸುವದು
೧೧೪	ಹನಮವ್ವ ದುರಗಪ್ಪ	೩೯	–	ಚಿಲಕಮುಕಿ	ಕೂಲಿಕೆಲಸ
೧೧೫	ಬಸವ್ವ ನರಸಲ್	೪೭	–	ಚಿಲಕಮುಕಿ	ಕೂಲಿ ಕೆಲಸ
೧೧೬	ಸುಂಕಪ್ಪ ಲದ್ದಲ್	೪೬	–	ಚಿಲಕಮುಕಿ	ಸಣ್ಣ ವ್ಯಾಪಾರ
೧೧೭	ರಾಮಣ್ಣ ಉಳ್ಳಿ	೮೭	–	ಚಿಲಕಮುಕಿ	ಭಿಕ್ಷೆ

೧೧೮	ಹುಲಿಗೆವ್ವ ಉಳ್ಳಿ	೩೨	–	ಚಿಲಕಮುಕಿ	ಕೂಲಿ
೧೧೯	ದೂಡ್ಡೀರಪ್ಪ ಆಸಂಗೆಪ್ಪ ಬೋಗಿ	೪೫	೨	ಚಿಲಕಮುಕಿ	ವ್ಯಾಪಾರ
೧೨೦	ಗೋವಿಂದಪ್ಪ ನರಸಲ್	೪೬	೩	ಚಿಲಕಮುಕಿ	ವ್ಯಾಪಾರ
೧೨೧	ಶಿವಣ್ಣ ಭೋಗಿ	೪೬	–	ಚಿಲಕಮುಕಿ	ಕೂಲಿ
೧೨೨	ಮಂಜಪ್ಪ ಉಳ್ಳಿ	೨೭	೯	ಚಿಲಕಮುಕಿ	ವ್ಯಾಪಾರ
೧೨೩	ಮಲ್ಲಪ್ಪ ಶಂಕ್ರಪ್ಪ ಭೋಗಿ	೩೫	೬	ಚಿಲಕಮುಕಿ	ಕಲಾವಿದರು
೧೨೪	ಯಳವಪ್ಪ ನರಸಲ್	೫೭	–	ಚಿಲಕಮುಕಿ	ಕೂಲಿ
೧೨೫	ಮಂಜಪ್ಪ ನರಸಲ್	೩೭	–	ಚಿಲಕಮುಕಿ	ಕೂಲಿ
೧೨೬	ನಿರುಪಾದಿ ನರಸಲ್	೩೦	೫	ಚಿಲಕಮುಕಿ	ಸಣ್ಣ ವ್ಯಾಪಾರ
೧೨೭	ಕಿನ್ನರಪ್ಪ ನರಸಲ್	೬೭	–	ಚಿಲಕಮುಕಿ	ಭಿಕ್ಷೆ
೧೨೮	ಶರಣಪ್ಪ ಬೋಗಿ	೫೫	–	ಚಿಲಕಮುಕಿ	ಕೂಲಿ
೧೨೯	ಮಾರುತೆಪ್ಪ ಉಳ್ಳಿ	೪೫	–	ಚಿಲಕಮುಕಿ	ಕೂಲಿ
೧೩೦	ಈರಪ್ಪ ಎಮ್ಮಿ	೪೮	–	ಚಿಲಕಮುಕಿ	ಕೂಲಿ
೧೩೧	ಹನಮಂತಪ್ಪ ಮಲ್ಲಮ್ಮ ಪರ್ವತ ಮಲ್ಲಯ್ಯ	೪೦	–	ದನಗಳದೋಡ್ಡಿ	ಸಣ್ಣ ವ್ಯಾಪಾರ

೧೩೨	ಶಾಂತವ್ವ ಬಸವರಾಜ ಪ.ಮಲ್ಲಯ್ಯ	೩೮	–	ದನಗಳದೊಡ್ಡಿ	ಕೂಲಿ
೧೩೩	ಗವಿಶಿದ್ದಪ್ಪ ಪ.ಮ	೪೭	–	ದನಗಳದೊಡ್ಡಿ	ಕೂಲಿ
೧೩೩	ಬಸವರಾಜ ಪ. ಮ	೪೦	–	ದನಗಳದೊಡ್ಡಿ	ಕೂಲಿ
೧೩೪	ರಾಜಪ್ಪ ಸಣ್ಣರಾಜಪ್ಪ ಉಳ್ಳಿ	೪೫	–	ದನಗಳದೊಡ್ಡಿ	ಕೂಲಿ
೧೩೫	ಬಸಪ್ಪ ಯಲ್ಲವ್ವ ಲದ್ದಲ್	೫೦	–	ದನಗಳದೊಡ್ಡಿ	ಕೂಲಿ
೧೩೬	ದೊಡ್ಡಪ್ಪ ಮಾಹಾನಂದಪ್ಪ ನರಸಲ್	೫೦	–	ಶಿವಪುರ	ಕೂಲಿ
೧೩೭	ಬಾಳಪ್ಪ ನರಸಲ್	೬೩	–	ಗದಗ	ಕೂಲಿ
೧೩೮	ರೆಡ್ಡಿ ಲದ್ದಲ್	೬೫	–	ಗದಗ	ಕೂಲಿ
೧೩೯	ಮಾಗುಂಡಪ್ಪ ಉಳ್ಳಿ	೫೫	–	ಹುಲಿಕೂಟಿ	ಕೂಲಿ
೧೪೦	ಶಿವಪ್ಪ ಭೋಗಿ	೫೩	–	ಗಜೇಂದ್ರಗಡ	ಕೂಲಿ
೧೪೧	ಹಂಪಯ್ಯ ದೊಡ್ಡವಿರಣ್ಣ ಪರ್ವತ ಮಲ್ಲಯ್ಯ	೪೮	೪	ಹುಬ್ಬಳ್ಳಿ	ಕಲಾವಿದರು
೧೪೨	ಸಂಗಪ್ಪ ಪ.ಮ	೪೨	೪	ಹುಬ್ಬಳ್ಳಿ	ಕಲಾವಿದರು
೧೪೩	ಕೊಟೆಶ ಗಿಡ್ಡಪ್ಪ ಉಳ್ಳಿ	೪೮	–	ಹುಬ್ಬಳ್ಳಿ	ಕಲಾವಿದರು
೧೪೪	ತುಳಸಮ್ಮ ಹುಲಗಪ್ಪ ಪ.ಮ	೪೦	–	ಹುಬ್ಬಳ್ಳಿ	ಕೂಲಿ

೧೪೫	ಹೀರೆಹನಮಂತಪ್ಪ ಉಳ್ಳಿ	೬೭	–	ಹುಬ್ಬಳ್ಳಿ	ಕೂಲಿ
೧೪೬	ರಾಜಪ್ಪ ಉಳ್ಳಿ	೩೫	೫	ಹುಬ್ಬಳ್ಳಿ	ಕಲಾವಿದರು
೧೪೭	ಸಾವಂತ್ರಮ್ಮ ಲದ್ದಲ	೫೬	–	ಹುಬ್ಬಳ್ಳಿ	ಮನೆಗೆಲಸ
೧೪೮	ಹನಮಂತಪ್ಪ ನರಸಲ್	೩೭	–	ಹುಬ್ಬಳ್ಳಿ	ಕಲಾವಿದರು
೧೪೯	ಈರಪ್ಪ ಪ.ಮ	೪೦	–	ಹುಬ್ಬಳ್ಳಿ	ಕೂಲಿ
೧೫೦	ದುರಗಪ್ಪ ಪ.ಮ	೩೭	–	ಹುಬ್ಬಳ್ಳಿ	ಕಲಾವಿದರು
೧೫೧	ಶಂಕರ್ ಬಬ್ಬಲ್	೩೭	೧೦	ಹುಬ್ಬಳ್ಳಿ	ಸಣ್ಣ ವ್ಯಾಪಾರ
೧೫೨	ಸಣ್ಣ ಹನಮಂತಪ್ಪ ಉಳ್ಳಿ	೫೬	–	ಹುಬ್ಬಳ್ಳಿ	ಕೂಲಿ ಹಮಾಲಿ
೧೫೩	ಹನಮಂತಪ್ಪ ಪ.ಮ	೬೮	–	ಹುಬ್ಬಳ್ಳಿ	ಭೀಕ್ಷೆ
೧೫೪	ಮಂಜುನಾಥ ಲದ್ದಲ್	೨೫	೭	ಹುಬ್ಬಳ್ಳಿ	ಕಲಾವಿದ
೧೫೫	ರಾಜಪ್ಪ ಯಮನಪ್ಪ ಬೈಲಹೂಂಗಲ	೩೭	–	ಹುಬ್ಬಳ್ಳಿ	ಕೂಲಿ
೧೫೬	ಶರಣಪ್ಪ ಕುಂಟೆಪ್ಪ ನರಸಲ್	೪೬	–	ಹುಬ್ಬಳ್ಳಿ	ಕೂಲಿ
೧೫೭	ಈರಣ್ಣ ಕುಂಟೆಪ್ಪ ನರಸಲ್	೫೦	–	ಹುಬ್ಬಳ್ಳಿ	ವ್ಯಾಪಾರ
೧೫೭	ಶರಣವ್ವ ಚಂದಪ್ಪ ಉಳ್ಳಿ	೪೮	–	ಹುಬ್ಬಳ್ಳಿ	ರದ್ದಿ ಆಯುವದು
೧೫೭	ಕುಂಟೆಪ್ಪ ನರಸಲ್	೫೫	–	ಹುಬ್ಬಳ್ಳಿ	ಕೂಲಿ

೧೫೮	ಈರಣ್ಣ ನರಸಲ್	೫೬	–	ಹುಬ್ಬಳ್ಳಿ	ಕೂಲಿ
೧೫೯	ಹನಮಂತಪ್ಪ ಹೀರೆಗಿಡ್ಡಪ್ಪ ಉಳ್ಳಿ	೬೦	–	ಹುಬ್ಬಳ್ಳಿ	ಹಿರಿಯ ಕಲಾವಿದರು
೧೬೦	ಹೆಮಂತ ಹನಮಮಂತಪ್ಪ ಉಳ್ಳಿ	೩೫	–	ಹುಬ್ಬಳ್ಳಿ	ಕಲಾವಿದ
೧೬೧	ಹನಮಂತಪ್ಪ ಗಿಡ್ಡಪ್ಪ ಉಳ್ಳಿ	೨೯	೭	ಹುಬ್ಬಳ್ಳಿ	ಕಲಾವಿದ
೧೬೨	ರತ್ನಮ್ಮ ಲದ್ದಲ್	೬೦	–	ಹುಬ್ಬಳ್ಳಿ	ಮಾಹಿತಿದಾರರು
೧೬೩	ರಾಜಪ್ಪ ದುರಗಪ್ಪ ಉಳ್ಳಿ	೪೫	೪	ಪೂತ್ನಾಳ	ಕೂಲಿ
೧೬೪	ಮಂಜುನಾಥ ಉಳ್ಳಿ	೩೫	–	ಪೂತ್ನಾಳ	ಕೂಲಿ
೧೬೫	ದುರಗೆಶ ಕಠಾರಪ್ಪ ಉಳ್ಳಿ	೩೨	೨	ಪೂತ್ನಾಳ	ಕೂಲಿ
೧೬೬	ಮಾಹಾರಾಜ ನರಸಲ್	೬೦	–	ಪೂತ್ನಾಳ	ಕೂಲಿ
೧೬೭	ಹನಮಂತಪ್ಪ ನರಸಲ್	೪೦	–	ಪೂತ್ನಾಳ	ಕೂಲಿ
೧೬೮	ಮುತ್ತಣ್ಣ ನರಸಲ್	೪೫	–	ಪೂತ್ನಾಳ	ಕೂಲಿ
೧೬೮	ಪರಸಪ್ಪ ನರಸಲ್	೪೮	೫	ಮೈಸೂರ	ಕೂಲಿ ೯೫೯೧೭೫೧೬೨೧
೧೬೯	ರಾಜಪ್ಪ ಲದ್ದಲ್	೪೫	–	ಮೈಸೂರ	ಕೂಲಿ
೧೭೦	ಹನಮಂತಪ್ಪ ಉಳ್ಳಿ	೪೮	–	ಮೈಸೂರ	ಕೂಲಿ
೧೭೧	ಮಲ್ಲಿಕಾರ್ಜುನ ಉಳ್ಳಿ	೫೦	–	ಮೈಸೂರ	ಕೂಲಿ

೧೭೨	ಮಲ್ಲಮ್ಮ ಉಳ್ಳಿ	೪೭	–	ಮೈಸೂರ	ಕೂಲಿ
೧೭೩	ಈರಪ್ಪ ಪರ್ವತ್ತೆರ್	೫೦	–	ಬಡಮಲ್ಲಿ(ಹಾವೇರಿ)	ಕೂಲಿ
೧೭೪	ಕಮಲವ್ವ ಪರ್ವತ್ತೆರ	೪೫	–	ಬಡಮಲ್ಲಿ(ಹಾವೇರಿ)	ಕೂಲಿ
೧೭೫	ಜಗದೀಶ ಪರ್ವತ್ತೆರ	೫೦	–	ಬಡಮಲ್ಲಿ(ಹಾವೇರಿ)	ಕೂಲಿ
೧೭೬	ನರಸಪ್ಪ ಪರ್ವತ್ತೆರ	೩೯		ಬಡಮಲ್ಲಿ(ಹಾವೇರಿ)	ಕೂಲಿ
೧೭೭	ಲಕ್ಷ್ಮಪ್ಪ ಪರ್ವತ್ತೆರ	೩೬	–	ಬಡಮಲ್ಲಿ(ಹಾವೇರಿ)	ಕೂಲಿ
೧೭೮	ದೂಡ್ಡಮಲ್ಲಪ್ಪ ಪರ್ವತ್ತೆರ	೪೦	–	ಬಡಮಲ್ಲಿ(ಹಾವೇರಿ)	ಕೂಲಿ
೧೭೯	ಮಲ್ಲೆಶಪ್ಪ ಪರ್ವತ್ತೆರ	೩೩	೮	ಬಡಮಲ್ಲಿ(ಹಾವೇರಿ)	ಕೂಲಿ
೧೮೦	ದುರಗಪಪ್ಪ ಪರ್ವತ್ತೆರ	೪೭	–	ಬಡಮಲ್ಲಿ ತಾಂಡಾ	ಕೂಲಿ
೧೮೧	ಮಲ್ಲಮ್ಮ ಪರ್ವತ್ತೆರ	೩೮	–	ಬಡಮಲ್ಲಿ ತಾಂಡಾ	ಕೂಲಿ
೧೮೨	ಅಣ್ಣಪ್ಪ ಪರ್ವತ್ತೆರ	೫೮	–	ಬಡಮಲ್ಲಿ ತಾಂಡಾ	–
೧೮೩	ನಾಗಮ್ಮ ಪರ್ವತ್ತೆರ	೬೭	–	ಚಿಕ್ಕೆರುರ	ಕೂಲಿ
೧೮೪	ಸುರೆಶ ಪರ್ವತ್ತೆರ	೪೦	–	ಚಿಕ್ಕೆರುರ	ಕೂಲಿ
೧೮೫	ಈರಪ್ಪ ಪರ್ವತ್ತೆರ	೫೨	–	ಚಿಕ್ಕೆರುರ	ಕೂಲಿ
೧೮೬	ಪಕೀರಮ್ಮ ಪರ್ವತ್ತೆರ	೩೫	–	ಚಿಕ್ಕೆರುರ	ಕೂಲಿ

೧೮೭	ರಾಮಣ್ಣ ಪರ್ವತ್ತೆರ	೫೦	–	ಚಿಕ್ಕೆರುರ	ಕೂಲಿ
೧೮೮	ಹುಸೆನಪ್ಪ ಪರ್ವತ್ತೆರ	೬೦	–	ರಾಮಾಪೂರ	ಕೂಲಿ
೧೮೯	ಯಮನಪ್ಪ ಪರ್ವತ್ತೆರ	೫೮	–	ರಾಮಾಪೂರ	ಕೂಲಿ
೧೯೦	ಮಲ್ಲಪ್ಪ ಪರ್ವತ್ತೆರ	೪೮	–	ಹಂಸಭಾವಿ	ಕೂಲಿ
೧೯೧	ದುರಗಮ್ಮ ಪರ್ವತ್ತೆರ	೫೦	–	ಹಂಸಭಾವಿ	ಕೂಲಿ
೧೯೧	ಶರಣಪ್ಪ ಪರ್ವತ್ತೆರ	೪೫	–	ಹಾನಗಲ್	ಕೂಲಿ
೧೯೨	ಸುಂಕವ್ವ ಪರ್ವತ್ತೆರ	೪೦	–	ಹಾನಗಲ್	ಕೂಲಿ
೧೯೩	ದಾನಮ್ಮ ಪರ್ವತ್ತೆರ	೩೮	–	ಹಾನಗಲ್	ಕೂಲಿ
೧೯೪	ನಾಗರಾಜ ಮುತ್ತುಗಾರರು	೩೭	–	ಜಡೆ	ಕೂಲಿ
೧೯೫	ನರಸಪ್ಪ ಮುತ್ತುಗಾರರು	೪೫	–	ಜಡೆ	ಕೂಲಿ
೧೯೬	ಹನಮಂತಪ್ಪ ಮುತ್ತುಗಾರರು	೪೯	––	ಜಡೆ	ಕೂಲಿ
೧೯೭	ಮಂಜವ್ವ ಮುತ್ತುಗಾರರು	೪೩	–	ಕುದರಿಗಣಿ	ಕೂಲಿ
೧೯೮	ಮಲ್ಲವ್ವ ಮುತ್ತುಗಾರರು	೫೪	–	ಕುದರಿಗಣಿ	ಕೂಲಿ

ಅನುಬಂಧಗಳು

ಅನುಬಂಧ : ೧ ಕರ್ನಾಟಕದ ಪರಿಶಿಷ್ಟ ಜಾತಿಗಳ ಪಟ್ಟಿ

ಅನುಬಂಧ : ೨ ಹೊಲೆಯ(ಮಾಲ) ಜಾತಿಯ ಉಪಜಾತಿಗಳ ಪಟ್ಟಿ

ಅನುಬಂಧ : ೩ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಲೆಮಾರಿ/ ಅರೆ ಅಲೆಮಾರಿ/ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳ ಪಟ್ಟಿ

ಅನುಬಂಧ : ೪ ನಾಕಾಶೆಗಳು

ಅನುಬಂಧ : ೫ ಪತ್ರಿಕಾ ವರದಿಗಳು

ಅನುಬಂಧ : ೬ ಛಾಯಾಚಿತ್ರಗಳು

ಸಂಶೋಧನಾ ಲೇಖನಗಳು ಮಂಡಿಸಿದ ಪ್ರಮಾಣ ಪತ್ರಗಳು

ಪ್ರಕಟಗೊಂಡ ಲೇಖನಗಳ ಮುಖಪುಟಗಳು

ಅನುಬಂಧಗಳು

ಅನುಬಂಧ : ೧ ಕರ್ನಾಟಕ ಪರಿಶಿಷ್ಟ ಜಾತಿಗಳ ಪಟ್ಟಿ

ಕ್ರ.ಸಂ	ಹೆಸರು	ಕ್ರ ಸಂ	ಹೆಸರು
೧	ಆದಿ ಆಂಧ್ರ	೨	ಆದಿ ದ್ರಾವಿಡ
೩	ಆದಿ ಕರ್ನಾಟಕ	೪	ಆದಿಯ (ಕೊಡಗು ಜಿಲ್ಲೆಯಲ್ಲಿ)
೫	ಅಗೇರ	೬	ಅಜಿಲಾ
೭	ಅನಾಮುಕ್	೮	ಅರುಂಧತಿಯಾರ್
೯	ಅರ್ವಮಾಲ	೧೦	ಆರ್ಯಮಾಲ
೧೧	ಬೈರಾ	೧೨	ಬಾಕಡ್
೧೩	ಬಂಟ (ಬೆಳಗಾವಿ, ಬಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆ)	೧೪	ಬಾಕಡ
೧೫	ಬಲಗೈ	೧೬	ಬಂಡಿ
೧೭	ಬಂಜಾರ, ಲಂಬಾನಿ	೧೮	ಬಥಡಾ
೧೯	ಬೇಡ ಜಂಗಮ್, ಬುಡ್ಗಜಂಗಮ್	೨೦	ಬೆಲ್ಲಾರ
೨೧	ಭಂಗಿ, ಮೆಹತರ್, ಓಲ್‌ಗಾನಾ, ರುಖೀ, ಸಲಕಾನಾ, ಹಲಾಲ್ ಖೋರ್, ಲಾಲ್‌ಬೇಗೀ, ಬಾಲ್ಮೀಕಿ, ಕೋರಾರ್, ಜಾಡಾಮಾಲಿ	೨೨	ಭಾಂಬೀ, ಭಾಂಭ್ಮಿ, ಅಸಾದರು, ಆಸೋದಿ, ಚಮಡಿಯಾ, ಚಮಾರ್, ಚಂಭಾರ್, ಚಮ್‌ಗಾರ್, ಹರಳಯ್ಯ, ಹರಲಿ, ಖಲಪಾ, ಮಾಚಿಗರ್, ಮೋಚಿಗರ್, ಮಾದರ್, ಮಾದಿಗ, ಮೋಚಿ, ಮುಚಿ, ತೆಲ್ಲುಗುಮೋಚಿ, ಕಾಮತಿ ಮೋಚಿ, ರಾನಿಗಾರ್, ರೋಹಿದಾಸ್, ರೋಹಿತ್, ಸಮಗಾರ

೨೩	ಭೋವಿ	೨೪	ಬಿಂಡ್ಲಾ
೨೫	ಬ್ಯಾಗಾರ	೨೬	ಚಕ್ಕಿಲಿಯನ್
೨೭	ಚಲವಾದಿ, ಚಲ್‌ವಾದಿ, ಚನ್ನಯ್ಯ	೨೮	ಚಾಂಡಾಲ
೨೯	ಚೆನ್ನದಾಸರ್, ಹೊಲೆಯ ದಾಸರ್	೩೦	ದಕ್ಕಲ್, ದೊಕ್ಕಲ್‌ವಾರ್
೩೧	ದಕ್ಕಲಿಗ	೩೨	ಡೋರ್, ಕಕ್ಕಯ್ಯ, ಕಂಕಯ್ಯ
೩೩	ಡೋಮ್, ಡೋಂಬರ, ಪೈಡಿ, ಪಾನೋ	೩೪	ಎಲ್ಲಮಲವಾರ್, ಯಲ್ಲಮ್ಮಲವಾಂಡ್ಲು
೩೫	ಗಂಟಿ ಚೋರ್ಸ್	೩೬	ಗರೋಡಾ, ಗಾರೋ
೩೭	ಗೊಡ್ಡಾ	೩೮	ಗೋಸಂಗಿ
೩೯	ಹಳ್ಳೇರ್	೪೦	ಹಲ್‌ಸಾರ್, ಹಸ್‌ಲಾರ್, ಹುಲಸ್ವಾರ್, ಹಲಸ್ವಾರ್
೪೧	ಹಂಡಿ ಜೋಗೀಜ್	೪೨	ಹಸಲಾ
೪೩	ಹೊಲಾರ್, ವಲಹಾರ್	೪೪	ಹೊಲಯ, ಹೊಲೆರ್, ಹೊಲೆಯಾ
೪೫	ಹೊಲೆಯ ದಾಸರಿ	೪೬	ಜಗ್ಗಲಿ
೪೭	ಜಾಂಬುವುಲು	೪೮	ಕಡೈಯನ್
೪೯	ಕಲ್ಲಾದಿ ೧೦೦ ತಿರ್‌ಗರ್, ತಿರ್‌ಬಂದ	೫೦	ಕೆಪ್‌ಮಾರೀಸ್
೫೧	ಕೊಲುಪುಲ್‌ವಂಡ್ಲು	೫೨	ಕೂಸ
೫೩	ಕೊರಚ	೫೪	ಕೊರಮ
೫೫	ಕೋಟೆಗಾರ್, ಮೇತ್ರಿ	೫೬	ಕುಡುಂಬನ್
೫೭	ಕುರವನ್	೫೮	ಲಿಂಗಡೇರು
೫೯	ಮಚಲಾ	೬೦	ಮಾದರಿ
೬೧	ಮಾದಿಗ	೬೨	ಮಹಾರ್, ತರಾಲ್, ಧೆಗು ಮೆಗು
೬೩	ಮಹ್ಯಾವಂಶಿ, ಧೆಡ್, ವಂಕರ್, ಮಾರು ವಂಕರ್	೬೪	ಮೈಲಾ
೬೫	**ಮಾಲ**	೬೬.	ಮಾಲ ದಾಸರಿ
೬೭	ಮಾಲ ಹನ್ನಯ್	೬೮	ಮಾಲ ಜಂಗಮ್
೬೯	ಮಾಲ ಮಾಸ್ತಿ	೭೦	ಮಾಲ ಸಾಲೆ, ನೆತ್‌ಕಾನಿ
೭೧	ಮಾಲ ಸನ್ಯಾಸಿ	೭೨	ಮಾಂಗ್, ಮಾತಂಗ್, ಮಿಣಿಮಾದಿಗ್

೭೩	ಮಾಂಗ್ ಗಾರುಡಿ, ಮಾಂಗ್ ಗಾರೋಡಿ	೭೪	ಮನ್ನೆ
೭೫	ಮಾಸ್ತಿ	೭೬	ಮಾವಿಲನ್
೭೭	ಮೇಘವಾಲ್, ಮೆಂಘವಾರ್	೭೮	ಮೋಗೆರ್
೭೯	ಮುಕ್ರಿ	೮೦	ಮಂಡಾಲಾ
೮೧	ನಡಿಯಾ, ಹಾಡಿ	೮೨	ನಲ್‌ಕಡಯಾ
೮೩.	ನಲ್‌ಕೆಯವಾ	೮೪	ನಯಾಡಿ
೮೫	ಪಾಲೆ	೮೬	ಪಲ್ಲಾನ್
೮೭	ಪಂಬದ	೮೮	ಪಂಚಮ
೮೯	ಪನ್ನಿಯಾಂಡಿ	೯೦	ಪರೇಯನ್, ಪರಾಯ
೯೧	ಪರವನ್	೯೨	ರಾನೆಯಾರ್
೯೩	ಸಮಗಾರ	೯೪	ಸಂಬನ್
೯೫	ಸಪಾರಿ	೯೬	ಸಿಳ್ಳೇಕ್ಯಾತಸ್
೯೭	ಸಿಂಧೊಳ್ಳು, ಚಿಂದೊಳ್ಳು	೯೮	ಸುಡಗಾಡು ಸಿದ್ಧ
೯೯	ಥೋಟಿ	೧೦೦	ತಿರ್‌ಗರ್, ತಿರ್‌ಬಂದ
೧೦೧	ವಲ್ಲುವನ್		

ಅನುಬಂಧ : ೨
ಹೊಲೆಯ (ಮಾಲ) ಜಾತಿಯ ಉಪಜಾತಿಗಳು

೧. ಅಂಧ್ವವಂಥ್(Andhwant)	೨. ಆರೇಮಾಲ (Are Mala)
೩. ಆರ್ವ ಮಾಲ(Arwa Mala)	೪. ಬಡಜೇ ಮಾಲ(Badje Mala)
೫. ಚಲಕ ಮಾಲ(Chalka Mala)	೬. ಬೇಗಾರ್ ಮಾಲ(Begar Mala)
೭. ಭಟ್ ಮಾಲ(Bhat Mala)	೮. ಬಿರ್ಜ ಮಾಲ(Biriji Mala)
೯. ಬೊಯ ಮಾಲ(Boya Mala)	೧೦. ದಾಡಿ ಮಾಲ(Dadi Mala)
೧೧. ದಾಸ ಮಾಲ(Dasa Mala)	೧೨. ದೊಳ ಮಾಲ(Dhol Mala)
೧೩. ಗುಂಟಾ ಮಾಲ(Gunta Mala)	೧೪. ಗುರ್ಜ ಮಾಲ(Gurge Mala)
೧೫. ಗುರಮ್ ಮಾಲ(Guram Mala)	೧೬. ಹಟಗಾರ ಮಾಲ(Hatkar Mala)
೧೭. ಜಾತಿ ಮಾಲ(Jathi Mala)	೧೮. ಜಿನ ಮಾಲ(Jina Mala)
೧೯. ಕ್ಹಾರ್ನೇ ಮಾಲ(Karme Mala)	೨೦. ಲಾಂಡವಂತ್(Landwant)
೨೧. ಲಾಂಡ ಮಾಲ(Lanada Mala)	೨೨. ಮಾಲ ಅಯ್ಯವರ್(Mala Ayawar)
೨೩. ಮಾಲ ಬೋಗಂ (Mala Bogam)	೨೪. ಮಾಲ ದಾಸರಿ(Mala Dasari)
೨೫. ಮಾಲ ಜಂಗಮ ಅಥವಾ ಚಲುವಾದಿ (Mala jangam or Chalawadi)	೨೬. ಮಾಲ ಮನೇವಾರ್(Mala Mannewar)
೨೭. ಮಾಲ ಮಾಸ್ತಿ(Mala Masti)	೨೮. ನೇಟಕಾನಿ ಮಾಲ(Nayatakani)
೨೯. ಪಾಚಿಮಾಲ(Pachi Mala)	೩೦. ಪಂಬಲವಾಡ(Pambalwad)
೩೧. ರಾಚ ಮಾಲ(Racha Mala)	೩೨. ಶಿವಕಾಂತ ಮಾಲ(Shivakanttha Mala)
೩೩. ಸೋಮವಂಶಿ ಮಾಲ(Somavanshi)	೩೪. ತೆಲಗು ಮಾಲ(Telgu Mala)
೩೫. ತಿಲವಾನ್ ಮಾಲ(Tilwan Mala)	೩೬. ತುಕ ಮಾಲ(ಖಿಣಾಣಚಿ ಒಚಿಟಚಿ)
೩೭. ವರ್ಣ ಮಾಲ(Varne Mala)	
ಮೂಲ: The Castes and Tribes of H.E.H. The Nizamis Dominions by Syed Sirj-ul-Hassan, Page 429(Vol.I)	

ಅನುಬಂಧ : ೩

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಲೆಮಾರಿ/ ಅರೆ ಅಲೆಮಾರಿ/ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳ ಪಟ್ಟಿ

1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಲೆಮಾರಿ / ಅರೆ ಅಲೆಮಾರಿ / ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳ ಬಗ್ಗೆ.

ಓದಲಾಗಿದೆ: 2014-15 ಹಾಗೂ 2015-16ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 182 ಮತ್ತು ಕಂಡಿಕೆ-191ರಂತೆ

*****

ಪ್ರಸ್ತಾವನೆ:

2014-15 ಮತ್ತು 2015-16ರ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳನ್ನು ಗುರುತಿಸಿ ಅವರ ಅಭಿವೃದ್ಧಿಗಾಗಿ ತೆಗೆದುಕೊಳ್ಳಬೇಕಾದ ಯೋಜನೆಗಳನ್ನು ರೂಪಿಸಲಾಗುವುದೆಂದು ಘೋಷಿಸಲಾಗಿದೆ. ಅದರಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಅಲೆಮಾರಿ/ಅರೆ ಅಲೆಮಾರಿ/ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳನ್ನು 2011ರ ಜನಗಣತಿ ಮಾಹಿತಿಯಂತೆ ಲಭ್ಯವಿರುವ ಜನಸಂಖ್ಯಾ ಅನಕ್ಷರತೆ ಪ್ರತಿಶತ ಇತ್ಯಾದಿ ವಿಷಯಗಳನ್ನು ಪರಿಶೀಲಿಸಿ ಮತ್ತು ಈ ಜಾತಿಗಳ ವೃತ್ತಿ ಮತ್ತು ಇತರ ಲಕ್ಷಣಗಳನ್ನು ಶ್ರೀ ಕೆ.ಎಸ್.ಸಿಂಗ್ ಮತ್ತು ಶ್ರೀ ಎಡ್ಗರ್‌ಥರ್‌ಸ್ಟನ್, ಇತ್ಯಾದಿ ಪುಸ್ತಕ ದಾಖಲೆಗಳ ಆಧಾರದ ಮೇಲೆ ನಿರ್ದೇಶಕರು ಡಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ ಹಾಗೂ ನಿರ್ದೇಶಕರು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಇವರು ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಿ, ಈಗ ಜಾರಿಯಲ್ಲಿರುವ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದ ಅಲೆಮಾರಿ/ಅರೆ ಅಲೆಮಾರಿ/ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳ ಅಭಿವೃದ್ಧಿಗಾಗಿ ಈ ಕೆಳಕಂಡಂತೆ ಸರ್ಕಾರಿ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಕಇ 10 ಎಸ್‌ಎಲ್‌ಪಿ 2015 ಬೆಂಗಳೂರು ದಿನಾಂಕ:12.01.2016

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2015-16ನೇ ಸಾಲಿನ ಆಯವ್ಯಯ ಘೋಷಣೆಯಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಲೆಮಾರಿ / ಅರೆ ಅಲೆಮಾರಿ / ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವ ಸಂಬಂಧ ಈಗ ಜಾರಿಯಲ್ಲಿರುವ ವಿವಿಧ ಕಾರ್ಯಕ್ರಮಗಳಡಿಯಲ್ಲಿ ಮೇಲ್ಕಂಡ ಸಮುದಾಯಗಳ ಸರ್ವತೋಮುಖ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲು ಸರ್ಕಾರದ ಮಂಜೂರಾತಿ ನೀಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಅಲೆಮಾರಿ/ಅರೆ ಅಲೆಮಾರಿ ಸಮುದಾಯಗಳ ಪಟ್ಟಿ ಅನುಬಂಧ-1 ಮತ್ತು 2ರಲ್ಲಿ ನೀಡಲಾಗಿದೆ.

ಮಾದರಿ ಕಾರ್ಯಕ್ರಮಗಳು:

I. **ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು:**

1. ಪ್ರತಿ ಮಗುವಿಗೂ ಶಾಲೆ ಮತ್ತು ಹಾಸ್ಟೆಲ್ ಪ್ರವೇಶ.
2. ಆಶ್ರಮ ವಸತಿ ಶಾಲೆಗಳಲ್ಲಿ ವಿಶೇಷ ಪ್ರವೇಶ.
3. ಮೊರಾರ್ಜಿದೇಸಾಯಿ ವಸತಿಶಾಲೆ/ಕಿತ್ತೂರುರಾಣಿ ವಸತಿ ಶಾಲೆಗಳ ಪ್ರವೇಶದಲ್ಲಿ ಮೀಸಲಾತಿ ಕಲ್ಪಿಸುವುದು.
4. ರಾಜ್ಯದ ಪ್ರತಿಷ್ಠಿತ ಶಾಲೆಗಳಲ್ಲಿ ಪರಿಶಿಷ್ಟ ಜಾತಿಯ ಅಲೆಮಾರಿ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶದ ಸೌಲಭ್ಯ ಕಲ್ಪಿಸುವುದು.
5. ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವುದು.
6. ಹಾಸ್ಟೆಲ್‌ನಲ್ಲಿ ಆದ್ಯತೆ ಮೇರೆಗೆ ಪ್ರವೇಶ ನೀಡುವುದು.

ಅನುಬಂಧ-1

ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದಲ್ಲಿ ಅಲೆಮಾರಿ ಹಾಗೂ ಅರೆ ಅಲೆಮಾರಿ ಮತ್ತು ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳನ್ನು ಗುರುತಿಸಿದ ಜಾತಿಗಳ ಪಟ್ಟಿ


ಕ್ರ ಸಂ.	ಜಾತಿಯ ಹೆಸರು	ಜನಸಂಖ್ಯೆ 2011ರ – ಜನ ಗಣತಿ	ಅನಕ್ಷರಸ್ಥರ ಸಂಖ್ಯೆ	ಪ್ರತಿಶತ	ಪಾರಂಪಾರಿಕ ವೃತ್ತಿ
1	DAKKAL / DAKKALA DAKKALIGA /	763 379	530 262	50%	ಭಿಕ್ಷಾಟನೆ, ಜಾನಪದ ಕಾವ್ಯಗಳ ಗಾಯನ
2	BUDGA JANGAM (A.J.Sadashiva Commission Report)	20733	NA	-	ಹಗಲು ವೇಷ, ಬುರ್ರಕಥೆ, ಬೈರಾಗಿವೇಷ, ಕೊಂಡಮಾಮನ ಜ್ಯೋತಿಷ್ಯ, ಭಿಕ್ಷಾಟನೆ. *ಎ.ಜೆ.ಸದಾಶಿವ ಆಯೋಗದ ವರದಿಯಲ್ಲಿ ದಾಖಲಿಸಿರುವ ಅಲೆಮಾರಿ ಬುಡ್ಗ ಜಂಗಮರ ಜನಸಂಖ್ಯೆ*
3	HANDI JOGI	22675	11251	50%	ಹಂದಿ ಸಾಕಾಣಿಕೆ / ಕೂಲಿ
4	SILLEKYATHAS /SILLEKYATHA	35197	18807	53%	ಗೊಂಬೆಯಾಟ, ಹಚ್ಚೆ ಹಾಕುವುದು, ಬುಂಡೆ ಬೆಸ್ತರಾಗಿ ಮೀನು ಹಿಡಿಯುವುದು, ಭಿಕ್ಷಾಟನೆ
5	SUDUGADU SIDDHA	29457	17060	58%	ಮೋಡಿಯಾಟ, ಸಾಧು ಸಂತರ ವೇಷದಲ್ಲಿ ಭಿಕ್ಷಾಟನೆ
6	CHENNA DASAR/ HOLAY DASAR	72,003	34973	49%	ಗರುಡಗಂಭ ಹೊತ್ತು ಭಿಕ್ಷಾಟನೆ, ಕಲಾ ಪ್ರದರ್ಶನಗಳು, ಕೋಲೆಬಸವ ಆಟ, ತತ್ವಪದ ಗಾಯನ
7	GOSANGI	2,219	1151	50%	ದೇವಿ ಹೊತ್ತು ಭಿಕ್ಷಾಟನೆ
8	MANG GARODI / MANG GARUDI	3,434	2059	60%	ಅಪರಾಧಿ ಬುಡಕಟ್ಟು ಎಂದು ಬ್ರಿಟಿಷರ ಘೋಷಣೆ, ಕಟ್ಟಡ ಕಾರ್ಮಿಕರು.
9	GANTI CHORES	4,967	1872	38%	ಅಪರಾಧಿ ಬುಡಕಟ್ಟು ಎಂದು ಬ್ರಿಟಿಷರ ಘೋಷಣೆ, ಕೃಷಿಕೂಲಿ
10	DOM / DOMBARA / PAIDI / PANO	26344	11872	45%	ದೈಹಿಕ ಕಸರತ್ತಿನ ಪ್ರದರ್ಶನ, ಕೃಷಿಕೂಲಿ
11	MALA DASARI	4,391	1885	43%	ಧಾರ್ಮಿಕ ಭಿಕ್ಷಾ ದೇಟಿ, ಕೃಷಿ ಕೂಲಿ, ಸಮಾನ್ಯ ವೃತ್ತಿಗಳಾಗಿವೆ.
12	MALA SANYASI MALASALE / NATKANI	552 257	289 118	50%	ಸನ್ಯಾಸಿ, ಬೈರಾಗಿ ವೇಷ ಹಾಕಿ[illegible] ಭಿಕ್ಷಾಟನೆ ಮಾಡುತ್ತಾರೆ.
13	JAGGALI	1061	591	50%	ಚರ್ಮಗಾರಿಕೆ
14	HOLEYA DASARI	382	173	50%	ಗರುಡಗಂಧ ಹೊತ್ತು ಭಿಕ್ಷಾಟನೆ, ಕಲಾ ಪ್ರದರ್ಶನಗಳು, ಕೋಲೆಬಸವ ಆಟ, ತತ್ವಪದ ಗಾಯನ
15	SINDHOLLU / CHINDOLLU	1,706	1390	81%	[illegible]ದಾಟ, ದುರ್ಗಮುರ್ಗಿ ವೇಷ, ಸುಂಕಲಮ್ಮ ಪೂಜಾರಿ, ಭಿಕ್ಷಾಟನೆ

6


41	NAYADI	589	238	40%	ಭೇಟೆ / ಕೃಷಿ ಕಾರ್ಮಿಕ
42	BINDLA	149	55	37%	ಕೃಷಿ ಕಾರ್ಮಿಕ
43	BYAGARA	2019	1202	60%	ಕೃಷಿ ಕಾರ್ಮಿಕ
44	CHAKKALIYAN	574	291	51%	ಚರ್ಮಗಾರಿಕೆ
45	PALE	9374	3618	33%	ಕೃಷಿ ಕಾರ್ಮಿಕರು
46	PARAVAN	3528	1199	42%	ಕೊಡೆ ತಯಾರಿಕೆ ಮತ್ತು ಡೆವಿಲ್ ಡ್ಯಾನಸರ್ಸ್
47	ARUNTHATHIYAR	2385	926	38%	ಚಪ್ಪಲಿ ತಯಾರಿಕೆ
48	MADARI	1060	480	45%	ಚಪ್ಪಲಿ ತಯಾರಿಕೆ
49	MACHALA	244	108	44%	–

(ಪಿ.ಎನ್.ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ-1 (ಪ್ರ).
ಸಮಾಜ ಕಲ್ಯಾಣ ಇಲಾಖೆ.


ನಕಾಶೆಗಳು




ಕರ್ನಾಟಕ
1. ಕೊಪ್ಪಳ
2. ಗದಗ
3. ಧಾರವಾಡ
4. ಮೈಸೂರ
5. ರಾಯಚೂರ
6. ಶಿವಮೊಗ್ಗ
7. ಹಾವೇರಿ.
5 RAICHUR
1 Koppal
MYSURU




Sorab





7. ಹಾವೇರಿ ಜಿಲ್ಲಾ
Hangal
Byadagi
Hirekerur



2. ಗದಗ ಜಿಲ್ಲಾ
Ron
Gadag




Gangavati
Koppal
Yelburga


Manvi


Hubballi

ಪತ್ರಿಕಾ ವರದಿ



ಕರ್ನಾಟಕ

ಕಲಾತಂಡಗಳ ಬೃಹತ್ ಮೆರವಣಿಗೆ



ಪ್ರದರ್ಶನವಷ್ಟೇ ಅಲ್ಲ, ಬದುಕೂ ಸಾಹಸ



ಕನ್ನಡದ ಕಂಪು ಜನಪದಿಯ ಇಂಪು



ನಮ್ಮ ಮಹಾನಗರ

ಬೆಳಗಾದರೆ ಬಯಲೇ ಶೌಚಾಲಯ

ರಂಗಗೀತೆ, ನಾಟಕದ ನೃತ್ಯದ ಝಲಕ್

ಧಾರವಾಡ ಉತ್ಸವಕ್ಕೆ ಅದ್ಧೂರಿ ಚಾಲನೆ


ಸಂಯುಕ್ತ ಕರ್ನಾಟಕ


ಜಾನಪದ ಕಲೆಗೆ ಪ್ರೋತ್ಸಾಹ ಅಗತ್ಯ: ಸ್ವಾಮೀಜಿ


ಇದು ಗೊಂಬೆಯಾಟವಯ್ಯಾ...


ಮೈ ನವಿರೇಳಿಸಿದ ಡಾಲಪಟಾ..


ಜಿಲ್ಲೆಯ ಒಡನಾಡಿ
ಹುಬ್ಬಳ್ಳಿ - ಧಾರವಾಡ
ಅಲೆಮಾರಿ ದಾಲಪಟ ಕಲಾವಿದರಿಗೆ ಆಶ್ರಯ ಮನೆಗಳ ಧರಣಿ

ಛಾಯಾಚಿತ್ರಗಳು



೩.೧ ಮಾಲ ಸಮುದಾಯದ ಹೆಣ್ಣಿನ ನಿಶ್ಚಯ ಕಾರ್ಯದ ಮಾತುಕತೆ



೩.೩ ಸುರಗಿ ನೀರನ್ನು ಗಂಗೆಯಿಂದ ಹೊತ್ತುಕೊಂಡು ತರುವುದು



೩.೨ ಐರಾಣಿ ತರುವುದು



೩.೬ ಒಡಲಕ್ಕಿ ಶಾಸ್ತ್ರ



೩.೫ ನಾಲ್ಕು ಬಿಣದಿಗೆಯನ್ನು ನಾಲ್ಕು ಜನರು ಹಿಡಿದುಕೊಂಡಿರುವುದು.



೩.೪ ಮದುವೆಯಲ್ಲಿ ಸುರಗಿ ಸುತ್ತುವುದು.



೩.೭ ಮಾಲ ಸಮುದಾಯದ ಹೆರಿಗೆಯಾದ ಮಹಿಳೆ



೩.೮ ಮಗುವನ್ನು ಸ್ನಾನ ಮಾಡಿಸುವ ಬಾಗ




೩.೯ ಬಾಣಂತಿಗೆ ಸ್ನಾನ ಮಾಡಲು ಮಾಡಿದ ಕೊಲ್ಲುಗುಂತ (ತಾತ್ಕಾಲಿಕ ಬಚ್ಚಲು)



೩.೧೦ ಮಾಲ ಸಮುದಾಯದ ಮಗುವಿನ ಮೊದಲನೇ ಹಂತದ ನಾಮಕರಣ



೩.೧೧ಮಾಲ ಸಮುದಾಯದ ಬಾಣಂತಿಯ ಗಂಗೆಪೂಜೆ ವಿಧಾನಗಳು.



೨.೧೨ ಮಾಲ ಸಮುದಾಯದ ಮಗುವಿನ ಚೌಲಶಾಸ್ತ್ರ



೨.೧೪ ಸತ್ತ ಶವ ಒಯ್ಯುತ್ತಿರುವುದು.



೨.೧೩. ಮಾಲ ಸಮುದಾಯದ ಹೆಣ್ಣು ಮಗಳ ಪ್ರೌಢಸಂಸ್ಕಾರ



ಛಾ:೨.೧೬. ಒಂಬತ್ತು ದಿನದ ಕಾರ್ಯ ಮಾಡುತ್ತಿರುವುದು.



೨.೧೫ ಮಾಲ ಸಮುದಾಯದವರು ಸತ್ತವರಿಗೆ ೩ ದಿನದ ಕೂಳು ಹಾಕುವುದು.



೨.೧೭ ಖಂಡಪೂಜೆ.



೨.೧೮ ಮಾಲ ಸಮುದಾಯದ ಗಾಳಿಮಾರಮ್ಮನ ಪ್ರತಿಷ್ಠಾಪನೆ.



೨.೧೯ ಮಾಲ ಸಮುದಾಯದವರು ದುರ್ಗಾದೇವಿಯ ಜಾತ್ರೆಯಲ್ಲಿ ಪ್ರಾರ್ಥನೆ ಮಾಡುತ್ತಿರುವರು.



೨.೨೦ ಮಾಲ ಸಮುದಾಯದವರು ದಸರಾ ಹಬ್ಬದಲ್ಲಿ ಮಾಡುವ ಕೋಳಿಹಬ್ಬ



೨.೨೧ ದಸರಾ ಹಬ್ಬದಲ್ಲಿ ಕೋಳಿ ಕೊಯ್ಯುತ್ತಿರುವುದು.



೨.೨೨ ಮಾಲ ಸಮುದಾಯದವರು ದಸರಾ ಹಬ್ಬದಲ್ಲಿ ಕುರಿಬ್ಯಾಟಿ ಮಾಡುತ್ತಿರುವುದು.



[illegible]



೩.೨೪ ಮಾಲ ಸಮುದಾಯದ ಜಾತಿ ಪಂಚಾಯತಿ



ಮಾಲ ಸಮುದಾಯದವರು ಗಾಳಿದುರಗಮ್ಮನ ಆರಾಧನೆ ಮತ್ತು ಪೂಜೆ ಮಾಡುವುದು.



ಮಾಲ ಸಮುದಾಯದ ಆರಾಧ್ಯ ದೇವಿಯಾದ ದುರ್ಗಾದೇವಿ



೩.೨೫ ಮೊಂಡೆಯೂರಿ ವಾಗಿ ಚೆಂಡಿನ ಚಕ್ರ ತಿರುಗಿಸುವುದು



೩.೨೬ ಎದ್ದು ನಿಂತು ಸಾದಾ ಚೆಂಡನ್ನು ತಿರುಗಿಸುವುದು



ಮಲ್ಲಯ್ಯನ ಕಂಬಿ



ಮಾಲ ಸಮುದಾಯದವರ ಕಂಬಿ ಪೂಜೆ



೩.೩೧ ಚೆಂಡಿನ ಚಕ್ರ ತಿರುಗಿಸುತ್ತಾ ಹಣೆಯಿಂದ ಲಿಂಬೆಹಣ್ಣು ಹೊಡೆಯುವುದು



೩.೨೭ ಎದ್ದು ನಿಂತು ಚೆಂಡಿನ ಚಕ್ರ ತಿರುಗಿಸುವುದು.



೩.೨೨ ಒಂದ್ಕೈ ದಾಗಿ ಚೆಂಡಿನ ಚಕ್ರ ತಿರುಗಿಸುವುದು.



೩.೨೮ ಮೊಂಡೆಯೂರಿ ಚೆಂಡಿನ ಚಕ್ರ ತಿರುಗಿಸುವುದು



೩.೨೯ ತಲೆಯ ಮೇಲೆ ಬೆಂಕಿ ನಾಗರಫಣಿಯನ್ನು ತಿರುಗಿಸುವುದು.




೩.೩೦ ಬೆಂಕಿ ಚಕ್ರದಾಟ



೩.೩೧ ಸಾದಾ ಚೆಂಡಿನ ಚಕ್ರ ತಿರುಗಿಸುತ್ತಾ ಹಣೆಯಿಂದ ಲಿಂಬೆಹಣ್ಣು ಹೊಡೆಯುವುದು



೩.೩೨ ಒಂದೇ ಕೈವರಸನಿಂದ ಸಾದಾ ಚೆಂಡಿನ ಚಕ್ರ ತಿರುಗಿಸುವುದು



೩.೩೫ ಕೋಲಿಗೆ ಬೆಂಕಿ ಹಚ್ಚಿತಿರುಗಿಸುವ ಆಟ



೩.೩೩ ಕಾಲಿನ ಕೆಳಗೆ ಕೋಲನ್ನು ತಿರುಗಿಸುವುದು.



ಕತ್ತಿ ಚಕ್ರ ಕೋಲು ತಿರುಗಿಸುವುದು.



೩.೩೩ ಕಾಲಿನ ಕೆಳಗೆ ಕೋಲು ತಿರುಗಿಸುವುದು



೩.೩೭ ಕೋಲಿನ ಚಕ್ರ ತಿರುಗಿಸುವುದು



೩.೩೮ ಬಾಗಿ ಕೋಲನ್ನು ತಿರುಗಿಸುವ ಆಟ



ಮಲಗಿಕೊಂಡು ಕೋಲು ತಿರುಗಿಸುವುದು



ಒಂದೇ ಕೋಲನ್ನು ತಿರುಗಿಸುವುದು



೩.೩೯ ಕತ್ತಿಯಿಂದ ಆಡುತ್ತಾ ಬದನೆಕಾಯಿ ತುಂಡಾಗಿಸುವುದು.



೩.೪೦ ಸೌತೆಕಾಯಿಯನ್ನು ಕತ್ತಿಯಿಂದ ಆಡುತ್ತಲೇ ಕತ್ತರಿಸುವುದು



೩.೪೧ ಅಂಗಾತ ಮಲಗಿ ಸೌತೆಕಾಯಿಯನ್ನು ಕತ್ತಿಯಿಂದ ಕತ್ತರಿಸುವುದು.



೩.೪೨ ಕತ್ತಿಯಿಂದ ಆಡುವ ಆಟ



೩.೪೩ ಸುತ್ತಲು ಕತ್ತಿಯನ್ನು ತಿರುಗಿಸುವ ಆಟ




೩.೪೪ ಕತ್ತಿಯಿಂದ ಆಡುತ್ತಲೆ ಬದನೆಕಾಯಿಯನ್ನು ತುಂಡಾಗಿಸುವ ಆಟ



೩.೪೫ ಎರಡು ಕತ್ತಿ ಮತ್ತು ಒಂದು ಕೋಲನ್ನು ಒಟ್ಟಿಗೆ ಹಿಡಿದುಕೊಂಡು ಸಮರ ಕಲೆ ಆಡುವುದು







೩.೪೬ ತಲೆಯ ಮೇಲೆ ತೆಂಗಿನಕಾಯಿ ಇಟ್ಟು ಕೋಲಿನಿಂದ ಆಡುತ್ತಲೇ ತುಂಡಾಗುವಂತೆ ಹೊಡೆಯುವದು



೩.೪೭ ಮಾಲ ಸಮುದಾಯದ ಕೀಲು ಕುದುರೆಗಳು



ಕೀಲು ಕುದುರೆಯಾಟ ಮತ್ತು ಗೊಂಬೆಯಾಟ




ಕೀಲು ಕುದುರೆಯಾಟ ಮತ್ತು ಗೊಂಬೆಯಾಟ



೩.೪೮ ಬೆಂಕಿ ಚಕ್ರವನ್ನು ತಿರುಗಿಸುತ್ತಾ ನಿಚ್ಚನಿಕೆ ಏರುವ ಆಟ



ನಿಚ್ಚನಿಕೆ ಏರುತ್ತಾ ಚಕ್ರ ತಿರುಗಿಸುವುದು.



೩.೪೯ ಗೊಂಬೆಯಾಟ



೩.೫೦ ಮಾಲ ಸಮುದಾಯದವರ ಸಂಬಾಳಗಳು



೩ ಮಾಹಿತಿ ಪಡೆಯುತ್ತಿರುವುದು.



೩. ಮಾಹಿತಿ ಪಡೆಯುತ್ತಿರುವುದು



೩.೫೧ ಮಾಲ ಸಮುದಾಯದವರ ವಾದ್ಯ ಪರಿಕರಗಳು.



ಮಾಲ ಸಮುದಾಯದ ಆಟದ ಚಿತ್ರಗಳು



೪.೧ ಮಾಲ ಸಮುದಾಯದವರು ಕಂಬಿ ಹೊತ್ತುಕೊಂಡು ಭಿಕ್ಷೆ ಬೇಡಿ ನೀಡಿಸಿಕೊಳ್ಳುತ್ತಿರುವುದು



೪.೨ ಮಾಲ ಸಮುದಾಯದವರು ದಬ್ಬಿ ಆಯುತ್ತಿರುವುದು



೪.೩ ಮಾಲ ಸಮುದಾಯದವರು ಗುಡಾರ [illegible]



ಗುಡಾರ ಇರುವ ಸ್ಥಳ




೪ ಮಾಲ ಸಮುದಾಯದವರ ಗುಡಾರಗಳು




೪ ಮಾಲ ಸಮುದಾಯದ ಕೊಪ್ಪಳದ ಗುಡಾರಗಳು



೪ ಹುಬ್ಬಳ್ಳಿಯಲ್ಲಿನ ಗುಡಾರಗಳು



೪. ಚಿಲಕಮುಖಿಯಲ್ಲಿನ ಗುಡಾರಗಳು



೪. ಮಾಲ ಸಮುದಾಯದವರ ಗುಡಾರದೊಳಗೆ ಮಳೆ ನೀರು ಹೋಗಿರುವುದು.



೪.ಕೊಳಚೆ ಪ್ರದೇಶದಲ್ಲಿನ ಗುಡಾರಗಳು



೪. ಗುಡಾರದೊಳಗೆ ಮಳೆನೀರು



೪.೪ ಆಕಳಿನ ಮೇಲೆ ಹೇರನ್ನು ಹಾಕಿರುವುದು



೪.೫ ಬೇಟೆ ಬೇಲಿ ಎಣೆಯುತ್ತಿರುವುದು.



೪. ಮಾಲ ಸಮುದಾಯದವರು ಮಲ್ಲಯ್ಯನ ಕಂಬ ಇಳಿಸಿ
ಬಂದ ಭಿಕ್ಷೆಯಿಂದ ಊಟ ಮಾಡುತ್ತಿರುವುದು.



೪.ಮಾಲ ಸಮುದಾಯದವರ ವ್ಯಾಪಾರಿ ಸಾಮಾನುಗಳು



೪. ಮಾಲಸಮುದಾಯದವರ ವ್ಯಾಪಾರಿ ಪ್ಲಾಸ್ಟಿಕ್ ಕೊಡಗಳು

ಮಾಲ ಸಮುದಾಯದವರು ಚಾಲನೆಗೆ ತಂದ ವಿವಿಧಕಲಾವಿಧರ ಸಂಘಗಳು.













ಸಂಶೋಧನಾ ಲೇಖನಗಳು ಮಂಡಿಸಿದ ಪ್ರಮಾಣ ಪತ್ರಗಳು



Kuvempu University

Women's Study Centre,

Jnana Sahyadri, Shankaraghatta - 577451

Certificate

This is to certify that

Sri/Smt/Mr/Ms/Dr/Prof. Premavva Mudulagi Yallappa

has participated/presented an invited paper/theme paper/ paper in National Conference on "Postmodern Feminist Paradigm: Indian Experience and Strategies for Development" held on 12th and 13th March, 2020 organized by Women's Study Centre, Kuvempu University, Jnana Sahyadri, Shankaraghatta - 577 451, Karnataka.

Prof. B.P Veerabhadrappa
Hon'ble Vice-Chancellor

Dr. S. Padmamma
Organising Secretary

Women's Study Centre

ಪ್ರಾತಿನಿಧಿಕ

(ಸಂಪುಟ-1)

ಸಂಪಾದಕ

ಡಾ.ಹೆಚ್.ರಮೇಶ

ಈಕ್ಷಣ ಪ್ರಕಾಶನ

ಮೈಸೂರು

PRAATHINIDHIKA VOL-1

written by :

Dr. H.Ramesh

Arsikere, Harapanahalli (Tq)

Ballery (Dist)

Pin Code-283125

Ph No - 9902831893

Email : rameshah878@gmail.com

Published by :

Eshwari Prakashana

285/F-6, 5th West Cross, First Floor

Uttaradimutt Road, Mysuru - 570 004

ISBN : 978-93-88648-15-8

Pages : iv + 104 = 108

First Edition : 2019

Copies : 1000

Price : 100/-

ಪುಟಗಳು : iv + 104 = 108

ಮೊದಲ ಮುದ್ರಣ : 2019

ಪ್ರತಿಗಳು : 1000

ಬೆಲೆ : ರೂ. 100/–

ಮುಖಪುಟ ವಿನ್ಯಾಸ : ಹೇಮಂತ್

ಅಕ್ಷರ ಜೋಡಣೆ : ಡಾ.ಹೆಚ್.ರಮೇಶ

ಮುದ್ರಣ : ತಾರಾ ಪ್ರಿಂಟ್ಸ್

ಪರಿವಿಡಿ

1. ಬಳ್ಳಾರಿ ಜಿಲ್ಲೆಯಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದ ಶಾಸನಗಳಲ್ಲಿ ಮಠಗಳ ಉಲ್ಲೇಖ
–ರಾಘವೇಂದ್ರ,ಎಸ್
–ಪ್ರೊ, ಹನುಮ ನಾಯಕ

2. ಹೊಯ್ಸಳರ ಕಾಲದ ಅಪರೂಪದ ನೀರಿನ ವ್ಯಾಜ್ಯದ ಶಾಸನ
– ನಾಗವೇಣಿ ಜಿ.ಬಿ.

3. ಗುರುವಂಶ ಕಾವ್ಯ ಮತ್ತು ಶಿವತತ್ವ ರತ್ನಾಕರ ಕೃತಿಗಳಲ್ಲಿ ಪ್ರತಿಪಾದಿಸಿದಂತೆ ಶೃಂಗೇರಿ ಗುರು ಪರಂಪರೆ ಮತ್ತು ಕೆಳದಿ ಅರಸರ ನಡುವಿನ ಸಂಬಂಧಗಳು
– ಡಾ.ಹೆಚ್.ವಿಷ್ಣುವರ್ಧನ

4. ಮೈಸೂರು ಒಡೆಯರ ಕಾಲದ ಕ್ಷಿಪಣಿಗಳು – ಡಾ. ನಾಗೇಶ ಹೆಚ್.ಎ.

5. ಬೇಲೂರು–ಹಳೇಬೀಡು ಸಂರಕ್ಷಿತ ಸ್ಮಾರಕಗಳು – ಪೂಜಾ ಎಸ್. ಪಿ.

6. ಗಾಂಧಿ ಪೂರ್ವದ ಭಾರತದ ಸ್ವದೇಶಿ ಚಳುವಳಿ
– ಡಾ. ಎನ್.ಜಿ. ಸಂತೋಷ್

7. ಹೊಸರಿತ್ತಿ ಪ್ರದೇಶದಲ್ಲಿ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳು
– ರುದ್ರಸ್ವಾಮಿ ಎಸ್

8. ಶ್ರೀ ದಂಡಿನ ದುರುಗಮ್ಮ ಅರಸೀಕೆರೆ – ಡಾ.ಹೆಚ್.ರಮೇಶ

9. ಮಾಲ ಸಮುದಾಯದವರ ವೃತ್ತಿಸಮಸ್ಯೆಗಳು ಮತ್ತು ಪರಿಹಾರೋಪಾಯಗಳು – ಪ್ರೇಮವ್ವ ಮುದುಟಗಿ ಯಲ್ಲಪ್ಪ

10. ಚೋಮನದುಡಿ ಮತ್ತು ಗೋದಾನ ಕಾದಂಬರಿಗಳಲ್ಲಿ ದಲಿತ ಪ್ರಜ್ಞೆ ಮತ್ತು ಮಹಿಳೆ – ಹುಲಿಕುಂಟಪ್ಪ, ಜಿ

11. ಜಮಖಂಡಿ ಪರಿಸರದ ಪ್ರಾಚೀನ ಆಡಳಿತ ವಿಭಾಗಗಳು
– ಡಾ. ಮಂಜುನಾಥ ಎಸ್. ಪಾಟೀಲ

ಲೇಖಕರ ವಿಳಾಸ

ಜಾನಪದ ಸಂಗಮ

(ಅಧ್ಯಯನ ಲೇಖನಗಳು)

ಸಂಪಾದಕರು

ಪಿ. ಆರ್. ಕಂಬಾರ ಶೆಟ್ಟಿಕೇರಾ

ಗಾಯತ್ರಿ ಪ್ರಕಾಶನ
ಬಳ್ಳಾರಿ

JAANAPADA SANGAMA (Adhyayana Lekhanagalu):
A Book on Study of Folklore Articles.

Edited By
C. R. Kambar Shettikera
Research Scholar
Department of Folkolre Studies
Kannada University, Hampi, Vidyaranya-583 276
Mob: 9483189643, 9964662849
crkphd@gmail.com

Published by
Gayatri Prakashana
#193/1, 29th Ward
Near Church Houses
Bandihatti, Cowl Bazar. Bullary-583 102
gpraicashana@gmail.com

First Impression: 2019
Copies: 1000
Paper used: 70GSM NS Book Print
Pages: xvi + 256
Price: Rs. 180/-

ISBN: 978-81-943338-0-7


ಬೆಲೆ: ೧೮೦/-

ಪುಟವಿನ್ಯಾಸ
ಸ್ಮಾರ್ಟ್ ಟಚ್ ಕಂಪ್ಯೂಟರ್ ಸೆಂಟರ್, ಯಾದಗಿರಿ

ಮುಖಪುಟ
ಕುಮಾರ್ ಜೆ., ಓಂಕಾರ ಸ್ಟುಡಿಯೋ, ಕಮಲಾಪುರ

ಮುದ್ರಣ
ಎಸ್.ಎಲ್.ವ್ಹಿ ಗ್ರಾಫಿಕ್ಸ್, ಬೆಂಗಳೂರು

i



ಪರಿವಿಡಿ

ಪ್ರಕಾಶಕರ ಮಾತು / v
ಸಂಪಾದಕರ ಮಾತು / vii
೧. ಜಾನಪದ ಅರ್ಥ, ವ್ಯಾಖ್ಯಾನ ಮತ್ತು ವರ್ಗೀಕರಣ / ೧
ಗೀತಾ ಸಿ ಕಂಬಾರ
೨. ಜಾನಪದ ಗ್ರಹಿಕೆ / ೧೦
ಅಮರಾವತಿ ದ್ರೇವಾಚಾರಿ
೩. ಜಾನಪದ ಹೇಗೆ ರೂಪುಗೊಂಡಿದೆ? / ೧೭
ಶಿಲ್ಪಾ ಕೋಟೆ ಎನ್
೪. ಜಾನಪದ ಸಂಶೋಧನಾ ಸಾಧ್ಯತೆಗಳು / ೨೩
ಲಕ್ಷ್ಮೀಕಾಂತ
೫. ಜಾನಪದ ಜ್ಞಾನ ವಿಜ್ಞಾನ / ೨೯
ಸುನಿಲ್ ಬಿ
೬. ಆಳವಿನಂಬಿಗಳಲ್ಲಿರುವ ಜನಪದ ಸಂಸ್ಕೃತಿ / ೩೪
ಪ್ರೀತಿ ಎಸ್. ಕೆ
೭. ಜನಪದ ನೃತ್ಯ / ೩೯
ಪ್ರೇಮಕುಮಾರಿ ಆರ್
೮. ಹವ್ಯಾಸಿ ರಂಗಭೂಮಿ ನಿರ್ದೇಶಕನ ಪ್ರಾಮುಖ್ಯತೆ / ೪೯
ಡಾ. ಭೀಮರಾಯ ಲಿಂಗೇರಿ
೯. ಬಯಲಾಟದ ಸ್ಥಿತ್ಯಂತರಗಳು / ೫೩
ಇಮಾಮ್ ಸಾಹೇಬ್ ಹಡಗಲಿ
೧೦. ದೊಳ್ಳು ಕಲೆ / ೫೮
ಬಿಳೇನಸಿದ್ದ ಬಿರಾದಾರ
೧೧. ಒಂದು ಪಾರಂಪರಿಕ ಜನಪದ ಪ್ರದರ್ಶನ ಕಲೆ / ೬೭
ಪ್ರೇಮವ್ವ ಮುದುಟಗಿ ಯಲ್ಲಪ್ಪ
೧೨. ಜನಪದ ವೈದ್ಯ ಪದ್ಧತಿ / ೭೩
ಗಣೇಶ ಹೆಗಡೆ
೧೩. ಪವಾಡಗಳು / ೭೯
ಜಗದೀಶಗೌಡ ಚ ಶಿವನಗೌಡ್ರ
೧೪. ಮಾಟ-ಮಂತ್ರ / ೮೬
ಕುಮಾರ ಯಲಿಬಳ್ಳಿ
೧೫. ಜನಪದ ಸಾಹಿತ್ಯ ಮತ್ತು ಕಲಾವಿದರ ನೆಲೆ / ೯೦
ಕಲ್ಲಪ್ಪ ಎಂ. ಬಿ

ಲೇಖನ ೧

ಮಾಲ ಸಮುದಾಯದವರ ವೃತ್ತಿಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

ಭಾರತ ದೇಶದಲ್ಲಿ ಹಲವಾರು ಜಾತಿ ಸಮುದಾಯಗಳು ವಾಸವಾಗಿದ್ದು, ಅವುಗಳಲ್ಲಿ ಮೇಲು-ಕೀಳು, ಶ್ರೇಷ್ಠ-ಕನಿಷ್ಠ, ಉಚ್ಚ-ನಿಚ ಎಂಬ ತಾರತಮ್ಯಗಳಿಂದ ಬದುಕುತ್ತಿದ್ದಾರೆ. ಅದರಲ್ಲಿ ಅತ್ಯಂತ ಕೆಳ ಹಂತದಲ್ಲಿರುವ ಸಮುದಾಯವಾದ ಅಲೆಮಾರಿ ಮಾಲ ಸಮುದಾಯವೂ ಒಂದಾಗಿದೆ. ಮಾಲ ಸಮುದಾಯಕ್ಕೆ ಇಂದಿಗೂ ಹೇಳಿಕೊಳ್ಳಲು ಒಂದು ನಿರ್ದಿಷ್ಟ ನೆಲೆ ಇಲ್ಲ. ಇಂದು ಇಲ್ಲಿ ನಾಳೆ ಇನ್ನೊಂದೆಡೆ ಎನ್ನುವ ಸ್ಥಿತಿಯಲ್ಲಿದ್ದಾರೆ.

ಮಾಲ ಸಮುದಾಯದ ಕುಟುಂಬಗಳು ಜೀವನೋಪಾಯಕ್ಕಾಗಿ ಇಂದಿಗೂ ಅಲೆದಾಡುತ್ತಲೇ ಇದ್ದಾರೆ. ಇದರಿಂದಾಗಿ ಅವರಿಗೆ ಅವರದೆ ಅದಂತಹ ಭೂಮಿ, ಊರು ಇರುವುದಿಲ್ಲ. ಮಾಲ ಸಮುದಾಯದಕ್ಕೆ ಒಂದು ನಿರ್ದಿಷ್ಟವಾದ ಹೆಸರು ಇಲ್ಲ. ಕರ್ನಾಟಕದಲ್ಲಿ ಮಾಲ ಸಮುದಾಯದವರಿಗೆ ಹಲವಾರು ಹೆಸರುಗಳಿಂದ ಕರೆಯುವುದು ಕಂಡುಬರುತ್ತದೆ. ಇವರಿಗೆ ಕರ್ನಾಟಕದಲ್ಲಿ ಮಲ್ಲರು, ಶ್ರೀಶೈಲ ಮಲ್ಲಯ್ಯನವರು, ಪರ್ವತ ಮಲ್ಲಯ್ಯನವರು, ಭೀಕ್ಷಕರು, ಮಲ್ಲಯ್ಯನವರು, ಮುತ್ತುಗಾರರು, ಚನ್ನ ಮಲ್ಲಯ್ಯನವರು, ಬುಡಗ ಜಂಗಮ ಮಾಲ ಎಂದು ಕರೆಯುತ್ತಾರೆ. ಆಂಧ್ರಪ್ರದೇಶದಲ್ಲಿ ಆದಿಆಂಧ್ರ, ಅಂತ್ಯಜ, ಅರವ ಮಾಲ, ಮಾಲ, ಬಜಗಿರಿ, ಭಂಡ, ಮರಯನ್ ಇತ್ಯಾದಿ ಹೆಸರುಗಳಿಂದ ಮಾಲ ಸಮುದಾಯದವರಿಗೆ ಕರೆಯುವರು. ಕರ್ನಾಟಕದಲ್ಲಿ ಅತಿ ಹೆಚ್ಚು ಬಳಕೆಯಲ್ಲಿರುವ ಶಬ್ದವೆಂದರೆ ಪರ್ವತ ಮಲ್ಲಯ್ಯನವರು ಎಂದು. ಮಾಲ ಎಂಬುದು ಪರ್ವತವನ್ನೇ ಪ್ರತಿನಿಧಿಸುವ ಪದ. ಕನ್ನಡದಲ್ಲಿ ಪರ್ವತ+ಮಾಲ>ಪರ್ವತಮಾಲ> ಪರ್ವತಮಲ್ಲಯ್ಯ ಎಂಬುದು ಎಲ್ಲಿಯೂ ನಮೂದಾಗಿರುವುದಿಲ್ಲಾ. ಜನರ ಆಡು ಮಾತಿನಲ್ಲಷ್ಟೇ ಪರ್ವತಮಲ್ಲಯ್ಯ ಆಗಿ ಉಳಿದುಕೊಂಡಿರುತ್ತಾರೆ. ಈಗ ನಿರ್ದಿಷ್ಟ ಗುರುತಿಗೆ (ಐಡೆಂಟಿಗೆ) ಸಿಗದೆ ಬಹುಹೆಸರುಗಳಿಗೆ ಒಳಗಾಗುವುದರಿಂದ ಆಗುವ ಅಪಾಯಗಳ ಅರಿವಿಲ್ಲದೆ ಈ ಸಮುದಾಯದವರು ಬದುಕುತ್ತಿದ್ದಾರೆ. ಇದರ ಜೊತೆಗೆ ಶಿಕ್ಷಣದ ವಂಚಿತತೆಯನ್ನು ಸಹ ಈ ಸಮುದಾಯದ ಮಕ್ಕಳು ಬದುಕಿನಲ್ಲಿ ಕಾಣದಾಗಿದ್ದಾರೆ. ಇಂದಿಗೂ ಇವರು ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಸೌಲಭ್ಯಗಳ ಜೊತೆಗೆ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಪಡೆಯಲಾಗದಂತಹ ಗಂಭೀರವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಾಲ ಸಮುದಾಯದವರು

ಮೂಲತಃ ಆಂಧ್ರದಿಂದ ವಲಸೆ ಬಂದವರಾಗಿದ್ದರು. ಕರ್ನಾಟಕದಲ್ಲಿ ತಮ್ಮ ವೃತ್ತಿಯ ಕಾರಣದಿಂದ ಜನರ ಜೊತೆಗಿನ ಒಡನಾಟದ ಸಲುವಾಗಿ ಕನ್ನಡದ ವಿವಿಧ ಪ್ರಾದೇಶಿಕ ಭಾಷಾ ಪರಿಸರಕ್ಕೆ ವಲಸೆ ಹೋಗಿ ಕೆಲವೊಮ್ಮೆ ಅಲ್ಲಲ್ಲಿ ನೆಲೆಸಿದ ಕಾರಣದಿಂದ ಈ ಸಮುದಾಯದವರ ಭಾಷೆ ಬೇರೆ ಬೇರೆಯಾಗಿದೆ. ಇವರು ತೆಲುಗು ಮಾತನಾಡುವಾಗ ತೆಲುಗು ಮಾತನಾಡುತ್ತಾರೆ. ಕನ್ನಡ ಮಾತನಾಡುವಾಗ ಕನ್ನಡ ಮಾತನಾಡುತ್ತಾರೆ.

ಮಾಲರು ಕರ್ನಾಟಕದ ರಾಯಚೂರು, ಕಲ್ಬುರ್ಗಿ ಭಾಗಗಳಲ್ಲಿ ಹೆಚ್ಚಾಗಿ ವಾಸವಾಗಿದ್ದಾರೆ. ಇವರು ತಮ್ಮ ಜಾತಿಯವರೊಂದಿಗೆ ತೆಲುಗುನಲ್ಲಿ, ಉಳಿದವರ ಜೊತೆ ಕನ್ನಡ ಮತ್ತು ಉರ್ದುವಿನಲ್ಲಿ ಮಾತನಾಡಿ ಕನ್ನಡ ಲಿಪಿಯನ್ನು ಬಳಸುತ್ತಾರೆ. ಎಚ್.ಡಿ ಪ್ರಶಾಂತ (ಜನಸಮುದಾಯ ಸಂಪುಟ-೨೦೦೦) ಎಂದು ಉಲ್ಲೇಖಿಸಿದ್ದಾರೆ.

ಮಾಲ ಸಮುದಾಯದ ಹೆಸರು ಮತ್ತು ಅರ್ಥ

ಪರ್ವತ ಮಲ್ಲಯ್ಯ:-ಮಾಲ ಸಮುದಾಯದವರಿಗೆ ಪರ್ವತ ಮಲ್ಲಯ್ಯನವರು ಎಂದು ಹೆಚ್ಚಾಗಿ ಬಳಕೆಯಲ್ಲಿ ಇರುತ್ತದೆ. ಪರ್ವತ ಮಲ್ಲಯ್ಯನವರು ಎಂಬುದು ಒಂದು ವೃತ್ತಿ ಸೂಚಕ ಪದ ಮತ್ತು ಬೆಟ್ಟವಾಸಿಗಳು ಆಗಿರುವುದರಿಂದ ಈ ಹೆಸರಿನಿಂದ ಕರೆಯುತ್ತಾರೆ. ಪರ್ವತ ಎಂದರೆ ಶಿಖರ, ಎತ್ತರವಾದ ಪ್ರದೇಶ, ಬೆಟ್ಟ, ಗುಡ್ಡ ಎಂದು ಇಂತಹ ಎತ್ತರವಾದಂತಹ ಪ್ರದೇಶದಲ್ಲಿ ಶ್ರೀ ಶೈಲಮಲ್ಲಯ್ಯನ ಧಾರ್ಮಿಕ ಸ್ಥಳ ಅಥವಾ ಗುಡಿ ಇರುತ್ತದೆ. ಅ ದೇವರಿನ ಆರಾಧಕ ಭಕ್ತರು ಮಾಲ ಸಮುದಾಯದವರು ಆಗಿದ್ದಾರೆ. ಮಾಲ ಸಮುದಾಲದವರ ಪ್ರತಿಯೊಂದು ಗುಡಿಸಲಿನಲ್ಲಿ ಕೈಯಿಂದ ತಯಾರಿಸಿದ ಕಂಬಿ ಆ ಕಂಬಿಯಾಕಾರದ ಗುಡಿಯಲ್ಲಿ ಏಳು ಎಡೆ ಸರ್ಪವಿರುವ ಹಿತ್ತಾಳೆಯ ಮಲ್ಲಯ್ಯನ ಮೂರ್ತಿ ಇಟ್ಟು ಪೂಜಿಸಿಕೊಂಡು ಆ ಗುಡಿಯಾಕಾರದ ಕಂಬಿಯನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡು ತಮ್ಮ ಹೊಟ್ಟೆಪಾಡಿಗಾಗಿ ಭೀಕ್ಷೆ ಬೇಡಲು ಹಳ್ಳಿ-ಹಳ್ಳಿಗೆ ಕಾಲ್ನಡಿಗೆಯಿಂದ ಸಂಚಾರ ಮಾಡುತ್ತಾರೆ. ಆದ್ದರಿಂದ ಇವರಿಗೆ ಪರ್ವತ ಮಲ್ಲಯ್ಯನವರು ಎಂದು ಹೇಳುತ್ತಾರೆ.

ಸಮೀಕ್ಷೆಗೊಳಗಾದ ಅಲೆಮಾರಿ ಮಾಲ ಸಮುದಾಯದ ಜನಸಂಖ್ಯೆ ವಿವರ

ಜಿಲ್ಲೆಗಳು	ತಾಲೂಕು	ಗ್ರಾಮ	ಕುಟುಂಬ	ಗಂಡು	ಹೆಣ್ಣು	ಒಟ್ಟು
ಕೊಪ್ಪಳ		ಚಿಲಕಮುಖಿ	೯೮	೨೪೫	೨೪೭	೪೯೨
		ಕುದುರಿಮೂತಿ	೦೬	೧೫	೧೬	೩೧
		ಕಲ್ ಅಬ್ಬಿಗೇರಿ	೩೧	೭೭	೭೯	೧೫೬
		ದನಗಳದೊಡ್ಡಿ	೦೭	೧೮	೧೮	೩೬
		ಇರಕಲ್‌ಗಡ	೦೧	೨	೨	೦೪
		ಕೊಸಕ್ಕಿಹಂಚಿನಾಳ	೦೨	೫	೫	೧೦
		ಮಸಬಾ ಹಂಚಿನಾಳ	೧೦	೨೫	೨೬	೫೧
		ಶಿವಪುರ	೦೧	೧	೨	೦೩

		ಕನಕಗಿರಿ	೧೫	೪೦	೩೮	೭೮
		ಕೊಪ್ಪಳ	೪೦	೧೦೫	೧೦೩	೨೦೮
ರಾಯಚೂರು		ಪೋತ್ನಾಳ	೦೭	೧೬	೧೮	೩೪
ಗದಗ		ಗಜೇಂದ್ರಗಡ	೦೨	೦೫	೦೬	೧೧
		ಹುಲಿಕೋಟೆ	೦೧	೦೧	೦೨	೦೩
		ಗದಗ	೦೮	೨೧	೨೧	೪೨
ಧಾರವಾಡ		ಹುಬ್ಬಳ್ಳಿ	೨೮	೭೨	೭೩	೧೪೫
ಹಾವೇರಿ		ಬಡಮಲ್ಲಿ	೧೯	೪೯	೪೭	೯೬
		ಬಡಮಲ್ಲಿ ತಾಂಡ	೦೩	೦೮	೦೯	೧೭
		ಚಿಕ್ಕಕೆರೂರು	೦೮	೨೦	೨೧	೪೧
		ರಾಮಪುರ	೦೪	೧೧	೧೦	೨೧
		ಹಂಸಬಾವಿ	೦೩	೦೯	೦೭	೧೬
		ಹಾನಗಲ್	೦೩	೦೭	೦೯	೧೬
ಶಿವಮೊಗ್ಗ	ಸೊರಬ	ಜಡೆ	೧೦	೨೫	೨೬	೫೧
		ಕುದರಿಗಣಿ	೦೮	೨೨	೨೦	೪೨
ಮೈಸೂರು	ಮೈಸೂರು	ಮೈಸೂರು	೦೭	೧೯	೧೮	೩೭
			೩೨೨	**೮೧೮**	**೮೨೩**	**೧೬೪೧**

ಸ್ಥಳೀಯವಾಗಿ ಪರ್ವತಮಲ್ಲಯ್ಯ ಸಮುದಾಯವೆಂದು ಗುರುತಿಸಿಕೊಳ್ಳುವ ಅಲೆಮಾರಿ ಮಾಲ ಸಮುದಾಯವನ್ನು ಅಧ್ಯಯನಕ್ಕಾಗಿ ಸಮೀಕ್ಷಿಸಿದಾಗ ಕಂಡುಬಂದ ಕುಟುಂಬಗಳು ೩೨೨, ಒಟ್ಟು ಜನಸಂಖ್ಯೆಯು ೧೬೪೧, ಇದರಲ್ಲಿ ಪುರುಷರು ೮೧೮, ಮಹಿಳೆಯರು ೮೨೩ ಜನರಿರುವರು. ಕೊಪ್ಪಳ ಜಿಲ್ಲೆಯಲ್ಲಿಯೇ ಅತ್ಯಧಿಕ ಸಂಖ್ಯೆಯಲ್ಲಿ ನೆಲೆಸಿರುವರು. ಮೈಸೂರಿನಲ್ಲಿ ಅತ್ಯಂತ ಕಡಿಮೆ ಕುಟುಂಬಗಳಿವೆ.

ಮಾಲ ಸಮುದಾಯದವರ ವೃತ್ತಿಗಳು ಮತ್ತು ಸಮಸ್ಯೆಗಳು

ಬೇಟೆ: ಮಾಲ ಸಮುದಾಯಕ್ಕೆ ಬೇಟೆಯೇ ಜೀವನೋಪಾಯದ ಮಾರ್ಗವಾಗಿದೆ. ಬೇಟೆಯೇ ಇವರ ಪ್ರಧಾನ ವೃತ್ತಿಯಾಗಿದೆ. ಆದರೆ ಅದನ್ನು ಒಂದು ಛತ್ರಿ ಅಥವಾ ಉಪಕಸುಬನ್ನಾಗಿ ತಮ್ಮ ಹೊಟ್ಟೆಪಾಡಿಗಾಗಿ ಅವಲಂಬಿಸಿದ ವೃತ್ತಿಯಾಗಿದೆ. ಪ್ರಾಣಿ, ಪಕ್ಷಿಗಳು, ಮೀನಿ, ಏಡಿ, ಮೊಲ, ಉಡ. ಅಳಿಲು, ಕೌಜುಗ ಬುರ್ಲಕ್ಕಿ ಗೊರವಂಕ, ಲೇವಕ್ಕಿ ಇತ್ಯಾದಿ ಪಕ್ಷಿಗಳ ಬೇಟೆಯಾಡುವುದರ ಜೊತೆಗೆ ನಾಯಿಗಳ ಸಹಾಯದಿಂದಲೂ ಪಕ್ಷಿಗಳನ್ನು, ಪ್ರಾಣಿಗಳನ್ನು ಬೇಟೆಯಾಡುತ್ತಾರೆ. ಆದ್ದರಿಂದ ಬೇಟೆ ನಾಯಿಗಳನ್ನು ಸಾಕಿರುತ್ತಾರೆ. ಪಕ್ಷಿಗಳನ್ನು ಹಿಡಿಯಲು ಬಲೆಯನ್ನು ತಯಾರಿಸಿಕೊಂಡಿರುತ್ತಾರೆ. ಪಕ್ಷಿಗಳು ಕುಳಿತುಕೊಳ್ಳುವ ಜಾಗವನ್ನು ಗುರುತಿಸಿ ಆಯಾಕಟ್ಟಿನ ಸ್ಥಳದಲ್ಲಿ ಬಲೆಯನ್ನು ಕಟ್ಟಿ ಪ್ರಾಣಿ,

ಪಕ್ಷಿಗಳನ್ನು ಅಟ್ಟಿಸಿಕೊಂಡು ಬೆದರಿಸಿ ಸಿಕ್ಕಿಬೀಳುವಂತೆ ಮಾಡುವ ತಂತ್ರವನ್ನು ಅರಿತಿರುವರು. ಪಕ್ಷಿಯನ್ನು ಹಿಡಿಯಲು ಪಕ್ಷಿಯಂತೆ ಕೂಗಿ ಅವುಗಳು ಹತ್ತಿರಕ್ಕೆ ಬರುವಂತೆ ಮಾಡಿ ಬಲೆ ಹಾಕಿ ಹಿಡಿಯುತ್ತಾರೆ. ಯಾವ ಸಮಯದಲ್ಲಿ ಯಾವ ರೀತಿಯಲ್ಲಿ ಪಕ್ಷಿಯನ್ನು ಹಿಡಿಯಬೇಕೆಂಬ ತಿಳುವಳಿಕೆ ಉಳ್ಳವರಾಗಿರುತ್ತಾರೆ. ಬೇಟೆಯು ಜೀವನ ನಿರ್ವಹಣೆಗಾಗಿ ಕೈಗೊಂಡ ಒಂದು ಉಪಕಸುಬಾಗಿದೆ.

ಬೇಟೆ ಸಮಸ್ಯೆ: ಮಾಲ ಸಮುದಾಯದವರು ಮಾಂಸ ಪ್ರಿಯಾರಾಗಿರುತ್ತಾರೆ. ಆದರೆ ಮಾರುಕಟ್ಟೆಯಲ್ಲಿ ಸಿಗುವ ಕೋಳಿ, ಕುರಿಯ ಮಾಂಸವನ್ನು ಖರೀದಿ ಮಾಡಿ ತಿನ್ನುವಷ್ಟು ಆರ್ಥಿಕ ಸ್ಥಿತಿಯಲ್ಲಿರದ ಇವರು ಬೇಟೆಯಾಡಿ ಆರಣ್ಯದಲ್ಲಿ ಹೊಲಗದ್ದೆಗಳಲ್ಲಿ ಸಿಗುವ ಪ್ರಾಣಿ, ಪಕ್ಷಿಗಳನ್ನಾಡುವರು. ಸರ್ಕಾರದ ಕಾನೂನು ಬೇಟೆ ನಿಷೇಧ ಕಾಯ್ದೆಯ ಕಾರಣದಿಂದ ಬೇಟೆಯಾಡಲು ತೊಂದರೆಯಾಗಿದೆ. ಬೇಟೆಯಿಂದ ತಮ್ಮ ಆಹಾರ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ನಿಬಾಯಿಸಿಕೊಳ್ಳುತ್ತಿದ್ದರು ಆದರೆ ಬೇಟೆ ಸಾಧ್ಯವಾಗದೆ ಇರುವುದರಿಂದ ಆಹಾರದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಅಡವಿಯಲ್ಲಿ ಆಹಾರ ಸಂಗ್ರಹಣೆ: ಮಾಲಾ ಸಮುದಾಯದವರು ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಅಡವಿಯಲ್ಲಿ ಮತ್ತು ತಮ್ಮ ಪರಿಸರದಲ್ಲಿ ಸಿಗುವ ಗೆಡ್ಡೆ-ಗೆಣಸು, ನಾರು-ಬೇರು, ಹಣ್ಣು-ಹಂಪಲು, ಸೊಪ್ಪು-ತರಕಾರಿಗಳಲ್ಲದೇ, ಸಸ್ಯಜನ್ಯದಿಂದ ಸಿಗುವ ಎಲ್ಲಾ ಆಹಾರಗಳನ್ನು ಸಂಗ್ರಹಿಸಿ ತಮ್ಮ ಆಹಾರಕ್ಕಾಗಿ ಬಳಸಿಕೊಳ್ಳುತ್ತಿದ್ದರು. ಹೊಲದಲ್ಲಿ ಸಿಗುವ ಕೌಳಿಕಾಯಿ, ನೇರಳೆ ಹಣ್ಣು, ಕಾರಿಕಾಯಿ, ತೊಂಡೆಕಾಯಿ ಮುಂತಾದವುಗಳನ್ನು ಹುಡುಕಿ ತರುತ್ತಿದ್ದರು. ಸಮಸ್ಯೆ:-ಅಡವಿಯಲ್ಲಿ ಆಹಾರ ಸಂಗ್ರಹಿಸಲು ಇತ್ತೀಚೆಗೆ ಕಾಡು-ಮೇಡು ಇಲ್ಲದಂತಾಗಿದೆ. ಮನುಷ್ಯ ತನ್ನ ಜೀವನೋಪಾಯಕ್ಕಾಗಿ ಗಿಡಮರಗಳನ್ನು ಕಡಿದು ಹಾಳು ಮಾಡಿದ್ದರಿಂದ ಯಾವುದೇ ಹಣ್ಣು-ಹಂಪಲುಗಳು ಸಿಗದಂತಾಗಿದೆ. ಮತ್ತು ಇತ್ತೀಚೆಗೆ ಪಾಳು ಬಿದ್ದ ಭೂಮಿಯು ಸಹ ಇಲ್ಲದಂತಾಗಿದೆ. ಜನಸಂಖ್ಯಾ ಪ್ರಮಾಣ ಹೆಚ್ಚಾಗಿದ್ದರಿಂದ ಎಲ್ಲಾ ಭೂಮಿಯನ್ನು ಉಳುಮೆ ಮಾಡಲು ಪ್ರಾರಂಭಿಸಿದ್ದಾರೆ. ಮತ್ತು ಇನ್ನೊಂದು ಸಮಸ್ಯೆಯೇನೆಂದರೆ ಮಳೆ ಪ್ರಮಾಣವು ಸಹ ದಿನದಿಂದ ದಿನಕ್ಕೆ ಕಡಿಮೆ ಆಗುವುದರಿಂದ ಎಲ್ಲಾ ಆಡವಿಯಲ್ಲಿ ನೈಸರ್ಗಿಕವಾಗಿ ಬೆಳೆಯುವ ಗಿಡ-ಬಳ್ಳಿಗಳು ಹುಟ್ಟದಂತೆ ಆಗಿದೆ.

ಭೀಕ್ಷೆ ಬೇಡುವುದು: ಮಾಲ ಸಮುದಾಯದವರ ಪ್ರಧಾನ ವೃತ್ತಿ ಧಾರ್ಮಿಕ ಭೀಕ್ಷೆ ಬೇಡುವುದು ಆಗಿದೆ. ಹಿಂದಿನ ಕಾಲದಿಂದ ಹಿಡಿದು ಇವತ್ತಿನವರೆಗೂ ಕಂಬಿಯಾಕಾರದ ಗುಡಿಯನ್ನು ತಲೆಯ ಮೇಲೆ ಹೊತ್ತುಕೊಂಡು ಶ್ರೀಶೈಲ ಮಲ್ಲಯ್ಯನ ಹೆಸರನ್ನು ಹೇಳಿ ಮನೆ ಮನೆಗೆ ಹೋಗಿ ಭೀಕ್ಷೆ ಬೇಡಿ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಭೀಕ್ಷೆಯಿಂದ ಬಂದ ಹಣ, ಕಾಳು-ಕಡಿ ರೊಟ್ಟಿ ಇನ್ನಿತರ ಆಹಾರದಿಂದ ತಮ್ಮ ಆರ್ಥಿಕ ಹಸಿವೆಯನ್ನು ನಿಬಾಯಿಸಿಕೊಳ್ಳುತ್ತಾರೆ. ಇವತ್ತಿಗೂ ಇವರು ಕೆಲವೆಡೆಯಲ್ಲಿ ಇನ್ನೂ ಭೀಕ್ಷೆಯನ್ನೇ ಅವಲಂಬಿಸಿದ್ದಾರೆ.

ಭೀಕ್ಷಾಸಮಸ್ಯೆ: ಮಾಲ ಸಮುದಾಯದವರ ಮಾಲ ವೃತ್ತಿ ಧಾರ್ಮಿಕ ಭೀಕ್ಷೆ ಆಗಿರುವುದರಿಂದ ಇನ್ನೂ ಇವರು ಭೀಕ್ಷೆಯನ್ನೆ ಅವಲಂಭಿಸಿದ್ದಾರೆ. ಸರ್ಕಾರದ ಹಲವಾರು ಯೋಜನೆಗಳು, ಅನುಷ್ಠಾನಗಳು ಮತ್ತು ಕ್ರಮಗಳು, ಭೀಕ್ಷೆ ನಿಷೇಧ ಕಾಯ್ದೆ, ಬಾಲಾಪರಾಧ ಕಾಯ್ದೆ ಮುಂತಾದ ಸರಕಾರದ ಕಾಯ್ದೆಗಳು ಈ ಸಮುದಾಯದವರಿಗೆ ತೊಂದರೆ ಎಂಬಂತೆ ಆಗಿರುತ್ತದೆ.

ಕೃಷಿ ಕೂಲಿ: ಕೆಲವು ನೆಲೆನಿಂತ ಕುಟುಂಬದ ಸದಸ್ಯರು, ಹೆಣ್ಣು ಮಕ್ಕಳು, ಗಂಡು ಮಕ್ಕಳು ತಾವಿದ್ದ ಊರಿನಲ್ಲಿ ಹೆಚ್ಚು ಭೂಮಿ ಹೊಂದಿದ ಶ್ರೀಮಂತರ ಹೊಲಗದ್ದೆಗಳಿಗೆ ಕೂಲಿಗಾಗಿ ಕೃಷಿಯಾಳುಗಳಾಗಿ ಕಳೆ ತೆಗೆಯಲು, ಬೆಳೆಗಳನ್ನು ಕೊಯ್ಯಲು, ರಾಶಿ ಮಾಡಲು ಇನ್ನಿತರ ಕೆಲಸಕ್ಕೆ ಕೃಷಿ ಆಳುಗಳಾಗಿ ದುಡಿಯಲು ಹೋಗುತ್ತಿದ್ದರು. ಗಂಡು ಮಕ್ಕಳು ಜೀತದಾಳುಗಳಾಗಿಯೂ ಮತ್ತು ತೋಟದ ಕೆಲಸ ಕಾರ್ಯಗಳಿಗೆ ಹೋಗುತ್ತಿದ್ದರು.

ಕೃಷಿ ಕೂಲಿ ಸಮಸ್ಯೆ: ಇವತ್ತಿನ ದಿನಮಾನಗಳಲ್ಲಿ ಹಳ್ಳಿ-ಪಟ್ಟಣಗಳಲ್ಲಿ ಭೂಮಿಯು ಮಳೆಯನ್ನು ಆಶ್ರಯಿಸಿ ಬೆಳೆಯುತ್ತವೆ. ಅಂದರೆ ಮಳೆ ಬಂದರೆ ಮಾತ್ರ ಬಿತ್ತನೆ ಮಾಡುವುದು ಮತ್ತು ಬೆಳೆಗಳನ್ನು ಬೆಳೆದು ಫಸಲನ್ನು ಪಡೆಯುತ್ತಾರೆ. ಮಳೆ ಬರದಿದ್ದರೆ ಬೆಳೆ ಇರುವುದಿಲ್ಲ. ಆದ್ದರಿಂದ ಮಳೆ ಇಲ್ಲದೆ ಇರುವುದರಿಂದ ಕೃಷಿ ಕೂಲಿ ಮಾಡುವವರಿಗೂ ಕೆಲಸಗಳು ಇಲ್ಲದಂತಾಗಿದೆ. ಆದ್ದರಿಂದ ಪ್ರತಿದಿನ ಕೆಲಸವಿದ್ದರೆ ಆರ್ಥಿಕ ಸಮಸ್ಯೆಗಳು ಬಗೆಹರಿಯುತ್ತದೆ. ಇಂತಹ ಸಮಸ್ಯೆಯನ್ನು ಮಾಲ ಸಮುದಾಯದವರು ಎದುರಿಸುತ್ತಿದ್ದಾರೆ. ದುಡಿಯುವವರ ಸಂಖ್ಯೆ ಹೆಚ್ಚಾಗಿದ್ದರಿಂದ ಎಲ್ಲಾರಿಗೂ ಸಮಾನವಾಗಿ ಕೆಲಸಗಳು ಇಲ್ಲದಂತಾಗಿದೆ.

ಮಾಲ ಸಮುದಾಯಹೆಣ್ಣುಮಕ್ಕಳ ವೃತ್ತಿಗಳು: ಮಾಲ ಸಮುದಾಯದ ಹೆಣ್ಣು ಮಕ್ಕಳು ನಿರಂತರವಾಗಿ ತಮ್ಮ ಜೀವನದಲ್ಲಿ ಒಂದಲ್ಲೊಂದು ವೃತ್ತಿಯಲ್ಲಿ ತೊಡಗಿಕೊಂಡಿರುತ್ತಾರೆ. ಮನೆಯಲ್ಲಿಯೇ ಇರಲಿ ಸಂಚಾರದಲ್ಲಿಯೇ ಇರಲಿ ಸತತವಾಗಿ ಅವರು ಹಲವಾರು ಕೆಲಸದಲ್ಲಿ ನಿರತರಾಗಿರುತ್ತಾರೆ.

ವ್ಯಾಪಾರದ ವಸ್ತುಗಳು: ಸಾಮಾನುಗಳನ್ನು ಮಾರುವುದು, ಬಟ್ಟೆಗಳ ವ್ಯಾಪಾರವನ್ನು ಹಳ್ಳಿ-ಹಳ್ಳಿಗೆ ಕಾಲ್ನಡಿಗೆಯಿಂದ ನಡೆದು ಮಾರುತ್ತಾರೆ. ಜಾತ್ರೆ ಮತ್ತು ಸಂತೆ ದಿನದ ಸಂದರ್ಭದಲ್ಲಿ ಮಾರುಕಟ್ಟೆಗಳಲ್ಲಿ ಕುಳಿತುಕೊಂಡು ಸ್ಟೇಷನರಿ ಸಾಮಾನುಗಳನ್ನು ಮಾರುವುದು, ಕಾಯಿಪಲ್ಲೆ ವ್ಯಾಪಾರವನ್ನು ಮಾಡುವುದನ್ನು ಮಾಡುತ್ತಾರೆ. ಹಲವಾರು ರೀತಿಯ ವ್ಯಾಪಾರಿ ವಸ್ತುಗಳನ್ನು ತಯಾರಿಸಿ ಮಾರುತ್ತಾರೆ.

ಚಾಪೆ ಹೆಣೆಯುವುದು: ಗ್ರಾಮೀಣ ಪ್ರದೇಶದಲ್ಲಿ ದೊರೆಯುವ ಈಚಲು ಗರಿಯನ್ನು ಕೊಯ್ದುಕೊಂಡು ತಂದು ಅವುಗಳನ್ನು ಸೀಳಿ ತಮ್ಮ ಕೈಯಿಂದಲೇ ಚಾಪೆಯನ್ನು ಹೆಣೆಯುತ್ತಾರೆ. ಆದರೆ ಇದು ಲಾಭದಾಯಕವಾದ ಕೆಲಸವೇನು ಅಲ್ಲ ಆದರೆ ಅತ್ಯಂತ ಶ್ರಮದಾಯಕವಾಗಿರುತ್ತದೆ. ಇದು ಸ್ತ್ರೀಯರು ಮಾಡುವಂತಹ ಕೆಲಸವಾಗಿರುತ್ತದೆ.

ಕೌದಿ ಹೊಲಿಯುವ ಕಲೆ : ಮಾಲ ಸಮುದಾಯದ ಹೆಣ್ಣು ಮಕ್ಕಳು ತಮ್ಮ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ತನ್ನ ವಿವಿಧ ವೃತ್ತಿಯೊಂದಿಗೆ ಇತರೆ ಅನುಕೂಲ ವೃತ್ತಿಗಳನ್ನು ಅವಲಂಭಿಸಿರುವುದುಂಟು. ಅದರಲ್ಲಿ ಕೌದಿಯನ್ನು ಹೊಲಿಯುವ ಕಲೆಯನ್ನು ಸಹ ಕರಗತ ಮಾಡಿಕೊಂಡಿದ್ದಾರೆ. ತಮ್ಮ ಊರಿನ ಅಕ್ಕ-ಪಕ್ಕದ ಮನೆಯವರ ಕೌದಿಗಳನ್ನು ಊರಿನ ಜನರಿಗೆ ಕೌದಿಗಳನ್ನು ಹಣಕ್ಕೆ ಅಥವಾ ಜೋಳಕ್ಕೆ ಒಲೆದು ಕೊಡುತ್ತಾರೆ ಮತ್ತು ತಮ್ಮ ಮನೆಗಳಿಗೂ ಸಹ ಒಲೆದುಕೊಳ್ಳುತ್ತಾರೆ.

ಮಹಿಳೆಯರ ವೃತ್ತಿ ಸಮಸ್ಯೆಗಳು: ಮಾಲಸಮುದಾಯ ಹೆಣ್ಣು ಮಕ್ಕಳು ಜೀವನ ನಿರ್ವಹಣೆಗಾಗಿ ಮಾಡುವ ವೃತ್ತಿಗಳು ಇಂದು ಅತಂತ್ರ ಸ್ಥಿತಿಯಲ್ಲಿವೆ. ಚಾಪೆ ಹೆಣೆಯುವ ವೃತ್ತಿಯನ್ನು ಮಾಡುವ

ಮುಖ್ಯವಾಗಿ ಬೇಕಾಗುವ ಕಚ್ಚಾಸಾಮಾಗ್ರಿಗಳಾದ ಈಚಲು ಗರಿ ಮತ್ತು ಇನ್ನಿತರ ಕಚ್ಚಾಸಾಮಾಗ್ರಿಗಳು ಸಿಗದೆ ಇರುವುದು ಒಂದು ಸಮಸ್ಯೆಯಾಗಿದೆ. ಇನ್ನೊಂದೆಡೆ ಪ್ಲಾಸ್ಟಿಕ್ ಚಾಪೆಗಳ ಹಾವಳಿಯಿಂದಾಗಿ ಈಚಲು ಚಾಪೆಗಳನ್ನು ಯಾರು ಕೇಳದಂತಾಗಿರುತ್ತದೆ. ಹಾಗೆ ಕೌದಿ ಹೊಲಿಯುವ ವೃತಿಯೂ ಅದೇ ರೀತಿ ಅತಂತ್ರವಾಗಿದೆ. ಯಾಕೆಂದರೆ ಇಂದಿನ ಆಧುನಿಕ ಮನೋಭಾವನೆಯಿರುವ ಪ್ರತಿಯೊಬ್ಬರು ಜಮಾಖಾನೆ, ಚೌದರ್, ಗಾದೆ ಇತ್ಯಾದಿಗಳನ್ನು ಬಳಸುತ್ತಿರುವುದರಿಂದ ಕೌದಿಗಳನ್ನು ಒಲೆಸುತ್ತಿರುವುದೇ ಕಡಿಮೆಯಾಗಿದೆ. ಸ್ಟೇಷನರಿ ವ್ಯಾಪಾರವನ್ನು ಸಹ ಅವಲಂಬಿಸಿದ್ದಾರೆ. ಆದರೆ ಇತ್ತೀಚೆಗೆ ಪ್ರತಿಯೊಂದು ಮನೆಯಲ್ಲಿ ಪ್ರತಿಯೊಂದು ಊರಿನಲ್ಲಿ ಸ್ಟೇಷನರಿ ವ್ಯಾಪಾರದ ಅಂಗಡಿಗಳು ಕಂಡು ಬರುತ್ತವೆ. ಆದ್ದರಿಂದ ಸ್ಟೇಷನರಿ ಸಾಮಾನುಗಳು ಸಹ ನಿಗದಿತ ಬೆಲೆಗೆ ಮಾರಾಟವಾಗುತ್ತಿಲ್ಲ. ಇದರಿಂದ ಮಾಲ ಸಮುದಾಯ ಹೆಣ್ಣು ಮಕ್ಕಳ ವ್ಯಾಪಾರಕ್ಕೆ ದಕ್ಕೆ ಉಂಟಾಗುತ್ತಿದೆ ಮತ್ತು ಬಟ್ಟೆಗಳ ವ್ಯಾಪಾರ ಚಿಕ್ಕ ಮಕ್ಕಳ ಉಡುಗೆ ತೊಡುಗೆಗಳನ್ನು ವ್ಯಾಪಾರ ಮಾಡುತ್ತಾರೆ. ಆದರೆ ಆಧುನಿಕ ಪ್ಯಾಶನ್ ಜಗತ್ತಿನಿಂದ ಸಾಧಾರಣ ಬಟ್ಟೆಗೆ ವ್ಯಾಪಾರ ಇಲ್ಲದಂತಾಗಿದ್ದರಿಂದ ಮಾಲ ಹೆಣ್ಣು ಮಕ್ಕಳು ವ್ಯಾಪಾರದ ನಷ್ಟವನ್ನು ಅನುಭವಿಸುತ್ತಿದ್ದಾರೆ. ಹಲವಾರು ವಸ್ತುಗಳ ಬೇಡಿಕೆಯೇ ಇಲ್ಲದಂತಾಗಿದೆ.

ವಸತಿ ಸಮಸ್ಯೆ: ಮಾಲ ಸಮುದಾಯದವರು ಸದಾ ಸಂಚಾರಿಗಳಾಗಿರುವುದರಿಂದ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಂಚರಿಸುವುದರಿಂದ ಇವರಿಗೆ ಭದ್ರವಾದ ಮನೆಗಳು ಇರುವುದಿಲ್ಲ. ಇವರು ಊರಿಂದೂರಿಗೆ ತಂಗಿ ಗೂಡಾರಗಳನ್ನು ಹಾಕಿ ಒಂದೆರಡು ದಿನ ಇದ್ದು ಮತ್ತೆ ಇನ್ನೊಂದು ಊರಿಗೆ ಹೋಗಿ ಊರಿನ ಹೊರಗೆ ಗುಡಿ ಮೈದಾನದಲ್ಲಿ ವಾಸಿಸುತ್ತಾರೆ. ಮಾಲ ಸಮುದಾಯದ ಕುಟುಂಬಗಳಿಗೆ ಮನೆಗಳು ಇರುವುದಿಲ್ಲ. ಇವರು ನೆಲೆ ನಿಲ್ಲಲು ಸ್ಥಿರವಾದ ನೆಲೆ, ಉದ್ಯೋಗ ಇಲ್ಲದೆ ಪರದಾಡುವ ಸ್ಥಿತಿಯಲ್ಲಿದ್ದಾರೆ.

ಪರಿಹಾರೋಪಾಯಗಳು

೧. ಮಾಲ ಸಮುದಾಯದಕ್ಕೆ ಇರುವ ವಿವಿಧ ಹೆಸರುಗಳನ್ನು ತೆಗೆದು ಒಂದು ನಿರ್ದಿಷ್ಟ ನಾಮವನ್ನು ಸೂಚಿಸಬೇಕು

೨. ಮಾಲ ಸಮುದಾಯದವರು ಪೋಷಿಸಿ ಪಾಲಿಸಿಕೊಂಡು ಬಂದ ಪರಂಪರಾಗತ ಕಲೆಗಳನ್ನು ಅಲೆಮಾರಿ ಸಮುದಾಯಗಳ ಕಲೆಯ ಉಳಿವಿಗಾಗಿ ಪ್ರತ್ಯೇಕ ಕಲಾ ಅಕಾಡೆಮಿ ಸ್ಥಾಪಿಸಬೇಕು.

೩. ಈ ಅಲೆಮಾರಿಗಳಿಗೆ ವಸತಿಗಳನ್ನು ಕಲ್ಪಿಸಿ ಕನಿಷ್ಠ ಮೂಲ ಸೌಕರ್ಯಗಳಾದ ನೈರ್ಮಲ್ಯ, ಶುದ್ಧ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ, ಸಾರ್ವಜನಿಕ ಶೌಚಾಲಯ ಮತ್ತು ವಿದ್ಯುಚ್ಛಕ್ತಿಯನ್ನು ಕಡ್ಡಾಯವಾಗಿ ಇರುವಂತೆ ನೋಡಿಕೊಳ್ಳಬೇಕು

೪. ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ನಗರಾಭಿವೃದ್ಧಿ, ಪ್ರಾಧಿಕಾರಗಳು, ಗೃಹ ನಿರ್ಮಾಣ ಮಂಡಳಿ, ಸ್ಲಮ್ ಬೋರ್ಡ್‌ಗಳು, ಸರ್ಕಾರಗಳ ಇಂದಿರಾ ಆವಾಸ್ ಯೋಜನೆ ಇತ್ಯಾದಿಗಳಲ್ಲಿ ನೆಲೆ ನಿಲ್ಲಲು ಪ್ರಯತ್ನಿಸುತ್ತಿರುವ ಈ ಸಮುದಾಯಗಳಿಗೆ ಇವರ ಜನಸಂಖ್ಯೆಗೆ ಅನುಗುಣವಾಗಿ ನಿವೇಶನ ನೀಡಿ ಮತ್ತು ಮನೆಗಳನ್ನು ಮೀಸಲಿಡಬೇಕು

೫. ಮಾಲ ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಅಭಿವೃದ್ಧಿಗಾಗಿ ಶ್ರಮಿಸಿದ ಸಂಘ-ಸಂಸ್ಥೆಗಳಿಗೆ ಸರಕಾರದಿಂದ ವಾರ್ಷಿಕ ಪ್ರೋತ್ಸಾಹವನ್ನು ನೀಡಬೇಕು

೬. ಈ ಸಮುದಾಯದ ಕಲಾವಿದರಿಗೆ ಕಲಾ ತಂಡಕ್ಕೆ ಮಾಶಾಸನವನ್ನು ನೀಡುವುದು. ಶಿಕ್ಷಣ ಕ್ಷೇತ್ರದಲ್ಲಿ ಈಗಿರುವ ಸ್ಪರ್ಧೆಯನ್ನು ಗಮನಿಸಿದರೆ ಈ ಮಾಲ ಸಮುದಾಯದಂತಹ ಅಲೆಮಾರಿಗಳಿಗೆ ಸಾಧಾರಣ ಶಿಕ್ಷಣ ನೀಡುವುದು ನಿಷ್ಪ್ರಯೋಜಕ ಈ ಹಿನ್ನಲೆಯಲ್ಲಿ ಅಲೆಮಾರಿಗಳಿಗೆ ವಿಶೇಷ ಶಿಕ್ಷಣದ ಸವಲತ್ತುಗಳನ್ನು ನೀಡಬೇಕಾಗುತ್ತದೆ ಈ ಕಾರಣಕ್ಕೆ ಅಲೆಮಾರಿಗಳಿಗೆ ಶಿಕ್ಷಣದಲ್ಲಿ ವಿಶೇಷ ಮೀಸಲಾತಿ ನೀತಿಯನ್ನು ರೂಪಿಸಿ ಜಾರಿಗೊಳಿಸಬೇಕು. ಸರಕಾರಿ ಶಾಲಾ ಕಾಲೇಜು ಅನುದಾನಿತ ಶಿಕ್ಷಣ ಸಂಸ್ಥೆಗಳು, ಹಾಸ್ಟೆಲ್‌ಗಳಿಗೆ ಪ್ರವೇಶ ಪಡೆಯಲು ಮಾಲ ಸಮುದಾಯದ ಮಕ್ಕಳಿಗೆ ಯಾವುದೇ ನಿರ್ಬಂಧವಿಲ್ಲದೆ ಅವಕಾಶ ಕಲ್ಪಿಸಿಕೊಡಬೇಕು

೭. ಮಾಲ ಸಮುದಾಯದವರು ವೃತ್ತಿ ಜೀವನ ನಡೆಸಲು ಸಾಧ್ಯವಾದರೆ ಅತ್ಯಂತ ನಿರ್ಗತಿಕ ಕಡುಬಡವರಾಗಿರುವ ಕಾರಣ ಇವರಿಗೆ ಇವರ ಮಕ್ಕಳ ಶಿಕ್ಷಣದ ಅವಶ್ಯಕತೆಯ ಅರಿವಾಗಿರುವುದಿಲ್ಲ. ಆದಕಾರಣ ಮಕ್ಕಳ ಪೋಷಕರನ್ನು ಈ ದಿಸೆಯಲ್ಲಿ ಪ್ರೋತ್ಸಾಹಿಸುವ ದೃಷ್ಟಿಯಿಂದ ಕನಿಷ್ಠ ಪ್ರೋತ್ಸಾಹ ಧನವನ್ನು ನೀಡಬೇಕಾಗುತ್ತದೆ. ಉನ್ನತ ಶಿಕ್ಷಣದ ವ್ಯಾಸಂಗ ಮಾಡುವ ಮಾಲ ಸಮುದಾಯದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನಗರ ಮತ್ತು ಪಟ್ಟಣಗಳಲ್ಲಿ ಈ ಅಲೆಮಾರಿ ವಿದ್ಯಾರ್ಥಿಗಳಿಗಾಗಿ ವಿಶೇಷ ವಸತಿ ಶಾಲೆಗಳನ್ನು ತೆರೆಯಬೇಕು

೮. ಮಾಲ ಸಮುದಾಯದವರು ತಯಾರಿಸಿದ ವಸ್ತುಗಳಿಗೆ ಮತ್ತು ಇವರು ಮಾರುವ ಕರಕುಶಲ ವಸ್ತುಗಳಿಗೆ ಸೂಕ್ತ ಬೆಲೆ ಸಿಗುವಂತೆ ಮಾಡಬೇಕು ಮತ್ತು ಸರಕಾರವು ಇವರ ವ್ಯಾಪಾರ ಅಭಿವೃದ್ಧಿಗಾಗಿ ಪ್ರೋತ್ಸಾಹ ಧನವನ್ನು ನೀಡಬೇಕು.

ಲೇಖನ ೨

ಮಾಲ ಸಮುದಾಯದ ಜನಪದ ವಂಶಪಾರಂಪರಿಕ ಪ್ರದರ್ಶನಕಲೆಗಳು ಮತ್ತು ರಾಜಕೀಯ ಹಾಗೂ ಶೈಕ್ಷಣಿಕತೆ

ಪ್ರೇಮವ್ವ ಮುದುಟಗಿ ಯಲ್ಲಪ್ಪ
ಸಂಶೋಧನಾರ್ಥಿ,
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ – ೫೮೩ ೨೭೬

ಜನಪದ ಪ್ರದರ್ಶನ ಕಲೆ ಎಂದರೆ, ಒಂದು ನಿರ್ಧಿಷ್ಟ ಸಂದರ್ಬದಲ್ಲಿ ಪ್ರಸ್ತುತಪಡಿಸಲಾಗುವ ಪರಂಪರಾಗತ ಗ್ರಾಮೀಣ ಕಲೆಗಳು ಎಂದರ್ಥ. ಮಾನವನು ತನ್ನಲ್ಲಿ ಹುದುಗಿರುವ ಕಲಾ ನೈಪುನ್ಯವನ್ನು ಪ್ರಸ್ತುತಪಡಿಸಲಿಚ್ಚಿಸುವ ವೃತ್ತಿಯ ತವಕ ಉತ್ಸಾಹಗಳೇ ಪ್ರದರ್ಶನ ಕಲೆಗಳಾಗಿವೆ. ಜನಪದ ಸಾಹಿತ್ಯದಲ್ಲಿ ಹಲವಾರು ಪ್ರಕಾರಗಳು ಪ್ರಮುಖವಾದವುಗಳಾಗಿವೆ ಸಾಮಾನ್ಯವಾಗಿ ಎಲ್ಲಾ ಜನಪದ ಗೀತ ಪ್ರಕಾರಗಳು ಸಾಮೂಹಿಕವಾಗಿ ಅಬಿವ್ಯಕ್ತಗೊಳ್ಳುತ್ತವೆ ಆದರೆ ಮಾಲ ಸಮುದಾಯದವರು ತಮ್ಮ ಪ್ರದರ್ಶನಕಲೆಗಳನ್ನು ಸಾಮೂಹಿಕವಾಗಿ ಒಟ್ಟುಗೊಡಿ ವಯಕ್ತಿಕವಾಗಿ ಒಬ್ಬಬ್ಬರೆ ಪ್ರದರ್ಶಿಸುತ್ತಾರೆ. ಈ ಪ್ರದರ್ಶನ ಕಲೆಗಳನ್ನು ಪ್ರಮುಖವಾದ ಧಾರ್ಮಿಕ ಹಬ್ಬ–ಆಚರಣೆಗಳು, ಜಾತ್ರೆ, ರಥೋತ್ಸವ, ಮದುವೆ ಇನ್ನಿತರ ಪ್ರಮುಖವಾದಂತಹ ಕಾರ್ಯಕ್ರಮಗಳಲ್ಲಿ ಪ್ರದರ್ಶಿಸುತ್ತಾರೆ. ನೋಡುಗರ ಕಣ್ಣಿಗೆ ವಿಶೇಷ ಎನ್ನುವಂತೆ ನೋಡುಗರಿಗೆ ಆಕರ್ಷಿತವಾಗಿ ಕಾಣುತ್ತವೆ. ಇವರ ಪ್ರದರ್ಶನ ಕಲೆಗಳಲ್ಲಿ ಐತಿಹಾಸಿಕ ಯುದ್ಧ ಕಲೆಗಳು ಅಡಗಿಕೊಂಡಿವೆ ಎಂಬುದನ್ನು ಕಾಣಬುದು.

ಮಾಲ ಸಮುದಾಯದವರ ಮೂಲ ಸ್ಥಳ ಆಂಧ್ರಪ್ರದೇಶವಾಗಿದೆ. ಸುಮಾರು ನಾಲ್ಕುನೂರು ವರ್ಷಗಳ ಹಿಂದೆ ಮಾಲ ಸಮುದಾಯದವರು ಕರ್ನಾಟಕ್ಕೆ ವಲಸೆ ಬಂದರೆಂದು ತಿಳಿದು ಬಂದಿದೆ. ಮಾಲ ಸಮುದಾಯದವರ ಮೂಲ ಭಾಷೆ ತೆಲುಗು ಆಗಿದ್ದು ಅವರು ಕರ್ನಾಟಕದಲ್ಲಿ ತೆಲುಗು ಜೊತೆಗೆ ಕನ್ನಡ ಭಾಷೆಯನ್ನು ಅಚ್ಚುಕಟ್ಟಾಗಿ ಮಾತನಾಡುತ್ತಾರೆ. ಕರ್ನಾಟಕದಲ್ಲಿ ಮಾಲ ಸಮುದಾಯಕ್ಕೆ ಹೊಲಿಕೆಯಾಗುವಂತಹ ತಳ ಸಮುದಾಯವೆಂದರೆ ಹೊಲೆಯ ಸಮುದಾಯ ಎಂದು ಹೇಳುತ್ತಾರೆ. ಆದರೆ ಆಂಧ್ರ ಮಾಲರಲ್ಲಿ ಕರ್ನಾಟಕದ ಹೊಲೆಯರಲ್ಲಿ ವಿವಿಧ ಆಚಾರ–ವಿಚಾರಗಳಲ್ಲಿ, ಸಂಸ್ಕೃತಿಗಳಲ್ಲಿ

ವಿವಿಧ ರೀತಿಯ ವಿಭಿನ್ನವಾದಂತಹ ಭಿನ್ನತೆಯನ್ನು ಕಾಣುತ್ತೇವೆ. ಕಾರಣವೇನೆಂದರೆ ಆಂಧ್ರದಿಂದ ವಲಸೆ ಬಂದಂತಹ ಮಾಲ ಸಮುದಾಯದವರು ಪೂರ್ವಕಾಲದಿಂದಲೂ ಅಲೆಮಾರಿತನದಿಂದ ಬಂದವರೆಂಬ ಪಟ್ಟವನ್ನು ಕಟ್ಟಿಕೊಂಡು ಸಮಾಜದಲ್ಲಿ ಕೆಳವರ್ಗದವರಿಂದಲೇ ತುಳಿತಕ್ಕೆ ಒಳಪಟ್ಟಿರುವುದು ನಮಗೆ ಪ್ರತ್ಯೇಕ್ಷವಾಗಿ ಕಂಡುಬರುತ್ತದೆ. ಈ ಸಮುದಾಯದವರು ಅಲೆಮಾರಿಗಳಾಗುವುದಕ್ಕೆ ಪ್ರಮುಖವಾದಂತಹ ಕಾರಣಗಳನ್ನು ಅನೇಕ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇತಿಹಾಸಕಾರರು ಹೇಳುವ ಹಾಗೆ ಮಾಲ ಸಮುದಾಯದವರು ಯುದ್ಧ ಪ್ರಿಯರು, ಯೋಧ ಕುಲದವರು, ಕ್ಷತ್ರಿಯ ಕುಲದವರು, ವೀರ-ಧೀರರು ಎನ್ನುತ್ತಾರೆ. ಆದರೆ ಆಂಧ್ರದಲ್ಲಿ ಮಲ್ಲರು ಎಂದು ಕರೆಯುತ್ತಾರೆ ಮಲ್ಲ ಎಂಬುದು ಸಂಸ್ಕೃತ ಪದವಾಗಿದು ಮಲ್ಲ ಎಂದರೆ ಕುಸ್ತಿಪಟು ಎಂದರ್ಥ. ಕುಸ್ತಿಪಟುಗಳಿಗೆ ವೀರ-ಧೀರರು, ಶೂರರು, ಚತುರರು, ಬಲವಂತರು, ಬಲಾಢ್ಯರು, ಸರದಾರರು, ಶಕ್ತಿವಂತರು, ಯುಕ್ತಿವಂತರು, ತೋಳ್ಬಲವುಳ್ಳವರು ಎಂದು ಆಡುಭಾಷೆಯಲ್ಲಿ ಹಲವಾರು ಹೆಸರಿನಿಂದ ಕರೆಯುತ್ತಾರೆ. ಡಾ. ಬಿ.ಆರ್ ಅಂಬೇಡ್ಕರ್ ಅವರ ಪ್ರಕಾರ ಮಾಲ ಜಾತಿಯವರನ್ನು ಒಂದು ಅಸ್ಪೃಶ್ಯ ಜಾತಿಯೆಂದು ಹೇಳಿದ್ದಾರೆ. ಅಸ್ಪೃಶ್ಯ ಜಾತಿಯವರು ಒಂದು ಕಾಲದಲ್ಲಿ ಯೋಧ ಕುಲದವರಾಗಿದ್ದು ರಜಪೂತ ಅರಸರಲ್ಲಿ ಮತ್ತು ಹಲವಾರು ರಾಜಮನತನದ ಅರಸರ ಕೈಯಲ್ಲಿ ಸೋತಿದ್ದರಿಂದ ಗೆದ್ದ ಆಕ್ರಮಣಕಾರರ ಕೈಗೊಂಬೆಗಳಾಗಿ ಮುಂದುವರೆದರು. ಕಾಕತೀಯರ ಪ್ರಮುಖ ಅರಸನಾದ ಪ್ರತಾಪರುದ್ರನ ಆಳ್ವಿಕೆಯ ಸಂದರ್ಭದಲ್ಲಿ ಕಾಕತೀಯ ಸಾಮ್ರಾಜ್ಯ ವಿಸ್ತರಿಸುವಲ್ಲಿ ಪ್ರಮುಖ ಪಾತ್ರವಹಿಸಿದವರೆ ಮಾಲ ಸಮುದಾಯದವರಾಗಿದ್ದರು. ಪ್ರತಾಪರುದ್ರನ ಸೋಲಿನ ಜೊತೆಗೆ ಯೋಧ ವೃತ್ತಿಯಲ್ಲಿ ನಿರತರಾದ ಮಾಲ ಸಮುದಾಯದವರ ಸೋಲು ಸಹ ಅನಿವಾರ್ಯವಾಗಿ ಇವರು ಭಾರತದ ಬೇರೆ-ಬೇರೆ ರಾಜ್ಯಗಳ ಕಡೆಗೆ ತಮ್ಮ ಆರ್ಥಿಕ ಜೀವನವನ್ನು ಸಾಗಿಸಲು ತಮ್ಮ ಯುದ್ಧ ಅಸ್ತ್ರಗಳನ್ನು ಹಿಡಿದುಕೊಂಡು ಕರ್ನಾಟಕದ ಕಡೆಗೆ ವಲಸೆ ಬಂದಿರುವದರ ಜೊತೆಗೆ ಸಮಾಜದಿಂದ ಬಹಿಸ್ಕೃತರಾಗಿ ಊರ ಹೊರಗೆ ಗುಡಾರ ಹಾಕಿಕೊಂಡು ಬದುಕಬೇಕಾದಂತಹ ಪರಿಸ್ಥಿತಿ ಬಂದಿತು ಅಂದಿನಿಂದ ಮಾಲ ಸಮುದಾಯದವರು ಅಲೆಮಾರಿಗಳಾಗಿಯೇ ಉಳಿದಿರುವುದು ಕಂಡು ಬರುತ್ತದೆ. ಯುದ್ಧಭೂಮಿಯಲ್ಲಿ ಸೋತಂತಹ ಮಾಲ ಸಮುದಾಯದವರು ಭಾರತದ ಬೇರೆ ಬೇರೆ ರಾಜ್ಯದ ಕಡೆಗೆ ವಲಸೆ ಹೋದಂತಹ ಈ ಸಮುದಾಯದವರಿಗೆ ಆಯಾ ರಾಜ್ಯದಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಆಂಧ್ರದಲ್ಲಿ ಮಾಲ, ಕರ್ನಾಟಕದಲ್ಲಿ ಹೊಲೆಯ, ತಮಿಳಿನಲ್ಲಿ ಪರೈಯೆನ್, ಮಾಲಯಾಳಂನಲ್ಲಿ ಪುಲಿಯಾನ್, ಮಹಾರಾಷ್ಟ್ರ(ಮರಾಠಿ)ದಲ್ಲಿ ಮಹರ್ ಎಂದು ಕರೆಯುತ್ತಾರೆ. ಆಯಾ ರಾಜ್ಯಕ್ಕೆ ತಕ್ಕ ಹಾಗೇ ಈ ಸಮುದಾಯದವರ ಕುಲಕಸುಬುಗಳು, ಕಲೆಗಳು, ಆಚಾರ-ವಿಚಾರಗಳು ನಂಬುಗೆ, ಆಚರಣೆಗಳು ಸಹ ಬೇರೆ ಬೇರೆ ಸಂಪ್ರದಾಯಗಳಿಂದ ಕೂಡಿರುತ್ತವೆ. ಸುಮಾರು ವರ್ಷಗಳಿಂದ ಕರ್ನಾಟಕಕ್ಕೆ ವಲಸೆ ಬಂದು ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಮತ್ತು ಹಳ್ಳಿ-ಹಳ್ಳಿಗಳಲ್ಲಿ ಸಂಚರಿಸುತ್ತಾ ಇನ್ನೂ ತಮ್ಮ ಅಲೆಮಾರಿತನದ ಬದುಕಿನಿಂದ ಹೊರಬರದೆ ತಮ್ಮ ಮೂಲನೆಲೆಯನ್ನು ಕಂಡುಕೊಳ್ಳಲಿಕ್ಕೆ ಸಾಧ್ಯವಾಗದೆ ತಮ್ಮ ವಂಶಪಾರಂಪರಿಕ ಪ್ರದರ್ಶನ ಕಲೆಗಳನ್ನು ಆಡುತ್ತಾ ತಮ್ಮ ಜೀವನ ಆಧಾರವಾಗಿಟ್ಟುಕೊಂಡು ಬದುಕುತ್ತಿದ್ದಾರೆ.

ಕರ್ನಾಟಕದ ತುಂಬೆಲ್ಲಾ ಪ್ರದರ್ಶನ ಕಲೆಗಳು ಹರಡಿರುವುದನ್ನು ಕಾಣಬಹುದು. ಅನುವಂಶಿಕವಾಗಿ ಬರುವ ಜೆನ್ಸಿನಂತೆ ಸಂಸ್ಕೃತಿಯ ಮೂಲಭೂತ ಅಂಶಗಳು ವಂಶ ಪರಂಪರಾಗತವಾಗಿ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿದೆ. ಆದರೆ ಈ ಸಂಸ್ಕೃತಿಯ ಜಾನಪದ ಕಲಾವಿದರ ಕೈಗಳಲ್ಲಿದೆ ಮತ್ತು ಮೈಮನಗಳಲ್ಲಿದೆ. ಸಾಹಿತ್ಯ, ನಡತೆ, ಕಲೆ, ಸಂಸ್ಕೃತಿ ಆಯಾ ಸಮುದಾಯದವರ ನಡೆಯಲ್ಲಿ ತುಂಬಿರುತ್ತದೆ ಮತ್ತು ವಿವಿಧ ಜನಾಂಗದ ಕಲೆಗಳಿಗೂ ವಿವಿಧ ಭಾಗದ ಗ್ರಾಮೀಣ ಕಲೆಗಳಿಗೂ ಮತ್ತು ಮಾಲ ಸಮುದಾಯದವರ ಕಲೆಗಳಿಗೆ ಹೋಲಿಕೆ ಮಾಡಿದಾಗ ಅತ್ಯಂತ ವ್ಯತ್ಯಾಸಗಳು ಕಂಡುಬರುತ್ತವೆ. ಮಾಲ ಸಮುದಾಯದವರು ಪ್ರಾಚೀನ ರಾಜಮಹಾರಾಜರ ಕಾಲದಲ್ಲಿ ಯುದ್ಧಭೂಮಿಯಲ್ಲಿ ಹೋರಾಡಿ ಸೋತು ತಮ್ಮ ನೈಜವಾದ ಅಸ್ತಿತ್ವವನ್ನು ಕಳೆದುಕೊಂಡು ಬೇರೆ ಬೇರೆ ಪ್ರದೇಶದ ಕಡೆಗೆ ಚಲ್ಲಾಪಿಲ್ಲಿಯಾಗಿ ಬದುಕುತ್ತಿರುವುದು ಶೋಚನೀಯ ಸಂಗತಿ. ಆದರೂ ಇವತ್ತಿಗೂ ತಮ್ಮ ಯುದ್ಧಾಸ್ತ್ರಗಳನ್ನು ಕಾಯ್ದುಕೊಂಡು ಯುದ್ಧದ ಸಂದರ್ಭದಲ್ಲಿ ಉಪಯೋಗಿಸುವ ಅಸ್ತ್ರ–ಕಲೆಗಳನ್ನು ಇಂದಿಗೂ ಉಳಿಸಿ ಕೊಂಡಿರುವುದರ ಜೊತೆಗೆ ತಮ್ಮ ಆರ್ಥಿಕ ಸಮಸ್ಯೆಯನ್ನು ನಿಭಾಯಿಸಿಕೊಳ್ಳಲು ವಂಶಪಾರಂಪರ್ಯ ಕಲೆಯನ್ನು ಮುಂದುವರಿಸಿಕೊಂಡು ಬಂದಿರುವುದು ಸಂತೋಷದ ಸಂಗತಿಯಾಗಿದೆ. ಕೆಲವರು ದಿನಕಳೆದಂತೆ ಕೆಲವು ಕಲೆಗಳನ್ನು ವೃತ್ತಿಯನ್ನಾಗಿಸಿ ಪರಿವರ್ತಿಸಿಕೊಂಡಿದ್ದು ಪುರಾತನ ಅಧ್ಯಯನದಿಂದ ತಿಳಿದುಬರುತ್ತದೆ. ಕೆಲವು ಕಲೆ, ದಂತಕಥೆಗಳು, ಧರ್ಮನೀತಿಗಳು ಮಾನವನ ಜೀವನವನ್ನು ನಿರ್ದೇಶಿಸುತ್ತವೆ. ಮತ್ತು ತಮ್ಮ ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಪೂಜಿಸುವುದು ಈ ಸಮುದಾಯದ ಕಾರ್ಯವಾಗಿದೆ. ಇದರಿಂದ ತಮ್ಮ ಸಂಸ್ಕೃತಿ ಮತ್ತು ನಾಗರೀಕತೆಯನ್ನು ಅವ್ಯಾಹಕವಾಗಿ ಸಾಗಿಸಲು ಸಾಧ್ಯವಿಲ್ಲವಾಗಿದೆ. ಆನೇಕ ಸಂಸ್ಕೃತಿಗಳು ಕಲೆಗಳು ಉಚ್ಛಾಯ ಸ್ಥಿತಿಯನ್ನು ಹೊಂದಿ ನಾಶವಾದರು, ಮಾಲ ಸಮುದಾಯದವರ ಸಾಂಸ್ಕೃತಿಕ ಕಲೆಗಳು ಜೀವಂತವಾಗಿವೆ. ಕಲೆಯ ಉಗಮವು ಸಮಾಜದ ಪರಿಸರದಲ್ಲಿ ಇರುತ್ತದೆ ಎಂದು ಸಮಾಜ ವಿಜ್ಞಾನಿಗಳಲ್ಲಿ ಕೆಲವರು ಅಭಿಪ್ರಾಯ ಪಡುತ್ತಾರೆ. ಕಲೆ ಎಂದರೆ ಇನ್ನೊಂದರ ಮೇಲೆ ಅವಲಂಬಿಸದೆ ಸ್ವತಂತ್ರ ಸ್ಥಿತಿ ಹೊಂದಿದ್ದು ಆರ್ಥಿಕ ಪರಿಸ್ಥಿತಿಯೊಂದಿಗೆ ಬದಲಾವಣೆ ಹೊಂದುವುದು ಎಂದು ಸಮಾಜ ವಿಜ್ಞಾನಿಗಳ ಇನ್ನೊಂದು ವರ್ಗವು ಅಭಿಪ್ರಾಯ ಪಡುತ್ತದೆ. ಆದರೆ ಕೆಲವು ವಿದ್ವಾಂಸರು ಹೇಳುವ ಹಾಗೆ ಕಲೆಯು ಸಮಾಜದ ಅಲೌಕಿಕ ಸಾಂಸ್ಕೃತಿಕ ಘಟಕವೆಂದು ಪರಿಗಣಿಸುತ್ತಾರೆ. ಅದಕಿಂತಲೂ ಆಳವಾಗಿ ಯೋಚಿಸಿದಾಗ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ ಅಥವಾ ಘಟಕವೇ ಕಲೆ. ಮಾಲ ಸಮುದಾಯದವರು ಸುಮಾರು ೪೦೦ ವರ್ಷಗಳಿಂದಲೂ ತಮ್ಮ ಯುದ್ಧದ ಅಸ್ತ್ರಗಳನ್ನು ಮತ್ತು ಶಸ್ತ್ರಾಸ್ತ್ರಗಳನ್ನು ತಮ್ಮ ಬೆನ್ನಿಗೆ ಕಟ್ಟಿಕೊಂಡು ಪಸರಿಸಿದ ಈ ಸಮುದಾಯದವರು ಅವುಗಳಿಂದ ಆಡುವ ಆಟಗಳನ್ನು, ಕಲೆಗಳನ್ನು ಪ್ರದರ್ಶಿಸಿ ಜೀವಿಸುತ್ತಿತ್ತಾರೆ. ಮಾನವನು ತನ್ನ ಉದರಂಭರಣೆಗಾಗಿ ಕೈಗೊಂಡ ನಾನಾ ತರದ ಕಸುಬುಗಳನ್ನು ತಿಳಿದಾಗ ಎಂತಹ ಸರ್ವಣಾತ್ಮಕ ಬೆಳವಣಿಗೆ ಕಂಡುಬರುತ್ತದೆ. ತನ್ನ ಹಸಿವೆಯನ್ನು ಪೂರೈಸುವುದಕ್ಕಾಗಿ ಹಲವಾರು ರೀತಿಯ ವೃತ್ತಿಗಳನ್ನು ವೈವಿಧ್ಯತೆಯನ್ನು ಕಲಿತು ಆತನ ಮೂಲ ಅವಶ್ಯಕತೆಗಳಾದ ದೈಹಿಕ ಬೇಡಿಕೆಗಳ ಪೂರೈಕೆಗಾಗಿ ಸೆಣಸಾಟ ಮಾಡುತ್ತಾನೆ ಇದನ್ನೆ ಪುರಂದರದಾಸರು ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಎಂದು ಸಂಕ್ಷೇಪಿಸಿದ್ದಾರೆ. ಆದ್ದರಿಂದ ತಮ್ಮ

ವಂಶಪಾರಂಪರಿಕತೆಯ ಕಲೆಯನ್ನು ಪ್ರದರ್ಶಿಸಲು ಹಳ್ಳಿಯಿಂದ ಹಳ್ಳಿಗೆ ಕಾಲ್ನಿಡಿಗೆಯಿಂದ ಸಂಚಾರ ಮಾಡುತ್ತಾರೆ ಮತ್ತು ತಮ್ಮ ಕುಟುಂಬದ ಎಲ್ಲಾ ಸದಸ್ಯರೊಂದಿಗೆ ಗಂಟು ಮೂಟೆಗಳನ್ನು ಹೊತ್ತುಕೊಂಡು ಭೀಕ್ಷೆಬೇಡುತ್ತಾ ಊರಿನಿಂದೂರಿಗೆ ಸಾಗಿ ದೇವಾಲಯದ ಬಯಲು, ಶಾಲಾ ಆವರಣ, ಸಂತೆ ಮೈದಾನದಲ್ಲಿ ರಾತ್ರಿ ಜೋಪಡಿ ಹಾಕಿ ಪಂಜಿನ ಬೆಳಕಿನಲ್ಲಿ ಈ ಸಮುದಾಯದ ವಂಶಪಾರಂಪರಿಕ ಕಲೆಗಳು ನಡೆಯುತ್ತಿತ್ತು. ಪಂಜಿನ ಬದಲು ಇಂದೂ ಪೆಟ್ರೋ ಮ್ಯಾಕ್ಸ್ ಬಂದಿದೆ. ಇವರು ರಾತ್ರಿ ಹೊತ್ತು ಹಳ್ಳಿಯ ಅಥವಾ ಊರಿನ ಜನರಿಗೆ ಕೇಳುವಂತೆ ಒಬ್ಬ ವ್ಯಕ್ತಿಯು ಸಂಬಾಳ ಬಾರಿಸುತ್ತಾನೆ. ಜೊತೆಗೆ ಕೆಲವು ಪೌರಾಣಿಕ ಕಥೆಗಳನ್ನು ಹೇಳಿ ಜನರನ್ನು ಆಕರ್ಷಿಸುತ್ತಿದ್ದರು. ನಂತರ ಈ ಸಮುದಾಯದವರು ತಂಗಿದ(ಉಳಿಯುವ ಸ್ಥಳ) ಕಡೆಗೆ ಸೇರುತ್ತಾರೆ ಮತ್ತು ಸಂಬಾಳ ಬಾರಿಸುತ್ತಾ ಆಟವಾಡುತ್ತಾರೆ. ಸಂಬಾಳವೆಂದರೆ ಎರಡು ತಬಲದಂತಹ ಚರ್ಮದ ವಾದ್ಯ ಅವುಗಳನ್ನು ಬಾಗಿದ ಬಿದಿರಿನಿಂದ ಬಾರಿಸುತ್ತಾರೆ. ಸಂಬಾಳವನ್ನು ಬಾರಿಸುತ್ತಾ ಆಗಾಗ್ಗೆ ಹಾಡನ್ನು ಹಾಡಿ ಜನರನ್ನು ರಂಜಿಸುವುದರ ಜೊತೆಗೆ ತಮ್ಮ ವಂಶಪಾರಂಪರಿಕ ಜನಪದ ಕಲೆಗಳನ್ನು ಪ್ರದರ್ಶಿಸುತ್ತಾರೆ.

ಜನಪದ ಪ್ರದರ್ಶನ ಕಲೆಗಳು

ಸಮರ ಕಲೆಗಳು.

ಸಮರ ಕಲೆಗಳೆಂದರೆ ಯುದ್ಧ ಭೂಮಿಯಲ್ಲಿ ಹರಿತವಾದ ಚೂಪಾದ ಕತ್ತಿ ಅಥವ ಖಡ್ಗವನ್ನು ಹಿಡಿದು ಎದುರಾಳಿಯನ್ನು ರಕ್ತಗತವಾಗಿ ಸಂಹಾರ ಮಾಡುವಂತವುದು. ಅಂದರೆ ಕತ್ತಿಯಿಂದ ಆಡುವಂತ ಆಟಗಳಿಗೆ ಸಮರ ಕಲೆಗಳು ಎನ್ನುತ್ತಾರೆ. ಅಂತಹ ವಂಶಪಾರಂಪರಿಕ ಆಟಗಳಾದ

೧. ಕತ್ತಿವರಸೆ ಆಟ, ಒಬ್ಬ ವ್ಯಕ್ತಿಯ ಕಾಲಿನ ಇಮ್ಮಡಿಯ ಕೆಳಗೆ ಈರುಳ್ಳಿ ಇಟ್ಟು ಇನ್ನೊಬ್ಬ ವ್ಯಕ್ತಿ ಕತ್ತಿಯಿಂದಲೇ ಆಟವಾಡುತ್ತಲೆ ಈರುಳ್ಳಿ ಎರಡು ತುಂಡಾಗುವಂತೆ ಕತ್ತಿಯಿಂದ ಕತ್ತರಿಸುವ ಆಟ.

೨. ಸಾದಾ ಚಂಡಿನ ಚಕ್ರ ತಿರುಗಿಸುವ ಆಟ.

೩. ಮುಳ್ಳಿನ ಚಕ್ರ ತಿರುಗಿಸುವ ಆಟ.

೩. ನಾಗರ ಪಣಿ ಆಟ.

೫.ಬೆಂಕಿ ನಾಗರ ಪಣಿ ಆಟ.

೬. ಬೆಂಕಿ ಚಕ್ರದಾಟ.

೭.ಬೆಂಕಿ ಚಕ್ರವನ್ನು ತಿರುಗಿಸುತ್ತಾ ಹಣೆಯಿಂದ ನಿಂಬೆಹಣ್ಣು ಎರಡು ತುಂಡಾಗುವಂತೆ ಹೊಡೆಯುವ ಆಟ. ೮.ಒಂದೇ ಕೈ ಬೆರಳಿನಿಂದ ಚಂಡಿನ ಚಕ್ರ ತಿರುಗಿಸುವ ಆಟ.

೯.ಎರಡು ಕೈಯಲ್ಲಿ ಎರಡು ಬೆತ್ತದ ಕಟ್ಟಿಗೆಯನ್ನು ತಿರುಗಿಸುವ ಆಟ.

೧೦.ಒಂದೇ ಕಟ್ಟಿಗೆ ಅಥವಾ ಕೊಲಿನ ಎರಡು ತುದಿಗೆ ಬೆಂಕಿಹಚ್ಚಿ ಆ ಕಟ್ಟಿಗೆಯನ್ನು ಕೈಯಲಿಡಿದು ಗರಗರನೆ ತಿರುಗಿಸುವ ಆಟ.

೧೧. ಒಂದು ಉದ್ದವಾದ ಕೋಲನ್ನು ಕಾಲಿನ ಕೆಳಗೆ ಗರಗರನೆ ತಿರುಗಿಸುವ ಆಟ.

೧೨. ದಾಲ್ ಪಟದ ಆಟ, ಒಬ್ಬ ವ್ಯಕ್ತಿಯ ತಲೆಯ ಮೇಲೆ ತೆಂಗಿನ ಕಾಯಿ ಇಟ್ಟು ಒಂದೇ ಏಟಿಗೆ ಎರಡು ತುಂಡಾಗಿವಂತೆ ಬೆತ್ತದಿಂದ ಹೊಡೆಯುವ ಆಟ.

೧೩. ಬಾಯಿಯಲ್ಲಿ ಸೀಮೆ ಎಣ್ಣೆ ಹಾಕಿಕೊಂಡು ಬೆಂಕಿಹಚ್ಚಿ ಬಾಯಿಯಿಂದ ಬೆಂಕಿ ಪ್ರದರ್ಶನದ ಆಟ.

೧೪.ಬೆಂಕಿಚಕ್ರವನ್ನು ತಿರುಗಿಸುತ್ತಾ ನಿಚ್ಚಣಿಕೆ ಏರುವ ಆಟ, ಇವುಗಳಲ್ಲದೆ. ಇನ್ನು ಹೆಚ್ಚಿನ ಮನರಂಜನೆಗಾಗಿ

೧೫ಕೀಲು ಕುದುರೆ ಆಟ.

೧೬.ಕರಡಿ ಕುಣಿತದ ಆಟ ಮುಂತಾದವುಗಳನ್ನು ಮಾಲ ಸಮುದಾಯದವರು ಆಡುವಂತಹ ವಂಶಪಾರಂಪರಿಕ ಪ್ರದರ್ಶನ ಕಲೆಗಳಾಗಿರುತ್ತವೆ. ಬಹುಕಾಲದಿಂದಲೂ ಅಸ್ಥಿತ್ವದಲ್ಲಿರುವಂತಹ ಈ ಆಟಗಳನ್ನು, ಕಲೆಗಳನ್ನು ಇಂದಿನವರೆಗೂ ಈ ಸಮುದಾಯದವರು ಜೀವಂತವಾಗಿರಿಸಿದ್ದಾರೆ. ಇದರಿಂದ ತಮ್ಮ ಆರ್ಥಿಕ ಜೀವನದ ನಿರ್ವಹಣೆಯನ್ನು ಮಾಡಿಕೊಳ್ಳುತ್ತಾ ಬರುತ್ತಿದ್ದಾರೆ. ಇಂತಹ ಪ್ರದರ್ಶನ ಕಲೆಗಳನ್ನು ವೀಕ್ಷಿಸಿದ ಪ್ರೇಕ್ಷಕರು ಕೊಟ್ಟಂತ ಚಿಲ್ಲರೇ ಹಣವನ್ನು ಸ್ವೀಕರಿಸಿ ಹೊಟ್ಟೆಪಾಡಿಗಾಗಿ ಮಾಡಿಕೊಳ್ಳುತ್ತಾರೆ. ಆದರೆ ಇತ್ತೀಚಿನ ದಿನಮಾನಗಳಲ್ಲಿ ಆಧುನಿಕತೆಯ ಪ್ರಭಾವದಿಂದಾಗಿ ತಮ್ಮ ವಂಶಪಾರಂಪರಿಕ ಕಲೆಗಳನ್ನು ಪ್ರದರ್ಶಿಸುವ ಉದ್ದೇಶದಿಂದ ಸುಮಾರು ಹನ್ನೊಂದು ಸಂಘಗಳನ್ನು ತಮ್ಮ ಕುಲ ದೇವರು ಮತ್ತು ತಮ್ಮ ಆರಾದ್ಯ ದೇವರಿನ ಹೆಸರಿನಲ್ಲಿ ಇತ್ತೀಚೆಗೆ ಚಾಲನೆಗೆ ತಂದಿದ್ದಾರೆ. ತಮ್ಮ ಪ್ರದರ್ಶನ ಕಲೆಗಳು ನಶಿಸಿ ಹೋಗದೇ ಇರುವುದರ ಸಲುವಾಗಿ ಮತ್ತು ಅವುಗಳ ಭದ್ರತೆಗಾಗಿ ಸಂಘಗಳನ್ನು ಜಾರಿಗೆ ತಂದಿದ್ದಾರೆ. ತಮ್ಮ ವಂಶಪಾರಂಪರಿಕ ಪ್ರದರ್ಶನ ಕಲೆಗಳಿಗಾಗಿ ಉಪಯೋಗಿಸುವ ಪರಿಕರಗಳನ್ನು ಆಡವಿಯಲ್ಲಿ ಮತ್ತು ಮಾರುಕಟ್ಟೆಯಲ್ಲಿ ತಂದು ಸ್ವತಃ ತಾವೇ ತಯಾರಿಸುತ್ತಾರೆ ಮತ್ತು ಇವರು ಉಪಯೋಗಿಸುವ ಪರಿಕರಗಳು ಅತ್ಯಂತ ಗಟ್ಟಿಮುಟ್ಟಾಗಿರುತ್ತವೆ ಅವು ಬೇಗನೆ ಹಾಳಾಗುವಂತೆ ಇರುವುದಿಲ್ಲ ಇಂತಹ ಪರಿಕರಗಳನ್ನು ಸಹ ಈ ಸಮುದಾಯದವರು ಬಹುಕಾಲದವರೆಗೂ ಜೋಪಾನವಾಗಿ ಕಾಯ್ದುಕೊಂಡು ಬರುತ್ತಾರೆ ಮತ್ತು ತಮ್ಮ ವಂಶಪಾರಂಪರಿಕ ಕಲೆಗಳು ನಾಶವಾಗಬಾರದು ಮತ್ತು ನಶಿಸಿಹೋಗಬಾರದು ಎಂಬ ಉದ್ದೇಶದಿಂದ ತಮ್ಮ ತಮ್ಮ ಮಕ್ಕಳಿಗೂ ಸಹ ತಮ್ಮ ಪ್ರದರ್ಶನ ಕಲೆಗಳನ್ನು ಪ್ರತಿದಿನ ಅಭ್ಯಾಸ ಮಾಡಿಸುತ್ತಾರೆ.

ಕೆಲವು ದಿನಗಳು ಕಳೆದಂತೆ ಹಲವಾರು ಕಲೆಗಾರರಂತೆ ಈ ಸಮುದಾಯದವರು ತಮ್ಮ ಕಲೆಗಳನ್ನು ವೃತ್ತಿಯನ್ನಾಗಿ ಪರಿವರ್ತಿಸಿಕೊಂಡಿದ್ದಾರೆ. ಮೂಟೇ ಸಾಲುಪದ ಹೇಳುವ ವೃತ್ತಿಗಾಯಕರು, ಕೊಲೆಬಸವ, ಹಗಲುವೇಷಗಾರರು ಮುಂತಾದ ಜನಾಂಗದವರು ಕಲೆಯನ್ನು ವೃತ್ತಿಯನ್ನಾಗಿ ಮಾಡಿದರು. ಕಾಲಾನಂತರದಲ್ಲಿ ಈ ಆಟಗಳು, ವಾದ್ಯಗಳು, ಸಂಗೀತಗಳು ನಂತರದ ದಿನಗಳಲ್ಲಿ ಒಂದು ಹೊಸ ರೂಪಾಂತರ ಹೊಂದಿ ಬೈಲಾಟದ ಸಂಗೀತಕ್ಕೆ ನಾಂದಿಯಾಯಿತು. ಹಾಡುಗಳೊಂದಿಗೆ ಸರಳ ವಾದ್ಯಗಳು ಅನಿವಾರ್ಯ ವಾಠ, ಗಾರಿ, ತಂಬೂರಿ ಇದನ್ನೇ ಜೀವನೋಪಾಯವನ್ನಾಗಿ ಮಾಡಿಕೊಂಡು ತಂಬೂರಿ ದಾಸಯ್ಯ, ಜಾಗಟೆ ದೇವಯ್ಯ, ಕೊಂಡಮಾರಯ್ಯಾ, ಕೊರವಂಜಿ, ಗೊಂದಲಿಗರು,

ಗೊರವರು, ವೇಷಗಾರರು, ಬುಡಪಾಂಡಿತ್ಯ ದುರುಗಮುರಗಿ, ಸಿಪ್ಪ ಮುಂತಾದವುಗಳಲ್ಲಿ ಹಾಡು, ಕುಣಿತ, ವಾದ್ಯ ಇವುಗಳ ವೇಷವಿದ್ದು ಇವುಗಳಿಗೆ ಹೊಂದುವ ಜಾನಪದ ರಾಗ ನೆಲೆಗಳೆಂದು ಹೇಳಬಹುದು.

ಪ್ರಸ್ತುತದಲ್ಲಿ ಮಾಲ ಸಮುದಾಯದ ಜನಪದ ಪ್ರದರ್ಶನಕಲೆಗಳ ಉಳಿವು ಮತ್ತು ಅಳಿವು.

ಆದರೆ ಇತ್ತೀಚಿನ ದಿನಮಾನಗಳಲ್ಲಿ ಇಂತಹ ಹಲವಾರು ಅಲೆಮಾರಿ ಸಮುದಾಯಗಳ ಕಲೆಗಳು, ಆಟಗಳು, ವಾದ್ಯಪರಿಕರಗಳು, ಹಾಡುಗಳು, ನಾಟಕಗಳು, ಆಧುನಿಕ ಮಾಧ್ಯಮ, ತಂತ್ರಗಳ ಪ್ರಭಾವದಿಂದ ನಶಿಸತೊಡಗಿದೆ. ಜನರು ಟಿವಿ ಮಾಧ್ಯಮಗಳ ಕಾರ್ಯಕ್ರಮಗಳಿಗೆ ಮಾರುಹೋಗುತ್ತಿದ್ದಾರೆ. ಪ್ರಾಚೀನ ಕಲೆಗಳಲ್ಲಿ ಏನೇ ಒಂದು ಪಾರಂಪರಿಕ ಸತ್ಯ ಅಡಕವಾಗಿರುತ್ತದೆ. ಇಂತಹ ಸತ್ಯದ ದೃಷ್ಟಿಯನ್ನು ಬಿಟ್ಟು ಮೌಢ್ಯದ ವಿಚಾರವನ್ನು ಹರಿಸುವ ಮಾಧ್ಯಮದ ಕಡೆಗೆ ಗಮನಿಸುತ್ತಾರೆ. ಆದರೆ ಇಂತಹ ಕಲೆ ಪ್ರದರ್ಶನಗಳು ನಶಿಸದೆ ಉಳಿಸುವ ಪ್ರಯತ್ನವನ್ನು ಮಾಡುವುದು ಮನುಷ್ಯನ ಧರ್ಮವಾಗಿದೆ.

ಪ್ರಸ್ತುತದಲ್ಲಿ ಮಾಲಸಮುದಾಯದವರ ಜನಪ್ರದರ್ಶನ ಕಲೆಗಳು ಉಳಿದುಕೊಂಡಿವೆ ಆದರೆ ಇತ್ತಿಚಿನ ದಿನಮಾನಗಳಲ್ಲಿ ಯಂತ್ರ-ತಾಂತ್ರಿಕತೆಯ ಪ್ರಬಾವದಿಂದ ಹಲವಾರು ರೀತಿಯ ಹೊಸ ಹೊಸ ಮಾದ್ಯಮಗಳ ಪ್ರಬಾವದಿಂದ ಇವರ ಪ್ರದರ್ಶನ ಕಲೆಗಳನ್ನು ನೋಡುಗರ ಸಂಖ್ಯೆ ಬಹಳ ಕಡಿಮೆಯಾಗಿದೆ. ಟಿ. ವಿ ಮಾದ್ಯಮಗಳ ಪ್ರದರ್ಶನಕ್ಕೆ ಜನರು ಹೆಚ್ಚು ಮಾರುಹೊಗುತ್ತಿದ್ದಾರೆ ಮತ್ತು ಟಿ. ವಿ ಮಾದ್ಯಮಗಳೆ ಜನರನ್ನು ಹೆಚ್ಚಾಗಿ ಆಕರ್ಷಿಸುವಂತಾಗಿದೆ ಆದ್ದರಿಂದ ಮಾಲ ಸಮುದಾಯದ ಜನಪದ ಪ್ರದರ್ಶನ ಕಲೆಗಳು ಅಲ್ಪಮಟ್ಟಿಗೆ ಉಳಿದುಕೊಂಡಿವೆ.

ಮಾಲ ಸಮುದಾಯದವರ ರಾಜಕೀಯ ಸ್ಥಿತಿಗತಿ

ಮಾಲ ಸಮುದಾಯದವರು ರಾಜಕೀಯವಾಗಿ ಹಿಂದುಳಿದಿದ್ದಾರೆ. ಕರ್ನಾಟಕದಲ್ಲಿ ಅತ್ಯಲ್ಪ ಜನಸಂಖ್ಯೆಯನ್ನು ಹೊಂದಿದ ಮೂಲಸಮುದಾಯದವರು ಪ್ರತಿವರ್ಷ ಗ್ರಾಮಪಂಚಾಯಿತಿ ಯಲ್ಲಿ ಸ್ಥಾನ ದೊರೆತಿರುವುದಿಲ್ಲ. ಇವರು ಸದಾ ಅಲೆಮಾರಿಗಳಾಗಿರುವುದರಿಂದ ಕನಿಷ್ಠ ೧೦ರಷ್ಟು ಜನರಿಗೆ ಒಟಿನ ಕಾರ್ಡು ಇರದೆ ಇರುವುದರಿಂದ ಈ ಸಮುದಾಯದ ಕೆಲವು ಸದಸ್ಯರು ಮತದಾರರ ಪಟ್ಟಿಯಿಂದ ಹೊರಗುಳಿದಿದ್ದಾರೆ. ಇದಕ್ಕೆ ಮೂಲ ಕಾರಣ ಇವರ ಅಲೆಮಾರಿತನವೇ ಆಗಿದೆ. ಮಾಲ ಸಮುದಾಯದವರು ರಾಜಕೀಯವಾಗಿ ಹಿಂದುಳಿಯಲಿಕ್ಕೆ ನಿರ್ದಿಷ್ಟ ನೆಲೆ ಇಲ್ಲದೆ ಇರುವುದು, ಆರ್ಥಿಕ ಮತ್ತು ಸಾಮಾಜಿಕ ದುರ್ಬಲತೆ ಪ್ರಮುಖವಾದ ಕಾರಣವಾಗಿದೆ. ಹಲವಾರು ವರ್ಷಗಳ ಹಿಂದೆ ಈ ಸಮುದಾಯದವರಿಗೆ ಹೊಲ, ಮನೆ, ಜಾಗ, ಭೂಮಿ ಮತ್ತು ಮೂಲಭೂತ ಸೌಕರ್ಯಗಳು ಇಲ್ಲದೆ ಇರುವ ಕಾರಣದಿಂದಾಗಿ ತಮ್ಮ ಆರ್ಥಿಕ ಸಮಸ್ಯೆನ್ನು ನಿವಾರಿಸಿಕೊಳ್ಳಲು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ, ಒಂದು ಊರಿನಿಂದ ಇನ್ನೊಂದು ಊರಿಗೆ ತಮ್ಮ ಗಂಟು ಮೊಟ್ಟೆಯನ್ನು ಕಟ್ಟಿಕೊಂಡು ಜೋಪಡಿ ಕಿತ್ತಿಕೊಂಡು ಒಂದು ಊರಿನಲ್ಲಿ ಕೆಲವು ಕುಟುಂಬಗಳು ಇನ್ನೊಂದು ಊರಿನಲ್ಲಿ ಕೆಲವು ಕುಟುಂಬಗಳು ಗುಡಿಸಲುಗಳನ್ನು ಹಾಕಿಕೊಂಡು ವಾಸವಾಗಿದ್ದಾರೆ ಮತ್ತು ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ, ಬೇರೆ ಬೇರೆ ತಾಲೂಕುಗಳಲ್ಲಿ ತಮಗೆ ಯೋಗ್ಯವೆನಿಸಿದ ಊರುಗಳಲ್ಲಿ

ವಾಸವಾಗಿ ಈ ಸಮುದಾಯದ ಜನರು ಒಂದೆ ಕಡೆ ನೆಲೆ ನಿಲ್ಲದೆ ಹರಿದು ಹಂಚಿ ಹೋಗಿದ್ದಾರೆ. ಆದ್ದರಿಂದ ಒಂದೇ ಊರಿನಲ್ಲಿ ನೆಲೆ ನಿಲ್ಲದ ಕಾರಣದಿಂದಾಗಿ ರಾಜಕೀಯ ಪ್ರಾತಿನಿಧಿಕತೆ ಈ ಸಮುದಾಯದವರಿಗೆ ದೊರೆತಿಲ್ಲ. ಮಾಲ ಸಮುದಯದವರ ಬಹಳಷ್ಟು ಸದಸ್ಯರು ಇಂದಿಗೂ ಚುಣಾವಣೆಯ ಕುರಿತಾಗಿ ಪೂರ್ಣಪ್ರಜ್ಞೆಯನ್ನು ಅವಳಡಿಸಿಕೊಂಡಿಲ್ಲ.

ಮಾಲ ಸಮುದಾಯದವರು ಕೆಲವು ಕುಟುಂಬಗಳು ನೆಲೆ ನಿಂತ ಸ್ಥಳ ಅಥವಾ ಊರಿನಲ್ಲಿ ಚುಣಾವಣೆಗೆ ಸ್ಪರ್ಧಿಸಿದರೂ ಜಯಗಳಿಸುವುದು ಬಹಳ ಕಷ್ಟಕರವಾಗಿದೆ. ಏಕೆಂದರೆ ಮಾಲ ಸಮುದಾಯದವರು ನೆಲೆ ನಿಂತ ಕೆಲವು ಊರುಗಳಲ್ಲಿ ಬೇರೆ ಅಸ್ಪೃಶ್ಯ ಸಮುದಾಯದವರು ವಾಸವಿದ್ದು ಆ ಬೇರೆ ಸಮುದಾಯಗಳ ಜನಸಂಖ್ಯೆ ಪ್ರಮಾಣ ಹೆಚ್ಚಾಗಿರುವುದರಿಂದ ಅಸ್ಪೃಶ್ಯ ಮೀಸಲಾತಿಯ ಸದಸ್ಯರ ಸ್ಥಾನದಲ್ಲಿ ಸ್ಪರ್ಧಿಸುತ್ತಾರೆ ಮತ್ತು ಈ ರೀತಿಯ ಬೇರೆ ಅಸ್ಪೃಶ್ಯ ಸಮುದಾಯದವರು ಪ್ರತಿವರ್ಷ ಗ್ರಾಮಪಂಚಾಯತಿ ಸದಸ್ಯರಾಗಿ ಆಯ್ಕೆಯಾಗುತ್ತಾರೆ. ಮಾಲ ಸಮುದಾಯದವರ ನೆಲೆನಿಂತ ಕುಟುಂಬಗಳ ಜನಸಂಖ್ಯೆ ಪ್ರಮಾಣ ಕಡಿಮೆಯಿರುವುದರಿಂದ ಗ್ರಾಮಪಂಚಾಯಿತಿ ಸದಸ್ಯರ ಸ್ಥಾನಕ್ಕೆ ಸ್ಪರ್ಧಿಸಿದರು ಜಯವನ್ನು ಗಳಿಸುವುದಿಲ್ಲ. ಈ ಕಾರಣದಿಂದಾಗಿ ಮಾಲ ಸಮುದಾಯದವರು ರಾಜಕೀಯವಾಗಿ ಬಹಳ ಹಿಂದುಳಿದಿದ್ದಾರೆ ಈ ಸಮುದಾಯದವರಿಗೆ ರಾಜಕೀಯ ಪ್ರಾಬಲ್ಯ ದೊರೆಯದೆ ಇದ್ದುದರಿಂದ ಆರ್ಥಿಕ ಅಭಿವೃದ್ಧಿಯಲ್ಲಿ ಸಹ ಹಿಂದುಳಿಯಲ್ಲಿಕ್ಕೆ ಕಾರಣವಾಗಿದೆ.

ಇತ್ತೀಚೆಗಷ್ಟೆ ಮಾಲ ಸಮುದಾಯದವರ ಕೆಲವು ಕುಟುಂಬಗಳು ಕೆಲವು ಸದಸ್ಯರುಒಂದು ಕಡೆ ನಿಲೆ ನಿಲ್ಲಲು ಪ್ರಯತ್ನಿಸುತ್ತಿವೆ. ಕೆಲವೊಂದು ಕುಟುಂಬಗಳಿಗೆ ಮಾತ್ರ ಆಶ್ರಯ ಯೋಜನೆ ಗಳು ದೊರೆತಿವೆ. ಅಲೆಮಾರಿಗಳ ಚಾರಿತ್ರಿಕ ಬೆಳವಣಿಗೆ ಎಷ್ಟು ಸಂಕೀರ್ಣವೂ ಅವುಗಳ ಅಭಿವೃದ್ಧಿ ಸಾಧಿಸುವ ಮಾರ್ಗವು ಸಹ ಅಷ್ಟೇ ಸಂಕೀರ್ಣವಾಗಿದೆ. ಸಮಾಜದ ಚಾರಿತ್ರಿಕ ಹಂತದಲ್ಲಿ ನೆಲೆತಪ್ಪಿ ಹೋದ ಮಾಲ ಸಮುದಾಯದವರ ಸಂಕೀರ್ಣ ಬದುಕು ಅನೇಕ ಜಟೀಲ ಸಮಸ್ಯೆಗಳಿಗೆ ಕಾರಣವಾಗಿದೆ. ಇದುವರೆಗೆ ರಾಜಕೀಯ ಅಧಿಕಾರದಲ್ಲಿ ಸ್ಥಾಣಗಳಿಸಿದವರು ಪ್ರಬಲ ಜಾತಿ ಮತ್ತು ಅವರು ಪ್ರಬಲ ಜನಸಂಖ್ಯೆ ಹೊಂದಿದವರಾಗಿರುವುದು ಕಂಡುಬರುತ್ತದೆ. ಮಾಲ ಸಮುದಾಯಗಳ ಜನಸಂಖ್ಯೆ ಪ್ರಮಾಣ ಅಲ್ಲಲ್ಲಿ ಹರಿದು ಹಂಚಿ ಹೋಗಿದ್ದರಿಂದ ರಾಜಕೀಯದಲ್ಲಿ ಸ್ಥಾನಮಾನ ದೊರಕದಂತಾಗಿದೆ. ಈ ಸಮುದಾಯಗಳ ಜನಸಂಖ್ಯೆ ಹೆಚ್ಚಾಗಿದ್ದಷ್ಟು ರಾಜಕೀಯ ವ್ಯಕ್ತಿಗಳ, ಮುಖಂಡರ ಮತ್ತು ಪಕ್ಷಗಳ ಗಮನ ಮಾಲ ಸಮುದಾಯದತ್ತ ಸೆಳೆಯುತ್ತದೆ. ಪ್ರತಿಯೊಂದು ಸಮುದಾಯದಲ್ಲಿ ಒಬ್ಬ ಪ್ರಬಲ ಮುಖಂಡನಿದ್ದು, ಆತನ ಮಾತಿನಂತೆ ಒಗ್ಗಟ್ಟಗುತ್ತಾರೆ. ಆದರೆ ಮಾಲ ಸಮುದಾಯದವರಲ್ಲಿ ಪ್ರಬಲ ವ್ಯಕ್ತಿಗಳ ಸಂಖ್ಯೆ ಇಲ್ಲದಂತಾಗಿದೆ. ಈ ಆಧುನಿಕ ಕಾಲದಲ್ಲಿ ಸರಕಾರಗಳು ರೂಪಿಸುವ ಬಹುತೇಕ ಯೋಜನೆಗಳು ಪ್ರತಿಹಂತದಲ್ಲೂ ರಾಜಕೀಯ ಮಧ್ಯಪ್ರವೇಶ ಇಲ್ಲದೆ ಅನುಷ್ಠಾನದಲ್ಲಿರುವ ಅಥವಾ ಜಾರಿ ಯಲ್ಲಿರುವ ರಾಜಕೀಯ ಲೋಪದೋಷಗಳಿಂದಾಗಿ ಹಲವು ಯೋಜನೆಗಳು ಸವಲತ್ತುಗಳುಈ ಸಮುದಾಯದವರಿಗೆ ತಲುಪುತ್ತಿಲ್ಲ. ಮಾಲ ಸಮುದಾಯದವರು ಆಧುನಿಕ ಜಗತ್ತಿನ ಲೌಕಿಕ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಆದರೂ ಬಹಳಷ್ಟು ಕಾಳಜಿಯಿಂದ ತಮ್ಮ ಅನನ್ಯತೆ ಯನ್ನು, ಸಂಸ್ಕೃತಿಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಮತ್ತು ಮಾಲ ಸಮುದಾಯದವರು ಅನೇಕ

ಬೌದ್ಧಿಕ ದೈಹಿಕ ಚಮತ್ಕಾರಗಳನ್ನು ಕಟ್ಟಿಕೊಂಡಿದ್ದಾರೆ. ಇವರು ರಾಜಕೀಯ ಮೀಸಲಾತಿಯ ಸ್ಥಾನದಿಂದ ವಂಚಿತರಾಗಿದ್ದಾರೆ. ಇವರ ಸ್ಥಾನದ ಲಾಭವನ್ನು ಮತ್ತು ಇವರ ಮೀಸಲಾತಿಯ ಮೂಲಭೂತ ಸೌಕರ್ಯಗಳನ್ನು ಬೇರೆ ಮುಂದುವರೆದ ಅಸ್ಪೃಶ್ಯ ಸಮುದಾಯಗಳು ಪಡೆದುಕೊಂಡು ಅಧಿಕಾರ ನಡೆಸುತ್ತಾರೆ. ಇಂತಹ ವ್ಯವಸ್ಥೆ ಇದ್ದಾಗ ಮಾಲ ಸಮುದಾಯದವರು ರಾಜಕೀಯವಾಗಿ ಅಭಿವೃದ್ಧಿ ಹೊಂದುವುದರಲ್ಲಿ, ರಾಜಕೀಯ ಸೌಲಭ್ಯವನ್ನು ಪಡೆದುಕೊಳ್ಳುವುದರಲ್ಲಿ ಬಹಳ ವಂಚಿತತೆಯನ್ನು ಅನುಭವಿಸುತ್ತಿದ್ದಾರೆ. ಈ ಸಮುದಾಯದವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯ ವಾಗಿ ಯಾವ ರೀತಿಯ ಅಭಿವೃದ್ಧಿಯನ್ನು ಹೊಂದದೆ ನಾಗರಿಕ ಸಮಾಜದಿಂದ ದೂರವಿದ್ದು, ಹಲವಾರು ರೀತಿಯ ಸಮಸ್ಯೆ, ಹವಮಾನಗಳಿಗೆ ಗುರಿಯಾಗುತ್ತಾ ಹೊಟ್ಟೆಪಾಡಿಗಾಗಿ ಪರದಾಡುವವರು ಆಗಿದ್ದಾರೆ. ಇವರು ನೆಲೆನಿಂತ ಊರಿನಲ್ಲಿರುವ ಸದಸ್ಯರನ್ನು, ಕುಟುಂಬದವರನ್ನು ರಾಜಕೀಯ ವ್ಯಕ್ತಿಗಳು ತಮ್ಮ ಆಯ್ಕೆಯ ಪ್ರಕ್ರಿಯೆಯ ಸಲುವಾಗಿ ಮಾತ್ರ ಬಳಸಿಕೊಳ್ಳುತ್ತಿದ್ದಾರೆ. ಮಾಲ ಸಮುದಾಯದವರಿಗೆ ಮೂಲಭೂತ ಸೌಲಭ್ಯಗಳನ್ನು ಕೊಡುವುದಾಗಿ ಸುಳ್ಳು ಭರವಸೆಯನ್ನು ನೀಡುತ್ತಿದ್ದಾರೆ ಎಂದು ಕ್ಷೇತ್ರಕಾರ್ಯದ ಮುಖಾಂತರ ತಿಳಿಸಿದ್ದಾರೆ. ಒಟ್ಟಿನಲ್ಲಿ ಈ ಸಮುದಾಯದವರು ರಾಜಕೀಯವಾಗಿ ಹಿಂದುಳಿದಿರುವುದು ಕಂಡುಬರುತ್ತದೆ.


ಮಾಲ ಸಮುದಾಯದವರ ಶೈಕ್ಷಣಿಕ ಸ್ಥಿತಿಗತಿ

ಮಾಲ ಸಮುದಾಯದವರ ಬಗ್ಗೆ ಶೈಕ್ಷಣಿಕವಾಗಿ ನೋಡಿದಾಗ ಈ ಸಮುದಾಯದವರಲ್ಲಿ ಅನಕ್ಷರಸ್ಥರ ಸಂಖ್ಯೆ ಬಹಳ ಕಂಡುಬರುತ್ತದೆ. ಈ ಸಮುದಾಯದವರು ಶೈಕ್ಷಣಿಕವಾಗಿ ಹಿಂದುಳಿಯಲ್ಲಿಕ್ಕೆ ಇವರ ಆರ್ಥಿಕ ಸಮಸ್ಯೆ, ಬಡತನ ಮತ್ತು ಅಲೆಮಾರಿತನದ ಜೀವನವೇ ಆಗಿರುತ್ತದೆ. ಈ ಸಮುದಾಯದವರಲ್ಲಿ ಬಹಳಷ್ಟು ಜನರು ಹೆಚ್ಚೆಚ್ಚು ಮಕ್ಕಳನ್ನು ಪಡೆದಿರುವುದು ಇದಕ್ಕೆ ಕಾರಣವಾಗಿದೆ. ಇವರಿಗೆ ನಿರ್ದಿಷ್ಟ ನಲೆ ಇಲ್ಲದಿರುವುದು ಒಂದು ಪ್ರಮುಖವಾದ ಕಾರಣವಾಗಿದೆ. ಈ ಸಮುದಾಯದ ಹಿರಿಯ ನಾಗರಿಕರಿಗೂ ಸ್ತ್ರೀ–ಪುರುಷರಿಗೂ ಶಿಕ್ಷಣದ ಅರಿವೆ ಇಲ್ಲದಂತಾಗಿದೆ. ಈ ಸಮುದಾಯದ ಹಿರಿಯರು ತಮ್ಮ ಹೊಟ್ಟೆಪಾಡಿಗಾಗಿ ಭಿಕ್ಷೆ ಬೇಡಲು, ದುಡಿಯಲು ಊರೂರು–ಹಳ್ಳಿ–ಪಟ್ಟಣಗಳಿಗೆ ಅಲೆದಾಡುತ್ತಿದ್ದರಿಂದ ತಮ್ಮ ಮಕ್ಕಳಿಗೂ ಸಹ ಶಿಕ್ಷಣವನ್ನು ಕೊಡಿಸಲು ಆಗಿಲ್ಲ. ಇಂಥ ಕಾರಣದಿಂದಾಗಿ ಈಗಿರುವ ಯುವಕರು ಸಹ ಕೆಲವರು ಮಾತ್ರ ಪ್ರಾಥಮಿಕ ಹಂತದ ಶಿಕ್ಷಣವನ್ನು ಪಡೆದುಕೊಂಡಿದ್ದಾರೆ. ಬಹಳಷ್ಟು

ಯುವಕರು ಮತ್ತು ಯುವತಿಯರು ಅನಕ್ಷರಸ್ಥ ರಾಗಿಯೇ ಉಳಿದಿದ್ದಾರೆ. ಮಾಲ ಸಮುದಾಯದವರ ಕೆಲವು ಪಾಲಕರು ತಮ್ಮ ಮಕ್ಕಳ ಹೆಸರುಗಳನ್ನು ಶಾಲೆಗೂ ಸಹ ದಾಖಲಾತಿ ಮಾಡಿಸದೇ ಇರುವುದನ್ನು ತಿಳಿಸಿದ್ದಾರೆ. ಈ ಸಮುದಾಯದವರಲ್ಲಿ ಒಬ್ಬ ಯುವಕ ಇರಬಹುದು, ಒಬ್ಬ ಯುವತಿ ಇರಬಹುದು ಯಾರೊಬ್ಬರೂ ಇವತ್ತಿಗೂ ಸರಕಾರಿ ಹುದ್ದೆಯಲ್ಲಿ ಇಲ್ಲದಿರುವುದು ತಿಳಿದುಬಂದಿದೆ. ಆದರೆ ಈ ಸಮುದಾಯದ ನೆಲೆನಿಂತ ಕೆಲವು ಕುಟುಂಬದ ಪಾಲಕರುಒಂದೇ ಊರಲ್ಲಿ ನೆಲೆ ನಿಂತವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು ಎಂದುಕೊಂಡು ಶಾಲೆಗೆ ಹೋಗಿ ಮಕ್ಕಳ ಹೆಸರನ್ನು ಪ್ರಾಥಮಿಕ

ಶಾಲೆಯಲ್ಲಿ ನೊಂದಾಯಿಸಿ ಬರುತ್ತಾರೆ. ಆದರೆ ಶಾಲಾ ದಾಖಲಾತಿಯಲ್ಲಿ ನಾಮಕಾವಸ್ಥೆಗೆ ಮಾತ್ರ ಮಕ್ಕಳ ಹೆಸರುಗಳಿರುತ್ತವೆ. ಆದರೆ ಪ್ರತಿದಿನ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಕೆಲವು ಮಕ್ಕಳು ಶಾಲಾ-ಕಾಲೇಜಿಗೆ ಹೋದರು ಸಹ ಎಲ್ಲಾ ವಿಷಯಗಳನ್ನು ಸರಿಯಾಗಿ ಓದಲು ಬರೆಯಲು ಪರಿಪೂರ್ಣವಾಗಿ ಬರು ವುದಿಲ್ಲ. ಕಳಪೆ ಮಟ್ಟದ ಶಿಕ್ಷಣ ವ್ಯವಸ್ಥೆಯಲ್ಲಿ ಇದ್ದಾರೆ. ಶಾಲೆಗೆ ದಾಖಲಾದ ಕೆಲವು ಮಕ್ಕಳನ್ನು ಪಾಲಕರು ಅರ್ಧವಾರ್ಷಿಕ ರಜೆ, ಬೇಸಿಗೆ ರಜೆ ಇನ್ನಿತರ ಬೇರೆ ಬೇರೆ ರಜಾದಿನಗಳಲ್ಲಿ ಹಳ್ಳಿಯಲ್ಲಿ ತಮ್ಮ ಮಕ್ಕಳನ್ನು ದಿನಗೂಲಿ ಮಾಡಲು ಕಳುಹಿಸುವುದು, ಬೇರೆ ಊರಿಗೆ ದುಡಿಯಲು ಕಳುಹಿಸುವುದು, ದನಕರುಗಳನ್ನು ಕಾಯಲು ಕಳುಹಿಸುವುದು, ಪ್ಲಾಸ್ಟಿಕ್ ಸಾಮಾನುಗಳನ್ನು, ಬಟ್ಟೆಗಳನ್ನು, ಸ್ಟೇಷನರಿ ಸಾಮಾನುಗಳನ್ನು ಮಾರಿಕೊಂಡು ಬರಲು ವ್ಯಾಪಾರಕ್ಕಾಗಿ ಕಳುಹಿಸುವುದನ್ನು ಮಾಡುತ್ತಾರೆ. ಇದರಿಂದ ರಜೆ ಮುಗಿದು ಶಾಲೆಗಳು ಪ್ರಾರಂಭವಾದ ನಂತರ ಮಕ್ಕಳು ಶಾಲೆಗೆ ಹೋಗಲು ಆಸಕ್ತಿವಹಿಸುವುದಿಲ್ಲ. ಪಟ್ಟಣದಲ್ಲಿ ವಾಸವಾಗಿರುವ ಮಾಲ ಕುಟುಂಬದ ಸದಸ್ಯರು ಸಹ ರಜಾದಿನಗಳಲ್ಲಿ ಗೌಂಡಿಕೆಲಸಗಳಿಗಾಗಿ ಕಳುಹಿಸುವುದು, ರಸ್ತೆ ಕೆಲಸಗಳಿಗಾಗಿ ಕಳುಹಿಸುವುದು, ಶ್ರೀಮಂತರ ಮನೆಯಲ್ಲಿ ದುಡಿಯಲಿಕ್ಕೆ ಕಳುಹಿಸುವುದು, ಹೋಟೆಲ್, ಬಾರ್‌ಗಳಲ್ಲಿ, ಅಂಗಡಿಗಳಲ್ಲಿ ವಿವಿಧಕೆಲಸಗಳಿಗಾಗಿ ಮಕ್ಕಳನ್ನು ಕಳುಹಿಸುತ್ತಾರೆ. ರಜಾದಿನಗಳು ಮುಗಿದ ನಂತರ ಶಾಲೆಗಳು ಪ್ರಾರಂಭವಾದರು ಸಹ ವಿವಿಧ ಕೆಲಸಗಳಲ್ಲಿ ತೊಡಿಗಿದ ಮಾಲ ಸಮುದಾಯದವರ ಮಕ್ಕಳು ಮರಳಿ ಶಾಲೆಗೆ ಸೇರಲು ಇಷ್ಟಪಡುವುದಿಲ್ಲ. ಆ ಮಕ್ಕಳಿಗೆ ವ್ಯಾಪಾರ, ದುಡಿಯುವ ಜೀವನ ಸಂತೋಷ ತಂದು ಕೊಡುತ್ತದೆ. ಇದರಿಂದಾಗಿ ಮಾಲ ಸಮುದಾಯದವರ ಮಕ್ಕಳು ದುಡಿಯುವುದರಲ್ಲಿಯೇ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಾರೆ. ಆ ಮಕ್ಕಳು ದುಡಿಯುವುದರಿಂದ ಅಲ್ಪಸ್ವಲ್ಪ ಮನೆಯ ಆರ್ಥಿಕ ಸಮಸ್ಯೆ ನಿವಾರಣೆಯಾಗುತ್ತದೆ ಎಂಬ ಉದ್ದೇಶದಿಂದ ಪಾಲಕರು ಸಹ ಅವರನ್ನು ಶಾಲೆಗೆ ಕಳುಹಿಸಲು ಇಷ್ಟಪಡುವುದಿಲ್ಲ. ಇದರಿಂದ ಮಾಲ ಸಮುದಾಯದವರ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಪಟ್ಟಣಗಳಲ್ಲಿ ವಾಸವಾಗಿರುವ ಮೂಲಸಮುದಾಯದವರ ಮಕ್ಕಳು ಕೆಲವರು ಮಾತ್ರ ೧೦ನೇ ತರಗತಿ ಅಥವಾ ಪಿಯುಸಿ ಮಾತ್ರ ಓದಿಕೊಂಡಿರುತ್ತಾರೆ. ಶಿಕ್ಷಣದಿಂದ ಈ ಸಮುದಾಯದವರ ಮಕ್ಕಳು ಹಿಂದುಳಿಯಲ್ಲಿಕ್ಕೆ ಇನ್ನೊಂದು ಪ್ರಮುಖವಾದ ಕಾರಣವೆಂದರೆ ಈ ಸಮುದಾಯದ ಮಕ್ಕಳು ಹದಿನೈದು ವರ್ಷವಾದ ನಂತರ ತಮ್ಮ ಆರ್ಥಿಕ ಬೆನ್ನೆಲುಬು ಆಗಿದ್ದ ವಂಶಪಾರಂಪರ್ಯ ಪ್ರದರ್ಶನ ಕಲೆಯನ್ನು ಅಭ್ಯಾಸ ಮಡಲು ಪ್ರಾರಂಭಿಸುತ್ತಾರೆ. ಅವರ ಪ್ರದರ್ಶನ ಕಲೆಗಳು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದವುಗಳು. ಇವತ್ತಿನವರೆಗೂ ಈ ಸಮುದಾಯದವರು ತಮ್ಮ ಪ್ರದರ್ಶನ ಕಲೆಗಳನ್ನು ಉಳಿಸಿಕೊಂಡು ಬರಲು ನವಪೀಳಿಗೆಗಳು ಸಹ ಪ್ರಯತ್ನಿಸುತ್ತಿವೆ ಮತ್ತು ಸಂಘಗಳನ್ನು ಕಟ್ಟಿಕೊಂಡು ತಮ್ಮ ಕಲೆಯನ್ನು ಬೆಳೆಸುತ್ತಿದ್ದಾರೆ. ಇದರಿಂದಲೂ ಸಹ ಮಕ್ಕಳು ಶಿಕ್ಷಣದಿಂದ ವಂಚಿತರಾಗಲು ಪ್ರಮುಖವಾದಂತಹ ಕಾರಣವೆನ್ನಬಹುದು. ಕೆಲವು ಕುಟುಂಬದ ಪಾಲಕರುಗಳು ಮಕ್ಕಳನ್ನು ಶಾಲೆಗೆ ಕಳುಹಿಸಲು ಇಚ್ಚಿಸಿದರೂ ಮಕ್ಕಳು ಶಾಲೆಗಳಿಗೆ ಹೋಗಲು ಇಷ್ಟಪಡುವುದಿಲ್ಲ. ಶಾಲಾ ಪಠ್ಯಪುಸ್ತಕಗಳ ಬಾರ, ಬರವಣಿಗೆಯಸಮಸ್ಯೆ, ಗ್ರಹಿಕಾ ಸಮಸ್ಯೆ, ಜ್ಞಾನಪಶಕ್ತಿ ಸಮಸ್ಯೆ, ಆಲಿಸುವ ಸಮಸ್ಯೆಗಳು ಮಕ್ಕಳಲ್ಲಿ ಇರುವುದರಿಂದ ಮಕ್ಕಳು ಶಾಲೆಗೆ ಹೋಗಲು ಇಷ್ಟಪಡುವುದಿಲ್ಲ. ಪಾಲಕರಲ್ಲಿ ತಮ್ಮ ಮಕ್ಕಳಿಗೆ ಪುಷ್ಟಿಕರಣದ ಅಭಾವ ಪ್ರೋತ್ಸಾಹದ ಅಭಾವ

ವಿರುವುದು ತಿಳಿದುಬಂದಿದೆ. ಇದರಿಂದಾಗಿ ಮಕ್ಕಳು ಶಿಕ್ಷಣದಿಂದ ಶಾಲೆಯಿಂದ ಹೊರಗುಳಿದಿದ್ದಾರೆ. ಸರ್ಕಾರದಿಂದ ಶಾಲಾಮಕ್ಕಳಿಗಾಗಿ ಎಷ್ಟೋ ಯೋಜನೆಗಳು, ಸೌಲಭ್ಯಗಳು ಜಾರಿಗೆ ಬಂದರು ಸಹ ಅದನ್ನು ಸದುಪಯೋಗ ಪಡೆದು ಕೊಳ್ಳುವಲ್ಲಿ, ಪಡೆಯುವಲ್ಲಿ ವಿಫಲರಾಗಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಬರುವ ಸವಲತ್ತುಗಳು ಮಾಲ ಸಮುದಾಯದ ಪಾಲಕರಿಗೆ ಅಲ್ಪಸ್ವಲ್ಪ ಗೊತ್ತಿದ್ದರು ಸಹ ಅದು ನಮಗೆ ಉಪಯೋಗವಿಲ್ಲ ಎಂಬ ವಿಚಾರಕ್ಕೆ ಬಂದಿದ್ದು ತಿಳಿದುಬಂದಿದೆ.



ಬುಡಕಟ್ಟು ಅಧ್ಯಯನ ವಿಭಾಗ